ಅಗಲ agala. = ಅಗಲು2, ಅಗಳ, ಅಂಗಲ, ಅಂಗಲು. Expansion, extension, largeness (ವಿಸ್ತಾರ Bhn. 19; ವಿಶಂಕಟ, ಪೃಥು, ಬೃಹತ್, ವಿಶಾಲ, etc. Si.; My.; Mhr. ಅಫಳ). ಅಗಲದ ಅಂಗಣ (ಅಜಿರ Mr. 199). ಅಗಲಕ್ಕೆ ಹರಹಲು ಪಟ್ಟವು, expanded (ಪ್ರವೃದ್ಧ, ಪ್ರಸೃತ Nr.). ಅಗಲದ ಅಂಗಿ, ಅಗಲದ ಸೀರೆ, etc. (C.). **2,** space, extent; width, breadth (ಪರಿಣಾಹ, ವಿಶಾಲತೆ Nr.; My.; Si. 222; *cf.* ಅಡ್ಡಗಲ). ತೋರಣಂಗಳನ್ ಅಲ್ಲಿಗಲ್ಲಿಗೆ ಅಪಾರರಚನೆಗಳಿಂದೆ ತತ್ತದ್ದ್ವಾರಶಿಖರಂಗಳೊಳ್ ಅಮರ್ಚಿಸಿದರ್ ನಗರಿಯ ಅಗಲದಲಿ (Bp. 5, 12). ಜಗದ ಅಗಲಕ್ಕೆ ತೆಕ್ಕನೆ ತೀವಿದ ಚತುರಂಗಬಲಂ (Ršv. 6, after 11). ಹತ್ತು ಅಮ್ಬಿನ ಅಗಲವುಳ್ಳ ರಾಜಮಾರ್ಗ (Si. 105). ಎರಡು ಕಾಲುಗಳಿಗೂ ನಡುವೆ ಗೇಣಗಲ ಬಿಟ್ಟು ನಿಲ್ಲೋಣ (ವಿಶಾಖ 288). ಅಗಲ ಉದ್ದಗಳು ಸರಿಯಾಗಿ ಉಬ್ಬು ತಗ್ಗುಗಳಿಲ್ಲದೆ ಇರುವನ್ಥಾದು (ನಿಘ 399). ಆಕಾಶಕ್ಕಿನ್ತ ಎತ್ತರವಿಲ್ಲ, ಭೂಮಿಗಿನ್ತ ಅಗಲವಿಲ್ಲ (Prv.). **3,** far distance, especially in ಅಗಲಕೆ, ಅಗಲಕ್ಕೆ, to a great distance, abroad, widely, greatly. ಬಸವನ ಭಕ್ತಿರಸಘನಶರಧಿಯದು ಅಗಲಕ್ಕೆ ನೆಬಿದು ಉಪ್ಪರಿಸೆ (Bp. 8, 8). ನೋಡುವವರೆಲ್ಲ ಅಳುಕಿ, ಅಗಲಕೆ ಕೆದಱುತ ಓಡಲು (22,14). ಅಗಲಕೆ ಮಿಸುವ ಹೊಂಗಳ ರಾಸಿ (29,18). **4,** separation (My.). ಅಗಲದ ಮೊಣಕಾಲುಳ್ಳವನು, a man who has the knees apart (ಪ್ರಜ್ಞು, ಪ್ರಗತಜಾನುಕ Nr.). ಒನ್ದಕ್ಕೆ ಒನ್ದು ದೂರವಾಗಿ ಅಗಲವಾದ ಮೊಣಕಾಲುಳ್ಳವನು (Si. 198). See ಅತಿಯಗಲ, ಉದ್ದಗಲ, ಚೋಟಗಲ; J. 10, 10. 13; 17, 28; 20, 37. 41.

ಅಗಲಿಕೆ agalikĕ. = ಅಗಲುವಿಕೆ, ಅಗಲ್ಕೆ. Separation (esp. from beloved objects); the being exempt from (ವಿಪ್ರಲಮ್ಭ, ವಿಪ್ರಯೋಗ Nr.; ಪ್ರತ್ಯವಾಯ, ವಿಯೋಗ Nn. 149; Mr. 483; My.). ಎಮಗೆ ಭಕ್ತರಿಗೆ ಹೃದಯದೊಳಗೆ ಅಗಲಿಕೆ ಅದು ಉಣ್ಟೇ? (Bp. 26, 63). See Prv. s. ಗಣ್ಡ; Bh. 8, 27, 36; Râm. 6, 53, 103.

ಅಗಲಿತು agalitu. = ಅಗಲಿತ್ತು (Šmd. 96).

ಅಗಲಿತ್ತು agalittu. (Šmd. 96). That which is extensive, broad, large (ವಿಶಂಕಟ, ವಿಶಾಲ Hlâ.).

ಅಗಲಿಸು agalisu. = ಅಗಲ್ಚು, q. v. To remove from (v. t.). ಮಗ್ಗುಲಿನ್ದ (ಕೂಸಂ) ಅಗಲಿಸಲು (Bp. 15, 14). **2,** to put away, to refuse. ಲಿಂಗಪ್ರಸಾದವನ್ ಅಗಲಿಸಿಪೆನೇ? (45, 19). **3,** to separate, to disunite. ಒನ್ದು ಕಡೆಯಲ್ಲಿ ಕೂಡಿದವರನ್ನು ಅಗಲಿಸೋಣ (ಉಪಜಾಪ G.).

ಅಗಲು agalu. 1. = ಅಗಲ್ q. v., etc. P. p. ಅಗಲಿ. To go to a distance; to go away. ಅಗಲಿ ಕುಳ್ಳಿರುತ (Bp. 26, 28; see 19, 29; 46, 6. 7). ದುಃಖಿಸುತ, ಮೂಗುಗಳಂ ಹಿಡಿದು ಕೊಳ್ಳುತ, ಉಗುಳುತ, ಅಗಲಿ (46, 59). ಇನ್ನು ಒಲ್ಲೆನ್ ಅಗಲಿ ಇರ್ದ ಮಡದಿಯುಂ (J. 18, 46). **2,** to go away from. ಶಿವಭವನಂಗಳ ಸ್ಥಾಪ್ಯೋರುಲಿಂಗಂಗಳು ಸ್ವಯಮ್ಭೂಚಾರುಲಿಂಗವು ತಮ್ಮ ನಿಜಪೀಠಂಗಳಿನ್ದ ಅಗಲಿ (Bp. 57, 42). **3,** to leave. ಜೀವಂ ತನುವನ್ ಅಗಲಿದ ಚಿಕ್ಕ ಮಾದಣ್ಣ (Bp. 47 sum.). ಲಿಂಗವನ್ ಅಗಲಿ (60, 33). **4,** to shake, etc. (ಕದಲು G. 112). — ಅಗಲಾಡು. -ಅಡು. = ಅಕಲಾಡು, ಅಗಳಾಡು, ಅಲ್ಲಾಡು. To shake, to pendulate (v. i., My.).

ಅಗಲು agalu. 2. = ಅಗಲ, etc. (ವ್ಯಾಸ, ವಿಸ್ತಾರ G.; ಆಯತ, ವಿಸ್ತಾರ Cb.). ಎರಡೂ ಕೈಯ್ಗಳನ್ನು ಅಗಲು ಮಾಡಿ ಹೊನ್ದಿಸಿದ್ದು (ಸಿಂಹತಲ G.). ನೂಲು ಸಣ್ಣ, ಅಂಚು ಅಗಲು ಇದ್ದ ಹಾಗೆ ದೋತರಜೋಡು ಬೆಲೆಗಾಣುತ್ತವೆ (B. 3, 103). ದೋತರಗಳು . . . ಹತ್ತು ಮೊಳ ಉದ್ದು, ಎರಡುವರೆ ಮೊಳ ಅಗಲು ಇರುತ್ತವೆ (3, 103). ಉದ್ದು ಅಗಲುಗಳು (3, 103). See ಅಡ್ಡಗಲು.

ಅಗಲು agalu. 3. = ಹಗಲು (My.).

ಅಗಲುವಿಕೆ agaluvikĕ. = ಅಗಲಿಕೆ. ಪ್ರೀತಿಯುಳ್ಳವರ ಅಗಲುವಿಕೆ (ವಿಪ್ರಯೋಗ, ವಿಯೋಗ G.; My.).

ಅಗಲ್ಕೆ agalkĕ. = ಅಗಲಿಕೆ, etc. (ಪ್ರತ್ಯವಾಹ Hlâ.; Abh. P. 7, 8; My.). ಇನವಿರಹಿಣಿ ಪದ್ಮಿನಿಕಾನ್ತನ ಅಗಲ್ಕೆಯನ್ ಆನ್ತು, ಅರಸುಗೆ ಮುಳಿವ ನಿಶಾಕಾನ್ತನ ಕರಕೆ ಬೆರ್ಚಿ ಮುಚ್ಚಿದಳ್ (Ršv. 11, 10).

ಅಗಲ್ಚು agalču. = ಅಗಲಿಸು q. v. To spread out. ಆ ಸಿರಿಮೊಗಕ್ಕೆ ಬಿಸಿಲ್ ಅಗದನ್ತೆ ಅಗಸದೊಳ್ ಓಸರಿಸದೆ ಅಂಚೆಗಳ್ ಱೆಕ್ಕೆಯನ್ ಅಗಲ್ಚಿ, ನೆಱಲ ಆಸೆಗೆಯ್ವವು (J. 19, 34). **2,** to remove from (Abh. P. 9, after 89). **3,** to abandon, to leave out (ತೊಲಗಿಸು Šmd. 134 Cm.). ಆಗಳ್ ಈಗಳ್ ಎಮ್ಬ ಎಡೆಗೆ (ಇನ್ ಎಮ್ಬುದನ್) ಅಗಲ್ಚರ್ (Šmd. 133). **4,** to remove, to do away with. ತನ್ನ ಮುನ್ನಿನ ಕರ್ಮವನ್ ಅಗಲ್ಚಿ (ನೊಸಲ ಲಿಪಿಯಂ) ಮರಳಿ ತೊಡೆಯಲು ಕಾಯಲುಂ ಪಂಕರುಹಗರ್ಭಂಗು ಅಗದು (Bp. 46, 13).

ಅಗಲ್ತೆ agaltĕ. = ಅಗಱ್ತೆ, etc. A ditch, a moat (ಖೇಯ, ಪರಿಖೆ Si. 21).

ಅಗವೈರಿ aga-vairi. Indra (My.).

ಅಗಸ agasa. = ಅಗಸಿಗ, (ಅಸಗ). A washerman (ರಜಕ Mr. 378; ನಿರ್ಣೇಜಕ, ರಜಕ Si. 337. 339; C.). ಯಾರೂ ಇಲ್ಲದ ಊರಿಗೆ ಅಗಸರ ಮಾಳಿಯೇ ಮುತ್ತಯ್ದೆ.— ಅಗಸನಲ್ಲಿ ಬೊಗಸೆ ನೀರು ಸಿಕ್ಕದೊ?.— ಅಗಸನ ಶವ ಹೊಱಿಗೆ ತೆಗದ ಮೇಲೆ ಗುಟ್ಟು ಸಿಕ್ಕೀತೆ? (Prvs.). See Prv. s. ಬಟ್ಟೆ 2, Sp. s. ಬಱಿಯೊಡಲು. — ಅಗಸರವ. -ಅವ. A washerman (Si. 337). — ಅಗಸರವಳು. -ಅವಳು. A washerwoman (My.).

ಅಗಸಗಿತ್ತಿ agasa-gitti. = ಅಗಸತಿ, ಅಗಸ್ತಿ. A washerwoman (C.; ರಜಕಿ G.).

ಅಗಸತನ agasatana. The business of a washerman (My.).

ಅಗಸತಿ agasati. = ಅಗಸಗಿತ್ತಿ. (C.).

ಅಗಸಾಲ aga1-sâla. = ಅಕಸಾಲ, etc. (Si. 337; C.; Tĕ.).

ಅಗಸಾಲಿಗ aga1-sâliga. = ಅಕಸಾಲಿಗ, etc. (Si. 338. 345; C.).

ಅಗಸಾಲೆ aga1-sâlĕ. = ಅಕಸಾಲೆ, etc. (C.; Tĕ.). — ಅಗಸಾಲೆಯವ. -ಅವ. = ಅಗಸಾಲ. (My.). — ಅಗಸಾಲೆಯರವ. -ಅವ. = ಅಗಸಾಲ. (ರುಕ್ಮಕಾರಕ G.).

ಅಗಸಿಗ agasiga. = ಅಗಸ. (My.).

ಅಗಸಿದ್ದೆ agasiddĕ. Tbh. of ಔಷಧ (S. Mhr.).

ಅಗಸುತೆ aga-sutĕ. ಅಗಸುತಾ. = ಅಗಜಾತೆ. (Bp. 8, 42).

ಅಗಸುತೇಶ್ವರ agasutâ-îśvara. = ಅಗಜಾರಮಣ. (Bp. 25, 30).

ಅಗಸೆ agasĕ. = ಅಗಿಸೆ, ಅಗುಸೆ. The outer large gate of a town, fort, or village (My.; Mhr. ಅಗಾಸಿ a chunammed and uncovered terrace). See ಊರಗಸೆ. — ಅಗಸೆಬಾಗಲ್. -ಲು. = ಅಗಸೆ. (C.). — ಅಗಸೆಬಾಗಲ. ಅಗಸೇ-. = ಅಗಸೆಬಾಗಲ್. (B. 5, 48). — ಅಗಸೆಬಾಗಿಲ್, -ಲು. ಅಗಸೇ-. = ಅಗಸೆಬಾಗಲ್. (C.; ಗೋಪುರ, ಹೆಬ್ಬಾಗಿಲು G.). ಊರ ಅಗಸೇ ಬಾಗಿಲೊಳಗೆ ಇಟಿತರವಾಗಿ ಮಾಡಿದ ಮಣ್ಣಿನ ಇಟಿಕಲ (ಹಸ್ತಿನಖ G.). — ಅಗಸೆಬಾಗಿಲ. ಅಗಸೇ-. = ಅಗಸೆಬಾಗಲ. (ವಲಜ G.). ದಣ್ಡು ಒನ್ದು ಕೋಟೆಯ ಅಗಸೇ ಬಾಗಿಲವನ್ನು ತೆಱೆಸುವದಕ್ಕೋಸ್ಕರ (B. 4, 217).

ಅಗಸೆ agasĕ 1. = ಅಕಚೆ, ಅಗಚೆ, ಅಗಿಸೆ. Tbh. of ಅಗಸ್ತಿ. A tree with large scarlet flowers, Sesbana (or Aeschynomene) grandiflora Poir. (St. & Pl.; ಅಗಸ್ತ್ಯ Mr. 140; Tĕ.: a leguminous tree, Coronilla grandiflora).

ಅಗಸೆ agasĕ. 2. Tbh. of ಅತಸಿ (Šmd. 363. 365). Common flax, Linum usitatissimum Lin. (ಅತಸಿ, ಉಮೆ Nr.; Tĕ. ಅಗಸೆ, ಅವಸಿ, ಅವಿಸೆ). See ಎಳ್ಳಗಸೆ, ಕರಿಯಗಸೆ. — ಅಗಸೆಗೆಯ್. -ಕೆಯ್. A field of flax (ಔವಿಮಾನ Mr. 93). — ಅಗಸೆಯ ಕಾಳು. Lin-seed. (ಅತಸಿ G.). — ಅಗಸೆಯ ಹಿಂಡಿ. The oil-cake of lin-seed. 2, a kind of chatney made of it (C.). — ಅಗಸೆಯ ಹೂ. The flower of flax (ಅತಸೀಕುಸುಮ G.). — ಅಗಸೆಯೆಣ್ಣೆ. Lin-seed oil (C.).

ಅಗಸ್ತಿ agasti. = ಅಗಸತಿ, etc. (C.).

ಅಗಸ್ತಿ. agasti. *N. of a ṛishi*, son of both Mitra and Varuṇa by Urvaśi, born in a water jar (*cf.* ಕುಮ್ಭಸಮ್ಭವ, ಘಟಯೋನಿ). He is said to have swallowed the ocean (*cf.* ಪೀತಾಬ್ಧಿ) and compelled the Vindhya to prostrate itself, and is considered as the civilizer of the South. 2, the regent of the star Canopus. 3, = ಅಗಸೆ 1. (Mhr. ಅಗಸ್ತಾ, ಅಗಸ್ತ್ಯ).

ಅಗಸ್ತ್ಯ agastya. *N. of a ṛishi* (= ಅಗಸ್ತಿ No. 1; Bp. 19, 26). 2, *the star Canopus* or its regent. 3, = ಅಗಸೆ 1, q. v.

ಅಗಹರ aga-hara. Sin-removing (Bp. 54, 45).

ಅಗಳ್ agaḷ. ಅಗಳು. = ಅಗಲ್, etc. (Mhr. ಅಘೊಳಣೇಂ, to shake about in water, v. i. & v. t.). — ಅಗಳಾಡಿಸು. -ಆಡಿಸು. To cause to swing or pendulate; to wave (v. t.); to shake (v. t.). (ಕೊಡಹು, ಗಲ್ಲಿಸು, ನಿವಾಳಿಸು G.). — ಅಗಳಾಡು. -ಆಡು. = ಅಗಲಾಡು. To pendulate, to swing, to vibrate, to shake (v. i.), to be loose (My.). ಬೀಕಾದನ್ತೆ ಅಗಳಾಡುವನ್ತ ಎರಡು ಕಿವಿಗಳು (B. 5, 18). ಸ್ವಲ್ಪ ಅಗಳಾಡೋಣ (ಸ್ಫುರಣ G.). ಸ್ವಲ್ಪ ಅಗಳಾಡೋಣ (ಸ್ಫೂರ್ತಿ Čb.). — ಅಗಳಾಡುವಿಕೆ. -ಆಡುವಿಕೆ. Swinging, etc. ಕಣ್ಣು ತುಟಿ ಹುಬ್ಬು ಇವುಗಳ ಅಗಳಾಡುವಿಕೆ (ಸ್ಫೂರ್ತಿ Čb.). — ಅಗಳ್ಯಾಡು. = ಅಗಳಾಡು. (ಅಲ್ಲಾಡು, ಒಲಡಾಡು G.).

ಅಗಳ agaḷa. = ಅಗಲ. (My.).

ಅಗಳು agaḷu. = ಅಗುಳು. A grain of boiled rice (C.; ಅನ್ನದ ಅಗಳು G. 6). See Prv. s. ಮುತ್ತು 1. 2, see ಕೂಳಿಗಳು.

ಅಗಳು agaḷu. = ಅಗರು, etc. Fragrance. (Tĕ. ಅಗರು, ಅಗಳು, red sandal-wood). — ಅಗಳ ಸುಣ್ಟಿ. = ಅಗಳು-. (C.; St. & Pl.). — ಅಗಳುಸುಣ್ಟಿ. = ಅಗಳ್-, ಅಗಳೆ-, ಅಗುರುಸೊಣ್ಟಿ, ಅಗುಳು-. A wild plant, Zingiber zerumbet Roscoe (St. & Pl.).

ಅಗಳೆ agaḷĕ. = ಅಗಳು. — ಅಗಳೆಸುಣ್ಟಿ. = ಅಗಳ್-, etc. (St. & Pl.).

ಅಗೞ್ agaḻ. 1. = ಅಗೞು 1, ಅಗುರ್, ಅಗುೞ್1, ಅಗುೞು. To dig. (T.). P. p. ಅಗೞ್ದು. ಅಗೞ್ವಂ (Šmd. 275). ಕುೞಿಯೆನ್ದು ಅಗೞ್ದು ಎಡೆ (Šmd. I, o. r. ಅಗುೞ್ದು). ಅಗೞಿದುದು (ಅಖಾತ, ದೇವಖಾತ Hlâ.).

ಅಗೞ್ agaḻ. 2. = ಅಗೞ, ಅಗೞು 2 q. v. What has been dug, etc. (ಗಾಧಿಗೆ Čt. II, 77; Č. Bp. 42, 25. 26. 28; T. ಅಗೞ್, ಅಗೞ್, ಅಗಿಳ್; M. ಅಗಿೞ್, ಅಗಿಳ್, ಅಗಿಲ್; Tu. ಅಗರ್, ಅಗಳ್). ಅಗೞ್ತೆ, ಅಗೞ್ಗಳ್ (Šmd. 52).

ಅಗೞ agaḻa. = ಅಗೞ್ 2, etc. A fort ditch (C.).

ಅಗೞತ agaḻata. = ಅಗೞತೆ, etc. Digging; what has been dug. 2, a ditch, a moat (S. Mhr.; ಪರಿಖೆ G.).

ಅಗೞತೆ agaḻatĕ. = ಅಗೞ್ತೆ, etc. (My.; ಕೋಟೆಯ ಸುತ್ತಿನ ಕನ್ದಕ G.). — ಅಗೞತೆಗಡ್ಡೆ. The mound thrown up from a moat (Sd.).

ಅಗೞಿ agaḻi. = ಅಗಣಿ, ಅಗುೞಿ q. v., ಅಗ್ಗುೞಿ. (C.; ಅರ್ಗಲ, ಯುಗಕೀಲಕ, ತಮ್ಮೆ, ಕೀಲ, ಸ್ಥಾಣು G.). — ಅಗೞಿಯ ಗೂಟ. = ಅಗೞಿ. (My.). — ಅಗೞಿಯ ಮರ. = ಅಗೞಿ. ಕದವನ್ನು ಮುಚ್ಚಿ ತೆಗೆಯದನ್ತೆ ಅಡ್ಡಿ ಮಾಡಲು ಉಳ್ಳ ಅಗೞಿಯ ಮರ (ಅರ್ಗಲ Si. 112). 2, the post in which the ಅಗೞಿ moves (My.).

ಅಗೞು agaḻu. 1. = ಅಗೞ್ 1. P.p. ಅಗೞಿ. To dig; to burrow (My.; ಅಗಿ, ತೋಡು G.).

ಅಗೞು agaḻu. 2. = ಅಗೞ್ 2, etc. What has been dug. 2, a ditch, a moat (ಖೇಯ, ಪರಿಖೆ Nr.; My.). See Prv. s. ಗೇಣು. 3, an artificial tank (ಖಾತ Hlâ.). ಖಾತಮ್ ಎನೆ ಹಲವು ಅಗೞು ಭೇದಂಗಳ್ ಅಕ್ಕು (Mr. 417). ಅಗೞುಗಳನ್ ಅಗುೞಿಸಿದಂ (Bp. 16, 9). ಕಾಣಿಸಿ ಕೊಳ್ಳದು ಈ ಪುರದ ಅಗೞ ಘಾತಮ್ (J. 3, 19). See Râm. 5, 9, 34. — ಅಗೞುನೆಲ. A deep place, a ditch. ಅಲ್ಲಿ ಒನು ಅಗೞುನೆಲದಲ್ಲಿ ಬೀೞಲು (Bp. 53, 40).

ಅಗೞು agaḻu. 3. (**ಅಗಳು**). To tear off a bit with one's teeth from something firmly kept in the hand (S. Mhr., rare; *cf.* ಅವುಡು 1).

ಅಗೞ್ತೆ agaḻtĕ. = ಅಗತ, ಅಗತೆ, ಅಗರ್ತೆ, ಅಗಲ್ತೆ, ಅಗೞತ, ಅಗೞತೆ. Digging; the being dug (ಖನನ Šmd. I; 247). 2, a pit or well. 3, a fort ditch (ಕೋಟೆಯ ಸುತ್ತಿನ ಕನ್ದಕ G.; Tĕ. ಅಗಡತೆ, ಅಗಡಿತೆ, ಅಗಡ್ತೆ).

ಅಗಾಡಿ agâḍi. Before, in front, forward; the front, the van. 2, the ropes with which the horse's fore feet are tied. 3, the head-ropes of a horse. (My.; Br.; Mhr., H.).

ಅಗಾಧ a-gâdha. = ಅಗಾಧ. *Deep, bottomless, unfathomable.* 2, *a hole, a chasm.* See ವಾರಿರಮ್ಯ.

ಅಗಾಧಜಲ agâdha-jala. *Having deep waters.* 2, a deep lake or pool. See ಮಡು.

ಅಗಾಧಿಪ aga-adhipa. The chief of mountains, Mêru; any big mountain (My.).

ಅಗಾರ agâra. *A house.* 2, a place (ಸ್ಥಳ G.).

ಅಗಿ agi. 1. = ಅಗೆ 2. To dig; to burrow; to make a hole, or a wound. (C.; ತೋಡು G.; *cf.* ಅಗೞ್ 1). P. ps. ಅಕ್ 5, ಅಗಿದು. ಬೆಟ್ಟ ಅಗಿದು, ಇಲಿಯ ಹಿಡಿದ ಹಾಗೆ (Prv.). ಉಪ್ಪು ಮುನ್ತಾದ ಗಡ್ಡೆಗಳನ್ನು ಅಗಿಯುವ ಮರದ ಗುದ್ದಲಿಗಳು (Si. 85). ಕೋಟೆಯ ಸುತ್ತಲೂ ಅಗಿಯಲ್ ಪಟ್ಟು ನೀರು ನಿನ್ತ ಕನ್ದಕವು (91). ಅಣೆವ ಹರಿಗೆಯಿನ್ ಒಬ್ಬರೊಬ್ಬರನ್ ಅಣಸಿನಲಿ ತಿವಿದು ಅಗಿವ ಭಟ್ಟರ ಬಡ್ಡಣೆ (Bp. 6, 2, 5). See B. 3, 42. 58. 107; 4, 125.

ಅಗಿ agi. 2. To champ; to bite; to chew; to eat (ಚರ್ವಣ Šmd. Dh.; Šm. 81; C.; ತಿನ್ನು, ಕಚ್ಚು G.; *cf.* ಅಗೞು 3, ಅವುಡು 1). P. ps. ಅಕ್ 3, ಅಗಿದು. ಕುೞಿ ಕಚ್ಚಿನೊಳು ಹೊಕ್ಕು, ಅೞಿವದೇ ತನಿರಸವ ಹೊಱಗಣ ಸೋಗೆಯ ಅಗಿವನ್ತೆ? (Sp.). ತಿಳಿಗೊಳನ ತಮ್ಮು ಅಗಿವ ತೆಕ್ಕೆಯ ತೊಱಲಿಕೆಯ ...ಹಸರದಲಿ ತೀಡಿದುದು ತಂಗಾಳಿ (Râm. 24, 3). ಪಾವಗಿದ ಪಸುಳೆ (J. 19, 23). ಪಾವಗಿದುದುಂದರುಣ್ಟೆ? (30, 38).

ಅಗಿ agi. 3. To tremble, to shake, as a čâmara (Râm. 6, 10, 12); to fear (ಸನ್ತ್ರಾಸ Šmd. Dh.; ಭಯ, ಭಯವನ್ ಅನ್ Šm. 40. 81; ಸುಗಿ Kk. 90; ಅಂಜು G.). ಅಗ್ನಿ ಹಿಮ

ಸಮಯಮಹೀವಲ್ಲಭನತ್ತಣಿನ್ ಅಗಿದು, ಎಂ ಪುಲ್ಲಂ ಕರ್ಚದುದೊ? (Rśv. 9, 27; see 7, after 17).

ಅಗಿ agi. 4. To be glad (ಹರ್ಷ Śmd. Dh.; Śm. 81; Râm. 6, 30, 10; *cf.* ಅಬ್ಬಿ?).

ಅಗಿ agi. 5. = ಅಗೆ 3 q. v. (S. Mhr.; ಮೊಳಿಕೆ, ಸಸಿ, ವಲಜ G.). ಬಿತ್ತಿದ ತಿಂಗಳಿಗೆ ಚಲೋ ಗೇಣುಗೇಣು ಎತ್ತರ ಅಗಿಗಳು ಬರುವವು (B. 4, 39).

ಅಗಿ agi. Fire. = ಅಗ್ಗಿ, etc. See ಅಗಿಟಿಗೆ, etc.

ಅಗಿಟಿಗೆ agiṭigĕ. = ಅಗ್ಗಿಟಿಗೆ, etc. (S. Mhr.).

ಅಗಿಟ್ಟಿಗೆ agiṭṭigĕ. = ಅಗಿಟಿಗೆ (My.).

ಅಗಿಣಿ agiṇi. = ಅಗ್ಗವಣಿ q. v. (ನೀರು G., Čb.). This term, together with its other forms, is used only by educated *Liṅgavantas,* especially in their maṭhas.

ಅಗಿನಿ agini. = ಅಗ್ಗಿ, etc. Tbh. of ಅಗ್ನಿ (Śm. 11; My.).

ಅಗಿನ್ತ aginta. ಅಗೆ 1-ಇನ್ತ 1. = ಅಕಿನ್ತ, etc. A vulgar affix added to the genitive: more than; from. ನಮ್ಮಿಬ್ಬರಗಿನ್ತ ಅವನದು ಒನ್ದು ನಡತೆ ಚೇಱೆ ಉಣ್ಟು (B. 5, 141). ತರ್ಲೆ ಕೇಳುವವ ಮರುಳನಗಿನ್ತ ಕಡೆ (Prv. in 5, 311). ತುಚ್ಛ ಮಾತು ಆಡುವವನು ಹುಚ್ಚನಗಿನ್ತ ಕಡೆ (Prv. in 5, 315).

ಅಗಿಯುವಿಕೆ agiyuvikĕ. Digging (C.).

ಅಗಿಲ್ agil. = ಅಗರು etc., ಅಗಿಲು. Fragrance. — ಅಗಿಲಿಲಿ. = ಅಗಿಲ್-ಇಲಿ (Śmd. 220). Having no fragrance. — ಅಗಿಲಿಲಿವಣ್. -ಪಣ್. A ripe fruit without fragrance. ಸೊಗಯಿಸುಗುಮೆ ಪಲ್ಲಿಲಿವಾಯ್ ಅಗಿಲಿಲಿವಣ್ಣಿಂ ಸಮನ್ತು ಕೂರಿಲಿಕುಡು ಗೋಲ್? (Śmd. 221).

ಅಗಿಲು agilu. = ಅಗಿಲ್, etc. Fragrant substances; fragrance. ಕಪ್ಪು ಅಗಿಹ ಅಗಿಲು ಜಾಪಕ, ಕಾಲೀಯಕ, ಕಾಲಾನುಸಾರ್ಯ ಎನಿಸುಗು; ಕಲ್ಲ ಹೂವಿನ ಧೂಪ (benzoin) ಎನ್ದೂ, ಎಬ್ಬರು (Nr.; ಕಪಿಜ Mr. 335; see s. ಅಗರು). ಮೃಗಮದದ, ಚನ್ದನದ, ಕರ್ಪೂರದ, ಅಗಿಲು ಸಾದು ಜವಾದಿಗಳ ಸಿಮ್ಪುಗಳಿನ್ ಎಸೆದುದು ನೋಡೆ ವಾರವಧೂಟಿಕಾನಿಲಯ (Bp. 12, 11). — ಅಗಿಲುಗನ್ಧ. = ಅಗರುಗನ್ಧ (St. & Pl.). — ಅಗಿಲುಬಾಗಿಲವಾಡ. N. (Bp. 12, 8).

ಅಗಿಷ್ಟಿಕೆ agishṭikĕ. = ಅಗ್ಗಿಟಿಗೆ. (My.).

ಅಗಿಸು agisu. = ಅಗಯಿಸು. To cause to dig (My.). ಅಗಿಸು! (Bp. 5, 57). ಜನಪನ್ ಆ ಕ್ಷಣಮ್ ಅಗಿಸೆ (5, 58). ತಳವನ್ನು ಅಗಿಸಿದರೆ (B. 4, 120). See Prv. s. ಕುಣಿ 2.

ಅಗಿಸೆ agisĕ. = ಅಗಸೆ. (My.).

ಅಗಿಸೆ agisĕ. = ಅಗಸೆ 1. (My.).

ಅಗು agu. 1. = ಆಗು 1. To become, to grow, etc. (Tĕ. ಅಗು, ಅವು). A *very rare* form of ಆಗು. See ಅಕ್ 2. ಅಗುಱಿಗನ್ನವನ್ ಇಕ್ಕಲೊಡನೆ ಆ ಬಿಗಿದ ಮಣ್ಣೆಲ್ಲಂ ಮಿಸುಪ ಹೊನ್ನ ಅಗುತಿರಲು (Bp. 31, 12).

ಅಗು agu. 2. = ಅಗುವು, ಪಂಗು, etc. (My.).

ಅಗುಚು aguču. = ಅಗೆಚು, ಅಗುಸು. (My.). — ಅಗುಚಾಟು. = ಅಗಚಾಟು. (My.).

ಅಗುನ್ದಲೆ agundalĕ. Extensiveness; greatness, superiority; superior; greatly (ಪಿರಿದು Śmd. II; ಬಹಳ Čt. I, 101; ಕರಂ, ನೆಱೆ, etc., ಪಿರಿದು Kk. 49; ಅಣಿಯರ, etc., 84; ಅಧಿಕ Śm. 58; ಹೆಚ್ಚಾಗಿ G.; Abh. P. 3, after 67). ಮೂಲೋಕಕ್ಕೆ ಪೆಪ್ಪಿನ್ದೆ ಅಗುನ್ದಲೆಯಾಗಿ ಇರ್ದುದು (Śmd. 223 Mdb. Ms.). — ಅಗುನ್ದಲೆವಡೆ. -ಪಡೆ. To become excellent, etc. ಗುಣಗಣಮ್ ಅಣಿಯರಮ್ ಎನಿಸೆ, ವೃತ್ತಿ ಬಿತ್ತರವ್ಪಡೆಯೆ, ... ಬನ್ಧಮ್ ಅಗುನಲೆವಡೆಯೆ, ... ಗದ್ಯಪದ್ಯಚಮ್ಪುಪ್ರಮುಖಪ್ರಬನ್ಧಂಗಳಂ ಪೇೞ್ದು, ಕೇಳ್ವರ ಚಿತ್ತಮುಂ ಕವರ್ತೆಗೊಳ್ವ ಕವೀನ್ದ್ರವನ್ದಂ (Rśv. 5, after 19).

ಅಗುರ್ agur. = ಅಗುೞ್ 1, etc. To dig. ಇದು ಕಾಡವೆಯ ಸೊರೆಯು! ಭಲ್ಲುಕಂ ಕೆದರ್ದ ಎಡೆಯು ಇದು! ಗಜಂ ಪೋದ ಪಾದಿ ಇದು! ನರಿ ಅಗುರ್ದ ಇದುಂ! ಕಾಡುಗುಱಿದುಪ್ಪುಟ್ ಇನ್ತು ಇದು! (Râghč. 17, 68).

ಅಗುರ agura. = ಹಗುರ. (My.).

ಅಗುರು. a-guru. 1. Not heavy, light. 2, short, as a syllable (Śmd. 54. 213).

ಅಗುರು aguru. 2. = ಅಗರು, etc. *The dark species of Agallochum* (ಅಗರು, ಕಾಕತುಣ್ಡ Hlâ.; ಕೃಷ್ಣಾಗರುಚನ್ದನ, ಚನ್ದಾಳ G.). 2, *the fragrant aloe wood and tree, Aquilaria agallocha* Roxb. 3, *the tree which yields Bdellium, Amyris agallocha.* 4, *a timber tree, furnishing a kind of black wood, Dalbergia sisu* Roxb. 5, the Aśôka tree, Jonesia aśôka Roxb. (Si. 136). 6, another species of plant, the kapilĕ (ಪರಿಮಳಯುಕ್ತಮ್ ಆದ ಅಗುರು, ಪರಿಮಳಾಶೋಕ 136). — ಅಗುರುಚಕ್ಕೆ. A chip or bit of fragrant wood. See ಕರೇ-. — ಅಗುರುಸೊಣ್ಟಿ. = ಅಗುಳು-, etc. (Si. 142).

ಅಗುರ್ಬು agurbu. = ಅಗುರ್ವು q. v. ಪಾಯಿಸಿ ಪೊಯ್ಯೆ ಗೋಱಿಯಿಲರ್, ಒರ್ವರಿನ್ ಒರ್ವರ ಅಗುರ್ಬು (ಒರ್ವರಗುರ್ಬು MS.) ಪರ್ಚೆ (Abh. P. 13, 62).

ಅಗುರ್ವಿಸು agurvisu. To be terrifying or formidable; — to terrify. ಮತ್ತಹಸ್ತಿಗಳ ಮಸ್ತಕದಿಂ, ಬಿದಿರಿಂ, ಫಣೀನ್ದ್ರೋತ್ತಮಾಂಗದಿನ್, ಅಗುರ್ವಿಪ ಪನ್ದಿಯ ಕೋಟ್ಟಿಳಿಂ ಪತ್ತುವಿಟ್ಟು ಅಗನಿಕಾಯದೊಳ್ ಒಕ್ಕ ಎಳಮುತ್ತನ್ ಆಯ್ದುತ್ತಮ್ ಇರ್ಪ ಶಬರವಿಪ್ರಿಯಕಾಮಿನಿಯರ್ಕಳ್ (Śmd. 142. 166). ನೆಗೆದ ಕುಡಿವಾಲಮ್, ಉಣ್ಮುವ ಬಗೆ ಬಳ್ಕುವ ನಡುವು, ಅಗುರ್ವಿಪ (ನಡುವಗುರ್ವಿಪ MS.) ಆನನಮ್ ಇರೆ, ತನ್ಮೃಗಮುಂ ಬಱಿವಿಡಿಯ ಅಟ್ಟುತ್ತೆ ಅಗಲದೆ ಪಿಡಿದತ್ತು ಚಾಯಿಲಂ ತದ್ವನದೊಳ್ (Rśv. 5, 87). ಧರಿತ್ರಿಯೊಳೆ ಚಾಲಿಪ ಬಾಲಮ್, ಅಗುರ್ವಿಪ ಆನನಂ . . . ಎಸೆಯೆ, ತರಕ್ಷುದಂಶಶತಸಂವೃತಮ್ ಇರ್ದುದು (5, 92). See Abh. P. 3, 54; 13, 31; *cf.* ಏಗುರ್ಬಿಸು (ಏಗುರ್ವಿಸು).

ಅಗುರ್ವು agurvu. = ಅಗುರ್ಬು, (ಗುರ್ಬು, ಗುರ್ವು). Amazement, terror; a terrible form (*cf.* ಅಗಿ 3; ಅಘೋರ?). ಒನ್ದು ಉದ್ದಣ್ಡಪ್ರಚಣ್ಡಕಣ್ಠೀರವಂ ಗೆಣ್ಟಿನೊಳ್ ಎಲೆಯಾಗ್ನಿ ಮೆಯ್ವೆತ್ತುದು ಎಬ್ಬ ಅಗುರ್ವನ್ (ಎಬ್ಬುಗುರ್ವನ್ MS.) ಒಳಕೊಣು (Rśv. 5, after 115). See Abh. P. 7, 114; 13, 80; 14, after 6; Grj. 1, 99. — ಅಗುರ್ವವಡೆ. -ಪಡೆ. To get a terrible form (Abh. P. 13, after 54).

ಅಗುಲು agulu. = ಅಗಲ್. To shake, to move, to become loose, as a peg (My.).

ಅಗುವು aguvu. = ಅಗು 2. (My.).

ಅಗುಸು agusu. = ಅಗುಚು. (My.).

ಅಗುಸೆ agusĕ. = ಅಗಸೆ, etc. (My). ಜವಳಿಗದವಂ ಪ್ರಾರಬನ್ಧದ ಹವಣಿಗೆ ಆ ಬಾಗಿಲೊಳ್ ಅಮರ್ಚಿಸಿ, ಅವಕೆ ಅಗುಸೆಯಂ ನಿಲಿಸಿದನು (Bp. 16, 9). ಹಟ್ಟಿಯೊಳ್ ಅಗುಸೆಯಂ ಹುಗಲೀಯದೆ ಇಕ್ಕಿದನು (60, 26). ಹಟ್ಟಿಯ ಮುಖದ ಅಗುಸೆಯಂ ತೆಱೆಯಲೊಡನೆ (60, 31).

ಅಗುಳು aguḷu. = ಅಗಳು. A grain of boiled rice (My.). 2, a small lump of rice kneaded into a ball (ಪುಲಾಕ, ಭಕ್ತಸಿಕ್ಥಕ, ಕೂೞ ಅಗುಳು Nr.; Si. 405; ಪುಲಕ, ಕೂೞಗುಳು Nn. 145; ಪುಲಕ, ಅನ್ನದ ಅಗುಳು

Mr. 486; *cf.* ಅವುಡು 3?). ಅಗುಳು ನುಂಗಲಿಕ್ಕೆ ತೀರದವನ ಬಾಯಲ್ಲಿ ಕಡಬು ಹೆಟ್ಟಿದ (Prv.).

ಅಗುಳು agulu. = ಅಗರು, etc. — ಅಗುಳುಸುಣ್ಟಿ. = ಅಗಳು-, etc. A climbing plant possessing various medicinal properties, Clypea hernandifolia W. & A. (ಪಾಠೆ, ಅಮ್ಬಷ್ಠೆ, ವಿದ್ಧಕರ್ಣಿ, ಪಾಪಚೇಲಿ, ಪ್ರಾಚೀನೆ, ರಸೆ, etc. Nr.; ಪಾಠೆ Mr. 142). 2, a wild plant, Zingiber zerumbet Roscoe (St. & Pl.). — ಅಗುಳುಸೊಣ್ಟಿ. = ಅಗುಳುಸುಣ್ಟಿ, etc. (Si. 142).

ಅಗುೞ್ agul. 1. = ಅಗೞ್1, etc. P. p. ಅಗುೞ್ದು. To dig (ಖನನ Šmd. Dh.; ಅಗಿ G.). ಅಗುೞ್ದಂ (Šmd. 49. 55). ಅಗುೞ್ದಪಂ (55). ಅಗುೞ್ಗುಂ (55). ಅಗುೞ್ಗೆ (55). ವೇದಿಕೆಯನ್ ಇನ್ತು ಅಗುೞುತ ಇರ್ದಪೆ, ಮೂಣದೆ, ಒಬ್ಬಳೆ ನೀನ್ (Bp. 47, 10). ಒೞತೆಯನ್ ಅಗುೞದೆ ಇರು! (20).

ಅಗುೞ್ agul. 2. P. p. ಅಗುೞ್ದು. To sink in water, to be immersed, to dive (ಜಲನಿಮಜ್ಜನ Šmd. Dh.; T. ಅಮುೞ್, see ಅವುಗು 2; Mhr. ಅಂಘೊಳ, bathing). ಅಗುೞ್ದಿನ್ ಎನ್ದು, ನೀರ್ನೆಲೆದಪ್ಪಿದಂ (Šmd. I).

ಅಗುೞಿ aguli. = ಅಗೞ್, etc. Tbh. of ಅರ್ಗಲ (Šmd. 30. 364). A bolt or pin; a (wooden) beam or bar for locking a door (ತಾೞ್ Šmd. I; Šm. 113; ಪರಿಘ, ಅರ್ಗಲ Mr. 199; My.). — ಅಗುೞಿಗನ್ನ. -ಕನ್ನ. A hole made in the wall to remove the door-bar (for the purpose of robbery). ಘನದ ಹೊಸತಿಲುಗನ್ನಮಂ ಘಮ್ಮನೆ ಅಗದು, ಅಗುೞಿಗನ್ನಮುಂ ಸುಮ್ಮನೆ ಅಗದು (Bp. 31, 5). ಅಗುೞಿಗನ್ನವನ್ ಇಕ್ಕಲೊಡನೆ (31, 12).

ಅಗುೞಿಸು agulisu. To cause to dig (ಖನನ Šmd. Dh.; My.). ಅಗೞುಗಳನ್ ಅಗುೞಿಸಿದಂ (Bp. 16. 9). ಪಿರಿಯ ನಿಡುಬಾವಿಗಳನ್ ಅಗುೞಿಸಿದಂ (16, 11).

ಅಗುೞು agulu. = ಅಗುೞ್ 1. (My.; ಅಗಿ G.).

ಅಗುೞ್ಚು agulču. To cause to sink in water, to immerse (ಜಲಾಶಯಮುಗ್ನ Šmd. Dh.).

ಅಗೂಢ a-gûḍha. Unconcealed, manifest, transparent. 2, a kind of prasanna in poetic art (Kâvy. III, 1, A, 15).

ಅಗೆ agĕ. 1. = ಅಕೆ, etc. See ಅಗಿನ್ತ.

ಅಗೆ agĕ. 2. = ಅಗಿ 1. To dig (ಖನನ Šm. 80; My.). P. ps. ಅಗದು q. v., ಅಗೆದು. ಸರಸರನೆ ಸತಿ ಗೋಪ್ಯದಿನ್ ಅಗವುದಱ ವಿಧ ನಿಯಮ ಕೇಳಿ (Bp. 47, 8). ನಾನ್ ಇಲ್ಲಿ ಒೞತೆಯನ್ ಅಗದೊಡೆ (v. 21). ಅಗವುತ ಇರ್ದಹಳು (v. 26). ಒೞತೆಯನ್ ಅಗದಹಳು (v. 27). ಶೀಲವನ್ತರು ಮನೆಯೊಳ್ ಒೞತೆಯನ್ ಅಗದರು ಉಣ್ಟೇ? (v. 49). — ಅಗೆ ಅಗೆ! rep. (Bp. 23, 34).

ಅಗೆ agĕ. 3. = ಅಗಿ 5. (What has grown or germinated; *cf.* ಅಗು 1): a seedling; a shoot from the root of a plant or tree; a sprout (ಅಂಕುರ Šm. 22. 80; Abh. P. 3, 138; C.; ಮೊಳಕೆ, ಸಸಿ, ವಲಜ G.; Tu. ಅಗ್ಗೆ); especially seedlings of rice, tobacco, pepper, etc. ready for being transplanted (My.; Tĕ. ಆಕು). — ಅಗೆ ಕಟ್ಟು. To raise seedlings in pots, etc. (My.). — ಅಗೆ ಬಿಡು. To sow seed for raising seedlings (My.). — ಅಗೆ ಮಾಡು. To raise seedlings (My.). — ಅಗೆವೊಯ್. -ಪೊಯ್. To get shoots (Ršv. 11, 120).

ಅಗೆ agĕ. 4. = ಅನೆ 1. (Probably an infinitive of ಅಗು "so that it becomes or is"; *cf.* ಅಗಿ No. 2). A suffix to form adverbs, *e. g.* ನೆಟ್ಟಗೆ, ಸುಮ್ಮಗೆ, ಕಮ್ಮಗೆ, ಬಿನ್ನಗೆ (Šmd. 389).

ಅಗೆ agĕ. 5. = ಹಗೆಯು, etc. (My.).

ಅಗೇನ್ದ್ರ aga-indra. A principal mountain, any one of the seven mountains in Bhârata. 2, the number seven (Čh.).

ಅಗೇನ್ದ್ರಜೆ agêndra-jĕ. Pârvatî (J. 15, 15).

ಅಗೊ a12-gĕl-ŏ4. = ಅಕೊ, etc. (C.).

ಅಗೋ a12-gĕl-ô3. = ಅಗೊ, etc. (C.). ಗೆಳೆಯಾ, ಅಗೋ, ದೂರದಲ್ಲಿ ಒಬ್ಬ ಬೇಟೆಗಾಱನೂ ನಾಲ್ಕಾಱು ನಾಯಿಗಳೂ ಈ ಹಾದಿಯಲ್ಲಿ ಬರುತ್ತವೆ, ನೋಡು! (B. 4, 19). ಅಗೋ, ಆ ಬಾವಿಯ ಮೇಲೆ ಜೋತಾಡುವ ಗೊಂಚಲುಗಳನ್ನು ಕೊಯಿದು ಕೊಣ್ಡು ಹೋಗು! (4, 180). ಅಗೋ, ಅಲ್ಲಿ ಒಬ್ಬ ಮನುಷ್ಯ ಬರುತ್ತಾನೆ (4, 182).

ಅಗೋಚರ a-gôčara. Not obvious, imperceptible by the senses; wondrous. 2, anything that is beyond the cognizance of the senses. (Bp. 6, 8; 8, 51; 11, 22; 54, 58; 55, 53; J. 2, 55; see ವಾಚಾಮ್-).

ಅಗೋಪಗ a-gôpa-ga. Going without a superintendent; N. of a vritta (Čh.).

ಅಗೌರವ a-gaurava. Absence of grandeur; degradation, dishonour (My.).

ಅಗ್ಗ agga. 1. = ಹಗ್ಗ. Tbh. of ಅರ್ಘ (Šmd. 345. 358). Worth, value, price. 2, proper price, the cheapness of commodities; cheapness; cheap (C.; Tĕ. ಅಗ್ಗುವ; Tu. ಅಗ್ಗ). 3, cheapness, worthlessness (C.; Tu.). 4, a respectful offering of various ingredients or of water only. ಅಗ್ಗವಾದ ಧಾನ್ಯಗಳಲ್ಲಿ ಜನರಿಗೆ ಉಣ್ಟಾದ ಆದರಣೆ (ನೀವಾಕ Si. 432). ಜಾಜಯ ಕಾಯಿ ಬಹಳ ಬೆಳದರೆ ಅಗ್ಗವಾಗುವವು (B. 3, 53). ಯನ್ತ್ರಗಳಿನ್ದ ಹುಟ್ಟುವ ಅಱುವೆ ಈ ದೇಶಕ್ಕೆ ಬನ್ದು ಬಹು ಅಗ್ಗವಾಗಿ ಮಾಱಿ ಹತ್ತಿದ್ದಱಿನ್ದ (4, 28). ವ್ಯಾಪಾರ ಮಾಡುವವರು ಆ ಪದಾರ್ಥಗಳು ಅಗ್ಗವಾದ ಸಮಯ ನೋಡಿ (5, 101). ಅವರು ಅಗ್ಗವಾದಾಗ, ಕಾಱು ಕೊಣ್ಡು, ತುಟ್ಟಿಯಾದಾಗ ಮಾಱುತ್ತಾರೆ (5, 102). See Prv. s. ಪೆಗ್ಗು 1. — ಅಗ್ಗದವ. -ಅವ. A mean or lewd man (C.). — ಅಗ್ಗದವಳು. -ಅವಳು. A low woman (C.). — ಅಗ್ಗಪಾಡು. A cheap manner, cheapness (S. Mhr.). — ಅಗ್ಗಾಳು. A low man (R.).

ಅಗ್ಗ agga. 2. Tbh. of ಅಗ್ರ. Foremost; first. 2, pre-eminent, best. 3, excessive; great. The word is generally used as a noun conveying the meaning of the mentioned adjectives, *e. g.* in Bp. 5, 40; 6, 7. 22; 19, 30; 21, 44; 22, 8. 66; 28, 46; 31, 4; 42, 25; 47, 2; 50, 25; 58, 62. ತೆಗೆದುದು ಅಗ್ಗದ ತಮ್ಮು (Bh. 1, 5, 5). ಅಗ್ಗದ ಪುಣ್ಯದ ಒಡಲ್ (J. 28, 55). ಅಗ್ಗದ ಅರಣ್ಯ (Ršv. 6, 34). ಅಗ್ಗದ ಶತ್ರುಗಳ್ (Bh. 1, 8, 34). — ಅಗ್ಗದವ. -ಅವ. An eminent man; a chief soldier (ಭಟ, ಯೋಧ, ಯೋದ್ಧೃ Si.). — ಅಗ್ಗಯ್ಯ. -ಅಯ್ಯ. N. See ಶೀಲವನ್ತ-.

ಅಗ್ಗ agga. 3. = ಹಗ್ಗ. A rope. (My.; T.). See ಅಗ್ಗರಣೆ.

ಅಗ್ಗರಣೆ aggaraṇĕ. = ಒಗ್ಗರಣೆ. (My.).

ಅಗ್ಗರಣೆ agga3-raṇĕ. A rope, a tie (ದಾವು, ಹಗ್ಗ Kk. 70; ದಾವೆ, ರಜ್ಜು Šs.; see ರಣೆ). ಪಿಂಗಾಲ್ಗೆ ತೊಡರ್ಚಿದ ಅಗ್ಗದ ಅಗ್ಗರಣೆಯಂ ಛಟಛಟನೆ ಕಿೞ್ತು, ಕಿಳಿರ್ದು (Ršv. 6, after 11).

ಅಗ್ಗಲಿಸು aggalisu. = ಅಗ್ಗಳಿಸು q. v. (ಪೆರ್ಚುಗೆವಡೆ Šmd. 187 Cm.; ವೆಗ್ಗಳಮ್ ಅಗು 209 Cm.; ವೆಗ್ಗಳಿಸು 365 Cm.; Tĕ. ಅಗ್ಗಲಿಂಚು). ಅಲರ ಪೊಸಗಮ್ಪಿನಿನ್ದೆ ಎಮಗೆ ಅಲಮ್ಪಿನ್ ಅಗ್ಗಲಿಸಿ, ನೀನೆ ರಕ್ಷಿಪುದು! (Čpr. 7, 55).

ಅಗ್ಗವಣಿ aggavaṇi. = ಅಗಿಣಿ, ಅಗ್ಗಿಣಿ. Water. — It seems more than probable that ಅಗ್ಗವಣಿ, etc. are based on ಅಗ್ಗ 1, No. 4 (ಅರ್ಘ, ಅರ್ಘ್ಯ), a respectful offering of *water.* ಅಗ್ಗವಣಿ occurs, *e. g.* in Bp. 12, 33. 34; 16, 6; 24, 2. 54; 30, 9; 47, 15; 53, 46; 55, 28.

ಅಗ್ಗಷ್ಟಿಗೆ aggashṭigĕ. = ಅಗ್ಗಿಟಿಗೆ, etc. ಅವರ ಮನೆಗಳಲ್ಲಿ ಬೆಂಕೀ ಇಡುವದಕ್ಕೆ ಗೋಡೆಯೊಳಗೆ ಮಾಡಿದ ಕಬ್ಬಿಣದ ಅಗ್ಗಷ್ಟಿಗೆ ಇರುತ್ತವೆ (B. 5, 296).

ಅಗ್ಗಳ aggaḷa. (Šmd. 49). = ಅಗ್ಗಳೆ, ಅರ್ಗಳ q. v. (My.; Tĕ. ಅಗ್ಗಲ; *cf.* ಅಗ್ಗಳಿಕೆ). ಮೇರುವಿಂಗೆ ಈತನ್ ಅಗ್ಗಳಂ (159, o. r. ಅರ್ಗಳಂ). ಕೊಮ್ಮು ಇರಿಸಿಪಿದ ಮರದಿನ್ದೆ ಅಗ್ಗಳಂ ತಿಣ್ಣಮ್ ಅದಂ (289). ಹಲವು ಲಿಪಿಗಳನ್ ಓದ ಬಲ್ಲ ಅಗ್ಗಳದ ಕರಣಿಕರಂ ಕರಸಿ (Bp. 5, 53). ಅಗ್ಗಳದ ಘಟ ಕಳಸಾದಿಗಳ್ (8, 37). ಲೆಕ್ಕಕೆ ಅಗ್ಗಳಮ್ ಆಗಿ ಇರಲು (31, 29). ಗುಗ್ಗಳಂ ಸಾಮಾನ್ಯಮ್ ಆಯ್ತೋ? ಅಗ್ಗಳವನ್ ಇಕ್ಕಿದೊಡೆ ಅದಱಿನ್ದೆ ಅಗ್ಗಿ ತಗ್ಗಿದುದೋ? (47, 16). ಅಗ್ಗಳನ (the poet ಅರ್ಗಳ) ಮುನ್ದೆ ವೆಗ್ಗಳನುಣ್ಟೇ? (Prv.).

ಅಗ್ಗಳಿಕೆ aggaḷikĕ. Greatness; great power (ಅತಿಶಯ, ಸೊಮ್ಪು, etc. Šs.; Tĕ. ಅಗ್ಗಲಿಕೆ, power; sport; eagerness). ಶಿವಮರುಳನ್ ಅಗ್ಗಳಿಕೆಯೊಳಗೆ ಆಡುವವರಂ (Bp. 4, 9). ಅಗಸ್ತ್ಯನು ಮೆಚ್ಚಿದಡೆ ಭೂತಲಕೆ ಕುಗ್ಗಿದ ವಿನ್ಧ್ಯನಗದ ಅಗ್ಗಳಿಕೆ ಎನ್ತುಟು? (19, 26). ಛಲದ ಭಕ್ತಿಯ ಮಹತ್ವದ ಒನ್ದು ಅಗ್ಗಳಿಕೆಯಂ ತಾನ್ ಅಱಿದುದುಮ್ ಅಱಿಯದ ವೊಲು (61, 3). ವಿಪ್ರಜಾತಿಗೆ ಸನ್ದುದು ಇನ್ನು ಅಗ್ಗಳಿಕೆ (Bh. 1, 10, 39). See Bh. 1, 1, 9; 8, 26, 2. 5; Č. Bp. 42, 24; Râm. 5, 9, 2; J. 8, 24; 12, 27; 14, 4; 20, 4; 29, 9. 37.

ಅಗ್ಗಳಿಸು aggaḷisu. = ಅಗ್ಗಲಿಸು q. v. To be or become pre-eminent, abundant or redundant; to go beyond measure; to make great efforts; to be superior to, to excel. ಅಲರು ಗಣೆಯನ ದೋಣೆಗಳಿನ್ದ ಅಗ್ಗಳಿಪ ಕಿಱುದೊಡೆದೊಡೆಗಳ್ ಎಸವವು (Bp. 4, 18). ಆಗಸದೊಳ್ ಎಲ್ಲೆಡೆಯೊಳು ಬಲಿದು, ಬೆಳುದಿಂಗಳ್ ಅಗ್ಗಳಿಸೆ (12, 37). ಜೋಗುಳವ ಅಗ್ಗಳಿಸಿ ಹಾಡುತ (15, 14). ಸೊಮ್ಪು ಅಗ್ಗಳಿಸೆ (32, 39). ಜಯಜಯನಿನದಮ್ ಅಗ್ಗಳಿಸೆ (51, 62). ಅಗ್ಗಳಿಸಿ, ತಮ್ಮಂ ನಾಯ್ಗಳಿಗೆ ಕೀಳ್ಮಾಡಿ ನುಡಿದೆ, ಅಲ? (55, 43). ವೊತ್ತಪ್ಪೆತ್ತು, ಮುತ್ತಿ, ಲಗ್ಗೆಗೆ ಅಗ್ಗಳಿಸಿ ಇರ್ಪಾಗಳ್ (Rsv. 6, after 116). See further Abh. P. 13, 35; Bp. 38, 39; 50, 25. 57; 52, 41; 56, 6; 57, 74; 58, 34; 59, 13; 60, 35.

ಅಗ್ಗಳೆ aggaḷĕ. = ಅಗ್ಗಳ, etc. (ಅಧಿಕ Šs.). ಪೊಡವಿಯೊಳ್ ಎನ್ನನ್ ಅಗ್ಗಳೆಯ ಕವಿಮುಂಗನ್ ಎನಿಸೂದು (Mr. 539). See Bh. 8, 23, 44; J. 7, 46; 8, 8. — ಅಗ್ಗಳೆಯ. ಅಗ್ಗಳೆ-ಅ 3. A great or powerful man (ಬಲ್ಲಿದಂ Bhn. 13). ಅಲಘುಮುನಿಮಾತಂಗನ್ ಎಮ್ಬ ಅಗ್ಗಳೆಯಂ (Bp. 57, 72). See J. 13, 21; 17, 12; 21, 5.

ಅಗ್ಗಳಿಕೆ aggaḻikĕ. Tbh. of ಅರ್ಗಲಿಕೆ. A bolt or bar for fastening a door (ಲಾಳವಿಣ್ಡಿಗೆ Šmd. I, o. rs. ಅರ್ಗಳಿಕೆ, ಅರ್ಗಳು). 2, a certain implement (ಅವುಜದ ಮುಟ್ಟು Šmd. I).

ಅಗ್ಗಿ aggi. = ಅಗಿ, ಅಗಿನಿ, ಹಗ್ಗಿ. Tbh. of ಅಗ್ನಿ (Šmd. 351; Šm. 11; Čt. II, 95). Fire (ಕಿರ್ಚು Kk. 21). — ಅಗ್ಗಿಮೊಗ. = ಅಗ್ನಿಮುಖ. A fire-face. — ಅಗ್ಗಿಮೊಗದವ. -ಅವ. A fire-faced being, a deity (ಸುರ Šm. 8). — ಅಗ್ಗಿವಳದೆಣ್ಣೆ. Probably ಅಗ್ಗಿ-ಬಲದ ಎಣ್ಣೆ. Oil with the power of burning, oil made hot, or oil set on fire (ಉರಿಯೆಣ್ಣೆ Kk. 77). *Cf.* ಉಗ್ಗಿವಳವೆಣ್ಣೆ s. ಉಗ್ಗಿ 1.

ಅಗ್ಗಿಗ aggiga. = ಅಗ್ಗ 2 -ಇಗ, or Tbh. of ಅಗ್ರಗ. A king (ಅರಸು Čt. I, 5).

ಅಗ್ಗಿಟಿಕೆ aggiṭikĕ. = ಅಗ್ಗಿಟಿಗೆ. (My.).

ಅಗ್ಗಿಟಿಗೆ aggiṭigĕ. = ಅಗಿಟಗೆ, ಅಗಿಟ್ಟಿಗೆ, ಅಗಿಷ್ಟಿಕೆ, ಅಗ್ಗಷ್ಟಿಗೆ, ಅಗ್ಗಿಟಕೆ, ಅಗ್ಗಿಷ್ಟಕೆ, ಅಗ್ಗಿಷ್ಟಿ, ಅಗ್ಗಿಷ್ಟಿಕೆ, ಅಗ್ಗಿಷ್ಟಿಗೆ. A potsherd used as a fire-pan or chafing dish, and also as a furnace (ಅಂಗಾರಧಾನಿಕೆ, ಅಂಗಾರಶಕಟಿ, ಹಸನ್ತಿ, ಹಸನಿ Nr.). The terms clearly appear to be Tbhs. of ಅಗ್ನಿ-ಇಷ್ಟಿಕೆ.

ಅಗ್ಗಿಣಿ aggiṇi. = ಅಗ್ಗವಣಿ, etc. See Prv. s. ಶಿವಾರ್ಚನೆ.

ಅಗ್ಗಿಷ್ಟಕೆ aggishṭakĕ. = ಅಗ್ಗಿಟಿಗೆ, etc. (Si. 308).

ಅಗ್ಗಿಷ್ಟಿ aggishṭi. = ಅಗ್ಗಿಷ್ಟಕೆ. (My.).

ಅಗ್ಗಿಷ್ಟಿಕೆ aggishṭikĕ. = ಅಗ್ಗಿಷ್ಟಕೆ. (My.; ಕುಪ್ಪಟ Čb.).

ಅಗ್ಗಿಷ್ಟಿಗೆ aggishṭigĕ. = ಅಗ್ಗಿಷ್ಟಕೆ, etc. (My.; Si. 308; ಅಂಗಾರಧಾನಿಕೆ, ಕುಪ್ಪಡಿಗೆ, ಹಸನಿ G.).

ಅಗ್ಗಿಸು aggisu. (fr. ಅಬ್ಬು). To cause to decay or to become lean (Bh. 3, 4, 22).

ಅಗ್ಗುಳಿ agguḻi. = ಅಗುಳಿ, etc. (ಅರ್ಗಲೆ, ಪರಿಘ Hlâ.).

ಅಗ್ನಾಯಿ agnâyi. *Agni's wife.* 2, the trêtâ yuga or second age.

ಅಗ್ನಿ agni. = ಅಗ್ಗಿ, etc. *Fire.* 2, *the god of fire,* Agni. 3, *the guardian of the south-east quarter.* 4, the sacrificial fire of 3 kinds: gârhapatya, âhavanîya, and dakshiṇa. 5, the number 3 (Mr. 73. 364). 6, the digestive faculty. 7, bile. 8, gold. 9, the plant Plumbago zeylanica (ವ್ಯಾಳ, ಚಿತ್ರಕ, ಚಿತ್ರಮೂಲ Mr. 128). 10, the plant Semecarpus anacardium. 11, ನಿಮ್ಬೆಯ ಹಣ್ಣು (Čb.). 12, ಕೇಸರ (Čb.). 13, N. of a metrical foot (Čh.). — ಅಗ್ನಿಗಣ್ಣ. -ಕಣ್ಣ. Šiva (R.). — ಅಗ್ನಿಗೆಯ್ಯ. -ಕೆಯ್ಯ. Bâṇâsura (R.). — ಅಗ್ನಿಮೂಲೆ. The south-east quarter (My.).

ಅಗ್ನಿಕಣ agni-kaṇa. *A spark* (ಕಿಡಿ Šm. 12).

ಅಗ್ನಿಕಾರ್ಯ agni-kârya. Kindling or feeding the sacrificial fire with clarified butter, etc. (My.).

ಅಗ್ನಿಕಾಷ್ಠ agni-kâshṭha. Wood fit for kindling fire (My.). 2, Agallochum.

ಅಗ್ನಿಕುಣ್ಡ agni-kuṇḍa. A hole for the consecrated fire, or for any fire (My.).

ಅಗ್ನಿಕೋಣ agni-kôṇa. Agni's quarter, the south-east. (R.).

ಅಗ್ನಿಚಿತ್ agni-čit. *One who has arranged a sacrificial fire-place.*

ಅಗ್ನಿಚಿತ್ತು agni-čittu. Tbh. of ಅಗ್ನಿಚಿತ್ (Šmd. 196 Cm.).

ಅಗ್ನಿಜ್ವಾಲೆ agni-jvâlĕ. Glow or flame of fire. 2, *a plant with red blossoms, used by dyers, Grislea tomentosa* Roxb. (= ಧಾತಕಿ, ಸುಭಿಕ್ಷೆ). 3, another plant with red blossoms, Jalapippalî.

ಅಗ್ನಿತಾರೆ agni-târĕ. = ಅಗ್ನಿದೇವೆ. (My.).

ಅಗ್ನಿದೀಪನ agni-dîpana. Stimulating digestion. (My.).

ಅಗ್ನಿದೇವೆ agni-dêvĕ. The third lunar mansion, the Pleiades.

ಅಗ್ನಿನಯನ agni-nayana. He who has an eye of fire, Šiva. (My.).

ಅಗ್ನಿನೇತ್ರ agni-nêtra. = ಅಗ್ನಿನಯನ. (My.).

ಅಗ್ನಿಪಟೂಕರಣ agni-paṭûkaraṇa. Causing to burn with flame. See ಪೊತ್ತು.

ಅಗ್ನಿಫಲ agni-phala. A diamond (ವಜ್ರ Mr. 101).

ಅಗ್ನಿಬಳ್ಳಿ agni-baḷḷi. Smooth-leaved heart-pea, Cardiospermum halicababum Lin. (St. & Pl.).

ಅಗ್ನಿಬಾಣ agni-bâṇa. A fiery arrow; a rocket. (My.).

ಅಗ್ನಿಬಾಧ agni-bâdha. Annoying or damaging with fire. See ಉರಿಪು.

ಅಗ್ನಿಬಾಧನ agni-bâdhana. = ಅಗ್ನಿಬಾಧ. See ತಗುಳ್ಚು.

ಅಗ್ನಿಭೂ agni-bhû. Born of fire. 2, *Shanmukha or Skanda,* Šiva's son.

ಅಗ್ನಿಮಥನ agni-mathana. = ಅಗ್ನಿಮನ್ಥ No 1. (My.).

ಅಗ್ನಿಮನ್ಥ agni-mantha. Production of fire by friction. 2, *the tree Premna spinosa*, the wood of which produces fire by attrition (=ಜಯ, ಶ್ರೀಪರ್ಣ). See ನರುವಲ್.

ಅಗ್ನಿಮಾನ್ದ್ಯ agni-mândya. Languor of the digestive power. (My.).

ಅಗ್ನಿಮಿತ್ರ agni-mitra. The fire's friend; N. of a prince (Smd. 90); the wind.

ಅಗ್ನಿಮುಖ agni-mukha. = ಅಗ್ನಿಮೊಗ. A deity; — Brahmâ.

ಅಗ್ನಿಮುಖಿ agni-mukhi. *The marking-nut, Semecarpus anacardium* Lin.

ಅಗ್ನಿರಕ್ಷಣೆ agni-rakshaṇĕ. Preservation of the sacred (especially of the domestic) fire. (My.).

ಅಗ್ನಿವರ್ಣ agni-varṇa. N. of a prince (Râm. 1, 5, 6).

ಅಗ್ನಿವೀರ್ಯ agni-vîrya. Rudra (Mr. 11).

ಅಗ್ನಿಶಿಖ agni-śikha. Having a crest of fire. 2, *saffron, Crocus sativus.* 3, the safflower plant, Carthamus tinctorius. 4, a lamp. 5, a rocket. 6, an arrow. 7, gold.

ಅಗ್ನಿಶಿಖೆ agni-śikhĕ. A flame. 2, *the plant Gloriosa superba* Lin. (Methonica superba Lam.; see ತರಿಗೊಟ್ಟು). 3, *the medicinal plant Menispermum cordifolium* Willd.

ಅಗ್ನಿಷ್ಟೋಮ agni-stôma. Praise of Agni. 2, a protracted sacrifice, extending over several days in spring. (My.).

ಅಗ್ನಿಸಂಸ್ಕಾರ agni-saṁskâra. The consecration of fire. 2, performance of any rite in which the application of fire is essential, as the burning of the dead body (My.; B. 4, 215).

ಅಗ್ನಿಸಖ agni-sakha. *The wind.*

ಅಗ್ನಿಸಾಕ್ಷಿಕ agni-sâkshika. Taking Agni for a witness (Si. 183). *Cf.* Nr. s. ಮದುವೆ.

ಅಗ್ನಿಸ್ತಮ್ಭನ agni-stambhana. The (magical) quenching of fire. (My.).

ಅಗ್ನಿಹೋತ್ರ agni-hôtra. An oblation to Agni (Si. 238).

ಅಗ್ನಿಹೋತ್ರಿ agni-hôtri. Practising the agni-hôtra. (My.). 2, maintaining the sacrificial fire. 3, one who has prepared the sacrificial fireplace, or conveyed the sacrificial fire to it.

ಅಗ್ನೀಧ್ರ agni-idhra. *The priest who kindles the fire.*

ಅಗ್ನ್ಯುತ್ಪಾತ agni-utpâta. A fiery portent, *a meteor, a comet.*

ಅಗ್ರ agra. Soreness of the tongue and mouth, the thrush (C.; T. ಅಣ್ಣರ; Mhr. ಅಗರು).

ಅಗ್ರ agra. = ಅಗ್ಗ 2. *A top, point, summit,* or *surface* (ತುದಿ Nn. 82; ಲಲಾಮ 26; ತುದಿ Mr. 516). 2, *the front, fore part* (ಇದಿರ್ Nn. 82; Mr. 516). 3, the beginning (ಮೊದಲ್ Nn. 82; Mr. 516); an undertaking (ವಿಧಾನ 82, one Ms. ಮಾಟ). 4, the place near a town (ನಗರೋಪಭಾಗ, ಪಟ್ಟಣಸಮೀಪ Nn. 82). 5, *prominent, excellent, best, chief; the best part* (ಪ್ರಧಾನ, ಮುಖ್ಯ Nn. 82; ಅತಿಮುಖ್ಯ Mr. 516). 6, *excess.* 7, praise (ಸ್ತುತಿ, ಸ್ತೋತ್ರ 82). 8, a measure of food given as alms. 9, a multitude. 10, a weight equal to one pala. 11, *prior, first.* 12, goal, aim, resting place. See ಕೊನೆ, ಮುನ್ದು.

ಅಗ್ರಗ agra-ga. (= ಅಗ್ಗಿಗ). A leader.

ಅಗ್ರಗಣ್ಯ agra-gaṇya. That should be regarded as the foremost, principal, best (Bp. 53, 2; 54, 86).

ಅಗ್ರಗಮನ agra-gamana. Going before, preceding. See ನೋಳ್, ಮುಂಚು.

ಅಗ್ರಗಾಮಿ agra-gâmi. = ಅಗ್ರೇಸರ. (My.).

ಅಗ್ರಜ agra-ja. First-born. 2, *an elder brother* (ಮೂಲಿಕ, ತನ್ನಿನ್ದವೂ ಹಿರಿಯನು Nn. 44). 3, a Brâhmaṇa (Bp. 57, 38. 69). 4, Vishṇu.

ಅಗ್ರಜನ್ಮ agra-janma. = ಅಗ್ರಜ No. 1. 2, = ಅಗ್ರಜ No. 2. 3, *a Brâhmaṇa.* 4, Brahmâ.

ಅಗ್ರಜಾತೆ agra-jâtĕ. An elder sister (Mr. 313).

ಅಗ್ರಜೆ agra-jĕ. ಅಗ್ರಜಾ. = ಅಗ್ರಜಾತೆ. (Bp. 49, 27). 2. Pârvatî (see ಅಗ್ರಜೇಶ).

ಅಗ್ರಜೇಶ agrajâ-îśa. Śiva (Bp. 54, 43).

ಅಗ್ರಣಿ agraṇi. *Foremost, best, excellent.*

ಅಗ್ರತಃ agra-taḥ. ಅಗ್ರತಸ್. *In front of, before.*

ಅಗ್ರತಃಕೃತ agrataḥ-kṛita. *Placed in front.*

ಅಗ್ರತಃಸರ agrataḥ-sara. *Going in front, taking the lead.*

ಅಗ್ರತನೂಜ agra-tanûja. An elder brother (Ch. v. 11. 14).

ಅಗ್ರತಾಮ್ಬೂಲ agra-tâmbûla. The first present of betel leaf, etc. made at an assembly (My.).

ಅಗ್ರತೆ agratĕ. The state of being prior, etc. See ಅನೇಕಾಗ್ರತೆ.

ಅಗ್ರಪೂಜೆ agra-pûjĕ. The first or highest mark or act of reverence; the honours and attentions which at assemblies are rendered to the principal man present; the chief honours. (My.; Bh. 2, 10 sum.).

ಅಗ್ರಬಲ agra-bala. An advance-force, an avant-guard (ಮುನ್ದುಜೂಣಿ Bhn. 39).

ಅಗ್ರಮಾಂಸ agra-mâṁsa. *The heart* (ಬುಕ್ಕ Mr. 398). 2, morbid protuberance of the liver.

ಅಗ್ರಸಾಲೆ agra-sâlĕ. The cooking hall of a temple (Mg.). ಅಗ್ರಸಾಲೇ ಊಟ, ಚನ್ದ್ರಸಾಲೇ ನಿದ್ರೆ (Prv.).

ಅಗ್ರಹಾರ agra-hâra. Villages or land assigned to Brahmins for their maintenance (Bp. 2, 46; 56, 2; 57, 31. 57; B. 2, 52). ಅಗ್ರಹಾರಕ್ಕೆ ಹೋದರೂ ದುರಾಗ್ರಹ ಬಿಡಲಿಲ್ಲ (Prv.). See ಶ್ರೋತ್ರಿಯ-, ಸರ್ವಾಗ್ರಹಾರ.

ಅಗ್ರಹಾರಿಕ agra-hârika. A man belonging to an agrahâra. (My.).

ಅಗ್ರಾಮ್ಯ a-grâmya. Not rustic.

ಅಗ್ರಾಮ್ಯವಚನವೃತ್ತಿ agrâmya-vačana-vṛitti. One of the *guṇas* in poetical composition (Kâvy. III, 1, A, 12).

ಅಗ್ರಾಮ್ಯತೆ a-grâmyatĕ. The state of being not rustic or vulgar (Kâvy. III, 1).

ಅಗ್ರಾಹ್ಯ a-grâhya. Not proper to be received or accepted; inadmissible. (My.). 2, impossible to be perceived (My.).

ಅಗ್ರಿಮ agrima. *Foremost, prior.* 2, *principal, best.* 3, elder, eldest.

ಅಗ್ರಿಯ agriya. *Foremost, principal, best.* 2, *an elder brother.*

ಅಗ್ರೀಯ agrîya. *Principal, best.* 2, *pertaining to the point.* 3, an elder brother (ಹಿರೆಯ ಅಣ್ಣ G.).

ಅಗ್ರೇ agrê. In front; before; at the head; first.

ಅಗ್ರೇದಿಧಿಷು agrê-didhishu. *A man belonging to one of the first three classes, who at his first marriage takes a wife that was married before.* 2, a married woman whose elder sister is still unmarried.

ಅಗ್ರೇಶ್ವರ agra-îśvara. A, or the, supreme lord (Bp. 1, 61).

ಅಗ್ರೇಸರ agrê-sara. *Going in front, preceding.* 2, a leader. 3, *best, excellent.*

ಅಗ್ರೋದಕ agra-udaka. Water only to be used for the worship of an idol (My.; J. 9, 27).

ಅಗ್ರ್ಯ agrya. *Foremost, prior.* 2, *principal, best, excellent.* 3, intent, closely attentive.

ಅಘ agha. *Sin, crime* (ದುರಿತ, ಪಾಪ Nn. 115; ದುರಿತ Mr. 515). 2, *pain, suffering* (ದುಃಖ 115; 515). 3, *passion* (ವ್ಯಸನ, ಸಪ್ತವ್ಯಸನ 115; ವ್ಯಸನಕಾರ್ಯ 515). 4, transmigration (ಭವಾನ್ತರ, ಭವಭವಾನ್ತರ 115; ಭವಮಾಲೆ 515). — ಅಘಪಡು. -ಪಡು. To suffer pain (Abh. P. 13, 148).

ಅಘಟನ a-ghaṭana. Not happening; difficult to be accomplished, difficult; impossible; — what is not happening, etc. (My., also ಅಘಟನೆ, -ನಾ).

ಅಘಟಿತ a-ghaṭita. Not happened; not effected; difficult to be obtained (J. 9, 5); improbable, unlikely; impossible (J. 20 sum.; My.; Mhr.). 2, any wonder or marvel (Mhr.).

ಅಘನ a-ghana. Not dense or solid, *liquid.*

ಅಘಮರ್ಷಣ agha-marshaṇa. Expiatory. 2, *a daily expiatory prayer,* reciting mentally a particular passage from the vêdas, while a little water, in the palm of the right hand, is held to the nose. 3, N. of the author of that prayer, the son of Madhuččhandas.

ಅಘರಿಪು agha-ripu. Kṛishṇa (J. 32, 55).

ಅಘಾಟ (a-ghâṭa). A wonder, a marvel; excess, abundance (Bh. 3, 8, 17; Mhr. ಅಘಟಿತ).

ಅಘಾತಿ a-ghâti. That which is not fatal, not injurious, or harmless (Abh. P. 2, 56).

ಅಘಾರಿ agha-ari. An enemy of sin (Bp. 23, 41).

ಅಘೋರ a-ghôra. Not terrific. 2, a *euphemistic* title of Šiva, who really is ghôra, *the terrible.* 3, terrible, formidable (My.; Mhr.). 4, a form of Šiva (Bp. 58, 18).

ಅಘ್ನ್ಯೆ a-ghnyĕ. Improper to be killed (fem.). 2, *a cow.*

ಅಂ, ಅಣ್. aṅ. = ಅಡಿ2 (Šmd. 198). The foot; bottom, sole. (T. & M. ಅಗಂ; Tĕ. ಅರ, ಅರಿ; Tu. ಅಂ). — ಅಂಗಾಲ್. -ಕಾಲ್. The sole of the foot (Šmd. 199; ಚರಣತಲ Mr. 332). ಒನ್ದು ದಸಿ ಅಂಗಾಲ ನೆಟ್ಟೊಡೆ (Bp. 43, 84). — ಅಂಗಾಲು. -ಕಾಲು. = ಅಂಗಾಲ್. ನಿನ್ನ ಅಂಗಾಲು ದಸಿ ನಟ್ಟು, ನಿನಗೆ ನಡೆಯಲು ಬಹುದೇ? (Bp. 44, 8; C.). ಅಂಗಾಲಿಗೆ ತ್ರಾಣವಿದ್ದರೆ ಬಂಗಾಳಕ್ಕೆ ಹೋಗ ಬಹುದು (Prv.). — ಅಂಗಾಲುಗೆರೆ. A line or wrinkle on the sole of the foot (ರೇಖೆ Mr. 332). — ಅಂಗೆಯ್. -ಕೆಯ್. The palm of the hand (Šmd. 199; ಪಾಣಿತಲ Mr. 322; C.). ಅಂಗೆಯ್ಯಲಿ ಅಡಗುವುದೆ? (Bp. 54, 11; see also 32, 32). ಅಂಗೆಯ್ಯ ಕೆಸಱಿಂ ತೋಱುತಂ (10, 8). ಕುಂಚಿತಾಂಗುಲಿಗಳನ್ ಉಳ್ಳ ಅಂಗೆಯ್ (ಪ್ರಸೃತಿ Nr.). ನಿಗುರಿದ ಬೆರಳುಗಳುಳ್ಳ ಅಂಗೆಯ್ (ಚಪೇಟ Nr.). ಚಾಚಲ್ ಪಟ್ಟ ಬೆರಳುಗಳುಳ್ಳ ಅಂಗೆಯ್ (ಚಪೇಟ Si. 212). ನನ್ನ ಅಂಗೆಯ್ ಜುಮ್ ಅನ್ನುತ್ತದೆ (B. 1, 22). ಅಂಗೆಯ್ಹುಣ್ಣಿಗೆ ಕನ್ನಡಿ ಯಾಕೆ? — ಅಂಗೆಯ್ ತೋಱಿಸಿ ಅವಲಕ್ಷಣ ಅನ್ನಿಸಿ ಕೊಣ್ಡ ಹಾಗೆ. — ಆಕಾಶ ಹಱಿದು ಬೀೞುವಾಗ್ಯೆ ಅಂಗೆಯ್ ಒಡ್ಡಿದರೆ ನಿನ್ತೀತೇ? (Prvs.). — ಅಂಗೆಯ್ಗೆರೆ. A line or wrinkle on the palm of the hand (C.). — ಅಂಗೆಯ್ಬೆರಲ್. -ಬೆರಲ್. A finger of the hand (not a toe). ಅಂಗೆಯ್ಬೆರಲ್ ಕಾಲ್ ಕಡಿವೆತ್ತನ್ತೆ ಆಗೆ ತಳ್ತ ಅಯ್ಕಿಲ್ (Rśv. 9, 22). — ಅಂಗೈ. -ಕೈ. = ಅಂಗೆಯ್.

ಅಂಕ aṅka. = ಅಂಕೆ. One of the Tatsamas (Šmd. 384; Čt. II, 48; Kk. 95; Šm. 76). A hook. 2, a curve or bend. 3, *the curve in the human figure above the hip,* where infants are carried (hence often equivalent to *the lap*). 4, the thigh (ತೊಡೆ Nn. 131; Si. 404; G., Mhr.). 5, the side or flank. 6, the body (ಶರೀರ Čb.). 7, any hook or crooked instrument. 8, a line, a stroke. 9, a numerical figure, cipher (ಸಂಖೆ Mr. 527; Čh. v. 343). 10, *a mark, a sign;* a mark branded on an animal, etc. (ಕುಱುಪು Čt. I, 48; ದೋಷ, ಕುಱುಹು Nn. 15; ಸಾಧನ, ಕುಱುಹು Nn. 114). 11, anything bright or coloured (ಚಿತ್ರ Nn. 131; Mr. 522). 12, a ray (ರುಕ್, ಕಿರಣ 131). 13, ornament, decoration (ಅಲಂಕಾರ, ಶೃಂಗಾರ 131; ಅಲಂಕಾರ 522). 14, a spot, fault, offence (ಕಲಂಕ 131; 522). 15, a heavy burden (ಅತುಲ ಧುರ 522); affliction, distress (ಸನ್ತಾಪ Mr. 527). 16, the sounds of bells and of small and large drums (ಮುರಜೆ -ಘಣ್ಟೆ-ಡವುಡೆ-ನುಡಿಗಳ್ 527). 17, fight, war (ಸಂಗ್ರಾಮ, ಕಾಳೆಗ 131; see Bp. 10, 51; 34, 24; J. 14, 1; 18, 6; 22, 28). 18, proximity, vicinity. 19, place, ground (T., M. ಅಗ). — ಅಂಕಡೊಂಕು. dupl. Excessive crookedness (Tu., My.). ಅಂಕಡೊಂಕ ಸಂಕಪಾಲ ಮೂಱು ತಲೆಗೆ ಹತ್ತು ಕಾಲು (Tu., My. riddle). — ಅಂಕದೇವಯ್ಯ N. (Bp. 58, 8). — ಅಂಕದೌಷಧ. The drug of war, gunpowder (? ಬಳಮರ್ದು Šmd. II; Šm. 39; ಬಳಮರ್ದು Kk. 84).

ಅಂಕಕಾಱ aṅka-kâṟa. An influential or a chief servant; a leading hero (Bp. 9, 32. 39; 16, 18; 23, 25; 52, 38; Tĕ. ಅಂಕಕಾಡು = ಮೊನೆಕಾಡು, a leader).

ಅಂಕಕಾರ್ತಿ aṅka-kârti. A female aṅkakâṟa (Bp. 12, 6. 40).

ಅಂಕಗಣಿತ aṅka-gaṇita. Arithmetic (B. 5, 216; Mhr.; My.).

ಅಂಕಣ aṅkaṇa. The (small or large) space either between any two posts or pillars in a wall that support the roof, or between any two beams (C.; T.; Tu.). 2, = ಅಂಗಣ (Čt. II, 57). 3, place (ಸ್ಥಳ, ತಾವು G.). ಆ ಪತ್ರವು ಒನ್ದು ಅಂಕಣದಷ್ಟು ಇರುತ್ತದೆ (B. 4, 103). ಅಂಕಣದ ಮನೆ ಆದರೆ ಕೊಂಕಣಿಗನಿಗೆ ಆಗದೆ? (Prv.). ಅಂಕಣದಾಯ. -ಆಯ. The measure of an aṅkaṇa (My.). 2, -ದಾಯ, a line of aṅkaṇas (My.).

ಅಂಕತ್ರಿಣೇತ್ರ aṅka-triṇêtra. An allowed arisamâsa (Šmd. 207): the well-known Šiva (?).

ಅಂಕದುವರ aṅka-duvara. A spacious door (Bp. 16, 9).

ಅಂಕನ aṅkana. Marking, stamping, branding, ciphering. 2, = ಅಂಗಣ, which is its Tbh. (Šmd. 364, one MS. ಅಂಗನ).

ಅಂಕಪಾಲಿ aṅka-pâli. Embracing, an embrace. (R.).

ಅಂಕಪಾಲಿಕೆ aṅka-pâlikĕ. = ಅಂಕಪಾಲಿ. (R.).

ಅಂಕಲಿ aṅkali. = ಅಂಕೋಲೆ, etc. (My.). — ಅಂಕಲಿಗಿಡ. = ಅಂಕೋಲೆಯ ಮರ. (Z.; My.).

ಅಂಕಮಾಲೆ aṅka-mâlĕ. A list of titles. ಅಂಕಮಾಲೆಯನ್ ಓದುವವನ್ ಉದ್ಘಟನು (Bp. 9, 44).

ಅಂಕಮಣಿ aṅka-maṇi. A decorated stool or seat (Abh. P. 4, 120). ಮರದೊಳ್ ಸಮೆದ ಅಂಕಮಣಿಯನ್ ಏಱಿದಂ (Šmd. 288).

ಅಂಕಪಱೆ aṅka-paṟĕ. (Šmd. 386; Kk. 97). A war-drum.

ಅಂಕಮಾತು aṅka-mâtu. (Šmd. 386; Kk. 97). A beautiful word, etc.; a cipher-word.

ಅಂಕವೀರ aṅka-vîra. A battle-hero, a valiant man. (Kk. 11 *a*).

ಅಂಕಿತ aṅkita. Marked (ಗುರ್ತಾದ G.); numbered;—a mark or sign; a signature (My.). 2, a word (ಶಬ್ದ Nn. 9. 22. 36. 61). 3, a dedication (of a work, My.; Tē.). 4, in one's own power or subjection (ಸ್ವಾಧೀನ Čb.). See ಲೋಚನಾಂಕಿತ; J. 18, 6.

ಅಂಕಿತನಾಮ aṅkita-nâma. A proper name (Šmd. 93. 94. 95).

ಅಂಕಿಸು aṅkisu. To mark (v. t.), to regard, to look at, to pay attention to. ನನ್ನಿಕೇತನನ್ ಅಂಕಿಸುತೆ ಕೀರ್ತಿಸಿದರ್ ಅಟ್ಟಿ ಯೊಳು (Bp. 2, 26; see also Bp. 4, 8. 14. 36; 12, 57; 15, 14; 21, 41; 26, 6; 30, 29; 32, 27; 38, 39; 53, 29).

ಅಂಕುರ aṅkura. *A sprout, a shoot* (ಅಗೆ, ಮೊಳೆ Kk. 23). 2, hair (ಮೈಮ್ಮೇಲಿನ ಕೂದಲು Čb.). 3, blood (ರಕ್ತ Čb.). 4, water (ನೀರು Čb.). 5, a point (ತುದಿ Čb.). 6, a tumour.

ಅಂಕುರಿತ aṅkurita. Sprouted, broken forth, arisen. See Bp. 2, 57; 35, 31; 36, 49; 39, 51; 53, 55.

ಅಂಕುರಿಸು aṅkurisu. To sprout; to rise, to arise; to occur, to happen (Šmd. 270; Bp. 1, 11; 25, 2; 32, 11; 44, 26; 49, 24; 50, 78; 51, 7; 56, 12; J. 1, 3; 5, 58; 11, 14; 12, 6).

ಅಂಕುಶ aṅkuša. = ಅಂಕುಸ, ಅಂಗುಸ. *A hook*, especially *an elephant-driver's hook.*

ಅಂಕುಶಚಾರಣ aṅkuša-čâraṇa. = ಅಂಕುಸಸಾರಣೆ. Guiding or driving (an elephant) with a hook (ಯಾತ Hlâ.).

ಅಂಕುಸ aṅkusa. Tbh. of ಅಂಕುಶ (Šmd. 335. 357. 372).

ಅಂಕುಸಸಾರಣೆ aṅkusa-sâraṇĕ. Tbh. of ಅಂಕುಶಚಾರಣ (Šmd. 376).

ಅಂಕೂರ aṅkûra. = ಅಂಕುರ. *A sprout, a shoot* (ಮೊಳೆ Mr. 106).

ಅಂಕೆ aṅkĕ. 1. (fr. ಆಜ್ಞೆ? or ಅದಕು?). An order, a command (ಆಜ್ಞೆ Šm. 80; ಅಪ್ಪಣೆ G.; Tē. ಆಕೆ; J. 8, 13); authority, control; restraint, check (C.; ಅಧಿಕಾರ Čb.). ಅವನು ಅಂಕುಶದಿನ್ದ ಆನೆಯನ್ನು ತನ್ನ ಅಂಕೆಯೊಳಗೆ ಇಟ್ಟು ಕೊಳ್ಳುತ್ತಾನೆ (B. 4, 24). (ಅನಿಲಜಂ) ಇನ್ದ್ರಜಿತುವಿನ ಬ್ರಹ್ಮಾಸ್ತ್ರದ ಅಂಕೆಯೊಳ್ ನಿನ್ದು, ಬಾಲಧಿಗೆ ಇಕ್ಕಿದ ಉರಿಯನ್ದ ಲಂಕೆಯಂ ಸುಟ್ಟು (J. 18, 6). ಅರಸನ ಅಂಕೆ ಇಲ್ಲ, ದೈವದ ಕಾಟವಿಲ್ಲ.—ಅಂಕೆಯಿಲ್ಲದ ಕಪಿ ಲಂಕೆ ಸುಟ್ಟಿತು (Prvs.).

ಅಂಕೆ aṅkĕ. 2. (= ಆನಿಕೆ). Leaning against, reclining on; a staff given for support's sake (ಆನಿಕೆ, ಆಧಾರಕ್ಕೆ ಕೊಟ್ಟ ಕೋಲು G.; *cf.* ಅಡೆ 8). **2,** a lever (R.; ಸೊನ್ನೆಯ ಕೋಲು G.). **3,** trust, faith (ಅಡರ್ಪು, ನೆಮ್ಮುಗೆ Šm. 66. 80; Kk. 74; ವಿಶ್ವಾಸ Čb.; = an ಅಡಕೆ of ಅಡರ್? but *cf.* ಅಡೆ 6).

ಅಂಕೆ aṅkĕ. Tbh. of ಅಂಕ. A numerical figure; an account (ಸಂಖೆ, ಲೆಕ್ಕ Mr. 349). ಅಂಕೆ ತಿಳಿಯದವ ಮುಂಕಗಿನ್ತ ಕಡೆ (Prv.).

ಅಂಕೆಗ aṅkĕga. One who is marked. See ಮಿಗದ ಅಂಕೆಗ.

ಅಂಕೋಠ aṅkôṭha. = ಅಂಕಲಿ, ಅಂಕೋಲ, ಅಂಕೋಲು, ಅಂಕೋಲೆ. *The plant Alangium hexapetalum.*

ಅಂಕೋಣಿ aṅkôṇi. = ಅಂಗವಡಿ. (My.).

ಅಂಕೋಲ aṅkôla. = ಅಂಕೋಠ. (My.). See ಅಂಕೋಲೆ.

ಅಂಕೋಲು aṅkôlu. = ಅಂಕೋಲ. (My.).

ಅಂಕೋಲೆ aṅkôlĕ. = ಅಂಕೋಲ, etc. See ಮುಳ್ಳಂಕೋಲೆ.—ಅಂಕೋಲೆಗಿಡ. = ಅಂಕೋಲೆಯ ಮರ. (Si. 127).—ಅಂಕೋಲೆಯ ಮರ. = ಅಂಕೋಠ. (ಅಂಕೋಲ, ನಿಕೋಚಕ Nr.). A shrub or small tree, Alangium lamarckii, Thwaites. (St. & Pl.).

ಅಂಕ್ಯ aṅkya. Fit to be marked or counted. 2, *a small oblong drum.*

ಅಂಗ aṅga. Way, manner, mode. ಎಲ್ಲಂಗಂ, in every way (Šmd. 183. 208). ಇವನ್ ಎನ್ನ ಮಗನ್ ಒನ್ದು ಅಂಗದಿಂ (Bp. 3, 28). ಆವ ಅಂಗದಿಂ? (9, 10; 24, 64). ನದಿಗಳ್ ಅರಳೆಯ ಹಾಸು, ನವವಿಷಮ್ ಉದರದೀಪನಚೂರ್ಣಮ್ ಆವ ಅಂಗದಲಿ ಸಾವತ್ತನ್ದಲಿ ಸದರವ ಕಾಣೆ (Bh. 1, 8, 6). ರಾಜ್ಯವ ಕೊಡುವುದು ಆವ ಅಂಗದಲಿ? (1, 8, 23). See ಪಲವಂಗ, ಹಲವಂಗ; and *cf.* ಅನ್ದ.

ಅಂಗ aṅga. 1. *A limb, a member.* 2, *a division* or *part of a whole.* 3, a supplementary science, especially the six vêdâṅgas (q. v.). 4, a verse-line (Čh.). 5, the base of a word. 6, *the body.* 7, the whole of the subordinate characters in a play. 8, the mind (ಮನಸು G.). 9, an expedient, a means of success. 10, N. of Bengal proper; the king of Aṅga (Rśv. 5, 21). 11, having members or divisions; contiguous, adjacent, near.—ಅಂಗದಟ್ಟಿ. A petticoat, a slip worn under a muslin gown (Tē.; R.).—ಅಂಗದಟ್ಟು. Tying the dôtra in a peculiar way to the body, as liṅgavanta viraktas do (S. Mhr.).—ಅಂಗಮುಡಿಗೆ. -ತುಡಿಗೆ. Cloths or ornaments for the body (R.).—ಅಂಗಮಿಲ್ಲದ. -ಇಲ್ಲದ. Kâma (J. 11, 16).—ಅಂಗರಕ್ಕ. A body-guard man (Abh. P. 13, 78).—ಅಂಗರಕ್ಕೆ. A body-guard (Abh. P. 14, 37).—ಅಂಗವಟ್ಟ. -ಬಟ್ಟ. Roundness of limb; beauty (Râm. 28, 7).

ಅಂಗ aṅga. 2. *A vocative particle:* well; indeed, true; please; rather; quick.

ಅಂಗಗುಣಾತ್ಮಕ aṅga-guṇa-âtmaka. Having the qualities of the body (Bp. 51, 30).

ಅಂಗಂಗಡಿ aṅgaṅgaḍi. See s. ಅಂಗಡಿ.

ಅಂಗಂಗಲ aṅgaṅgala. See s. ಅಂಗಲ.

ಅಂಗಚಿತ್ತ aṅga-čitta. The object in view, the heart's wish (Bh. 3, 13, 19).

ಅಂಗಚೇಷ್ಟೆ aṅga-čêshṭĕ. Gestures of the body, grimaces. ಮುಂಗಚೇಷ್ಟೆ ಬಿಟ್ಟರೂ ಅಂಗಚೇಷ್ಟೆ ಬಿಡಲಿಲ್ಲ (Prv.).

ಅಂಗಜ aṅga-ja. Produced from or on the body. 2, the hair of the head (ರೋಮ, ಕೂದಲು Nn. 53). 3, a son (ಆತ್ಮಜ, ಮಗ 53). 4, love; passion (ಪ್ರೀತಿ Čb.). 5, *the god of love, Kâma* (ಕಾಮ, ಮದನ 53). 6, disease (ರೋಗ Čb.). 7, blood (ರುಧಿರ, ರಕ್ತ 53). 8, the five organs of sense (ಪಂಚೇನ್ದ್ರಿಯ 53). 9, water (ವಾರಿ, ಉದಕ 53).

ಅಂಗಜಜನಕ aṅgaja-janaka. The father of Kâma, Vishṇu (My.).

ಅಂಗಜನ್ಮ aṅga-janma. = ಅಂಗಜ. Kâma.

ಅಂಗಜನ್ಮಾನ್ತಕ aṅgajanma-antaka. The destroyer of Kâma, Šiva. 2, sign for a long letter (Čh.).

ಅಂಗಜವೈರಿ aṅgaja-vairi. The foe of Kâma, Šiva (ಪರಮೇಶ್ವರ, ಈಶ್ವರ Nn. 143).

ಅಂಗಜಾತ aṅga-jâta. = ಅಂಗಜ. Kâma (Bp. 4, 17; 28, 59).

ಅಂಗಜಾನ್ತಕ aṅgaja-antaka. = ಅಂಗಜನ್ಮಾಂತಕ. (Bp. 36, 61; 56, 4).

ಅಂಗಜಾರಿ aṅgaja-ari. = ಅಂಗಜವೈರಿ. (My.).

ಅಂಗಡಿ aṅgaḍi. A shop, a stall (C.; ಆಪಣ, ಹಟ್ಟ Nr.; Si. 106; ಪಣ್ಯವಿಕ್ರಯಶಾಲೆ, ಆಪಣ, ವಿಪಣಿ Hlâ.; ಪಣ್ಯ, ವಿಪಣಿ Mr. 195; J. 6, 13; T. ಅಂಗಾಡಿ; M. ಅಙ್ಙಾಡಿ; Tu., Tē. ಅಂ

ಗಡಿ). ಮಾಱಲ್ ಬೇಡಿ ಅಂಗಡಿಯಲ್ಲಿ ಪಸರಿಸಿದ ದ್ರವ್ಯವು (ಕ್ರಯ್ಯ Nr.). ಜಲಚರನಿಚಯಮನ್ ಒಯ್ದು, ಅಂಗಡಿಯೊಳಗೆ ಮಾಱಿ (Bp. 27, 21). ಅಂಗಡಿಯೊಳಗೆ ವಿಕ್ರಯಿಸಿ (30, 4). ಅಂಗಡಿಯೊಳ್ ಆಡುವ ನುಡಿಗಳ್ (54, 78; see also 32, 52; 42, 5). ಕಡ್ಡಾಯದ ಅಂಗಡಿಯಲಿ ಇದ್ದು ಫಲವೇನು? (Dp. 148, 3). ದೇವರಿಲ್ಲದ ಗುಡಿಯು ಹಾೞಿ ಬಿದ್ದ ಅಂಗಡಿಯು (54, 1). ಅಂಗಡಿ ಮಾಱಿ ಗೊಂಗಡಿ ಹೊದ್ದ ಹಾಗೆ. — ಅಂಗಡಿಯಲ್ಲಿ ಜುಂಗಡಿ ಸಿಕ್ಕದೆ? (Prvs.). — ಅಂಗಂಗಡಿ. rep. = ಅಂಗಡಿ ಅಂಗಡಿ. (C.). — ಅಂಗಡಿಕೇರಿ. = ಅಂಗಡಿ ಬೀದಿ. (ವಿಪಣಿ Si. 420). ಅಂಗಡಿಚೀಟಿ. A note to a shop-keeper (S. Mr.). — ಅಂಗಡಿಬೀದಿ. A market-street, a market (ವಿಪಣಿ Nr.; ನಿಗಮ Si. 442; ಹಟ್ಟ 490). — ಅಂಗಡಿಮನೆ. A house with a shop (Bp. 52, 11). — ಅಂಗಡಿಮುಳಿಗೆ. A prolongation of the front roof of a shop, a sort of verandah in front of a shop (C.). — ಅಂಗಡಿಮೂಲಿಕೆ. A shop drug (C.). — ಅಂಗಡಿಯವ. -ಅವ. A shopkeeper (C.). — ಅಂಗಡಿವ್ಯಾಪಾರ. Shop-trade: ಅಂಗಡಿವ್ಯಾಪಾರ ಒಸರುನೀರಿನ ಹಾಗೆ (Prv.). — ಅಂಗಡಿಸರಕು. The goods of a shop (C.). — ಅಂಗಡಿಸಾಲ. A shop-debt (C.). — ಅಂಗಡಿ ಹಚ್ಚು. To open a shop (My.). ಅಂಗಡೀ ಹಚ್ಚಿ ಇರುತ್ತಾರೆ (B. 3, 77). — ಅಂಗಡಿ ಹಾಕು. = ಅಂಗಡಿ ಹಚ್ಚು. (My.). ಅವನು ಕಾಗದ ಮಸಿ ಮುನ್ತಾದ ಒಡಿವೆಗಳ ಅಂಗಡಿಯನ್ನು ಹಾಕಿ (B. 5, 218). ಅಂಗಡೀ ಹಾಕುವದು (5, 273). 2, to shut a shop (C.). — ಅಂಗಡಿ ಹೂಡು. = ಅಂಗಡಿ ಹಾಕು. (My.).

ಅಂಗಡಿಕಾಱ aṅgaḍi-kāṟa. A shopkeeper (C.; B. 4, 178; 5, 282).

ಅಂಗಡಿಗಾಱ aṅgaḍi-gāṟa. = ಅಂಗಡಿಕಾಱ. (C.).

ಅಂಗಣ aṅgaṇa. = ಅಂಕಣ, ಅಂಗನ, ಅಂಗಳ. A Tbh. of ಅಂಕನ or ಅಂಗನ (Šmd. 364), and also one of the Tatsamas (Šmd. 384; Šm. 77; Kk. 95). A court, a yard, especially one in front of a house; an open space, an area (ಚತ್ವರ, ಅಜಿರ Nr.; ಅಜಿರ, ಪ್ರಾಂಗಣ, etc. Hlâ.; ಪ್ರಾಂಗಣ, ಅಂಗಳ Nn. 117; ಅಂಗಳ, ಮನೆಯ ಮುನ್ದಿನ ಸ್ಥಲ G.; see ಠೋದೋಂಗಣ) ಅಂಗಣದ ನಿಧಿ, ಅವರೆಯ ಜೇನ್, ಅಂಗಳದ ಸುಧೆ ಎನಲ್ ಎಸವ ಶಿವಸಂಗನಿಷ್ಠಾಭಕ್ತಿಪಥಂ (Bp. 60, 44). — ಅಂಗಣವಲಯ. (Šmd. 386; Kk. 97). The boundary or circumference of a yard. — ಅಂಗಣವಾವಿ. -ಬಾವಿ. (Šmd. 364. 386; Kk. 97). A well in a yard. — ಅಂಗಣವೆಟ್ಟು. -ಬೆಟ್ಟು (? Šmd. 386, o. r. -ವೆಟ್ಟ; Kk. 97).

ಅಂಗತ aṅgata. (fr. ಅಡಿ 2?) = ಅಂಗತಕ್ಕಲು, ಅಂಗತ್ತ, ಅಂಗಾತ q. v. (My.).

ಅಂಗತಕ್ಕಲು aṅgatakkalu. = ಅಂಗತ. (My.; also -ಲಿ).

ಅಂಗತ್ತ aṅgatta. = ಅಂಗತ. (My.).

ಅಂಗದ aṅgada. *A bracelet worn on the upper arm.* 2, N. of an ape, son of Bâli.

ಅಂಗನ aṅgana. = ಅಂಗಣ, ಅಂಗಳ. Going, walking. 2, *a court, a yard, an area.*

ಅಂಗನಾಜೀವಿ aṅganâ-jîvi. One who gets a livelihood by his wife. 2, a dancer, an actor (ಜಾಯಾಜೀವ Mr. 378).

ಅಂಗನಾರಜಸ್ aṅganâ-rajas. *The menstrual flux.*

ಅಂಗನೆ aṅganĕ. ಅಂಗನಾ. *A woman with a beautiful body.* 2, *a woman, a female.* 3, *the female elephant of the north.*

ಅಂಗನ್ಯಾಸ aṅga-nyâsa. Ceremony of touching certain parts of the body. (My.).

ಅಂಗಪ್ರದಕ್ಷಿಣ aṅga-pradakshiṇa. Rolling the body to the right for a considerable distance or round a temple. (R.).

ಅಂಗಭವ aṅga-bhava. = ಅಂಗಜ. Kâma.

ಅಂಗಭವಾಂಗನಾಶ aṅgabhava-aṅga-nâša. The destroyer of Kâma's body, Šiva (Bp. 18, 94).

ಅಂಗಭೇದ aṅga-bhêda. A certain limb of the body; any of its limbs (My.).

ಅಂಗಮಣಿ aṅgamaṇi. A present given in a girl's marriage, or in her first pregnancy after her marriage (T.; R.).

ಅಂಗಮರ್ದ aṅga-marda. *A man who has to shampoo the body of others.*

ಅಂಗಮರ್ದಿ aṅga-mardi. *A man who has to shampoo the body of others.*

ಅಂಗಯ್ಸು aṅgaysu. = ಅಂಗವಿಸು. (J. 20. 29).

ಅಂಗರ aṅgara. Tbh. of ಅಂಗಾರ. (ಅಂಗಾರ Šm. 11; ಇಂಗಳ 113; ಅಂಗಾರ, ಬೂದಿ G.). — ಅಂಗರಗಡ್ಡೆ. = ಅಂಗಾರ-. (ಅಮುಕಿರೆ St. & Pl.). — ಅಂಗರವೋಳಿಗೆ. -ಹೋಳಿಗೆ. Tbh. of ಅಂಗಾರಸ್ಫೋಟಕ (Čt. II, 57).

ಅಂಗರಕ್ಷ aṅga-raksha. A body-protector. 2, protection or preservation of the body. 3, a coat of mail (ಕವಚ, ಜಗರ, ಜೋಡು, etc. Mr. 292).

ಅಂಗರಕ್ಷಕ aṅga-rakshaka. A body-guard (Bp. 59, 28).

ಅಂಗರಕ್ಷಣೆ aṅga-rakshaṇĕ. Protection or preservation of the body (My.).

ಅಂಗರಕ್ಷೆ aṅga-rakshĕ. Protection or preservation of the body (My.). 2, a body-guard (My.; ಮೆಯ್ಗಾವಲಿ, ಕಾವಲ G.). 3, an amulet or charm (My.). 4, a coat of mail (R.). ಅಂಗರಕ್ಷೆ ಇಲ್ಲದ ಮೇಲೆ ಬಂಗಾರ ಯಾಕೆ? (Prv.).

ಅಂಗರಣೆ aṅgaraṇĕ. = ಅಗರಣೆ, etc. (My.).

ಅಂಗರಾಗ aṅga-râga. *Different unguents used for perfuming the body.* 2, perfuming the body after bathing (ವಿಲೇಪನ, ಉದ್ವರ್ತ, ಶೀವಿ ಪೂಸುವುದು Mr. 339).

ಅಂಗರಾಜ aṅga-râja. Karṇa, the king of Aṅga. (My.).

ಅಂಗರುಹ aṅga-ruha. What grows on the body, as hair, wool, etc. (R.).

ಅಂಗರೇಖು aṅgarêkhu. A long coat (My.; H.).

ಅಂಗಲ್ aṅgal. = (ಅಂಟಿಲ್, ಅಂಯಲ್, *i. e.*) ಅೞಲ್ 1. — ಅಂಗಲಾಚಿಕೆ. -ಆಚಿಕೆ. Crying from grief (My.). — ಅಂಗಲಾಚಿಸು. -ಆಚಿಸು. To cause to lament, etc. (My.). — ಅಂಗಲಾಚು. -ಆಚು. = ಅಂಗಲಾಚುರ್. To cry from grief; to grieve or sorrow (C.; T., M. ಅಂಗಲಾಯ್; Tĕ. ಅಂಗಲಾರ್ಚು). ಅಂಗಲಾಚುತ್ತ ಅೞಲುವುದು (Bp. 36, 14). — ಅಂಗಲಾಪು. -ಆಪು. Lamentation; grief (My.; Tĕ. ಅಂಗಲಾರ್ಪು; T. ಅಂಗಲಾಯ್ಪು). — ಅಂಗಲಾಚುರ್. -ಆಚುರ್. = ಅಂಗಲಾಚು. (My.).

ಅಂಗಲ aṅgala = ಅಗಲ, etc. The state of being separate or more or less apart; the thinness of corn in a field, etc. (C.). — ಅಂಗಂಗಲ. rep. = ಅಂಗಂಗಲು. (C.).

ಅಂಗಲು aṅgalu. = ಅಂಗಲ, etc. (C.). (ಶಹಾವ್ಯಗದ) ಗೋಣಿನ ಮೇಲೆ ಬಿಱುಸುಗೂಡದಲು ಅಂಗಲಾಗಿ ಬೆಳೆದು ಇರುತ್ತದೆ (B. 4, 191). ಅಂಗಲಾಗಿ ಬಿತ್ತಿದ್ದು ಅಗಲವಾಗಿ ಏಱುವದು (Prv.). — ಅಂಗಂಗಲು. rep. (C.).

ಅಂಗವಡಿ aṅga-paḍi (?). = ಅಂಕೋಣಿ. A stirrup (T. ಅಂಗಬಡಿ, ಅಂಗವಡಿ; R.).

ಅಂಗವಣೆ aṅgavaṇĕ. Ability from practice, habitude; — force, vigour; prowess or power (Mhr. ಅಂಗವಣ; see Bp. 12, 9; Bh. 7, 18, 14; Râm. 31, 32; J. 11, 16; 26, 21).

ಅಂಗವಸ್ತ್ರ aṅga-vastra. = ಅಂಗೋಸ್ತ್ರ. A small cloth for wiping off one's perspiration, cleaning the nose and drying the body after bathing; it is either worn loosely over the shoulder or put into the pocket (S. Mhr.). 2, an upper garment, a dôtra (My.; ಉತ್ತರೀಯ Čb.; see s. ಪೊದ್ದು 1). ಅಂಗವಸ್ತ್ರ ಇಲ್ಲದಿದ್ದರೆ ಅಂಗಾರಕ ಇಡ ಬಾರದೇ? (Prv.). ಅಂಗಮೂರ್ತಿಗೆ ಮಜ್ಜನಕ್ಕೆ ಎಱದು, ಅಂಗವಸ್ತ್ರದಿನ್ ಒತ್ತಿ (Bp. 43, 30).

ಅಂಗವಿಕಾರ aṅga-vikâra. Change of bodily appearance; collapse, bodily disease or disorder; fainting, apoplexy. (Bp. 59, 54).

ಅಂಗವಿಕ್ಷೇಪ aṅga-vikshêpa. *Gesticulation.* 2, a kind of dance (ಒನ್ದು ತರದ ಕುಣತ G.).

ಅಂಗವಿಸು aṅgavisu. = ಅಂಗಯ್ಸು. To come together, to join, to meet, to crowd (v. i.);— to lay hold of, to seize; to concern one's self in (Mhr. ಅಂಗಾವಿಣೇಂ, to embrace). ಇನಿತು ಇನಿತು ನೆನಪುಗಳಂಗವಿಪ ತಮುತಮ್ಮ ಪವಣಿನ ನುಡಿಗಡಣೆಯಿನ್ದ ವಿನುತಿಸುವಡೆ ಅದು ಕೊಱತೆ, ಅಲ್ಲಾ? (Bp. 7, 10). ಲಿಂಗವನ್ತನ ಬರವಿಗೆ ಅವರುಗಳ್ ಅಡ್ಡಗಟ್ಟಿ ಇರಲು, ತುಂಗವಿಕ್ರಮುನ್ ಅಯ್ಸಱಲಿ ವಸ್ತ್ರಂಗಳಂ ಪೊತ್ತು, ಅಯ್ತರುತ ನೆರದು ಅಂಗವಿಸಿ ಬಪ್ಪವರನ್ ಆ ಮುದದಾನೆಯಂ ಕಣ್ಡು (21, 39). ಮುನ್ನಿನ ಕರ್ಮಕೆ ಇನ್ನು ಆರ್ ಅಂಗವಿಸುವವರು? (45, 40). ಅದಕೆ ಅಂಗವಿಸಿ, ದಯಗೆಟ್ಟು (55, 15). ಹಿಂಗದೆ ಆ ಘುಕ್ತಾವಶೇಷವನ್ ಅಂಗವಿಸಿ, ಮೊಗಮೊಗದು (56, 12). See Č. Bp. 37, 49; V. 39, 23.

ಅಂಗವೈಕಲ್ಯ aṅga-vaikalya. A defective or imperfect state of any limb or organ. (My.; B. 4, 34).

ಅಂಗಸಂಸ್ಕಾರ aṅga-saṁskâra. *Embellishment of person, bathing, perfuming and adorning the body.*

ಅಂಗಸಂಗ aṅga-saṅga. Bodily contact, coition. (My.; J. 23, 59).

ಅಂಗಸ್ತಾನ aṅgastâna. = ಅಂಗುಸ್ತಾನಿ. (S. Mhr.).

ಅಂಗಹಾರ aṅga-hâra. *Gesticulation.* 2, a kind of dance (ಒನ್ದು ತರದ ಕುಣತ G.).

ಅಂಗಹೀನ aṅga-hîna. *Mutilated, maimed.* 2, incorporeal. 3, Kâma.

ಅಂಗಹೀನತ aṅga-hînata. A man who is mutilated. ಅಂಗಹೀನತನ್ ಆದೊಡಂ (Bp. 38, 54).

ಅಂಗಹೀನತೆ aṅga-hînatĕ. The state of being mutilated, etc. (My.).

ಅಂಗಳ aṅgaḷa. = ಅಂಗಳು, ಅಂಗುಳ, ಅಂಗುಳಿ, ಅಂಗುಳೆ, (ಅಟ್ಟಣ). The palate of the mouth (C.; Tĕ. ಅಂಗಿಲಿ; T. ಅಣ್ಣಿ, ಅಣ್ಣಾ; M. ಅಣ್ಣಾ; *cf.* ಅಣ್ 2). — ಅಂಗಳದ ಮುಳ್ಳು. = ಅಂಗುಳಿಯ ಮುಳ್. (My.).

ಅಂಗಳ aṅgaḷa. = ಅಂಗಣ, etc. (ಚತ್ವರ, o. r. ಚಪ್ಪರ, ಪ್ರಾಂಗಣ Nn. 143; ಚತ್ವರ, ಅಜಿರ, ಅಂಗಣ Si. 110; My.). ಹಟ್ಟಿಯ ಅಂಗಳ (ಚತ್ವರ, ಅಜಿರ, ಅಂಗಣ Si. 110). ತಲಬಾಗಿಲ ಮುನ್ದುಗಡೆ ಇರುವ ಅಂಗಳ (ಪ್ರಘಣ, ಪ್ರಘಾಣ 110). ಮನೆತಲಬಾಕಲುಮುನ್ದೆ ಇರುವ ಬಯ್ಲು, ಅಂಗಳ (ಮುಖ, ನಿಸ್ಸರಣ 113). ಪಟ್ಟಣದ ಸುತ್ತಲೂ ಪುರಜನಸಂಚಾರಾದಿಗಳಿಗೆ ಆಗಿ ಬಿಡಲ್ ಪಟ್ಟು ಇರುವ ಬಯ್ಲು, ಊರುಹೊಱಗಣ ಅಂಗಳ (ಸನ್ನಿವೇಶ, ನಿಕರ್ಷಣ 113). ಹಿತ್ತಲ ತೋಟ, ಅಂಗಳ ತೋಟ (ಗೃಹಾರಾಮ, etc. 118). ನಾಲ್ಕು ಕಡೆಯೂ ಅಭಿಮುಖವಾಗಿ ಕೆಯ್ಸಾಲೆ ಕಟ್ಟಿ ಮಧ್ಯದಲ್ಲಿ ಅಂಗಳವನ್ನು ಬಿಟ್ಟು ಕೊಣ್ಡು ಇರುವ ಮನೆ (ಸಂಜವನ, etc. 107). ಅಂಗಳದಲ್ಲಿ ಆಗಲಿ ಹಿತ್ತಲಲ್ಲಿ ಆಗಲಿ ಹೊಲಸು ಇರಗೊಡ ಬಾರದು (B. 4, 25). ಅಂಗಳದಲ್ಲಿ ಹೇತು, ಮಂಗಳ ಕಷ್ಟ ಅನ್ದಕ್ಕೆಹಾಗೆ (Prv.).

ಅಂಗಳು aṅgaḷu. -ಳ್. = ಅಂಗಳ. (My.). ನಾಲಿಗೆಯೂ ಅಂಗಳೂ ಆದಱ ಸವಿ ತಕ್ಕೊಳ್ಳುತ್ತವೆ (B. 4, 85). ನಾಲಿಗೆ ಅಂಗಳುಗಳಿನ್ದ ಸ್ವಾದ ತಿಳಿಯುತ್ತದೆ (4, 86).

ಅಂಗಾಂಗಿ aṅga-aṅgi. Limb and limb, jointly or reciprocally, in consequence of being related, as one limb to another or to the body (Kâvy. III, 3, B, 164 under saṁślêsha).

ಅಂಗಾತ aṅgâta. = ಅಂಗತ, etc. Flatways, on the back (C.; ಉತ್ತಾನ G.). ಅಂಗಾತ ಬೀಱು (C.).

ಅಂಗಾಧಿಪ aṅga-adhipa. Karṇa, the king of Aṅga (Šmd. 263).

ಅಂಗಾರ aṅgâra. = ಅಂಗರ. *Charcoal, either heated or not heated* (ಇಂಗಳ Čt. II, 56; ಅಂಗರ, ಕೆಣ್ಡ, ಇಂಗಳ Šm. 11; ಕೊಳ್ಳಿ, ಕೆಣ್ಡ G.). 2, the planet Mars (ಮಂಗಳ G.). 3, ashes (see G. s. ಅಂಗರ; Mhr.). See Prv. s. ವೈಷ್ಣವ. 4, one of the gandharvas (Bh. 1, 11 sum.). — ಅಂಗಾರಗಡ್ಡೆ. = ಅಂಗರಗಡ್ಡೆ. The plant Physalis flexuosa Lin. (St. & Pl.).

ಅಂಗಾರಕ aṅgâraka. = ಅಂಗಾರ No. 1. 2, *the plant Mars* (ಕುಜ, ಮಂಗಳ Nn. 4). 3, a sectarial mark made with charred wood or ashes. 4, the plant Eclipta prostrata (ಗರುಗ, ಭೃಂಗ Mr. 130). ಅಂಗವಸ್ತ್ರ ಇಲ್ಲದಿದ್ದರೆ ಅಂಗಾರಕ ಇಡ ಬಾರದೇ? (Prv.).

ಅಂಗಾರಕವಾರ aṅgâraka-vâra. Tuesday. (My.).

ಅಂಗಾರಧಾನಿಕೆ aṅgâra-dhânikĕ. *A portable fire-place.*

ಅಂಗಾರವಲ್ಲರಿ aṅgâra-vallari. *The plant Galedupa arborea* (= ಮರ್ಕಟ, ಷಡ್ಗ್ರನ್ಥ).

ಅಂಗಾರವಲ್ಲಿ aṅgâra-valli. *The plant Clerodendrum siphonanthus* R. Br. (Siphonanthus indica).

ಅಂಗಾರಶಕಟಿ aṅgâra-śakaṭi. *A portable fire-place* (ಬಾಣಲೆ Mr. 211).

ಅಂಗಾರಸ್ಫೋಟಕ aṅgâra-sphôṭaka. = ಅಂಗರವೋಳಿಗೆ. A cake (hôḷigĕ) baked on coals.

ಅಂಗಾಲ್. aṅgâl. -ಲು. See s. ಅಂ (ಅಜ್).

ಅಂಗಿ aṅgi. 1. Having limbs (Šmd. 136).

ಅಡಗಿಸು aḍagisu. = ಅಡಂಗಿಸು, ಅಣಗಿಸು. To cause to hide or be withdrawn from sight (C.). **2,** to conceal, to hide (C.). **3,** to subdue, as bad people (My.); to suppress. **4,** to appease, to alleviate, to soothe, etc., as sorrow, disease, etc. See Bp. 32, 4. 32; 36, 1; 40, 71; 57, 7. ಬಿಡದೆ ಶುಕಪಕ್ಷಿಯನು ಅಡಗಿಸಿಯೆ ಹಾಲೆಱೆದು ಒಡನೆ ಹೇೞಿದ ನುಡಿಯ ತಾ ನುಡಿವುದು (Dp. 148). ಗಾಳಿಯನ್ನಾದರೂ ಅಡಗಿಸ ಬಹುದು, ಗಯ್ಯಾಳೀ ಬಾಯ್ಯನ್ನು ಅಡಗಿಸ ಕೂಡದು (Prv.).

ಅಡಗಿಸುಹ aḍagisuha. The act of concealing or hiding. ಶರೀರವನ್ ಅಡಗಿಸುಹ (ಆಕಾರಗುಪ್ತಿ, ಅವಹಿತ್ಥ Nr.).

ಅಡಗು aḍagu. 1. = ಅಡಂಗು 1, ಅಡಿಗು, ಅಣಗು, ಅಣುಂಗು. To conceal one's self, to hide; to disappear or vanish; to cease (ಗೋಪ್ಯ Šm. 84; ಮಯ್ಗರೆ Šs.; C.; ಮಾಜು G.; T., Tĕ.; *cf.* ಅಡೆ 7). **2,** to decrease; to be quenched; to be appeased (My.). **3,** to be humbled (My.; Tĕ., T.). **4,** to crouch (My.). **5,** to be contained in (Bh. 1, 1, 12; My.; T.). **6,** to enter (My.). ಬಸವ ಶರಣ್ ಎನೆ ಭವಮ್ ಅಡಗುವದು (Bp. 1.

26). ಯುವತಿಯ ಅಸು ಅಡಗಿದೊಡೆ ಮುಸುಟೆಯ ಚವುಡರಾಯನು ಪ ಡೆಯನೇ? (46, 45). ದಧಿಯೊಳ್ ನೊರೆಗಳ್ ಒಗೆದು ದಧಿಯೊಳ್ ಅಡ ಗಿದನ್ತೆ (61, 66). ಅಡಗುವದು (ಅನ್ತರ್ಧಿ); ಓಡಿ ಅಡಗಿದವನು (ನಷ್ಟ, ತಿರೋಹಿತ Nr). ಕಾಮುಕ್ರೋಧಾದಿಗಳ್ ಅಡಗಿ ಸಮಾಧಾನವೃತ್ತಿ ಆಗಿ ಇರುವಿಕೆ (ಶಮ, ಶಾನ್ತಿ Si. 386). ತಿಮಿರಮ್ ಅಡಗಿದ ಲೋಕ, ಶಿಕ್ಷಾ ಕ್ರಮಣಮ್ ಅಡಗಿದ ದನ್ತಿ, ಕರ್ಮಬ್ರಮೆಗಳ್ ಅಡಗಿದ ಯೋಗಿ, ರುಜೆ ಅಡಗಿದ ನರೋತ್ತಮನು, ಹಿಮಮ್ ಅಡಗಿದ ಸರೋಜದ ಅನ್ತೆ ಇಹುದು ಅನುಲಮತಿ; ಕೇಳ್, ಪಗೆಗಳ್ ಅಡಗಿದಡೆ ಅಮರಪದಮ್ ಎನಿಸುವು ದು (Bh. 1, 8, 24). ಬೆಳಗಾಗೆ... ಹೊಕ್ಕರು ಹಱುವವನು, ಬೆಳಗಡಗೆ ನಡೆದರು ಹಲವು ಯೋಜನವ (1, 8, 93). ಪೊದಱೊಳ್ ಅಡಗು (J. 28, 45). ನದಿಗಳ್, ಉಬ್ಬರಮ್ ಅಡಗಿ, ತಿಳಿದು ಪರಿದವು (25, 3). ನಯನಾನ್ಧಮ್ ಅನ್ನು ಅಡಗಲು (26, 26). ಸಾರಂಗವು.. ಸೊಪ್ಪಿಯ ಮಱೆಗೆ ಅಡಗಿ ಕೊಣ್ಡಿತು (B. 4, 42). ಪೊಡವಿ ಅಱಿತು, ಅಖಿಲಜಲ ಮುಂ ಕುಡಿದುಂ, ತೃಷೆ ಅಡಗದೆ, ಆ ಮರೀಚೀಜಲಮಂ ತಡೆಯದೆ ಕುಡಿ ಯಲ್ (Rsv. 5, 33). (ನೀನ್) ಅವುದನ್ ಊಹಿಸಿದೊಡೆ ಆ ಸ್ಥಿತಿ ಯೊಳ್ ಅಡಗಿ ಇಹೆವು (Bh. 1, 8, 78). ಸುಗನ್ಧದ್ರವ್ಯಗಳಲ್ಲಿ ಅಡಗಿ ಕೊಣ್ಡು ಇರುವ ಪರಿಮಳಾದಿಗಳನ್ನು ಪ್ರಕಾಶಗೊಳಿಸುವ ತೈಲಾದ್ಯುತ್ತೇ ಜಕಸಾಮಗ್ರಿ (ಪ್ರಬೋಧನ, ಅನುಬೋಧ Si. 225). — ಅಡಗಡಗು. rep. (Bp. 32, 34).

ಅಡಗು aḍagu. 2. (= ಅಡು 4). Flesh, meat (ಬಿಕ್ಕು, ಬಾಡು Šm. 32; ಮಾಂಸ 84; ಬಿಕ್ಕು, ಜಾಂಗಲ Kk. 41; ಸಂಗರ, ಮಾಂಸ Nn. 19; ಮಾಂಸ Bhn. 52; *cf.* ಅಡಬಳ 2). ಸುಟ್ಟ ಅಡ ಗು ಭೂತಿ ಎಮ್ಬುದು, ತಾಳಿಸಿದ ಅಡಗು ಭರೂಟಕಮ್ ಎಮ್ಬುದು, ಅಟ್ಟ ಅಡಗು ಉಖ್ಯಮ್ ಎಮ್ಬುದು (Hlâ.). ಬಱುಗೆಣ್ಡದೊಳು ಸುಟ್ಟ ಅಡಗು (ಭೂತಿ Mr. 217); ಅಡಗನ್ ಓರನ್ತೆ ತಿಮ್ಬುವಂ (ಶಾಷ್ಕುಲ 231). ಈ ಸೊಪಚನ್ ಇನ್ದು ಅಡುವುದು ಅಡಗು, ಅಕಟ! (Bp. 57, 2). See ಸುಣ್ಣಿಗೆಯಡಗು. — ಅಡಗುದಿನ್. -ತಿನ್. To eat meat. ಅಡಗು ದಿಮ್ಬುವನು (ಶೌಷ್ಕುಲ Hlâ.).

ಅಡಗು aḍagu. 3. The state of being joined, becoming or fit; agreeableness, beauty (R.; Tĕ. ಅಂಗು, ಅನ್ದ; Tĕ. ಅಂಚೆ, near; T. ಅಣಂಗು, ಅಱಿಗು, ಅಳಿಗ, ಆಯಿಲ್, ಆವುಜು, ಅಮ್ಮೈ, neatness, beauty, elegance; ಅಂಜಿ ಲ್, union; ಅಜಲ್, ಅಣಿಜು, ಅಯಲ್, nearness; ಅಡ, communication, intercourse; see ಅಣ್ಡಿಸು; *cf.* ಅಕ್ಕು 2; ಅಜ್ಜು 1; ಅಟ್ಟು 1 & 2; ಅಡವು 1; ಅಣಿ 2; ಅನು 1; ಅನ್ದ; ಅಯ್ದು; ಅರಗು 1; ಅಲ್ 3; ಅಲಮ್ಬು; ಅವುಸು; ಅಳ 2).

ಅಡಗೆ aḍagĕ. = ಅಡಿಗೆ, etc. Cooking, etc. ಅಡಗೆ ಮಾ ಡುವವ (G. 9).

ಅಡಗೈ aḍagĕy. Wind in the womb or bowels (S. Mhr.).

ಅಡಂಗಾಯ್ತ aḍaṅgu2-âyta. A man belonging to a fort (ಕೊಟ್ಟವಳ, ಕುಟುಮ್ಬ Kk. 37; Šm. 45; ಕೊಟ್ಟಗಾಱ G.).

ಅಡಂಗಿಸು aḍaṅgisu. = ಅಡಗಿಸು. ಪ್ರಸಾದಿಯ ದಾಸಿದೇವಯ್ಯ .. ನಿನ್ನ ಬಲುದರ್ಪವನ್ ಅಡಂಗಿಸಿ (Bp. 32, 33).

ಅಡಂಗು aḍaṅgu. 1. (Šmd. 48). = ಅಡಗು 1, etc. (ಗೋಪನ Šmd. Dh.; ಉಳಿ Šmd. I; ಮೆಯ್ಗರೆ Kk. 43; ಮುಸುಳ್ 72, Šm. 44). ಕಚ್ಛಪೋಪಾಯದೆ ಅಡಂಗಿ ನಿಲ್! (Šmd. 272). ನಭದೊಳ್ ಒಗೆದು ತಟಲ್ಲತೆ, ಮೇಲೆ ನಭದೊಳು ಹೊಳೆದು ಅಡಂಗಿದ ಪೋಲ್ (Bp. 61, 66). ಜವದಿನ್ ಉಪಃಕಾಲವೃಷಂ ತವೆ ಕದಡಿದುದು ಎನಿಸಿ ಮರ್ಬುವೆಳಗಂ ತಳೆದು ಒಪ್ಪುವ ಬಾಂಗೆಱೆಯೊಳ್ ಮೀಂಗಳ್ ತವಕದೊ ಳೆ ಮುಱಿುಗುವನ್ತೆ ಅಡಂಗಿದುವು ಅಗಳ್ (Rsv. 12, 12). ಭೇರೀಧ್ವಾ ನದಿನ್ದಂ ಭಗಣಂ ಇನನುಮ್ ಅಡಂಗಿ ಇರ್ದ ಪೋಲ್ ತೋಱಿದುದು (13, 89). See ಒಳಡಂಗು. — ಅಡಂಗೆವೊಯ್. ಅಡಂಗೆ-ಪೊಯ್. To beat one so that he hides himself; to cause to become ashamed, to shame. ತಾಮುಸಗೆ ತಾಗಿದ ಸುರನ ಕಾಮುಕರಂ ಕರಮ್ ಅಡಂಗಿ ಸುರ್ಗುರ್ ಅಪ್ಪಿನೆಗಂ ಕಾಮುದನ್ ಅಡಂಗೆವೊಯ್ದುಂ (Šmd. 293. 406). ರಾಗದಿನ್ದೆ ಎರೆಯನ್ ಅಡಂಗೆವೊಯ್ದು ಮುಗಿಲುದ್ದಮ್ ಎನಲ್ ಪರಿಯುತ್ತಮ್ ಇರ್ಪ ನೆತ್ತರ ತೊಱೆ (Abh. P. 13, 66). ತೊಡಂಕಿದ ವೀರನನ್ ಅಡಂಗೆವೊಯ್ವ ... ಪರಾಕ್ರಮಂ (Rsv. 6, after 11).

ಅಡಂಗು aḍaṅgu. 2. Hiding; a place of hiding or of refuge: a fort. See ಅಡಂಗಾಯ್ತ & ಡಾಗು.

ಅಡಂಗುಱುಚು aḍaṅguṟuču. = ಡಂಗುಱುಚು. — ಅಡಂಗು ಱುಚಾಟ. -ಆಟ. A peculiar kind of blindman's-buff, hide-and-seek (ಕಣ್ಣ ಮುಚ್ಚಾಟ Kk. 74; Šs.).

ಅಡಚಣೆ aḍačaṇĕ. Obstruction, difficulty, distress (C.; Mhr. ಅಡಚಣ).

ಅಡಚು aḍaču. 1. Related to and partly identical with ಅಗಚು, ಅಗುಚು, ಅಗುಸು, ಅಡಕು 1, ಅಡಸು, ಅಡುಕು 1, ಅಣಕು, ಅಣಚು, ಅಣಂಚು, ಅಣುಂಕು, ಅತುಕು, ಅದಕು 1, etc. To pack, or pack up, close; to stuff in; to press down; to humble; to hush, to silence, to shut, as the mouth (Tĕ. ಅಡಚು, ಅಡಂಚು; T. ಅಡೈ, ಅಡೈಚು; My. only: *to stuff into, as food into the mouth; cf.* ಅಡೆ 3).

ಅಡಚು aḍaču. 2. To rap, to cuff (R.; Tĕ. ಅಡಂಚು, ಅಡುಚು, to beat, strike, break, destroy, smite; *cf.* ಅಡೆ 4; ಅವಲ್ 1 & 2; T., M. ಅಡಿ, to beat, to strike).

ಅಡದಲಿಕಿ aḍadaliki. A peon (S. Mhr., H.; B. 5, 284).

ಅಡದಿ aḍadi. = ಅಡಿದಿ, ಹಡದಿ. Clothes which washermen take home for washing, and occasionally, after washing, give on hire (My.). — ಅಡದಿ ಬಟ್ಟೆ. Clothes hired from the washerman (My.).

ಅಡನೆ aḍanĕ. (fr. ಅಡ 6). = ಅಡ್ಡನೆ, ಅಡ್ಡೆ. Cross-wise, etc. — ಅಡನಾಡಿ. -ಆಡಿ. That acts perversely: a perverse or stubborn person or beast. — ಅಡನಾಡಿತನ. -ಆಡಿತನ. Perversity; uncouthness (My.).

ಅಡಪ aḍapa. = ಹಡಪ. A small bag, used as a pouch for areca nut and betel leaves (Abh. P. 3, after 83) and by barbers as a dressing case (My.; Tĕ., Tu.; M. ಅಡಪ್ಪ; T. ಅಡೈಪ್ಪ, ಅಡೈಪ್ಪೈ, ಅಡವಿಪ್ಪ).

ಅಡಪವಳ aḍapa-vaḷa. (Šmd. 234. 89). = ಅಡಪವಳ್ಳ. A man who carries his master's betel-nut pouch. **2,** a barber (ಹಡಪಾಳಿ Čt. II, 117).

ಅಡಪವಳ್ಳ aḍapa-vaḷḷa. (Šmd. 234). = ಅಡಪವಳ.

ಅಡಪಿಗ aḍapa-iga. (Šmd. 233). = ಅಡಪವಳ, ಹಡಪಿಗ.

ಅಡಪು aḍapu. 1. A kind of pimples or pustules (S. Mhr.). ಮುಪ್ಪಾದರೆ ನಾಯಿಗಳಿಗೆ ಅಡಪು ಹತ್ತುತ್ತದೆ (B. 5, 29).

ಅಡಪು aḍapu. 2. = ಅಡವು 1, No. 3. A pledge, a pawn (C.; *cf.* ಅಡರ್ಪು).

ಅಡಬಳ aḍa2-baḷa. 1. = ಅಡುವಳ. A cook (ಬಾಣಸಿಗ Šmd. II; Šm. 45; Kk. 36; ಅಡಗೆ ಮಾಡುವವ G.). ಶೂಲಧರ, ನಿಮ್ಮ ಅಡಬಳಂ ಸಿರಿಯಾಳ (Bp. 9, 40). See ಸಗ್ಗಿಗರಡಬಳ.

ಅಡಬಳ aḍabaḷa. 2. Flesh (ಮಾಂಸ Bhn. 3; Dp. 59, 3; *cf.* ಅಡಗು 2).

ಅಡಬೆ aḍabĕ. = ಹಡಬೆ. Perverseness, wickedness (used of stray cattle, My.; Mhr. ಅಡವಾ).

ಅಡಮ್ಬರ aḍambara. = ಆಡಮ್ಬರ. Ostentation, display (My.).

ಅಡಯಾಳ aḍayâḷa. A mark, a sign (R.; M.; Tĕ. ಅಡಿಯಾಲ; T. ಅಡೈಯಾಳ).

ಅಡರ್ aḍar. = ಅಡರು 1, (ಅಮರ್). P. p. ಅಡರ್ದು. To be united with or to be joined to, to join (ಪತ್ತು Šmd. Cm. 152. 218; Šm. 97; ಹತ್ತಿಕೊಳ್ಳು Čb.; T.: to be close, etc.; a crowding together, narrowness, a being straitened; M. ಅಡಲ್, closing with; Tĕ. ಅಡರು, to be fit or proper). ಅಬಿನ್ದು ಆಗಿ ಎವರ್ಣಂ ಬಹುವಚನದ ಅರ್ಪಂ ಅಡರ್ದುದು (Šmd. 151). ಸಮಾಸದೊಳಮ್ ಅಸಮಾಸದೊಳಂ ರೇಫೆ ಅಡರ್ದ ಅಕ್ಕರಕ್ಕೆ ದ್ವಿತ್ವಮ್ ಅಕ್ಕುಂ (218). ತತ್ಪದವ ... ಅಡರ್ವ ಬಸವನ ಭಕ್ತಿರತಿ (Bp. 4, 60). ನಿಮ್ಮ ಅಡಿಯ ಕೃಪೆ ಅಡರೆ ಈ ತಪ್ಪಂ ಕ್ಷಮಿಸವೇಟ್ಟು (22, 41; see also 27, 4; 34, 5). ಪುಗೆ ಸೋಗೆ ಸೊಮ್ಪು ಅಡರ್ದ ಪೊಸ ಪೀಲಿಯೊಳ್, ಫಣಿ ಬಿಡದೆ ಉರಿದುದು (Ršv. 5, 43). ಚಿನ್ತೆಯಿಂ ಬೆಳ್ಪು ಅಡರ್ದುದು ಎನೆ ತದಬ್ಜಂ ಶರನ್ಮೇಘಮ್ ಇರ್ಕುಂ (6, 4). (ಈ ನಿಘಣ್ಟು) ಅಡರ್ದ ಪಿತನನ್ತೆ ಲಕ್ಷಣ ಸುಶಬ್ದಮನ್ ಈವುದು (Mr. 6). See J. 26, 11. **2,** (to hold on), to climb, to ascend, to mount; to rise (ಆರೋಹಣ Šmd. Dh.; C. as ಅಡರು; ಏಱು G.). ಮೊದಲಿನ್ದ ತುದಿವರಮ್ ಅಡರ್ದ ಲತೆ (ಆರೋಹ Nr.). ಸಱಿಗಳಂ ತಾವು ಅಡರುತಂ (Bp. 52, 15). ಪಣೆಯಿಂ ಕೊನೆವರೆಗಂ ಪೂ ತವೆ ಅಡರೆ (Čpr. 7, 53). ಅನ್ದಳವನ್ ಅಡರ್ದಂ (Râghč. 17, 53). (ನಾಳೀಜಂಘಂ) ಶಾಖಾಗ್ರದೊಳ್ ಅಡರ್ದು ಆಲುಗಲ್ (Ršv. 9, 29). ತಡಿ ತಡಿಗೆ ಅಡರ್ವ ಜಲದೊತ್ತುಗಳ ಮುತ್ತುಗಳ ಪದಪಿನಿಂ ಕಡಲ್ ಎಸೆದುದು (Č. Bp. 2, 4). ಕೆನ್ಧೂಳ್ ಅಡರ್ದು, ನಭಮುಂ ಮುಸುಕಿತು (J. 22, 5). ಮುಗಿಲೆ ಅಡರ್ (28, 45). ಅಶ್ವಮನ್ ಅಡರ್ದಂ (28, 57). See Lflv. s. ಪಡು 3. **3,** to rise and fall upon, to pounce upon, to rush at, as dogs, etc. do (C. as ಅಡರು). **4,** to arise, to come, to appear. (Tĕ.). ಕೆಮ್ಪು ಅಡರ್ದ ಕಡೆಗಣ್ಣ್ಗಳ್ (Ršv. 14, after 5). **5,** to appear in numbers, to amass, as clouds (My. as ಅಡರು).

ಅಡರಿಸು aḍarisu. To cause to adhere; to cause to ascend, etc. (My.; Bp. 18, 40; 32, 57).

ಅಡರು aḍaru. 1. = ಅಡರ್, q. v. P. p. ಅಡರಿ. ಕಿನ್ನರಯ್ಯನ ಅಂಘ್ರಿಯನ್ ಅಡರಿ ನೋಡಲು (Bp. 29, 10). ಸಮ್ಪದವಮ್ ಅಡರಿ ಪರಿಣಯಮುಂ ನೆಗಟ್ದು (32, 39). ಚಣ್ಡಿಹುಱುಹೊಟ್ಟೆಗಳ್ ಅಡಿಗಡಿಗೆ ನಿನ್ನನ್ ಅಡರಿದಡೆ (18, 56). ಒನ್ದನ್ ಅಡರಿ ಒನ್ದಕ್ಕೆ ಕೆಯ್ ನೀಡುವರ್ ಅಬಲೆಯರು ಲತೆಗಳ ಅನ್ದದಲಿ (40, 77). ಮುಡದಿಯ ಮೇಲೆ ದೃಷ್ಟಿಗಳ್ ಅಡರಿ ನೋಡಿದ ಕಂಗಳಂ ಕಳದು (45, 29). ಮೇಲಕ್ಕೆ ಅಡರಿದ ಮೊಣಕಾಲುಳ್ಳವನು (ಊರ್ಧ್ವಜಾನು, etc. Nr.). ಅಡರಿ ಧೂಳಿ ಪುಟ್ಟಿದುದು (ಧೂಳೀಪಟಲ Bhn. 36). ಹರುಷ ಮಿಗೆ ಹರಿತನ್ದು, ಬಣ್ಡಿ ತಿರದ ಹಲಿಗೆಯನ್ ಅಡರಿದನು (Bh. 1, 10, 27). ತಾವು ಅವಸರೋಚಿತಕೆ ಅಡರಿ ಸತ್ಕ್ರಿಯೆಗಳನ್ ಒಡರ್ಚಲು (Bp. 50, 32). ಅತಿವಿಕ್ರಮವಿನೋದದೊಳ್ ಅಡರಿ, ಪಟುವಿಷಕೇಳಿಯಂ ಸಲಿಸುತ್ತಂ (59, 24). ಪ್ರಿಯಮ್ ಅಡರಿ (11, 36). ಬೆಡಗು ಅಡರಿ (24, 60). ಚಲುವಡರಿ (28, 53). ವೈಭವಮ್ ಅಡರಿ (50, 16). ಕೆಮ್ಪು ಅಡರೆ (58, 61). ಅಡರಿತು ಆ ಕೇಲಾರಂ (60, 36).

ಅಡರು aḍaru. 2. A rising and falling upon, an attack; an attempt. ನಪ್ಪಿಸುವ ಸೋಲಿಸುವ ಅಡರುಗಳು (Bp. 40, 62). **2,** a taking fire or kindling of the wick in a lamp-saucer when the oil is exhausted. ಅಡರು ಹತ್ತು (My.). **3,** the state of being raised up, as a kaččĕ, etc. — ಅಡರಾಟ. -ಆಟ. A scuffle (My.). 2, vying, rivalry (My.). — ಅಡರುಗಚ್ಚೆ. -ಕಚ್ಚೆ. A greatly raised kaččĕ (at the back, My.). — ಅಡರುಗಟ್ಟು. -ಕಟ್ಟು. To raise and tie, as one's dôtra, the nirigĕ of a sîrĕ, etc. (My.). — ಅಡರುಗಾಲು. -ಕಾಲು. A raised, lifted foot (in walking, My.).

ಅಡರುವಿಕೆ aḍaruvikĕ. A rising, a standing up, etc. ರಾಘವನ ಧನುವಿಂ ಕಡಿವಡೆದು ಉಱಿದ ಗನ್ಧಮಾದನನ ಅಡರುವಿಕೆ (Bp. 19, 30; My.).

ಅಡರ್ಚಿಸು aḍarčisu. To cause (one's self) to be brought together with, to be involved in. ಆಪತ್ತು ಅಡರ್ಚಿಸಿದ (ಅಭಿಪನ್ನ Si. 439).

ಅಡರ್ಚು aḍarču. To bring together; to set in readiness, to prepare (R.; Tĕ. ಅಡರಿಂಚು, to make, to perform).

ಅಡರ್ಪು aḍarpu. (Šmd. 50). Trust (ಅಂಕೆ, ನೆಮ್ಮುಗೆ Kk. 74; Šm. 66; *cf.* ಅಡ 6).

ಅಡಲ್ aḍal. N. of a plant. See ಗಜಕರ್ಣಿಕೆ.

ಅಡಲ aḍala. = ಪಡಲ. (My.).

ಅಡಲು aḍalu. 1. (= ಅಗಲು 1 No. 4, ಅದರು 1, ಅಲ್ಲು 2). To be shaken, to tremble (R.). **2,** to be afraid (R., Tĕ.; *cf.* ಅಳಱ್ 1). **3,** to grieve (R., Tĕ.; = ಅಬಿಲ್ 1).

ಅಡಲು aḍalu. 2. Tremor (R.). **2,** whirling, confusion of mind (My.; *cf.* ಅಯಿಲು). **3,** grief; fear (R.; T. ಅಡರ್; Tĕ. ಅಡರು, ಅಡಲು). — ಅಡಲುಹುಱು. A winged insect that continually whirls round (My.).

ಅಡಲು aḍalu. 3. = ಅಗ್ಲು, ಅಱಿಲ್ 2, etc. Mud (My.).

ಅಡವಿ aḍavi. Tbh. of ಅಟವಿ (Šmd. 338; Hlâ. II, 55; V. 13; Čt. II, 91; Nn. 144; Mr. 151; ಶರಧಿ, ಕಾನನ Nn. 11; ವಿಪಿನ 106; ಕಾನ್ತಾರ 117; C.). Also: wild (regarding animals and plants). ಮಲಯಪರ್ವತದ ಅಡವಿ (Bp. 43, 25). ಅಡವಿಯ ಮನ್ದೆ (58, 22). ಅಡವಿಯಲಿ ಜನಿಸಿದರು, ಬೆಳವಿಗೆ ಅಡವಿಯೊಳಗೆ; ಇನ್ನು ಅವರ ಬಾಳಿಕೆಗೆ ಅಡವಿಯೇ ನೆಲೆ! (Bh. 1, 8, 23). See ಪೇರಡವಿ. — ಅಡವಿಅಣ್ಟರಿಕೆ. = -ಅಣ್ಟಿರಿಕೆ. A small prostrate grass with seeds that stick to one's clothes, Lappago aliena Spr. (Z.). — ಅಡವಿಅಣ್ಟಿರಿಕೆ. = -ಅಣ್ಟರಿಕೆ (Z.). — ಅಡವಿಕುಱಿ. The ribfaced or barking deer, Ceroulus aureus (Gz.). — ಅಡವಿಕೋೞಿ. The grey jungle fowl, Gallus sonnerati (Bd.). — ಅಡವಿಗಿಚ್ಚು. -ಕಿಚ್ಚು. = ಅಡಿವಿಗಿಚ್ಚು. Fire in forests or wilds (My.). — ಅಡವಿಗಿಚ್ಚುಗೊಳ್. -ಕೊಳ್. To catch the fire of forests, etc. ಅಡವಿಗಿಚ್ಚುಗೊಣ್ಡ ಪುಲ್ಲೆಯನ್ತೆ ಹರಣಂ ಹಮ್ಮಯ್ಸುವುದು (Ršv. 13, after 104). — ಅಡವಿಗುಮ್ಬುಳ. -ಕುಮ್ಬುಳ. = ಅಡವಿಯ ಕುಮ್ಬುಳ. A sort of creeper with a bulbous root used medicinally (My.). — ಅಡವಿಗುಱಿ. Aim or object for, or exposition or prey to, a forest. ಸತಿಸಹಿತ ಅಡವಿಗುಱಿಯಾದನು (Râm. 26, 13). — ಅಡವಿಗೋರಣ್ಟೆ. A shrub, the red cedar, Erythroxylon monogynum Roxb. (St. & Pl.). — ಅಡವಿಚಂಚ. = ಚಂಚ, q. v. (S. Mhr.). — ಅಡವಿಜೊಗಚಿ. A common weed, Sesbania aculeata Pers. (Z., also -ತಗಚಿ). — ಅಡವಿತೊಱಿಮೆನ್ತೆ. A common plant, Indigofera endekaphylla Jacq. (Z.). — ಅಡವಿನೆಲ್ಲಿ. A diffuse perennial herb, Phyllanthus simplex Willd. (Z.). — ಅಡವಿ ಪಾಲು. -ಅಲ್. A wilderness-lot, a miserable lot, ruin.

ಅಡವಿಪಾಲಾಗು, to go astray; to get into great distress, to be ruined (C.). — ಅಡವಿ ಬೀಳು. To fall into a jungle, to go astray. ನಿಜಗುಣಿ ದಾರಿ ತಪ್ಪಿ ಅಡವೀ ಬಿದ್ದನು (B. 3, 125). 2, to become waste, as a field (My.). — ಅಡವಿಬೆಣ್ಡೆ. = ಅಡಿವಿ-. A name given to different plants of the Malvaceae family, e. g. the tree Hibiscus vitifolius Linn., and the annual herb Hibiscus panduriformis Burm.; also the half shrub Hibiscus ficulneus Linn. (Z.). — ಅಡವಿಮೆಣಸಿನ ಗಿಡ. = ಮೆಣಸಿನ ಕಸ. (Z.). — ಅಡವಿಮೆನ್ತೆ. A common weed, Indigofera glandulosa Willd. (Z.). — ಅಡವಿಯ ಕಾಗೆ. A raven (ಕಾಕೋಲ, etc. Hlâ.). — ಅಡವಿಯ ಕುಮ್ಬಳಕಾಯಿ. (ಕಕ್ಕುವ್ಬುಳ G.). — ಅಡವಿಯ ಕೋಣ. (ಗವಯ G.). — ಅಡವಿಯ ಕೋಟಿ. (ಕುಕ್ಕುಭ G.). — ಅಡವಿಯ ಜನರು. (ಪುಲಿನ್ದ Čb.). — ಅಡವಿಯ ತುಳಸಿ. (ಕಬರಿ Čb.). — ಅಡವಿಯ ಪಾರಿವಾಳ (B. 3, 114). — ಅಡವಿಯ ಬಾರಿಗಿಡ. (ಮಧುರ Čb.). — ಅಡವಿಯ ಬೆಕ್ಕು. (B. 3, 30). — ಅಡವಿಯ ಮಲ್ಲಿಗೆ. (ಅಸ್ಫೋಟೆ G.). — ಅಡವಿಯ ಲಕ್ಕೆ. (ಶೇಫಾಲಿಕೆ G.). — ಅಡವಿಯ ಹೆಸರು. (ಸಹೆ G.). — ಅಡವಿಯಾಡು. (B. 5, 24). — ಅಡವಿಯುದ್ದು. (ಹಯಪುಚ್ಛಿ G.). — ಅಡವಿಯೆಳ್ಳು. (ಜರ್ತಿಲ G.). — ಅಡವಿರಾಗಿ. A grass, Dactyloctenium aegyptiacum Willd. (Z.). — ಅಡವಿರುದ್ರಾಕ್ಷಿ. An herb, Celsia coromandeliana Vahl. (Z.). — ಅಡವಿ ಸಣಬು. An annual plant, Crotolaria sessiflora L. (Z.). — ಅಡವಿಸಾಸಿವೆ. A species of wild mustard (My.). — ಅಡವಿ ಸೀಗೆ. A woody creeper, Caesalpinia mimosoides Lam. (Z.). — ಅಡವಿಹತ್ತಿ. (ಭಾರದ್ವಾಜ Si. 150). — ಅಡವಿಹುಳುಚಿಕ್ಕನ ಬಳ್ಳಿ. A slender creeping plant, Desmodium triflorum D. C. (Z.).

ಅಡವು aḍavu. 1. = ಅಡ 8, ಅಡವು 2, ಅಡಹು, ಅಡಿವು, (ಅಡ್ಡ 2). Suitableness, properness, proper way (T. ಅಡವು, ಅಡೈವು, method, manner; *cf.* ಅಡಗು 3, etc.); the state of being sufficient (My.). **2,** the state of being (united), close, thickset, or abundant (C.; *cf.* ಅಡರ್, ಅಳುವ್ಬು). **3,** a pawn, a pledge, a deposit, a mortgage (C.; ಅಧಿ Si. 432; ಒತ್ತೆ G.; T. ಅಡವಾನ, ಅಡೈವಾನ; M. ಅಡಮಾನ; Tu. ಅಡವು, ಅಡಾವು; Tē. ಅಡ್ಡಮು). ಅಡವು ಹಾಕಲ್ ಪಟ್ಟ ಆಕಳು (ಧೇನುಷ್ಯೆ Si. 322). ಮುಟಿ ಅಡವಾಗಿ ಬನ್ತು; ಪಯ್ರು ಅಡವಾಗಿ ಬೆಳದವು; ಹಾಲನ್ನು ಅಡವಾಗಿ ನೀಡು (S. Mhr.; My. also with the meaning of No. 1). — ಅಡವಿಕ್ಕು. To pawn, to mortgage (C.). — ಅಡವಿಡು. = ಅಡವಿಕ್ಕು. (C.). — ಅಡವು ಬಿಡಿಸಿ ಕೊಳ್ಳು. To redeem a pawn (C.).

ಅಡವು aḍavu. 2. = ಅಡ 6. An impediment, anything to obstruct, *e.g.* a stone placed (S. Mhr.; Mhr. ಅಡ). ಅಡವು ಅನಿಸು, ಅಡವು ಇಡು, to put such an obstruction, *e. g.* a stone to keep a door, etc. open.

ಅಡಸಟ್ಟೆ aḍasaṭṭĕ. Estimate, computation (S. Mhr.; Br.; Mhr., H.).

ಅಡಸಲ aḍasala. The state of being overboiled (*i. e.* T. ಅಡಿಚ್ಚಲ್? see ಅಡುಗು 1). — ಅಡಸಲ ಬಡಸಲ. dupl. Good and bad things promiscuously mixed together (in eating). ಅಡಸಲ ಬಡಸಲ ತಿನ್ನು, --ಉಣ್ಣು (S. Mhr.).

ಅಡಸಲ aḍasala. Tbh. of ಅಟರುಷ. ಅಡಸಲದ ಗಿಡ (ಸಿಂಹಾಸ್ಯ, ಸಿಂಹಿ G.; S. Mhr. rare).

ಅಡಸಲೆ aḍasalĕ. = ಅಡಸಲ. (My.).

ಅಡಸಾಲ aḍasâla. = ಅಡಸಲ. ಅಡಸಾಲದ ಗಿಡ (S. Mhr.; ಅಟರುಷ, ವಾಜಿದನ್ತಕ, ವಾಶಿಕೆ G.).

ಅಡಸಾಲೆ aḍasâlĕ. = ಅಡಸಾಲ. (My.).

ಅಡಸು aḍasu. = ಅಡಚು 1, etc. To join, to be joined to, to unite with; to be near; to associate one's self to (ಪೊರ್ದುಗೆ ಆಗು Šmd. Cm. 214. 220; ಅಲ್ಲಿ ಇರ್ 347). ಸರಕ್ಕೆ ಸ್ವರಮ್ ಅಡಸೆ (Šmd. 214). ಅಡಸುವುದು ಬಹುವ್ರೀಹಿಯ ಕಡೆಗೆ ಅತ್ವಂ (220). ಅಡಸಿದ ಚತ್ವಕ್ಕೆ ಸತ್ವ-ದತ್ವಂ (347). ಇರುಳು ಹಗಲು ಅಡಸಿ, ಕೆಯ್ಯಿನ್ದ ಇಟಿಯಂ (Bp. 15, 30). ಪರಾಂಗನೆಗೆ ಅಡಸಿದೆನೆ? (45, 20). ತದ್ಧನವ ಮ್ರುಡನ ಕೆಯ್ಯಲು ಕೊಣ್ಡು, ಸಮ್ಮುದವ್ ಅಡಸಿ, ಮಾಹೇಶ್ವರರಿಗೆ ಅರ್ಪಿಸಿ (44, 63). ಕೃಪೆ ಅಡಸಿ, ಎನ್ನ ಸ್ವಾಮಿ, ಬಿಜಯಂಗೆಯ್! (47, 45). **2,** to come toward or upon, to fall on; to attack; to trouble. ಕೇಡು ಅಡಸಿದವನು (ಅಪನ್ನ, ಅಪತ್ಪ್ರಾಪ್ತ Nr.). ಕಡುಬಡತನಮ್ ಅಡಸಿ ಇರಲು (Bp. 27, 1). ಎಡಱು ಅಡಸಿ, ಬಡಭಕ್ತನೊಬ್ಬನು (29, 10). ಎಡಱು ಅಡಸಿದಲ್ಲಿ (40, 43). ಭುವನಾಕ್ಷಿಗೆ ಅಡಸುವ ಘನತಿಮಿರಂ ಭುವನದ ಅಕ್ಷಿಯಂ ಮುಸುಕುಗುಮೇ? (Ršv. 13, 17). ರುಜೆ ಬನ್ದು ಅಡಸೆ (J. 28, 19). ಕಡುಹ ಮಿಗೆ ಲೋಕಂಗಳಂ ಪಿರಿದು ಅಡಸಿತು (Bp. 32, 39; *cf.* 40, 39). ಅಡಸು ಹರಿವಿಧಿಗಳಂ! (Č. Bp. 47, 22). **3,** to be impetuous, to rush. ಕುಂಜರಂ ನಾ ನಿನ್ನ ಮಸ್ತಕಕಂಜನಾಲಕ್ಕೆ! ಎನುತ, ಅಡಸಿ ಬರೆ (Bp. 28, 25). ಅಗ್ಗದ ಹಾಲಹಲಮ್ ಇನ್ತು ಅಡಸಿ ಬನ್ದುದು ಎನುತ್ತ, ಲಕ್ಷ್ಮೀರಮಣನ್ ಅಳುಕಿದನು (58, 62). ತದ್ಬಲಮ್ ಎರಡಿಟ್ಟು, ತಳ್ತು, ಅಡಸಿ, ಬೊಬ್ಬಿಱಿದು, ಅಡಿದುದು (Ršv. 13, 88). **4,** to use force, impetuosity or speed; to lose no time (ಸಂಗಡಿಸು Šmd. Cm. 29). ಅಡಸಿ ಪೊಡೆವ ಝುಗಡೆ (Šmd. 29). ಅವಂ ಬನ್ದು, ಕನತ್ಕನಕಕೋಣಮಂ ಪಿಡಿದು, ಅಡಸಿ ಪೊಡೆದಾಗಳ್ (Ršv. 6, 11). ನಿಡುಗೊವ್ಬನ್ ಅಡಸಿ ಪಿಡಿದು (10, after 57). ಮುಷ್ಟಿಯೊಳ್ ಅಡಸಿ ತಿವಿದನು ಹುಲಿಯ (Bh. 3, 13, 30). **5,** to be stern. ನಿಜಕುಮಾರನುಮಂ ಸಚಿವಸುತನುಮಂ ಕೆಮ್ಪುಡರ್ದ ಕಡೆಗಣ್ಣಳಿನ್ದೆ ಅಡಸಿ ನೋಡಿ (Ršv. 43, 68). **6,** to enter closely, firmly or strongly (ಗಾಢಪ್ರವೇಶ Šmd. Dh.); to ram one's self in, to stick; to be filled in. ನೆಗಡಿಯಾದರೆ ಮೂಗಿನಲ್ಲಿ ಸಿಮ್ಬಳ ಅಡಸಿ ಕೊಳ್ಳುತ್ತದೆ (My.). ಕಸ ಕಡ್ಡಿ ಅಡಸಿ ಕೊಣ್ಡು, ಬಚ್ಚಲದ ನೀರು ಹೊಱಗೆ ಹೋಗವಲ್ಲದು (My.). ಅವನಿಗೆ ನನ್ನ ಮೇಲಿನ ಕೋಪ ಗಣ್ಟಲ ತನಕ ಅಡಸಿ ಕೊಣ್ಡದೆ (My.). See Râm. 5, 8, 39. **7,** to be firmly fixed, not to leave one's place. ಈತನು ಹೋಗನು; ಇಲ್ಲಿರ್ದು, ಅಡಸಿ ಕೊಣ್ಡಿರ್ದಹನು (Bp. 43, 68). **8,** to get into the power of, to fall into. ಪಾಪಕ್ಕೆ ಅಡಸಿ (Bp. 24, 56). **9,** to cause to attain; to convey to. ನಿಜ ಪ್ರಸಾದವನೆ ಅಡಸಿ ಕೊಟ್ಟು (Bp. 4, 60). ಶಿವಭಕ್ತರ ಮನೆಗಳಿಗೆ ಅಗ್ಗವಣಿಗಳನ್ ಅಡಸುವಳು (24, 2). **10,** to put firmly into; to cram or stuff into (My.; Bh. 2, 2, 103). ತೊಡರೆ ಮಿನ್ ಮೃಗಲಾಂಛನಧೀವರಂ ತಡಿಗೆ ಬೀಸಿದ ಜಾಲವನ್ ಒತ್ತಿ, ತನ್ದು, ಅಡಸಿ ಬಾನ್ದೊಱೆಯೊಳ್, ತೆಗೆವನ್ತೆ ಒನ್ದೆಡೆಗೆ ಬನ್ದುವು ತಣ್ಗದಿರೋಳಿಗಳ್ (Lilv. 3, 2). ಇವನ್ ಅಸುರಬಲಿಗೊದಗಿಸಿದ ಕೂಟಿನ್ ಅತಿಮಹೋದರಕೆ ಅಡಸಿ ಕೊಮ್ಬನೇ? (J. 2. 58). **11,** to hold firmly, to confine, as in the armpit or under the arm. ಕಂಕುಳಲ್ಲಿ ಪುಸ್ತಕವನ್ನು (ಬಟ್ಟೆಗಳನ್ನು, ಹುಲ್ಲನ್ನು, etc.) ಅಡಸಿ ಕೊಳ್ಳುವದು (My.). **12,** to cover. ಆಕಾಶವು ಮೋಡ ಅಡಸಿ ಇದೆ (My.). ಅವನಿಗೆ ಮೆಯ್ಯೆಲ್ಲ ಕಜ್ಜಿ ಅಡಸಿ ಅಡೆಗಟ್ಟಿ ಅದೆ (My.). — *Cf.* ಅಡಗು 3.

ಅಡಹಡಿಸು aḍahaḍisu. See s. ಅಡ 4.

ಅಡಹು aḍahu. = ಅಡವು 1, No 3. (My.).

ಅಡಾ aḍâ. = ಅಡಿ. Two and a half (H.). — ಅಡಾಸೇರು. A weight or measure of two and a half (My.; Mhr. ಅಡಶೇರೀ).

ಅಡಾಡಿ aḍâḍi. = ಅಡಾವುಡಿ 1. (Repetition of ಅಡ 4). Rashness, haste, hurry; quickly, restlessly (S. Mhr.).

ಅಡಾಣಿ aḍâṇi. Unremunerated and forced labour or service, used of men and beasts (S. Mhr.). 2, a foreigner (S. Mhr.). (Mhr. ಅಡಾಣ, the people of a village not employed in cultivation, the villagers who have no lands assigned them in payment of service; ಅಡಾಣೀಜಾತ, a person viewed as rude and barbarous; H., Mhr. ಅಡಾಣೀ, inexpert; clumsy).

ಅಡಾಯಿಸು aḍâyisu. To stop, to arrest (Br.; Mhr. ಅಡವಿಣೇಂ); —to be restive, as a horse (R.; Mhr. ಅಡಣೇಂ); —to put before (a person, My.). *Cf.* ಅಡ್ಡಯಿಸು.

ಅಡಾಯುಧ aḍa6-âyudha. = ಅಡ್ಡಾಯುಧ. A sword with a recurved point, a scimitar (ಮಣ್ಡಲಾಗ್ರ Mr. 298). See Rśv. 5, 52; Mr. 20.

ಅಡಾವಣಿ aḍâvaṇi. ಅಡಾ (ಅಡ 6)-ವಣಿ. Obstacle, hindrance (S. Mhr.).

ಅಡಾವುಡಿ aḍâvuḍi. 1. = ಅಡಾಡಿ. (S. Mhr.).

ಅಡಾವುಡಿ aḍâvuḍi. 2. Alarm, confusion, uproar, quarrel, ravage, riot, routing, fright (R.; T. ಅಡಾವಡಿ; Tĕ. ಅಡಾವಡಿ, ಅಡಾವುಡಿ).

ಅಡಿ aḍi. 1. = ಅಟಿ, etc. A suffix that occurs, *e. g.* in ಅರಡಿ, ಅೞಿಡಿ (s. ಅೞು 3).

ಅಡಿ aḍi. 2. = ಅಂ, ಅಜ್. The foot (ಕಾಲ್, ಪಾದ Śm. 70; ಪದ 95; ಅಂಘ್ರಿತಲ Ĉt. I, 102); the measure of a foot (My.; T., M., Tu.; Tĕ. ಅಡುಗು). See ಈರಡಿ, ಕುತ್ತಡಿ, ಕೇಸಡಿ, ದಟ್ಟಡಿ, ಪೇರಡಿ, ಪೊೞ ಅಡಿ, ಮುಯ್ಯಡಿ, ಮೆಲ್ಲಡಿ.— ನಡೆವುದು ಅದಿಯುಗಂಗಳೊಳ್ ನಾಲ್ಕು ಅಡಿಯೊಳ್ ಉನ್ನತಧರ್ಮಮ್, ಆ ಮೂಱು ಅಡಿಯ ನಡೆವುದು ಧರ್ಮಮ್ ಆ ತ್ರೇತಾಯುಗಂಗಳಲ್ಲಿ, ನಡೆವುದು ಈರಡಿಯಿನ್ದೆ ಧರ್ಮಂ ಬಿಡದೆ ತದ್ದ್ವಾಪರನಿಕರದೊಳ್, ನಡೆವುದು ಒನ್ದು ಅಡಿಯಿನ್ದೆ ಧರ್ಮಂ ಕಲಿಯುಗಂಗಳೊಳು (Bp. 2, 5). ಅಡಿಗಳಂ ತೊಳದು (12, 7). ಎಮ್ಮ ಅಡಿಗಳಂ ಬಿಡು (23, 38). ಅಡಿಯನ್ ಊಱುತ್ತ (43, 85). ಅಡಿಯ ರಕ್ತ (44, 16). ಅಡಿಗಳ್ ಒಡದು (57, 59). ವನ್ದಿಸಿ ಕುಲಿನ್ದನ ಅಡಿಗೆ (J. 29, 40). ಬಸಿವ ನೆತ್ತರ ಗಾಯದ ಎಡದ ಅಡಿಯ ವೇದನೆ (28, 35). — ಅಡಿಗಳ ಮೇಲೆ ಕೆಡೆ. To fall down at (on) the feet (of somebody). ದಾಸಯ್ಯಂಗಳ ಅಡಿಗಳ ಮೇಲೆ ಇಬ್ಬರು ಕೆಡೆದು (Bp. 23, 35). ಒಡೆಯರ ಅಡಿಗಳ ಮೇಲೆ ಕೆಡೆವರು (56, 40). — ಅಡಿಗಳ ಮೇಲೆ ಬೀೞ್. - -ಬೀೞು. = ಅಡಿಗಳ ಮೇಲೆ ಕೆಡೆ. (My.). ಚವುಣ್ಡರಸನ ಅಡಿಗಳ ಮೇಲೆ ಬಿದ್ದು (Bp. 46, 44). ಎಮ್ಮ ಅಯ್ಯನ ಅಡಿಗಳ ಮೇಲೆ ಬೀೞುವೆವು (47, 19). — ಅಡಿಗಳಿಗೆ ಎಱಗು. = ಅಡಿಗಳ ಮೇಲೆ ಬೀೞ್. ಅಡಿಗಳಿಗೆ ತಾನ್ ಎಱಗುವಂ (Bp. 47, 46). — ಅಡಿಗಾಣ್. -ಕಾಣ್. To see the feet (of somebody, *i. e.* to see or visit him). ದೇವರ ಅಡಿಗಣ್ಡು, ಕಪ್ಪಮನ್ ಈವರ್ (Rśv. 5, 127). — ಅಡಿಗೆಡು. -ಕೆಡು. The feet to fail, to become slow or tardy (R.). — ಅಡಿಗೆಡೆ. -ಕೆಡೆ. = ಅಡಿಗೆ ಬೀೞು. (J. 14, 28). — ಅಡಿಗೆ ಬೀೞು. = ಅಡಿಯಲಿ ಬೀೞು. (My.). — ಅಡಿಗೆಱಗು. -ಎಱಗು. = ಅಡಿಗೆ ಬೀೞು. (Râm. 5, 8, 88; J. 17, 50). — ಅಡಿಗೊಳ್. -ಕೊಳ್. To take to the heels, to run away. ಅಡಿಗೊಳ್ವ ಪೆರ್ಮರ (Rśv. 5, 83). — ಅಡಿದಾವರೆ. -ತಾವರೆ. A foot-lotus, a foot like a lotus (My.; J. 2, 67; 24, 61). ನಿತ್ಯಶಿವನ ಕಾಣುತ್ತಲೆ ಅಡಿದಾವರೆಯೊಳ್ ಉರುಳುವ ರಾಘವನ (ಶಿವಂ) ಪಿಡಿದು, ಎತ್ತಿ (Râghĉ. 13, 10). — ಅಡಿ ಬೀೞು. = ಅಡಿಗಳ ಮೇಲೆ ಬೀೞ್. ಅವನ ಅಡಿ ಬಿದ್ದನು (My.). — ಅಡಿಯಲಿ ಬೀೞು. = ಅಡಿ ಬೀೞು. (My.). ಅಡೀಲಿ ಬಿದ್ದರೂ ಮಿಸೆ ಮಣ್ಣಾಗಲಿಲ್ಲ (Prv.). **2,** a verse-line; a verse-quarter (Ĉh.; T., M., Tĕ.). **3,** a step, a pace (My.; T., M., Tĕ.; ಹೆಜ್ಜೆ G.). — ಅಡಿಗಡಿಗೆ. ಅಡಿಗೆ ಅಡಿಗೆ. From step to step, from time to time, again and again, frequently, perpetually (ಪುನಃಪುನಃ, ಶಶ್ವತ್, ಅಸಕೃತ್, etc. Nr.; My.; ಆಗಾಗ್ಯೆ G.); = ಅಲ್ಲಲ್ಲಿಗೆ (G.). ಅಡಿಗಡಿಗೆ ನುಡಿವ ನುಡಿ (ಅನುಲಾಪ, ಮುಹುರ್ಭಾಷೆ Nr., Hlâ.). ಅಡಿಗಡಿಗೆ ನುಡಿವ ಮಾತು (ಅನುಲಾಪ Mr. 89). See Bp. 4, 11; 5, 23; 10, 38; 14, 17; 19, 52; 32, 48; 44, 42; 46, 74; 51, 63; J. 3, 32. — ಅಡಿಯಿಡು. -ಇಡು. To step, to walk; to plant the foot. ಏನಾದಡೆ ಬಯಸಿದ ಒಡವೆಗಳನ್ ಅಡಿಯಿಡದೆ (*i. e.* at once) ಈವುದು (Bp. 6, 2). ಬೇಡು! ಬೇಡಿದಡೆ ಈವೆನ್ ಅಡಿಯಿಡದೆ (9, 32). ಹಿನ್ದ ಹಿನ್ದಕೆ ಅಡಿಯಿಡುತ (22, 31). See *e. g.* further Bp. 25, 8; 26, 12; 32, 25; 44, 22; Rśv. 5, 42; J. 19, 7. — **4,** the foot, bottom or base of anything; the root; under (ಅಧಃಸ್ಥಾನ Śm. 95; ಕೆಳಗು Śmd. 350 & Cm.; ಕೆಳಗೆ 344 Cm.; ತಳ G.; My.; Tĕ., T., M., Tu.); the anus (My.). ವೃತ್ತರೇಫಮ್ ಅಡಿಯೊಳ್ ಆ (ಮೇಲಣ) ವರ್ಣದ ಪೋಲ್ ನೆಗೞ್ಗುಂ (Śmd. 344). ಗಿಡದ ಅಡಿ (ಮೂಲ, ಬ್ರಧ್ನ Si. 122). ಅಲಮ್ ಒಲೆದುದು, ಅದಱ ಅಡಿಯೊಳ್ ತೂಂಕಡಿಸ ಮಿಗಂ, etc. (Lîlv. 3, 2, see s. ಪಡು 3). ಪೆಡೆಯಂ, ಕೊಡೆಯನ್ತಿರೆ, ಪಿಡಿದು, ಅಡಿಯೊಳ್ ನೆೞಲ್ ನಿನ್ದ ಮಱಿಯನ್ (ಉರಗಿ) ಆನನದ ಎಲರಿಂ ಬಿಡದೆ ಆಶ್ವಾಸಿಸಿ (Rśv. 5, 44). ಅಂ ನಿಮ್ಮ ಅಡಿಯಲಿ ಅರಮನೆಯ ಸೇವಕರು (Bh. 1, 8, 16). The genitive appears also as ಅಡಿಯಣ (Śmd. 350 Cm.). ಹಾಡಿ ಹಾಡಿ, ದಾಸಯ್ಯಾ, ಅಡಿ (anus) ಮುಚ್ಚಿ ಕೊಣ್ಡು ಆಚೆ ಹೋಗು (Prv.). — ಅಡಿಗಣ್ಡಿ. -ಕಣ್ಡಿ. The yôni (My.). ಅಡಿಗಣ್ಣು. -ಕಣ್ಣು. The ankle (My.). — ಅಡಿಗಲ್ಲು. -ಕಲ್ಲು. The lower mill-stone (My.). — ಅಡಿಗಾಣು. -ಕಾಣು. To see the bottom (My.). 2, the bottom to appear (My.). — ಅಡಿಗಿಡು. -ಕಿಡು. The bottom to be destroyed (Abh. P. 15, 37). — ಅಡಿಗುಪ್ಪೆ. -ಕುಪ್ಪೆ. The lower portion of a stack of grain (My.). — ಅಡಿತುಣ್ಡು. A piece (of wood) under (another), a plank on which a carpenter works (ಉದ್ಘನ Si. 399). 2, the lower piece of anything (My.). — ಅಡಿಪಟ್ಟಿ. A door sill (My.). — ಅಡಿಬಣ್ಣ. The wool at the belly of a sheep (My.). 2, a man entirely void of shame (Tĕ.; R.). — ಅಡಿಮುಳಲ್. The bottom-sand, the sand of the deep (Bh. 8, 21, 8). — ಅಡಿಮುಟ್ಟ. To the bottom or root (My.). — ಅಡಿಮುಡಿ. Root-destruction (V. 4, 6); —the feet and the hair-knot (4, 6). — ಅಡಿಯಾಡಿಸು. -ಆಡಿಸು. To shake up, as curds, broth, etc. (My.). See Sp. s. ಕೆಯ್ಯಾಡಿಸು. — ಅಡಿರಾಸಿ. The lower portion of a heap of corn (My.). — ಅಡಿ ಹತ್ತು. To stick to the bottom, to burn at the bottom of a vessel in cooking (My.). — ಅಡಿಹೊಟ್ಟೆ. The abdomen (from the navel downwards, My.). — **5, a,** the foot, as an object of adoration. **b,** the adored person himself (T.: god, a priest, a lady, a sage, a senior; M.: king; Tĕ. ಅಣ್ಡಿ, sir; *cf.* Sk. ಪಾದ = ದೇವ, ಭಟ್ಟಾರಕ Hlâ.). ನಿಮ್ಮ ಅಡಿಯ ಕೃಪೆವಡೆದು ಬದುಕಿದಪೆಂ (Bp. 27, 44). ಒಡೆಯರಿರ, ನಿಮ್ಮ ಅಡಿಗಳ್ ಎನ್ನಂ ಬಿಡದೆ ಸಲಹಲಿ! (27, 72). ಪೊಡವಿಗೆ ಅತಿಶಯಮ್ ಈ ಮುನಿಸು; ನಿಮ್ಮ ಅಡಿಗಳಿನ್ದವೆ ಸಸಿನಮ್ ಅದಪುದು (47, 45). ನಿಮ್ಮ ಅಡಿಗಳ ಅಡಿಯಲಿ ತನಯನ್ ಇರೆ, ಬೇೞಿಕೊನ್ದು ಎಡೆಯೊಳುಂ ಕರೆಯಲ್ ಏಕೆ? (48, 28). ಎನ್ದುವುಂ ನಿಮ್ಮ ಅಡಿಯ ಸರಿಯೇ? (59, 51). ಜೀಯ, ನಿಮ್ಮ ಅಡಿಗಳ ನಿರೂಪವುಂ ಪ್ರತಿಪಾಲಿಸಿದೆಂ (J. 31, 34). ಅನಾ! ನಿಮ್ಮಡಿಯಾ!

(Šmd. 69). See J. 2, 55; Râm. 8. 21. **6,** in composition: a person who has such and such feet; an animal that has so and so many feet. See ಕಿತ್ತಡಿ, ಪೆರ್ಮಡಿ, ಬೆಳ್ಳಡಿ, ಮೂಱಡಿ, ಸಯ್ಯಡಿ; ಅಱಡಿ, ಎಣ್ಬಡಿ, ಮುಯ್ಯಿರಡಿ, ಮುಯ್ಯೆರಡಡಿ.

ಅಡಿ aḍi. 3. = ಅಡೆ 11. Mud (? ; *cf.* ಅಡುಸು). — ಅಡಿವಜ್ಜೆ. -ವಜ್ಜೆ. = ಅಡಿವಣಿ. A foot-print in mud (ಮೆಟ್ಟು Čt. I, 47, o. r. ಅಡಿವೆಜ್ಜೆ). — ಅಡಿವಣಿ. -ಮಣಿ. = ಅಡಿವಣಿಗೆ, ಅಡೆವಣಿಗೆ, ಅಡೆವಣಿ. (A concave bend in mud), a print of the foot in mud (ಕೆಸಱೊಳ್ ಇರದೆ ಆದ ವಜ್ಜೆ Kk. 76, o. r. ಅಡಿವಣಿಗೆ). — ಅಡಿವಣಿಗೆ. -ಮಣಿಗೆ. = ಅಡಿವಣಿ q. v. — ಅಡಿವೆಜ್ಜೆ. -ಪೆಜ್ಜೆ. = ಅಡಿವಜ್ಜೆ q. v.

ಅಡಿ aḍi. 4. = ಅಡೆ 8. See ಪಟ್ಟಡಿ. — ಅಡಿಗಲ್ಲು. -ಕಲ್ಲು. = ಅಡೆಗಲ್, -ಗಲ್ಲು. (S. Mhr.).

ಅಡಿ aḍi. 5. = ಅಡು 2, etc., ಅಡೆ 14. Cooking, etc.; maturity. (Mhr. ಅಡೀ, ಅಢೀ, a layer of fruits on a bed of straw). — ಅಡಿಗಬ್ಬು. -ಕಬ್ಬು. = ಅಡುಗಬ್ಬು. (My.). — ಅಡಿ ತೆಗೆ. To take fruits, etc. from under the cover after maturation (S. Mhr.). — ಅಡಿ ಬರು. To come to maturity (S. Mhr.). — ಅಡಿ ಹಾಕು. To put fruits, etc. under straw, etc. to bring them to maturity (S. Mhr.).

ಅಡಿ aḍi. 6. = ಅೞ 2. — ಅಡಿಗಾಲ. -ಕಾಲ. = ಅೞ-. A time of ruin or death (S. Mhr. rare). — ಅಡಿಯಾಸೆ. = ಅೞಯಾಸೆ. Empty hopes (Tĕ.; R.).

ಅಡಿ aḍi. 7. Beating; a blow (T.; see ಅಡಚು 2). — ಅಡಿತಡಿ. dupl. Mutual beating, quarrel (Tĕ., T.; R.).

ಅಡಿ aḍi. = ಅಡಾ. — ಅಡಿಸೇರು. = ಅಡಾಸೇರು. (C.).

ಅಡಿಕ್ aḍik. A short P. p. of ಅಡಿಗು, in ಅಡಿಕ್ಕೊಳ್ಳು, to hide one's self, etc. (My.).

ಅಡಿಕಿಲ್ aḍikil. = ಅಡಕಿಲ್ 1. That upon which another thing is put. **2,** that which subdues or controls (Abh. P. 15, 19). — ಅಡಿಕಿಲ್ಪಾಸು. -ಪಾಸು. A mattress or mat on which a covering is put (Ršv. 4, after 14).

ಅಡಿಕೆ aḍikĕ. 1. (= ಅಟೆ, etc.). Playing, moving, etc. See ತೂಕಡಿಕೆ, ತೋಹಡಿಕೆ.

ಅಡಿಕೆ aḍikĕ. 2. = ಅಡಿಗೆ, etc., ಅಟ್ಕೆ 2. Cooking, boiling, etc. See ನೀರಡಿಕೆ.

ಅಡಿಕೆ aḍikĕ. 3. = ಅಡಕೆ. ಅಡಿಕೆಯ ಮರ (ಘೋಣ್ಟೆ, ಪೂಗ, ಕ್ರಮುಕ, etc. Si. 166. 409). ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು. — ಅಡಿಕೆ ಉಡಿಯಲ್ಲಿ ಹಾಕ ಬಹುದು, ಮರವಾದ ಮೇಲೆ ಕೂಡದು (Prvs.). See ಕಾಡಡಿಕೆ. — ಅಡಿಕೆಕಸ. A low annual plant, growing in rice-fields, Sphaeranthus indicus Linn. (Z.). — ಅಡಿಕೆಬಾೞೆಗಿಡ. A climbing herb, Cucumis pubescens Willd. (St. & Pl.). — ಅಡಿಕೆಮರ. The areca palm. ಅಡಿಕೆಮರದ ಫಲ (ಉದ್ವೇಗ Si. 166). — ಅಡಿಕೆಹೂವು. A common garden flower, Gomphrena globosa Roxb., the globe amaranth (Z.).

ಅಡಿಗ aḍiga. 1. = ಅಟಿಗ, ಅಣಿಗ, ಆಡಿಗ. A suffix denoting one who (or what) moves in, plays with, is employed on, or deals in (Šmd. 239). See ಉಬ್ಬಡಿಗ, ದೇವಡಿಗ, ಪೂವಡಿಗ, ಹೂವಡಿಗ.

ಅಡಿಗ aḍiga. 2. = ಅಡಿಯ. One who has a foot, etc. See ಕಣ್ಣಡಿಗ, ಮೂಱಡಿಗ.

ಅಡಿಗು aḍigu. = ಅಡಗು 1. ಅಂಜಿ ಅರಣ್ಯದೊಳಗೆ ಅಡಗಿದ ಕಾರಣ (B. 5, 51). See ಅಡಿಕ್.

ಅಡಿಗೆ aḍigĕ. = ಅಡಗೆ, ಅಡಿಕೆ 2, etc., ಅಡುಗೆ. Cooking, dressing, boiling; — maturing (see ಅಡಿ 5); — that has been cooked, dinner (My.); — a chemical preparation (ಪಚಿ, ಪಾಕ Si. 388). ಅಟ್ಟಲ್ ಪಟ್ಟ ಅಡಿಗೆ (313. 314). ಕೆಮ್ಪಾದ ಸೀಸದ ಅಡಿಗೆ (ಸಿನ್ದೂರ, ನಾಗಸಮ್ಭವ, ಚನ್ದ್ರಪುಡಿ 334). ಅಟ್ಟ ಅಡಿಗೆಯ ಉಣಲಿಲ್ಲ (Dp. 4). ಅಟ್ಟ ಅಡಿಗೆಯ ರುಚಿಯನು ಹುಟ್ಟು ತಾ ಬಲ್ಲದೇ? (Sp.). ಅಡಿಗೆಯ ಗುಣ ಸಾಱಿನಲ್ಲಿ ನೋಡು, ಮಡಿಗೆಯ ಗುಣ ಫಲದಲ್ಲಿ ನೋಡು. — ತೀರಿದ ಅಡಿಗೆ ತಿರಿಗಿ ಬಯಸಿದರೆ ಬನ್ದೀತೇ? (Prvs.). See ಹಿಟ್ಟಡಿಗೆ. — ಅಡಿಗೆಕಲ್ಲು. An artificial gem (My.). — ಅಡಿಗೆಬಟ್ಟ. A male cook (My.). — ಅಡಿಗೆಮನೆ. A kitchen (ರಸವತಿ, ಪಾಕಸ್ಥಾನ, etc. Si. 308). — ಅಡಿಗೆ ಮಾಡು. To cook, etc. ಅಡಿಗೆ ಮಾಡಿದ ಅನ್ನವು (Si. 241). ಮಡದಿ ತಾ ಚಲುವಾಗಿ ಅಡಿಗೆ ಮಾಡುವಳು (Dp. 148). ಅಡಿಗೆ ಮಾಡುವದಕ್ಕಾಗಿ ಕಟ್ಟಿಗೆಗಳನ್ನು ಆರಿಸಿತನ್ದು (B. 4, 223). See Prv. s. ಬತ್ತ 1. — ಅಡಿಗೆ ಮಾಡುವವ. A male cook (ಗುಣ, ವಲ್ಲವ, ಸೂಪಕಾರ G.). ಅಡಿಗೆ ಮಾಡುವವನ ಮಕ್ಕಳು ಉಪವಾಸ ಬಿದ್ದಾರೋ? (Prv.). — ಅಡಿಗೆ ಮಾಡುವವಳು. A female cook (B. 5, 285). — ಅಡಿಗೆ ಮಾಡುವಿಕೆ. Cooking (Si. 388). — ಅಡಿಗೆಯ ಒಲೆ. A fire-place (ಅಧಿಶ್ರಯಣಿ, ಅಶ್ಮನ್ತ, ಚುಲ್ಲಿ G.). — ಅಡಿಗೆಯ ಮನೆ. = ಅಡಿಗೆಮನೆ. (ಮಹಾನಸ G.). — ಅಡಿಗೆಯವ. -ಅವ. A male cook (ಬಾಣಸಿಗ Bhn. 53; ಸೂಪಕಾರ, ವಲ್ಲವ, etc., ಬಾಣಸಿಗ Si. 308; ಸೂದ 430). ಭೂಪರ್ಗಳ ಅಡಿಗೆಯವಂ (ಸೂಪಕಾರ, ವಲ್ಲವ, etc. Mr. 269). — ಅಡಿಗೆಯವಳು. -ಅವಳು. A female cook (B. 5, 283). — ಅಡಿಗೆಯಾಗು. -ಆಗು. To be cooked, etc. ಪೂರ್ಣ ಅಡಿಗೆಯಾದರೆ ಬೆಲ್ಲವು ಆಗುವದು (B. 3, 46). ಅಡಿಗೆಯಾಗಿ ಆದೆ (4, 57). — ಅಡಿಗೆಯಿೞ. -ಇೞ. (Anything) to be taken from the fire when properly boiled (My.). — ಅಡಿಗೆಯಿೞಸು. -ಇೞಸು. To precipitate by boiling. ಪೆಟ್ಲುಪ್ಪು ಮುನ್ತಾದ ಅಡಿಗೆಯಿೞಸಿದ ಕೃತಿಮುಲವಣವೂ ಬಿಡಾಲಲವಣವೂ (ಪಾಕ್ಯ, ಬಿಡ Si. 312). 2, to take things from the fire when they are properly boiled (My.). — ಅಡಿಗೆಸಾಮಾನ. Materials for cooking (B. 5, 125; My.). 2, cooking utensils (C.). — ಅಡಿಗೆಸಾಲೆ. A kitchen (ರಸವತಿ, ಮಹಾನಸ, etc. Si. 308). ಅಡಿಗೆಸಾಲೆಗೆ ಅಧಿಕಾರಿಯಾದವನು (ಪೌರೋಗವ 308).

ಅಡಿದಿ aḍidi. = ಅಡದಿ. (My.).

ಅಡಿಮೆ aḍimĕ. The state of being at the bottom or low down; slavery. (Sd.; T., Br.).

ಅಡಿಯ aḍi-a3. = ಅಡಿಗ 2. See ಕಣ್ಣಡಿಯ. **2,** he who is in a low position: a slave (Sd., Tĕ.; T. ಅಡಿಯಾನ್).

ಅಡಿವಿ aḍivi. = ಅಡವಿ, etc. (My.). — ಅಡಿವಿಗಿಚ್ಚು. -ಕಿಚ್ಚು. = ಅಡವಿಗಿಚ್ಚು. (S. Mhr.). — ಅಡಿವಿಗೆಣಸು. A kind of yam. ಕೂಲಿಗೆ ಬರುವದಿಲ್ಲೆನ್ದು ಹೇೞದವನು ಹೊಟ್ಟೆಗೆ ಅಡಿವಿಗೆಣಸು ಮುನ್ತಾದ ಆಹಾರವ ಹುಡುಕುವದಕ್ಕೆ ತಿರಗ ಬೇಕಾದೀತು (B. 5, 99). — ಅಡಿವಿಬೆಕ್ಕು. A jungle cat (B. 5, 30. 64). — ಅಡಿವಿಬೆಣ್ಡೆ. = ಅಡವಿಬೆಣ್ಡೆ. (R.).

ಅಡಿವು aḍivu. = ಅಡಹು. (My.).

ಅಡಿವೆ aḍivĕ. = ಅಡಿವಿ. (My.).

ಅಡಿಸು aḍisu. To cause to cook, etc. (Bp. 57, 35. C.). See ನೀರಡಿಸು & ತರ್ಪಣ.

ಅಡು aḍu. 1. = ಅಟ್ಟು 9. P. p. ಅಟ್ಟು (Šmd. 283; see ಅಟ್ಟು 10). To cook; to boil; to dress; to prepare a

meal; to prepare; to mature (ಪಚನ Šmd. Dh.; C.; T., M., Tu.; Tĕ. ವಣ್ಡು; *cf.* ಅಟ್ಟಿ 2). ಅಟ್ಟ ಕೂಟ್ (Šmd. I). ಭಕ್ಷ್ಯವನ್ ಅಡುವವನು (ಆಪೂಪಿಕ, ಭಕ್ಷ್ಯಕಾರ, etc.); ಮಡಕೆಯಲಿ ಅಟ್ಟ ಶಾಕವು (ಉಖ್ಯ, etc.); ಚೆನ್ನಾಗಿ ಅಟ್ಟ ಮಾಡುದ (ಪ್ರಣೀತ, etc.); ರಸವಿಲ್ಲದ ಹಾಗೆ ಅಟ್ಟ ಮಾಡುದ (ಪಿಚ್ಛಿಲ, etc.); ಎಣ್ಣೆಯಲ್ಲಿ ಹಿಟ್ಟನ್ ಅಡುವ ಬಾಳಲಿ (ಖರುಜೀಷ, etc. Nr.). ಅಟ್ಟು ವಾಸನೆ ಕಟ್ಟಲ್ ಪಟ್ಟದು (ಭಾವಿತ, etc. Si. 314). ಅಟ್ಟಡಗು (ಉಖ್ಯ Hlâ.). ಭಾಣ್ಡದೊಳ್ (ಅಡಗನ್) ಅಡಲ್ಕೆ (ಉಖ್ಯ Mr. 217). ಈ ಸೊಪಚನ ಇನ್ದು ಅಡುವುದು ಅಡಗು, ಅಕಟ! (Bp. 57, 2). ಅಟ್ಟ ಪಾಯಸದಲ್ಲಿ ಕೆರಾ ಹೆಟ್ಟಿದ ಹಾಗೆ.— ಅಟ್ಟ ಮೇಲೆ ಒಲೆ ಉರಿಯಿತು, ಕೆಟ್ಟ ಮೇಲೆ ಬುದ್ಧಿ ಬನ್ತು.— ಅಟ್ಟಕ್ಕುವವನಿಗೆ ಹೆಣ್ಡತಿ ಆಗ ಬೇಡ, ಮೊಟ್ಟೆ ಹೊಱುವವನಿಗೆ ಆಳು ಆಗ ಬೇಡ.— ಅಟ್ಟು ಉಪ್ಪೋಽದಕ್ಕಿನ್ತ ತಿರಿದು ಉಪ್ಪೋದೇ ಲೇಸು.— ಅಟ್ಟು ಉಪ್ಪೋದು ಅಱು ಕೋಟಲೆ, ತಿರಿದು ಉಪ್ಪೋದು ಪರಮಸುಖ.— ಅಟ್ಟೇ ಇಲ್ಲವೆನ್ದರೆ ಕೊಟ್ಟಿಗೇಲಿ ತನ್ದಿಕ್ಕು ಅನ್ದ ಹಾಗೆ (Prvs.). See Prv. s. ಕೆಡು. — ಅಡು ಅಡು. rep. ಅಟ್ಟು ಅಟ್ಟು ಪ್ರಾಣ ಹೋದರೂ ಹೊಟ್ಟೇ ಹಸಿವು ನಿಲ್ಲಲೇ ಇಲ್ಲ (Prv.).

ಅಡು aḍu. 2. = ಅಡ 2, ಅಡಿ 5. Cooking, etc. — ಅಡುಗಬ್ಬು. -ಕಬ್ಬು. = ಅಡಿಗಬ್ಬು. Fuel (ಇನ್ಧನ, ಸಮಿತ್ತು, etc. Nr.; ಇನ್ಧನ, ಕಾಷ್ಠ, etc. Mr. 48). ಮಾರಯ್ಯನ್ ಅಡುಗಬ್ಬುಗಳನ್ ಅಡಕುವನು (Bp. 9, 41). ತನ್ನ ಅಡುಗಬ್ಬುಗಳಿಗೆ ಉರಿ ಹಚ್ಚಿಸುತ (16, 20). ಕೆಲವು ಅಡುಗಬ್ಬನ್ ಆಯ್ದು ಒಟ್ಟಿ (18, 28). See also Bp. 44, 21. — ಅಡುಗರ್ಬು. -ಕರ್ಬು. = ಅಡುಗಬ್ಬು. (V. 14, after 27). — ಅಡುಗೂಲಜ್ಜ. -ಕೂಲಜ್ಜ. = ಅಡುಗೋಲಜ್ಜ. A respectable woman who cooks for strangers and travellers. ಅಡುಗೂಲಜ್ಜಿಯ ಮನೆಯಲ್ಲಿ ಅಟ್ಟಡಿಗೆ ಆಯತವಾಗಿರುವದು (Prv.). — ಅಡುಗೂಟ್. -ಕೂಟ್. Boiled rice (Šmd. 204). — ಅಡುಗೂಳಿಗ. -ಅವ. A cook (Č. Bp. 47, 42). — ಅಡುಗೋಲಜ್ಜ. -ಕೋಲಜ್ಜ. = ಅಡುಗೂಲಜ್ಜ. (S. Mhr. rare). — ಅಡುಬಾಣಲೆ. A frying pan (ಪುಷ್ಪಕ, ಅಪ್ಪರೀಷ Nn. 123). — ಅಡೂರು. -ಊರು. N. of a village. See Prv. s. ವಿಡೂರ.

ಅಡು aḍu. 3. (= ಅಡ 6). — ಅಡುಪಾಡು. A piercing or challenging word (ತಿವಿಪಾಟದ ನುಡಿ Bhn. 56).

ಅಡು aḍu. 4. (fr. ಅಡಗು 2). — ಅಡವುಗ್ಗಿ. -ಪುಗ್ಗಿ. Rice mixed with flesh (? Abh. P. 13, 96. 106).

ಅಡುಕು aḍuku. 1. = ಅಡಕು 1. (My.; T., M.).

ಅಡುಕು aḍuku. 2. = ಅಡಕು 2. (My.).

ಅಡುಗೆ aḍugĕ. = ಅಡಿಗೆ. (My.).

ಅಡುಪಾಯ (aḍa6-upâya). A secondary or extra means (? Bh. 3, 6, 23; 3, 13, 19).

ಅಡುಮ್ಬು aḍumbu. (T. ಅಡಮ್ಬು, M. ಅಡಮ್ಬು, ಅಡುಮ್ಪು). — ಅಡುಮ್ಬುಬಳ್ಳಿ. A creeping plant, Ipomoea biloba Forsk. (St. & Pl.).

ಅಡುವಳ aḍu2-vaḷa. (Šmd. 234). = ಅಡಬಳ 1. A cook.

ಅಡುಸು aḍusu. Clay, mud (My.; Tĕ; T. ಅಱುಕ್ಕು, ಅಱುವ, ಅಯಱು, filthy, slippery ground, dirt; ಅಳಱು, ಅಱು, ಚೇಱು, mud; Tĕ. ಅಸಲು, mud; Tu. ಅಡಕ, an unclean place; *cf.* ಅಱಲ್ 2; ಅಡೆ 11).

ಅಡೆ aḍĕ. 1. = ಅರೆ 1, ಒಡೆ 4. If; when; to. ಉಸುರುವಡೆ (Bp. 1, 17). ಕೀರ್ತಿಸುವಡೆ (1, 34). ಊಹಿಪಡೆ (1, 63). ಕರುಣಿಪಡೆ (2, 1). ಸಲಹುವಡೆ (2, 2). ಆದಡೆ (9, 17). ಇತ್ತಡೆ (9, 21). ಇಲ್ಲದಡೆ, ಅಱದಡೆ (9, 24). ಪರಿಕಿಸುವಡೆ (3, 64). ಪರಿಕಿಪಡೆ (22, 64). ಪೇಱಿದಡೆ (10, 7). ಹೇಱಿದಡೆ (11, 5). ಕಾವಡೆ (13, 61). ಅಪ್ಪಡೆ (11, 7). ಸೂಚಿಮುಖಮಂ ಕೀಲಿಸುವಡೆ ಅರಿದು ಎನಿಸಿ ದಟ್ಟಯ್ಸುಪ ತಮಸ್ತನ್ಧದೊಳ್ (3, 30). ಕೊಡುವಡೆ ಎಮಗೆ ಇಲ್ಲ (23, 8). ಇರ್ದಡೆ (Čt. II, 122). ನೋಟ್ಟಿಡೆ (II, 76). ಭಾವಿಪಡೆ (II, 29. 80). ಪೇಟ್ಟಿಡೆ (II, 56). ಒರವಡೆ (II, 88). ತಪ್ಪು ಉಳ್ಳಡೆ (Mr. 3). See Bp. 22, 65. 66; 23, 13; 24, 75; 49, 18; 53, 6. 13; 56, 1; 58, 46.

ಅಡೆ aḍĕ. 2. (= ಅಱ 6). See ಪೊಟ್ಟಿಡೆ, ಸವಳ್ಳಡೆ.

ಅಡೆ aḍĕ. 3. To fill, to make full (ಪೂರಣಗೆಯ್ Šm. 91; *cf.* ಅಡಱು 1 & ಅಡೆ 5). — ಅಡೆವೊತ್ತು. ಅಡೆ (*i. e.* ಅಡೆಯ) -ಪೊತ್ತು. To be fully kindled, to blaze (Abh. P. 11, 154).

ಅಡೆ aḍĕ. 4. = ಅಱ 3. To strike, or throw, with the finger (ಅಂಗುಲಿಪ್ರಹರಣ Šmd. Dh.; see ಅಡಱು 2).

ಅಡೆ aḍĕ. 5. = ಪಡೆ 1. To obtain, to get, to gain, to have;—to be obtained, to come to hand (My.; T., M.; T. also ಅಮೈ; see s. ಅಯ್ 4). ವೇಲಾನುಕೂಲಕ್ಕೆ ಅಡವ ರಾಗಂಗಳು (Bp. 26, 68). **2,** to be enclosed, barred, shut up, choked (T.); to preserve, pickle, season fruits with salt (T.);—to shut, lock, obstruct, close up, shut up, enclose, confine, imprison, shut in, stop the passage (T.).

ಅಡೆ aḍĕ. 6. Trust (ನೆಮ್ಮುಗೆ Šm. 91; *cf.* ಅಂಕೆ 2, No. 3; ಅಡರ್ಪು).

ಅಡೆ aḍĕ. 7. That is covered or hidden (ಪ್ರಚ್ಛನ್ನ Šm. 91; *cf.* ಅಡಗು 1, ಅವಿ 1).

ಅಡೆ aḍĕ. 8. = ಅಡ 7, ಅಡಿ 4. The piece of wood on which the five artisans put the article which they happen to operate upon (ಪಂಚಕಾರುಕಕರ್ಮದಾರು Šmd. Dh.; T. ಅಡೈ, an anvil). **2,** = ಅಣ್ಡೆ 1, a support, a staff to support (ಆನಿಕೆ, ಆಧಾರದ ಕೋಲು G.; *cf.* ಅಂಕೆ 2). See ಪಟ್ಟಡೆ. — ಅಡೆಗಲ್. -ಲ್ಲು. -ಕಲ್. = ಅಡಿಗಲ್ಲು. An anvil (ಧಕ್ಕ Mr. 383; C.; M., T.; T. also ಅಡೈಯಲ್, ಅಡೈಗುಱಡು). ಅವಳ ಕೂದಲು ಅಡೆಗಲ್ಲಾಗಿದೆ, she has a bald head (My.). — ಅಡೆಯ ಮರ. = ಅಡೆ. ಅವುದಾನೊನ್ದು ಮರದ ಮೇಲೆ ಮರನನ್ ಇರಿಸಿ ಕೆತ್ತಲು ಪಟ್ಟುದು ಆ ಅಡೆಯ ಮರನು ಉದ್ಘನಮ್ ಎನಿಸಿಗು (Nr.; *cf.* Si. 399).

ಅಡೆ aḍĕ. 9. = ಅಣ್ಡಿಗೆ 1, ಅಣ್ಡೆ 3. A sticky, clotty mass, a lump, as of dates, tamarind, sugar, hair, etc. (My.; Tĕ.; T. ಅಮೈಯಲ್, a ball of clay, etc.). — ಅಡೆಗಟ್ಟು. -ಕಟ್ಟು. To become a sticky mass, to be clotted or matted together, as the hair, etc. (My.; Tĕ.). — ಅಡೆಗಲ್ಲು. -ಕಲ್ಲು. A stone-like mass of unclean hair (S. Mhr.).

ಅಡೆ aḍĕ. 10. Cowdung (ಗೋಮಯ Kk. 62; ಗೋಮಯ, ಸಗಣ Šm. 33. 91; Tu. ಅಪ್ಪಿ). — ಅಡೆಕುಣಿ. A pit to fill cowdung in (C.).

ಅಡೆ aḍĕ. 11. = ಅಡಿ 3. — ಅಡೆವಣಿಗೆ. -ಮಣಿಗೆ. = ಅಡಿವಣ, etc. A foot-print in mud (ಕೆಸಱೊಳ್ ಆದ ಪಜ್ಜೆ Šmd. II). — ಅಡೆವಣೆ. -ಮಣೆ (=ಮಣಿ?). = ಅಡೆವಣಿಗೆ. (ಕೆಸಱೊಳ್ ಆದ ಪಜ್ಜೆ Šm. 65).

ಅಡೆ aḍĕ. 12. A kind of thin bread or cake of rice flour (My.; T.; Tĕ. ಅಟ್ಟು). — ಅಡೆಹಬ್ಬ. Cake-feast, a feast of women in honor of Lakshmî (My.; Tĕ. ಅಟ್ಲ ತದ್ದೆ).

ಅಡೆ aḍĕ. 13. The border, *i. e.* the unwoven threads, of a cloth or blanket (My.);—border.

— ಅಡೆ ಕಟ್ಟು. To interknit the adĕ with colored or uncolored threads (My.). — ಅಡೆಪಟ್ಟಿ. A certain portion of a native cart (C.).

ಅಡೆ adĕ. 14. = ಅಡಿ 5. — ಅಡೆ ತೆಗೆ, ಅಡೆ ಬರು, ಅಡೆ ಹಾಕು (My.).

ಅಡೆ adĕ. 15. = ಅಡ 10, ಎಡೆ 1. See ಇಟ್ಟಡೆ. — ಅಡೆಗೆಡಹು. -ಕೆಡಹು. = ಎಡೆಗೆಡಹು. To throw to the ground (Bh. 8, 22, 46). — ಅಡೆದಾಣ. -ತಾಣ. Place and place, every place (Râm. 4, 6, 19).

ಅಡ್ಕೆ adkĕ. — ಅಡ್ಕೆಬೀಯಿಬಳ್ಳಿ. A woody climber, climbing and rooting on the stems of trees, Pothas scandens Lin. (St. & Pl.; Tu. ಅಡಿಕೆಬೂರು-, ಅರ್ಕೆ-).

ಅಡ್ಡ adda. 1. = ಅಡ 6 q. v., etc., ಅಡ್ಡಾ, ಅಡ್ಡೆ 3. The state of being across, etc. (C.; Tu, Tĕ.; T., M. ಅಟ್ಟ). ಬಟ್ಟೆಯೊಳ್ ಅಡ್ಡ ಮಲಗಿ ಇರೆ (Bp. 20, 1). ತನಗೆ ವಾಲ್ಮೀಕದೇವನ್ ಅಡ್ಡಮೆ? (26, 16). ಅವಂಗೆ ಆ ದಹನಲೋಚನನ್ ಅಡ್ಡಮೇ? (41, 27). ಅಡ್ಡಮ್ ಇರೆ ಕಾರ ಕಾರ್ಮುಗಿಲ ಒಡ್ಡಣಂ (Rśv. 6, 5). (ಕುದುರೆಗೆ) ಅಡ್ಡ (ಸುಳಿ) ಮೂಱು ಇರೆ ಸಪ್ಪುದಂ (Mr. 279). — ಅಡ್ಡ ಕಟ್ಟು. 1. = ಅಡಗಟ್ಟು, ಅಡ್ಡಗಟ್ಟು 1. To fasten across, to put across. 2, to thwart; to stop, to arrest; to stand across or in the way. ಆ ಕಲ್ಲು ಅಡ್ಡ ಕಟ್ಟಿದ ತೊಲೆಯ ಮೇಲೆ ನಿನ್ತಿರುವ ಒಬ್ಬ ಉಪ್ಪಾಱನಿಗೆ ಹೋಗಿ ಮುಟ್ಟಿತು (B. 4, 150). — ಅಡ್ಡಕಟ್ಟು. 2. The fastening that workingmen make when putting their dôtra over their shoulder and tie it on the back (S. Mhr.). — ಅಡ್ಡಕಟ್ಟು. 3. = ಅಡ್ಡಕಟ್ಟೆ. A small dam in rice-fields, etc. for watering (My.). — ಅಡ್ಡಕಟ್ಟೆ. = ಅಡ್ಡಕಟ್ಟು 3. (My.; Tĕ.). — ಅಡ್ಡಕಮ್ಬಿ. The kambi (3) carried on the neck (C.). 2, the ornamental colored cross stripes near the ends of a cloth (C.). 3. a metal band (round boxes, etc. My.). — ಅಡ್ಡಕಸಬು. = ಅಡ್ಡಕಸಿಬಿ. A profession or trade contrary to established custom (C.). — ಅಡ್ಡಕಸಿಬಿ. = ಅಡ್ಡಕಸಬು. (C.). — ಅಡ್ಡಕಾಲು. = ಅಡ್ಡಗಾಲು. The leg put out of its regular position in walking (C.). 2, the leg put crosswise as a stumbling-block or obstacle, generally used with the verb ಹಾಕು (C.). — ಅಡ್ಡಕಾಲುವೆ. = ಅಡ್ಡಕಾವಲಿ. A by-channel, a subordinate channel (C.). — ಅಡ್ಡಕಾವಡಿ. The kâvadi carried on the neck (C.). — ಅಡ್ಡಕಾವಲಿ. = ಅಡ್ಡಕಾಲುವೆ. (C.). — ಅಡ್ಡಕೀಲಿ. A bolt which is put or goes transversely (S. Mhr.). — ಅಡ್ಡಕೂಸು. = ಅಡ್ಡಗೂಸು. A child carried transversely or in the arms (not on the hip, S. Mhr.). 2, a child that (at the time of birth) lies across in the womb (C.). — ಅಡ್ಡಕೆಯ್. -ಕೈ. = ಅಡ್ಡಗೆಯ್. The hand or arm placed transversely (C.). — ಅಡ್ಡಕೆಲಸ. Extraordinary work, extra work (My.; B. 5, 285). — ಅಡ್ಡಕೋಲು. Any transverse stick or wooden bar (C.). — ಅಡ್ಡಗಟ್ಟಿಗೆ. -ಕಟ್ಟಿಗೆ. A wooden cross bar (My.). — ಅಡ್ಡಗಟ್ಟು. -ಕಟ್ಟು. 1. = ಅಡ್ಡಕಟ್ಟು 1. (Dp. 63, 2). ಲಿಂಗವನ್ತನ ಬರವಿಗೆ ಅವರುಗಳ್ ಅಡ್ಡಗಟ್ಟಿ ಇರಲು (Bp. 21, 39). — ಅಡ್ಡಗಟ್ಟು. -ಕಟ್ಟು. 2. = ಅಡ್ಡಕಟ್ಟು 3. (My.). — ಅಡ್ಡಗಟ್ಟೆ. -ಕಟ್ಟೆ. = ಅಡ್ಡಕಟ್ಟೆ. (My.). — ಅಡ್ಡಗಲ. -ಅಗಲ. The space or distance across, breadth, width, diameter (ಪರಿಣಾಹ, ವಿಶಾಲತೆ, ತಿರ್ಯಗ್ವಿಶಾಲತೆ Si. 222; C.; Tu. ಅಡ್ಡಗೆಲ). ಅಂಗುಲಿಗಳ ಬನ್ದೊನ್ದಱ ಅಡ್ಡಗಲದ ಪ್ರಮಾಣು ಎಣ್ಟು ಜವೆಯ ಅಳತೆ ಅಕ್ಕುಂ (Mr. 324). — ಅಡ್ಡಗಲು. -ಅಗಲು. = ಅಡ್ಡಗಲ. (ಸೊನ್ನಲಿಗೆ G.). — ಅಡ್ಡಗಾಲ್. -ಲು. -ಕಾಲ್. = ಅಡ್ಡಕಾಲು. (C.). — ಅಡ್ಡಗಾಲಯ್ತುಯ. -ಅಯ್ತುಯ. N. (Bp. 56, 33). — ಅಡ್ಡಗೀಱು. To make a transverse line or a line across (C.). 2, to cross out (C.). — ಅಡ್ಡಗೀಱು. = ಅಡ್ಡಗೀಱು. (S. Mhr.). — ಅಡ್ಡಗೀಟು. A transverse line or a line across (C.). — ಅಡ್ಡಗೀಱು. = ಅಡ್ಡಗೀಟು. (My.). — ಅಡ್ಡಗೂಸು. = ಅಡ್ಡಕೂಸು. (C.). — ಅಡ್ಡಗೆಯ್. -ಗೈ. -ಕೆಯ್. = ಅಡ್ಡಕೆಯ್. (C.). — ಅಡ್ಡಗೆರೆ. = ಅಡ್ಡಗೀಟು. (C.). — ಅಡ್ಡಗೊಮ್ಬು. -ಕೊಮ್ಬು. A cross branch (C.). — ಅಡ್ಡಗೋಡೆ. = ಅಡ-. A transverse wall; a partition wall, a curtain wall (on which sometimes articles are placed; a light put on it uses to flicker on account of the currents of air, and at the same time shines to both sides, C.). ಅಡ್ಡಗೋಡೆಯ ಮೇಲಣ ದೀಪದ ಹಾಗೆ.–ಅವನ ಸಾಕ್ಷಿ ಅಡ್ಡಗೋಡೆಯ ಮೇಲಣ ದೀಪ (Prvs.). — ಅಡ್ಡಂಕೆ. -ಅಂಕೆ. A figure or figures written from left to right across a page (C.). 2, the total (put under a number of perpendicular figures, My.). — ಅಡ್ಡಚಾಟು. A cover or shelter that is between, *e. g.* a tree that shelters a person from rain (My.). ಅಡ್ಡಚಾಟು ಹಿಡುಕೊಳ್ಳು, to take shelter (C.). — ಅಡ್ಡಚೌಕ. A frame which is broader than it is high; a cloth which is broader than it is long (My.). 2, the linga box suspended from the neck so that it is to one side of the chest (S. Mhr.). — ಅಡ್ಡಜಾತಿ. = ಅಡಜಾತಿ. (C.; B. 4, 193). — ಅಡ್ಡಂಚು. -ಅಂಚು. = ಅಡ್ಡಕಮ್ಬಿ No 2. (C.). — ಅಡ್ಡಡಿ. -ಅಡಿ. The breadth of the foot (C.). 2, = ಅಡ್ಡಕಾಲು No. 1. (C.). — ಅಡ್ಡಣಿ. -ಅಣಿ. The woof that crosses the warp in a loom (B.). — ಅಡ್ಡತರ. A transverse manner or position (Rśv. 6, after 11). ಅಡ್ಡತಲೆ. = ಅಡ್ಡದಲೆ. An ill-formed head (C.). — ಅಡ್ಡ ತಾಕು. 1. To touch or hit laterally (C.). 2, = ಅಡ್ಡ ತೊಡರು. (My.). — ಅಡ್ಡತಾಕು. 2. A small field that touches or crosses the boundary of a larger one (My.). — ಅಡ್ಡತಿಡ್ಡ. dupl. = ಅಡ್ಡತಿಡ್ಡಿ, ಅಡ್ಡಾತಿಡ್ಡಿ, ಅಡ್ಡಾದಿಡ್ಡಿ, ಅಡ್ಡಾದುಡ್ಡಿ. Awkwardness, clumsiness; perverseness, impropriety; awkwardly, etc. (My.). ಕಾಡ ಕೋಣಗಳು ಅಡ್ಡತಿಡ್ಡ ನಡೆದಾಗ್ಯೂ (B. 3, 24). ಎಮ್ಮೆ ಕೋಣಗಳ ನಡಿಗೆ ಅಡ್ಡತಿಡ್ಡವಾಗಿ ಇದ್ದಾಗ್ಯೂ (B. 5, 21). — ಅಡ್ಡತಿಡ್ಡಿ. = ಅಡ್ಡತಿಡ್ಡ, etc. (C.). — ಅಡ್ಡ ತಿರುವು. To turn aside; to give a crosswise turn (C.). — ಅಡ್ಡ ತೊಡರು. To contravene, to thwart, to interfere with. ನನಗೆ (ಅಥವಾ ನನ್ನ ಕೆಲಸಕ್ಕೆ) ಅಡ್ಡ ತೊಡರಿದನು (My.). — ಅಡ್ಡ ತೊಲಗು. To get out of the way (My.). — ಅಡ್ಡದಣ್ಡಿ. A scale-beam (My.). — ಅಡ್ಡದಣ್ಡಿಗೆ. A cross beam, the roller over which the warp passes (R.). 2, a scale-beam (C.). 3, the bamboo pole (or poles) across a palankeen, etc. to carry it (C.). 4, = ಅಡ್ಡವಲ್ಲಕಿ (My.). 5, a pole set horizontally in two opposite walls and used as a shelf (My.). — ಅಡ್ಡದಣ್ಡೆ. The width of the inner round opening of a grain-pit (S. Mhr.). — ಅಡ್ಡದಬ್ಬೆ. A piece of slit bamboo put or to be put crosswise (C.). — ಅಡ್ಡದಲೆ. = ಅಡ್ಡತಲೆ. (C.). — ಅಡ್ಡದುರುಬು. -ತುರುಬು. A turubu put on one side of the head (C.). — ಅಡ್ಡದೊಲೆ. -ತೊಲೆ. A transverse beam (C.). — ಅಡ್ಡದೋಱು. -ತೋಱು. = ಅಡದೋಱು. To appear horizontally. ರೇಖೆ ಎರಡು ಅಡ್ಡದೋಱೆ (o. r. -ಅಡದೋಱಿರಲು) ಬೇಳೆ (*i. e.* =; Mr. 356). — ಅಡ್ಡದೋಳ್. -ತೋಳ್. An arm put across or crosswise (C.). — ಅಡ್ಡನಗೆ. A side-laugh: a half-suppressed derisive laugh (C.). — ಅಡ್ಡನಾಮ. A surname, or a family-name (C.; Mhr. ಅಡನಾಂವ). 2, a sectarian cross-mark on the forehead made with sandal by Smârtas (C.). — ಅಡ್ಡನಾಲಿಗೆ. A lying tongue (C.). 2, an opposing tongue: contradiction (My., in -ಹಾಕು). — ಅಡ್ಡ ನಿಲುವು.

Breadth and height (or length; C.). 2, ಅಡ್ಡನಿಲುವು. = ಅಡ್ಡಚೌಕ. (My.). — ಅಡ್ಡನುಡಿ. Contradiction (ವಿಪ್ರಲಾಪ, ವಿರೋಧೋಕ್ತಿ Nr.; My.). — ಅಡ್ಡಪಂಕ್ತಿ. A row of people at dinner that forms a right angle with another row previously formed (C.). — ಅಡ್ಡಪಟ್ಟಿ. The upper or lower part of a door or window frame (C.); a small cross beam (My.). 2, a cross stripe (C.). ಚಿರ್ಚುಗಳ ಮೆಯ್ಮೇಲೆ ಊದೀ ಬಣ್ಣದ ಅಡ್ಡಪಟ್ಟಿಗಳು (B. 3, 99; 5, 255). — ಅಡ್ಡಪಲ್ಲಕಿ. A palankeen carried transversely on account of pomp (C.). — ಅಡ್ಡ ಪೋಗು. To go crosswise, transversely, or horizontally. ಅಡ್ಡ ಪೋಪಪಾತನು (ತಿರ್ಯಕ್ಕು Nr.). — ಅಡ್ಡ ಬರ್. -ರು. To come as an obstacle, to come or be in the way. ಸಮುದ್ರದ ವಕ್ರತೆ ಹಡಗಕ್ಕೂ ನಮ್ಮ ದೃಷ್ಟಿಗೂ ನಡುವೆ ಅಡ್ಡ ಬರುತ್ತದೆ (B. 4, 69). ಒನ್ದು ಹಳ್ಳ ಅಡ್ಡ ಬನ್ತು (5, 63). — ಅಡ್ಡ ಬೀೞ್. -ೞು. To fall across; to become an impediment, to hinder (Bp. 2, 3; My.). ಉರುನದಿ ಅಡ್ಡ ಬಿದ್ದೊಡೆ (32, 4). 2, to fall before (one), to prostrate (My.). ಮಾನವತಿಗೆ ಅವನ್ ಅಡ್ಡ ಬಿದ್ದು (52, 19). — ಅಡ್ಡಬೆಲಗು. A beam that is put across the slopes of two opposite walls. (B. 4, 122). — ಅಡ್ಡಮರ. A wooden cross bar (to fasten doors, My.). — ಅಡ್ಡಮಾತು. A word that interrupts a speech or deviates from its intent, a word out of place; gainsaying; an evasion (C.). — ಅಡ್ಡಮಾರ್ಗ. A cross way;—a by-path (C.). 2, a wrong way (C.). — ಅಡ್ಡಮುಡಿ. A knot of hair put to one side of the head (ಪಕ್ಷ Mr. 320). — ಅಡ್ಡಮೊಗ. An averted face (C.). ನೋಡಲಾಗದು, ಅಲ, ಪಾತಕರನ್ ಎನುತ, ಅಡ್ಡ ಮೊಗವಿಟ್ಟು (Bp. 52, 46). — ಅಡ್ಡ ಮೋಱೆ. = ಅಡ್ಡ ಮೊಗ. (C.). — ಅಡ್ಡಮ್ಪಾಱು. -ಱ್. To fly across one's path. ತೊಡರಿ ಅಡ್ಡಮ್ಪಾರ್ವ ಜೀವಿಗಳ ಎಡೆಗೆ (Bp. 38, 9). — ಅಡ್ಡಮ್ಬರಿಯಿಸು. To cause to run in a crosswise manner (Rśv. 6, after 11). — ಅಡ್ಡವರಿ. -ಬರಿ. A transverse flank (as of an elephant, (Rśv. 6, after 11). — ಅಡ್ಡವಲಗೆ. -ಪಲಗೆ. A cross plank (Bp. 21, 27). — ಅಡ್ಡವಾಗು. -ಆಗು. To become or be cross, transverse, or awry. ಅಡ್ಡವಾಗಿ, transversely, cross, broadwise, horizontally, sideways, awry, obstructively (ಸಾಚಿ, ತಿರಸ್ಸು, ತಿರ್ಯಕ್ Si. 470. 472). ಅಡ್ಡವಾಗಿ ನಡೆಯುವವನು (ತಿರ್ಯಕ್ಕು 361). ಬಾಗಿಲ ಕೆಳಗಡೆ ಹೊಸ್ತಲ ಬೞಿ ಅಡ್ಡವಾಗಿ ತುೞಿಯುವದಕ್ಕೆ ಹಾಕಲ್ ಪಟ್ಟು ಇರುವ ಮೆಟ್ಟುಹಲಿಗೆ (ಶಿಲೆ 110). ಕೆಯ್ಗಳಿನ್ದ ಒಡಗೂಡಿದ ಅಡ್ಡವಾಗಿ ಚಾಚಲ್ ಪಟ್ಟ ತೋಳುಗಳೆರಡಱ ಮಧ್ಯಪ್ರದೇಶ (ವ್ಯಾಮ 212). ವಕ್ಷಸ್ಥಲದಲ್ಲಿ ಜನಿವಾರದ ಹಾಗೆ ಅಡ್ಡವಾಗಿ ಕೊರಳ ಮೇಲಿನ್ದ ಹಾಕಿ ಕೊಳ್ಳಲ್ ಪಟ್ಟ ಹುಪ್ಪಿನ ಹಾರ (ವೈಕಕ್ಷಕ 230). ಈಚಿನವರಿಗೆ ಅಡ್ಡವಾಗಿ ಇರುವನ್ತೆ ಸುತ್ತಿ ಕೊಳ್ಳಲ್ ಪಟ್ಟದು (ವೇಷ್ಟಿತ, etc. 278). — ಅಡ್ಡವಿಡು. -ಇಡು. To put an obstruction, to oppose (C.). — ಅಡ್ಡವಿಡುವಿಕೆ. -ಇಡುವಿಕೆ. Obstruction, etc. (ವ್ಯತ್ಥಾನ, ಪ್ರತಿರೋಧ Si. 437). — ಅಡ್ಡವಿಱಿ. -ಇಱಿ. To gore sideways, to give a side-blow. ಅಡ್ಡವಿಱಿದ ಆನೆ (ಪರಿಣತ Hlâ.). — ಅಡ್ಡವೊಱೆ. -ಪೊಱೆ. = ಅಡ್ಡ ಹೊಱೆ. (ಎದಂತಿಕೆ Mr. 213). — ಅಡ್ಡಸೆಱಗು. The end of a female's cloth that is put across the breast, the left shoulder, and from there over the head to the right (C.). — ಅಡ್ಡಸಾಲ್. -ಲು. = ಅಡ್ಡಪಂಕ್ತಿ (C.). 2, a transverse line or row (C.). 3, a transverse furrow (C.). — ಅಡ್ಡ ಸುೞಿ. 1. To pass by one so as to get only a glimpse of him (C.). — ಅಡ್ಡ ಸುೞಿ. 2. A cross knot in timber (My.). — ಅಡ್ಡ ಹಚ್ಚು. To put or apply horizontally, as the sectarian mark (ಅಡ್ಡನಾಮ) on the forehead (C.). — ಅಡ್ಡ ಹರವು. To spread out crosswise (B. 4, 122). — ಅಡ್ಡ ಹಾಕು. To put crosswise (C.). 2, to put before, to put children before a guru's feet to obtain a blessing for them, or to put criminals before a king's feet to obtain pardon for them (C.). — ಅಡ್ಡಹಾದಿ. = ಅಡ್ಡ ಮಾರ್ಗ. (C.). — ಅಡ್ಡ ಹಾಯ್. = ಅಡ-. To pass by (C., *e. g.* ಒಬ್ಬನ ಮುನ್ದೆ-). 2, to thwart (*e. g.* ಅವನಿಗೆ ಅಡ್ಡ ಹಾಯ್ದನು, My.). — ಅಡ್ಡ ಹೆಸರ್. -ರು. = ಅಡ್ಡನಾಮ No. 1. (C.; ಅಸ್ಪದ Cb.). — ಅಡ್ಡ ಹೇಱು. To put crosswise upon (B. 4, 122). — ಅಡ್ಡ ಹೊಱೆ. A lengthy load or burden that is carried crosswise (on the neck, shoulder, or head, My.). — ಅಡ್ಡ ಹೊಱೆಕಮ್ಬಿ. A pole or bamboo laid over the shoulder or neck for carrying two burdens (ವಿಹಂಗಿಕೆ, etc. Nr.). — ಅಡ್ಡಳತೆ. -ಅಳತೆ. Breadth-measure (C.). — ಅಡ್ಡಾಗು. -ಆಗು. To become horizontal in position, to lie down (S. Mhr.; B. 4. 155). — ಅಡ್ಡಾಡು. -ಆಡು. To play sideways, *i. e.* to walk backwards and forwards, to promenade; to walk about (C.; B. 2, 46; 3, 47. 67. 77; B. 4, 169; Tu.). — ಅಡ್ಡಾನ್. -ನು. -ಆನ್. To recline, to lean on (C.);—to form a bar (J. 4, 38). — ಅಡ್ಡಿಕ್ಕು. -ಇಕ್ಕು. To put across; to put before (= ಅಡ್ಡ ಹಾಕು, C.);—to put up, as an umbrella (C.). — ಅಡ್ಡೆಸಗು. -ಎಸಗು. To make hostile efforts (My.). — ಅಡ್ಡೆಸುಗೆ. -ಎಸುಗೆ. Throwing a stone, etc. with the hand laterally (My.). 2, = ಅಡ್ಡೇಟು. (My.). — ಅಡ್ಡೇಟು. -ಏಟು. A shot beside the mark (My.). ಅಡ್ಡೇಟು ತಗಲಿದರೆ ಬಡ್ಡನಾದರೂ ಗೆದ್ದಾನು (Prv.). — ಅಡ್ಡೇಟುಗಾಱ. -ಏಟುಗಾಱ. A man who is a bad shot (My.). — ಅಡ್ಡೊಕ್ಕಲ್. -ಲು. -ಒಕ್ಕಲ್. A new tenant, a fresh comer (My.). 2, a tenant who has more than one landlord (My.). — ಅಡ್ಡೊಱಗು. -ಒಱಗು. To lie on one side (C.). — ಅಡ್ಡೋಟ. An indirect course (S. Mhr.). — ಅಡ್ಡೋಡು. To run in an eccentric, not direct course (S. Mhr.).

ಅಡ್ಡ **aḍḍa. 2** (= ಅಡವು 1, No. 2). Abundance, used of rain. — ಅಡ್ಡಮೞೆ. A heavy rain (C.; T. ಅಡೈಮೞೈ, M. ಅಡೆಮೞೆ, ಅಡಮ್ಮೞೆ, incessant rain).

ಅಡ್ಡ **aḍḍa. 3.** Seven duḍḍus, two aṇas and four pays (My.; Tê. ಅಡ್ಡಗೆ, ಅಡ್ಡುಗೆ). **2,** a weight representing the eighteenth portion of a varaha (My.; Si. 328). ಅಡ್ಡಾದುಡ್ಡಿಗೆ ಮೂಱಾದರೆ ದುಡ್ಡು ಅಡ್ಡಕ್ಕೆ ಎಷ್ಟು? (Prv.).

ಅಡ್ಡಗಿಸು **aḍḍagisu.** = ಅಡ್ಡಯಿಸು. (My.).

ಅಡ್ಡಣ aḍḍaṇa. = ಅಡ್ಡನ. A shield (ಹಲಗೆ Ct. II, 38; Kk. 40; Sm. 43; ಪಲಿಗೆ Ct. I, 11). ಅಡ್ಡಣಮ್ ಒಡ್ಡಿದ ಕಾಮುರ್ಗಿಲ ಒಡ್ಡಣಂ (Rśv. 6, 54).

ಅಡ್ಡಣಿಗೆ **aḍḍaṇigĕ. 1.** A small wooden or metal (generally) three-legged stand (C.; ಪಾತ್ರ Mr. 212; Mhr. ಅಡಣೀ; T. ಅಟ್ಟಾಣೈ, a Cingalese bench). ಬಟ್ಟಲು, ಪಡಿಗಮ್, ಅಡ್ಡಣಿಗೆ, ಪರಿಯಾಣ (Bp. 12, 12). A description of it and its use occurs in the following riddle: ಸಾದು ಬಟುವಾಗಿ ಇಹುದು, ಚಕ್ರ ತಾನ್ ಅಲ್ಲ; ಪಾದ ಮೂಱು ಆದಕೆ ಉಣ್ಟು, ಭೃಂಗೀಶನ್ ಅಲ್ಲ; ಸ್ವಾದಕ್ಕೆ ಮೊದಲ್ ಉಣ್ಟು, ಮೆಲುವದಕ್ಕೆ ಇಲ್ಲ; —ಮೇದಿನಿಯ ಜಾಣರೇ, ಹೇೞಿ ನೀವೆಲ್ಲ! **2,** a three-legged high stand with steps used as a ladder (My.).

ಅಡ್ಡನ aḍḍana. = ಅಡ್ಡಣ. A shield (Sk.).

ಅಡ್ಡನೆ **aḍḍanĕ.** = ಅಡನೆ, etc. Across, transversely (R.; T. ಅಟ್ಟನೈ).

ಅಡ್ಡಯಿಸು aḍḍayisu. = ಅಡ್ಡಗಿಸು, ಅಡ್ಡಯ್ಸು, ಅಡ್ಡವಿಸು. To move obliquely, or obstructingly. 2, to make opposition; to obstruct, to impede (Abh. P. 7, 137). 3, to intervene; to conceal.

ಅಡ್ಡಯಿಸುಹ aḍḍayisuha. Obstruction, opposition (ಪ್ರತಿಬನ್ಧ, ಪ್ರತಿಷ್ಟಮ್ಭ Nr.).

ಅಡ್ಡಯ್ಸು aḍḍaysu. = ಅಡ್ಡಯಿಸು, etc. (J. 4, 27).

ಅಡ್ಡಯ್ಸುಹ aḍḍaysuha. Going transversely, etc. (ತಿರ್ಯಗ್ಗರ್ತ Nr.). 2, concealment (ಅನ್ತರ್ಧಿ, ಅನ್ತರ Nr.; *cf.* ಅಡಗಿಸುಹ).

ಅಡ್ಡಲ್ aḍḍal. -ಲು. Crossing; obstructing; an obstacle; across; sideways. — ಅಡ್ಡಲಾಗು. -ಆಗು. To become an obstacle; to oppose (ಅಡಗಟ್ಟು Bhn. 37). ಅಕ್ಕಟಾ, ಕೆಮ್ಮನೆ ಈ ಮಿತ್ರನ ತೇಜಕ್ಕೆ ಅಡ್ಡಲಾದೆಂ! (Rśv. 6, 4). — ಅಡ್ಡಲಾನ್. -ಆನ್. To oppose (Č. Bp. 42, 28). — ಅಡ್ಡಲಿಡು. -ಇಡು. To put across. ದೃಷ್ಟಿಗೆ ನೆಱೆ ಕರಾಗ್ರಮುನ್ ಅಡ್ಡಲಿಪುತಂ (Bp. 26, 29). — ಅಡ್ಡಲೊಡ್ಡು. -ಒಡ್ಡು. To place athwart. (ಕುಱುಬಂ) ನಾಯಂ ಕರೆವುತ, ಒಡನೆ ಕಾಲನ್ ಅಡ್ಡಲೊಡ್ಡಿ ನಿಲ್ಲುತ (Bp. 20, 12).

ಅಡ್ಡವಿಸು aḍḍavisu. = ಅಡ್ಡಯಿಸು, etc. To obstruct, etc. (ತಡಬು, ಅಡ್ಡಿ ಮಾಡು, ಮಱೆ ಮಾಡು G.). ಚನ್ದ್ರಸೂರ್ಯರನ್ ಅಡ್ಡವಿಸಿ, ಹಿಡಿಯಾಳ ಹಿಡಿದವು ಮುಗಿಲ ಜೂಣಿಗಳ್ (Bh. 1, 19, 18).

ಅಡ್ಡಸರ aḍḍasara. Tbh. of ಅಟರೂಷ. (Si. 147. 461; St. & Pl.; Tĕ.).

ಅಡ್ಡಸಲ aḍḍasala. = ಅಡ್ಡಸರ. (St. & Pl.).

ಅಡ್ಡಾ aḍḍâ. = ಅಡ್ಡ 1. — ಅಡ್ಡಾತಿಡ್ಡಿ. = ಅಡ್ಡತಿಡ್ಡಿ, etc. (C.). — ಅಡ್ಡಾದಿಡ್ಡಿ. = ಅಡ್ಡಾತಿಡ್ಡಿ. (My.; Tĕ., Tu.). — ಅಡ್ಡಾದುಡ್ಡಿ. = ಅಡ್ಡಾತಿಡ್ಡಿ. (My.).

ಅಡ್ಡಾನ aḍḍa1-âna2. Broad, etc. (My.). ಅಡ್ಡಾನ ತೊಲೆ, ಅಡ್ಡಾನ ಹಲಿಗೆ, etc. (My.).

ಅಡ್ಡಾನೆ aḍḍa1-ânĕ4. = ಅಡ್ಡಾನ. (My.). ಅಡ್ಡಾನೆ ಹಲಿಗೆ or ಅಡ್ಡಾನೇ ಹಲಿಗೆ (My.).

ಅಡ್ಡಾಯಿಲ aḍḍa1-âyila. (Śmd. 252). An opponent.

ಅಡ್ಡಾಯುಧ aḍḍa1-âyudha. = ಅಡಾಯುಧ. (ನಿಸ್ತ್ರಿಂಶ, ಕರವಾಲ, ಖಳ್ಗ, ಕೌಕ್ಷೇಯಕ, etc. Hlâ.). ಅಡ್ಡಾಯುಧವನು ಆಯುಧವಾಗಿ ಉಳ್ಳವನು (ನೈಸ್ತ್ರಿಂಶಿಕ Nr.). ಕತ್ತಿಯೇ ಆಯುಧವಾಗಿ ಉಳ್ಳವನು (ನೈಸ್ತ್ರಿಂಶಿಕ Si. 281). (ನಾರಾಯಣನೆಮ್ಬ) ಆತನ ಅಡ್ಡಾಯುಧಮಂ ನನ್ದಕನ್ ಎಮ್ಬುದು (Hlâ.). See Bp. 28, 26; 34, 33; 61, 25.

ಅಡ್ಡಿ aḍḍi. An obstacle; opposition; delay (C.; ಎಡಚ, ಸಂರೋಧ, ವಿಘ್ನ G.; ಅವಧಿ, ಮರ್ಯಾದೆ Si. 432; Tu., Tĕ.; T. ಅಟ್ಟೆ). ಕೋಟೆಯ ತಳದ ಬಱೆಯಲ್ಲಿಯೂ ಕನ್ದಕದ ಬಱೆಯೂ ...ಎತ್ತರವಾಗಿ ಹಾಕಲ್ ಪಟ್ಟು ಇರುವ ಮಣ್ಣುದಿಣ್ಣೆ ಮುನ್ತಾದ ಅಡ್ಡಿಗಳು (ಚಯ, ವಪ್ರ Si. 107). ಕದವನ್ನು ಮುಚ್ಚಿ ತೆಗೆಯದನ್ತೆ ಅಡ್ಡಿ ಮಾಡಲ್ ಉಳ್ಳ ಅಗುಳಿಯ ಮರ (ಅರ್ಗಲ 112). ಅಚ್ಚಿನ ಕೊನೆಯಲ್ಲಿ ಚಕ್ರ ಕಳಚಿ ಜಾರದನ್ತೆ ಅಡ್ಡಿಯಾಗಿ ಇರುವ ಕಡಾಣಿಯ ಮೊಳೆ (ಆಣಿ 113). ಅಡ್ಡಿಯಿಲ್ಲದವು (ನಿರರ್ಗಲ, ಅಬಾಧ 376). ಅನುಗ್ರಹಕ್ಕೆ ಅಡ್ಡಿ ಮಾಡುವಿಕೆ ಕಸುಕೊಳ್ಳುವಿಕೆ ಮುನ್ತಾದ ...ಅಪಕಾರ (ನಿಗ್ರಹ 391). ಕೆಲಸದ ಮಧ್ಯದಲ್ಲಿ ಬನ್ದ ಅಡ್ಡಿ (ವಿಘ್ನ, etc. 394). ನನ್ನದೇನೇನೂ ಅಡ್ಡಿ ಇಲ್ಲ (B. 2, 8). ನನಗೆ ಬೇಕಾದದ್ದನ್ನು ನಾನು ತಕ್ಕೊಳ್ಳುವದಕ್ಕೆ ಅಡ್ಡಿ ಏನು? (2, 29). ದೇವರಿಗೆ ಅಡ್ಡೀ ಮಾಡುತ್ತದೆ (4, 24). ಮೊದಲು ನಮ್ಮ ಜನರು ಪರದೇಶಗಳಿಗೆ ಹೋಗಲಿಕ್ಕೆ ಬಹಳ ಅಡ್ಡೀ ತಕ್ಕೊಳ್ಳುತ್ತಿದ್ದರು (4, 188). ಯಾರೂ ಅಡ್ಡಿ ತರದೆ ಇದ್ದರೆ (5, 291). ಅಡ್ಡೀ ಮಾಡಿದಷ್ಟು ಬಡ್ಡಿ ಹೆಚ್ಚುವದು, ಅಡಿಗೇ ಮಾಡಿದಷ್ಟು ಉಣ್ಣು ತೀರುವದು (Prv.). — ಅಡ್ಡಿ ತಕ್ಕೊಳ್ಳು. To hesitate (B. 4, 188). — ಅಡ್ಡಿ ಮಾಡು. To obstruct one's way, to oppose, to hinder; to delay. See above. — ಅಡಿಯಾಗು. -ಆಗು. To become an obstacle or a hindrance; — a hindrance to take place. See above. — ಅಡ್ಡಿಸಡ್ಡಿ. reit. = ಅಡ್ಡಿ. (My.).

ಅಡ್ಡಿ aḍḍi. Ostentation, show (R.; Mhr., H. ಅಡ್ಡಾ, making profession of, priding one's self upon).

ಅಡ್ಡಿಕೆ aḍḍikĕ. = ಅಡ್ಡಿಗೆ. One of the pieces of gold of which the necklace called aḍḍikĕ is composed (C.). 2, a necklace composed of aḍḍikĕs (and worn by women, My.; Tĕ. plural ಅಡ್ಡಿಗಲು). ಕೊರಳಲ್ಲಿ ಹನ್ತವಾಗಿ ಧರಿಸಲ್ ಪಟ್ಟ ಒಡವೆ, ಅಡ್ಡಿಕೆ ಮುನ್ತಾದದು (ಗ್ರೈವೇಯಕ Si. 218).

ಅಡ್ಡಿಗೆ aḍḍigĕ. = ಅಡ್ಡಿಕೆ. (My.). See ಉಗುರಡ್ಡಿಗೆ.

ಅಡ್ಡೆ aḍḍĕ. 1. A pole or bamboo by which two people carry a burden suspended from its midst, or by which two small burdens suspended from both ends are carried across the shoulder of one man (C.; Mhr. ಅಢೇಂ, ಅಡೇಂ, a ridge pole; the ridge along the shoulders). — ಅಡ್ಡೆದಬ್ಬೆ. = ಅಡ್ಡೆ. (My.). — ಅಡ್ಡೆಹೊಱೆ. -ಹೊಱೆ. (= ಅಡ್ಡಹೊಱೆ?). A burden or burdens carried in the above manner (Č. Bp. 47, 40). — ಅಡ್ಡೆ ಹೊಱು. To carry the aḍḍĕ (C.)

ಅಡ್ಡೆ aḍḍĕ. 2. A kind of sowing machine (ಸಡ್ಡೆ Mr. 370).

ಅಡ್ಡೆ aḍḍĕ. 3. = ಅಡ್ಡ 1. (Tĕ.; R.).

ಅಡ್ನೆ aḍnĕ. = ಅಡನೆ, etc. — ಅಡ್ನಾಡಿ. -ಅಡಿ. = ಅಡನಾಡಿ. (S. Mhr.; ಮೂಱಿ G.; Tu. ಅಡ್ನಾಡಿ, ಅನ್ನಾಡಿ). — ಅಡ್ನಾಡಿತನ. = ಅಡನಾಡಿತನ. (B. 5, 279). — ಅಡ್ನಾಡೀ ಜನರು. Uncivilised people (B. 5, 195).

ಅಡ್ಲ aḍla. = ಪಡಲ. (My.). — ಅಡ್ಲಬಳ್ಳಿ. = ಪಡವಲಬಳ್ಳಿ (St. & Pl.).

ಅಡ್ಲಿಗೆ aḍligĕ. = ಹಡ್ಲಿಗೆ. A flat round basket with several divisions, used by jôgammas (devotees of Mârî or Durgâ) to carry their idol and put their alms in (My.). 2, a flat basket, or basin-like tub, or earthen vessel, used by merchants in their shops (My.).

ಅಡ್ಲು aḍlu. = ಅಡಲು 3, etc. Mud (My.).

ಅಢಾಳ aḍhâla. (Śmd. 24, o. r. ಢಾಳ, q. v.).

ಅಣ್ aṇ. 1. = ಅಳ್ 1. A syllable that, in words denoting direction, is inserted before the ಅ of the genitive, the ಇಂ of the instrumental, and the ಅಂ of the masculine, *e.g.* ಮೂಡಣ, ತೆಂಕಣ; ಮೂಡಣಿಂ, ತೆಂಕಣಿಂ; ಮೂಡಣಂ, ತೆಂಕಣಂ (Śmd. 134-136); ಮೇಗಣ, ಕೆಳಗಣ; ಅಡಿಯಣ (Śmd. 350 Cm.); ಅಲ್ಲಿಯಣ, ಇಲ್ಲಿಯಣ. *Cf.* ಅಱ್ 1. — ಅಣಾಗಮ. The augment ಅಣ್ (Śmd. 135).

ಅಣ್ aṇ. 2. = (ಅಣಲ್ 1), ಅರ್ 3. — ಅಣ್ಣಾಲಿಗೆ. -ನಾಲಿಗೆ. The uvula (My.).

ಅಣ aṇa. 1. = ಅನ 1. A suffix that is used in the formation of a verbal noun (which serves also to express the meaning of the first person plural of the imperative), *e. g.* ಮಾಡುವಣ, ನಡೆವಣ or ನಡೆಯುವಣ (My.). See ಉವಣ, ಊಣ, ಒಣ 1, & ಓಣ.

ಅಣ aṇa. 2. = ಅಣ್ಣ 1. An elder brother. See *e. g.* ಚನ್ನಬಸವಣ, ಬಸವಣ, ಮಂಚಣ.

ಅಣ aṇa. 3. = (ಅಣೆ 2), ಅಣ್ಣ 2, ಅಣ್ಣಾ, (ಅಣ್ಣೆ 1). — ಅಣಜಾಣ. = ಅಣ್ಣಜಾಣ. A very clever, cunning man (My.). — ಅಣಜಾಣೆ. A very clever, sly woman. ಅಣಜಾಣೆ, ಅಣಜಾಣೆ, ಅಕಳಿಗೆಸ್ಟು ಮೊಲೆ? ಅಸ್ಥ ಹಾಗೆ (Prv.).

ಅಣಂ aṇam. = ಆಣಂ. Whatsoever, howsoever (ಏನುಂ Šmd. 390), small, little (ಅಲ್ಪ Čt. I, 94; II, 61). ಬನ್ದಂ ಫಲ್ಗುನನ್? ಇಲ್ಲ, ಸನ್ದಯಮ್ ಅಣಂ ತಾನ್ ಇಲ್ಲ (Šmd. 20. 281). ಪೆಱತೊನ್ದು ಅಣಂ ಬಗೆಯಲ್ (277). ಕಾರ್ಯಮ್ ಅಣಮ್ ಇಲ್ಲ (391). ಗೂಢಪದಪ್ರಯೋಗಮುಂ ನೆರೆಪಿ, ಪದಾರ್ಥಂಗಳನ್ ಅಣಂ ಮನಮ್ಬುಗೆ ಪೇೞ್ವೆಂ (402). ಅನ್ದಮ್ ಅಣಂ ಪದಮನ್ ಇಡಲ್ ಅದು ಏನ್ ಅಱಿದಪನೋ (o. r. ಗೆಯ್ದಪನೋ? Čh. v. 17). ಮುನ್ದೆ ನೀರ್ ಇಲ್ಲ ಅಣಮೆ (Šmd. 215 Mdb.).

ಇಲ್ il. 1. =ಇರ್ 1. To be, to exist, etc. A defective verb of which at present only some forms of the negative mood exist. (T., M.; *cf.* ಅಲ್ 3, ಉಱು, ಉಳ್ 1).—**ಇಲ್.** An unusual abbreviation of ಇಲ್ಲ, q. v. ಫಲವ ಕಣ್ಡರೆ, ಅದು ಏನು ಎನ್ದರೆ, ಫಲವು ಆಯಿತು ತೀರ್ಥಯಾತ್ರೆಲಿ ಮಲವಿಸರ್ಜನೆ, ಕೆಮ್ಮು, ಉಬ್ಬಸ, ಜರವು, ಉದರಶೂಲೆ; ಫಲವ ಕಣ್ಡನು ಇನ್ನುವು, ಅಲ್ಲದೆ ಫಲವದೇನಿಲ್! ತಿಳುವಿಕೆಲ್ಲದೆ ನೆಲೆಯು ಇಲ್ಲದೆ ತಿರುಗುವರು ಕಾಮ್ಯಾರ್ಥಿಗಳು (Jns. 22, 31).—**ಇಲ.** A man who has not, or a place that has not, or is free from, *e. g.* ಬರ್ದಿಲ (ಬರ್ದು ಇಲ), q. v. (T.).—**ಇಲಿ.** Not being. An abbreviation of ಇಲ್ಲ (Śmd. 220; T. *e. g.* in ಅಱಿವಿಲಿ). See ಅಗಿಲಿಲಿ, ಅಱುವಿಲಿ, ಕಣ್ಣಿಲಿ, ಕೂರಿಲಿ, ತಪ್ಪಿಲಿ, ನಾಣಿಲಿ, ಪಲ್ಲಿಲಿ, ಬೆಳಗಿಲಿ.—**ಇಲ್ಲ.** Third person of the negative mood, used for all persons, genders, and numbers: it, he, she is not or exists not, etc.; there is, or are, not; there does not occur or come. 2, not; no (C.; T., M.; Tu. ಇಜ್ಜ). ಇಲ್ಲವೆಮ್ಬುದು ಅಭಾವ (Nr.). ಇಲ್ಲ (ಉಣ್ಟಾಗದು Śmd. 85. 207. 208 Cm.; ಬಾರದು 346 Cm.). ಇಲ್ಲೆಮ್ಬುದು ಸೊಲ್ಲೊಳ್ ಕ್ರಿಯಾತ್ಮಕಾವ್ಯಯಂ (Śmd. 389). ಅಃ, ಸನ್ದಯಮುಮ್ ಇಲ್ಲ! ಮೆಚ್ಚಿದೆಂ (20). ಗುರುವಿಲ್ಲ, ಕರ್ಣನಿಲ್ಲ, ಗುರುವಿನ ಮಗನಿಲ್ಲ (68). ಇನ್ನೆವರಂ ಗುಱಿಯಾದುದು ಇಲ್ಲ ಕಾಮುಕರ ವಿಮುಕ್ತಬಾಣಹತಿಗೆ (296). ಮಾಮರನ್ ಅಲ್ಲದೆ ಇಲ್ಲ (77). ಪಡುವ ಮೂಡ ತೆಂಕ ಬಡಗ ಪೊಡವಿಪತಿಗಳ್ ಇಲ್ಲ! (145). ನೀಲಗ್ರೀವರುಮ್ ಆರ್ತರ್? ಇಲ್ಲ! (292). ಉಣಲು ಉಡಲು ತಮಗೆ ಇಲ್ಲ (Bp. 32, 53). ಅರಸಿಯರು ದೋಸವೇನುವನ್ ಇಲ್ಲಿ ಮಾಡಿದ್ದುದಿಲ್ಲ (24, 78). ಮದನನ ಮೇಲೆ ತಪ್ಪಿಲ್ಲ (J. 31, 36). ತಾಯಿಗಿನ್ತ ಹಿತವರಿಲ್ಲ, ಸಕ್ಕರೆಗಿನ್ತ ಸವಿಯಿಲ್ಲ (Prv.). ಮೊನ್ನೆ ನೀನು ಸಾಲೆಗೆ ಯಾಕೆ ಬನ್ದಿದ್ದಿಲ್ಲ? (B. 1, 7; observe that in the use of forms like ಇದ್ದಿಲ್ಲ, *i. e.* ಇದ್ದು ಇಲ್ಲ or ಇದ್ದೇ-, (which are C.), there appears to have been originally a certain amount of displeasure, or also of affirmation; at present such forms are used nearly indiscriminately). ಇನ್ನೂ ನಿನ್ನ ಹಲಿಗೇ ಮೇಲಿನ ಬರಹ ತೀರಿಲ್ಲವೋ? (B. 1, 11). ಅವನ ದವತಿಯೊಳಗೆ ಮಸಿ ಇದ್ದಿಲ್ಲ (1, 23). ಇವು ನನಗೆ ಬೇಕಾಗಿಲ್ಲ (2, 16). ಸೂರ್ಯನನ್ನು ಮನುಷ್ಯರು ಮಾಡಿಲ್ಲ (2, 24). ವಿಷವು ಏಱುವದಿಲ್ಲ (2, 26). ಈ ಮಾತು ನನಗೆ ತಿಳಿದಿದ್ದಿಲ್ಲ (2, 44). ಅವನಿಗೆ ಎಷ್ಟೋ ದಿವಸ ಮಕ್ಕಳಿದ್ದಿಲ್ಲ (3, 28). ಹೆಚ್ಚೊಟ್ಟು ಮೂಡಿಲ್ಲ (3, 45). ದೇವರನ್ನು ಯಾರೂ ನೋಡಿಲ್ಲ (4, 58). ನಾನು ನಿನ್ನ ಒಂಟಿಯನ್ನೂ ನೋಡಿಲ್ಲ, ನಿನ್ನ ಹಮ್ಮಿಣಿಯನ್ನೂ ನೋಡಿಲ್ಲ (4, 169). ನೀನೇನೂ ಅಪರಾಧ ಮಾಡಿಲ್ಲ (4, 201). ಮುನ್ದೆ ನನ್ನ ಗತಿ ಹೀಗಾದೀತೆನ್ದು, ಆಗ ನನ್ನ ಧ್ಯಾನದಲ್ಲಿ ಬರಲಿಲ್ಲ (did not come, 4, 2). ನೀನು ಸಂಗ್ರಹ ಮಾಡಿ ಇಡ ತಕ್ಕನ್ಥ ಕಾಲದಲ್ಲಿ ಮಾಡಿ ಇಡಲಿಲ್ಲ (didst not lay by, 4, 2). ಹೀನತನವ ಬಿಡಲಿಲ್ಲ, ಸ್ವಾನುಭಾವವ ಕೂಡಲಿಲ್ಲ (Dp. 8). ಕಮಲೇಶ ನನ್ನು ಒನ್ದು ಬಾರಿ, ಸ್ವಾಮಿಾ ಎನ್ದು, ನೆನವುದಿಲ್ಲ (thou doest not recollect or think of, Dp. 30). ಅನ್ತಕನ ದೂತರಿಗೆ ಕಿಂಚಿತ್ತು ದಯವಿಲ್ಲ (Dp. 4). ಅವನು ಹೋಗುವದಿಲ್ಲ, he does not go (used as a simple statement, C.); ಅವನು ಹೋಗಲಿಕ್ಕಿಲ್ಲ, he does not intend to go, or he cannot go (S. Mhr.).—**ಇಲ್ಲಂ. ಇಲ್ಲವು.** =ಇಲ್ಲ. See *e. g.* Č. Bp. 11, 5; Si. 48. 404; B. 2, 16.—**ಇಲ್ಲದೆ.** Participle negative: not being, not existing, not remaining, (not possessing, without). ವಿಕಾರದನ್ ಇಲ್ಲದೆ (Śmd. 111). ನೀನ್ ಇಲ್ಲದೆ ಇವು ಎಲ್ಲಮ್ ಒಳವೆ? (155. 292). ಇಲ್ಲದೆಯುಂ (124. 206). ಇರ್ದೊಡನುಮ್ ಇಲ್ಲದೊಡಂ (192). ಇನಿತಿಲ್ಲದೆ ಇಹ ರಾಜ (ದುರ್ಬಲ Mr. 271). ಅವಿಲ್ಲದೆ ಇರಲ್ ಅಘ್ರುವಂ (279). ಚನ್ದವ...ದೊರಕಿಸಲ್ ಇಲ್ಲದಿರೆ (Bp. 27, 2). ಚಿತ್ತದೊಳು ಹರಿವು ಇಲ್ಲದಿಪ್ಪದೆ? (27, 2). ಅದು (ಭಕ್ತಿ) ಇಲ್ಲದೆ (ಎಲ್ಲಂ) ಇಲ್ಲದುದೇ! (27, 2). ಸುಧೆಯುಂ ಸವಿಸವಿದು ತಣಿವಿಲ್ಲದೆ ಈಣ್ಬುತ್ತ (35, 2). ಇಲ್ಲದಿರ್ದೊಡೆ (43, 69). ತ್ವಳುವಿಲ್ಲದೇ ಬಪ್ಪೆನೆ? (47, 21). ತೆಱಹಿಲ್ಲದೇ (51, 31). ತರಲ್ ಇಲ್ಲದಿರ್ದನೆ? (53, 27). ಎಮಗೆ ಇನಿತಾದೊಡಂ ಕೊಡಲಿಲ್ಲದೆ (58, 20). ತುಱುವಿನಲಿ ತಪ್ಪಿಲ್ಲದಿಪ್ಪದನ್ ಅಱಿದು (60, 31). ಭಕ್ತಿಯಿಲ್ಲದೆ ಕೆಟ್ಟು ಹೋದೆ (60, 47). ತಪ್ಪೇನುಮ್ ಇಲ್ಲದೆ (61, 4). ನಾಚಿಕೆಯಿಲ್ಲದೊಡೆ (61, 19). ಅತನ್ ಇಲ್ಲದೊಡೆ (J. 28, 57). ದಟ್ಟೀ ಉಟ್ಟು ಕೋ! ಇಲ್ಲದೆ ಹೋದರೆ (B. 1, 6). ಬಹಳ ಒಳ್ಳೇದು ಮಾಡಿದರು, ಇಲ್ಲದಿದ್ದರೆ (1, 21). ಬುದ್ಧಿ ಇಲ್ಲದಿದ್ದರೆ ನೀತಿ ಇರುವದಿಲ್ಲ (3, 33).—Relative participle negative: ಇಲ್ಲದ. ದೊರೆಯಿಲ್ಲದ ಭಂಡಾರಂ (Śmd. I). ಜನನಿ ಸತ್ತಡೆ ದುಃಖವಿಲ್ಲದರ್ (-ವಿಲ್ಲದವರ್) ಆರು ಲೋಕದಲಿ? (Bp. 15, 2). ಎಡೆದೆಱಹು ಇಲ್ಲದ ಸಾಲು (ಲೇಖೆ, ರಾಜಿ); ಕೊಪ್ಪಿಲ್ಲದ ಎತ್ತು (ತೂಬರ); ರಸವಿಲ್ಲದ ಹಾಂಗೆ ಅಟ್ಟ ಮಾದುರ (ಪಿಚ್ಛಿಲ); ಇಲ್ಲದ ಹೊಲ್ಲೆಹನ್ ಇಕ್ಕುಹ (ಮಿಥ್ಯಾಭಿಯೋಗ); ಇಲ್ಲದ ಹೊಲ್ಲೆಹಂ ಮೇಲಿಕ್ಕಿ ನುಡಿಹ (ಮಿಥ್ಯಾಭಿಶಂಸನ Nr.). ಇಲ್ಲದ ತಪ್ಪುಗಳನ್ನು ಮೇಲೆ ಹೊಱಿಸಿ ಹೇಱುವದು (ಮಿಥ್ಯಾಭಿಶಂಸನ Si. 56). ಇಲ್ಲದ ಕೆಟ್ಟ ಗುಣಗಳನ್ನೇ ಆರೋಪಿಸಿ (69). ಜ್ಞಾನವಿಲ್ಲದನ (-ವಿಲ್ಲದವನ) ಕಾಯವು ಹಾಱೂರ ಸ್ಥಾನದಿಂ ಕಡೆಯೆ! (Sp.). ಹಗೆಗಳು ಇಲ್ಲದವರು (ಅಜಾತಶತ್ರು Nn. 74). ವಿಧುವಿಲ್ಲದ ಇರುಳ್ (Śmd. 67). ತನಗೇ ಇಲ್ಲದವನು ಮನ್ದಿಗೆ ಏನು ಕೊಟ್ಟಾನು? (Prv.). ಕಾಲಿಲ್ಲದವಂ, ಕಿವಿಯಿಲ್ಲದವಳ್ (Śmd. I). ವಿಭಕ್ತಿಯನ್ ಇಲ್ಲದುದು (Śmd. 88). ಸಂಸ್ಕಾರಂಗಳಿಲ್ಲದವನು (ವ್ರಾತ್ಯ); ವೇದವಿಲ್ಲದವನು (ಅಸ್ವಾಧ್ಯಾಯ, etc.); ಕೆಯ್ಯಿಲ್ಲದವನು (ಕುಣಿ); ಫಲವಿಲ್ಲದುದು (ಅಫಲ, etc. Hlâ). ಎನ್ದೂ ಕೇಡಿಲ್ಲದುದು (ನಿತ್ಯ, etc.); ಕುತ್ತವಿಲ್ಲದವನು (ನಿರಾಮಯ Nr.). ಇಲ್ಲದುದು, that is empty, void or causeless (ಆಕಸ್ಮಿಕ, ವಿಶೂನ್ಯ Nn. 126). ಇಲ್ಲದು, that is non-existent (ಅಭಾವ, in a Dharwar print). ಇಲ್ಲದುದರ್ಕೆ (Śmd. 52). ಇಲ್ಲದಕೆ (Bp. 60, 57. 58). ಇಲ್ಲದನ್ತೆ (50, 50). ಇಲ್ಲದ ಮುನ್ನ (9, 50). ಇಲ್ಲದಾಗ ಇಲಿ ಕಚ್ಚಿ ಕೊಣ್ಡು ಹೋಯಿತು (Prv.). ಇಲ್ಲದವನು, a poor man (C.). ಇಲ್ಲದವನು ತಲ್ಲಣಿಸನು (Prv.). See also Bp. 27, 31. 32. 33. 34; 43, 79; 51, 43; 61, 12; Prv. s. ಅಸಲ್.—ಇಲ್ಲದ ಹಾಗೆ ಆಗು. To be destroyed, etc. (C.; ನಾಶ, ಲೋಪ G.).—ಇಲ್ಲದ ಹಾಗೆ ಮಾಡು. To waste, to destroy, etc. (C.; ಅಱಿಪು, ಲೋಪಿಸು G.).—ಇಲ್ಲದಾಗು. -ದೆ-ಆಗು. To cease to exist, to disappear (B. 5, 243).—ಇಲ್ಲವಾಗು. =ಇಲ್ಲಾಗು. To become non-existent; to be finished; to fail; to disappear (My.). ಇಲ್ಲವಾದುದು (ನಿರವಶೇಷ Śmd. Dh.). See Rśv. 13, 77.—ಇಲ್ಲವೆ. -ಎ 4. 1. =ಇಲ್ಲವೇ No. 1. Is there not? are there not? or not? See s. ಎ 4, No. 3.—ಇಲ್ಲವೆ. 2. Or (C.). ನಿನಗೆ ಏನಾದರೂ ನೋವು ಆದಾಗ ಇಲ್ಲವೆ ಬೇನೆ ಬನ್ದಾಗ (B. 1, 25). See B. 2, 22. 26; 3, 103; 4, 1; 5, 268. ಇಲ್ಲವೆ. 3. See it separately.—ಇಲ್ಲವೆನ್. -ಎನ್. ಇಲ್ಲವೆನ್ನು. =ಇಲ್ಲೆನ್. To say no, to deny (Bp. 25, 18).—ಇಲ್ಲವೇ. -ಏ 3. =ಇಲ್ಲವೆ. Or not?, etc. See Bp. 49, 18; 51, 37. 2, certainly not, in ಇಲ್ಲವೇ ಇಲ್ಲ (C.; B. 5, 267).—ಇಲ್ಲವೊ. -ಒ 4. ಇಲ್ಲವೋ. -ಓ 3. Or not? See Bp. 47, 14. 15.—ಇಲ್ಲಾ. =ಇಲ್ಲ. 2, -ಆ6. or not? See Bp. 48, 25; 50, 64; 51, 35. 36. 37. 38; 52, 14.—ಇಲ್ಲಾಗು. -ಆಗು. =ಇಲ್ಲವಾಗು. (Śmd. 28; Grj. 9, 56).—ಇಲ್ಲೆನ್. -ಎನ್. ಇಲ್ಲೆನ್ನು. =ಇಲ್ಲವೆನ್. To say there is not (or nothing). (Rśv. 2, 35). (ಹೊಟ್ಟೆಗೆ) ಇಲ್ಲೆನ್ದು, ಹುಲ್ಲು ಮೆಲ ಬಹುದೇ? (Prv.). 2, to say no.—

ಇಲ್ಲೆನಿಸು. -ಎನಿಸು. To cause to say it is not (or nothing), to cause to reject (Rśv. 13, after 71). 2, to cause to say no. — ಇಲ್ಲೊ. -ಒ 4. = ಇಲ್ಲವೊ. (C.; B. 5, 88).

ಇಲ್ il. 2. Being; place (chiefly used as final in K.; T., M. ಇಲ್; Tĕ. ಇಲು, ಇಲ್ಲು; Tu. ಇಲ್ಲು; *cf.* ಅಲ್ 1). See *e. g.* ಪಿತ್ತಿಲ್, ಪಿನ್ತಿಲ್, ಪೊಸನ್ತಿಲ್, ಪಿತ್ತಿಲ್; (ಇಲ್ಲಿ).

ಇಲ ila. 1. See s. ಇಲ್ 1.

ಇಲ ila. 2. A nounal affix (Śmd. 241), *e. g.* ಗಾವಿಲ, ವಚ್ಚಯಿಲ, ಪಡೆಯಿಲ (241).

ಇಲಾಖೆ ilâkhĕ. A claim, right; connection with; a village under a township (Mhr., H.). 2, jurisdiction; charge, possession; department; district; presidency (B. 4, 117; 5, 127; My.).

ಇಲಾಚಿ. ilâći. (= ಏಲಕ್ಕಿ). Cardamoms (My.; Mhr., H.).

ಇಲಾಜು ilâju. A remedy; a resource; a means (My.; Mhr., H.).

ಇಲಾತಲ ilâ-tala. The surface of the earth. (Śśv. 2, 32; My.).

ಇಲಾಧಿಪ ilâ-adhipa. A king (Rśv. 5, 25; 13, 13).

ಇಲಾಧೀಶ ilâ-adhîśa. A king (Bp. 5, 4).

ಇಲಾಪುತ್ರ ilâ-putra. The planet maṅgala (My.). 2, a Śûdra (My.).

ಇಲಾಪುತ್ರಿ ilâ-putri. Râma's wife Sîtâ (My.).

ಇಲಾಭೃತ್ ilâ-bhṛit. A king;—a mountain (J. 10, 2).

ಇಲಾಲ್ ilâl. ಇಲಾಲಿ ilâli. An iron bowl grated or open-mouthed, containing oil and rolls of cloth, etc.; it is attached to the end of a stick, and kindled upon holidays, etc., (My.; Mhr. ಹಿಲಾಲ).

ಇಲಾವಳಯ ilâ-vaḷaya. The circumference of the earth; the terrestrial globe (Abh. P. 13, 63).

ಇಲಾವೃತ ilâ-vṛita. N. of one of the varshas or divisions of the known world. (My.).

ಇಲಾವೃನ್ದಾರಕ ilâ-vṛindâraka. A Brâhmaṇa (Bp. 55, 54).

ಇಲಿ ili. 1. See s. ಇಲ್ 1.

ಇಲಿ ili. 2. = ಎಲಿ. A rat; a mouse (ಆಖು, ವೃಷ, ಮೂಷಿಕ Hlâ.; ಉನ್ದುರು, ಮೂಷಿಕ, ಆಖು Nr.; ಮೂಷಕ, etc. Mr. 164; Si. 170; C.; Tu., T. ಎಲಿ; Tĕ. ಎಲಿಕೆ, ಎಲುಕೆ). ಇಲಿಯ ಹಿಡಿಯಲು ಅನುಗೆಯ್ವ ಬೆಕ್ಕು (ಜಾಹಕ, etc. Hlâ.). ಇಲಿಯ ತಿನಲ್ ಅನುಗೆಯ್ವ ಬೆಕ್ಕು (ಜಾಹಕ, etc. Mr. 164). ಇಲಿ ಪಾದರಸವನ್ನು ಕುಡಿದ ಹಾಗೆ.—ಇಲಿಯನ್ನು ಒಳಗೆ ಬಿಟ್ಟು, ಬಿಲಕ್ಕೆ ಮಣ್ಣು ಮೆತ್ತಿದ.—ಬೆಕ್ಕಿಗೆ ಚಲ್ಲಾಟ, ಇಲಿಗೆ ಪ್ರಾಣಸಂಕಟ (see s. ಚೆಂಗು 1).—ಬರುವಾಗ ಹುಲಿಯ ಹಾಗೆ, ಹೋಗುವಾಗ ಇಲಿಯ ಹಾಗೆ.—ಬೆಟ್ಟ ಅಗಿದು, ಇಲಿಯ ಹಿಡಿದ ಹಾಗೆ (Prvs.). — See ಚಿಟ್ಟಿಲಿ, ಚುಂಚಲಿ, ಚುಣ್ಡಿಲಿ, ಮೂಗಿಲಿ, ಸುಣ್ಡಿಲಿಲಿ, ಸೊಣ್ಡಿಲಿ; Prv. s. ಬರು. — ಇಲಿಕಿವಿ = ಇಲಿಕಿವಿ. — ಇಲಿಕಿವಿಗಿಡ. = ಇಲಿಯಾಲ, ಇಲಿವಾಲ q. v., ಎಲಿಯಾಲ. (Si. 143). — ಇಲಿಕಿವಿ. Rat-ear: a small-leafed vegetable (My.; Tu. ಎಲಿಕೆಬಿ, Tĕ. ಎಲಿಚ್ಚೆವಿ, Evolvulus emarginatus Lin.). — ಇಲಿಕಿವಿಬಳ್ಳಿ. A creeping plant with reniform leaves, the Asiatic penniwort, Hydrocotyle asiatica Lin., and also the similar plant Ipomaea reniformis Chois. (Z.). — ಇಲಿದೇರ. -ತೇರ. The rat-vehicled one: Gaṇapati (Śm. 4). — ಇಲಿಪಾಷಾಣ. Rat's bane, arsenic (C.). — ಇಲಿಬಲೆ. A rat-trap (S. Mhr.). — ಇಲಿಬಾಲದ ಗಿಡ. = ಇಲಿವಾಲ. (My.). — ಇಲಿಬೋನು. = ಇಲಿಬಲೆ. (My.; T. ಎಲಿಪ್ಪೋನ್). — ಇಲಿಯಾಲ. = ಇಲಿವಾಲ, ಎಲಿಯಾಲ. (Si. 143). — ಇಲಿವಾಲ. -ಬಾಲ. An aquatic plant, Salvinia cucullata (or Anthericum tuberosum, ಮೂಷಿಕಪರ್ಣಿ, ಚಿತ್ರೆ, ನ್ಯಗ್ರೋಧಿ, ರಣ್ಡೆ, ಸುತಶ್ರೇಣಿ, ಶಮ್ಬರಿ, ದ್ರವನ್ತಿ, etc. Nr.; Si. 143).

ಇಲಿ ili. 3. (= ಅಲಿ 2, etc.). In (S. Mhr.), *e. g.* ಕಣ್ಣಿಲಿ, ಕಾಲಿಲಿ, ಬಾಯಿಲಿ, ಮುಪ್ಪಿಲಿ, ಮೂಗಿಲಿ, ಹಾದಿಲಿ (see Prv. s. ನಾದಿನಿ), etc. *Cf.* ಇಲ್ಲಿ, and the use of ಇಲ್ 2 in T. and M.

ಇಲಿ ili. = ಈಲಿ. (Sk.; G.).

ಇಲಿಕು iliku. = ಇಡಿಕು 1, etc. To be squeezed, bruised, etc. (S. Mhr.).

ಇಲಿಚಿ ilići. = ಎಲಚಿ, etc. The jujube tree, Zizyphus jujuba (St. & Pl.; My.).

ಇಲಿಮಿಂಚಿ ilimińći. A lemon, the lemon tree (T., M. ಎಲುಮಿಚ್ಚೈ; *cf.* ನಿಮ್ಬೆ). See ಬಿರ್ರಲಿಮಿಂಚಿ.

ಇಲುಕು iluku. (= ಉಲುಕು 2). Cramp, sprain (Tĕ.; R.; T. ಇಜಪ್ಪು, ಇಜವು, spasm, convulsion).

ಇಲುವು iluvu. = ಎಲಬು, ಎಲವು, ಎಲು q. v., ಎಲುಬು, ಎಲುವು, ಎಲ್ಬು, ಎಲ್ವು, (ಎಮಕೆ). A bone. ನೊಸಲ ಇಲುವು (ಲಲಾಟಾಸ್ಥಿ, ಶಂಖ Nr.).

ಇಳೆ ilĕ. ಇಲಾ. = ಇಡೆ, ಇರೆ, ಇಳೆ q. v., ಎಳೆ. *The earth.* 2, *a cow.* 3, *speech* (ಶಬ್ದ Mr. 488). 4, a tubular vessel on the right side of the body. 5, Budha's wife. 6, ಎಪವಾತ್ರ (Mr. 488, one MS. ಎಪಮಾರ್ಥ; see Nn. s. ಇಳೆ).

ಇಲೇಶ ilâ-îśa. A king (J. 10, 46).

ಇಲ್ಲ illa. See s. ಇಲ್ 1.

ಇಲ್ಲಣ illaṇa. (Śmd. 25). Soot (adhering to the inner side of the roof, C.; T., M. ಇಲ್ಲಟ್ಟ, roof; ಇಲ್ಲಟ್ಟಕರಿ, ಇಲ್ಲಟಿಕಟಿ, soot).

ಇಲ್ಲದತನ illada-tana. The state of being nothing, destitution, poorness (ಹೀನತೆ, ಬಡತನ G.).

ಇಲ್ಲದೆ illadĕ. See s. ಇಲ್ 1.

ಇಲ್ಲವೆ illavĕ. See ಇಲ್ಲವೆ Nos. 1 & 2 s. ಇಲ್ 1. 2, the state of being not; end (ಮುಗಿ Śm. 80).

ಇಲ್ಲಾ illâ. 1. See s. ಇಲ್ 1.

ಇಲ್ಲಾ illâ. 2. — ಇಲ್ಲಾಮಲ್ಲಿ. A tell-tale; backbiting (Tĕ.; R.). — a troublesome girl (S. Mhr.). — ಇಲ್ಲಾಮಲ್ಲಿತನ. Scandal, tattle (Tĕ.; R.).

ಇಲ್ಲಿ i̶l̶-il2-i12. (= ಇಲಿ 3). In this place, here; (regarding its declension) this place. ಅಲ್ಲಿ, ಇಲ್ಲಿ, ಉಲ್ಲಿ, ಎಲ್ಲಿ (Śmd. 145). ಅಲ್ಲಿಯುಮ್ ಇಲ್ಲಿಯುಮ್ ಎಲ್ಲಿಯುಂ ನರಂ (150). ಕುಳ್ಳಿರ್ ಇಲ್ಲಿ! (Rśv. 5, 21). Genitive: ಇಲ್ಲಿಯ (Bp. 16, 28; C.), ಇಲ್ಲಿನ (My.; Ćd. II, 193. 195. 196), ಇಲ್ಲಿಯಣ; dative: ಇಲ್ಲಿಗೆ (Bp. 18, 33; 28, 28; 37, 3; etc.); ablative: ಇಲ್ಲಿನ್ದ (C.). ಇಲ್ಲಿಯವನು, a man of this place (C.). ಗುಜರಾಥ ಮತ್ತೂ ಮಾಳವ ಇಲ್ಲಿಯ ಅರಸರು (B. 5, 51). ಅವ್ಹಾರ ಬಿಕನೇರ ಬುನ್ದಿ ಇಲ್ಲಿಯ ಅರಸರೆಲ್ಲರು (5, 57). — ಇಲ್ಲಿಗಲ್ಲಿಗೆ. -ಅಲ್ಲಿಗೆ. From here to there (Bp. 37, 55; C.). 2, there—than here, *e. g.* ಇಲ್ಲಿಗಲ್ಲಿಗೆ ಬೆಳೆ ಹೆಚ್ಚು, there the crop is more abundant than here (C.). — ಇಲ್ಲಿತನಕ. So far as this place (B. 4, 181; C.); up to this time (My.). — ಇಲ್ಲಿದ. -ದ-ಅ 3. A man of this place or direction. ಕೆಲದನ್ ಅಲ್ಲಿದನ್ ಇಲ್ಲಿದನ್ ಈಗಳ್ ಎಪ್ಪಿನಂ ಮುತ್ತಿದನ್ ಒನ್ದೆ ತೇರೊಳ್ ಅಮರೇನ್ದ್ರಸುತಂ ಕುರುವೃನ್ದಸೆಲ್ಲಮಂ (Śmd. 136). — ಇಲ್ಲಿನ್ದಲ್ಲಿತನಕ. -ಅಲ್ಲಿತನಕ. From here to there (B. 5, 130). — ಇಲ್ಲಿಪರಂ. = ಇಲ್ಲಿತನಕ. (Abh. P. 6, 115).

ಇಲ್ವಲೆಗಳ್ ilvalĕgaḷ. (Sk. ಇಲ್ವಲಾಃ). *The five stars in Orion's head.*

ಇವ iva. A proximate demonstrative pronoun: This man, he (Šmd. 181; see Bp. 47, 33; C.; T., M.; Tu. ಇವ್ಳೆ; Tĕ. ವೀಡು). ಅವಂ, ಇವಂ, ಉವಂ (182). ಅವರ್, ಇವರ್, ಉವರ್ (121. 182). ಇವನ್ದಿರ್ (120). ಇವದಿರ್ (Bp. 51, 67). ಅವರ್ಗಳ್, ಇವರ್ಗಳ್, ಉವರ್ಗಳ್ (Šmd. 124); ಇವರುಗಳು (see s. ಕರಿಗ). ಓದಾಳಿ ಇವಂ (Šmd. 111). ಇವರ್ ಪುರುಷರ್, ಇವರ್ ಸ್ತ್ರೀಯರ್ (109). ಇವಂ ದೇವರ ತೊಟ್ಟಿ (109). ಆಳ್ ಇವಂ (109). ಕಲಿ ಇವಂ, ಕಲಿಗಳ್ ಇವರ್ (116). ಇವಗೆ (= ಇವಂಗೆ, ಇವನಿಗೆ, B. 5, 55. 133; My.). ಇವನ ಕೊಣ್ಡು ಹೋಗಿ, ಜವನ ತಪ್ಪಿಸು.— ಇವನು ಅವನಿಗೆ ಎಣ್ಣೆ ಸೀಗೆ (Prvs.) *Cf.* ಈತ, which in S. Mhr. is *always* used as the substitute of ಇವ when speaking of a respectable man; see note s. ಅವ.— ಇವರವರ್. -ಅವರ್. These and those. ಅಲ್ಲಿ, ಇವರವರೆನ್ನದೆ, ಊರವರೆಲ್ಲರುಂ ನೆರೆದು (Bp. 21, 14). ಇಲ್ಲಿ, ಇವರವರೆನ್ನಧೇ, ನೀವೆಲ್ಲರುಂ ಕೇಳಿ! (61, 8).— ಇವಳ್. -ಅಳ್4. ಇವಳು. This woman, she. ಅವಳ್, ಇವಳ್, ಉವಳ್ (Šmd. 245). ಇವಳ್ದಿರ್ (120). ಇವನ್ದಿರ್ (119. 120). ಇವರ್ (121). ಓದಾಳಿ ಇವಳ್ (111). ಇವಳ್ ದೇವರ ತೊಟ್ಟಿ (109). ವಿಷಯ ಬರೆ, ಕಣ್ಣು, ಇವಳ್ಗೆ ಇನ್ನು ವರನ್ ಆಗ ಬೇಕೆನ್ದು (J. 29, 30). *Cf.* ಈಕೆ which in S. Mhr. is *always* used instead of ಇವಳ್ when speaking of a decent woman.

ಇವ iva. *So, just so, even, like, in the same manner.*

ಇವರ್ಣ i-varṇa. The letter ಇ (Šmd. 63).

ಇವಳ್ ivaḷ. See s. ಇವ.

ಇವಿ ivi. = ಎಂ2, ಎವು. A vulgar affix used in S. Mhr. and My. for the first person plural of the imperfect and occasionally of the negative, *e. g.* ಇದ್ದಿವಿ (B. 5, 148), ಬನ್ದಿವಿ, ಹೋದಿವಿ; ಆಡಿವಿ, ಒಲ್ಲಿವಿ.

ಇವು ivu. ಇವುಗಳು. See s. ಇದು.

ಇವೆ ivĕ. (fr. ಇಹವು-ಎ3; *cf.* ಅವೆ). The plural of ಇದೆ2 Nos. 1 & 2. ಆತನ್ ಆಡುವ ಮಾತುಗಳು ವಿಪರೀತವಮ್ ಆಗಿ ಇವೆ (Bp. 60, 24). ಹೇಡಿಲ್ ಪಟ್ಟು ಇವೆ (Si. 18). ಆಗಿ ಇವೆ (330). ಅವೆಲ್ಲ ತಮ್ಮನ್ದ ತಾವೇ ಆಗಿ ಇವೆಯೋ? (B. 2, 24). ಎತ್ತ ಎತ್ತಲುಂ ಕತ್ತಲೆಗಳ್ ಇಟ್ಟಣಿಸಿ ಇವೆ (J. 4, 10); - ತೋಱುತ್ತ ಇವೆ (J. 3, 21). ಕೂಗುತ ಇವೆ (3, 24). ಎಱಗುತೆ ಇವೆ (4, 10).

ಇಷ isha. Possessing sap and strength. 2, *the month âśvina.* 3, causing to move, impelling.

ಇಷತ್ ishat. = ಈಷತ್. (Nn. 147).

ಇಷಾರೆ ishârĕ. = ಹಿಷಾರೆ. A sign or signal; a hint (My.; Br.; Mhr. ಇಸಾರಾ).

ಇಷಿತ ishita. Moved, driven. See ಪ್ರೇಷಿತ.

ಇಷೀಕೆ ishîkĕ. = ಈಷಿಕೆ. *A kind of reed, Saccharum spontaneum.* 2, *a painter's brush.* 3, a small stick of wood or iron used by goldsmiths. 4, *an elephant's eye-ball.*

ಇಷು ishu. *An arrow.*

ಇಷುಧಿ ishu-dhi. *A quiver.*

ಇಷ್ಟ ishṭa. 1. *Wished, desired; agreeable; dear, beloved.* 2, wish, desire; love (Šmd. 7. 156. 158. 159; Kâvy. III, 3, B, 162). 3, a lover, a husband (ವಲ್ಲಭ, etc., ಒಡೆಯ Mr. 227). ಇಷ್ಟವಾದವರು ಕಷ್ಟ ಪಡಿಸ್ಯಾರೋ? (Prv,).

ಇಷ್ಟ ishṭa. 2. Sacrificed. 2, *sacrificing.*

ಇಷ್ಟಕಾಚಯನ ishṭakâ-čayana. A pile or an enclosure of bricks (J. 33, 33. 37).

ಇಷ್ಟಕಾಪಥ ishṭa-kâpatha. *The root of Andropogon muricatus* (ಕರೇ ಬಾಳದ ಬೇರು G.).

ಇಷ್ಟಕಾರಿ ishṭa-kâri. A person who confers what is desired or agreeable (ಕ್ಷೇಮಗೆಯ್ವವ Mr. 229).

ಇಷ್ಟಕೆ ishṭakĕ. -ಕಾ. = ಇಟ್ಟಗೆ, etc., ಇಷ್ಟಿಕೆ. *A brick.*

ಇಷ್ಟಗನ್ಧ ishṭa-gandha. Fragrant. 2, *any fragrant substance.*

ಇಷ್ಟದೇವತೆ ishṭa-dêvatĕ. A chosen or tutelary deity, a favourite god (J. 3, 22).

ಇಷ್ಟಮಧುಕ ishṭa-madhuka. Bengal madder, Rubia munjista Roxb. (St. & Pl.).

ಇಷ್ಟ ಮಿತ್ರರು ishṭa mitraru. Friends and acquaintances; — beloved friends (My.; B. 4, 153).

ಇಷ್ಟಲಿಂಗ ishṭa-linga. A desired gender (Šmd. 187). 2, a linga or phallus in wear, one that has been tied to a child's neck by the guru and is worn and worshipped through life (C.; Bp. 58, 31).

ಇಷ್ಟವ ishṭava. (?) Trouble.— ಇಷ್ಟವಮ್ ಎನಲ್ಕೆ ಉಪದ್ರವಮ್ ಎನಿಕು (Mr. 27).

ಇಷ್ಟಶಿಷ್ಟರು ishṭa-śishṭaru. Dear and disciplined people; dear, good people (My.).

ಇಷ್ಟಸಿದ್ಧಿ ishṭa-siddhi. The fulfilment or obtainment of one's desire (Šmd. 5; My.).

ಇಷ್ಟಾನಿಷ್ಟ ishṭa-anisnṭa. Desired and not desired, auspicious and inauspicious (Hlâ. 1, 126).

ಇಷ್ಟಾಪೂರ್ತಿ ishṭa-âpûrti. = ಇಷ್ಟಸಿದ್ಧಿ. (C.).

ಇಷ್ಟಾರ್ಥ ishṭa-artha. Anything desired or agreeable (Šmd. 6 Cm.; J. 5, 47. 67).

ಇಷ್ಟಾರ್ಥಪ್ರಕಟನ ishṭârtha-prakaṭana. Manifesting ಇಷ್ಟಾರ್ಥ (Kâvy. II, 1, 8-11).

ಇಷ್ಟಾರ್ಥೋದ್ಯುಕ್ತ ishṭârtha-udyukta. *Diligent for a desired object, zealously active.*

ಇಷ್ಟಿ ishṭi. 1. *Wish, desire;* seeking for. 2, a desired rule, a desideratum, an addition to a rule (of Pâṇini).

ಇಷ್ಟಿ ishṭi. 2. *A sacrifice.*

ಇಷ್ಟಿಕೆ ishṭikĕ. = ಇಷ್ಟಕೆ, etc. (Sk.; My.).

ಇಷ್ಟಿತ ishṭita. Desired; a desired object (Bp. 57, 63).

ಇಷ್ಟು ishṭu. (= ಇಟ, etc., ಇನಿತು, ಇನಿತುಟು, etc., ಇಸ 1, ಈಟು, ಈಸು). A proximate demonstrative noun and pronoun: this measure, this much, so much as this; thus much or many, etc. (see ಅಷ್ಟು, of which it is the proximate form; C.; M. ಇಯತ್ತು, so much; Tu. ಈತು; Tĕ. ಇಟು, ಇಷು, ಇಟ್ಲಾ, ಇಟ್ಲು, ಇಷ್ಟಾ, thus, like this). ಇಷ್ಟಱಲ್ಲಿ (Šmd. 179 Cm.). ಇವಿಷ್ಟು ಸಾಲದೆ (Bp. 42, 32). ಇಷ್ಟು ತ್ವರೆ ಯಾಕೆ? (B. 1, 25). ಮಱಿಗಳನ್ನು ಹವ್ಬುಲದಿನ್ದ ಕಾಯುವ ಗುಣವನ್ನು ಗುಬ್ಬಿಗಳಲ್ಲಿ ಸಹ ದೇವರು ಇಷ್ಟು ಇಟ್ಟಿದ್ದಾನೆ (2, 6). ತಾವು ಅರಳೀ ಕದ್ದದ್ದು ಇಷ್ಟೆ ಅಲ್ಲ, ಅದನ್ನು ತಮ್ಮ ಗಡ್ಡಕ್ಕೆ ಹಚ್ಚಿ ಕೊಣ್ಡು,.. ಮೇಜವಾನಿಗೆ ಬನ್ದಿರುತ್ತಾರೆ (4, 21). ದೇವರನ್ನು ಯಾರೂ ನೋಡಿಲ್ಲ; ಆದರೆ ಇಷ್ಟಱ ಮೇಲಿನ್ದಲೇ, ಆತನು ಇಲ್ಲವೆನ್ದು, ಸರ್ವಥಾ ಊಹಿಸಲಾಗದು (4, 58). ಇನ್ನು ಇಷ್ಟಱ ಮೇಲಿನ ನಾನು ಹೇಳಿದ ಕಥೆಯ ತಾತ್ಪರ್ಯವನ್ನು ತಿಳ ಕೊಳ್ಳ ಬೇಕು (5, 149). ಅಲ್ಲಿ ನಮ್ಬಿಗೆಯವರು ಬಹಳ, ಇಲ್ಲಿ ತುಸು, ಇಷ್ಟೇ! (5, 288). ಇಷ್ಟು ಹೊತ್ತು (Si. 64).— ಇಷ್ಟರು. So many persons as these (C.).

2, -ಉ 9, all these persons (C.). — ಇಷ್ಟಷ್ಟು. -ಅಷ್ಟು. This much and (or) that much. ಅವನ ಕಷ್ಟ ಇಷ್ಟಷ್ಟಲ್ಲ, his trouble is excessive (C.). — ಇಷ್ಟಿಷ್ಟು. rep. ಇನ್ಥ ಇನ್ಥ ಹೊತ್ತಿಗೆ ಇಷ್ಟಿಷ್ಟು ಕೆಲಸಗಳನ್ನು ಮೂಡ ಬೇಕು (B. 3, 88). — ಇಷ್ಟೊತ್ತು. -ಒತ್ತು 6. = ಇಷ್ಟು ಹೊತ್ತು. (My.; G. 60). — ಇಷ್ಟೊನ್ನು. -ಒನ್ದು 2. So much as this; little; much (My.). ಇಷ್ಟೊನ್ದು ಮಾತ್ರ ಒಳ್ಳೇದು (B. 5, 112). ಇಷ್ಟೊನ್ದು ಸಾಕು (C.). ಇಷ್ಟೊನ್ದು ಅನ್ನ ಯಾಕೆ ಉಣ್ಡಿ? (C.).

ಇಷ್ಟೆ ishṭe. A beloved woman (ಪ್ರಾಣಕಾನ್ತಳ್ Dhw.).

ಇಷ್ವಾಸ ishu-âsa. *A bow.*

ಇಸ್ is. = ಇಶ್ಶಿ. A common interjection of disgust: fie! foh! poh! (Tĕ. ಇಸೀ; Mhr. ಇಸ; *cf.* ಇಸಿ 1).

ಇಸ isa. 1. = ಇಷ್ಟು, etc. (S. Mhr.).

ಇಸ isa. 2. = ಇಸಿ 2, ಇಸು 1, (ಈಸಿ of ಈಸು3). An abbreviated P. p. — ಇಸ ಕೊಳ್ಳು. To take (My.; B. 5, 107. 214. 300). ಇಸ ಕೋ! (3, 78).

ಇಸ isa. Tbh. of ವಿಷ. Bitterness. 2. poison (C.). — ಇಸೆಣ್ಣೆ. -ಎಣ್ಣೆ. Bitter oil (S. Mhr.).

ಇಸಕು isaku. = ಇಸಿಕು, ಹಿಸಕು, etc. (My.).

ಇಸಬು isabu. = ಇಸುಬು. An itch which attacks the wrists, etc. (C.; Mhr. ಇಸಪ, ಇಸಬ).

ಇಸಬುಗೋಲು isabugôlu. = ಪಿಸಮುಗೋಲು. An annual plant, native of Persia, but cultivated in India for its medicinal seed, fleawort, Plantago ispaghula Roxb. (C.; St. & Pl.; Mhr., H.).

ಇಸಮು isamu. A name, a noun (Mhr., H.); a person, an individual (My.). — ಇಸಮುವಾರ, according to name, regularly by the names, name by name (My.; Mhr.). — ಇಸಮುವಾರಪಟ್ಟಿ, an individual account (My.).

ಇಸವಿ isavi. ಇಸವೀ. = ಇಸ್ವಿ. Christian; the Christian era (C.; Mhr., H.).

ಇಸಾಪ isâpa. Aesop (B. 5, 127).

ಇಸಾರಣೆ isâraṇe. Tbh. of ವಿಚಾರಣೆ (My.).

ಇಸಿ isi. 1. The ordure of babies (C.; *cf.* ಇಸ್; ಹೇಸು).

ಇಸಿ isi. 2. = ಇಸ 2, etc. — ಇಸಿ ಕೊಳ್. = ಇಸ ಕೊಳ್ಳು. (Bp. 29, 26; My.).

ಇಸಿಕು isiku. = ಇಸಕು, etc. (My.).

ಇಸು isu. 1. = ಇಸ 2, etc. — ಇಸು ಕೊಳ್ಳು. = ಇಸ ಕೊಳ್ಳು. (B. 1, 23; 4, 52; 5, 303; My.).

ಇಸು isu. 2. = ಈಸು 3. To permit (only in P.; *cf.* ಇಂಗು 2). ಸೋಕಲಿಸದೆ (P. 51), ಸೇರಲಿಸದೆ (88), ಕಾಣಲಿಸದೆ (203), ಸೇರಲಿಸಿದರೆ, ಸೇರಲಿಸನು (118).

ಇಸು isu. 3. = ಎಚೆ, ಎಸು, ಎಸೆ 1, ಏಯ್. To throw, to discharge or shoot, as an arrow (ಶರವಿಮೋಚನ Šmd. Dh.; Tĕ. ಎಗಿ, to fly, bound; ಎಗುಚು, to cast, shoot; T. ಎಯ್, ಎಱಿ; M. ಎಯ್ಯು, ಎಱಿ; T. ಇಗುತ್ತಲ್, a throw; *cf.* ಇಡು 1, ಇಱಿ 1, ಏಸು 1). P. p. ಎಚ್ಚು (Šmd. 282); third person of the present ಎಚ್ಚಪಂ (282). ಇಸುತಿರ್ದಂ (280). ಎಚ್ಚಂ, ಎಚ್ಚರ್ (287). ಕಾಮನ್ ಎಚ್ಚಂ (109). ತಾನ್ ಎಚ್ಚಂ ಪೊಚ್ಚಮ್ ಅಲ್ಲದ ಅರಿವಾಹಿನಿಯಂ (263). ಮಾಱಾನ್ತು ಎಚ್ಚಂ ಮಹಾರಥಂ ನರಂ (284). ಅವನಾನೊಬ್ಬನು ಗುಱಿಯನ್ ಎಚ್ಚು ತಪ್ಪಿದವನ್ ಉಣ್ಬ, ಈತನು ಅಪರಾಧ್ಧಪೃಷತ್ಕನು (Nr.). ಅಪರಾಧ್ಧೇಷುವೆಚ್ಚುವನು ಎಚ್ಚು ತಪ್ಪಿದವನು (Hlâ.). ಎಚ್ಚವಮ್ಬು (ನಿರಸ್ತ Nr.; Abh. P. 13, 141). ಎಚ್ಚುಮ್ ಇಟ್ಟುಮ್ ಇಱಿದುಂ ಪೊಯ್ದುಂ (Abh. P. 13, after 76). ಶರತರಂಗಳಂ ತೆಗೆದು ಎಚ್ಚು (J. 28, 41). ಸರಿಸದೊಳ್ ಎಚ್ಚೊಡೆ (28, 48). ನಡುನೆತ್ತಿ ಒಡೆಯೆಚ್ಚಂ (Râghĕ. 17, 69). ಕೂರವ್ವಿನಿನ್ದೆ ಎಚ್ಚು (17, 71). See Grj. 7, 29; 8, after 23; 8, 31. 34. 38; Bp. 21, 30; 54, 39. — ಎಚ್ಚಾಡು. -ಆಡು. To shoot at one another (Bh. 8, 23, 4; J. 12, 20; 22, 11). ಪೂಸರಲಿಂ ಪದೆದು ಎಚ್ಚಾಡಿದರ್ (Ršv. 13, 87).

ಇಸು isu. 4. = ಅಸು 2 (ಚು, ಸು; *cf.* ಪು 2). An affix that is joined 1, to Saṁskṛita, Tadbhava (and Hindusthânî) themes to form verbs transitive or intransitive, and 2, to Kannaḍa themes to form (transitive or) causative verbs (see remark *b*, s. ಕೊಳ್ 1). In Saṁskṛita it is not to be used with a bhinnakartṛi, *e. g.* it is wrong to say ಖಣ್ಡಿಸಿಸಿದಂ (Šmd. 274). — See *e. g.* ರಾಗಿಸು, ಭಂಗಿಸು, ಭಾವಿಸು (Šmd. 63), ನಿರ್ಣಯಿಸು (65), ಭಾಗಿಸು, ರಂಗಿಸು, ರಾಗಿಸು, ಭೋಗಿಸು, ಪ್ರೇರಿಸು, ವರ್ಣಿಸು, ವರ್ಜಿಸು, ತರ್ಜಿಸು, ಚರಿಸು, ಧರಿಸು (92), ರಂಜಿಸು, ಪಾಲಿಸು, ಪರಿಹರಿಸು (268), ರಕ್ಷಿಸು, ಪೂಜಿಸು (270), ಖಣ್ಡಿಸು, ಚಿತ್ರಿಸು, ಮುದ್ರಿಸು (274), ಉದ್ಭಾವಿಸು (1), ಉತ್ಪಾದಿಸು, ಪ್ರಯೋಗಿಸು (142), ಉದ್ಭವಿಸು, ಅವತರಿಸು (143), ಅವಧರಿಸು (4), ಅಂಗೀಕರಿಸು (6), ಆಕಾಂಕ್ಷಿಸು (8), ವ್ಯವಹರಿಸು (11), ಪ್ರಯೋಗಿಸು (22), ಉಚ್ಚರಿಸು (38), ಉದಯಿಸು (43), ಪರಿಭಾವಿಸು (44), ಸಂಚರಿಸು (56), ಅನುಕರಿಸು (71); — ಶುದ್ಧಯಿಸು, ಕಾರಯಿಸು, ಪೂರಯಿಸು (65), ಚರಯಿಸು, ಧರಯಿಸು (92), ಮನ್ದಯಿಸು (326); — ಫಲಿಯಿಸು (395), ಜನಿಯಿಸು (7. 46); — ಮೇಳಿಸು (325), ಜಾನಿಸು (327), ಪರಿಕಿಸು (20), ಸಯ್ರಿಸು, ಸನ್ದಿಸು, ಬಿನ್ನವಿಸು (327); ಮೇಳಯಿಸು (65); ಉಜ್ಜುಗಿಸು (Ršv. 6, after 10); see ಬದಲಿಸು, ಬದಲಾಯಿಸು; — ನುಡಿಯಿಸು, ಮುಡಿಯಿಸು, ಕಡಿಯಿಸು (Šmd. 273), ಗುಡಿಯಿಸು (326), ನಡೆಯಿಸು (233), ಈಯಿಸು, ಕೇಯಿಸು, ನೋಯಿಸು, ಮೇಯಿಸು (273), ನಗಿಸು (273), ಪೋಗಿಸು, ತಾಗಿಸು, ತೂಗಿಸು (275), ಮಾಡಿಸು, ನೋಡಿಸು, ಆಡಿಸು, ಮುತ್ತಿಸು, ಕಟ್ಟಿಸು (327. 328), ಕಾಣಿಸು (273), ತರಿಸು, ಬರಿಸು, ಇರಿಸು (275), ಸೋಲಿಸು (326), ಒರಯಿಸು (65), ಪೊಸಯಿಸು (268), ನಡಯಿಸು q. v., ತೆರಯಿಸು, ತೆಲ್ಲಯಿಸು (65. 189), ತೊರಯಿಸು, ಹೊಲ್ಲಯಿಸು, ನಿಟ್ಟಿಸು, ತುಟ್ಟಿಸು, ದಳ್ಳಿಸು (273), ಪೊಂಗಿಸು, ಸೊಪ್ಪಿಸು (274). — About the elision of the ಸು in ಇಸು before ಕುಂ, ಕ್ಕುಂ, (ಕು) (Šmd. 268), ಕೆ, ಕ್ಕೆ (269), ಪ, ಪ್ಪ, (ವ) (275) observe *e. g.* ಎನಿಕ್ಕುಂ (19. 51), ಪರಿಹರಿಕುಂ (268), ಸಮನಿಕುಂ, ಕೇಳಿಕುಂ, ಭಾವಿಕುಂ, ಮಾಣಿಕುಂ, ಪುರುಡಿಕ್ಕುಂ, ಪೊಗಱಿಕ್ಕುಂ, ರಂಜಿಕ್ಕುಂ, ಪಾಳಿಕ್ಕುಂ (268); ಪರಿಪಾಳಿಕೆ (269), ರಕ್ಷಿಕೆ, ರಕ್ಷಿಕ್ಕೆ ಪೂಜಿಕೆ, ಪೂಜಿಕ್ಕೆ, ಪೆರ್ಚಿಕೆ, ಪೆರ್ಚಿಕ್ಕೆ (270), ಅವತರಿಕು (Šm. 19); ತರಿಪಂ, ಬರಿಪಂ, ಇರಿಪಂ, ಬೆಸಪಂ, ಕಾಪಂ, ಬರಿಪುದು, ಬೆಸಪ್ಪಂ, ಉದಯಿಪ್ಪ, ಬೆಳಪ್ಪಂ (Šmd. 275), ಭಾವಿಪೊಡೆ, ಸೇವಿಪೊಡೆ (298), ಉದ್ಭಾವಿಪ (1), ಎನಿಪ್ಪುವು (26), ಕೆಡಿಪುದು (74), ಎನಿಪ್ಪ (96), ಸಲಿಪರ್ (88), ವರ್ತಿಪ (98), ಉದಯಿಪ (42), ಅನುಕರಿಪರ್ (71), ರಕ್ಷಿಪುದು, ಅವಧರಿಪುದು (264), ವಿರಹಿಪ್ಪುದು (Ršv. 13, 4), ಕಲಿಪ (J. 28, 19), ಪ್ರವರ್ತಿಪ (28, 25).

ಇಸು isu. (Tbh. of ಇಷ್ಟ?). — ಇಸುವೆಸಕೆಯ್ಸು. -ವೆ-. To subject or rule according to wish or at will (Abh. P. 9, 165).

ಇಸುಬು isubu. = ಇಸಬು, etc. (C.).

ಇಸ್ತಕಬಾಲು istakabâlu. Reception, meeting and receiving a visitor (My.; Br. as ಇಸ್ತಕ್ಬಾಲು).

ಇಸ್ತರಿ istari. = ಇಸ್ತ್ರೀ. (My.).

ಇಸ್ತಿಹಾರ್ istihâr. Proclamation (My.; H.). — ಇಸ್ತಿಹಾರ್‌ನಾಮೆ, a written proclamation, a written notice; an advertisement (B. 5, 10; My.).

ಇಸ್ತ್ರೀ istrî. A smoothing iron; — ironing (C.; Mhr., H.).

ಇಸ್ನಾಪು isnâpu. A "snipe" (Bd.).

ಇಸ್ವಿ isvi. = ಇಸವಿ. (My.).

ಇಸ್ಸಿ issi. = ಇಸ್. Fie! (ಜುಗುಪ್ಸನ Šmd. 398; ಹೇಸಿಕೆ Cm.; ಜುಗುಪ್ಸಾರ್ಥಂ Čt. I, 20; My.; Tĕ., M.). — ಇಸ್ಸಿಸ್ಸಿ. rep. (My.).

ಇಹ iha. 1. = ಇಪ್ಪ, etc. Present relative participle of ಇರ್ 1, to be. ದೂರವಾಗಿ ಇಹ ಹಾಯಿಬಟ್ಟೆ (ಪ್ರಾನ್ತರ); ಮಱೆಯದೆ ಇಹ ಬುದ್ಧಿ (ಮೇಧೆ Nr.). ಅರಸರುಮ್ ಅರಸಿಯರುಂ ಕೂಡಿ ಇಹ ಬನಂ (ಪ್ರಮದವನ Hlâ.). ಪಿತನೊಳಗೆ ಸೇರದೆ ಇಹ ಸುತನಿನ್ದ ಫಲವೇನು? (Dp. 167). ತೊಳತೊಳಗುತಿಹ ಸೊಬಗು (J. 28, 18). ವಿಖ್ಯಾತಮ್ ಆಗಿಹ ರಾಜಧಾನಿಕುನ್ತಲಂ (29, 16). ನಿಜಕರದೊಳ್ ಇಹ ಪತ್ರಮಂ ಕೊಟ್ಟಂ (30, 49). ಕೊಲ್ಲದೆ ಇಹಲ್ಲಿ ಧರ್ಮ (Nn. 79). ಎದ್ದು ಇಹವನು (ಜಾಗರೂಕ, etc.); ಸುಮ್ಮನೆ ಇಹವನು (ತೂಷ್ಣೀಕ); ನವಿಲ ಗಱಿಯನ್ ಉಟ್ಟು ಇಹನು (ಕಿರಾತ); ಎಲೆಯನ್ ಉಟ್ಟು ಇಹವನು (ಶಬರ); ಬತ್ತಲೆ ಇಹವನು (ನಗ್ನ); ಒಳ್ಳಿಹ ನುಡಿ (ಸುವಚನ); ಒಳ್ಳಿಹ ನೋಟವು (ವಲ್ಗುದರ್ಶನ); ಒಳ್ಳಿಹ ನಲ್ಲದ ಅರಸನ್ ಉಳ್ಳ ದೇಶ (ರಾಜನ್ವನ್ತ್); ನಸುಬಿಳುದಾಗಿ ಮಿಂಚುವ ಬಟ್ಟೆಹ ತೊನ್ನು (ಕೋಠ); ತೋರಿಹ ಕೆಚ್ಚಲನ್ ಉಳ್ಳ ಆಕಳು (ಪೀನೋಧ್ನಿ); ಬೆಟ್ಟದತ್ತಣಿನ್ದ ಉರುಳ್ವ ದೊಡ್ಡಿಹ ಕಲ್ಲುಗಳು (ಗಣ್ಡಶೈಲ); ದೊಡ್ಡಿಹ ಎತ್ತು (ಮಹೋಕ್ಷ Nr.). ಒಳ್ಳಿಹ ಹಸು (ಗೋಮತಲ್ಲಿಕೆ); ಒಳ್ಳಿಹ ಮಣ್ಣು (ಮೃತ್ಸೆ Hlâ.). — ಇಹದು. = ಇರುವದು, ಇಪ್ಪದು, etc., ಇಹುದು. ನಿನ್ದಿಹದು (Mr. 464; see Jñs. 42, 63). — ಇಹುದು. = ಇಹದು, etc. ಕಣಿಯಲ್ಲಿ ಹುಟ್ಟಿ ಚೂರ್ಣಾದಿರೂಪವಾಗಿ ಇಹುದು (ಅಕೃತ Nr.). ಜ್ಞಾನವುಳ್ಳವನ ಒಡಲು ಭಾನುವಿನ ತೆಱನ್ ಇಹುದು (Sp.). ನಿನ್ನಯ ದೈವವೇ ಗತಿ ಎನ್ದು, ನಮ್ಮ ಇಹುದು (Bh. 1, 8, 26). Conjugation: ಇಹೆಂ (Bp. 18, 37; 26, 47) or ಇಹೆ (42, 33); — ಇಹೆ (42, 17. 33; 47, 9. 53. 55; 50, 73); — ಇಹಂ (10, 16; 18, 90; J. 28, 22. 53); — ಇಹಳ್ (Bp. 11, 40; J. 29, 23); — ಇಹೆವು (Bp. 2, 30; 12, 29; 25, 37; 57, 12; J. 29, 22; Bh. 1, 8, 78); — ಇಹಿರ್, ಇಹಿರಿ (Bp. 28, 30; 56, 18); — ಇಹರ್, ಇಹರು (1, 57; 26, 47; 40, 77; Bh. 1, 8, 20; 2, 13, 34); — ಇಹವು (Bp. 38, 10; 55, 32). ನಾ ಮುಂಚೆ ತಾ ಮುಂಚೆ ಇಹೆನೆನ್ದು, ಒಬ್ಬರಿಗೆ ಒಬ್ಬರು ಅತಿಕ್ರಮಿಸಿ ಮುಂಚುವುದು (ಅಹಮ್ಪೂರ್ವಿಕೆ); ಲೋಗರ ಕೊನ್ದು ಇಹೆ, ಕೆಡಿಸಿ ಇಹೆನೆಮ್ಬ ವಿಚಾರಂ (ವ್ಯಾಪಾದ, etc. Nr.).

ಇಹ iha. 2. Being; stay, etc. ಅರಯ್ದು ಎದ್ದಿಹ (ಪ್ರತಿಜಾಗರ, ಅವೇಕ್ಷೆ Nr.).

ಇಹ iha. *In this place, here; at this time.* 2, the present state, the present world. ಇಹಾ ನಮ್ಮ, ಪರಾ ಮಱತ (Prv.). — ಇಹಪರ. This world and the next, earth and heaven (C.; Bp. 24, 13; 40, 63; 43, 4; J. 5, 62). — ಇಹಲೋಕ. This world (C.; B. 5, 94; Bp. 28, 64).

ಇಹಗೆ i3-hagĕ1. = ಇಹಂಗೆ, ಇಹಿಗೆ, ಹೀಗೆ, ಹೀಂಗೆ. This manner; in this manner, thus (Bp. 28, 30; 35, 34; 44, 9; 51, 39. 43; 52, 34; 54, 7; 61, 35; see ಅಹಗಿಹಗೆ). *Cf.* ಆಹಗೆ, ಏಹಗೆ.

ಇಹಂಗೆ i3-hangĕ. = ಇಹಗೆ, etc. (Bp. 24, 89; 25, 3; 40, 59).

ಇಹತ್ರ iha-tra. Here, in this world (Abh. P. 6, 111).

ಇಹಿಗೆ i3-higĕ. = ಇಹಗೆ. (Bp. 15, 17; 19, 20; 45, 38; 46, 14; 49, 18; 57, 17).

ಇೞಿದೞಿಯ iḻidaḻiya. A term that requires the ೞ (Šmd. 40; one MS. adds as a note: ಇೞಿದೆನ್ದು ಕ್ಷೀಣಂ).

ಇೞೆ iḻĕ. = ಇೞೆ, ಎೞೆ. (Šm. 39. 118; Bp. 26, 65). The earth (ಧರೆ Kk. 16; ನೆಲ Čt. I, 44; ಭೂಮಿ Mr. 530; ನಿಶ್ಚಲ, ಭೂಮಿ Nn. 46; ಭೂಮ 158). 2, water (ಜಲ 530; ಜಲ, ಉದಕ 158). 3, food (ಅನ್ನ 530; ಅನ್ನ, ಅಶನ 158). 4, sound (ವಾದ್ಯ 530; ಶಬ್ದ 158). 5, fluids (ರಸವಸ್ತೂತ್ಕರ, ರಸದ್ರವ್ಯಂಗಳು 158). 6, ವಿಷಮಾರ್ಥ (158; see Mr. s. ಇಲೆ). — ಇೞೆಯ ದಂಗುಳಿಯಾರ. N. (Bp. 47, 36). See ಎೞೆಯ-. — ಇೞೆಯ ಪಿರಿಯ. A Brâhmaṇa (ನೇರಿದ, ದಿಮ್ಮಿದ, etc. Kk. 34; ದ್ವಿಜ Šm. 52). — ಇೞೆ ಹಾರಿ ಬೊಮ್ಮಯ್ಯ. N. (Bp. 9, 46; 60, 19).

ಇಳ್ಳೆ illĕ. = ಈಳೆ, etc. (My.).

ಇೞ್ iḻ. 1. = ಈೞ್ 2, ಈೞ್, ಎೞ್ 1. To pull, to drag; to attract; to take away by force, etc. (ಕವರ್, ಸುಲಿ, ಪರಿಮುತ್ತೆ, ಸೆಳೆ Šm. 63; ಇೞ್ಕುಳಿಗೊಳ್, ಎೞಿಕುಳಿಗೊಳ್, ಕವರ್ತೆಗೊಳ್, ಸೆಳೆದು ಕೊಳ್ Šs.; T. ಇಜ, ಇೞು; Tĕ. ಇಗ್ಗು, ತಿಗು). P. p. ಇೞ್ದು (Šs.; Šm. 63).

ಇೞ್ iḻ. 2. = ಇರ್ 2, etc. Pulling, attracting, etc. — ಇೞ್ಕುಳಿ. = ಇರ್ಕುಳಿ, etc. — ಇೞ್ಕುಳಿಗೊಳ್. -ಕೊಳ್. = ಇರ್ಕುಳಿಗೊಳ್, etc. (See Šs. s. ಇೞ್ 1).

ಇೞಿ iḻa. 1. = ಇೞ್ 2, ಇೞಿದು, ಇೞು 1. P. p. of ಇೞ್ 1. — ಇೞಿ ಕೊಳ್ಳು. = ಇೞು-. To descend, to alight, to halt or stay in a journey (B. 5, 67. 68. 126. 300; C.).

ಇೞಿ iḻa. 2. = ಇೞ್ 4, ಇೞು 2. Coming down, descending, going down; being depressed; being humbled; declining; abating; etc. — ಇೞಿತರ. = ಇೞ್ತರ. A going down, declining or waning manner or state, as that of an elderly person's age (C.); the state of becoming less or that of being abated or subsided, as the water of a river, anger, disease, etc. (My.); that of becoming cheaper, as grain, etc. (My.); that of being less valuable, as a cloth, etc. (My.); an inclining state, a slope, as of ground, etc. (My.; G. 357. 570). — ಇೞಿವರೆ. = ಇೞಿವಾರೆ. (S. Mhr.). — ಇೞಿವಾರ. = ಇೞಿವಾರೆ. (My.). — ಇೞಿವಾರೆ. A sloping state, a slope (S. Mhr.; ಬೊಂಕನೆ Čb.). — ಇೞಿಹೊತ್ತು. = ಇೞ್ಹೊತ್ತು, ಇೞುಹೊತ್ತು. The time from midday to sunset (C.; B. 3, 124).

ಇೞಿಕಿಸು iḻakisu. To cause to lower, etc. (My., also ಇೞ್ಕಿಸು, ಇೞುಕಿಸು).

ಇೞಿಕು iḻaku. = ಇೞ್ಕು, ಇೞುಕು. To cause to go down, to lower, etc. (My.). **2,** to go down, to incline. — ಇೞಿಕಲ. = ಇೞಿಕಲು. Sloping; a slope; a sloping ground (C.; B. 4, 115. 205). — ಇೞಿಕಲು. = ಇೞಿಕಲ. (C.; ಓರೆ G.; B. 3, 56; 4, 205. 213; 5, 13).

ಇೞಿತ iḻata. = ಇೞ್ತ. Descending, inclining, etc. (My.); descent, as that of a sword-cut into the body or of a hoe-cut into the ground (S. Mhr.).

ಇೞಿಪು iḻapu. = ಇೞ್ಪು, etc. (Č. Bp. 47, 46).

ಇೞಿ iḻi. 1. To come down, to descend, to alight, to go down (ನಿಮ್ನಾವತರಣ Šmd. Dh.; ಕೆಳಗಣ್ಗೆ ವರ್ Šmd. I; C.); to set, as the sun (C.; Si. 114); to be lowered; to go out of joint, as a bone (C.); to become less; to subside, to be abated, as anger, etc. (C.); to be dispelled, as poison (C.); to be depressed or humbled; to become lean (ಮೆಯ್ಯುಗ್ಗನ್ದು Šmd. I; My.); to become

sapless, as fruits (S. Mhr.); to slope (C.). (T., M.; Tu. ಇಳಿ, ಇಲಿ; Tĕ. ದಿಗು; *cf.* ದಿಗಿಸು). ಗಿರಿಯತ್ತಣಿನ್ದೆ ಇೞಿದಂ (Šmd. 62). ಮರದತ್ತಣಿನ್ದೆ ಇೞಿದಂ (63). ಜವ್ವನಮ್ ಇೞಿಯದು (291). ನೀರಿೞಿದವನು (ಅವಸ್ನಾತ Nr.). ದಣ್ಡು ಇೞಿದಿದ್ದ ಸ್ಥಲ (ನಿವೇಶ, etc. Si. 268). ಮದವಿೞಿದ ಆನೆ (ನಿರ್ಮದ 269). ಹೊಟ್ಟೆ ಇೞಿದ ಆಕಳು (ಅವತೋಕೆ 321). ಕ್ರಮದಿನ್ದ ವಾಟವಾಗಿ ಇೞಿಯ ತಕ್ಕ ನೆಲ (ಪ್ರವಣ 421). ಅಲ್ಲಿ ಇೞಿವ ಅಡಿಡಿಗಳ್ ಇೞಿವ ತಮವಮ್ ಎನಿಸಿರ್ಕುಂ (Rŝv. 2, 41). ಇೞಿವ ಅಲಿವರಲ ಮೞೆ (8, 113). ಪಶ್ಚಿಮನಗದ ಅಗ್ರದೊಳ್ ಇೞಿದು ತೋರ್ಪ ದಿನಕರಬಿಮ್ಬಂ (11, 2). ಆನೆಯನ್ ಇೞಿದು (Bp. 5, 17). ವಾಜಗಳನ್ ಇೞಿದು (Rŝv. 13, after 96). ಇೞಿದರ್ ಆನೆಯಂ (Bh. 2, 13, 8). ಇೞಿದು ನಿಜವಾಜಿಯಂ (J. 28, 55). ಶಾತಕುಮ್ಭಾಲಂಕೃತಾಸನವನ್ ಇೞಿದು (30, 49). ಪೊನ್ನ ಸ್ಥಣಮನ್ ಇೞಿದು (31, 30). ಧೂಮಮ್ ಇೞಿದುದು (Bh. 1, 20, 59). ಸರಸಿಗೆ ಇೞಿದರು (Râm. 24, 4). ಅಲ್ಲಿನ್ದ ಇೞಿದು (Bh. 2, 4, 7). ಇೞಿದು ರಥದಿನ್ದ (J. 19, 7). ಫಣಿ ಬಿಲಕೆ ತಾನ್ ಇೞಿಯೆ (31, 29). ಬಣ್ಡಿಯಿನ್ದಿೞಿದು (Bp. 46, 8). See J. 2, 49; 3, 38; 5, 15; 13, 23. 40; 23, 16. 18. 36. — ಇೞಿದಾರವಾರ. -ಆರವಾರ. = ಇೞಿಭೋಗ್ಯ. (Mg.). — ಇೞಿಯ ಜಾಱು. To slip down (Bp. 52, 13). — ಇೞಿಯ ನೂಕಿಸು. To push or throw down (Bp. 51, 72). — ಇೞಿಯ ಬೀೞು. To fall downwards or down (My.; Si. 83. 115); to descend, to hang down, as roots from the branches of certain trees (121; My.); —to fly away, to retreat (My.). — ಇೞಿಯಲಿಕ್ಕು. -ಇಕ್ಕು. ~~To suspend.~~ ಕೊರಲೊಳಗೆ ಇೞಿಯಲಿಕ್ಕುವದು (ನಿವೀತ Hlâ.). — ಇೞಿಯ ಹಾಕು. = ಇೞಿಯಲಿಕ್ಕು. (My.). — ಇೞಿಯಿಕ್ಕು. -ಇಕ್ಕು. To suspend. ಕೊರಳಿನ್ದ ಇೞಿಯಿಕ್ಕಿದ ಜನಿವಾರವು (ನಿವೀತ Nr.). — ಇೞಿಯವೇೞ್. -ಪೇೞ್. To order to come down from (Bp. 39, 46). — ಇೞಿಯಿೞಿ. rep. (Bp. 32, 15; B. 5, 181).

ಇೞಿ iḻi. 2. = ಇೞಿ 1, etc. — ಇೞಿ ತರ್. To descend (Grj. 9, 8; 9 after 86; Râm. 6, 10, 25; Rŝv. 9, 18; J. 28, 10).

ಇೞಿ iḻi. 3. = ಇೞಿಯ. An infinitive of ಇೞಿ 1. — ಇೞಿದೆಗೆ. -ತೆಗೆ. = ನಿವಾಳಿಸು. (My.). — ಇೞಿ ಬಿಡು. To let down, to lower (C.; B. 4, 161). — ಇೞಿ ಮುೞುಗು. To dive completely under water (My.). — ಇೞಿವಾಯ್ಕು. -ಹಾಯ್ಕು. To throw or cast down (Rŝv. 6, 116). — ಇೞಿವಿಡು. -ಬಿಡು. = ಇೞಿ ಬಿಡು. (Rŝv. 6, 116, o. r. ಇೞಿದಿಡು). — ಇೞಿವಿೞ್. -ಬಿೞ್. To fall down from: to descend hurriedly (V. 39, 8). ಇೞಿ ಹಾಕು. = ಇೞಿಯ ಹಾಕು. (My.).

ಇೞಿ iḻi. 4. = ಇೞಿ 2 q. v., etc. Also: the line that descends in adding a long vowel to a consonant, the dîrgha sign, *e. g.* ಮಾ, ಮೀ (C.). — ಇೞಿಕೆಯ್. = (ಇೞಿಕೆಗೆಯ್, ಇೞಿಂಕೆಗೆಯ್). To put down, to humble, to degrade, to surpass (Rŝv. 6, after 11); to despise, to reject (Abh. P. 7, 14). — ಇೞಿಜಾಱು. A declivity, a slope or slide on the side of a hill or of any rising ground (C.). — ಇೞಿತರ. = ಇೞಿತರ. (My.). — ಇೞಿಪಾಟು. = ಇೞಿತರ. (My.). — ಇೞಿಭೋಗ್ಯ. A mortgage in which the mortgagee retains possession of the property, in lieu of interest, until the debt is paid (My.). — ಇೞಿಯುವ್ಪೊೞ್ತು. -ಉಂ-ಪೊೞ್ತು (Šmd. 204). The setting sun (*cf.* ಇೞಿಹೊತ್ತು). — ಇೞಿಹೊತ್ತು. = ಇೞಿಹೊತ್ತು, q. v. (My.; B. 2, 10; 4, 40).

ಇೞಿಕು iḻiku. = ಇೞಿಕು No 1. (My.).

ಇೞಿಕೆ iḻikĕ. = ಇೞಿಂಕೆ. Descent, etc. (C.); fading, as colour (My.); growing less, as a person's influence (My.); humbled, degraded condition. — ಇೞಿಕೆಗಾಣ್. -ಕಾಣ್. To disregard (Râm. 3, 8, 39). — ಇೞಿಕೆಗೆಯ್. = ಇೞಿಕೆಯ್. (J. 9, 4). — ಇೞಿಕೆಗೊಳ್. -ಕೊಳ್. To humble one's self (J. 7, 63).

ಇೞಿಂಕೆ iḻiṅkĕ. = ಇೞಿಕೆ. — ಇೞಿಂಕೆಗೆಯ್. = ಇೞಿಕೆಯ್. (Rŝv. 13, 60).

ಇೞಿತ iḻita. = ಇೞಿತ. (My.).

ಇೞಿಪು iḻipu. = ಇೞಿಪು, ಇೞಿಸು 1, ಇೞಿಹು, ಇೞುಪು, ಇೞುಹು. To cause to descend, go or come down; to cause to abide or lodge; to let down, to lower; to take down; to put down; to cause to be lessened; to dispel, as poison; to slight (ಅಧಃಸ್ಥಾನ Šmd. Dh.); to counterfeit, to draw a likeness of (C. as ಇೞಿಸು). See Rŝv. 6, after 11; 13, 101; J. 19, 6.

ಇೞಿಯುವಿಕೆ iḻiyuvikĕ. Descending, alighting, etc. (ಸಣ್ಡೀನ Si. 182).

ಇೞಿಸು iḻisu. 1. = ಇೞಿಪು, etc. (C.). ವಿಷವನ್ನು ಇೞಿಸಿದ ವೈದ್ಯನು (Si. 78). ಗೋಣಿ ಇೞಿಸಿ ಕೊಣ್ಡ ಕೂಡಲೆ ಬಾೞೀ ಗಿಡವನ್ನು ಕಡಿದು (B. 2, 37). ಕಾಯಿಗಳು ಪಾಡಾಗಿ ಬೀೞು ಹತ್ತಿದ ಬೞಿಕ ಅವುಗಳನ್ನು ಇೞಿಸಿ (2, 51). ಸೊಕ್ಕನ್ನು ಇೞಿಸದಿದ್ದರೆ (5, 61). ನನ್ನ ಮನೆಯೊಳಗೆ ಸ್ಥಲವಿದ್ದರೆ ನಿನ್ನನ್ನು ಇೞಿಸಿ ಕೊಳ್ಳುತ್ತಿದ್ದೆ (5, 126). See ಅಡಿಗೆಯಿೞಿಸು, ಬಟ್ಟೆಯಿೞಿಸು, ಹದವಿೞಿಸು.

ಇೞಿಸು iḻisu. 2. Stopping, thwarting (see ಎೞಿಸು). — ಇೞಿಸುನೂಂಕು. To thwart, to oppose, etc. (ಎೞಿಸಿದುದು, ತಳ್ವೊಯ್ದುದು, ತಡವ್ಪರೆದುದು, ಮಾರ್ಕೊಣ್ಡುದು, ಕಡೆಗಣಿಸಿದುದು, ಪೋರ್ಕುಳಿ, ಪ್ರತಿಹತ Šs.).

ಇೞಿಹ iḻiha. Going down, etc. ನೀರಿೞಿಹ (ಅಪಸ್ನಾನ, ಮೃತಸ್ನಾನ Hlâ.).

ಇೞಿಹು iḻihu. = ಇೞಿಪು, etc. (Bp. 12, 34). **2,** in the middle voice: to be abated or assuaged. ಮದವಿೞಿಹಿದ ಆನೆ (ಉಪಾತ್ತ Hlâ.).

ಇೞು iḻu. 1. = ಇೞಿ 1, etc. — ಇೞು ಕೊಳ್ಳು. = ಇೞಿ ಕೊಳ್ಳು, etc. (My.; B. 4, 30. 155; 5, 208).

ಇೞು iḻu. 2. = ಇೞಿ 2, etc. — ಇೞುಗಡೆ. -ಕಡೆ. Decrease; abatement (My.). — ಇೞುಹೊತ್ತು. = ಇೞಿಹೊತ್ತು, etc. (My.).

ಇೞುಕು iḻuku. = ಇೞಿಕು. (My.).

ಇೞುಪು iḻupu. = ಇೞಿಪು, etc. (Grj. 9, 91; R... 4, 117; 5, after 25; 6, after 11).

ಇೞುಹು iḻuhu. = ಇೞುಪು, etc. (Bp. 8, 38; 11, 45; 32, 43; 43, 29. 39; 44, 9; 59, 2; Bh. 8, 23, 25; J. 13, 37; Dp. 169, 1; My.; B. 5, 40).

ಇೞ್ಕುೞಿ iḻkuḻi. See s. ಇೞ್ 2.

ಈ Î

ಈ î. **1.** The fourth letter of the alphabet (Šmd. 12 seq.), which when initial is often written ಇಾ. Sometimes it is changed into ಇ, *e. g.* ಮಿನ್ದಪಂ (Šmd. 281), ಇತ್ತಂ (282. 285). *Cf.* ಈ 3 & 6.

ಈ î. **2.** The final of the words ಈ (Šmd. 302) and ಏಾ (318).

ಈ î. **3.** The substitute of ಇ, *e. g.* in ಈರಯ್ದು (Šmd. 214), ಈಂಚರ (214), ಈಡು (250), ಬೀಡು (250), etc.

ಈ î. **4.** *A contraction of* ಇಯ 1, in the accusative singular, *e. g.* ಚಾಡೀ ಕೇಳಿ (Sš. 94), ಬೆಣ್ಣೀ ತಕ್ಕೊಣ್ಡು (= ಬೆಣ್ಣೀ-, B. 1, 15), ಪುಸ್ತೀ ಬರೆಯುತ್ತೇನೆ (1, 20), ಗಾಳೀ ತಕ್ಕೊಳ್ಳುತ್ತವೆ (2, 11); **2,** in the genitive singular, *e. g.* ಗಾಳೀ ಸೊಡರ್ (Sš. 74), ಹಿತ್ತಾಳೀದು (B. 1, 18), ತಾಯಿ ಮೊಲೆ (1, 21), ನೆಲ್ಲೀ ಕಾಯ್ (2, 17); **3,** in the locative singular, *e. g.* ಹಾದೀಲಿ (B. 5, 318), ಹಸ್ತೀಲಿ (S. Mhr.); **4,** in the infinitive, *e. g.* ಇಡೀ ಬೇಡು (Si. 83. 115. 121); **5,** in the nominative plural, *e. g.* ಓರಗಿತ್ತೀರು (Si. 191).

ಈ î. **5.** *A contraction of* ಇಯಿ 1, in the imperative, *e. g.* ನಡೀರಿ! (B. 5, 44), ಕಡೀರಿ! ಹೊಡೀರಿ! (S. Mhr.); and **2,** in the third person singular imperfect, *e. g.* ಆಟವೂ ಮುಗೀತು, ತನ್ತಿಯೂ ಹಬೀತು.—ಎಣ್ಣೆ ಬರುವಾಗ ಗಾಣ ಮುಬೀತು (Prvs.). See Prv. s. ಕರೆ 2; the remark on ಇತು.

ಈ î. **6.** = ಇ 3. The substitute of ಇದು (Šmd. 169): this; these (C.; Tĕ., Tu., M.). ಆ ಬನಮ್ ಈ ಬನಮ್ ಊ ಬನಂ (202). ಈ ಪುಲ್ಲೆ ಬನ್ದುವು (169). ಈ ಪೇಡ್ದಿ ಎಣ್ಬುಂ (42). ಈವೀ ಗ್ರನ್ಥಂಗಳ್, ಈವಿದು ಗ್ರನ್ಥಂ (67). ಈ ಕವಿಗಳ್ (5). ಈ ಮನೆಗಳು, ಈ ತೋಟಗಳು (C.). ಈ ಊಟಕ್ಕೆ ಈ ನಾಮ ಸಾಲದೇ?—ಈ ಮುಖಕ್ಕೆ ಯಾಕೆ ಮೇಲುಗೋಟೆನಾಮ?—ಈ ಹಳ್ಳ ಆ ಕಳ್ಳಗೆ ಈಡೇ? (Prvs.). See Bp. 5, 62; 46, 79; J. 13, 8. — ಈ ಕಡೆ. This side or direction (Bp. 25, 38; B. 4, 56). — ಈ ಕಾರಣ. This cause or reason (B. 4, 186); on account of this (C.). — ಈ ಕ್ಷಣ. This moment (C.). — ಈ ತನಕ. = ಈ ವರಿಗೆ. (G.). — ಈ ತೆಱ. = ಈ ಪ್ರಕಾರ. (J. 8, 49; 12, 27). — ಈ ಪರಿ. = ಈ ತೆಱ. (J. 17, 32. 52). — ಈ ಪರಿಯನ್ತರ. = ಈ ವರಿಗೆ. (C.). — ಈ ಪ್ರಕಾರ. This manner (B. 4, 189); in this manner (C.). — ಈ ಬಗ್ಗೆ. ಈ ಬಗ್ಯೆ. = ಈ ಪ್ರಕಾರ. (C.; B. 4, 1). 2, = ಈ ಕಾರಣ. (C.). — ಈ ಬಾರಿ. This time (Bp. 48, 16); this year (C.). — ಈ ಬೇಱೆ. This year (vulgar S. Mhr.). — ಈ ಮೇರೆ. This limit or boundary (C.); this manner (C.; B. 1, 11; 4, 222); in this manner (C.). — ಈ ರೀತಿ. = ಈ ಪ್ರಕಾರ. (C., B. 4, 158). — ಈ ಲೋಕ. This world (C.; ಇಹ G.). — ಈವತ್ತು. -ಪತ್ತು. = ಈಹೊತ್ತು. (C.). — ಈ ವರಿಗೆ. ಈ ವರೆಗೆ. Till now (C.); thus far (C.). — ಈವಾಗ. -ಅಗ. Now, at this time (C.; ಏತರ್ಹಿ, ಇದಾನೀಂ Si. 477); this time. Genitive: ಈವಾಗಿನ (C.). — ಈ ವೇಳೆ. Now (C.; ಪ್ರಕೃತ G.). — ಈಹೊತ್ತು. -ಹೊತ್ತು. = ಈ ಹೊತ್ತು. (C.). — ಈ ಸಾರಿ. = ಈ ಬಾರಿ. (C.; B. 4, 53). — ಈ ಹೊತ್ತು. This time (of the day, C.); to-day (C.). See B. 1, 7; 2, 7; 3, 1; 5, 104; Bp. 57, 34. ಈ ಹೊತ್ತು ಹರಿಕಥೆ ಸೀಯೋ? ಉಪ್ಪೋ? (Prv.).

ಈ î. **7.** = ಅಹಿ (see ಅಹ) or ಇಹಿ (see ಇಹ), ಇ 9, No. 2. An affix for the second person singular of the *common* present, *e. g.* ಅನ್ನುತ್ತೀ, thou sayest (B. 1, 16), ಮಾಡುತ್ತೀ (2, 36. 42. 48), ತಿಳಿಯುತ್ತೀ (2, 43), ಕಲಿಯುತ್ತೀ (2, 48). See ಅನೆ 1, No. 2, and the plural ಈರಿ 1.

ಈ î. **8.** = ಅಹಿ or ಇಹಿ. The common affix for the second person singular of the present of *uncertainty or possibility, e. g.* ಬನ್ದೀ, ಹೋದೀ. See ಅನು 4, and the plural ಈರಿ 2.

ಈ î. **9.** To give, to bestow; to allow, to permit (ಪ್ರದಾನ Šmd. Dh.; ಕುಡು Šmd. 111; Tĕ., T.; M. ಏಗು; *cf.* ಇಂಗು 2). P. p. ಇತ್ತು (Šmd. 282. 285; Bp. 1, 36; My.). ಮಾಣದೆ ಇತ್ತು ಸವಿಯಂ (Čpr. 7, 48). ಪೆಸರನ್ ಇತ್ತು (Kk. 3). ಭಕ್ತಂಗೆ ವರಮನ್ ಇತ್ತಂ (Šmd. 159). ಇತ್ತಂ (130. 285; Bh. 3, 13, 19; Ršv. 5, 25). ಇತ್ತರ್ (Šmd. 109). ಪೊವಿತ್ತಂ (67). ಇತ್ತೊಡೆ (Bp. 2, 54; J. 29, 25). ಇತ್ತುದಂ ನೆನೆವನೆ? (Šmd. 68. 184). ಇತ್ತುವು (173). ಉತ್ತರಮ್ ಇತ್ತಪಂ (Ršv. 13, 4). ಇತ್ತಪನೆ? (Bp. 29, 16). ಕೂರ್ತು ಈವಂ (Šmd. 60). ಗೋವೀವಂ (67). ಈವರೊಳ್ ದೇವಂ, ಈವರ ದೇವಂ (167). ಈವುದು (264). ಈವುದಂ (68). ಈವನ್ನೆಗಮ್ ಇರ್ದಂ (295). ಈವೊಡೆ ನೀಮ್ ಬಳ್ಳಿದಿರ್ (298). ಈಯಲ್ ಬನ್ದತ್ತು ಕಲ್ಪಾಂಘ್ರಿಪಮ್ ಅಭಿಮತಮಂ (64. 277). ಈವರ್ (Ršv. 5, 127). ಈವಳೆ? (Bp. 15, 3. 4). ಈವಳು (15, 13). ಹಿರಿದನ್ ಈವನು (ಸ್ಥೂಲಲಕ್ಷ, etc. Hlâ.). ನೀರ ಹರಿಯಲ್ ಈಯದೆ ಕಟ್ಟಿದ ಕಟ್ಟೆ (ಆಧಾರ); ಆರುಮಂ ಪುಗಲ್ ಈಯದೆ, ರಾಣಿವಾಸಮ್ ಇಹುದಕ್ಕೆ ಯೋಗ್ಯಮ್ ಆದೊಡೆ ವನವೆ ಪ್ರಮದವನಮ್ ಎನಿಸುಗು (Nr.). ಈಯದೆ (Bp. 3, 36; 4, 67; Ršv. 10, after 7; Č. Bp. 11, 5; My.). ಈಯದ (J. 3, 36). ಈಯಂ (Bp. 21, 20; 60, 14). ಈಯಳು (15, 13). ಈಯವು (5, 29). ಈಯಿರಿ! (13, 14). ಈವುತ್ತೆ (Ršv. 2, 59). ಈವುತ (Prll. 3, 3. 26. 29). ಈಗುಂ (Šmd. 111). ಈಗೆ (125; Čt. II, 1; Nn. 1; Mr. 1). ಈಯಲಿ! (J. 1, 1; 26, 54). ಈಯಲ್ (2, 32). ಈಯೆ (infinitive, Râghč. 17, 69); ಈಯ (J. 9, 6). See Bp. 32, 50; 34, 16; 36, 56; 47, 8; 48, 11. 17; 50, 55. 60. 63; 52, 21. ಇತ್ತ ವರ ಮಿಥ್ಯವಾದರೆ ಮತ್ತೆ ಬೇಡೋದು ಯಾಕೆ? (Prv.). — ಈಯಿಸು. rep. (Bp. 13, 10; 17, 13; 24, 85).

ಈ î. **10.** **ಈಯು.** = ಈನ್ 1 q. v. To bring forth, etc. (C.; also said of the plantain tree, S. Mhr.). P. p. ಈದು (C.; B. 2, 37; 3, 67). ಎತ್ತು ಈಯಿತು ಎನ್ದಡೆ ಮೂಲೆಯಲ್ಲಿ ಕಟ್ಟುವದು ಎಮ್ಬುವನ ಚಾಳಿ ಏತಕೆ? (Bp. 28, 34). ಹಚ್ಚಿದ ವರ್ಷಕ್ಕೆ ಬಾಟಿ ಈಯುತ್ತದೆ (B. 2, 37). ಈಯುವದಕ್ಕೆ ಮುಂಚೆ ಬಾಟಿಯ ಗಿಡದ ಸುತ್ತು ಮುತ್ತು ಮಱಿಗಳು ಹುಟ್ಟುತ್ತವೆ (2, 38). ಆಡುಗಳು... ಮಱಿಗಳನ್ನು ಈಯುತ್ತವೆ (3, 11). ಆಕಳು ಗಬ್ಬವಾಗಿ ಒಮ್ಬತ್ತು ತಿಂಗಳಿಗೆ ಈಯುತ್ತವೆ (3, 17). ಈಯಿತು (C.; 4, 52. 53). ಈಯುವ ಆಕಳು (Si. 322). ಈಯುವದು (C.). ಈಯಲು, bringing forth. — ಈಯಲಾಗು. -ಆಗು. Bringing forth to take place (Si. 321. 322). ಈಯಲಾದ ಕೂಡಲೆ (B. 3, 86).

ಈ î. **11.** The initial î that is connected with hî (and vî), see *e. g.* ಈಚು 2, ಈಜು 1 & 2, ಈದೆ, ಈರೆ, ಈಳ್; ಈಣೆ, ಈಬೂತಿ, ಈರ 1, ಈಸ 1, ಈಳ್ಯ.

ಈ i. 12. = ಇದೋ, etc. See Grj. 8, 4; 10, 100. *Cf.* Sk. ಈ?

ಈ î. *An interjection expressive of grief, anger, possibility and proximity.*

ಈಕಾರ î-kâra. The letter ಈ (Šmd. 11. 12).

ಈಕಾರಾನ್ತ îkâra-anta. A term with final ಈ (Šmd. 102).

ಈಕೆ ikĕ. This woman, she (C.; Tĕ. ಈಕೆ, ಈಪೆ, applied to superiors only; see remarks s. ಅವಳು, ಇವಳು). ಆಕೆ, ಈಕೆ, ಊಕೆ (Šmd. 186).

ಈಕ್ಷಕ îkshaka. A spectator, a beholder. See ಪರೀಕ್ಷಕ.

ಈಕ್ಷಣ îkshana. Seeing; *sight, view.* 2, *the eye.*

ಈಕ್ಷಣಿಕ îkshanika. A male fortune-teller.

ಈಕ್ಷಣಿಕೆ îkshanikĕ. *A female who looks into the future, a female fortune-teller.*

ಈಕ್ಷತೆ îkshatĕ. Looking. See ಅಪೇಕ್ಷತೆ.

ಈಕ್ಷಿತ îkshita. Seen, beheld, regarded. (My.).

ಈಕ್ಷಿಸು îkshisu. To see, to behold, to look at; to consider; to look after, to care for (Šmd. 334. 408; My.). ಈಕ್ಷಿ ಪೊಡೆ (Čt. I, 94). See Bp. 1, 62; 24, 24. 35; 28, 6; 40, 6; 43, 10; 51, 11; 55, 52; 61, 13; Bh. 1, 8, 17; J. 10, 49; 11, 11; 13, 62.

ಈಕ್ಷಿಸುವಿಕೆ îkshisuvikĕ. Seeing, etc. See ನಿರೀಕ್ಷಿಸುವಿಕೆ.

ಈಕ್ಷೆ îkshĕ. Sight, viewing, considering. See ಅಪೇಕ್ಷೆ, ಅವೇಕ್ಷೆ, ಪರೀಕ್ಷೆ.

ಈಕ್ಷ್ಯ îkshya. To be beheld, looked at, etc. (adj.). See ಪ್ರತೀಕ್ಷ್ಯ.

ಈಗ i6-ga2. This time; at this time, now (ಇದಾನೀಂ Si. 477; ಸಪದಿ Dhw.; C.). ಇದು ಈಗ ಕ್ರಿಯಾವಿಶೇಷಣಂ (Šmd. 175). ಈಗ ಮಾಡುವ ಕಾರ್ಯವನು ಮೆಲ್ಲನೆ ಮಾಡುವವನು (ದೀರ್ಘಸೂತ್ರ Nr.). ಕಬನ್ಧಕ್ಕೆ ಪೆಸರ್ ಈಗ ಕಡುಕಟ್ಟೆ (Šm. 44). Genitive ಈಗಿನ (B. 3, 119; 5, 227; Si. 38); Dative ಈಗಿಗೆ (B. 4, 162); Ablative ಈಗಿನಿನ್ದ (C.). ಈಗಿನನ್ತೆಯೇ (B. 4, 30). ಈಗಿನಷ್ಟು (4, 165). ಈಗಿನವರು (4, 189). ಈಗಿಗಿನ್ತ (4, 162). See Bp. 11, 22; 36, 44; 37, 4; 41, 12; 47, 42; 52, 21; J. 28, 17; 31, 37. ಈಗ ತೂಗಿ ನೋಡಿದರೆ ಆಗಿನ ಗುಣ ಕಣ್ಡೀತು (Prv.).

ಈಗಡು i6-gadu1. = ಈಗಲ್, ಈಗಲು, ಈಗಳ್, ಈಗಳು. This time; at this time, now (ಕಾಲಾರ್ಥ Šmd. 400). ಈಗಡಿಂಗೆ, ಈಗಡಿನ (401). ಈಗಡುಂ (401). ಈಗಡಿನ ನೆಗಟ್ತೆಯ ಕಬ್ಬದೊಳ್ (121).

ಈಗಲ್ i6-gal. = ಈಗಡು, etc. (G.).

ಈಗಲು i6-galu. = ಈಗಲ್, etc. (My.). — ಈಗಲು. -ಉ 9. Also now (My.). — ಈಗಲೆ. -ಎ 3. Just now, this very moment (Bh. 1, 8, 21; My.). — ಈಗಲೇ. -ಏ 2. = ಈಗಲೆ. (Si. 71; B. 2, 44; 4, 77; 5, 148).

ಈಗಳ್ i6-gal2. = ಈಗಡು, etc. (ಕಾಲಾರ್ಥ Šmd. 400; see 16. 91. 136. 151. 277; Bp. 26, 52; 44, 50; Ršv. 13, 45; 14, 5). ಈಗಳಿಂಗೆ, ಈಗಳಿನ (Šmd. 401). ಈಗಳುಂ (401). ಈಗಳ್ಕೆ (Bp. 36, 13). ಈಗಳೂ (ತದಾನೀಂ, ಏತರ್ಹಿ, etc. Nr.). — ಈಗಳೆ. -ಎ 3. = ಈಗಲೆ. (Šmd. 264; Bp. 11, 3; 24, 11).

ಈಗಳು i6-galu 2. = ಈಗಡು, etc. (Bp. 48, 27). ಈಗಳಿಕೆ ಮುನ್ನ (35, 48).

ಈಗ್ಯೆ igyĕ. (= ಈಗಿಗೆ). For this time, for the present (My.); — this time, now (S. Mhr.). — ಈಗ್ಯೊ. Also at this time, still now (B. 4, 205. 206); also for the present (My.).

ಈಂ, ಈಙ್ iṅ. = ಇಂ (ಇಙ್), etc. Sweetness, etc. — ಈಂಗಡಲ್. -ಕಡಲ್. = ಇಂಗಡಲ್. (Šmd. 214). The milk-sea.

ಈಚಲ್ îčal. 1. -ಲು. = ಈಚಲ, ಈಚಲೆ, ಈಚಿಲ್. The wild date tree, Phoenix sylvestris Lin. (ಖರ್ಜೂರಿ Nr.; Si. 166; T. ಈಚ್ಚು, ಈಂಜು, ಈನ್ದು; M. ಈತ್ತ್; Tĕ. ಈತ, ಈದ, ಈದಾಡ). ಈಚಲ ಮದ್ಯ (ಹಾಲೆ, ಸುರೆ, etc. Dhw.). ಈಚಲ ಮರ (B. 2, 13; My.). See Č. Bp. 47, 45; ಕಿರೀಚಲ್, ಪರೆಂಗಿ-. — ಈಚಲ ನೀರು. Toddy. See Prv. s. ನೀಚ. — ಈಚಲು ಮರ. = ಈಚಲು. (St. & Pl.; My.). ಈಚಲುಮರದ ಕೆಳಗೆ ಮಜ್ಜಿಗೇ ಕುಡಿದರೆ ನಾಚಿಗೆಗೇಡು ಆಗದೇ? (Prv.). *Cf.* ಈಡಿ.

ಈಚಲ್ îčal. 2. -ಲು. The white ant when winged, Termes fatale (T. ಈಚಲ್, ಈಚಲ್, ಈಯಲ್, from ಈ-ಚಲ್, fly-ant; M. ಈಯಲ್; T. ಈ, M. ಈ, ಈಚ್ಚ, Tĕ. ಈಗ, fly). — ಈಚಲುಹುಳ. = ಈಚಲ್. (My.; ಪತಂಗಿಕೆ, ಪುತ್ತಿಕೆ Si. 175; M. ಈಯಾಮ್ಪಾಟ್ಟ).

ಈಚಲ îčala. = ಈಚಲ್ 1, etc. (My.). See s. ತರಹೀನ.

ಈಚಲುಗಾರ îčalu-gâra. A man who makes and sells toddy (S. Mhr.).

ಈಚಲೆ îčalĕ. = ಈಚಲ್ 1, etc. See ಸಣ್ಣ ಈಚಲೆ.

ಈಚಿಲ್ îčil. = ಈಚಲ್ 1, etc. (ಮಧುಪೂರ Mr. 117; My. Tu.).

ಈಚು îču. 1. = ಈಂಚು. The state of being dry, withered, faded, or sapless (Tĕ. ಈಚ; Tĕ. ಈಚು, to wither, etc.; T. ಈಡು, reduced circumstances, decay; M. ಈಟು, ruin; *cf.* ಇಂಗು 1, ಇಟು 1, ಇಟುಸು 1). — ಈಚುಪೋಗು. -ಪೋಗು. = ಈಂಚುಪೋಗು. To become sapless, etc. ತೃಣಧಾನ್ಯಗಳ ಕಾವು ನಾಳಿ, etc. ಎನಿಸುಗು; ಅದು ಈಚುಪೋಥ ಕಾವಾದರೆ ಪಲಾಲ ಎನಿಸುಗು, ಈಚುಪೋದ ಧಾನ್ಯದ ಹೆಸರೆನ್ದೂ ಎಮ್ಬರು (Nr.).

ಈಚು îču. 2. = ಹೀಚು. (My.).

ಈಚು îču. = ಈಸು, q. v. (My.; M. ಈತ್ತು). — ಈಚುಕೆಯ್. The perpendicular staff or handle in the shaft of a plough on which the ploughman presses (My.).

ಈಚೆ i6-čĕ. This side; to this side; on this side. ಈಚೆಯ ದಡ (My.; Si. 82). ಈಚನ ವರಿಗೆ (378; My.). ಈಚೆಯೊಳ್ (J. 20, 24). ಈಚೆಯಿನ್ದ ಆಚೆಗೆ ಹೋಗಲಿಕ್ಕೆ ಮೋಚೆಯಿನ್ದ ಆಗುವದೇ? (Prv.). See Prv. s. ಬಾಯೀ ಹಣ್ಣು. — ಈಚಗೆ. = ಈಚೆಗೆ. (C.). ಜರಾಶಬ್ದದಿನ್ದ ಈಚಗೆ ಹೇಳಿಲ್ ಪಟ್ಟ ಶಬ್ದಗಳೆಲ್ಲವೂ (Si. 199). ರೋಗದ ದೆಸೆಯಿನ್ದ ಈಚಿಗೆ ಬನ್ದವನು (ನಿರಾಮಯ 202). ತುಟುಬು ಮುನ್ತಾದ ಕೇಶಪಾಶದ ನಡುವೆ ಈಚಗೆ ಕಾಣದ ಹಾಗೆ ಮುಡು ಕೊಣ್ಡು ಇರುವ ಹುವ್ವಿನ ಸರ (ಗರ್ಭಕ 229). ಬನ್ದಬಿನ್ದ ಈಚಗೆ ಹೊಟಿಟದು (ಉಪ್ಪಾನ್ತ 380). ಈಚಗೆ ತೆಗದು ಹಾಕುವಿಕೆ (ನಿರ್ಹಾರ 392). — ಈಚೀಚಗೆ. rep. (My.). — ಈಚೆಕಡೆ. This side (My.). ಈಚೆಕಡೆಯ ದಣ್ಡೆ (ಅವಾರ G.). — ಈಚೆಗೆ. = ಈಚಗೆ. To this side; on this side. ಸೊಣ್ಡಿಲೊಳಗಿನ್ದ ಈಚೆಗೆ ಬನ್ದ ನೀರ ತುನ್ತುರುಗಳು (ವಮಥು Si. 269). 2, hereafter, afterwards (My.; B. 4, 28. 55); later. ನೂರು ವರುಷಗಳ ಈಚೆಗೆ (4, 68). — ಈಚೆದಣ್ಡೆ. This shore (Čb. 10).

ಈಜಿಸು îjisu. To make swim, as a horse, etc. (My.).

ಈಜು îju. 1. = ಈಸು 1, ಹೀಜು 1. To swim (My.; Tu. ಈಜು, ಈಜು; Tĕ. ಈದು; T. ನೀಚ್ಚು, swimming; T. ನೀಂಜು, T., M. ನೀನ್ದು, to swim). — ಈಜ ಬೀಳು. To begin to swim

(My.). — ಈಜಾಟ. -ಆಟ. Swimming (My.). — ಈಜಾಡಿಸು. -ಆಡಿಸು. = ಈಜಿಸು. (My.). — ಈಜಾಡು. -ಆಡು. = ಈಜು. (My.). — ಈಜ್ಯಾಡು. = ಈಜಾಡು. (My.).

ಈಜು îju. 2. = ಈಸ 2, ಈಸು 2, ಹೀಜು 2. Swimming. — ಈಜುಗಾಯಿ. -ಕಾಯಿ. A dried sôrĕ-gourd used in swimming (My.). — ಈಜುಬುರುಡೆ. = ಈಜುಗಾಯಿ. (My.).

ಈಂ, ಈಙ್ îṅ. = ಇಂ (ಇಙ್), etc. Sweetness, etc. — ಈಂಚರ. -ಸರ. (Śmd. 214). = ಇಂಚರ, q. v. ಈಂಚರದಿನ್ ಅಣತಿ ಮಾಡಿದುದು ಉನ್ಮದಾಳಿ (83).

ಈಂಚು îṅću. = ಈಚು 1. — ಈಂಚುವೋಗು. -ಪೋಗು. = ಈಚುವೋಗು. To fade, etc. ಪೊಳೆಪು ಈಂಚುವೋಯ್ತು, ತಾರಗೆ ಬೆಳಗುಱಿದುವು, ಹಿಮಕರಂಗೆ ಪಾಯ್ವ ಚಕೋರಾವಳಿ ಬೆಱಗಾದುದು, ಕುಮುದಂಗಳ ನಗೆ ಬತ್ತಿದುವು ಪಾಯ್ವ ನೇಸಱಿನ್ ಅಗಳ್ (Lîlv. 3, 5).

ಈಟಂಗಿ îṭaṅgi. = ಇಟ್ಟಿ, etc. (My.).

ಈಟಂಗಿ îṭaṅgi. = ಇಟ್ಟಗೆ, etc. (Sd.).

ಈಟಿ îṭi. = ಇಟ್ಟಿ, q. v. (C.; T., Tĕ., Tu.). ಈಟಿಯೆ ಆಯುಧವಾಗಿ ಉಳ್ಳವನು (ಪ್ರಾಸಿಕ Si. 281). ಈಟಿಯ ಕತ್ತಿ (ಈಲಿ, ಈಲಿಕ, ಈಳಿಗೆ ಕತ್ತಿ 290). ಈಟಿಯ ಕೋಲು (ಪ್ರಾಸ, ಕುನ್ತ 291). ಈಟಿಯ ಗಣೆ (ಇಟ್ಟಿ, ಕೊನ್ತ, ಡೊಂಕಳಿ, ಶಲಾಕೆ, ಸಬಲ G.).

ಈಟು îṭu. = ಇಷ್ಟು, etc. So much as this (C.).

ಈಡ îḍa. = ಇಡೆ No. 5. A particular vessel or artery (Mr. 52).

ಈಡಿ îḍi. Toddy (T. ಈಱು, ಏಲಿ; Tŏ. ಈಣ್ಣೈ).

ಈಡಿಗ îḍiga. A man of the toddy-drawers' caste (My.; Tĕ. ಈಡಿಗೆವಾಡು).

ಈಡಿಗಿತ್ತಿ îḍi-gitti. A female îḍiga (My., also ಈಡಿಗಿತಿ).

ಈಡಿತ îḍita. = ಈಲಿತ. *Praised.*

ಈಡು îḍu. 1. (fr. ಇಱ್ 1 or ಈಱ್). Pulling, dragging. — ಈಡಿಱ್. -ಇಱ್ 1. To pull with the horns (ಶೃಂಗಸಂಕರ್ಷಣ Śmd. Dh.).

ಈಡು îḍu. 2. (fr. ಇಡು 1, Śmd. 250). = ಇಡು 2. Putting, placing; a putting of pots in a kiln (My.); a charge for a fire-arm (My.). **2,** that is put: an object or mark to aim at. **3,** throwing. — ಈಡಾಗು. -ಆಗು. To become a butt of, to be exposed to; to become an object for; to incur. — ಎಲ್ಲಗೆ ಕಾರುಣ್ಯಕೆ ಈಡಾದನು (J. 28, 19). ಅಸೂಯೆಗೆ ಈಡಾಗ ಬೇಡ (29, 17). See J. 4, 50; V. 14, 39. — ಈಡಾಡು. -ಆಡು. To cast or throw away, to scatter, to disperse; to throw; to renounce; to expose (ಪ್ರಮಾದತ್ಯಜನ Śmd. Dh.; ಅಸಿ, ಚೆಲಂಕು Śmd. II, Kk. 89; Abh. P. 15, 75; Grj. 6, 34; Râm. 3, 4, 4; Bh. 8, 23, 25; J. 2, 17; 7, 47; 13, 25; 25, 41; 26, 71; 27, 43. 46). ಆ ಬ್ರಹ್ಮಾಣ್ಡಮಂ ಚಂಚುವಿನ್ದೆ ಒಡೆದು ಈಡಾಡುವುದೇ? (Śmd. 153. 255). ಹಬ್ಬುಗೆಯ ಹದಿನಾಲ್ಕು ಲೋಕದ ಮಬ್ಬುಗಳನ್ ಈಡಾಡಿ, ನಭದೊಳಗೆ ಒಬ್ಬನೇ ರವಿ ತೊಳಗಿ ಬೆಳಗುವ ಪೋಲು (Bh. 1, 8, 9). ಮನದ ಸಂಸಾರವನ್ ಈಡಾಡ ಬೇಕು (Dp. 16). ಸಾಮ್ರಾಜ್ಯಮುಮನ್ ಈಡಾಡಿ (Bp. 27, 68). — ಈಡು ಮಾಡು. To subject, to expose to. ಪಱಿಗೆ ಈಡು ಮಾಡ್ಪಿದಂ. . . ಕಾರ್ಯಮನ್ ಉದಾರಮತಿ ನೆಗಟ್ದಿಪನೇ? (Rśv. 13, 12).

ಈಡು îḍu. 3. Joining, coming together, uniting (T. ಈಣ್ಡು, to join v. i.; ಈಟ್ಟು, to join v. t.; see ಇಡಿ 1, ಇಣ್ಡೆ 2). **2,** increase, plenty, greatness, largeness; strength; wealth, means (C.; T.), *e. g.* ಅನ್ನ ಈಡಾಯಿತು; ಈಡು ಶರೀರವುಳ್ಳವನು; ರೊಕ್ಕ ಈಡಾಗಿದೆ (C.); a support, a prop, as for a wall (My.). **3,** fitness, proportion; equality; that is equal or matches (C.; T., M., Tĕ., Tu.; ಸರಿ, ಸಮಾನ G.); an equivalent, compensation (My.; Tu., T., M., Tĕ.); a pawn, a pledge, a security (My.; T., Tu.; ಹೊಣೆ G.). ಈಡಿದ್ದವನ ಹೊಲ ತೋಟ ನೋಡ ಬೇಕು. — ಈಡು ಇಟ್ಟರೆ ನಾಡು ನಮ್ಬುವದು. — ಈಡಿಲ್ಲದವನಿಗೆ ಮಿಣಾದ ಹೆಂಗಸು (Prvs.). ಸುಪರ್ಣಂಗೆ ಈಡೆ ಕಾಕಾಳಿ? (Sś. 62). — ಈಡಾಗು. -ಆಗು. To become equal; to come up to; to suffice (My.; B. 5, 102. 227). ಉಪಾಯಪರನ್ ಒರ್ವಂ ಕೋಟಿಗೆ ಈಡಕ್ಕು (Sś. 11). 2, to become bail or bondsman (My.; ಹೊಣೆಯಾಗು, ಜಾಮಿನಾಗು G.). — ಈಡಿಱ್. -ಇಱ್ 1. To beat or gore with force (J. 14, 12; 26, 2); to prick, to agitate, as passion (Grj. 8, 46); to move forward with impetuosity (Râm. 6, 50, 43). — ಈಡುಜೋಡು. dupl. A good match, an exact pair (My.). — ಈಡುಪಾಡು. dupl. Fitness (My.). — ಈಡು ಮಾಡು. To make equal; to cause to suffice (B. 5, 102); etc., etc. — ಈಡೇಱಿಸು. -ಏಱಿಸು. To accomplish, to fulfil, as a business, a word (My.; Tĕ. ಈಡೇರ್ಚು). — ಈಡೇಱು. -ಏಱು. To rise to the proper condition: to be effected or accomplished; to be fulfilled (My.; Tĕ.; T. to be saved, obtain salvation).

ಈಡುಕಾಱ îḍu3-kâṟa. A powerful man (My.).

ಈಡುಗಾಱ îḍu3-gâṟa. = ಈಡುಕಾಱ. (My.).

ಈಡೆ îḍĕ. *Praise.*

ಈಣೆ îṇĕ. Tbh. of ವೀಣೆ. (My.).

ಈಣ್ಟಿಸು îṇṭisu. To cause to drink (J. 18, 31).

ಈಣ್ಟು îṇṭu. To drink, to sip (ಪಾನ Śmd. Dh.; ಪೀರ್ Čt. I, 7.; M. ಇಱಮ್ಬು, ಈಮ್ಬು, to suck, lick, sip). ವಾರುಣಿ ಕಳ್ಳನ್ ಈಣ್ಟಿ, ಮಱೆದು, ಇಕ್ಕಿದ ಬಟ್ಟಲೊ?. . . ಎನಲ್ಕೆ ನೀಹಾರಮಯೂಖಮಣ್ಡಲಮ್ ಅದು ಏನ್ ಎಸೆದು ಇರ್ದುದೊ ಪಕ್ಷಿಮಾದ್ರಿಯೊಳ್? (Lîlv. 3, 4). See Bp. 12, 7; 24, 79; 33, 15; 35, 2; 42, 2; 52, 4; 54, 35; 59, 10. 15. 19. 21; Śśv. 1, 7. 22; J. 2, 61; 3, 10; 8, 5. 109; 13, 43; 15, 5. 45; 25, 1.

ಈತ iĕ-ta3. 1. This person, he (C.; Tĕ. ಇತಡು, ಈತ, ಈತಡು, ಈಯನೆ, ವೀಡು). ಆತಂ, ಈತಂ, ಊತಂ; ಆತಂಗಳ್, ಈತಂಗಳ್, ಊತಂಗಳ್ (Śmd. 182). ಈತಗಳ್ (Râm. 6, 51, 34). ಪರಿಕಾಱರೊಳ್ ಈತಂ ಕಾಲ್ವಲ್ಲಿದಂ; ಕಾದುವರೊಳ್ ಈತಂ ಮೆಯ್ಗಲಿ (Śmd. 163). ಲೋಕಕ್ಕೆ ಈತನ್ ಅಧಿಕಂ; ಮೇರುವಿಂಗೆ ಈತನ್ ಅಗ್ಗಳಂ; ಆತಂಗೆ ಈತಂ ತಕ್ಕಂ (159). ಅವನೊಬ್ಬನು ಗುಱಿಯನ್ ಎಚ್ಚು ತಪ್ಪಿದವನ್ ಉಣ್ಬ್ಗ, ಈತನು ಅಪರಾದ್ಧಪೃಷತ್ಕನು (Nr.). ವಿಷವ ಮೋಹಿಸುವನ್ತೆ ಕೊಡುವುದು ಈತಂಗೆ ನೀಂ! (J. 30, 26). ಈತನಾಗಲಿ ಆತನಾಗಲಿ ಮಾತು ಒನ್ದಿರ ಬೇಕು. — ಈತನಿಗಿನ್ತ ಆತ ವಾಸಿ, ಎಬ್ಬಿಸಿದರೆ ಉಣ್ಣುತ್ತಾನೆ. — ಈತನ ಮಾತಿಗೆ ಆತ ಸೋತ (Prvs.). — See note ad ಇವ.

ಈತ îta. 2. (fr. ಈ 10). The act of bringing forth (My.; Tĕ. ಈತ).

ಈತಿ îti. 1. *Calamity, arising from excessive rain, or drought,* (one's own soldiers G.), *foreign invasion, or birds, rats, locusts,* which destroy the crops. 2, *living away from home, a temporary foreign residence.*

ಈತಿ îti. 2. (= ಇತಿ 1). ಕಡೆ and ಕಾರಣ (Nn. 138).

ಈತು itu. = ಇಹುದು (ಇಹುತು). The affix for the third person singular neuter of the present of uncertainty or possibility, *e. g.* ಬನ್ನೀತು (Bp. 26, 28; B. 1, 20), ಬಿಟ್ಟೀತು (1, 27), ಮಾಡೀತು (2, 43), ತೋಱೀತು (4, 18), ಉಱಿದೀತು, ಹಱಿದೀತು (C.). See ಅನು 4. **2**, See s. ಇತು and ಈ 5, No. 2.

ಈತ್ವ ītva. The letter ಈ (Śmd. 359).

ಈದನ್ತ ī-d-anta. A term with final ಈ (Śmd. 102; Kâvy. I, 2, 84-89).

ಈದಿ idi. (fr. ಇರ್ದಪಯ್, ಇರ್ದಹಯ್). = ಇದ್ದಿ (see ಇದ್ದಾನೆ). Thou art. ಯಾಕೆ ಅಳುತೀದಿ, ತಮ್ಮ? ನನ್ನ ಕಣ್ಣು ಅನ್ಧಾವು ಅನ್ದ ಹಾಗೆ (Prv.).

ಈದು idu. P. p. of ಈ 10 and ಈನ್ 1.

ಈದುವಿಕೆ iduvikĕ. Bringing forth (ಪ್ರಸೂತಿ Si. 390; only in Si.; Tĕ. ಈದು, to deliver in child-bed).

ಈದೆ idĕ. = ಹೀನೆ. (My.).

ಈದೃಕ್ಷ ī-dṛiksha. Of this aspect, such like. (R.).

ಈದೃಶ ī-driśa. Endowed with such qualities, such. (My.).

ಈನ್ in. 1. -ನು. = ಈ 10. To bring forth young, to yean, to cub (ತಿರ್ಯಕ್ಪ್ರಸವ Śmd. Dh.; Śmd. 59; Tĕ., T. ಈನು; see ಈದುವಿಕೆ). P. p. ಈದು. ಈದ ಪುಲಿಯಾ ಪೋಲ್ ಇರ್ದರ್ಳ್ (Śmd. 144). ಒಮ್ಮೆ ಈದ ಆಕಳ್ (ಗೃಷ್ಟಿ), ಹಲವನ್ ಈದ ಆಕಳ್ (ಪರೇಷ್ಟುಕೆ Nr.). ಈದ ಆವಿನ ಗಿಣ್ಣುವಾಲು (ಪೀಯೂಷ Nr.). ಸತ್ತ ಕಱುವನು ಈದ ಆಕಳು (Si. 321). ಈನುವಾಕಳ್ (Mr. 181). ಈದದ್ದೂ ಅಲ್ಲ, ನೆಕ್ಕಿದ್ದೂ ಅಲ್ಲ! (Prv.). ನೆಲನ್ ಇರದೆ ಈದುದೋ? (Rśv. 6, 34). See Bp. 38, 40; 57, 14; J. 10, 48.

ಈನ್ in. 2. = ಇಂ (ಇಬ್), etc. Sweetness, etc. — ಈನ್ದುಟಿ. -ತುಟಿ. (Śmd. 214, or ಇನ್ದುಟಿ). A sweet lip. — ಈನ್ದೋಳ್. -ತೋಳ್. (Śmd. 214. 143, or ಇನ್ದೋಳ್). A nice arm. — ಈನ್ದೋಳ. -ತೋಳ. (Śmd. 214. 143, or ಇನ್ದೋಳ, ಇನ್ದೋಳ). A man with a nice arm.

ಈಪಿ ipi. The dung of flies, which is supposed to turn into nits; a nit (Tĕ.; R.; *cf.* ಈರ್ 3).

ಈಪ್ಸಿತ ipsita. Desired. 2, desire, wish (ಕಾಂಕ್ಷೆ, etc., ಬಯಕೆ Mr. 433).

ಈಪ್ಸಿತತಮ ipsita-tama. Greatly desired (Śmd. 155).

ಈಪ್ಸೆ ipsĕ. Wish, desire. See ಆಸೆವಡು, ವಡೆ, ಪಡೆಯಿಸು.

ಈಬು ibu. Difference, dissimilarity (S. Mhr.; *cf.* ಆಯಿಬು?).

ಈಬೂತಿ ibûti. Tbh. of ವಿಭೂತಿ. (My.).

ಈಮ್ im. = ಈನ್ 2, etc. Sweetness, etc. — ಈಮ್ಬುಳಿ. -ಪುಳಿ. (Śmd. 214). A sweet orange.

ಈಯಿಸು iyisu. 1. = ಈಸು 3. To cause to give. ಈಯಿಸಿದಂ (Śmd. 273).

ಈಯಿಸು iyisu. 2. = ಈಸು 4. To cause to bring forth, to help in bringing forth (C.).

ಈಯು iyu. = ಈ 10, q. v. (My.).

ಈರ್ ir. 1. = ಇಬ್, etc. Two (Śmd. 214; T., Tĕ.). — ಈರಡಿ. -ಅಡಿ. Two feet (Bp. 2, 5). — ಈರಯ್. -ಅಯ್ 5. = ಈರಯ್ದು. — ಈರಯ್ದು. -ಅಯ್ದು. Ten (Śmd. 89. 214; Bp. 43, 4. 5; J. 20, 44; 25, 47; 34, 27). — ಈರಯ್ದುಭುಜ. Śiva (My.). — ಈರಯ್ದುಮೊಗ. -ಮೊಗ. Râvaṇa (G.). — ಈರಯ್ದುಸಾಸಿರ. -ಸಾಸಿರ. Ten thousand (Bp. 1, 34). — ಈರಯ್ಮೊಗ. -ಮೊಗ. = ಈರಯ್ದುಮೊಗ. (G.). — ಈರಾಱು. -ಆಱು. -ಱ್. -ಱ. Twelve. ಈರಾಱು ಹನ್ನೆರಡೆನ್ದರೆ, ನಾಱೋ ಮುಕ್ಕೋ, ಹೋಗು! ಅನ (Prv.). — ಈರಾಱು ರಾಶಿ. The twelve signs of the zodiac (J. 6, 25). ಈರಾರ್ದಲ. -ದಲ. Twelve leaves (Bp. 3, 8). — ಈರಾರ್ವತ್ಸರಂಗಳ್. -ವತ್ಸರಂಗಳ್. Twelve years (Bp. 11, 36). — ಈರೆಣ್ಟು. -ಎಣ್ಟು. Sixteen (Mr.). — ಈರೇಱು. -ಏಱು. Fourteen (J. 22, 13). — ಈರೇಱುಭುವನ. -ಭುವನ. The fourteen worlds (Bp. 22, 54). — ಈರೇಱುಲೋಕ. -ಲೋಕ. = ಈರೇಱುಭುವನ (Bp. 3, 81; 22, 41). — ಈರೊತ್ತೆ. -ಒತ್ತೆ. Two pawns (Śmd. 214).

ಈರ್ ir. 2. ಈರು. = ಇಱ್ 1, etc. To pull, to draw (T.; Tu. ಈರ್, to rub off). **2**, to comb out nits (My.; T. ಈರ್ತು, Tĕ. ಈರ್ಚು).

ಈರ್ ir. 3. ಈರು. = ಈರ್ಕ, (ಸೀರ್). A nit (My.; T., M., Tĕ.). — ಈರಣಿಗೆ. -ಅಣಿಗೆ. A comb for removing nits (My.). — ಈರುದಲೆ. -ತಲೆ. A head infested with nits (My.).

ಈರ ira. (= ನೀರ್). Moisture, dampness, wetness (T.; M. ಈರೆ, ಈಱ; Tĕ. ಈಮಿರಿ, ಈವಿರಿ). — ಈರುಳ್ಳಿ. -ಉಳ್ಳಿ. = ನೀರುಳ್ಳಿ. An onion (My.; T., M., Tu.). See ಕಾಡೀರುಳ್ಳಿ.

ಈರ ira. 1. Tbh. of ವೀರ. (My.). — ಈರಣ್ಣ. -ಅಣ್ಣ. Vîrabhadra; a N. ಈರಣ್ಣನ ಮುನ್ದಣ ಬಸವಣ್ಣ (Prv.).

ಈರ ira. 2. Going, moving. See ಸಮೀರ, ಸ್ವೈರ.

ಈರಣ iraṇa. Agitating, driving; raising. See ಉದೀರಣ, ಪ್ರೇರಣ, ಸಮೀರಣ.

ಈರಿ iri. 1. = ಅಹಿರ್ or ಇಹಿರ್. The plural of ಈ 7, *e. g.* ಹೋಗುತ್ತೀರಿ (B. 2, 53), ಇರುತ್ತೀರಿ (4, 170). See ಅನೆ 1, No. 2.

ಊಸರುಳ್ಳಿ ûsaruḻḻi. = ಊಸರವಳ್ಳಿ, etc. (R.).

ಊಸು ûsu. 1. = ಹೂಸು 2. (My.).

ಊಸು ûsu. 2. = ಹೂಸು 3. (My.).

ಊಹ ûha. 1. = ಊಹೆ, etc. *Reasoning; deliberation, reflection, calculation,* inferring, conjecturing (ಅನುಮಾನ, ತರ್ಕ Mr. 10). 2, one of the sañcâribhâvas (Kâvy. IV, 2, 16).

ಊಹ ûha. 2. Pushing, moving, etc. See ಪ್ರತ್ಯೂಹ, ವ್ಯೂಹ, ಸಮೂಹ.

ಊಹಾಬಲ ûhâ-bala. The power of reasoning, etc. (Bh. 1, 7, 41).

ಊಹಿತ ûhita. Deliberated about, etc. (My.).

ಊಹಿನಿ ûhini. An assemblage; a multitude reduced to order. See ಅಕ್ಷೌಹಿಣಿ.

ಊಹನೀಯ ûhanîya. = ಊಹ್ಯ No. 1. (My.).

ಊಹಿಸು ûhisu. = ಊಯಿಸು. To reason, to deliberate, to suppose, to infer, etc. (Bp. 1, 63; 18, 64; 40, 8. 15; 45, 28; 50, 54; Si. 327. 350. 385. 390; My.; B. 4, 58).

ಊಹಿಸುಹ ûhisuha. Reasoning, etc. (ಊಹೆ, ತರ್ಕ Nn. 148).

ಊಹೂ ûhû. No! no! Don't! (My.; Mhr.; see Prv. s. ಊಟ).

ಊಹೆ ûhĕ. = ಊಹ, ಹೂಹೆ. Tbh. of ಊಹ (Śmd. 102; ತರ್ಕ, ಊಹಿಸುಹ Nn. 148).

ಊಹ್ಯ ûhya. Inferrible; fit to be noted; fit to be deliberated about, fit to be supposed, etc. 2, fit to be pushed or moved. See ಸಮೂಹ್ಯ.

ಊಳ್ ûḷ. 1. = ಊಳು. To call near from a distance (ದೂರಾದ್ ಆಹ್ವಾನ Śmd. Dh.). 2, to cry out; to howl (M. ಊಳಿ). P. p. ಊಳ್ದು. ಕವಕ್ಕವ ಎಲಎಲೆ ಉಊ (o. r. ಒ ಓ) ಪುಗಲ್ ಪುಗಲ್ ಎನ್ದು ಒಚ್ಚತ ಊಳ್ವ ಕೋಗಿಲೆಯುಂ (Śmd. 74). ಸನ್ಧಿ ಸಮಾಸ ವಿಭಕ್ತಿಗಳ ಅನ್ದಮುನ್, ಅವಱಿಡೆಯೆಡೆಯೊಳ್ ತುಱುಗಿದ ಯತಿ, ಪದಬನ್ಧಮುನ್ ಅಱಿಯದನ್ ಒನ್ದುಂ ಮನ್ದಿ ಕಣ್ದು ಊಳ್ವ ನಾಯಿ ನಿಷ್ಕಾರಣದೊಳ್ (Ćt. II, 121). See Abh. P. 13, 19; 14, 122.

ಊಳ್ ûḷ. 2. An outcry; a howl (Tĕ. ಊಲ, ಊಳ; M. ಊಳ್, ಓಳಿ, ಓಲಿ; T. ಊಳೈ). — ಊಳಿಡು. -ಇಡು. To cry out; to howl (ಶ್ವಾನಜಮ್ಬುಕಧ್ವನಿ Śmd. Dh.). ನಾಲ್ಕು ಲಕ್ಕದ ಮೇಲೆ ತೊಮ್ಬತ್ತಾಱು ಸಾವಿರ ಗೀತಸಂಕುಲವ ಹೇೞಿದೆವು, ಅವುಂ ಬೆಟ್ಟವಂ ಕಣ್ದು ಊಳಿಡುವವಱ ಚನ್ದಮ್ ಆಯ್ತು (Bp. 22, 52). ಬಸಿಱಗಳೊಳ್ ಊಳಿಡುವ ನರಿಗಳೋ? (51, 53).

ಊಳವೆ ûḷavĕ. = ಊಳ್ 2. (Ć. Bp. 47, 29).

ಊಳು ûḷu. = ಊಳ್ 1. P. p. ಊಳಿ. ಹಗಲುಂ ನರಿಗಳ್ ಊಳಿದವು (Bp. 61, 11). ಹೆಸರ ನಾಯ್ಗಳು ಹಾಸ ಹಱಿದು, ಉಬ್ಬಸದಲಿ ಊಳಿದವು (Bh. 3, 13, 21).

ಊೞಿಗ ûḻaga. = ಊೞಿಗ. (My.).

ಊೞಿಗಿತ್ತಿ ûḻaga-itti. = ಊೞಿಗಗಿತ್ತಿ. (My.).

ಊೞಿಗ ûḻiga. (Drudgery?); work, business; service (C.; Tĕ. ಊಡಿಗ; T., M. ಊೞಿಯ; T. ಒಯ್, to perform; ಒೞುಗು, to go, walk; to act; see ಉೞ್ಗು; ಉೞಿಗ 1; *cf.* ಓಲಗ). ಕೇಳ್, ಅರಸ! ನಿಮ್ಮ ಊೞಿಗವ ತಪ್ಪಿಸಿದನ್ ಅದೊಡೆ (Bp. 53, 34). ಊೞಿಗದ ಬೇಟೆಯ ನಾಯ್ (ವಿಶ್ವಕದ್ರು Mr. 185). ಮುನ್ದುಗಡೆ ನಡಿಯುವ ಊೞಿಗದವನು (ಪುರೋಗ, ಅಗ್ರೇಸರ, etc. Si. 281). ಅರಸಿನ ಊೞಿಗದ ಸ್ಥಲ (ರಾಜಸಭೆ 485). ಎನ್ದನು ವೃಕೋದರನ ಊೞಿಗವಂ (Bh. 1, 8, 56). See Grj. 6, 25; 7, 21; Râm. 3, 7, 30; J. 13, 60; 32, 41; B. 5, 283. 284. 285. 293; Prv. s. ವರ್ಗ. — ಊೞಿಗದವ. -ಅವ. A male servant (C.; ಆಳು, ಸೇವಕ G.; B. 5, 283).

ಊೞಿಗಗಿತ್ತಿ ûḻiga-gitti. A female servant (My.).

ಊೞಿಗತನ ûḻigatana. Service. ಊೞಿಗತನಕ್ಕೆ ನಿನ್ತುಕೊಳ್ಳು, to be in the employ of—. ಎರಡನೆಯವರಲ್ಲಿ ಊೞಿಗತನಕ್ಕೆ ನಿನ್ತು ಕೊಣ್ಡು (G. 551).

ಊೞಿಗಿ ûḻigi. A male servant (My.).

ಊೞು ûḻu. = ಹೂೞು, etc. To bury (My.).

ಋ RI

ಋ ṛi. The seventh letter of the Alphabet (Śmd. 12 seq.). When initial it occasionally appears as ರಿ or ರು in the vulgar language.

ಋಕ್ ṛik. = ಋಚ್.

ಋಕಾರ ṛi-kâra. The letter ಋ (Śmd. 11).

ಋಕಾರಾನ್ತ ṛikâra-anta. A term with final ಋ (Śmd. 103).

ಋಕ್ಕು ṛikku. Tbh. of ಋಚ್ (Śmd. 106 Cm.).

ಋಕ್ಥ ṛiktha. *Property, wealth.*

ಋಕ್ಷ ṛiksha. = ರುಕ್ಷ 2. *A bear.* 2, *a star; a constellation, a lunar mansion.* 3, *the plant Bignonia indica* (ದಿಣ್ಣಿಲಮರ G.).

ಋಕ್ಷಗನ್ಧಿಕೆ ṛiksha-gandhikĕ. *The creeper Batatas paniculata* Chois.

ಋಕ್ಷಗನ್ಧೆ ṛiksha-gandhĕ. *The plant Argyreia argentea* Sweet.

ಋಕ್ಷೇಶ ṛiksha-îśa. Lord of the stars: *the moon.*

ಋಗ್ವೇದ ṛiĉ-vêda. The ṛigvêda, the first of the four vêdas (C.).

ಋಗ್ವೇದಿ ṛigvêdi. Belonging to, or being conversant with, the ṛigvêda. — ಋಗ್ವೇದಿಗಳ ಸಿಂಗರ. N. (Bp. 56, 41).

ಋಚ್ ṛiĉ. = ಋಕ್, ರುಕ್ಕು 1. *A verse or text of the vêdas, especially one of the ṛigvêda.* 2, *the ṛigvêda.*

ಋಚೆ ṛiĉĕ = ಋಚ್ No. 1. (My.).

ಋಚ್ಛೆ ṛiĉĉhĕ. Wish, desire. See ಯದೃಚ್ಛೆ.

ಋಜೀಷ ṛijîsha. *A seether or boiler;* a frying pan.

ಋಜು ṛiju. = ರಿಜು, ರುಜು 1. *Straight; right; honest, upright.*

ಋಜುಭೇದ ṛiju-bhêda. The state of being bent. See ಕುಳಿರ್.

ಋಜುರೋಹಿತ ṛiju-rôhita. The straight (unbent) bow of Indra (ಇನ್ದ್ರನ ಬಿಲ್ಲು Mr. 42).

ಋಜುಲಮ್ಬಿ ṛiju-lambi. *Hanging straight down.*

ಋಜುವೀರ ṛiju-vîra. An honest hero (Śmd. 74).

ಋಜೂಕರಣ ṛijû-karaṇa. Straightening; rectifying. See ತಿದ್ದು.

ಋಜ್ವಾಗತ ṛiju-âgata. Coming in a straight manner (in dramatic action, Śmd. 74; Kâvy. I, 5, 45).

ಋಣ ṛiṇa. = ರಿಣ, ರುಣ, ರೊಣ. Guilt. 2, *debt; obligation.* — ಋಣ ಕೊಡು. To lend money (My.). — ಋಣ ತೀರಿಸು. To discharge a debt (My.). — ಋಣ ಪರಿಹರಿಸು. To pay a debt (My.). — ಋಣ ಮಾಡು. To contract debt, to borrow (My.). — ಋಣ ಹರಿಸು. = ಋಣ ತೀರಿಸು. (My.). — ಋಣ ಹೊರಿಸು. To charge with debt (My.). — ಋಣ ಹೊರು. To incur debt (My.).

ಋಣಋಣೀಭಾವ ṛiṇa-ṛiṇî-bhâva. The state of getting into debt and that of being in debt (My.).

ಋಣಗಾರ ṛiṇa-gâra. A debtor (My.).

ಋಣತ್ರಯ ṛiṇa-traya. Three obligations, viz. to dêvas, pitṛis, and ṛishis (J. 26, 58).

ಋಣಬಾಧೆ ṛiṇa-bâdhĕ. The trouble arising from being in debt (My.).

ಋಣಮುಕ್ತ ṛiṇa-mukta. Released from debt (C.).

ಋಣಮುಕ್ತಿ ṛiṇa-mukti. Discharge of a debt. (My.).

ಋಣವಿಮೋಚನೆ ṛiṇa-vimôĉanĕ. Paying off a debt (My.).

ಋಣಸ್ಥ ṛiṇa-stha. A creditor (sic! ಸಾಲ ಕೊಟ್ಟವನು, ಉತ್ತಮರ್ಣ Si. 300). 2, a debtor (C.; ಸಾಲ ತೆಗದು ಕೊಣ್ಡವನು, ಅಧಮರ್ಣ Si. 300).

ಋಣಾದಾನ ṛiṇa-âdâna. Recovery of a debt. (R.).

ಋಣಾನುಬನ್ಧ ṛiṇa-anubandha. The connection of indebtedness, as contracted in some preceding birth and forming the ground of certain sufferings or enjoyments in the present (My.; Mhr.).

ಋಣಿ ṛiṇi. (Śmd. 232). Indebted; one under any obligation; a debtor.

ಋಣಿಕ ṛiṇika. = ಋಣಿ, q. v., ರೊಣಕ.

ಋತ ṛita. (= ವೃತ 2). *True, right.* 2, *truth.* 3, *gleaning, gathering grain.* 4, an ascetic (ಮುನಿ, ಎತಿ, Nn. 9, as ವೃತ). 5, the sun (ತರಣಿ, ಸೂರ್ಯ 9). 6, the moon (ಚನ್ದ್ರ 9). 7, a goose, a swan (ಮರಾಲ, ಹಂಸೆ 9). 8, water (ವಾರಿ, ಉದಕ 9). 9, gone, risen. 10, darkness (ಕತ್ತಲೆ 9).

ಋತಿ ṛiti. Going; *a road;* assault; abuse; prosperity; etc. See ನಿರ್ಋತಿ.

ಋತೀಯೆ ṛitîyĕ. *Censure, reproach.* 2, *shame.*

ಋತು ṛitu. = ರಿತು, ರುತು 1. A period; *a period or season consisting of two months* (ಎರಡು ಮಾಸಮ್ ಆಗಲ್ ಒನ್ದು ಋತು ಅಕ್ಕುಂ Mr. 69; ಕಾಲವಿಭೇದ Nn. 133): ವಸನ್ತ, ಗ್ರೀಷ್ಮ, ವರ್ಷ, ಶರದ್, ಹೇಮನ್ತ, ಶಿಶಿರ. 2, the number six (from the six seasons, ಆಱು Mr. 347; Ĉh.). 3, *the menses* (ಸತಿಯ ಸೂತಕ Nn. 133); see ಪ್ರಥಮ-. — ಋತುಗೊಳ್. -ಕೊಳ್. To become menstruous (Mr. 302). — ಋತುವಡೆ. -ಪಡೆ. = ಋತುಗೊಳ್ (Mr. 302).

ಋತುಮತಿ ṛitu-mati. *A woman in her courses.*

ಋತುವೃತ್ತಿ ṛitu-vṛitti. Revolution of the seasons, a year. (R.).

ಋತುಶಾನ್ತಿ ṛitu-śânti. A ceremony with regard to a married girl, performed when menstruation occurs for the first time and followed by the first sexual intercourse (My.).

ಋತುಸ್ನಾತೆ ṛitu-snâtĕ. A woman who has bathed after menstruation and so prepared herself for sexual intercourse (J. 11, 26).

ಋತುಸ್ನಾನ ṛitu-snâna. Bathing after menstruation. (My.).

ಋತೇ ṛitê. *Except, without.*

ಋತ್ವ ṛitva. The letter ಋ (Śmd. 72. 103. 352).

ಋತ್ವಿಜ್ ṛitu-ij. Nominative ಋತ್ವಿಕ್. Sacrificing at the proper seasons. 2, *a priest who officiates at sacrifices.* Tbh. ಋತ್ವಿಜ (J. 16, 27).

ಋದನ್ತ ṛi-d-anta. A term with final ಋ (Śmd. 103).

ಋದ್ಧ ṛiddha. Grown. 2, *heaped or stored, as grain.*

ಋದ್ಧಿ ṛiddhi. Growth; *prosperity, welfare.* 2, *perfection,*

excellence, supremacy. 3, *a certain medicinal plant* (ಮುರುಡಸಿಂಗಿ G.).

ಋಭು ṛibhu. A class of deities. 2, *a divinity in general, a god.*

ಋಭುಕ್ಷ್ನ ṛibhuksha. Indra (My.).

ಋಭುಕ್ಷಿನ್ ṛibhukshin. *Indra.*

ಋವರ್ಣ ṛi-varṇa. The letter ಋ; the letters ಋ and ೠ as belonging to the same class (Šmd. 65. 132).

ಋಶ್ಯ ṛiśya. *The painted or white-footed antelope.*

ಋಶ್ಯಕೇತು ṛiśya-kêtu. *An epithet of Aniruddha.*

ಋಷಭ ṛishabha. = ವೃಷಭ. *A bull.* 2, *best, excellent.* 3, *the second of the seven notes of the gamut* (Mr. 76). 4, a particular drug.

ಋಷಿ ṛishi. = ರಿಷಿ, ರಿಸಿ, ರುಷಿ, ರುಸಿ. *An inspired poet, a patriarchal sage, a saint;* seven principal ones are enumerated, see ಸಪ್ತರ್ಷಿ. 2, the number seven (ಏಳು Mr. 347). 3, *Ursa major or the great bear, the seven principal stars of which represent the saptarshis.* See ಋಷ್ಯ-.

ಋಷಿಪುತ್ರಿ ṛishi-putri. The flower Artemisia indica (ಅಜಜಕಿ, etc. Mr. 136).

ಋಷಿವಧು ṛishi-vadhu. A wife of any of the principal ṛishis (Mr. 258).

ಋಷ್ಟಿ ṛishṭi. = ರಿಷ್ಟಿ. A scimitar, a sword, a spear. (G.).

ಋಷ್ಯ ṛishya. = ಋಶ್ಯ. *The painted or white-footed antelope.*

ಋಷ್ಯಪ್ರೋಕ್ತೆ ṛishya-prôktĕ. *The plant Mucuna pruriens* D. C. (Carpopogon pruriens Roxb.). 2, *the plant Asparagus racemosus* Willd.

ಋಷ್ಯಮೂಕ ṛishya-mûka. A mountain in the Dekhan, the temporary abode of Râma with Sugrîva (Râm. 4, 1, 23).

ಋಷ್ಯಶೃಂಗ ṛishya-śṛiṅga. N. of a personage whose story is told in the first book of the Râmâyaṇa (Râm. 1, 5, 13).

ೠ ṚÎ

ೠ ṛî. 1. The eighth letter of the Alphabet (Šmd. 12).

ೠ ṛî. 2. An interjection of warding off reproach and terror. ೠವೆನ್ದಂ (Šmd. 67).

ೠ ṛî. 3. Recollection; etc. ೠವಿತ್ತಂ (Šmd. 67). ೠವಿನ (133).

ೠಕಾರ ṛî-kâra. The letter ೠ (Šmd. 11).

ಌ LṚI

ಌ lṛi. The ninth letter of the Alphabet (Šmd. 12).

ಌಕಾರ lṛi-kâra. The letter ಌ (Šmd. 11).

ೡ LṚÎ

ೡ lṛî. The tenth letter of the Alphabet (Šmd. 12).

ೡಕಾರ lṛî-kâra. The letter ೡ (Šmd. 11)

ಎ Ĕ

ಎ ĕ.1. The eleventh letter of the Alphabet (Šmd 15 seq.). As an initial it is very often pronounced as ಯೆ or ಯ, and written accordingly. In S. Mhr. its pronunciation as ಯೆ is retained also in sandhi, *e.g.* ಹನ್ನೆರಡು (= ಹನ್ನೆರಡು); in the Abhš. we find *e. g.* ಮೂಱ್ಯೆಸಳ್ (= ಮೂಱೆಸಳ್), and even ತ್ಯೆಗೆ (= ತೆಗೆ), ನ್ಯೆಲ (= ನೆಲ). Remark: In the formation of some verbal nouns ಎ is *elided, e. g.* ಮಱವೆ, ತಿಱವೆ (Šmd. 247); this elision frequently takes place also in forming the present and the past participle, *e. g.* ನಡವ, ಹೊಳವ; ನಡದು, ಹೊಳದು (C.). *Cf.* ಅಡೆ 15, & Tbhs. like ಎತ್ತಿ, ಎಮ್ಮ, etc. About its arising from ಇ see Šmd. 282. 284. 285.

ಎ ĕ. 2 The final 1, of nouns (*cf.* remark ad ಇ 2), *e. g.* ಎಱಂಕೆ (Šmd. 48), ಎಡೆ, ಆನೆ (68), ಕೆಱೆ (80), ಪೆಱೆ, ಬಲೆ

(81), ಮೊನೆ, ಮನೆ, ಪಱಿ (82), ಅಗಱ್ತೆ (247), ಉಡುಗೆ (248), ತಡೆ (250); **2,** of verbs (*cf.* remark ad ಇ 2), *e. g.* ತೆಗೆ (307), ಪಡೆ, ಅಣೆ (314), ಒಡೆ (315), ತೆಱಿ (328), ತೊಳೆ (332); **3,** and of so called adverbs or particles, *e. g.* ಎಲೆ (68), ಮೆಲ್ಲನೆ (109), ಮಿಗೆ (110), ಮತ್ತೆ (112), ಒಳಗೆ, ಮುನ್ನೆ, ಮೇಗೆ, ಮೇಲೆ, ಪೊಱಗೆ (145. 146), ಒಡೆ (297), ಬಱಿದೆ (397), ನಾಳೆ (400). See also 151. 153. 272.

ಎ ĕ. **3.** = ಅ 13, ಇ 13, ಏ 2. A particle of emphasis, a vocative particle (Šmd. 68. 394), *e. g.* ನಾಲ್ಕೆ (44). ಒರ್ವನೆ (57). ಆತನಯೆ ತೋರದೊಡೆಗಳ್ ಇವು! (64). ತನ್ನಯೆ ವಧುವಿಲ್ಲದ ಲೀಲೆ (67). ಸುರಸಿನ್ಧುವೆ! (67). ಆತನೆ ಇನ್ದ್ರಂ! (68). ಇನ್ದೆ ಕೋಣ್ಪೆ ಧೂಳಿಪಟಂ! (69). ನಲ್ಲಳೆ! (155). ತಳಿರೆ! ತಾವರೆಯೆ! (155). ಅವನ್ ಅಧಿಕಪುಣ್ಯನ್, ಅವನೆ ಸೇವ್ಯಂ! (174). ಎಮ್ಮ ಆಳ್ದನ ಎಡಱಿನ್ ಅಮೆ ತಿರ್ದುವೆಂ (268). ಎಲ್ಲಮಂ ನೆಱಿಯೆ ಕಲ್ತು (272). ಒಡನೊಡನೆಯೆ (272). ತಾನೆ ಲೋಕದೊಳ್ ಲಾಕ್ಷಣಿಕಂ! (407). ಬುಧರ್ ಆದರಿಪರ್, ಮೆಚ್ಚು ಎನ್ದೆ, ಶಬ್ದಮಣಿದರ್ಪಣಮಂ (408). ಮಿಡುಕುತವೆ (Bp. 24, 56). ಎನುತವೆ (24, 59). ಹೇಱಿರೆ! (28, 42; 45, 42. 48). ಆರೋಗಿಸಿರೆ, ದೇವ! (33, 5). ಕರೆಯಿರೆ! ವಿಚಾರಿಸಿರೆ! (35, 44. 45). ಕೇಳಿರೆ! (51, 29). ಕೊಳ್ಳಿರೆ! (58, 38). ದಿಗುಬಲಿಯನ್ ಈಯಲೆ ನೋಡುವಂ (45, 28). ಚಲ್ಲಲೆ ನೋಡುವಂ (45, 31). ತಾನಾಗಿಯೆ (39, 23). ಶ್ರುತಿಬಾಹ್ಯರಾಗಿಯೆ (50, 47). ಜಿನಮಾರ್ಗರಾಗಿಯೆ (52, 1). ನಚ್ಚಿಸಿಯೆ ತಿಪ್ಪುವ (Kk. 36). ತೋರ್ಪೆನ್ ಎನ್ನಯೆ ಬಲವಂ (Rśv. 5, 129). See ಲೆ.—As a vocative particle (particularly in its long form) it is used for calling, or calling to, people, *e. g.* ಎ, ಅಪ್ಪ! ಎ, ಅವ್ವ! ಎ, ಅಕ್ಕ! ಎ, ದೇವ! ಎ, ರಾಮು! ಎ, ಕಾಳಿ! etc., etc. (C.). It is to be remarked that this ಎ or ಏ, when final, is often used with regard to females in My. & S. Mhr. (and ಓ with regard to males). ಏನೆ, ಅವ್ವಾ! (B. 2, 45). See Prv. s. ಜಗಳ & s. ತಾರ್.

ಎ ĕ. **4.** = ಏ 3. A particle used **1,** in questions connected with doubt (ಏಶಂಕೆ Šmd. 68. 396), to which an answer in the negative is expected, *e. g.* ಇನಿಯನೆ? ಬೆಲ್ಲದಿನ್ದೆ ಇನಿದನ್ ಈವನೆ? ಅಃ, ಪಿರಿದೀವನ್ ಇತ್ತುದಂ ನೆನೆವನೆ? ಚೀ, ಅದಂ ನೆನೆಯಂ (Šmd. 68). ಗುರುವಿಲ್ಲ, ಕರ್ಣನ್ ಇಲ್ಲ, ಗುರುವಿನ ಮಗನ್ ಇಲ್ಲ ಎನ್ನಿರೆ? ಎನ್ನೆನ್! ಇನಿಯಂ ಕವಿರಾಜಕುಂಜರಂ! (68). ಇನ್ದ್ರಂಗೆ ಕೇಡಾಯ್ತೆ? (69). ಉಱಿಮೆ? ಅಂಜಿಮೆ? ಬೆರ್ಚಿಮೆ? ಬೆಸಕೆ ಎಱಗೆಮೆ, ದೇವ? (177). ತಳಿರೆ, ತಾವರೆಯೆ,... ಮತ್ತಕೋಕಿಲಮೆ! ಸೀತೆಯಂ ಕಣ್ಡಿರೆ? (155). ಕುಳಿನ್ದಂಗೆ ಸೂನು ಜನಿಸಿ ಇರ್ದಪನೆ? (J. 29, 23). ಬಸವನಂ..ಕಣ್ಡಿರೇ? (Bp. 10, 15). ಮುಟ್ಟಿದನೆ? ಪಾಲ್ ಮೂಸಿ ನೋಡಿದನೆ? (14, 30). ತಾಯಿ ಇರೆ ಜಿಡೆಗಟ್ಟುವುದೆ ತಲೆ?...ತಾಯಿ ಉಡಲ್ ಈಸುವಳೆ ತೊಗಲಂ? (15, 3). ತಾಯಿ ಮಗನಂ ತಿರಿಯಲ್ ಈವಳೆ? (15, 4). ಸುಕರಹರ್ಪಾಶ್ರುಗಳ್ ಇವು ಎಮ್ಬೆನೆ? (18, 64). ಕೇಳಿದಿರೆ ಇನ್ತಪ್ಪ ವಿಕ್ರಮಲೋಲಸದ್ಭಕ್ತಿಯನ್? ಅವನಿಯೊಳ್ ಹೇಱಿಲ್ ಇನ್ತಹ ಭಕ್ತಿಫಲಮಂ ಕಾಣ್ಬಿರೇ ನೀವು (39, 58). ನೀನ್ ಇಲ್ಲದೆ, ಇವು ಎಲ್ಲಮ್ ಒಳವೆ, ಭಾನುತನುಜಾ? (Šmd. 155). ಧೃತರಾಷ್ಟ್ರಂ ನುಡಿದು ಅರ್ತನೆ? (177). ಸೊಗಯಿಸುಗುಮೆ ಪಲ್ಲಿಲಿವಾಯ್? (221). ಭಂಗಿ ಕೇಶವಂಗೆ ಇದಿರ್ ಉಣ್ಟೆ? (407). ಕೆಟ್ಟ ಹಾವು ಕಚ್ಚದ ಗಾಯ ಹಱಿ ಬಟ್ಟೆಯಲಿ ಒರಸಲು, ವಿಷ ಹೋದೀತೆ? (Dp. 84). ಕೋಣ ಬಲ್ಲುದೆ ವೇದವನ್ ಓದಿ ಪಠಿಸಲಿಕೆ? (Dp. 87). See also Bp. 53, 35; 5, 48; 18, 109; 49, 23; 50, 3. 51. **2,** in questions connected with censure or irony (ಆಕ್ಷೇಪಕ Šmd. 396), *e. g.* ಕುಡದ ನಿಮುಗಮ್ ಈ ಎಡಱಾಯ್ತೆ? (125). See Bp. 55, 52. **3,** in questions to which an answer in the affirmative is expected, *e. g.* ಒರ್ವನೆ ಗಣ್ಡನ್ ಅಲ್ತೆ ಜಗತಿತಲದೊಳ್? (Šmd. 57; see similar instances s. ಅಲ್ತೆ). ಧರಣಿಯೊಳು ಕೆಲವೂರ್ಗಳ್ ಇಲ್ಲವೆ? (Bp. 44, 39; *cf.* 10, 35; 45, 17). ಪುಷ್ಪಮ್ ಒನ್ದು ಬಟಿಲಲ್, ಭೃಂಗಕ್ಕೆ ಪೂವು ಇಲ್ಲವೆ? (Śś. 8). ಕರಗಸದ ನಡು ಬಡವಾದರೆಯು ಕೊಯ್ದು ಇಕ್ಕದೆ? (Bh. 1, 8, 28). ಹುಸಿಯ ಬಾಯಿವೆ, ಹುದುವಿನ ಆರವ್ಯದ ಫಲೋದಯವು ನಸಿದು ಹೋಗದೆ? (1, 8, 48). ತನ್ದೆಯ ಮಾತಿಗಾಗಿ ರಘುಪತಿ ವರ್ತಿಸನೆ ವಿಪಿನವಾಸಮಂ? (J. 31, 34).

ಎ ĕ. **5.** An affix for the instrumental (Šmd. 132, and ablative) *e. g.* ಕ್ರಮದೆ, ನಯದೆ, ಭಯದೆ (132). *Cf.* ಇ 8.

ಎ ĕ. **6.** An affix for the formation of an infinitive (Šmd. 296); it may be translated by *when; if; to; so that* (see *e. g.* Šmd. Cm. 3. 13. 136. 260. 261. 286. 289). ಗಾಯಕಂ ಪಾಡೆ, ದೇವಂ ಮೆಚ್ಚಿದಂ (296). ಅರಯೆ or ಅರಯ್ಯೆ, ಎನೆ, ಕೊಲೆ, ಉಣೆ (86), ನುಡಿಯೆ, ಪೊರ್ದೆ (293). See 91. 163. 200. 272. 293. 294. It is used also in the so-called passive voice, *e. g.* ಅವನಿಂ ಮಾಡೆ ಪಟ್ಟುದು (154). ಪದಕಮ್ ಅಕ್ಕಸಾಲೆಯಿಂ ಮಾಡೆ ಪಟ್ಟುದು (157). ಕಾವ್ಯಮ್ ಎನ್ನಿಂ ಪೇಱಿ ಪಟ್ಟುದು (157). ಮಾಡೆ ಪಟ್ಟಂ (301).—ಪುಡಿ ಅಡರೆ, ನಿಮಿರ್ದ ಪುತ್ತಿನ ಕುಡಿ ಕೆಡೆದತ್ತು...ಮೃಗಲಾಂಛನನಾ (Lilv. 3, 3). ಭೀತಿಯಿಂ ನಿಶಾಸ್ವೈರಿಣಿ ಪೋಗೆ, ಬಿಟ್ಟ ಕಿವಿಯ ಓಲೆಯ ಮೌಕ್ತಿಕವತ್ರಮೋ? (3, 4). See Bp. 18, 89. 90. 92; 42, 3; 61, 84; Râm. 13, 4; Rśv. 2, 47; 13, 69; Č. Bp. 4, 7. (The originally *restricted* use of the infinitive with ಎ disappears in later writings; see ಅಲ್ 1, No. 3).

ಎ ĕ. **7.** = ಎಂ 1, etc. Termination of the first person singular of the future and imperfect, and of the negative verb, *e. g.* ಏಗೆಯ್ವೆ (Bp. 22, 52), ಉಸುರುವೆ (39, 60), ಬೆಳೆದೆ (25, 7), ಒತ್ತಿದೆ (28, 41), ಅಯ್ತನ್ದೆ (29, 12), ಕಣ್ಡೆ (40, 47). ಕ್ರಾಣೆ (Bh. 1, 8, 6). ಉಸುರ್ವೆ (Šm. 67). ಪೇೞ್ವೆ (76). See s. ಇಹುದು.

ಎ ĕ. **8.** = ಅಯ್ 2, etc. Termination of the second person singular, *e. g.* ಒಗೆದೆ (Bp. 8, 18), ಉದ್ಧೂಳಿಸೆ (12, 17), ಪಡದೆ (12, 52; see also 14, 10. 24. 26; 18, 4. 9; 20, 15; 21, 23. 47; 22, 54; 24, 63. 70; 41, 7; 44, 68; 47, 13; 52, 7. 8; 59, 11; 60, 60). ಬಲ್ಲೆ (Bh. 1, 8, 10). ಕೆಡಿಸಿದೆ (1, 8, 57). ಪೋದೆ (Rśv. 13, 102). ಕೆಡಿಸಿದೆ, ಬಲಿದೆ, ಇತ್ತೆ (J. 31, 33).

ಎ ĕ. **9.** The affix which added to ಉತ್ತ 1 forms a third person singular neuter; see ಉತ್ತೆ 2. (*Cf.* ಅದೆ 4).

ಎ ĕ. **10.** An ancient termination of the nominative singular masculine. See ಆವೆ 3.

ಎ ĕ. **11.** = ಆವ, etc. What? See ಎತ್ತ 1, ಎನಿತು, ಎನ್ದು, ಎಲ್ಲಿ, ಎಹಗೆ.

ಎ ĕ. **12.** The initial ĕ that is connected with pĕ and hĕ (also with b, v, and y); see *e. g.* ಎಗ್ಗು, ಎಚ್ಚಱ್ 2, ಎಚ್ಚಱಿಕೆ, ಎಚ್ಚಱು 1, ಎಚ್ಚು 3. 4, ಎಟ್ಟ, ಎಟ್ಟು 2, ಎಡಗೆ, ಎಡಸು, Tbh. ಎಡೆ 2, ಎಡ್ಡ 2, ಎಣಿಕೆ 2, ಎಣೆ 2, ಎದೆ 2, ಎಮ್ಮಿಕೆ 2, ಎಮ್ಮೆ 2, ಎರಲು, ಎರೆ 5.

ಎ ĕ. **13.** = ಏ 7. A sound that is used to express disgust (My.).—ಎವುಱು. -ಪುಱು. = ಏಗುಱು. An insect or worm living in orts (ಎಂಜಲವುಱು Šmd. II; ಎಂಜಲುವುಱು Kk. 81).

ಎ ĕ. 14. = ಇ 3. See ಎಕೋ.

ಎ ĕ. An affix to form feminines (Šmd. 244; *cf.* No. 2), *e. g.* ಜೋಡೆ, ಸಿತಗೆ, ಚದುರೆ, ಪಾಣ್ಬೆ (245), ಅಣ್ಣೆ 2, ಆಕೆ, ಈಕೆ. 2, the ĕ that in Kannaḍa is generally substituted for the final â of Sk. feminines (Šmd. 100), *e. g.* ಮಾಲೆ, ಬಾಲೆ, ಲೀಲೆ, ಭಾಷೆ, ಯಾತ್ರೆ (101).

ಎಂ ĕṁ. 1. = ಎ 7, ಎನು 1. Termination of the first person singular of the present, future and imperfect, and of the negative verb (Šmd. 254; *cf.* ಅಂ 1, ಎನ್ 2). ಬರೆದಪೆಂ (Šmd. 259. 276); ಬಣ್ಣಿಪೆಂ (254), ಪಾಡುವೆಂ (91), ಅಱಿವೆಂ (263), ಮಾಡುವೆಂ (271), ಅಪ್ಪೆಂ (1); ಅಮರ್ಚಿದೆಂ (254), ಕೇಳ್ದೆಂ (262); ಮಾಡೆಂ (260), ಅಱಿಯೆಂ (296).—ಒಳ್ಳಿದೆಂ, ಪೆಣ್ಡತಿಯೆಂ, ಉದ್ಧತನೆಂ, etc. (257. 258), ಭ್ರಾನ್ತೆಂ (191. 244), ಸುತ್ತೆಂ (395).

ಎಂ ĕṁ. 2. = ಇವಿ, ಎವು. Termination of the first person plural of the future, etc., being an optional substitute for ಎವು (Šmd. 258), *e. g.* ನೋಡುವೆಂ, ಪಾಡುವೆಂ, ತಿರ್ದುವೆಂ (258), ಪತ್ತುವೆಂ, ಕೇಳ್ವೆಂ (259).

ಎಂ ĕṁ. 3. Termination of the first person singular of the imperative, *e. g.* ಅನ್ ಇದಂ ಮಾಡಿಪ್ಪೆಂ! ಅಂ ಶಿವನಂ ಪೂಜಿಸುವೆಂ! (Šmd. 271 Cm.). *Cf.* ಅಂ 2.

ಎಕತ್ಯಾರು ĕkatyâru. Authority, control, power (My.; H.).

ಎಕರಾರು ĕkarâru. A confession;—a deposition (My.; Br.; Mhr., H. ಇಕರಾರ).

ಎಕರೆ ĕkarĕ. An "acre". (My.; Br. ಯಕ್ರಾ).

ಎಕಾರ ĕ-kâra. The letter ಎ (Šmd. 11. 63. 176).

ಎಕಾರವಿಧಿ ĕkâra-vidhi. The rule that an ಎ is to occur (Šmd. 212).

ಎಕಾರಾನ್ತ ĕkâra-anta. A term with final ಎ (Šmd. 260).

ಎಕೋ ĕ14-kô. = ಇಕೊ, etc. (Bp. 37, 66; 50, 68).

ಎಕ್ಕ ĕkka. 1. = ಎಕ್ಕೆ, q. v. ಎಕ್ಕದ ಗಿಡ (My.; ಅರ್ಕ, ವಸುಕ, etc. Si. 141).

ಎಕ್ಕ ĕkka. 2. = ಯಕ್ಕ No. 3. Tbh. of ಏಕ (Šmd. 377; ಒರ್, ಒನ್ದು Šs.; My.).

ಎಕ್ಕಛಾಯ ĕkkachâya. (Šmd. 23, o. r. in Mdb. ಎಕ್ಕಥಾಯ). Tbh. of ಏಕಚ್ಛಾಯ?

ಎಕ್ಕಟಿ ĕkkaṭi. = ಎಕ್ಕಟೆ. Alone, solitary, by himself, in private (Tĕ.; Mhr. ಏಕ, ಏಕಟಾ);—a single, solitary person (Bp. 18, 9). — ಎಕ್ಕಟಿಗರೆ. -ಕರೆ. To call aside (Bh. 1, 7, 8; 2, 13, 21).

ಎಕ್ಕಟಿಗ ĕkkaṭiga. A superior, noble or great man (Bp. 16, 13; Tĕ. ಎಕ್ಕಟಿ, superior, noble, great; ಎಕ್ಕುಡು, greatness, height, ascent; high, great, mighty; ಎಕ್ಕು, to rise, increase, swell; ಎಗಿ, ಎಗೆ, to rise, spring up; to fly or bound; *cf.* ಎಕ್ಕು 3, ಎಗರು, ಎಗಾ, ಎಗು, ಎಱ್ 1).

ಎಕ್ಕಟೆ ĕkkaṭĕ. Greatness; wonder; a wonder (ಆಶ್ಚರ್ಯಾರ್ಥ Ĉt. II, 101; Tĕ. ಎಕ್ಕುವೆ, greatness, etc.; a strange thing, novelty; see ಎಕ್ಕೆ).

ಎಕ್ಕಟೆ ĕkkaṭĕ. = ಎಕ್ಕಟಿ. (Bh. 4, 6, 26).

ಎಕ್ಕಡ ĕkkaḍa. = ಎಕ್ಕವಡ, q. v. (C.; Bh. 3, 13, 19).

ಎಕ್ಕತಳ ĕkka-taḷa. Tbh. of ಏಕಸ್ಥಲ (Šmd. 377).

ಎಕ್ಕತಾಳ ĕkka-tâḷa. Tbh. of ಏಕತಾಲ. (My.).

ಎಕ್ಕತಾಳಿ ĕkkatâḷi. = ಎಗತಾಳ, ಎಗತಾಳಿ. Ridicule, derision, mockery, jest (My.; Tĕ. ಎಕತಾಳಿ, ಎಗತಾಳಿ).

ಎಕ್ಕತುಳ ĕkka-tuḷa. (Tbh. of ಏಕತುಲ). One weight, equality (Abh. P. 9, 181);—whole, undivided weight, power or energy; full strength; very great power; vehemence (Râm. 5, 8, 36; 5, 9, 6; 6, 20, 5; J. 14, 8). ಅನಿಲಜನ್ ಎಕ್ಕತುಳದಲಿ ಮೇಲೆ ಹಾಯ್ದನು, ಕಾಣದೆ ಅಹಿಪತಿಯ (Bh. 3, 13, 33). ಎಕ್ಕತುಳಕತ್ತಲೆಯನ್ ಒಕ್ಕಲಿಕ್ಕುತಂ (Ĉidakhaṇḍânubhavasâra 1, 7). ಎಕ್ಕತುಳಂ, with full strength, etc. ಎಕ್ಕತುಳಮ್ ಇಱಿದು (Šmd. 79).

ಎಕ್ಕಥಾಯ ĕkkathâya. O. r. of ಎಕ್ಕಛಾಯ, q. v.

ಎಕ್ಕರಿಸು ĕkkarisu. To make faces at, to gibe at, to mock, to deride (R.; Tĕ. ಎಕ್ಕಿರಿಂಚು, ವೆಕ್ಕಿರಿಂಚು, ವೆಗ್ಗಳಿಂಚು; T. ಎಳ್, ಎಳ್ಳು, to scoff, scorn, deride; *cf.* ಏಳಿದ?).

ಎಕ್ಕಲ ĕkkala. 1. High, tall, huge like a demon (S. Mhr.).

ಎಕ್ಕಲ ĕkkala. 2. A wild hog (ಕಾಡ ಹನ್ದಿ Ct. II, 36; ಕ್ರೋಡ Šs.; Tĕ. ಏಕಲ; T. ಏನ, ಏಱು, a hog). ಮೂಷೆಯಿಟ್ಟೆಱಗಿದ ತೆಱದಿಂ ಕೊರ್ವಿದ ಎಕ್ಕಲಂ (Šmd. 135 Mdb. MS.). ನೆಲನ ತೂಗಿಂಗೆ ಊಱಿ ಪಿಣ್ಡನ್ ಒಡೆದ ಎಕ್ಕಲಂ ಚಳಿಗದಿರ್ಗಲ್ಲಿನೊಳು ದಾಡಿಯಂ ಮಸೆದು (Râghĕ. 17, 72). ಸಿಂಗವನ್ ಇಱಿದು, ಎಕ್ಕಲನ ಹೊಕ್ಕು ತಿವಿದು (17, 74). See Grj. 1, 100; Bh. 3, 13, 26. 28. 30; Rsv. 5, 89; J. 12, 48; 14, 6.

ಎಕ್ಕವಡ ĕkkavaḍa. = ಎಕ್ಕಡ. A kind of leathern sandal (ಬೇಣ್ಟೆಯ ಕೆರ Ĉt. II, 36; ಕೆರ್ಪು Šm. 32).

ಎಕ್ಕವತ್ತಿ ĕkka-patti. Tbh. of ಏಕಪತ್ರ (Šmd. 377).

ಎಕ್ಕಸಕ್ಕ (ĕkka-sakka). = ಎಕ್ಕಸೆಕ್ಕ, ಎಕ್ಸಸ್ಕ್ಯ, ಎಗಚಿಗ. Confusion, random, doubt (Ĉh. v. 19; T., M. ಎಕ್ಕಚ್ಚಕ್ಕ); perverseness. ಎಕ್ಕಸಕ್ಕವನ್ ಅಡಿ (Bp. 55, 44). **2,** ridicule, mockery; a joke (Tĕ. ಎಕಸಕ್ಕೆ, ಎಕಸಕ್ಯ, ಎಕ್ಕಸಕ್ಕೆ; My. as ಎಕ್ಸಸ್ಕ್ಯ, ಎಗಚಿಗ).

ಎಕ್ಕಸಕ್ಕೆ (ĕkka-sakkĕ). A perverse female (Bp. 40, 52).

ಎಕ್ಕಸರ ĕkka-sara. 1. Tbh. of ಏಕಸರ (Šmd. 377; Abh. P. 3, after 67).

ಎಕ್ಕಸರ ĕkka-sara. 2. Going or running alone (J. 16, 22).

ಎಕ್ಕಸೆಕ್ಕ (ĕkka-sĕkka). = ಎಕ್ಕಸಕ್ಕ, etc. ಎಕ್ಕಸೆಕ್ಕದ ಮಾತುಗಳು (Bp. 56, 51).

ಎಕ್ಕಳ ĕkkaḷa. = ಎಗ್ಗಳ, etc. (Abh. P. 3, 116).

ಎಕ್ಕಾವಳಿ ĕkka-âvaḷi. Tbh. of ಏಕಾವಲಿ. (Abh. P. 5, 53).

ಎಕ್ಕಿ ĕkki. (= ಎಱಿಕೆ 2). A piece of timber (or bamboo) forming one side of the frame of a cot (C.).

ಎಕ್ಕಿಕೆ ĕkkikĕ. Dressing cotton, etc. (My.).

ಎಕ್ಕಿಸು ĕkkisu. To cause to dress cotton, etc. (My.).

ಎಕ್ಕು ĕkku. 1. = ಯಕ್ಕು. To divide; to separate (ವಿಭಜನ Šmd. Dh.); to dress cotton, to card wool (My.; Tu., M.; Tĕ. ಏಕು, T. ಎಂಗು; M. ಏಕ್ಕು, carding cotton; T. ಎಡು, to separate; ಇಱು, to break; to split, break asunder, v. i., see ಇಡಿ 3; *cf.* ಏಱ್ 3). — ಎಕ್ಕಾಡು. -ಆಡು. To dress cotton (My.).

ಎಕ್ಕು ĕkku. 2. To have frequent evacuations,

to purge (ಪ್ರವಾಹಿಕೆ Šmd. Dh.; T. ವೆಕ್ಕೈ, looseness with which cattle are affected).

ಎಕ್ಕು ĕkku. 3. To come up, to stand on tiptoe (T., M.; Tĕ.: to ascend, mount, climb; to mount on, get upon; to rise, be augmented, increase; see ಎಕ್ಕಟಿಗ, etc.; *cf.* ಎಟಕು). — ಎಕ್ಕಾಡು. -ಅಡು. To get or fall upon (? Bh. 8, 24, 3). — ಎಕ್ಕೆಕ್ಕೆ. rep. of the infinitive: up and up; one upon or after the other; etc. (ತೇನ ತೇನ, ಮೇಲ್ಮೇಲ್ Čt. II, 72; see ಮೇಲೆ ಮೇಲೆ). ಎಕ್ಕೆಕ್ಕೆಯೆ ನೆಗಬ್ದಿ, ಬರ್ಮೊದಲೆ, ಕುಕ್ಕೂ ಕೂ ಎನ್ನು, ಕೋಟಿ ಗೂಗಿದುವಾಗಳ್ (Šmd. 19. 68).

ಎಕ್ಕೆ ĕkkĕ. Eminence, superiority; great force (Abh. P. 13, 21; Tĕ. ಎಕ್ಕುವು, ಎಕ್ಕುವೆ; see ಎಕ್ಕಟಿ).

ಎಕ್ಕೆ ĕkkĕ. = ಎಕ್ಕ 1, ಎರ್ಕ q. v., ಯಕ್ಕ No. 2. A tall shrub, the gigantic swallow-wort or manure-leaf, Calotropis gigantea R. Br. (ಅರ್ಕ, ವಸುಕ, ಆಸ್ಫೋತ, ಅರ್ಕಪರ್ಣ, etc. Nr.; ಅರ್ಕ Nn. 13; Mr. 128; Si. 141; C.; T. ಎರುಕ್ಕು, M. ಎರಿಕ್ಕು). See ಬಿಳಿಯ ಎಕ್ಕೆ, ಗಣ್ಡು ಎಕ್ಕೆ, ಹೆಣ್ಣು ಎಕ್ಕೆ; Bp. 58, 22. — ಎಕ್ಕೆಗಿಡ. (Si. 141; ವಸುಕ G.). — ಎಕ್ಕೆಬೆನಕ. A stone occasionally found about the roots of the ಎಕ್ಕೆ in form like Gaṇêśa and supposed to make its possessor very fortunate (R.). — ಎಕ್ಕೆಮಾಲೆಗಿಡ. = ಎಕ್ಕೆಗಿಡ. (St. & Pl.).

ಎಕ್ಸುಕ್ಯ (ĕk-sukya). = ಎಕ್ಕಸಕ್ಕ No. 2. (My.).

ಎಗಚಿ ĕgači. = ಇಲಚಿ, ಎರ 1, ಎಲಚಿ, ಎಳ್ಚಿ, ಎಳಚಿ, (ರೇಗು 3). The jujube tree, Zizyphus jujuba Lam. (St. & Pl.; T. ಇಲನ್ದೈ, M. ಇಲನ್ದ). **2,** the shrub Monetia barlerioides Lin. (My.; T. ಇಜಂಗು, ಚಂಗು; see ಉಪ್ಪೆಗಚಿ).

ಎಗಚಿಗ (ĕga-čiga). = ಎಕ್ಸುಕ್ಯ. (My.). — ಎಗಚಿಗಬಾಚಿಗ. A mocker, a jester (My.).

ಎಗತಾಳ ĕgatâḷa. = ಎಗತಾಳಿ. (My.).

ಎಗತಾಳಿ ĕgatâḷi. = ಎಕ್ಕತಾಳಿ. (My.; Tĕ.).

ಎಗರಿಕೆ ĕgarikĕ. Jumping (My.).

ಎಗರಿಸು ĕgarisu. To cause to rise; to cause to rise in the air or to fly, as a paper-kite; to cause to spring or jump; to shoplift, to pilfer, to take away (My.; Tĕ. ಎಗಯಿಂಚು, ಎಗಿರಿಂಚು).

ಎಗರು ĕgaru. To rise; to fly; to jump (My.; Tĕ. ಎಗರು, ಎಗುರು; *cf.* ನಿಗರು 1). **2,** to fly away, to go, as life; to be spent, as money; to abrade, to wear or chafe off, as gilt, paint, etc.; to be ruined, as commerce (My.).

ಎಗಾ ĕgâ. (Tĕ. ಎಗೆ, above, up, upwards; see ಎಕ್ಕಟಿಗ). — ಎಗಾ ದಿಗಾ. Up and down, backwards and forwards (Tĕ.; R.).

ಎಗು ĕgu. Rising; embarkation (Tĕ.; T. ಏಟ್ರು; M. ಏಟ್ಟ, ಏಟ್ರು). — ಎಗುಮತಿ. Dues for embarking (M. ಏಟ್ಟಮತಿ, ಏಟ್ರು-; Tĕ. shipment, lading; T. ಏಟ್ರುಮತಿ, exportation). — ಎಗುಮತಿ ದಿಗುಮತಿ. Export and import, shipping and unshipping (Tĕ.; R.).

ಎಗ್ಗ (ĕggu1-a3). A rude, rustic, unpolished, stupid, or low man (ಕೂಚಿ Šmd. I; ಗಾವ್ಪ Čt. I, 101, o. r. ಗಾಣ್ಪ; ಗಾವಿಲ II, 77; ಗಾವಿಲ, ಗಾವ್ಪ, ಹೆಡ್ಡ Ks.; *cf.* ಎಡೆಗ?). ವೈರಿವ್ರಜವನ್ ಉಱುಹುವನ್ ಎಗ್ಗಂ (Bh. 1, 8, 39).

ಎಗ್ಗತನ ĕggatana. (Šmd. 248). Rudeness, vulgarity, etc. ಎಗ್ಗತನದ ಮಾತು (ಗ್ರಾಮ್ಯ, ಅಶ್ಲೀಲ Nr.); stupidity (My.; Rsv. 11, 92).

ಎಗ್ಗಳ ĕggaḷa. = (ಅಗ್ಗಳ?), ಎಕ್ಕಳ, ಯೆಗ್ಗಳ, ವೆಗ್ಗಳ, ಹೆಗ್ಗಳ. Abundance, excess, etc. (ಅಧಿಕ Čt. II, 19; *cf.* ಎಕ್ಕು 3; ಪೆಗ್?).

ಎಗ್ಗು ĕggu. 1. (Šmd. 248). (= ಎಱಗು 3).

ಎಗ್ಗು ĕggu. 2. = ವೆಗ್ಗು, ಹೆಗ್ಗು, (ಸಿಗ್ಗು). Shame; the feeling of disgrace (C.; Tĕ.). **2,** disgrace; blame; harm (Tĕ.). ಅಗ್ಗವಾ ಅರಳುಣ್ಬು, ಡೊಗ್ಗೆ ಮಜ್ಜಿಗೆಯುಣ್ಬು, ಹೆಗ್ಗಳದ ಕಾಯಿ ಮೆಲ್ಲಲುಣ್ಬು; ಮೂಡನಾಡು ಎಗ್ಗೆನ್ನ ಬಹುದೆ? (Sp.). See Bp. 6, 1; 43, 13; 45, 15; 52, 21; 60, 16.

ಎಗ್ಗುಳಿ (ĕggu1-uḷi). 1. A rustic, or low, person (ಕೊಬ್ಬಿಲ Čt. I, 5).

ಎಗ್ಗುಳಿ ĕggu2-uḷi. 2. A bashful person (My.).

ಎಗ್ಗುಳಿತನ ĕgguḷitana. Shame, bashfulness (My.).

ಎಂಕಟ ĕṅkaṭa. = ವೆಂಕಟ. (My.).

ಎಂಕಟಿ ĕṅkaṭi. = ವೆಂಕಟಿ. (My.).

ಎಂಗಟ ĕṅgaṭa. = ವೆಂಗಟ. (My.).

ಎಂಗಟಿ ĕṅgaṭi. = ವೆಂಗಟಿ. (My.).

ಎಂಗಳಿ ĕṅgaḷi. = ವೆಂಗಳಿ. — ಎಂಗಳಯ್ಯ. = ವೆಂಗಳಯ್ಯ. (My.).

ಎಂಗಿ ĕṅgi. 1. = ವೆಂಗಿ. A stupid, foolish, silly person (C.).

ಎಂಗಿ ĕṅgi. 2. Fraud, deceit (My., *e.g.* ಎಂಗಿ ಬಿದ್ದನು, ಅವನಿಗೆ ಎಂಗಿ ಹಾಕಿದರು). *Cf.* ವ್ಯಂಗ್ಯ?. — ಎಂಗಿನಾಣ್ಯ. A counterfeit coin (My.; occasionally S. Mhr.).

ಎಂಗೆ ĕṅgĕ. = ಎಹಗೆ, etc. (My.). See ಮುತ್ತೆಂಗೆ.

ಎಚೆ ĕčĕ. = ಇಸು 3, etc. To shoot arrows, to discharge; to expel, as water out of a syringe (S. Mhr.).

ಎಚ್ಚತ್ತು ĕččattu. = ಎಚ್ಚೆತ್ತು. P. p. of ಎಚ್ಚಱ್ 1 & ಎಚ್ಚಱು 1.

ಎಚ್ಚಱ್ ĕččaṟ. 1. = ಎಚ್ಚಱು 1, ಎಚ್ಚಿಱ್ q. v. To awake (v. i.). P. p. ಎಚ್ಚತ್ತು. ಎಚ್ಚತ್ತು ಇರ್ಪುದು (ಜಾಗರ್ಯೆ, ಜಾಗರಣ, ಪ್ರಜಾಗರ, ಅವೇಕ್ಷೆ, etc. Hlâ.).

ಎಚ್ಚಱ್ ĕččaṟ. 2. = ಎಚ್ಚಱ, ಎಚ್ಚಱು 2, ಹೆಚ್ಚಱ. The state of being awake, waking; watchfulness, circumspection, caution, care (ಅವೇಕ್ಷೆ Mr. 456; J. 7, 45). — ಎಚ್ಚಱಿಡು. -ಅಡು. Waking, watchfulness, etc. to cease (J. 21, 49).

ಎಚ್ಚಱ ĕččaṟa. = ಎಚ್ಚಱ್ 2, etc. (C.; ಜಾಗರ, ಜಾಗರಣ, etc. G.). ಜನರ ಕೂಡ ಗೆಳೆತನ ಮಾಡ ಬೇಕಾದರೆ ಬಹು ಎಚ್ಚಱದಿನ್ದ ಮಾಡಬೇಕು (B. 2, 10). ಎಚ್ಚಱವೂ ನಿದ್ದೆಯೂ (4, 133). — ಎಚ್ಚಱಗೆಡ. -ಕೆಡ. A man devoid of watchfulness; a confused or mad man (ಸೋನ್ಮಾದ G.). — ಎಚ್ಚಱಗೇಡಿ. -ಕೇಡಿ. An inattentive, negligent, or lazy person (My.). — ಎಚ್ಚಱಗೇಡಿತನ. Inattention, negligence, inadvertence (ಪ್ರಮಾದ G.). — ಎಚ್ಚಱಗೊಳಿಸು. -ಕೊಳಿಸು. To awaken; etc. ನಿದ್ದೆ (*i. e.* ನಿದ್ದೆಯಿನ್ದ)

ಎಚ್ಚಱಗೊಳಿಸುವ ಹಾಡುಗಾಱರು (Si. 292). — ಎಚ್ಚಱಗೊಳ್ಳು. -ಕೊಳ್ಳು. To awake (v. i.); to become watchful or precautious; to make provision (C.; B. 3, 70). — ಎಚ್ಚಱದಪ್ಪು. -ತಪ್ಪು. To become off one's guard, to lose one's self (My.; B. 5, 139). ಎಚ್ಚಱದಪ್ಪೋಣ (ಹರವಸ G.). — ಎಚ್ಚಱದಿನ್ದ ಇರು. To be awake, etc. (C.; B. 4, 12). — ಎಚ್ಚಱ ಪಡು. To be watchful, cautious, etc. (C.; B. 4, 24). — ಎಚ್ಚಱ ಮಱೆ. = ಎಚ್ಚಱದಪ್ಪು. (B. 3, 12). — ಎಚ್ಚಱವಾಗು. -ಆಗು. The state of ceasing sleep to take place (B. 5, 73). ಅವನಿಗೆ ಎಚ್ಚಱವಾಯಿತು (My.). 2, to awake (v. i., B. 3, 40). ಎಚ್ಚಱವಾದನು (My.). ಎಚ್ಚಱವಾಗಿರು, to be awake, etc. (Si. 398). — ಎಚ್ಚಱವುಳ್ಳವ. A wakeful man, etc. (My.; ಜಾಗರಿತೃ, ಜಾಗರೂಕ G.).

ಎಚ್ಚಱಿಕೆ ĕččarikĕ. = ಹೆಚ್ಚಱಿಕೆ. Waking, etc. (= ಎಚ್ಚಱ್ 2; ಜಾಗರ್ಯೆ, ಜಾಗರೆ Nr., Si. 394; ಅವೇಕ್ಷೆ 71; C.; T. ಎಚ್ಚರಿಕ್ಕೈ; Tĕ., Tu. ಎಚ್ಚರಿಕೆ). ಎಚ್ಚಱಿಕೆಯನ್ನು ಕೊಡೋಣ (ಪ್ರಬೋಧನ G.). ಅನವರತಮ್ ಎಚ್ಚಱಿಕೆಯೊಳ್ ಇರು, ಅಯ್! (Bp. 4, 67). ಅಧೃತಿಯ ಬಿಚ್ಚಿ ಬಿಸುಡಿಸುವ ಎಚ್ಚಱಿಕೆಗಳು (40, 61). ಎಚ್ಚಱಿಕೆ ತಪ್ಪಿ ಹೋಗುವದು (ಪ್ರಮಾದ Si. 71). ಎಚ್ಚಱಿಕೆಯುಳ್ಳವನು (ಜಾಗರೂಕ 361). ಎಚ್ಚಱಿಕೆಯಿನ್ದ ನಡೆ (B. 5, 89). See J. 8, 28; 15, 49; 26, 1; Dp. 91, 1-10. — ಎಚ್ಚಱಿಕೆಗೊಳ್ಳು. -ಕೊಳ್ಳು. = ಎಚ್ಚಱಗೊಳ್ಳು. (My.).

ಎಚ್ಚಱಿಸು ĕččarisu. To awaken, to wake; to caution, to forewarn; to give a caution, to put in mind (C.; T., Tu. ಎಚ್ಚರಿ; Tĕ. ಎಚ್ಚರಿಂಚು). See Bp. 14, 22; 37, 20. 26; 60, 31; J. 4, 40; 5, 3. 27; 6, 18. 50; 12, 7; 13, 22; 26, 26; B. 5, 49.

ಎಚ್ಚಱು ĕččaṟu. 1. = ಎಚ್ಚಱ್ 1, etc., ಹೆಚ್ಚಱು. (C.). P. p. ಎಚ್ಚತ್ತು. ವಾದ್ಯಗಳಿನ್ದ ನಿದ್ದೆ (*i. e.* ನಿದ್ದೆಯಿನ್ದ) ಎಚ್ಚಱುವನ್ತೆ ಮಾಡುವವರು (Si. 292). ಆ ಸಪ್ಪಳಕ್ಕೆ ಕೂಸು ಅಡಬಡಿಸಿ ಎಚ್ಚತ್ತಿತು (B. 3, 51).

ಎಚ್ಚಱು ĕččaṟu. 2. = ಎಚ್ಚಱ್ 2, etc. — ಎಚ್ಚಱಾಗು. -ಆಗು. = ಎಚ್ಚಱವಾಗು. (My.; B. 5, 28). — ಎಚ್ಚಱುಗೊಳ್ಳು. -ಕೊಳ್ಳು. = ಎಚ್ಚಱಗೊಳ್ಳು. (My.).

ಎಚ್ಚು ĕčču. 1. P. p. of ಇಸು 3 (and ಎಸು 1). Having shot. — ಎಚ್ಚು ಪಾಯ್. To be shot and go right through (? ಪೊಣ್ಮು Kk. 73; *cf.* ಉಚ್ಚಿ ಪಾಯ್?).

ಎಚ್ಚು ĕčču. 2. To smear (ಅಂಜನಕ್ರಿಯೆ Šmd. Dh.; Abh. P. 3, 85; Grj. 10, 41; Rŝv. 8, 31; T. ಇಱುಜು; *cf.* ಎಱೆವು). 2, to make even or proper, to decorate (ಸಮಭಾವ Mr. 339).

ಎಚ್ಚು ĕčču. 3. = ಹೆಚ್ಚು. To increase, etc. (My.).

ಎಚ್ಚು ĕčču. 4. = ಹೆಚ್ಚು. Increase, etc. (My.; Tĕ., T., M.). See ಹೆಚ್ಚಚ್ಚು.

ಎಜಮಾನ ĕjamāna. = ಯಜಮಾನ. (ಭಾನು Čb.; My.).

ಎಜ್ಜ ĕjja. = ಬೆಜ್ಜ 2, etc. A bore, a hole (C.; ಸೂಜೀ ಕಣ್ಣು 4, 158). ರತ್ನಾದಿಗಳಿಗೆ ಎಜ್ಜಗಳು ಹಾಕುವ ಬಯ್ರಿಗೆ (ಆಸ್ಫೋದನಿ Si. 345).

ಎಜ್ಞ ĕjna. Tbh. of ಯಜ. (Nn. 111; My.).

ಎಂಜಲ್ ĕñjal. ಎಂಜಲು. = ಎಂಜಲ. That which in eating is left on the plates or leaves, sticks to the mouth or hands, or falls to the ground, that of which a piece is bitten off, to be short, all food or drink which has somehow come in contact with the mouth or hands of the eater, and therefore is regarded as impure (C.; ಉಚ್ಛಿಷ್ಟ G.; ಫೇಲೆ Si. 235; ಎವುಳ್ಳಿ, ತಿನ್ನ, ಪತ್ತಳಿ Ŝs.; T., M. ಎಚ್ಚಿಲ್; Tĕ. ಎಂಗಿಲಿ); saliva (My.). ಎಂಜಲ ಮಾಂಸಂ (Bp. 18, 36). ಎಂಜಲ ಅಮ್ಬು (27, 57). ಎಂಜಲ ಹಾಲು (55, 15). ಎಂಜಲ ಕೂಱ್ (56, 26; see also 56, 18). ಬಾಯೊಳಗಿನ ಎಂಜಲ ತಟಕು (B. 3, 95). ಎಂಜಲ ಕೆಯ್ಯಿನ್ದ ಕಾಗೇ ಓಡಿಸುವದಿಲ್ಲ (lest the crow might get the ĕnjal; Prv. used with regard to a miser). (ಭಿಕ್ಷೆ) ಇಕ್ಕಲಾಱದ (ತನ್ನ) ಕೆಯ್ ಎಂಜಲೆಮ್ಬನ್ತೆ.—ತುಪ್ಪದ ಆಶೆಗೆ ಎಂಜಲ ತಿನ್ದ.—ಎಂಜಲಿಗೆ ಹೇಸದವಳು ತಂಗಳನ್ನಾ ಬಿಟ್ಟಾಳೇ?—ಎಂಜಲು ಎತ್ತೋ, ಗುಣ್ಡಾ! ಎನ್ದರೆ ಉಣ್ಣವರು ಎಷ್ಟು ಜನ? ಎನ್ದ (Prvs.). See Bhaktisâra 101. — ಎಂಜಲ ದುಡ್ಡು. A duḍḍu obtained yesterday (not to-day; S. Mhr.). — ಎಂಜಲ ಮಾತು. A word of the past (not of to-day; S. Mhr.). 2, repeating the words of another (C.). — ಎಂಜಲುವುಱು. -ಪುಱು. = ಎಂಜಲಗುಱ್, q. v. (ಎವುಱು Kk. 81). — ಎಂಜಲೆಂಜಲ್. rep. (Bp. 56, 22).

ಎಂಜಲ ĕñjala. = ಎಂಜಲ್. — ಎಂಜಲಗುಱ್. (*i. e.* -ವುಱ್ = ಪುಱ್, for ಪುಱು). An insect or worm living in orts (ಏಗುಱು Čt. II, 96).

ಎಂಜಲಿಸು ĕñjalisu. To defile (Bh. 2, 10, 8; J. 18, 46).

ಎಟಕಿಸು ĕṭakisu. To stand on tiptoe to reach any thing (My.).

ಎಟಕು ĕṭaku. = ಎಟುಕು. To be or come within reach (My.; *cf.* ಎಕ್ಕು 3 and see ಎಟ್ಟು 1). ಅದು ನನಗೆ ಎಟಕುವದಿಲ್ಲ (My.). 2, to be sufficient (My.). —ಎಟಕಿ ನೋಡು. To peep standing on tiptoe (My.).

ಎಟುಕು ĕṭuku. = ಎಟಕು. (My.).

ಎಟ್ಟ ĕṭṭa. = ಎಟ್ಟವೆ, ಹೆಣ್ಟ, ಹೆಟ್ಟೆ. A bush-harrow (My.). — ಎಟ್ಟಾ ಹೊಡೆ. To roll or flatten sown land by drawing over it a large bamboo mat or bushes having on them several heavy stones (My., = ಹೆಣ್ಟ ಹೊಡೆ in S. Mhr.).

ಎಟ್ಟವೆ ĕṭṭavĕ. = ಎಟ್ಟ, etc. (My.).

ಎಟ್ಟಿ ĕṭṭi. = ಬೆಟ್ಟಿ No 2. An obstinate, self-willed person (S. Mhr.; *cf.* ಎಟ್ಟೆ 2).

ಎಟ್ಟಿಕೆ ĕṭṭikĕ. Reaching, reach (My. occasionally).

ಎಟ್ಟಿತನ ĕṭṭitana. Obstinacy (S. Mhr.).

ಎಟ್ಟಿಸು ĕṭṭisu. = ಎಟಕಿಸು. (My.). — ಎಟ್ಟಿಸಿ ನೋಡು. = ಎಟಕಿ ನೋಡು. (My.).

ಎಟ್ಟು ĕṭṭu. 1. = ಅಟ್ಟು 12. To reach a thing which is on high (ಊರ್ಧ್ವಗತವಸ್ತುಗ್ರಹಣ Šmd. Dh.; T.; M. ಎತ್ತು). 2, to be within reach, to be obtainable (My.). ಶಿವಪ್ರಸಾದಮ್ ಅದು ಎಟ್ಟದು ಅನ್ಯರಿಗೆ (Bp. 58, 39).

ಎಟ್ಟು ĕṭṭu. 2. = (ಏಟು 1), ಪೆಟ್ಟು 2, ಹೆಟ್ಟು. A blow (C.; T. ಎಟ್ಟು, to beat; to cut; to throw; to hew; to kill; — a blow, etc.; Tu. ಎಡ್, to strike; *cf.* ಇಱ್ 1, ಎತ್ತು 3).

ಎಟ್ಟೆ ĕṭṭĕ. 1. = ವೆಟ್ಟೆ 1. (My.).

ಎಟ್ಟೆ ĕṭṭĕ. 2. = ವೆಟ್ಟೆ 2. (My.).

ಎಡ ĕḍa. 1. = ಅಡ 10, ಅಡೆ 15, ಇಡೆ, ಎಡೆ 1 q. v. Place, ground, etc. (Tĕ. ಎಡ, ಎಡೆ; T. ಇಡ, ಇಡ್ಮೆ; M., Tu. ಇಡೆ; see ಎಡ 3, which appears to be identical; also ಎಡ 2

may be identical, if the original meaning be "inferiority"). See ಅಟ್ಟೆಡ. — ಎಡತಾಕ. A man who goes and comes frequently (My.). — ಎಡ ತಾಕಿಸು. To cause to go and come frequently, etc. (C.). — ಎಡ ತಾಕು. = ಎಡೆ-. To come in continual contact with a place, to go and come frequently, to frequent (My.). ಈ ದೇಶದೊಳಗಿನ ಸೇವಕರು ತಮ್ಮ ತಮ್ಮ ಮನೆಗಳಿಗೆ ಎಡ ತಾಕುವರು (B. 5, 286). ಅವ ನನ್ನ ಮನೆಗೆ ಎಡ ತಾಕುತ್ತಾನೆ (C.). — ಎಡದೆಬಿಹು. = ಎಡೆದೆಬಿಹು, q. v.

ಎಡ ĕḍa. 2. (= ಎಡ 1, etc. ?). The left, the left side (ಸವ್ಯ G.; C.; Tu.; T., M. ಇಡ; Tĕ. ಎಡಮ, ಡಾ; *cf.* ಎಡ 3 & ಎಳ; ರೊಡ್ಡ). ಎಡನು (ವಾಮ, ಸವ್ಯ Hlâ.; Mr. 436). ನಾವು ಬಲದಲಿ, ಎಮ್ಮ ಎಡದಲಿ ನೀವು ಕುಳ್ಳಿರ್ದು (Bp. 24, 28). ಎಡದ ಕಡೆಯುಲಿ (40, 21). ಬಲನುನ್ ಎಮ್ಮ ಭಾಗಂ, ನಿಮ್ಮ ಕಡೆ ಎಡನು (50, 27; see also 28. 32). ಎಡದ ಕರದಲಿ (52, 41). ಎಡದ ಬದಿ (55, 16). ಎಡದ ಕಾಲ್ (58, 65; J. 28, 33). ಎಡದ ಭಾಗ (ವಾಮ Nn. 24). ಎಡದ ಕಾಲನ್ ಉಡುಗಿ, ಬಲದ ಕಾಲ ಮುನ್ದೆ ಇಕ್ಕುವುದು (ಆಲೀಢ); ಬಲದ ಕಾಲನ್ ಉಡುಗಿ, ಎಡದ ಕಾಲ ಮುನ್ದಿಕ್ಕುವುದು (ಪ್ರತ್ಯಾಲೀಢ); ಎಡದ ಕೆಯ್ಯ ನೆಗಹಲು ಪಟ್ಟ ಜನ್ನಿವಾರಂ (ಪ್ರಾಚೀನಾವೀತ Nr.). ಎಡದ ಅಂಘ್ರಿ (J. 28, 14). ಎಡದ ಅಡಿ (28, 35). ಬಿಲ್ಲಮನ್ ಅಗಳೆ ಎಡದ ಕೆಯ್ಯೊಳ್ ಅಳವಡಿಸಿ (Râghč. 17, 70). ಹೊಲಿಯುವವನ ಬಲಕೆ ಇರ ಬೇಡ, ಅಟಿವವನ ಎಡಕೆ (to which side he throws the water of his nose) ಇರ ಬೇಡ (Prv.). — ಎಡಗಟ್ಟು. -ಕಟ್ಟು. To cross one's path coming from the left side (C.). — ಎಡಗಡೆ. -ಕಡೆ. The left side (C.). ಎಡಗಡೆಯ ಮುಂಗಾಲು (B. 4, 170). ರುಣ್ಣವು ಬಲಗಡೆಗೂ ಎಡಗಡೆಗೂ ಹೊರಳುತ್ತದೆ (4, 82). ಎಡಗಡೆಗೆ (Si. 376). 2, to the left side (C.). — ಎಡಗಣ್. -ಕಣ್. -ಗಣ್ಣು. The left eye (Bp. 18, 72; J. 26, 65). — ಎಡಗಾಲ್. -ಕಾಲ್. -ಗಾಲು. The left foot (Rśv. 13, 70; Bh. 1, 6, 4; B. 4, 168). — ಎಡಗಿವಿ. -ಕಿವಿ. The left ear (C.). — ಎಡಗೆಯ್. -ಕೆಯ್. The left hand (C.; Rśv. 14, 29). — ಎಡಗೆಯ್ಜಾತಿ. The left-hand caste among the hŏlĕyas (My.). — ಎಡದೊಡು. -ತೊಡು. To put on the left side (to pass under the left arm). ಜನ್ನವಿರವಂ ಎಡದೊಡುವುದು (ಪ್ರಾಚೀನಾವೀತ Hlâ.). — ಎಡದೊಡೆ. -ತೊಡೆ. The left thigh (C.; Bp. 55, 17). — ಎಡನ್ದೊಡು. -ಂ-ತೊಡು. = ಎಡದೊಡು. ಜನ್ನಿವಾರಮನ್ ಎಡನ್ದೊಡಲ್ (ಪ್ರಾಚೀನ Mr. 255). — ಎಡಬದಿ. The left side (B. 4, 170). — ಎಡ ಬಲ. Left and right, the left and right side; to or on the left and right. ಸಾರಿಗಳನು ಎಡಬಲಸ್ಥಾನಂಗಳಿಗೆ ಅಯ್ದಿಸುವುದು (ಪರಿಣಾಯ Nr.). ಎಡ ಬಲ ಮರಳಿ (Bp. 26, 30). ಎಡಬಲದೊಳಂ (Č. Bp. 5, 8). ಎಡ ಬಲ ಬಳಸಿದವು (Bh. 3, 13, 27). ಎಡಬಲದ ಸೌಧಗಳ್ (Râm. 13, 4). ಎಡ ಬಲಕೆಯ್ಗ ಳೆರಡೂ (Si. 212). ಎಡಬಲಕ್ಕೆ ಲಕ್ಷ್ಯವಿಟ್ಟು ನೋಡುವ ಸ್ವಭಾವ (B. 4, 170). ಎಡಬಲದಲ್ಲಿ (5, 198. 207). 2, ಎಡಬಲರ್, persons of the left and right, a kind of servants (Bp. 59, 29). — ಎಡಭಾಗ. The left portion or side. ಒಡಲ ಎಡಭಾಗವು (ಸವ್ಯ Nr.). — ಎಡಮುಗ್ಗಿಲು. The left side (C.). — ಎಡ ಮುರಿ. To turn (the body) to the left (in rising, which is regarded as inauspicious, My.); (the body) to turn to the left (My.); to turn or wind to the left, as a shell (v. i., My.). 2, the state of turning (the body) to the left, etc. (My.). — ಎಡವಲವರ್. -ಬಲ-ಬರ್. To circumambulate an object keeping it now on the left and then on the right side. ಬೇಡತಿಯು... ಪಾಡುತಿರೆ ಹುಲ್ಲೆಗಳುಮ್ ಇನಿತು ತೊಲಗದೆ, ಎಡವಲವರಲು (Râghč. 17, 66). — ಎಡವಂಕ. -ವಂಕ. The left side (My.). — ಎಡವೆಗಲ್. -ಪೆಗಲ್. The left shoulder (Rśv. 6, after 11).

ಎಡ ĕḍa. 3. = (ಎಡ 1), ಎಡೆ 1, Nos. 2 & 3. Place or space between, interval; the middle, the waist (T. ಇಡ್ಡೈ; M., Tu. ಇಡೆ; Tĕ. ಎಡ, ಎಡೆ); the being middling (My.); inferiority; inferior (= ಅಡ 6 No. 5; C.). ಈ ಕುದುರೆ ಇದಕ್ಕಿನ್ತ ಎಡ (S. Mhr.). ಅದು ಅಮೇರಿಕದ ಹತ್ತಿಗಿನ್ತ ಎಡ (B. 4, 26). — ಎಡಕುಣ್ಟೆ. = ಎಡೆ-. A middling, smaller kind of weeding machine drawn by oxen. It is so constructed that the young plants, planted or sown in rows, pass unhurt between two pieces of iron, whilst the weeds on both sides are pulled up by them (C.). — ಎಡತಡೆ. An obstacle that comes between, an impediment, a hindrance (My.). — ಎಡತರ. A middling sort; a middle size; mediocrity (C.; M. ಇಡತ್ತರ; Tu. ಇಡೆತರ, middling, inferior). — ಎಡತಱಿಗಿಡ. -ತಱಿ-ಗಿಡ. The shrub Acacia cinerea Spr. (or Dichrostachys cinerea W. & A.; St. & Pl.; T. ವಿಡತ್ತೇರ್). — ಎಡವಟ್ಟು. -ಪಟ್ಟು. A middling, bad state or character (My.; T., Tu.). 2, want of understanding, stupidity (C.; Tu.). ಎಡವಟ್ಟ ಮನುಷ್ಯ, a stupid man (C.). ಅಡೆ, ಅಡಿದರೆ ಸೋಲೆ, ಸೋತರೆ ಕೊಡೆ, ಕೊಟ್ಟರೆ ಎಡವಟ್ಟು (Prv.). — ಎಡವಟ್ಟುತನ. Stupidity (My.). — ಎಡವಟ್ಟುದಾರಿ. A bad, rough path (My.). — ಎಡವರ್ಣ. A middle colour: greyish white (ಕಲ್ಮಾಷ Hlâ.).

ಎಡಗೆ ĕḍagĕ. = ಪೆಡಗೆ, etc. (My.).

ಎಡಚು ĕḍaču. 1. The state of being left-handed (My.). — ಎಡಚ. -ಅ 3. A left-handed man (My.).

ಎಡಚು ĕḍaču. 2. = ಎಡಸು, etc. Difficulty, especially in speaking (S. Mhr.).

ಎಡತಿ ĕḍĕ2-ti. (Šmd. 244). A middle-aged woman (*cf.* ಎಡೆಪ್ರಾಯ); or (fr. ಎಡೆಗ): a good-for-nothing woman.

ಎಡಪು ĕḍapu. = ಎಡವು, etc. (Grj. 5, 52).

ಎಡರು ĕḍaru. ಎಡರ್. = ಇಡರು, etc. Strait, trouble (Rśv. 13, 6. 14; J. 11, 35; 12, 3; 27, 42). 2, an impediment, an obstacle (J. 2, 54; 13, 21; C.). — ಎಡರ್ಗೇಡಿ. -ಕೇಡಿ. The destroyer of obstacles: Vinâyaka (Kk. 5; Šm. 4).

ಎಡಱ್ ĕḍaṟ. = ಎಡಱು 3. Poverty, indigence; ruin (ದಾರಿದ್ರ Šmd. Dh.; Šm. 105; Čt. II, 73; ಕೆಡುವುದು Bhn. 56; ದರಿದ್ರ, ತವಿಲ್ Šs.; T. ಇಡಱು, to stumble; to lose one's state or dignity, see ಇಡಱು). ಎಡರ್ಗಳ್ (Šmd. 53). ಕುಡದ ನಿಮಗೆ ಈ ಎಡಱ್ ಅಯ್ತೇ? (125). ಎಮ್ಮ ಆಳ್ದನ ಎಡಱಿನ್ ಅಮೆ ತಿರ್ದುವೆಂ (258). ಎಡಱಿಡಸಿ (Bp. 29, 10). ಎಮ್ಮೆಡಱಿನ್ ಅಱಿದು (40, 35). ಎಡಱಿಡಿಸಿದಲ್ಲಿ (40, 43).

ಎಡಱು ĕḍaṟu. 1. To be crooked; to be dishonest (ವಕ್ರಭಾವ Šmd. Dh.; Šm. 105; Abh. P. 10, 212). ಎಡಱಿದಂ, a dishonest man (Šmd. 16). ಎಡಱಿದನೋ? ಅವನ ನೊಸಲ ಅಕ್ಕರಂ (o. r. ಅಕ್ಕರವಂ) ತೊಡೆದುದು ಅಕ್ಕುಂ (69).

ಎಡಱು ĕḍaṟu. 2. = ಇಡಿಱ್. Crookedness

ಎಡಱು ĕḍaṟu. 3. = ಎಡಱ್. ಎಮ್ಮ ಎಡಱುಗಳಿಗೆ (Bp. 23, 7). ಎಡಱಿನಲಿ (Abhâ. 1, 29).

ಎಡಱು ĕḍaṟu. 4. = ಇಡಱು, ಎಡವು, etc. To stumble, to trip (My.).

ಎಡವು ĕḍavu. = ಇಡಱು, ಎಡಪು, ಎಡಱು 4, ಎಡಹು 1. The foot to be struck at a thing so as to cause

a person to fall or to be near to fall;—to strike with the foot against (c. Accus.);—to stumble, to trip. ಅವನು ಕಾಲು ಎಡವಿ ಬಿದ್ದನು, or ಅವನು ಎಡವಿ ಬಿದ್ದನು, he stumbled and fell (C.). ಕಲ್ಲಿಗೆ ಕಾಲು ಎಡವಿತು (C.). ಅವನು ಎಡವಿದನು (C.). ಕಲ್ಲನ್ನು ಎಡವಿದನು (My.).

ಎಡವೆ ĕḍavĕ. = ಎಳವೆ, q. v.

ಎಡಸು ĕḍasu. = ಎಡೆಚು 2, ಪೆಡೆಸು, q. v. (My.).

ಎಡಹು ĕḍahu. 1. = ಎಡವು, etc. To stumble, etc. (J. 16, 25; 28, 54; Râm. 5, 8, 70). ಸಪ್ಪು ಮವಾನ್ನು ಪರಿತರಲ್, ಎಡಹಿ (Bp. 27, 17). **2,** to commit a mistake. ಪತ್ರಿಕೆಯೊಳ್ ಎಡಹಿ ಬರೆದ ಅಕ್ಕರದ ಬೀಟ್ (J. 30, 28).

ಎಡಹು ĕḍahu. 2. Stumbling (Râm. 5, 3, 45).

ಎಡಹುಹ ĕḍahuha. Stumbling; deviating from the right course (ಸ್ಖಲನ, ರಿಂಖನ Nr.).

ಎಡಿಗೆ ĕḍigĕ. = ಎಡಗೆ, etc. (My.).

ಎಡೆ ĕḍĕ. 1. = ಎಡ 1, etc., ಎಡ 3. A place, a spot (ಸ್ಥಾನ Šmd. Cm. 27. 57. 104; ತಾವು 341; ಠಾವು Nn. 128, o. r. ಬಟ; ಠಾವು 163; C.); ground, floor. ದೆಕಾರದ ಎಡೆಗೆ ಪಿರಿದುಂ ಲೋಪಂ (Šmd. 57). ಕೆಲವು ಎಡೆಯೊಳ್ (52). ಅರೆ ಎಡೆಯೊಳ್ (82). ಎಣಿಸುವೆಡೆಯೊಳ್ (116). ಅಗುಟ್ಟಿಡೆ (I). ಆವೆಡೆ, ಆವೆಡೆಯಣಂ (135). ಬಟ್ಟೆಗೂಡಿದ ಎಡೆ (ಶೃಂಗಾಟಕ); ಇರ್ದ ಎಡೆಯಲಿ ಇರ್ದು ಹೆಱಗೆ ಮುನಿವವಂ (ಗೋಷ್ಠಶ್ವನ್); ಕೆಸಱುಳ್ಳ ಎಡೆ (ಪಿಚ್ಛಿಲ); ಕೊಲುವ ಎಡೆ (ಘಾತನಸ್ಥಾನ Hlâ.). ಕಾಳೆಗಕ್ಕೆ ಎನ್ದು, ಸನ್ನದ್ಧಮ್ ಆಹ ಚತುರಂಗಬಲವನು ತಕ್ಕ ಎಡೆಯಲ್ಲಿ ವಿಭಾಗಿಸಿ ಇರಿಸುಹವು (ವ್ಯೂಹ); ಸೇನೆಯಿದ್ದ ಎಡೆಯಿನ್ದ ತೊಲಗುವುದು (ಪ್ರಚಕ್ರ Nr.). See Bp. 5, 19; 11, 12; 51, 37; 55, 16; Rsv. 5, 34; 6, after 132; Šm. 84, 86; J. 3, 3. 23. 25; 8, 2; 25, 33; 28, 18. 45; Bh. 1, 10, 29. **2,** room, place; interstice, place or time between, interval, meanwhile; distance (ತೆಱಪು Šmd. 135; see ಎಡೆವಿಡು). ಎಡೆ ಬಿಡದ ಕ್ರಿಯೆ (ಸತತ Si. 26). ಎಡೆ ಬಿಡದದು (ಘನ, ನಿರನ್ತರ 371). ಎಡೆ ಬಿಟ್ಟದು (ಪೇಲವ, ವಿರಲ 371). ಪ್ರಯೋಜನದಿನ್ದ ಎಡೆ ಬಿಡದವನು (ಅರ್ಥದಿನ್ದ ಅನಪೇತನಾದವನು, ಅರ್ಥ್ಯ 447). ಎಡೆ ಬಿಡದೆ (ಅಭೀಕ್ಷ್ಣಂ 473). ರಣಧೀರಮಾರುತಿ ಮಿಕ್ಕು, (ಹೋರಿಗಳಂ) ಹರಿಸಿದನ್ ಅಸುರನ್ ಇದ್ದೆಡೆಗೆ; ಎಡೆಯಲೇ ಭಕ್ಷ್ಯಾದಿಗಳ ಬಟ ಹೆಡೆಗೆ ಉಱದವು (Bh. 1, 10, 29. 30). See Prv. s. ಬಡವ. **3,** inferiority; inferior. **4,** = ಎಡೆಕುಣ್ಟೆ. ಎಡೆ ಹೊಡೆ, to weed by means of the ಎಡೆಕುಣ್ಟೆ (S. Mhr.; Sd.). — ಎಡೆ ಕಡೆ. dupl. Place and direction (J. 26, 52). — ಎಡೆಕುಣ್ಟೆ. = ಎಡಕುಣ್ಟೆ, q. v. (S. Mhr.). — ಎಡೆಗಟ್ಟು. -ಕಟ್ಟು. A small dam (My.). — ಎಡೆಗಟ್ಟೆ. -ಕಟ್ಟೆ. = ಎಡೆಗಟ್ಟು. (My.). — ಎಡೆಗಡಿ. -ಕಡಿ. To cut down (J. 25, 33). — ಎಡೆಗಾಳ. (Šmd. 386; Kk. 98). An inferior or small fish-hook. — ಎಡೆಗಿಡು. -ಕಿಡು. Room to fail: to be deficient in room (Abh. P. 14, 121). — ಎಡೆಗಿಱ. ಎಡೆಗೆ-ಇಱ 4. To be closely confined in a place: to be covered over, to be enveloped, to be hidden (ಸಂಛನ್ನ Šmd. Dh.). — ಎಡೆಗುಡು. -ಕುಡು. = ಎಡೆಗೊಡು. (Abh. P. 6, 117). — ಎಡೆಗೆಡಹು. -ಕೆಡಹು. = ಅಡೆಗೆಡಹು. To throw to the ground (J. 7, 47). — ಎಡೆಗೆಡಿಸು. -ಕೆಡಿಸು. To cause room to fail, to obstruct, to resist (ತಳ್ಪೊಯ್, ತಡಮ್ಬುರೆ, ಮಾರ್ಕೊಳ್, etc., ಪ್ರತಿಹತ Šs.). — ಎಡೆಗೆಡೆ. -ಕೆಡೆ. = ಅಡಗೆಡೆ. To fall to the ground, or down (J. 20, 30). — ಎಡೆಗೆಡೆಗೆ. -ಎಡೆಗೆ. rep. Here and there, etc. (Bp. 12, 19; 21, 10; 22, 49; 26, 68; 27, 72; 32, 51; 38, 70; 44, 2; 53, 24; Râm. 13, 3). — ಎಡೆಗೆಯ್. To prepare a (proper) place (V. 14, 59). — ಎಡೆಗೊಡು. -ಕೊಡು. To give way, to submit, to surrender to (J. 2, 16; 18, 48). — ಎಡೆಗೊಳ್. -ಕೊಳ್. To take place, to occur, to come into being (Šmd. 206; Rsv. 13, 65; J. 6, 2); to take a position: to come to a stand, to stand (J. 28, 38; Rsv. 6, 9). 2, to obtain, to acquire (Grj. 10, after 79; J. 17, 4); to conceive (Rsv. 4, 37; Abhâ. 2, 54); to resort to (J. 16, 40). — ಎಡೆಗೊಳಿಸು. -ಕೊಳಿಸು. To put, to put on (Grj. 10, after 61). — ಎಡೆ ತಾಕು. = ಎಡ ತಾಕು. (My.). — ಎಡೆದೆಱಹು. -ತೆಱಹು. An interval of space (Râm. 6, 51, 19). ಎಡೆದೆಱಹು ಇಲ್ಲದ ಸಾಲು (ಲೇಖೆ, ರಾಜಿ Nr., o. r. ಎಡ-). — ಎಡೆನಿಚ್ಚ. Informing against, betraying (ಪಿಸುಣ Čt. I, 13, o. r. ಎಡೆನಿಚ್ಚು). — ಎಡೆನುಡಿ. = ಎಡೆಯ ನುಡಿ (Šmd. 195). A middling or inferior word or speech. — ಎಡೆ ನೆಱ. Place to be sufficient: to be sufficient in place (Abh. P. 9, 60; 15, 59). — ಎಡೆಪ್ರಾಯ. = ಎಡೆಹರೆಯ. The middle of the ordinary age of man (My.). — ಎಡೆ ಮಡಗು. To leave an interval (Abh. P. 9, 61; 11, 100). — ಎಡೆಮನೆ. A house in the midst (Bp. 48, 25). — ಎಡೆ ಮಾಡು. = ಎಡೆಗೆಯ್. (Abh. P. 14, 33; Grj. 10, after 98). — ಎಡೆಯಕ್ಕರ. -ಅಕ್ಕರ. N. of a metre (Čh.). — ಎಡೆಯಣಂ. (Šmd. 136). A man of the midst (?). — ಎಡೆಯಲಾಗು. -ಆಗು. To be at hand, to be near and dear. ಎಡೆಯಲಾದ ಸಂಗಡಿಗನು (ಮಿತ್ರ, ಸುಹೃತ್, ನಣ್ಟ Nr.). — ಎಡೆಯಾಗು. -ಆಗು. To be or become exposed to; room to be found for. ನಾಣಿಲಿ ಎನಿಸುವ ವಧು ನಗೆಗೆ ಎಡೆಯಕ್ಕುಂ ಸಮುಸ್ತಜಗತೀತಲದೊಳ್ (Šm. 221). ಅವರ್ಣವಾದಕ್ಕೆ ಎಡೆಯಾಗದ ಬಳ್ಳಿನ್ದೆ (17). ನಗೆಗೆ ಎಡೆಯಾಗಿಹುದು (Bp. 40, 73). See Sp. s. ತರುಣತ್ವ. — ಎಡೆಯಾಟ. -ಆಟ. Moving from place to place, roaming; moving to and fro; commotion (J. 30, 30). ಹಾದರಕೆ ಎಡೆಯಾಟದ ಆಸೆ (Sp.). ಕರಿತುರಗನಿಚಯದ ಎಡೆಯಾಟಗಳ ಘಾಟಗಳ್ (Č. Bp. 42, 15). — ಎಡೆಯಾಡಿಸು. -ಆಡಿಸು. To cause to roam about, (to send on errands). ವಿಲಾಸಿನಿಯೊಳ್ ಎಡೆಯಾಡಿಸೆನು (Bp. 9, 33). ಸೂಳೆಯೆಡೆಗೆ ಎಡೆಯಾಡಿಸುತ (26, 58). ಎಡೆಯಾಡಿಸಿ ತಾ ಕೊಡದ ಲೋಭಿಯ ಮಾತು ಕೊಡಲಿಯ ಗಾಯ (Sp.). — ಎಡೆಯಾಡು. -ಆಡು. To move; to move, wander, or play about, to roam (ಕೊಲ್ಲಣಿಗೆ Kk. 51). ಹೊಱಯ ಹೊತ್ತು ಎಡೆಯಾಡುವವದು (ಪರ್ಯಾಹಾರ, ವಿವಧ Nr.). ಗುದದೊಳ್ ಎಡೆಯಾಡುವ ಅನಿಲಂ (ಅಪಾನ Mr. 51). See Abh. P. 3, 128; 4, 29; Bp. 15, 23; 26, 19; 44, 7; 47, 66; 51, 42; 56, 54; Râm. 1, 16, 16; J. 5, 31; 6, 8; 15, 20; 19, 44; Abhâ. 2, 105. 106. — ಎಡೆಯುಡುಗು. -ಉಡುಗು. To leave room, to make an interval or an interruption; to stop; to cease (ವಿಚ್ಛೇದ Šmd. Dh.; ಎಡೆವಱ Šmd. 157; ಎಡೆವಿಡು 157 Cm.; Rsv. 14, 29). — ಎಡೆಯೆಡೆ. rep. (Bp. 56, 13; Rsv. 10, 31). — ಎಡೆಯೊತ್ತು. -ಒತ್ತು. To compress, to press, to squeeze (J. 3, 27). — ಎಡೆವಱ. -ಪಱ. To cut room asunder: to make an interruption, to stop, to cease (Abh. P. 11, 19; J. 4, 28; 19, 14); to end (ಎಡೆಯುಡುಗು Šmd. 157, ಎಡೆವಿಡು Cm.; Râm. 1, 4, 9; ಎಡೆವರಿ, *i. e.* -ಪರಿ, is the original reading in Mdb. Abh. P.). ಎಡೆವಱವ ವಿನಯಿತಂ (ವೀತರಾಗ Mr. 241, o. r. ಸಿತ-; the opposition is ನೀಲ-, or ನೀಲೀರಾಗ). — ಎಡೆವಲಿ. -ಬಲಿ. = ದಿಗ್ಬಲಿ. (Abh. P. 13, 106). — ಎಡೆವಿಡು. -ಬಿಡು. = ಎಡೆಯುಡುಗು. Also: to go beyond the (proper) boundary. See Bp. 2, 13; 18, 63; 35, 5; 38, 34; 50, 32; 51, 48; 57, 26; 58, 48; Rsv. 8, 98. 113; J. 34, 8; Šm. 12. 40; Mr. s. ನೀಲೀರಾಗ. ಎಡೆವಿಟ್ಟದು (ಅತಿಕ್ರಮ, ಅತಿಪಾತ Nr.). — ಎಡೆವುಗು. -ಪುಗು. To come near, to approach (Abh. P. 10, after

201; 14, after 17 & 25). — ಎಡೆವೆರಸು. -ಬೆರಸು. To take a position in resistance, to stand (J. 27, 6). — ಎಡೆಸೆಳೆ. The inner force or velocity of a river (J. 9, 24). — ಎಡೆಹಗಲು. The time from about 9½ o'clock to 10½ in the morning (My.). — ಎಡೆಹರೆಯ. = ಎಡೆಪ್ರಾಯ. (My.). — ಎಡೆಹೊತ್ತು. The time between sunrise and sunset (My.).

ಎಡೆ ĕḍĕ. 2. (fr. ಇಡಿ 1). Excess, abundance; exceedingly, etc. (ಅಧಿಕ Šmd. 391; Šm. 58; T. ಇಡ, extension; greatness).

ಎಡೆ ĕḍĕ. 1. Tbh. of ಇಡೆ. An offering; food; meal. ಎಡೆ ಇಕ್ಕು, -ಇಡು, -ನೀಡು, -ಮಾಡು, -ಹಾಕು, to present food to a deity or to man (C.). ಅದಿಯಾ ದೈವವಂ ಭೇದಿಸಲಿಕೆ ಅಱಿಯದೇ, ಹಾದಿಯಾ ಕಲ್ಲಿಗೆ ಎಡೆ ಮಾಡಿ ನಮಿಸುವ ಮಾದಿಗರ ನೋಡು! (Sp.). ಸೇವಕರನ್ನು ಎಡೆಯ ಮೇಲಿನ್ದ ಎಬ್ಬಿಸಿದರೆ ಪಾಪ (B. 5, 288). See Sp. s. ಕೆಯ್ದಾಟಿ. 2, the leaf, etc. on which food is placed (My.). — ಎಡೆಕಾಸು. A kâsu presented with food to a deity (S. Mhr.).

ಎಡೆ ĕḍĕ. 2. = ಹೆಡೆ. (My.). See ಏಱಡೆನಾಗರ.

ಎಡೆಗ ĕḍĕga. A good-for-nothing man (ಸಲ್ಲದವ Kk. 37; Šm. 46; Tĕ. ವೆಡೆ, useless, etc.; ವೆಡಗು, ವೆಣಗು = ವೆಱಿವಾಡು, a fool).

ಎಡೆಯ ĕḍĕya. = ಪೆಡೆಯ. See s. ಪೆಱಂ.

ಎಡ್ಡ ĕḍḍa. 1. (fr. ಎಡ್ಡು 1). A cheat, a liar (S. Mhr.; Tĕ. ಎಡ್ಡೆ).

ಎಡ್ಡ ĕḍḍa. 2. = ಹೆಡ್ಡ. A dull, stupid man (My.; Tĕ. ಎಡ್ಡೆ; T. ಇಱುದ್ಯ).

ಎಡ್ಡ ĕḍḍa. 3. Beauty, charm, nicety, goodness (ಒಳ್ಪು Ct. I, 6; ಒಳ್ಳಿತು II, 24; ಮನೋಹರ Kk. 18, Šm. 55; Grj. 6, after 56; Rśv. 6, 54; Tu. ಎಡ್ಡೆ; T. ಎಱಿಲ್, beauty; *cf.* the T. s. ಇಂ, ಇಞ್). ಆಕೆ ಕಣ್ಗೆ ಎಡ್ಡಮ್ ಆದಳ್ (Lilv. 3, 46). ಇಳೆಗೆ ಇಱಿಯದೆ ಒತ್ತರಿಸಿ ಮನ್ದಯ್ಯುಸ್ತೆ ಎಡ್ಡಮ್ ಎನೆ ನಿನ್ದ ಚನ್ದ್ರಿಕೆಯ ಒಡ್ಡು (Rśv. 6, 5).

ಎಡ್ಡ ĕḍḍa. 4. = ಅಡ್ಡ 1. — ಎಡ್ಡಂ ತಿಡ್ಡಂ. dupl. = ಅಡ್ಡತಿಡ್ಡ. (My.).

ಎಡ್ಡತನ ĕḍḍatana. 1. = ಎಡ್ಡುತನ No. 1. Cheating, falsehood (S. Mhr.).

ಎಡ್ಡತನ ĕḍḍatana. 2. = ಎಡ್ಡುತನ No. 2, ಹೆಡ್ಡತನ. Stupidity (My.).

ಎಡ್ಡತಿ ĕḍḍati. = ಹೆಡ್ಡತಿ. A stupid woman (My.).

ಎಡ್ಡಿಸು ĕḍḍisu. = ಏಡಿಸು. To rail, to abuse; to mock; to cheat (S. Mhr.; T. ಇಣಾಪ್ಪು, derision, contempt; to mock to deride). ಭೃಂಗ ನಗಿಸುತ್ತೆ, ಎಡ್ಡಿಸುತೆ, ಶಿವನಿದಿರೊಳ್ ಆಡುತ್ತೆ (Bp. 1, 49). ಚಂಚರು ಬನ್ದು, ಚಪ್ಪಳಿಗುಟ್ಟಿ, ಎಡ್ಡಿಸಿ, ಕಾಡಿದಲ್ಲದೆ ಬಿಟ್ಟು ಹೋಗರು ನಿನ್ನಂ (18, 15).

ಎಡ್ಡು ĕḍḍu. 1. Cheating, falsehood (S. Mhr.; see T., M. s. ಎತ್ತ 2).

ಎಡ್ಡು ĕḍḍu. 2. = ಹೆಡ್ಡು. Stupidity; a stupid thing or person (My.). — ಎಡ್ಡಾಟ. -ಆಟ. Stupid behaviour (My.).

ಎಡ್ಡುತನ ĕḍḍutana. = ಎಡ್ಡತನ 1. (S. Mhr.). **2,** = ಎಡ್ಡತನ 2. (My.).

ಎಡ್ರು ĕḍru. = ಎಡರು, etc. (My.).

ಎಣ್ ĕṇ. = (ಎಣ್ಟು 2), ಎಮ್ 2. Eight (Šmd. 223). — ಎಣ್ಬಾಸಿರ. -ಸಾಸಿರ. Eight thousand (Šmd. 225). See ಪದಿನೆಣ್ಬಾಸಿರ. — ಎಣ್ದೆಸೆ. The eight points of the compass; their guardians. ಎಣ್ದೆಸೆಯ ಆನೆಗಳ್ (Šmd. 225). See Bp. 8 sum.; 32, 5; 36, 62; 44, 32; J. 3, 21; 13, 47; 17, 2; 25, 3. — ಎಣ್ದೆಸೆವೆಣ್. -ಪೆಣ್. A wife of any guardian of the eight points (J. 28, 39). — ಎಣ್ಬರಿಜು. Eight forms (Šsv. 1, after 71). — ಎಣ್ಮೆಯ್ಯ. (= Sk. ಅಷ್ಟಮೂರ್ತಿ): Paramêśvara (Šs.). — ಎಣ್ಮೆಯ್ಯವ. -ಅವ. = ಎಣ್ಮೆಯ್ಯ. (ಶಿವ Kk. 4; Šm. 2).

ಎಣ ĕṇa. = ಎಣೆ 1. — ಎಣಗೊಣ. = ಎಣೆಗೊಣ, ಎಣೆಗೋಣ. — ಎಣಮಣಿಸರ. A kind of necklace, composed alternately of beads of gold and precious stones or corals (My.).

ಎಣಸು ĕṇasu. = ಎಣಿಸು q. v., ಎಣೂಸು, ಎಣ್ಣಿಸು. (C.; Bp. 22, 18).

ಎಣಿಕೆ ĕṇikĕ. 1. = ಎಣ್ಣಿಕೆ. Counting, reckoning; number (C.). **2,** thinking; thought; notice, observation (C.). ಅಕ್ಷರಂಗಳ ಎಣಿಕೆ (ಮಾತ್ರೆ Nn. 157). ಅಕ್ಕರದ ಎಣಿಕೆ (ಗ್ರನ್ಥ Mr. 491). ಎಣಿಕೆಯಾದದು (ಗಣಿತ Si. 371). ಮುಡುಪಿನ ಎಣಿಕೆಗೆ ಕುನ್ದದನ್ತೆ ವಿಚಾರಿಸು! (Bp. 11, 14). ಸಾವಿರದ ಏಱಿ ನೂರ್ಱಸದಿಗಳ ಎಣಿಕೆಗೆ ಅನುಕೂಲಮ್ ಆಗಲು (51, 73). ಎಣಿಕೆಗೆ ಬಾರದ ಮನುಜ ಕರಣೀಕನ್ ಆದರೆ ಏನು? (Dp. 167). ಅರಮನೆಗೆ ಹತ್ತು, ನಿನಗೆ ಒನ್ದಱ ಎಣಿಕೆಯೊಳ್ (J. 29, 22). ಎಣಿಕೆಗೆ ಅಳುಮ್ಬುವುಮ್ ಆಗಿ (Rśv. 13, 72). ಎಣಿಕೆಯಿಲ್ಲದ (countless) ಹಣ (C.). ಒಡಗೂಡದೆ ಇರದು ಎನ್ನ ಮನದ ಎಣಿಕೆ (J. 30, 28). See ಪಲವೆಣಿಕೆ; J. 2, 25. 45; 4, 4; 5, 28; 9, 6. 8; 13, 25. — ಎಣಿಕೆಗೆಯ್. To think, etc. (J. 20, 16). — ಎಣಿಕೆಗೊಳ್. -ಕೊಳ್. To consider, to respect, to take notice of (Bp. 2, 19; 4, 27; 52, 9; J. 10, 24; 12, 11; 13, 17; 17, 22; Dp. 126, 1). — ಎಣಿಕೆಯೊಳಗೆ ಬರು. To come under one's eye, to come quite close. ಮನುಷ್ಯನಾಗಲಿ ದನ ಕಱುಗಳಾಗಲಿ ತಮ್ಮ (ಮೊಸಳೆಗಳ) ಎಣಿಕೆಯೊಳಗೆ ಬನ್ದರೆ ಕೂಡಲೆ ಹಿಡಿದು (B. 4, 132). ಬೇಟೆಯು ತನ್ನ (ಸಿಂಹದ) ಎಣಿಕೆಯೊಳಗೆ ಬನ್ದ ಕೂಡಲೆ ಮಱೆಯಾಗಿ ಬೊಗ್ಗಿ ಕೊಣ್ಡು ಬನ್ದು (4, 212).

ಎಣಿಕೆ ĕṇikĕ. 2. = ಹೆಣಿಕೆ. (My.).

ಎಣಿಸು ĕṇisu. = ಎಣಸು, etc. To add together; to enumerate; to count, to reckon; to estimate; to appreciate; to consider, to take notice of; to think; to think of; to plan; to make equal to, to compare. ಪಿನ್ದೆ ಎಣಿಸಿದ ವಿವಿಧವಿಧದ ಲಿಂಗಕ್ಕೆ ಸಪ್ತವಿಧವಿಭಕ್ತಿಗಳ್ (Šmd. 114). ಒನ್ದೆರಡು ಮೂಱೆನ್ದು ಪದಾರ್ಥಮನ್ ಎಣಿಸುವ ಎಡೆಯೊಳ್ (116). ಮೆ ಎಮ್ಬುದು ಅಕ್ಕುಮ್ ಎಣಿಸುವ ಸೂಱೊಳ್ (242). ಎಣಿಸ ಬೇಕಾದುದು (ಗಣನೀಯ Nr.). ತೂಗುವದು, ಅಳೆಯುವದು, ಎಣಿಸುವದು (ಮಾನ Si. 327). ಚಾಡೀ ಕೇಳಿ, ದ್ರೋಹಂಗಳನ್ ಎಣಿಸುತ್ತ (Sk. 94). ತಾನೊನ್ದೆಣಿಸಿದರೆ ದೈವವೊನ್ದೆಣಿಸಿತು (Prv.). ಕಾರಣಪುರುಷ, ನಿನಗೆ ಒಬ್ಬ ಭಕ್ತನನ್ ಎಣಿಸಲ್ ಉಣ್ಟೇ? (Bp, 30, 24). ತನ್ನಮಹಾತ್ಮನ ಅನೂನಮಹಿಮೆಯನ್ ಎಣಿಸುವೊಡೆ ಗೌರೀಪತಿಗೆ ಅಶಕ್ಯ (31, 17). ಕೆಲವು ಹುಡುಗರು ದನಗಳೊಳಗೆ ಎಣಿಸಲಿಕ್ಕೆ ತಕ್ಕವರಾಗಿರುತ್ತಾರೆ (B. 1, 18). ಈ ದೇಶದೊಳಗೆ ಹಮಾಲನನ್ನೂ ಪಕಾಲಿಯವನನ್ನೂ ಊಱಿಗದವರೊಳಗೆ ಎಣಿಸುತ್ತಾರೆ (5, 286). See Bp. 1, 14. 36. 37; 5, 18; 35, 26; 47, 55; 50, 36; 51, 75; 54, 34; Rśv. 13, 26. 27; J. 29, 37; Bh. 1, 8, 40.

ಎಣೂಸು ĕṇusu. = ಎಣಿಸು, etc. (My.).

ಎಣೆ ĕṇĕ. 1. = ಎಣ. A couple, a pair; connexion; fellowship; adjustment; equality, similarity;

a match (ಸಾಮ್ಯ, ಜವಳಿ, ಜೋಡು, etc. Šm. 55; My.; T. ಇಣೈ; Tu. ಇಣೆ; Tĕ. ಎನೆ; see ಇಡಿ 1 and 2, ಇಣ್ಡೆ 2, ಎಳಸು 1, ಪೆಣೆ). ನುಣ್ಣಗದಪಿನ ಎಣೆ (J. 28, 18). ಅವಳ ಕುರುಳ್ಗೆ ಮಾಲಿದು ಮ್ಬಿಗಳ್ ಎಣೆಯೆ? (Šmd. 139). ಪೋಲಿಸುವಡೆ ಎಣೆಯೊಳರೆ ಸೆಟ್ಟಿಗೆ? (Bp. 25, 11). ಕ್ಲೇಶರ್ ಅಕ್ಲೇಶಂಗೆ ಎಣೆಯೆ? (54, 22). ಉಡುಗಳು ಸೋಮಗೆ ಎಣೆಯೇ? (55, 22; see also 11, 24; 27, 44; 51, 57; 55, 23). ಸಿಂಹಕ್ಕೆ ಗಾವಸಿಂಗಮ್ ಎಣೆಯೇ? (Ss. 103). ಜೀವರತ್ನಕೆ ಎಣೆಯೇ ಮಿಕ್ಕಾದ ಪಾಷಾಣಂ? (62). ಎಲರ್ ಬಿರಯಿಯ ಬಾಯೆಡೆಯ ಎಲರ್ಗೆ ಎಣೆ (Rśv. 5, 34). ಅತಿಶೌರ್ಯದೊಳ್ ಒಪ್ಪಿ ಇರೆ ವಿನಯಮುನ್ ಅಳ್ದು ಬಾಡ್ದಿವಂಗೆ ಎಣೆ ಉಣ್ಟೇ? (13, 10). See Šmd. s. ಪವಣ್ಸರಿ; J. 2, 25; 6, 24; 8, 17; 28, 18. — ಎಣೆಗಣ್ಟು. The braid of hair of a woman tied up at the back of the head (ಧಮ್ಮಿಲ್ಲ Si. 52). — ಎಣೆಗಳೆ. -ಕಳೆ. To lose one's connexion with, to become loose. ದೇಹದ ಎಣೆಗಳೆಯದೆ ಇಹ ಹೆರೆ (ಉವಜಷ್ವೆ, etc. Mr. 401). — ಎಣೆಗಾಣು. -ಕಾಣು. To see the like (My.). — ಎಣೆಗೊಣ. = ಎಣೆಗೋಣ. (Šmd. 143, o. r. ಎಣ-, also Mdb.). — ಎಣೆಗೊಳ್. -ಕೊಳ್. To become equal. ಅವಳ ಮುಖವು ಚನ್ದ್ರನನ್ನು ಎಣೆಗೊಣ್ಡಿತು (My.); to be united, to face (one another). ಗರ್ಜಸುತೆ ಅಣಿಯರವಮ್ ಎಣೆಗೊಣ್ಡ ಇಭಂಗಳಂ. . . ಕಾದಿಸಿತು. . ಇಭಾರೋಹಕರ್ (Rśv. 13, 86). 2, (a child) to suck when its mother is pregnant (R.); (infants) to become thin or lean when insufficiently supplied with milk from the breast (S. Mhr.). — ಎಣೆಗೋಣ. (-ಗೋಣ್-ಅ 3). A person with a compound neck (as Brahmâ, etc.?). It may become ಎಣೆಗೊಣ (Šmd. 143, o. r. ಎಣ-, also Mdb.). — ಎಣೆ ಬರ್. = ಎಣೆವರ್. To equal. ಉಮೇಶಭಕ್ತರ್ಗೆ, ಅಟಿಸಲ್, ಅಜಹರಿಮುಖ್ಯರ್ ಎಣೆ ಬರಲ್ ಅಟಿಯರ್ (Bp. 22, 17). — ಎಣೆಯಕ್ಕರ. -ಅಕ್ಕರ. The same letter or consonant (Čh.). — ಎಣೆಯೊಡ್ಡು. -ಒಡ್ಡು. To put opposite to (J. 14, 3). — ಎಣೆವಕ್ಕಿ. -ಪಕ್ಕಿ. The company-bird: the ruddy goose (ಚಕ್ರವಾಕ Kk. 14; Šm. 28). See Rśv. 6, after 24; J. 17, 25. 40; 26, 24; 30, 15. — ಎಣೆವಡೆ. -ಪಡೆ. To be united, to be composed (Čh. v. 254). — ಎಣೆವರ್. -ಬರ್. To become or be equal (Rśv. 1, 36; 4, 9).

ಎಣೆ ĕṇĕ. 2. = ಹೆಣೆ. To twist, etc. (My.).

ಎಣ್ಟನೆ ĕṇṭanĕ. The eighth syllable (Čh. v. 132. 133; see s. ಎಣ್ಟು 2).

ಎಣ್ಟು ĕṇṭu. 1. Arrogance. (*Cf.* ಪೆಟ್ಟು 3; Tu.: boasting; craftiness, cunning). — ಎಣ್ಟೆರ್ದೆ. -ಎರ್ದೆ. A proud heart or mind (Čh. v. 21).

ಎಣ್ಟು ĕṇṭu. 2. (= ಎಣ್, etc.). Eight (C.; T. ಎಟ್ಟು, Tu. ಎಣ್ಮ, Tĕ. ಎನಿಮಿದಿ). ಎಣ್ಟಟಿಯೊಳ್ (Šmd. 43). ಎಣ್ಟರ್ಕೆ (223). ಎಣ್ಟಬಲಿ (Bp. 35, 32). ಎಣ್ಟಕ್ಕೆ (Mr. 402). ಶಬ್ದಮಣಿದರ್ಪಣದೊಳ್ ಪ್ರಕರಣಮ್ ಎಣ್ಟಕ್ಕುಂ (Šmd. 7). ಈ ಪೇಟ್ದ ಎಣ್ಟುಂ (42). ಹತ್ತೆಣ್ಟು (63). ತೊಮ್ಬತ್ತೆಣ್ಟು ಸಾವಿರ (Bp. 5, 18). ನೆಣ್ಟರ ಮನೆಗೆ ನಾಯಿ ಹೊಕ್ಕರೆ ಎಣ್ಟು ಊರಿಗೆ ಬೆರಕೆ (Prv.; another form is - - ಎಣ್ಟು ಮನೆಗೂ ಏಕ). ಎಣ್ಟು ಜನರು (B. 5, 125). ಎಣ್ಟು ಮುಡಿ (J. 17, 26). — ಎಣ್ಟಡಿ. -ಅಡಿ. Eight feet. 2, that has eight feet: the śarabha (Čt. II, 23). — ಎಣ್ಟಡಿವರಿಜ. -ಅಡಿ-ಪರಿಜು-ಅ 3. Who has the form of the śarabha: Vîrabhadra (Kk. 6; Šm, 4). — ಎಣ್ಟನೆಯ. -ಅನೆಯ. Eighth (*cf.* ಎಣ್ಟನೆ). ಎಣ್ಟನೆಯ ಮುಖಕೆ ದೀಕ್ಷಿತನಾಗಿ (J. 25, 7). ಎಣ್ಟನೆಯ ವರುಷಮ್ ಆಗಲ್ಕೆ (29, 7). — ಎಣ್ಟಾನೆಣ್ಟು. -ಆನು-ಎಣ್ಟು. About eight (used only of time, C.). ಎಣ್ಟಾನೆಣ್ಟು ದಿವಸ (B. 4, 53). — ಎಣ್ಟು ಕುಲ. Eight castes of men. ಆ ಬ್ರಾಹ್ಮರೊಳು ಕಮ್ಮೆ ಮೊದಲಾದ ಎಣ್ಟು ಕುಲಮ್ ಅಕ್ಕು (Mr. 254). 2, the eight kinds of nâgas: ಅನನ್ತ, ವಾಸುಗಿ, ತಕ್ಷಕ, ಕರ್ಕೋಟಕ, ಪದ್ಮ, ಮಹಾಪದ್ಮ, ಶಂಖಪಾಲ, ಕುಲಿನ್ದ (Mr. 402). See ಎಣ್ಟು ಪಾವು. — ಎಣ್ಟು ಗಣ. The eight syllable-feet (Mr. 363). — ಎಣ್ಟು ದೆಸೆ. The eight points of the compass. ಇನ್ದ್ರ, ಅನಲ, ಯಮ, etc. ಈ ಎಣ್ಟು ಮೂಡಲು ಮೊದಲಾದ ಎಣ್ಟು ದೆಸೆಗಂ ಕ್ರಮದಿನ್ದೆ ಒಡೆಯರು (Hlâ.). — ಎಣ್ಟು ನಗ. The eight chief mountains (the eighth being ಶ್ರೀಶೈಲ?). ಎಣ್ಟು ನಗಂಗಳುಂ ತಗ್ಗಿದವು (Bp. 33, 55). — ಎಣ್ಟು ಪಾವು. = ಅಷ್ಟಫಣಿ, ಎಣ್ಟು ಕುಲ No. 2. (Bp. 46, 27). — ಎಣ್ಟು ಮೂರ್ತಿ. The eight bodies or forms (of which Šiva consists, Bp. 9, 50). See ಅಷ್ಟಮೂರ್ತಿ. — ಎಣ್ಟು ಒಮ್ಬತ್ತು. Eight or nine (C.; B. 3, 13). 2, eight and nine (My.). 3, eight times nine (My.). — ಎಣ್ಟೂವರೆ. Eight and a half (B. 4, 100; My.). — ಎಣ್ಟೆಡೆ. -ಎಡೆ. = ಎಣ್ಟು ದೆಸೆ. (J. 27, 55). ಎಣ್ಟೆಣ್ಟು. rep. Eight and eight. ಎಣ್ಟೆಣ್ಟು ದಿವಸ, every eighth day (B. 1, 6). 2, eight times eight (My.).

ಎಣ್ಡೆ ĕṇḍĕ. = ಹೆಣ್ಡೆ. Cow-dung (R.; *cf.* ಎರಣ).

ಎಣ್ಡ್ರಕಾಯಿ ĕṇḍrakâyi. A crab (Tĕ. ಎಣ್ಡ್ರಕಾಯೆ, ಎಣ್ಡ್ರಿ; R.; see ಎಸಡಿ).

ಎಣ್ಣಿಕೆ ĕṇṇikĕ. = ಎಣಿಕೆ 1. (My.; T. ಎಣ್ಣಿಕ್ಕೈ; Tĕ. ಎನ್ನಿಕೆ).

ಎಣ್ಣಿಸು ĕṇṇisu. = ಎಣಿಸು, etc. (My.).

ಎಣ್ಣು ĕṇṇu. To count; to think. (T., Tu. ಎಣ್ಣು; Tĕ. ಎನ್ನು). ಎಣ್ಣಿದದ್ದು ಮಣ್ಣಾಯಿತು, ಹೆತ್ತದ್ದು ಹೆಣ್ಣಾಯಿತು (Prv.).

ಎಣ್ಣೆ ĕṇṇĕ. Oil (C.; Tu., M.; T. ಎಣ್ಣೈ; Tĕ. ನೂನೆ). ಎಣ್ಣೆಯೊಳ್ ಅರೆನೇಟಿಲ ತನಿವಣ್ಣಮುನ್ ಉಣ್ಣಿಸಿದನ್ ಅಬುಜಭವನ್ ಎನಿಸಿದ ಮೆಯ್ (Šmd. 84). ಎಳ್ಳೊಳ್ ಎಣ್ಣೆ (163). ಎಣ್ಣೆಯಲ್ಲಿ ಹಿಟ್ಟನ್ ಅಡುವ ಬಾಳಲಿ (ಋಜೀಷ Nr.). ಎಣ್ಣೆ ಬೆಣ್ಣೆಯ ರಿಣವು, ಹೊನ್ನ ಹಣ್ಣ ರಿಣವು ತೀರಿದ ಆ ಕ್ಷಣದಿ ಮಣ್ಣುಪಾಲು (Sp.). ಬಿಡದೆ ಎಟಿವ ನೀರ್ಗುಡಿವಾಲ್ಗಳ್ ಎಣ್ಣೆ ಬೆಣ್ಣೆಗಳ್ ಇಲ್ಲ (J. 28, 17). ಎಣ್ಣೆಯು ಬತ್ತಿಯುಂ ಸವೆವನ್ತೆ (Bp. 26, 47). ಎಣ್ಣೆ ಅಮ್ಬಿಲವು ಕೂಡಿದನ್ತೆ (40, 74). ನಲ್ಲ ತೈಲದೊಳ್ ಅಲರುವ ಆ ಸೊಡರ್ ಎಳ್ಳಿನಿನ್ದ ಅಲರುವುದೆ? ಹೇಟಿರೆ! ಎಳ್ಳೊಳ್ ಎಣ್ಣೆಯ ಗುಣಮ್ ಅದು ಉಣ್ಟೇ? ಎಳ್ಳಿನೊಳಗೆ ಎಣ್ಣೆ ಇಲ್ಲವೇ? (51, 37). ಎಣ್ಣೆ ತಣ್ಣಗಾದರೆ ಬೆಣ್ಣೆಯ ಹಾಗೆ ಇದ್ದೀತೇ? — ಎಣ್ಣೆ ಮಾಟುವವನಿಗೆ ಸಣ್ಣೆ ಯಾಕೆ? — ಎಣ್ಣೆ ಬರುವಾಗ ಗಾಣ ಮುಟಿೀತು. — ಎಣ್ಣೆ ಸಿಕ್ಕಿದ್ದೇ ಶನಿವಾರ (on which baths are chiefly taken). — ಎಣ್ಣೆ ಸೀಗೆಗೆ ಹ್ಯಾಗೋ, ಹಾಗೇ ಪ್ರೀತಿ. — ಎಣ್ಣೆ ಚೆಲ್ಲಿದವನೂ ಅತ್ತ, ಕಾಯಿ ಚೆಲ್ಲಿದವನೂ ಅತ್ತ. — ಎಣ್ಣೆ ಹಾಕಿದರೆ ಕಣ್ಣಿಗೆ ಗುಣ, ಮಣ್ಣು ಹಾಕಿದರೆ ಬುಡಕೆ ಗುಣ. — ಕಳ್ಳ ಹೊಕ್ಕ ಮನೆಗೆ ಎಣ್ಣೆ ದಣ್ಡ. — ಎಣ್ಣೆ ಬರುವಾಗ ಕಣ್ಣು ಮುಚ್ಚಿ ಕೊಣ್ಡ (Prvs.). ಎಣ್ಣೇ ಕಾಯಿ (B. 4, 161). See ಅಗಸೆಯೆಣ್ಣೆ, ಅವುಡಲೆಣ್ಣೆ, ಎಳ್ಳೆಣ್ಣೆ, ಕುಸಿಬೆ-, ಕೊಬ್ಬರಿ-, ಗನ್ಧದ-, ಹರಳೆಣ್ಣೆ. — ಎಣ್ಣೂರಿಗೆ. -ಊರಿಗೆ. An ûrigĕ fried in oil (My.). — ಎಣ್ಣೆಗಾಯ್. -ಕಾಯ್. Oil to be made hot or boiled (J. 11, sum.). — ಎಣ್ಣೆಗಾಯಿ. -ಕಾಯಿ. A fruit boiled in oil and a little water (My.). — ಎಣ್ಣೆಗಾಸು. -ಕಾಸು. To heat oil (My.). — ಎಣ್ಣೆಗೆಮ್ಪು. -ಕೆಮ್ಪು. Darkish red, as the face of some natives (C.), dark brown, as a horse (B. 3, 55; 5, 12), blackish, as the bar across the shoulders of an ass (5, 16; ಕಪಿಲ, ಕರ್ಗೆಮ್ಪು G.). — ಎಣ್ಣೆಗೊಪ್ಪರಿಗೆ. -ಕೊಪ್ಪರಿಗೆ. An oil kŏpparigĕ (J. 10, 46; 11, 31). — ಎಣ್ಣೆ ತೆಗೆ. To extract oil (C.; B. 2, 11. 42). — ಎಣ್ಣೆಬದನೇಕಾಯಿ. Brinjals filled with condiments and boiled in oil and a little water (C.). — ಎಣ್ಣೆ ಹಾಕು. To pour oil (C.). 2, to spoil another's affairs (as clothes are spoiled by the contact of oil). ನನ್ನ ಕೆಲಸಕ್ಕೆ ಎಣ್ಣೆ ಹಾಕಿದನು, he spoiled my work or affairs (C.).

ಎಣ್ಬರ್ ĕṇbar. Eight persons. ಏೞ್ಬರುಮ್ ಎಣ್ಬರುಂ (Šmd. 180).

ಎತ್ ĕt. = ಎೞ್ 3. See ಎತ್ತರ.

ಎತನ ĕtana. = ಎತ್ತನ, ಎತ್ನ, ಯತ್ನ. Tbh. of ಯತ್ನ. (C.).

ಎತಿ ĕti. Tbh. of ಯತಿ (ಮುನಿ Nn. 8. 9. 18. 25. 44; ಅಚಲ, ಪರಮಯೋಗಿ 41; ಸಂಯಮಿ 80. 94; My.).

ಎತ್ತ ĕtta. 1. Which or what place or direction?—(which or what sort?—how?—);—to, or in, which or what place or direction? where? (C.; Tĕ. ಎನ್ದು; T. ಎಂಗು, ಎಂಗೇ, where). ಅತ್ತ, ಇತ್ತ, ಉತ್ತ, ಎತ್ತ (Šmd. 145). ಎತ್ತಣ, ಎತ್ತಣಿಂ (135). ಎತ್ತಣಿನ್ದೆ (Bp. 46, 24). ಎತ್ತಣದು (Šmd. 180, = ಎತ್ತಣ್ತು). ಎತ್ತ ಪಯಣಂ? (Bp. 23, 31). ಎತ್ತ ನೋೞ್ಪೊಡೆ (23, 6). ನಾವೆತ್ತ? ನೀವೆತ್ತ? (56, 21; see also 60, 21). ಕಿವುಡನ್ ಎನ್ದುಂ ಪೊರೆವ ಶಬ್ದವನ್ ಎತ್ತ ಬಲ್ಲಂ? (60, 42). ಎತ್ತಣ (of what place: where) ಗಗನಮಣಿ ನಕ್ಷತ್ರ ಚನ್ದ್ರಮರ್? (Bh. 1, 20, 56). ಎತ್ತಣ (of what kind) ಅದ್ಭುತಮ್ ಇದು? (J. 8, 40). ಏನ್ ಇದು? ಎತ್ತಣ ಕೌತುಕದ ನುಡಿ (29, 23). ಎತ್ತಣವಂ? (28, 27). ಅದು ಎತ್ತಣದು? (Ršv. 6, after 34). ಸತ್ಯರ ಸಂಗಮ್ ಅದು ತೀರ್ಥ! ಹರಿವ ನೀರ್ ಎತ್ತಣದು ತೀರ್ಥ? (Sp.). ಎತ್ತ ಬಿಜಯಂಗೆಯ್ದು ನೋಡಿದಡೆ ಉತ್ತಮಮ್, ಎಲಾ! (Bh. 2, 13, 23). ಎತ್ತ ಬಲ್ಲರ್ ಸುಜನರ್. . ಕಪಟಿಗಳ ಚಿತ್ತದೊಳ್ ಪುದುಗಿರ್ದ ಪೂಟಮಂ? (J. 29, 36). ಎತ್ತ ಹೋದರೂ ತುತ್ತು ಹುಡುಕುವದೇ.—ಎತ್ತ ಬಿದ್ದರೂ ತಿಮ್ಮಕೆ ಉಣ್ಟು.—ಎತ್ತ ಹೋದರೂ ಮೃತ್ಯು ಬಿಡದು (Prvs.). — ಎತ್ತಂ. -ಅಂ 5. Wheresoever (ಅವ ದೆಸೆಯಲ್ಲಿಯುಂ Šmd. 238 Cm.; ಆವೆಡೆಯಲ್ಲಿಯುಂ 399). ಎತ್ತಿದ ಕೆಯ್ಯೊಳ್ ಮುತ್ತಿದನ್, ಅತ್ತ ಇತ್ತ ಉತ್ತ ಎತ್ತಂ ಸಾರ್ದರ್ ಇನ್ನು ಅಹಿತರ್ಕಳ್ (Šmd. 145; see also 128). ಮೆಯ್ಯೊಳ್ ಬಿಡದೆ ಎತ್ತಂ ತೋೞ್ ರೋಮೋದ್ಗಮಂ (Ršv. 9, 22). — ಎತ್ತ ಕಡೆ. Which side? whither? (C.). — ಎತ್ತಣ್ತು. = ಎತ್ತಣದು (Šmd. 180; Čt. I, 76; Kk. 61). Of what place (it)? where? (of what sort?). ದೆಸೆ ಎತ್ತಣ್ತು? ಅಗಸಮ್ ಎತ್ತಣ್ತು? ಎತ್ತಣ್ತು ಉರ್ವಿ? ಎನಿಸಿ ಪರ್ವಿದುದು ತಮಂ (Šmd. 181). — ಎತ್ತಳದು. = ಎತ್ತಣದು. (J. 12, 3). — ಎತ್ತಾನುಂ. -ಆನುಂ. In whatsoever direction; in some places; occasionally; (whatsoever). (Šmd. 391; ಅರಮೆ, ಅರೆ 395; ಏನಾನುಂ 4 Cm.). ಎತ್ತಾನುಂ ತತ್ಪುರುಷಮ್ ಅಪ್ಪುದು (201). ಬಿರುದಿನೊಳ್ ಎತ್ತಾನುಂ ಷಲ್ವದು (208). See also 211. 340. — ಎತ್ತೆತ್ತಲುಂ. -ಎತ್ತಲುಂ. Everywhere (J. 4, 10).

ಎತ್ತ ĕtta. 2. = ಎತ್ತು 2. Lifting up, raising. **2,** taking up, undertaking, beginning (Tĕ. ಎತ್ತು). **3,** reaching, obtaining (M. ಎತ್ತು). **4,** finding out an item in an account (Tĕ. ಎತ್ತು). **5,** taking in, cheating, deceit, cunning (T. ಎತ್ತು; M. ಎೞ್ಬು, ಏೞ್ಬು, a trap, snare; *cf.* ಎಡ್ಡು 1). — ಎತ್ತಗಡೆ. -ಕಡೆ. = ಎತ್ತುಗಡೆ. A means, an expedient, a device (My.); a trick (My.; Tĕ.). — ಎತ್ತಗೆಯ್. -ಕೆಯ್. = ಎತ್ತುಗೆಯ್. A (man's) elevated arm with the fingers extended (My.). — ಎತ್ತಗೆಯ್ಯುದ್ದ. -ಕೆಯ್ಯುದ್ದ. The height to which a man reaches with an arm elevated and its fingers extended (My.; ಪೌರುಷ G.).

ಎತ್ತನ ĕttana. = ಎತನ, etc. (My.).

ಎತ್ತರ ĕt-tara. = ಎತ್ತರು, ಎೞ್ತರ. Height; tallness (C.; ನಿಲುವು G.). ಎತ್ತರವಾಗಿ ಹಾಕಲ್ ಪಟ್ಟಿರುವ ಮಣ್ಣುದಿಣ್ಣೆ (ಚಯ Ši. 107). ಬೆಟ್ಟದ ಎತ್ತರದಲ್ಲಿ ಮಧ್ಯಭಾಗ (ಕಟಕ, ನಿತಮ್ಬ 115). ಬಹಳ ಎತ್ತರ (ಉಚ್ಛ್ರಾಯ 121). ಅಣ್ಡುಗಳ ಮೇಲೆ ಎತ್ತರವಾಗಿ ಇರುವ ಸ್ಥಲ (ಸ್ಫಿಕ್ಕು 208). ಎತ್ತರವಾಗಿರುವಿಕೆ (ದೈರ್ಘ್ಯ 222). ಎತ್ತರವಾದದು (ಉಚ್ಚ, ಉನ್ನತ 372). ತೆಂಗಿನ ಮರಗಳು ಅಯ್ವತ್ತು ಅಱುವತ್ತು ಮೊೞ ಎತ್ತರ ಇರುತ್ತವೆ (B. 2, 41). — ಎತ್ತರಗದ್ದೆ. A rice field on an elevation. ತಗ್ಗುಗದ್ದೆಗೆ ಮೂಱು ಬೆಳೆ, ಎತ್ತರಗದ್ದೆಗೆ ಒನ್ದೇ ಬೆಳೆ (Prv.).

ಎತ್ತರು ĕttaru. = ಎತ್ತರ. (G.).

ಎತ್ತಱ ĕttaṟa. — ಎತ್ತಱ ತತ್ತಱ. dupl. Confusion (? Čh. v. 19).

ಎತ್ತಲ್ ĕtta-al. (Šmd. 145). = ಎತ್ತ 1, q. v., ಎತ್ಲು. ಅತ್ತಲ್ ದೇವೇನ್ದ್ರಂ, ಮತ್ತೆ ಇತ್ತಲ್ ಭುಜಗೇನ್ದ್ರನ್, ಉತ್ತಲ್ ಆಶಾಧಿಪರೊಳ್ಮುತ್ತಿರೆ ಭೇರಿಧ್ವನಿ ಪರ್ವಿತ್ತು, ಎತ್ತಲ್ ಮಸಗಿ ಘೋಷತಿಕ್ಷ್ಣದಕ್ಷಂ (145). ಬೀಡುಗೊಣ್ಡಿರ್ದ ಕತ್ತಲೆಯ ಪಾಳೆಯಮ್ ಎತ್ತಲ್ ಓಡಿದುದೊ? ನೋಡಿದಪೆಂ (J. 2, 65). ಎತ್ತಲ್ ಅಯ್ದಿದೆ? (Bp. 14, 24). ಆನ್ ಎತ್ತಲ್, ಅಯ್? ನೀನ್ ಎತ್ತಲ್? (40, 46). ಎತ್ತಲ್ ಓಡುವೆವು? (52, 12; see also 53, 69). ಎತ್ತಲಿನ್ದ (My.). ಎತ್ತಲಾಗಿ (= ಎತ್ತಲ್, My.). — ಎತ್ತಲು. -ಉ 9. = ಎತ್ತಲುಂ. ಎತ್ತಲಾದರೆ ಹೋಗಿ ಅಡಗಿರು! (Bp. 24, 12). — ಎತ್ತಲುಂ. -ಉಂ 1. On all sides, everywhere; occasionally (ಎಲ್ಲಿಯುಂ Šmd. 156 Cm.). ಅದಿರ್ಮುತ್ತೆ ಮುಗುಳ್ದುದು ಎತ್ತಲುಂ (Čpr. 7, 41). See J. 4, 10. 19; 8, 3. 6.

ಎತ್ತಿಕೆ ĕttikĕ. Lifting, etc. (My.).

ಎತ್ತಿಸು ĕttisu. To cause to raise, take up, lift up or erect, etc. (ಉದ್ಧರಣ Šmd. Dh.; J. 7, 3). ಹೊಸ ದೀಪಕಮ್ಬಂಗಳನುಮ್ ಆ ರಮಣಂಗೆ ಮಾಡಿಸಿ ಎತ್ತಿಸಿದಳ್ (Bp. 42, 12). ಗೋಪುರವನ್ ಎತ್ತಿಸಿ (53, 30). ಠಕ್ಕೆಯ (= -ಯನ್) ಆವನ್ ಆ ಪುರದೊಳ್ ಎತ್ತಿಸಿದ (53, 57). ಎತ್ತಿಸಿದ ನನ್ದಿಧ್ವಜಂಗಳ ಮೊತ್ತಂ (58, 53).

ಎತ್ತು ĕttu. 1. To lift, to raise, to take up; to hold up; to lift, to remove by stealing; to raise or levy, as an army; to raise or collect, to take, as money, alms, etc.; to assume, as a form, a mortal body (avatâra); to exhibit, to introduce, to mention, as the name of *another;* to raise up, to cause to become great, as *one's own* name (C.; Tĕ., Tu.; T., M. ಏೞ್ಬು; T. also ಏನ್ದು; *cf.* ಏಱು 1). ಎತ್ತಿ ಕಳೆದಂ (ಎೞ್ಬಿಸಿದಂ Šmd. I). ಮದಗಜವೆರಡಱ ಬಾಲದ ಮೊದಲಂ ಪಿಡಿದು, ಎತ್ತಿ (91). ಶೀಘ್ರಂ ಚಕ್ರಾಯುಧಮ್ ಎತ್ತಿ ನಡೆದಂ ವೈರೀಭಕಣ್ಠೀರವಂ (255. 280). ಎತ್ತಿದಪಂ (260). ಎತ್ತಲ್ ಪಟ್ಟುದು (ಸಮುದಕ್ತ, ಉದ್ಧೃತ); ಧಾನ್ಯಂಗಳನ್ ಎತ್ತಿ ತೂಱುವುದು (ಉತ್ಕಾರ Nr.). ಮುಸುಡನ್ ಉದ್ದವೆತ್ತಿ ಕೊಣ್ಡು ಇರ್ಪವನು (ಉತ್ಪಶ್ಯ Hlâ.). ಮುಖವೆತ್ತಿ ನಡೆವವಂ (ಉರುವಕ್ರ Mr. 243). ಬಾವಿಯ ನೀರನ್ ಎತ್ತುವ ಜನ್ತ್ರವಿಶೇಷವು (ಘಟಿಯನ್ತ್ರ Nr.). ಎತ್ತಿದ ಕೆಯ್ಯೊಳ್ ಮುತ್ತಿದಂ (Šmd. 145). ಬೆಳಗೆಯ್ಗಳೊಳ್ ಇರ್ದು, ಎತ್ತಂ ಕಳರವದಿಂ ಕೆಯ್ಯನೆತ್ತಿ ಚಲಲಲೆ ಎನುತುಂ (231). ತಿಲೆಯುಂ ಎತ್ತುವ ಮರಂ (Šm. 101). ಕೆಯ್ಯೆತ್ತುವದು is used also in the sense of ಕೆಯ್ಮುಗಿ, *e. g.* Bp. 3, 47. ನನ್ನ ಮೇಲೆ ಕೆಯ್ಯೆತ್ತಿದನು, he raised his hand against me, wanted to beat me (S. Mhr.). ಪರರ ಮರ್ಮವನ್ ಎತ್ತಿ ನುಡಿಯದಿರು! (Bp. 4, 65). ಮತ್ತಗಜವಂ ಕೊನ್ದು, ಅದಱ ಅಸುವನ್ ಎತ್ತಿ (*i. e.* having recalled it from death, 21 sum.; see 22, 20; 48, 16). ಅವರ ಮೇಲಿಂಗೆ ಎತ್ತಿ ಹೋದಡೆ (if you attack him, 21, 36). ಕುಲವತ್ತಿ ಪೂರ್ವವನ್ ಅಡಿ (27, 40). ತನ್ನ ಅಡಿಗಳಿಗೆ ಕೆಡದು ಇರ್ದವನನ್ ಎತ್ತಿ (30, 30). ದೀಪಾರತಿಯನ್ ಎತ್ತುವನು (41, 22; see also 48, 17; 50, 54). ತಮ್ಮ ಶಾಸ್ತ್ರಮತಂಗಳಿಂ ಪ್ರಶ್ನೆಗಳನ್ ಎತ್ತಿ (53, 59). ಆವ ವೇದದೊಳು ಆದೊಡೆ ಒನ್ದಱ ಠಾವನ್ ಅನುಷಿ

ಸು! (55, 48. 51). ಕರಾಲಪರಶುವನ್ ಎತ್ತಿ (58, 25). ನಾವಿಬ್ಬರೇ ಆ ಬದುಕು ಎತ್ತಿ ಬಡಿಯ ಬೇಕು (B. 3, 101). ಶತ್ರುಗಳೆದುರಾಗಿ ದಣ್ಡೆತ್ತಿ ಕಾಳಗಕ್ಕೆ ಹೊಱಡುವಿಕೆ (ಅಭಿಷೇಣನ Si. 291). ಎತ್ತಿ ಕೊಣ್ಡು ಹೋಗೋರು ಇದ್ದರೆ ಸತ್ತ ಹಾಗೆ ಬಿದ್ದೇನು.—ಎತ್ತೊದಕ್ಕೆ ಹೊತ್ತು ಕಳ ದರೆ ತುತ್ತುಗೊಳ್ಳ ಬೇಡವೇ? (Prvs.). See also Bp. 10, 3; 23, 41; 27, 57; 29, 33; 32, 6. 25. 27; 38, 17; 39, 63; 44, 61; 45, 30. 53; 46, 8. 55; 47, 11. 58; 48, 30; 52, 5; 56, 31; 57, 23; 60, 9; Ršv. 5, 123; 6, after 11; J. 3, 9; 4, 19; 10, 30; 13, 53; 28, 20. 57. 59; 31, 31; B. 3, 62; 4, 10. 134. 142. — ಎತ್ತಿ ಬರ್. To bring. ಬಱಿಯ ಬಟ್ಟಲನ್ ಎತ್ತಿ ಕೊಣ್ಡು ಎಲ್ಲಿ ದುರ್ಗ ಬನ್ದಪೆ? (Bp. 14, 24). 2, to come to attack, to fall upon (Abh. P. 11, after 100). ಇಭಾಸುರನ್ ಈಶ್ವರನ ಮೇಲೆ ಎತ್ತಿ ಬಪ್ಪನ್ತೆ (Bp. 22, 13). — ಎತ್ತಿ ಬರೆ. To copy in writing, as a manuscript, etc. (C.). — ಎತ್ತಿ ಹಾಯ್ಕು. To cast, as a net (Bp. 27, 22). 2, to remove by stealing (C.). — ಎತ್ತಿ ಹೋಗು. To go to attack, to invade. ತಾನು ಹಗೆಯ ಮೇಲೆ ಎತ್ತಿ ಹೋಹಲ್ಲಿ ಹಿನ್ದೆ ರಾಜ್ಯವನ್ ಉಪದ್ರವ ಮಾಡುವವನು (ಪಾರ್ಷ್ಣಿಗ್ರಾಹ Nr.). ಪರಮಣ್ಡಲಪತಿಯ ಮೇಲೆ ಎತ್ತಿ ಹೋಗುತ್ತ (Bp. 22, 28). — ಎತ್ತೆತ್ತು. rep. (B. 3, 10).

ಎತ್ತು ĕttu. 2. = ಎತ್ತ 2, q. v. — ಎತ್ತುಗಡೆ. = ಎತ್ತಗಡೆ. (My.). — ಎತ್ತುಗಲ್ಲು. -ಕಲ್ಲು. Lift-stone: a stone that is liftable with common strength (My.);—a stone that one can scarcely lift, a rather big stone (My.). ನನ್ನ ಮೇಲೆ ಎತ್ತುಗಲ್ಲು ಹಾಕಿದನು, he ruined me (My.). — ಎತ್ತುಗೆಯ್. -ಕೆಯ್. = ಎತ್ತಗೆಯ್. (My.). — ಎತ್ತುತಗೆ. Dividing, division (ಭಾಗಿಸುಹಂ Mr. 349). — ಎತ್ತುವಾಡಿಗೆ. -ಬಾಡಿಗೆ. Rent, etc., that is raised or collected (ಭಾಟಕ Mr. 346). — ಎತ್ತೊಲೆ. -ಒಲೆ. A moveable earthen ŏlĕ consisting of two halves (My.).

ಎತ್ತು ĕttu. 3. Cutting, stabbing (see T. ಎಟ್ಟು s. ಎಟ್ಟು 2). — ಎತ್ತುಂಗೋಲ್. -ಂ-ಕೋಲ್. (Šmd. 203). A sharp arrow (ಕೂರಮ್ಬು Kk. 52; Šs.). ಎತ್ತುಂಗೋಲುಂ ಬಿರಯಿಗೆ ಚಿತ್ತಭವಂ (Šmd. 16).

ಎತ್ತು ĕttu. 4. = ಎಱ್ತು 1, ಎದ್ದು 1. An ox, a bullock (ಉಕ್ಷ, ಅನಡುಹ, ವೃಷಭ, etc. (Nr., Hlâ., Mr. 178, Si. 318; C.; J. 7, 59; T., M. ಎರುದು, ಎಱು; Tĕ. ಎದ್ದು; Tu. ಎರು, an ox; a male buffalo). ಬಲ್ಲೆತ್ತು (ಮಹೋಕ್ಷ); ಮುತ್ತೆತ್ತು (ವೃದ್ಧೋಕ್ಷ); ಹೂಟದ ಎತ್ತು (ಧುರ್ಯ); ಹೇಱುವ ಎತ್ತು (ಸ್ಥೌರಿ); ಹೂಡುವ ಎತ್ತು (ಸ್ಕನ್ಧಿಕ); ಮುಱಿದ ಕೊಮ್ಬಿನ ಎತ್ತು (ಕೂಟ Hlâ.). ನೊಗನು ತಲೆಯಾರು ಭಣ್ಡಿ ಎಮ್ಬು ಇವೆಲ್ಲಂ ಹೂಡುವ ಎತ್ತುಗಳು ಕ್ರಮದಿನ್ದ ಯುಗ್ಯ ಪ್ರಾಸಂಗ್ಯ ಶಾಕಟ ಎನಿಸುಗು; ಕೊಮ್ಬಿಲ್ಲದ ಎತ್ತು (ತೂಬರ); ಎತ್ತುಗಳ ಮೂಗುನೇಣು (ನಾಸ್ಯ); ಎತ್ತಿನಲ್ಲಿ ಹೂಡುವ ಭಣ್ಡಿ (ಗನ್ತ್ರಿ); ಮುದುಎತ್ತು (ವೃದ್ಧೋಕ್ಷ); ಬಾಲ ಮೋಟಾದ ಎತ್ತು (ವಣ್ಡ); ಕೊಮ್ಬು ಮುಱಿದ ಎತ್ತು (ಕೂಟ); ಹಿಡಿಗು ಬಡಿದ ಎತ್ತು (ಜಾತೋಕ್ಷ Nr.). ಹೇಱಿದೆತ್ತು (ಸ್ಥೌರೀಯ Mr. 179). See Si. 275. 303. 318. 319. 320. 430.—ಎತ್ತು ಈಯಿತು ಎನ್ದಡೆ ಮೂಲೆಯಲಿ ಕಟ್ಟಿಸುವುದು ಎಮ್ಬನ ಚಾಳಿ ಏತಕೆ? (Bp. 28, 34). ಬಣ್ಡಿಯೆತ್ತುಗಳ (56, 28). ಎಳೆಗಱುಂ ತಾಂ ದೊಡ್ಡಿತು ಎತ್ತು ಆಗದೇ? (Šš.). ಗೋಣಿ ಬಲ್ಲುದೆ ಎತ್ತಿನ ಆ ದುಃಖವ? (Dp. 87). ಎತ್ತಿನ ಮುನ್ದೆ ತೆಂಗಿನ ಕಾಯಿ ಒಡೆದ ಹಾಗೆ.—ಎತ್ತನ್ನು ಹುಲಿ ತಿನ್ನು, ಸಬರ ಮುರಿಯನ್ನು ಗೆದ್ದಲು ತಿನ್ನು.—ಎತ್ತು ಈಯಿತು ಅನ್ದರೆ ಕೊಟ್ಟಿಗೇಲಿ ತನ್ದು ಕಟ್ಟು! ಅನ್ದ.—ಎತ್ತು ಹಾಱುವದಕ್ಕಿನ್ತ ಮುಂಚೆ ಕವುದಿ (or ಗೋಣಿ) ಹಾಱಿತು.—ಎತ್ತೂ ಮಾಱಿ, ಮತ್ತೂ ಗಂಜಿ.—ಹಾರುವವನಿಗೆ ಆಳಾಗ ಬೇಡ, ಗಾಣಿಗನಿಗೆ ಎತ್ತಾಗ ಬೇಡ.—ಎತ್ತಿಗೆ ರೋಗ ಬನ್ದರೆ ಎಮ್ಮೆಗೆ ಬರೆ ಹಾಕಿದರು (Prvs.). — ಎತ್ತಿನ ನಾಲಿಗೆ. Bullock's tongue: an herb, Trichodesma indicum Br. (Z.). — ಎತ್ತಿನವ. -ಅವ. A bullock-man (C.). — ಎತ್ತುನಾಲಗೆ. = ಎತ್ತುನಾಲಿಗೆ. Bullock's tongue: a potherb wild in corn-fields, perhaps Phlomis esculenta (ಗೋಜಿಹ್ವಿಕೆ, ದಾರ್ವಿಕೆ Nr.). — ಎತ್ತುನಾಲಿಗೆ. (ಗೋಜಿಹ್ವೆ, ದಾರ್ವಿಕೆ Si. 151; ಅನಡ್ವಜಿಹ್ವೆ Mr. 148; ಬೆಣ್ಡೇ ಕಾಯಿಗಿಡವು Si. 151). — ಎತ್ತೋದು. -ಓದು. A reading with the capacity of a bullock, *i. e.* reading, remembering and digesting (as the bullock chews the cud, R.).

ಎತ್ತುವಳಿ ĕttuvaḷi. Collecting or gathering money (My.).

ಎತ್ತುವಿಕೆ ĕttuvikĕ. Raising, etc. (ಸಮುದ್ಧರಣ Si. 420).

ಎತ್ತೆಗುವಿ (ĕttu-ĕguvi? ĕttĕ-kuvi?). A kind of tree (ಪ್ಲಕ್ಷ Mr. 121).

ಎತ್ನ ĕtna. = ಎತನ, etc. Tbh. of ಯತ್ನ (C.; B. 5, 59).

ಎತ್ನಯಿಸು ĕtnayisu. Tbh. of ಯತ್ನಯಿಸು. (My.).

ಎತ್ಲು ĕtlu. = ಎತ್ತಲ್. — ಎತ್ಲಾಗೆ. -ಆಗೆ. To which direction? where? (C.).

ಎತ್ವ ĕtva. The letter ಎ (Šmd. 102. 132. 144. 145. 176. 215. 246. 281. 352; Kâvy. I, 3, 35-40).

ಎಥೇಚ್ಛ ĕthêċċha. Tbh. of ಯಥೇಚ್ಛ. (My.).

ಎಥೇಷ್ಟ ĕthêshṭa. Tbh. of ಯಥೇಷ್ಟ. (My.; Jns. 22, 30).

ಎದ್ ĕd. = ಎರ್, ಎಱ್ 1, etc. See ಎದ್ದು 4.

ಎದರಾಯಿಸು ĕdarâyisu. = ಎದಿರಾಯಿಸು, ಎದುರಾಯಿಸು, q. v. (My.).

ಎದರಿಸು ĕdarisu. = ಇದಿರಿಸು, etc. (My.).

ಎದರು ĕdaru. ಎದರ್. = ಇದಿರ್, etc. — ಎದರಾಳಿ. -ಆಳಿ. = ಎದುರಾಳಿ. (My.). — ಎದರುಗೊಳ್ಳು. -ಕೊಳ್ಳು. = ಎದರ್ಗೊಳ್ಳು. (My.). — ಎದರ್ಗೊಳ್ಳು. -ಕೊಳ್ಳು. = ಎದುರ್ಗೊಳ್ಳು. (My.).

ಎದಿರ್ ĕdir. ಎದಿರು. = ಎದರು, etc. (My.). — ಎದಿರುಗೊಳ್ಳು. -ಕೊಳ್ಳು. = ಎದಿರ್ಗೊಳ್ಳು. (My.). — ಎದಿರ್ಗೊಳ್ಳು. -ಕೊಳ್ಳು. = ಎದುರ್ಗೊಳ್ಳು. (My.).

ಎದಿರಾಯಿಸು ĕdirâyisu. = ಎದರಾಯಿಸು, etc. (My.).

ಎದಿರಿಸು ĕdirisu. = ಎದರಿಸು, etc. (My.).

ಎದು ĕdu. Tbh. of ಯದು (S. Mhr.).

ಎದುರ್ ĕdur. = ಇದಿರ್, etc. (My.; Tĕ. ಎದುಱು). — ಎದುರಾಡು. -ಆಡು. To outbid (My.); to contradict (Mg.). — ಎದುರಾಳಿ. -ಆಳಿ 1. An antagonist (My.). — ಎದುರ್ಗೊಳ್ಳು. -ಕೊಳ್ಳು. = ಇದಿರ್ಗೊಳ್. (My.). — ಎದುರ್ಚಣ್ಡಿಸು. To contradict (My.). — ಎದುರ್ಚೀಟು. A document given by the purchaser of land engaging to give it back to the seller on repayment of the purchase-money within a definite term (My.). 2, a note of hand given for another that is lost (My.). — ಎದುರ್ದನಿ. An echo (My.). — ಎದುರ್ನುಡಿ. = ಎದುರ್ಚೀಟು No. 1. (My.); 2, counter part of a deed or lease (Mg.). — ಎದುರ್ನೋಡು. = ಇದರು ನೋಡು. (My.). — ಎದುರ್ಬೀಟು. = ಎದುರು ಬೀಟು. (My.). — ಎದುರ್ವಳ್ಳಿ. -ವಳ್ಳಿ. = ಎದುರ್ನುಡಿ No. 2. (Mg.).

ಎದುರಾಯಿಸು ĕdurâyisu. = ಎದರಾಯಿಸು, etc. To oppose; to contradict (My.).

ಎದುರಿಸು ĕdurisu. = ಎದರಿಸು, etc. (My.).

ಎದುರು ĕduru. = ಎದುರ್, etc. ತನ್ದೆಯು ಇಬ್ಬರನ್ನು ಕರೆದು, ತನ್ನ ಎದುರಿಗೆ ನಿಲ್ಲ ಹೇಱಿ (B. 2, 14). ಅಲ್ಲೇ ಅವನೆದುರಿಗೆ ತೂ... ಮಾಡಿಸಿ (4, 31). ಎದುರಾಗಿ (ಅಭಿತ Si. 470). ಗಾಳಿಗೆ ಎದುರಾಗಿ ನಡಿಯುವ ಸ್ವಭಾವವುಳ್ಳ ಹುಲ್ಲೆ (ವಾತಮೃಗ 168). ಶತ್ರುಗಳಿಗೆ ಎದುರಾಗಿ ದಣ್ಡೆತ್ತಿ ಕಾಳಗಕ್ಕೆ ಹೊಱಡುವಿಕ (ಅಭಿಷೇಣನ 291). ಯ...

ದ್ಧಾವಿಗಳಲ್ಲಿ ಹಗೆಯವರಿಗೆ ಎದುರಾಗಿ ಕಲಹಕ್ಕೆ ಅಣಿ ಮಾಡಿ ಕೊಂಡು ಧೈರ್ಯದಿನ್ದ ಉಪಾಯಪ್ರಯತ್ನಗಳನ್ನು ಮಾಡುವಿಕೆ (ಅಭಿಯೋಗ, etc. 391). ಎದುರಾಗಿಯೇ ಕದ್ದು ಕೊಳ್ಳುವಿಕೆ (ಅಭಿಹಾರ, etc. 393). — ಎದುರಡೆ. -ಅಡೆ 6. Counter-trust: a security for a debt (My.). 2, = ಎದುರ್ಚೀಟು No. 2. (My.). — ಎದುರಿಕ್ಕು. -ಇಕ್ಕು. = ಇದಿರಿಕ್ಕು, ಎದುರಿಡು. (My.). — ಎದುರಿಗೆ ಆಡು. To speak before a person (My.). ದೂಟಿನ್ನು ಎದುರಿಗಾಡು, ಹೊಗಟಿನ್ನು ಹಿನ್ದಾಡು (Prv.). — ಎದುರಿಡು. -ಇಡು. = ಇದಿರಿಡು. To place before, in the presence of, opposite, or in opposition to. ಎದುರಿಡಲ್ ಪಡುವ (ಪ್ರತಿ Si. 468). — ಎದುರುಗೊಳಿಸು. -ಕೊಳಿಸು. = ಇದಿರ್ಗೊಳಿಸು. (My.). — ಎದುರುಗೊಳ್ಳು. -ಕೊಳ್ಳು. = ಎದುರ್ಗೊಳ್ಳು. (My.). — ಎದುರುತ್ತರ. -ಉತ್ತರ. = ಇದಿರುತ್ತರ q. v. An opposite or oppugnant answer or speech, a contradiction (My.; ಮಾಱುತ್ತರ G.). ಅವನು ಅಷ್ಟಕ್ಕೆ ಇಷ್ಟಕ್ಕೆ ಸಿಟ್ಟಗೆದ್ದ ಕೂಡಲೆ ಅವನ ಹೆಣ್ಡತಿ ಎದುರುತ್ತರ ಕೊಡುವಳು (B. 3, 59). — ಎದುರುದಾವೆ. = ಎದುರುವ್ಯಾಜ್ಯ. (My.). — ಎದುರು ಬದುರು. dupl. Front to front (My.). — ಎದುರು ಬೀಟು. To fall athwart: to act adversely, to oppugn; (to revolt); to contradict (which is the chief meaning in My.). ಅರಸುಗಳಿಗೆ ತಮ್ಮ ಮೂಲ ಬಲ ಮುನ್ತಾದ ೭ ಬಗೆಯ ದಟಿಗಳ ದೆಸೆಯಿನ್ದಲೂ ಅನ್ತಃಕಲಹಕ್ಕೆ ಎದುರು ಬೀಟುವದು ಮೊದಲಾದ ಒಳಗಿನ ಭಯವು (ಅಹಿಭಯ Si. 267). — ಎದುರು ಬೀಟುವಿಕೆ. Acting adversely. ಅಪಕಾರಾರ್ಥವಾಗಿ ಎದುರು ಬೀಟುವಿಕೆ (ಅಭಿಹಾರ Si. 449). — ಎದುರುಮಾತು. = ಎದುರುತ್ತರ. (My.). — ಎದುರುವಾದಿ. = ಇದುರುವಾದಿ. (My.). — ಎದುರು ವ್ಯಾಜ್ಯ. A counter-claim, a set-off (My.).

ಎದೆ ĕdĕ. 1. = ಎದ್ದೆ, ಎರ್ದೆ. The chest, the breast; (the heart); courage (ಹೃದಯ, ಉರ, ವಕ್ಷ, etc. Mr. 327; ಉರಸ್, ವತ್ಸ, ವಕ್ಷ Si. 209; J. 12, 39; 20, 18; 34, 2; C.; Tu., Tĕ.; Tĕ. also ಎದದೆ, ಯಾದೆ, ಅಕ್ಕು; M., T. ನೆಂಜು, ನೆಞ್ಞು). ಎದೆಯೊಳಗಡೆ ಇರುವ ಕಪ್ಪಾದ ಮಾಂಸವಿಶೇಷ (ಗುಲ್ಮ, etc. Si. 205). ಎದೆಗೆ ರಕ್ಷಕವಾದ ತೊಗಲ ದಿಮ್ಮಿ (ತನುತ್ರ, etc. 279). ಎದೆಯೊಳ್ ಆವಂ ನೆನವನ್ ಎಮ್ಮುಮಂ (Bp. 10, 45). ಎದೆ ಝಲ್ಲೆನುತ್ತಂ (26, 27). ಎದೆಗಳೊಳು ಕಳವಳಿಸಿ (54, 81). ಎದೆಗಳು ಧಿಗಿಲುಧಿಗಿಲೆನೆ (58, 61). — ಎದೆ ಅದಿರ್. -ರು. The heart to tremble. ಪರವಾದಿಗಳ ಎದೆಗಳ್ ಅದಿರೆ (Bp. 53, 70). — ಎದೆ ಆಱು. The breast to become dry or to wither, as from sickness (C.); courage to be quenched (J. 15, 26; C.); the heart to lose its feelings. ವಿಲಾಸಿನಿಗೆ ಮಿಗೆ ಕೊಟ್ಟು ಕೊಟ್ಟು ಎದೆಯಾಱಿತೇ ನಿನಗೆ? (Bp. 42, 9). — ಎದೆ ಈ. To become courageous (Bp. 26, 42). — ಎದೆ ಒಡೆ. The heart to break: courage entirely to fail (C.). ಒಡೆವುದು ಎದೆ ತದ್ಭಾಷೆಯಂ ನೆನೆದೊಡೆ (Bp. 35, 49). ಅವನ ಎದೆ ಒಡೆಯಿತು (B. 5, 64). ಭಗವನ್ತ, ಎದೆ ಒಡೆದು, ನೆಲಕ್ಕೆ ಬಿದ್ದ (5, 130). ಸಾರಂಗವು ಅಂಜಿ, ಎದೆ ಒಡ ಕೊಂಡು, ಗಿಡದ ಗುಪ್ಪಿನೊಳಗೆ ಹೊಕ್ಕು (B. 3, 19). 2, the chest to break: all strength to be lost (from over-exertion, My.). — ಎದೆ ಕದಡು. The heart to be troubled or agitated. ಕದಡುವ ಎದೆಗಳೊಳ್ ಒಬ್ಬರೊಬ್ಬರ ವದನವಂ ನೋಟುತ್ತ (Bp. 25, 33). — ಎದೆ ಕನ್ದು. Courage to fade or fail. ಎದೆ ಕನ್ದದೆ (Bp. 39, 64). — ಎದೆ ಕರಗು. The heart to melt (from compassion, J. 28, 32; My.). — ಎದೆಕೆಚ್ಚು. = ಎದೆಕೊಬ್ಬು. (My.). — ಎದೆ ಕೊಡು. = ಎದೆ ಈ. (My.). — ಎದೆಕೊಬ್ಬು. Audacity, impudence (My.). — ಎದೆಗತ್ತರಿ. -ಕತ್ತರಿ. Heart-scissors. ಎದೆಗತ್ತರಿಯ. -ಅ 3. A heart-cutter, a person who wounds or hurts deeply the sensibilities of. ಎದೆಗತ್ತರಿಯರ್ (Bp. 40, 55). — ಎದೆಗಳೆ. -ಕಳೆ. To deprive of courage. ಎದೆಗಳೆದ ವಿವರದೊಳು ವಿಷವಹ್ನಿ ತೀವಿರ್ದ ಅವಗಡದ ಫಣಿವರಕಟಕ! (Bp. 48, 15). — ಎದೆಗಿಚ್ಚು. -ಕಿಚ್ಚು. = ಎದೆಯ ಕಿಚ್ಚು. Heart-fire: heart-ache, mental anguish or pang, *e. g.* on account of sick children (C.). See Bp. 40, 61. — ಎದೆ ಗಿಡೆ. reit. (My.). — ಎದೆಗುಣ್ಡಿಗೆ. The pit of the stomach (C.). ತನ್ನ ಎದೆಗುಣ್ಡಿಗೆ ಧಿಗಿಲುಧಿಗಿಲೆನ್ನದೆ (Bp. 48, 10). — ಎದೆಗುಣ್ಡಿಗೆಸನ್ಧಿ. The clavicle (ಜತ್ರು Si. 209). — ಎದೆಗುದಿ. 1. -ಕುದಿ. The heart to bubble up, shudder, or be agitated. ತಾ ನೆನೆದೊಡೆ ಎದೆಗುದಿಯೆ (Bp. 2, 13). ಪರವಾದಿಯ ಎದೆಗುದಿಯೆ (53, 62). — ಎದೆಗುದಿ. 2. -ಕುದಿ. Heart-boiling: violent mental agitation, fear. ಎದೆಗುದಿ ಮಾಡಬೇಡ, do not fear! (C.). 2, great hurry (My.). ಎದೆಗುದಿ ಪಟ್ಟು, ಕುದಿಯುವ ಅವರೇ ಬಾಯೊಳಗೆ ಹಾಕಿ ಕೊಣ್ಡ (Prv.). — ಎದೆಗುನ್ದು. -ಕುನ್ದು. Courage to decrease or fail (C.). ಮೋದಮ್ ಅಱಿತು, ಎದೆಗುನ್ದಿ, ಕನ್ದಿ (Bp. 23, 28; see 36, 17). ದಣ್ಡಿನವರು ಎದೆಗುನ್ದಿ ಓಡಿ ಹೋದರು (B. 4, 10). ಬೇಕಾದಷ್ಟು ಎಡರುಗಳು ಬನ್ದಾಗ್ಯೂ ಎದೆಗುನ್ದ ಬೇಡಿರಿ! (4, 16). — ಎದೆಗುಮ್ಮು. -ಕುಮ್ಮು. To strike the chest or breast (of another, S. Mhr.). — ಎದೆಗೂಡು. -ಕೂಡು. 1. The chest to become fleshy (My.). — ಎದೆಗೂಡು. 2. The thorax (My.). ಎದೆಗೂಡು ಎದ್ದಿತು, the ribs of the thorax have become visible from disease, and protrude (My.). 2, the hollow of the breast sunk from fasting or disease. ಎದೆಗೂಡು ಹಾಯಿತು, the hollow of the chest has sunk in (S. Mhr.). — ಎದೆಗೆಡಿಸು. -ಕೆಡಿಸು. To dishearten (C. Bp. 47, 22). — ಎದೆಗೆಡು. -ಕೆಡು. Courage to fail (J. 18, 53; 25, 25; My.). — ಎದೆಗೊಡು. -ಕೊಡು. = ಎದೆ ಈ. (C.). — ಎದೆಗೊಯಿಕ. -ಕೊಯಿಕ. A man who destroys another's courage or disheartens him (C.). — ಎದೆಗೊಯಿಕತನ. -ಕೊಯಿಕತನ. Intimidation (C.). — ಎದೆದಲ್ಲಣ. -ತಲ್ಲಣ. Fear, awe. ಪರವಾದಿಗಳಿಗೆ ಎದೆದಲ್ಲಣಂ (Bp. 49, 18). 2, a man who frightens. ಜವಂಗೆ ಎದೆದಲ್ಲಣನು (8, 1). — ಎದೆಪದಕ. A padaka hanging over the breast (C.). — ಎದೆಬಡಕ. A man who beats another's breast: one who disheartens another (C.). — ಎದೆ ಬಱು. The chest to become dry or to sink. ಬಱಿತೆದೆಗಳ. . ಕಿಱುಕುಲರು (Bp. 58, 49). — ಎದೆ ಬಿರಿ. The heart to burst: courage to fail (My.). ಅಹಿತರ ಎದೆಗಳು ಬಿರಿಯೆ (Bp. 50, 17). — ಎದೆಭಾವ. Courage, energy. ಎನ್ದಿಗೂ ಮೆಯ್ ನೆಱೆಯದೇ ಎದೆಭಾವವಿಲ್ಲದ ಹೆಂಗಸು (ನಪುಂಸಕ Si. 195). — ಎದೆ ಭಿನ್ನವಾಗು. The heart to be pierced through, courage to be broken (Bp. 45, 6). — ಎದೆಮುಗುಳು. The chest-bud: an indefinable organ inside the chest. ಎದೆಮುಗುಳು ಕಡಿಯುತ್ತದೆ (S. Mhr.). — ಎದೆ ಮುಱಿ. To break the breast: to labor to weariness, to fag hard (My.). — ಎದೆಯ ಕಿಚ್ಚು. = ಎದೆಗಿಚ್ಚು. ಪರವಾದಿಗಳ ಎದೆಯ ಕಿಚ್ಚು (Bp. 28, 47). — ಎದೆಯ ಗುಣ್ಡಿಗೆ. = ಎದೆಗುಣ್ಡಿಗೆ. (ಸ್ವದಯ, ಹೃದ್, ಹೃದಯ ಕಮಲ Si. 204, sic!). — ಎದೆಯುದ್ದ. -ಉದ್ದ. Breast-high, breast-deep (C.). ಎದೆಯುದ್ದಗೋಡೆ (ಅಟ್ಟಾಲ, etc. G.). — ಎದೆಯುರಿ. -ಉರಿ. The heart-burn (My.). — ಎದೆಯೆದೆ. rep. ಎಮ್ಮ ಸತ್ತದಱಿನ್ದ ಆ ಗವಳಿಗನು ಎದೆಯೆದೆ ಬಡ ಕೊಣ್ಡು (B. 1, 10). ತಾಯಿ, ಮಗನು ಸಾಯುತ್ತಾನೆನ್ದು, ಎದೆಯೆದೆ ಬಡ ಕೊಳ್ಳ ಹತ್ತಿದಳು (3, 28). See also 3, 41; 5, 164. — ಎದೆರವ. Chest-sound (ತಾಡ Mr. 330). — ಎದೆವಣಿ. -ಮಣಿ. A breast-jewel (J. 21, 18). — ಎದೆವೊಡಕ. -ಒಡಕ. A coward (My.). — ಎದೆಶೂಲೆ. Pain in the chest (My.). — ಎದೆ ಹಣ್ಣಾಗು. The heart to lose its feelings. ಕೊಟ್ಟು ಕೊಟ್ಟು, ನಿನ್ನ ಎದೆ ಹಣಾಯಿತೇ? (S. Mhr.). — ಎದೆ ಹಾಯಿಸು. To put the breast forward; — to assume a lofty air (S. Mhr.). ಲಕ್ಷ್ಮಾ ಎಮ್ಬ ಪಾರಿವಾಳಗಳು ಎದೆ ಹಾಯಿಸಿ ಕೊಣ್ಡು (B. 3, 115). — ಎದೆ ಹಾಱು. The heart to pulsate; the heart to palpitate, as from fear (C.). ಎದೆ ಹಾಱುವದು (ಹೃದಯಸ್ಫುರಣ B. 4, 133).

ಎದೆ ĕdĕ. 2. = ಹೆದೆ. A bow-string. — ಎದೆವೆರಳ್. -ಬೆರಳ್. The fingers used in pulling a bow-string (Bh. 8, 24, 50).

ಎದೆಗಾಱ ĕdĕ-gâṟa. A bold, courageous or audacious man (C.; ಗುಣ್ಡಾಳು, ಧೈರ್ಯವುಳ್ಳವ G.). ಇಷ್ಟಾಗಿ ಅವನಿಗೆ ನಾಚಿಕೆ ಇಲ್ಲ; ಎನ್ಥಾ ಎದೆಗಾಱ, ನೋಡು! (B. 4, 200).

ಎದೆಗಾಱ್ತಿ ĕdĕ-gâṟti. A bold female (My.).

ಎದ್ದು ĕddu 1. = ಎತ್ತು 4. (Tĕ.). — ಎದ್ದುಮುದ್ದು. Stupidity as that of an ox (My.). ಎದ್ದುಮುದ್ದ. -ಅ 3. A man stupid as an ox (My.).

ಎದ್ದು ĕddu. 2. = ಅದ್ದು 1, etc. To immerse, etc.; to dye (C.). ಬೀಜವನ್ ಆಯ್ದು, ಉದಕದಲಿ ಎದ್ದಿ (Bp. 27, 49). ರೇಶಿಮೆಯನ್ನು ಬಣ್ಣಾ ಎದ್ದಿ, ಪರನಾಡುಗಳಿಗೆ ಕಳುಹುವರು (B. 4, 162). ಪಟ್ಟೆಗಳನ್ನು ಒಯಿದು, ಬಣ್ಣಗಾಱರು ಬಣ್ಣಾ ಎದ್ದಿದರು (4, 178). ಬಣ್ಣಾ ಎದ್ದುವದಱಲ್ಲಿಯೂ ಉಪ್ಪು ಕೆಲಸಕ್ಕೆ ಬರುವದು (4, 204).

ಎದ್ದು ĕddu. 3. Nicety, brightness or purity of colour (S. Mhr.; *cf.* the T. s. ಇಂ, ಇಱ್?). ಕುಱಿಯ ತೊಗಲಿಗೆ ಬಣ್ಣ ಎದ್ದಾಗಿ ತೋಱುವ ಕಾರಣ ಅದಱಿನ್ದ ಬಹಳ ಜಿನಸುಗಳನ್ನು ಮಾಡುತ್ತಾರೆ (B. 5, 26). ಬಣ್ಣ ಎದ್ದು ಕಾಣುವದಿಲ್ಲ (S. Mhr.).

ಎದ್ದು ĕddu. 4. = ಎರ್ದು, ಎೞ್ದು. P. p. of ಏೞು 1. Having risen, etc.

ಎದ್ದೆ ĕddĕ. = ಎರ್ದೆ, etc. (ಹೆದೆಯ, ಹೃದಯ Šs.).

ಎನ್ ĕn. 1. = ಅನ್ 1 q. v., etc. To say; to speak; (to tell); to call, to name (ಭಾಷಣ Šmd. Dh.; T. ಎನ್, M. ಎನ್ನು). P. ps. ಎನ್ದು, ಎನ್ತ; relative pres. participle ಎಮ್ಬ. It is applied also to *feeling*, etc., *e. g.* ಜುಮ್ಮುಜುಮ್ಮೆನ್, ಝುಲ್ಲೆನ್. ಎನೆ (Šmd. 86. 91. 95. 177). ನಿನಗೆ ವಸನ್ತದೂತಿ ವೆಸರ್ ಅಪ್ಪುದು, ಅನು ಎನ್ತೆನೆ (Čpr. 7, 41). ರವಿ ತಣ್ಣಗೆ ಆದನ್ ಎನೆ ಕಾಣಿಸಿತು (J. 28, 5). ಎನೆಯುಂ (Šmd. 49. 395). ಎನಲ್ ಅಕ್ಕುಂ (57). ಎನಲ್ ಬೇಡ (61). ಎನುತುಂ (65). ಎನುತೆ (Ršv. 5, 21). ಏನಸ್ ಎನ್ದಪೆಂ? (13, 88). ಎನ್ಬಂ, ಎನ್ಬರ್, ಎನ್ಬದೆ (Šmd. 87), ಎನ್ಬೆನು (Bp. 59, 11). ಎನ್ನಿ! (Bp. 4, 4; Dp. 54). ಎಮ್ಬ (Šmd. 2; Bp. 18, 63). ಎಮ್ಬಿಪವು (Šmd. 17). ಎಮ್ಬವಱ (41). ಎಮ್ಬವಱೊಳ್ (67). ಎಮ್ಬಲ್ಲಿ (57). ಎಮ್ಬನ್ತೆ (95). ಕುಲಿನ್ದಕನ್ ಎಮ್ಬ ದೊರೆ (J. 28, 52). ನಾನು ಹೆಚ್ಚಾದವನು ಎಮ್ಬ ಚಿತ್ತಾನ್ವತ್ಯವು (Si. 68). ಇದು ಹೀಗೆಯೇ ಮಾಡ ಬೇಕು ಎಮ್ಬ ವೇದೋಕ್ತವಾದ ವಿಧಾನವು (248). ಎಮ್ಬಂ (Šmd. 275). ಎಮ್ಬರ್ (ಪೇೞ್ವರ್ 20. 24 Cm.). ಬಿಳಿಯ ಕುದುರೆ ಸಿತ ಕರ್ಕ ಎನಿಸುಗು, ಆಗಡುಕುದುರೆ ಎನ್ದೊ, ಎಮ್ಬರು; ಕಪ್ಪಾಗಿ ಇಹ ಅಗಿಲು ಜಾಪಕ ಎನಿಸುಗು, ಕಲ್ಲ ಹೂವಿನ ಧೂಪ ಎನ್ದೊ, ಎಮ್ಬರು; ಅವುದಾನೊನ್ದು ಮಲ್ಲಿಗೆಯ ಕಮ್ಪಾದ ಧೂಪಮಂ ಮಾಂಗಲ್ಯಮ್ ಎಮ್ಬರು (Nr.). ಎಮ್ಬೆಂ (Bp. 18, 64). ಎಮ್ಬಿರಿ (56, 25). ಎರಡುಂ ವ್ಯಂಜನಮನ್ ಉಚ್ಚರಿಸುವನಿತು ಕಾಲಮಂ ಮಾತ್ರೆ ಎಮ್ಬುದು (Šmd. 19). ಅನ್ತು ಅದಂ ಪ್ರತ್ಯಯಮ್ ಎಮ್ಬುದು (46). ಬ್ರಾಹ್ಮಣಂ ಕ್ಷತ್ರಿಯಂ ವೈಶ್ಯಂ ಈ ೩ ವರ್ಣಮುಂ ದ್ವಿಜರ್ ಎಮ್ಬುದು; ಗೃಹಸ್ಥನಂ ಸ್ನಾತಕನ್ ಎಮ್ಬುದು; ವಾನಪ್ರಸ್ಥನಂ ವೈಖಾನಸನ್ ಎಮ್ಬುದು; ಯತಿಯನು ಕರ್ಮಸನ್ಯಾಸಿಕನ್ ಎಮ್ಬುದು; ಎಲ್ಲಾ ವೇದವನ್ ಓದಿದಾತನು ಅನೂಚಾನನ್ ಎಮ್ಬುದು; ಪ್ರಸಿದ್ಧನ್ ಅಪ್ಪ ತನ್ದೆಗೆ ಪುಟ್ಟಿದಾತನು ಆಮುಷ್ಯಾಯಣನ್ ಎಮ್ಬುದು (Hlâ.). ಇಟ್ಟಿಗೆ ಮೊದಲಾದುವಱಿಂ ಮಾಡಿದ ಅರಮನೆ ದೇಗುಲಂಗಳಂ ಪ್ರಾಸಾದಮ್ ಎಮ್ಬುದು; ದೇಗುಲಂಗಳನೆ ಆಯತನಮ್ ಎಮ್ಬುದು; ಸಾಕೆಮ್ಬುದು (ಹಸ್ತವಾರಣ Nr.). ಕೊತ್ತಿ ಬಲ್ಲುದೆ ಹಾಲು ಮೀಸಲ್ ಎಮ್ಬುದನು? (Dp. 76). ಭೃತ್ಯರನ್ನು ಕರೆದು, ಹೀಗೆ ಮಾಡು! ಎಮ್ಬದಾಗಿ ಆಜ್ಞಾಪಿಸುವದು (ಪ್ರತಿಶಾಸನ Si. 399). ಎಮ್ಬುದುಂ (= ಎನೆ, Ršv. 6, 33 seq.) ಕರ್ಣಾಟಕಲಕ್ಷಣತಬ್ಧಶಾಸ್ತ್ರಮುಂ, ಲಾಕ್ಷಣಿಕರ್ ಪೇೞಿನ್ದು ಬೆಸಸೆ, ಬಗೆವುಗೆ ಪೇೞ್ದಂ (Šmd. 3). ತಱುವಾಯಿಂ ಸನ್ಧಿಯೆನ್ದುಂ ನಾಮಮ್ ಎನ್ದುಂ ಸಮಾಸಮ್ ಎನ್ದುಂ etc. ಪ್ರಕರಣಮ್ ಎಣ್ಬಕ್ಕುಂ (7). ಕುಕ್ಕೂ ಕೂ ಎನ್ದು, ಕೋೞಿ ಕೂಗಿದುವಾಗಳ್ (19. 68). ಹಾ, ರಾಮಾ! ಎನ್ದು, ಸೀತೆ ಬಾಯಱಿದು ಅೞ್ತಳ್ (68). ಅವರ್ಣಂ ಪಿಂಗದ ಆ ಸ್ವರಂ, ನಾಮಿಯೆನ್ದು, ಪೇೞಲ್ ಪಡೆಗುಂ (16). ಕೞ್ತೆಯೆನ್ದು, ಗರ್ದಭಂ (I). ಅಮರಾಂಗನೆಯರ್, ಜೋ ಎನ್ದು, ಪಾಡಿದರ್ ಜೋಗಳಮಂ (65). ಪಱಿಪಱಿ ಪಱ್ಪಱಿಯೆನ್ದು, ಆಲಿಕಲ್ಗಳ್ ಉದಿರ್ದುವು ನಭದಿಂ (65). ರಥರ ಕಾವಲವನ್ದಿರ ಹೆಸರು ಸವ್ಯೇಷ್ಠ ಎನ್ದೊ, ದಕ್ಷಿಣಸ್ಥ ಎನ್ದೊ, ಉಣ್ಬು (Nr.). ವಿಪ್ರರ್ ಎನ್ದ ನುಡಿ ತಪ್ಪದು (J. 28, 29). ವಿಪ್ರರ್ ತನಗೆ ಎನ್ದ ವೃತ್ತಾನ್ತಮಂ ನೆನೆದು (29, 36). ನಾವೆನ್ದ ನುಡಿ (Bh. 1, 8, 76). ಎನ್ದ ಕಿರಾತದೂತೋಕ್ತಿಯಂ ಕೇಳ್ದು (Ršv. 5, after 119). ಎನ್ದು ಸುದರ್ (5, after 126). ಸೆಱಿಗಟ್ಟಿ ತನ್ದಪೆಂ! ಎನ್ದು, ನುಡಿದ ಮಿತವಚನಕುಮಾರಂ (5, after 130). ಕೊಟ್ಟೆನ್ ಎನ್ದು, ಸಿಂಹಲೇನ್ದ್ರಂ ನುಡಿದು (7, after 97). ಇನ್ತೆನ್ದು ಬರೆದು (J. 31, 29). ಅರಸಂಗೆ, ದೇವಾ, ಸಿಂಹಲೇನ್ದ್ರನ್ ಎನ್ದುಂ ಕಪ್ಪಮ್ ಇತ್ತನ್ ಅಲ್ತು! ಎನ್ದು, ಗಣಕಗಣಮ್ ಅಣಿಯರಂ ನಿನ್ದು ಕೆಯ್ ಮುಗಿದು ಪೇೞೆ (Ršv. 5, after 127). ಅಸೂಯೆಗೆ ಈಡಾಗ ಬೇಡ! ಎನ್ದು, ನಿಜನನ್ದನಂಗೆ ಆ ಕುಲಿನ್ದಂ ಪೇೞ್ದನು (J. 29, 17). ದಾಸಿಯನ್ನು ಕರೆಯುವಾಗ, ಹಂಜಿಯೆನ್ದು, ಹೆಸಱಡ ಬೇಕು (Si. 66). Occasionally a sentence to come is introduced by ಎನ್, *e. g.* ತನ್ದೆಗೆ ಇನ್ತೆನ್ದಂ—(Bp. 3, 43). ನಾರಿಯೊರ್ವಳು ಮತ್ತೆ ಎನ್ದಳು—(5, 48). ದೇವನೆನ್ದನು— (26, 46; see also 27, 60; 28, 21; 41, 26; 42, 33; 44, 67; 50, 2). ನುಡಿದರ್ ಇನ್ತೆನ್ದು—(43, 68). ನರೇನ್ದ್ರನನ್ದನಂಗೆ ಪತಿಮೋಹಿನನ್ದನನ್ ಇನ್ತೆನ್ದಂ—(Ršv. 13, 20; see also 7, after 97). ಅವನ್ ಎನ್ದನ್ ಇದಂ—(5, 118). Frequently ಎನ್ದು ಎನ್ is used, *e. g.* ಎನ್ದೆನಲು (Bp. 2, 54; 24, 79; 27, 12), ಎನ್ದೆನುತ (38, 51), ಎನ್ದೆನಿಸಿ (27, 29), ಎನ್ದೆಮ್ಬ (Šm. 3), ಎನ್ದೆನೆ (38). Often, so to say, one's purpose and "for" are expressed by ಎನ್, *e. g.* ನಾ ಮುಂಚೆ ತಾ ಮುಂಚೆ ಇಹೆನ್ ಎನ್ದು, ಒಬ್ಬರಿಗೊಬ್ಬರು ಅತಿಕ್ರಮಿಸಿ ಮುಂಚುವುದು; ಸತ್ತವನ ಸುಡಲ್ (to burn) ಎನ್ದು, ಒಟ್ಟಿದ ಕಟ್ಟಿಗೆ; ಪಶುವ ಕಟ್ಟಲ್ ಎನ್ದು, ಕಳದಲ್ಲಿ ನಟ್ಟ ಗುಣ್ಟವು; ಬಾವಿಯ ಸಮೀಪದಲ್ಲಿ, ಜೀವಧನ ಕುಡಿಯ ಬೇಕೆನ್ದು, ಮಾಡಿದ ಕಲ್ಲ ದೋಣಿ; ನೀರೊಳಗೆ ಮುೞುಂಕಿ, ಸರ್ವಪಾಪಕ್ಷಯಮ್ ಆಗಲ್ ಎನ್ದು, ಮಾಡುವ ಜಪವು (Nr.). (See, regarding ಅಲ್, Bp, 5, 6; 28, 38; 37, 1. 5; 38, 33; 39, 30; 42, 12; 45, 27. 31; 50, 24; 58, 22). ಕಾಳೆಗಕ್ಕೆನ್ದು, ಸನ್ನದ್ಧಮ್ ಅಹ ಚತುರಂಗಬಲಂ (Nr.). ವಧಿಸಲ್ಕೆ ಎನ್ದು (Bp. 28, 8). ದೇವತೆಗೆ ಎನ್ದು (8, 23). ದಾಸಂಗೆ ಎನ್ದು (8, 49). ಪಱಿಯಲ್ಕೆ ಎನ್ದು (39, 10). ಸೂಳೆಗೆ ಎನ್ದು (41, 10). ನಿಕ್ಷೇಪಿಸಲಿಕೆ ಎನ್ದು (47, 8). ಆಗಲ್ಕೆ ಎನ್ದು (50, 65; 59, 49). ಸಮಿಧೆಗಳಿಗೆ ಎನ್ದು (55, 34). ಓದಲಿಕ್ಕೆ ಎನ್ದು (B. 4, 153).—ಆಗಲಿ! ಎನ್ದು (J. 28, 60). — ಎನವೇಡ. -ಬೇಡ. ಅಪ್ರಸಿದ್ಧದ ನುಡಿಗಳ್ ಎನ್ದು, ಎನವೇಡ! (Bp. 51, 51). ಬೇಡೆನವೇಡ (Ršv. 13, 26). — ಎನ್ದರೆ. = ಅನ್ದರೆ, q. v. ಎಂಜಲು ಎತ್ತೋ, ಗುಣ್ಡಾ! ಎನ್ದರೆ ಉಣ್ಡವರು ಎಷ್ಟು ಜನ? ಎನ್ದ (Prv.). ಅವು ಹಣ್ಣಾದವೆನ್ದರೆ (B. 4, 27). ತಳಕ್ಕೆ ಕೂತವೆನ್ದರೆ (4, 55). ಗಿಡವು ಬಲಿತು ದೊಡ್ಡದಾಯಿತೆನ್ದರೆ ಹೂ ಬಿಡುವದು (4, 70; see also 4, 147. 157. 158. 165. 218). — ಎನ್ದುದಂ ಗೆಯ್. = ಎನ್ದುದಂ ಮಾಡು, q. v. — ಎನ್ದುದಂ ಮಾಡು. To do what (a person) said (ಇಮ್ಬು ಕೆಯ್ Šmd. II; Kk. 87, o. r. ಎನ್ದುದಂ ಗೆಯ್). See J. 18, 59. — ಎನ್ದುದನ್ ಅಪ್ಪ ಗೆಯ್. To assent to or accept what (a person) said. ತಾನ್ ಎನ್ದುದನ್ ಅಪ್ಪಗೆಯ್ಯದೆ ನುಡಿದ ನರೇನ್ದ್ರನಂದನಂಗೆ ಪತಿಮೋಹಿನನ್ದನನ್ ಇನ್ತೆನ್ದಂ (Ršv. 13, after 20). — ಎನ್ದುದಾಗು. -ಆಗು. A saying, sentence or rule to occur or to exist (Šmd. 106 Cm.). — ಎನ್ದೊಡೆ. = ಎನ್ದರೆ, *e. g.* ಅವು ಆವುವು ಎನ್ದೊಡೆ (Šmd. 17).

ಎನ್ ĕn. 2. (= ಎನ್ನು 2), ನನ್ 1. Another form of ಆಂ 1 q. v., for the declension of which it is used (*cf.* ಎಂ 1 etc., ಎಮ್ 1). — ಎನತು. ಎನ-ಅತು. = ಎನತ್ತು. That

of me, mine. ಎನತು ಶೌರ್ಯಂ (Šmd. 179). — ಎನತ್ತು. ಎನ-ಅತ್ತು 1. = ಎನತು. (ಎನ್ನದು Kk. 61). ಸುಪ್ರಣೆಯೆನತ್ತು (Šmd. 179). — ಎನ್ನದು. ಎನ್ನ-ಅದು 1. = ಎನತು, etc. (Šmd. 178. 179). ಎನಗೂ ಹರಿನಾಮ, ಮಾಧವನಿಗೂ ಹರಿನಾಮ; ಎನಗೂ ಜಲಶಯನ, ಮಾಧವನಿಗೂ ಜಲಶಯನ; ಎನ್ನದು ಕಿರಿದೇನು, ಮಾಧವನದು ಹಿರಿದೇನು? ಟೊರೋ, ಟೊರೋ, ಟೊರೋ! ಅನ್ದಿತು (Prv.).

ಎನ ĕna. 1. = ಎನೆ 1, ಎನ್ನ 3, ಎನ್ನೆ 1. Thought, mind: coming to the mind, entering the mind (? ಎನ್ನವರ್ತನ Šmd. II; Kk. 82, o. r. ಎನ್ನೆವರ್ತನ; M. ಎನ್ನು, Tĕ. ಅನು, ಎನ್ನು also: to think, *cf.* ಎಣ್ಣು; Tĕ. ಎನೆ, similarity, equality, see ಎಣೆ 1).

ಎನ ĕna. 2. = ಎನ್ನ 1, ನನ್ನ. Genitive of ಆಂ 1. See also ಎನ್ 2.

ಎನಸು ĕnasu. 1. = ಎನಿಸು 1, etc. (My.).

ಎನಸು ĕnasu. 2. Further, more, etc. (ಪಿರಿದುಂ, ನಾಡೆ, ಅಳುಪ್ಪುಂ, ಕರಂ, ಅದಂ, ಉಂ, ಅತಿ Čt. II, 25; see Kk. 50; *cf.* Tĕ. ಎನೆ, to be united, and ಎಣೆ 1).

ಎನಿತು ĕnitu. = ಎನಿತ್ತು, (ಎನಸು 2, ಎನ್ತುಟು, ಎಷ್ಟು, ಏಟು 2, ಏಸು 3). What measure, amount, number or time? How much? (Šmd. 122; Kk. 61); (before nouns in the plural) how many? (how? Bp. 1, 4). (Tĕ. ಎನ್ನಿ, ಎನ್ತೆ; T. ಎತ್ತನೈ; M. ಎತ್ರ, ಎತ್ತಿರ; Tu. ಏತು). ಅನಿತು, ಇನಿತು, ಎನಿತು (Šmd. 123). ಎನಿತಱಿಂ (135). ಎನಿತರ್ಕೆ (292). ಎನಿತಱವಂ? (Grj. 4, 49). ಹರಿ ನೆಗಹಿದರೆ ನೆಗೆದ ಮನ್ದರದ ಬಲುಹು ಎನಿತು? (Bp. 19, 26). ಎನಿತು ಅನಿತಱೊಳೆ (Čh. v. 234). ವಸುಮತೀಶ್ವರಿಗೆ ತಮಗೆ ಎನಿತು ಮಹಿ ಉಣ್ಟು, ಅದಱ ಪೆಸರು ಶಾಷ್ಪಮ್ ಎನಿಕ್ಕುಂ (Mr. 189). — ಎನಿತನೆಯ. -ಅನೆಯ. Belonging or amounting to what measure, position, etc. ಅನಿತನೆಯಂ, ಇನಿತನೆಯುಂ, ಎನಿತನೆಯುಂ (Šmd. 243). — ಎನಿತು. -ಉ 9. = ಎನಿತುಂ. ಈ ಪರಿಯೊಳ್ ಎನಿತಿಲ್ಲ (J. 28, 27). — ಎನಿತುಂ. -ಉಂ 1. How-much-soever, what measure (time, etc.) it may be. ಎನಿತುಂ ಕಾಯ್ದುಂ ಬೆನ್ನೀರ್ ಮನೆ ಸುಡದು (Šmd. 216). ಎನಿತುಮ್, ಅನಿತುಮುಂ ಧರ್ಮಜಂ ಸೂಱೆಗೊಟ್ಟಂ (73. 282). ಪೇಱ! ಎನಿತರ್ಕಮ್ ಒಳಂ ಮುರಾನ್ತಕನ್, ಒಳರ್ ಅನ್ನೆವರಂ- - - ಅತಿಥಟರ್ (292). — ಎನಿತೆನಿತು. rep. (Č. Bp. 8, 13). — ಎನಿಬರ್. How many persons? (Bp. 44, 68; J. 2, 25). ಅನಿಬರ್, ಇನಿಬರ್, ಎನಿಬರ್ (Šmd. 122. 123).

ಎನಿತ್ತು ĕnittu. = ಎನಿತು. See Kâvy. I, 4, 33-38. — ಎನಿತ್ತೆನಿತ್ತು. rep. ಎನಿತ್ತೆನಿತ್ತು ಅಮ್ಬುಜಪತ್ರನೇತ್ರೆಯಾ ಘನಸ್ತನಂಗಳ್ ಬಳೆಗುಂ ಕಿರಾತೆಯಾ, ಅನಿತ್ತನಿತ್ತಂ ವನದೊಳ್ ವನೇಚರಂ ತನತ್ತು ಬಿಲ್ಲಾನ್ ಅದನ್ ಅನ್ತೆ ಕೀಸುವಂ (Šmd. 144).

ಎನಿಬರ್ ĕnibar. See s. ಎನಿತು.

ಎನಿಸು ĕnisu. 1. = ಅನಸು, etc., ಎನಸು 1, ಎನ್ನಿಸು. To cause to say; to cause one's self to say; to cause to be called; to cause one's self to be called, to be called, to be spoken of. ಆದಿಯ ಪತ್ತು ಅಕ್ಕರಮುಂ ಸಮಾನಮ್ ಎನಿಸುಗುಂ (Šmd. 13). ಪೊನ್ನುಳ್ಳವನೆ ಕುಲೀನಂ ಚೆನ್ನಂ ಕಲಿ ಸತ್ಯವಾದಿ ಎನಿಸುಗುಂ (84). ಎನಿಸುವ (91). ಎನಿಪ (95. 175). ಎನಿಪುವು (26). ಎನಿಪ್ಪ (96. 99. 233). ಎನಿಪುದು (Šm. 7). ಎನಿಪ್ಪುದು (38). ಭಿನ್ನವಿಲ್ಲದೆ ಅರ್ಧದೇಹಮ್ ಎನಿಸುವ ಸತಿಯು (Dp. 1). ಎನಿಸುವುದು (Bh. 1, 8, 24). ಎನಿಕುಂ (Šmd. 113. 137). ಎನಿಕ್ಕುಂ (19. 41. 171; Šm. 4). ಎನಿಸುಗು (Šm. 38). ಪ್ರವಾಹದಿನ್ದಾದ ಮಳಲೊಟ್ಟಲು ಪುಲಿನಮ್ ಎನಿಸುಗು; ಒಡ್ಡದಲ್ಲಿ ಪಣ ಎನಿಸುಗು; ಒನ್ದಾನೊನ್ದು ಎಮ್ಬ ಅರ್ಥದಲ್ಲಿ ಕದಾಚಿತ್, ಜಾತು ಎನಿಸುಗು (Nr.). ಎನಿಸಿ (Šm. 3; Bh. 1, 8, 54; Ršv. 5, 34). ಎನಿಸಿದ (Šmd. 26). ಎನಿಸಿದಯ್ (74). ಎನಿಸಿದುದು (187). ಎನಿಸಿತು (J. 6, 6). See Bp. 16, 1; 22, 27; 38, 43; 48, 20; 49, 16. 26; 51, 76; J. 6, 10. 21; Šmd. s. ವವಣ್ಣರಿ.

ಎನಿಸು ĕnisu. 2. = ಎನಿತು q. v., etc. (My.; J. 2, 25; 3, 15).

ಎನು ĕnu. 1. The common form of ಎಂ 1 (except for the present), *e. g.* ಕೊಡಿಸುವೆನು (Bh. 1, 8, 7), ಈವೆನು (Bp. 9, 49), ಪುಟ್ಟಿದೆನು (11, 46).

ಎನು ĕnu. 2. = ಎನ್ 1, etc. ಎನುವದು (C.).

ಎನುಹ ĕnuha. Saying, etc. ಬೇಡೆನುಹ (ನಿಷೇಧ Nr.).

ಎನೆ ĕnĕ. 1. = ಎನ 1, etc. — ಎನೆವತರ್ು. -ಪತರ್ು. To join the mind, to agree with one's wish. ಎನೆವರ್ತಿದುದೆನೆ ಚಿತ್ತಕಾದುದು (Čt. I, 40). *Cf.* ಎರ್ದೆವತ್ತು.

ಎನೆ ĕnĕ. 2. = ಎಲೆ 1, No. 2. Mode of calling to a female (My.; *cf.* ಅಣೆ 1).

ಎನ್ತ ĕnta. 1. = ಅನ್ತ 1. A common P. p. of ಎನ್ 1, q. v. ಇಲ್ಲವೆನ್ತಲೇ ಇಟ್ಟಿದು ಬರುತ್ತೇನೆ (B. 2, 21). ಎಳೆಗಾಯಿಗೆ ಸೀಯಾಳವೆನ್ತಲು ಅನ್ನುತ್ತಾರೆ (2, 42). ಎನ್ದಿಗೂ ಅವರ ಮಾತು ಮೀಱ ಬಾರದು ಎನ್ತಲೂ ಅದಱಲ್ಲಿ ಬರೆದದೆ (3, 2). ಇವುಗಳಲ್ಲಿ ಗಾಳಿಯಿನ್ದ ಸಾಗುವ ಹಡಗು ಎನ್ತಲೂ, ಉಗಿಯಿನ್ದ ಸಾಗುವ ಹಡಗು ಎನ್ತಲೂ, ಎರಡು ತರಗಳುಣ್ಟು (3, 117; see 5, 234; Si. 106).

ಎನ್ತ ĕnta. 2. = ಎನ್ತಾ, ಎನ್ಥ, etc. — ಎನ್ತೆನ್ತ. Of what and what a sort! how very great or important! ಎನ್ತೆನ್ತವರು ಅನ್ತೇ ಹೋದರು, ಸಂಕ್ರಾನ್ತಿ ಬನ್ದು ಹುಳಿದೋಸೆ ಬೇಡಿತು (Prv.). — ಎನ್ತೆನ್ತಾ. = ಎನ್ತೆನ್ತ. ಎನ್ತೆನ್ತಾ ದೇವರಿಗೆಲ್ಲಾ ಅನ್ತರಾಟ! ಕಾಲ್ಮುಱುಕ ದೇವರಿಗೆ ಕೈಲಾಸವೇ? (Prv.).

ಎನ್ತಾ ĕntâ. = ಎನ್ಥ, etc. (My.; G.; see ಎನ್ತೆನ್ತಾ).

ಎನ್ತು ĕntu. 1. = ಅನ್ತು 3, ಎನ್ದಿತು of ಎನ್ 1 (C.).

ಎನ್ತು ĕntu. 2. What manner or way? in what manner? how? (Šmd. 399; ಹ್ಯಾಗೆ 14 Cm.; Šm. 76; C.; Tĕ. ಎಟು, ಎಟ್ಟು, ಎಟ್ಲು, ಎಷು; Tu. ಎಂಚ; T. ಎಪ್ಪ). ಎನ್ತು ಓದಿದೊಡಂ (Šmd. 14). ಎನ್ತರ್ಕೆ (207). ಅದು ಎನ್ತೆನೆ (Čpr. 7, 41; Bp. 41, 6). ಎನ್ತು? ಈಸು ಸಮ್ಪಿಯ ನಮ್ಮಲಿ ಉಣ್ಟೇ? (Bh. 2, 13, 24). ಈಶತ್ವಮ್ ಇಲ್ಲದೇ ನೀನ್ ಈಶನ್ ಎನ್ತಾದಿ? (Sp.). — ಎನ್ತನ್ತೆ. -ಅನ್ತೆ. As—so. ಘಟಕ್ಕೆ ಮೃತ್ತಿಕೆ ಎನ್ತನ್ತೆ ಅಕ್ಷರಾತ್ಮಕವಾದ ಶಬ್ದಂಗಳ್ etc. (Šmd. 7 Cm.). See Bp. 51, 25. — ಎನ್ತಪ್ಪ. -ಅಪ್ಪ. = ಎನ್ತಹ, etc. How being: what like? what kind of—? 2, of what a (good or bad) kind or nature! ಅನ್ತಪ್ಪಂ, ಇನ್ತಪ್ಪಂ, ಉನ್ತಪ್ಪಂ, ಎನ್ತಪ್ಪಂ (Šmd. 191). See Bp. 26, 60; 45, 10. — ಎನ್ತಹ. -ಅಹ. = ಎನ್ತ 2, ಎನ್ಥ, ಎನ್ನ 2. (ಎನ್ತಪ್ಪ Šmd. 191). ಎನ್ತಹಂ (192; ಎನ್ನಂ Čt. II, 64). ಎನ್ತಹವರ್ಗಳ್ (Šmd. 175). See Bp. 4, 69; 24, 6. 62; 51, 24; 55, 26. — ಎನ್ತಹಗೆ. -ಅಹಗೆ. = ಎನ್ತನ್ತೆ. (Bp.). — ಎನ್ತಾನುಂ. -ಆನುಂ. (Šmd. 390). Howsoever (Grj. 6, after 12). ರಾಜೇನ್ದ್ರನ ಉಕ್ತಿಯನ್ ಎನ್ತಾನುಂ ಮನದೆಗೊಣ್ಡು (Ršv. 13, after 26). — ಎನ್ತು. -ಉ 9. = ಎನ್ತುಂ. ಎನ್ತು ಮಾಡಿದೊಡೆ ಅನ್ತಲಾ! (Bp. 17, 9). — ಎನ್ತುಂ. -ಉಂ 1. In what manner soever; by all means; by any means. (ಹ್ಯಾಂಗೆ ಆದೊಡಂ Šmd. 164 Cm.). ಕವಿಗೆ ಕೇಡಿಲ್ಲ ಎನ್ತುಂ (139). ಮತ್ತೊನ್ದು ದಿನಮ್ ಎನ್ತುಂ ದೊರಕದಿರ್ದೊಡೆ (Bp. 44, 24). — ಎನ್ತೆನ್ತು. rep. ಎನ್ತೆನ್ತು? ಎಲವೊ, ಮುಗುದ್ದಿ ಪೇಱ! (Ršv. 6, 36). — ಎನ್ತೆನ್ತೋ. -ಓ 3. Oh, what and what a manner! oh, how wonderful! ಎನ್ತೆನ್ತೋ! ಅಃ! ಕಬ್ಬಮ್ ಒಳ್ಳಿತ್ತಾಯ್ತು! (Šmd. 69). — ಎನ್ತೋ. -ಓ 4. Oh, how? oh, of what kind?

(Bp. 45, 36); one does not know or wonders how (Bp. 27, 17).

ಎನ್ತುಟು ĕntuṭu. (= ಎನಿತು, etc.). What quantity or amount? etc. (how?). *Cf.* ಅನ್ತುಟು, etc. ಬಗೆಗೆ ಒನ್ದಕೆ ಒನ್ದು ಕಬ್ಬಮೆ ನೆಗಟ್ಟಿ ಈ ಚಾತುರ್ಯಮ್ ಇರ್ದಡೆ ಏಂ? ಕಣ್ಣಿಲ್ಲದೆ ಜಗಮುಂ ತೊಟಿಲುವೆನ್ ಎನ್ಬ ಈ ಮುಗುದನ ಮಾತು ಎನ್ತುಟು, ಅನ್ತು ತಪ್ಪೊದು ಅನೋಘಂ (Čt. II, 120). ಬೇಸಗೆಯ ಉಗ್ರಮ್ ಎನ್ತುಟೋ! (Ršv. 5, 46). See Bp. 3, 34; 10, 2; 13, 12; 19, 26; 38, 12. 13; 58, 28; 61, 62; Abhâ. 2, 76; J. 16, 34; 20, 58; Č. Bp. 47, 10.

ಎನ್ತ್ರ ĕntra. Tbh. of ಯನ್ತ್ರ (B. 5, 101. 152; G.; My.).

ಎನ್ಥ ĕntha. = ಎನ್ತ್ಹ (s. ಎನ್ತು 2), of which it is the *common* form. What kind or sort? 2, what a kind or sort! how! ಎನ್ಥದು, what sort of thing? (C.). ಎನ್ಥವ, what kind of man? (C.; B. 4, 49). ಈ ಆಕಳು ಎನ್ಥ ಚನ್ದವದೆ, how beautiful this cow is! (B. 1, 20). ಈ ಮನೆ ಎನ್ಥ ದೊಡ್ಡದು, how large this house is! (C.).

ಎನ್ಥಾ ĕnthâ. = ಎನ್ತಾ, ಎನ್ಥ, etc. ಇದು ಎನ್ಥಾ ಚಲೋ ಕುದುರೆ! (B. 1, 3). ಈ ಪುಸ್ತಕವು ಎನ್ಥಾ ಚನ್ದವದೆ! (2, 1). ನೋಡು, ದೇವರು ಎನ್ಥಾ ಜ್ಞಾನಿಯು, ಎನ್ಥಾ ಸಮರ್ಥನು, ಎನ್ಥಾ ಒಳ್ಳೆಯವನು! (2, 25). ಎನ್ಥಾ ಬೆಳೆ ಇದ್ದಾಗ್ಯೂ (5, 99). ಸುಣ್ಣದ ಬಣ್ಣ ಎನ್ಥಾದು? (1, 5). ಅದಱ ಬಣ್ಣ ಎನ್ಥಾದ್ದು? (1, 15). ಅವರ ಉಡು ತೊಡುಗೆಗಳು ಎನ್ಥವು ಎಮ್ಬದು ಇಲ್ಲಿಯ ಬಹಳ ಮನ್ದಿ ನೋಡಿ ಬಲ್ಲರು (5, 296). ಅವನು—ಸಿಟ್ಟು ಎನ್ಥಾದೋ?—ಹುಟ್ಟಾ ಅಱಿಯನು (4, 153).

ಎನ್ದು ĕndu. 1. P. p. of ಎನ್ 1.

ಎನ್ದು ĕndu. 2. What time? when? (C.; T. ಎನ್ರು; Tu. ಏನಿ, ಏಪ; Tĕ. ಎಪುಡು, ಎಪ್ಪುಡು; *cf.* ಎನ್ನೆ 2). ಅನ್ದು, ಇನ್ದು, ಉನ್ದು, ಎನ್ದು (Šmd. 398). ಎನ್ದಿಂ, ಎನ್ದಿಂಗೆ, ಎನ್ದಿನತ್ತಣಿಂ, ಎನ್ದಿನ (147). ಎನ್ದಿನ್ದಲೆ (Bp. 18, 33). ಎನ್ದಿಗೆ (45, 8. 37). ಎನ್ದಿಂಗೆ (34, 12; 35, 15; 45, 41. 45). — ಎನ್ದಾದರೂ. -ಆದರೂ. At what time soever, ever, once (My.). ಈ ಮುದುಕನ ಮನೆಗೆ ಎನ್ದಾದರೂ ನೀನು ಹೋಗಿದ್ದಿ? (B. 2, 38). 2, at all times, always, ever (My. occasionally). — ಎನ್ದಿಗಾದರೂ. -ಆದರೂ. At what time soever, ever, once. ಎನ್ದಿಗಾದರೂ ನಾಶವಾಗುವನ್ಥಾ (ಅಸ್ಥಿರ G. 38; My.; see Prv. s. ತುರುಕ). — ಎನ್ದಿಗು. -ಉ 9. = ಎನ್ದಿಗೂ. See ಎನ್ದಿಗೆನ್ದಿಗು. — ಎನ್ದಿಗೂ. -ಊ 7. = ಎನ್ದಾದರೂ No. 1. ಎನ್ದಿಗೂ ಅವರ ಮಾತು ಮೀಱ ಬಾರದು. ಆತನಿಗೆ ತಿಳಿಯದ ಹಾಗೆ ಮಾಡುವದು ಎನ್ದಿಗೂ ನಮ್ಮಿನ್ದ ಆಗದು (B. 3, 2). See Si. 195. 252. 373. 2, always, continually (Si. 92; My.). — ಎನ್ದಿಗೆನ್ದಿಗು. -ಎನ್ದಿಗು. For ever and ever (My.). 2, at any time, ever. ಪರಮನ್ ಈ ಬಾರಿಗೆ ಬದುಕಿದಡೆ ಮರಣವಿಲ್ಲ ಇನ್ನೆನ್ದಿಗೆನ್ದಿಗು, ನಿರುತಂ (Bp. 13, 8). — ಎನ್ದಿನ ಚಾಳಿ. The customary nature or conduct (Bp. 40, 85). — ಎನ್ದಿನನ್ತೆ. -ಅನ್ತೆ. As always, as usual. See Bp. 1, 56; 2, 56; 27, 66; 44, 18; 46, 80; 56, 10. — ಎನ್ದಿನನ್ದ. -ಅನ್ದ. The former or usual manner, method or custom (Bp. 16, 17; 27, 14; 38, 50; 43, 48. 51. 83; 56, 13; J. 15, 39). — ಎನ್ದಿನನ್ದು. -ಅನ್ದು. The former time; as formerly or usual (Bp. 32, 41). — ಎನ್ದಿನ ಪರಿ. The former or usual way or manner (Bp. 2, 27; 22, 45; 29, 34; 48, 21; 56, 11). — ಎನ್ದಿನ ವೊಲ್. = ಎನ್ದಿನನ್ತೆ. (J. 26, 26). — ಎನ್ದಿನಹಂಗೆ. -ಅಹಂಗೆ. = ಎನ್ದಿನ ವೊಲ್. (Bp. 33, 20). — ಎನ್ದಿನ ಹಾಂಗೆ. = ಎನ್ದಿನಹಂಗೆ. (Bp. 16, 24; 47, 70). — ಎನ್ದಿನಾಕೃತಿ. -ಆಕೃತಿ. The former, usual form (Bp. 4, 68). — ಎನ್ದಿನಿನ್ದಂ. (More) than before. ಎನ್ದಿನಿನ್ದಂ ಲೇಸೆನಿಸಿ (Bp. 23, 41). — ಎನ್ದು. -ಉ 9. = ಎನ್ದುಂ. For ever, always, continually (Bp. 2, 25; Šm. 20; J. 3, 24); etc. — ಎನ್ದುಂ. -ಉಂ 1. At all times, ever, always (J. 3, 23). 2, at any time, at any period or point of time, ever (ಆವಾಗಳುಂ Šmd. Cm. 12. 66. 76. 79). ಎನ್ದುಂ ಕಾಣೆವು ಈ ಚೋದ್ಯವಂ (Bp. 32, 48). — ಎನ್ದುಮಂ. = ಎನ್ದುವಂ, ಎನ್ದುಂ. (Bp. 24, 70; 53, 37; 59, 9; 18, 81). See ಉಮಂ. — ಎನ್ದುವಂ. = ಎನ್ದುಮಂ. (Bp. 3, 59). See ಉವಂ 1. — ಎನ್ದುವುಂ. = ಎನ್ದುಂ. (Bp. 12, 58; 19, 31; 24, 15; 46, 12; 50, 50; 59, 51). See ಉವುಂ. — ಎನ್ದೂ. -ಊ 7. = ಎನ್ದುಂ No. 1. (My.). 2, at what time soever, ever, once (My.). ನಾನು ಎನ್ದೂ ನಿಲ್ಲುವದಿಲ್ಲ (B. 3, 26). ಎನ್ದೂ ಗೆಯ್ಯದ ಭೂಮಿ (ಖಿಲ Hlâ.). ಎನ್ದೂ ಕೇಡಿಲ್ಲದುದು (ಸನಾತನ, ನಿತ್ಯ Nr.). ಎನ್ದೂ ಇಲ್ಲದ ಮಾಣಿ ಅಮವಾಸೇ ದಿನ ಓದ ಕೂತ. — ಎನ್ದೂ ಏಱದ ರಾವ್ತ ಕುದುರೇ ಹಿನ್ದು ಮುನ್ದಾಗಿ ಏಱಿದ (Prvs.). — ಎನ್ದೆನ್ದಿಗೂ. = ಎನ್ದಿಗೂ. Always, ever (C.). ಅರಸನ ಕರುಣೆ ಎನ್ದೆನ್ದಿಗೂ ನನ್ನ ಮೇಲೆ ಇರುವದು (My.). ಅರಸಾ, ಎನ್ದೆನ್ದಿಗೂ ಬಾಳು! (My.). 2, = ಎನ್ದಾದರೂ No. 1. (B. 2, 29; 4, 152; My.). — ಎನ್ದೆನ್ದೂ. -ಎನ್ದೂ. = ಎನ್ದೂ Nos. 1 & 2. (My.). ಇನ್ನು ಮುನ್ದೆ ನಾನು ಎನ್ದೆನ್ದೂ ಇನ್ಥಾ ಕೆಟ್ಟ ಕೆಲಸ ಮಾಡಲಿಕ್ಕಿಲ್ಲ (B. 4, 45). — ಎನ್ದೊ. -ಒ 4. ಎನ್ದೋ. -ಓ 3. Oh, when? one does not know or wonders when. See Bp. 43, 12. 13. 14. 15; 45, 8. 34. 35. 42. 43. 44; 47, 14. 24; 53, 33.

ಎನ್ನ ĕnna. 1. = ಎನ 2, etc. Of me. Accusative ಎನ್ನಂ, ಎನ್ನನು. — ಎನ್ನನುವಂ. -ಅಂ 5. Also me (Bp. 59, 11).

ಎನ್ನ ĕnna. 2. = ಎನ್ತ್ಹ (s. ಎನ್ತು 2), etc. ಎನ್ನಂ (ಎನ್ತಹಂ Čt. II, 64). ಮನಸಿಜನ್ ಎನ್ನನ್, ಇನ್ನನ್; ಅರುಣಪ್ರಿಯನನ್ದನನ್ ಎನ್ನನ್, ಇನ್ನನ್; ಆ ದಿನಕರನ್ ಎನ್ನನ್, ಇನ್ನಂ (Šmd. 192).

ಎನ್ನ ĕnna. 3. = ಎನ 1, etc. — ಎನ್ನವರ್ತನ. -ಬರ್ತನ. = ಎನ್ನೆವರ್ತನ. ಎನವೆನ್ದು, ಎನ್ನವರ್ತನಂ (Šmd. II; see ಎನ 1).

ಎನ್ನಿಕೆ ĕnnikĕ. = ಎನ್ನುವಿಕೆ. (My.).

ಎನ್ನಿಸು ĕnnisu. = ಎನಿಸು 1, etc. (My.).

ಎನ್ನು ĕnnu. 1. = ಎನ್ 1, etc. (My.). P. ps. ಎನ್ನು, ಎನ್ತ. ಸ್ವಾಮಿಹಿತರ್ ಎನ್ನುತ (Č. Bp. 11, 11). ಕನ್ನಡದಿ ಕನ್ನಡಿ ಅದು ಎನ್ನೆ (Cidakhaṇḍânubhavasâra 1, 7). ಆ ಹಣಕ್ಕೆ ಬಾಡಿಗೆ ಎನ್ದೆನ್ನುತ್ತಾರೆ (B. 5, 113).

ಎನ್ನು ĕnnu. 2. Perhaps = ಎನ್ 2. — ಎನ್ನುವಂ. Me; or: also me, me too (Bp. 1, 8; 9, 25. 49). See ಉವಂ 2.

ಎನ್ನುವಿಕೆ ĕnnuvikĕ. Saying; calling, naming. ಬೇಗವೆನ್ನುವಿಕೆ (ಶೀಘ್ರ Si. 26; see also 33. 42. 61. 70; My.).

ಎನ್ನೆ ĕnnĕ. 1. = ಎನ 1, etc. — ಎನ್ನೆವರ್ತನ. -ಬರ್ತನ. ಎನವೆನ್ದು, ಎನ್ನೆವರ್ತನಂ (Kk. 83, o. r. ಎನ್ನವರ್ತನಂ; see ಎನ 1).

ಎನ್ನೆ ĕnnĕ. 2. What time? *Cf.* ಎನ್ದು 2. — ಎನ್ನೆಗಂ. -ಗಂ. Up to or till what time? ಅನ್ನೆಗಂ, ಇನ್ನೆಗಂ, ಎನ್ನೆಗಂ (Šmd. 295). — ಎನ್ನೆವರಂ. -ವರಂ. = ಎನ್ನೆಗಂ. ಎನ್ನೆವರಂ ಸಿರಿ ತಮುಗುಣ್ಬು, ಅನ್ನೆವರಂ ಸೇವ್ಯರ್ ಅಲ್ತೆ ಖಳರುಂ? (Šmd. 296). — ಎನ್ನೆವರೆಗಂ. -ವರೆಗಂ. = ಎನ್ನೆವರಂ (Šmd. 295).

ಎಪ್ ĕp. = ಎೞ್ 4, etc. Seven. — ಎಪ್ಪತ್ತನೆಯ. ಎಪ್ಪತ್ತು -ಅನೆಯ. Seventieth (C.). — ಎಪ್ಪತ್. = ಎಪ್ಪತ್ತು. See ಎಪ್ಪತ್ನಾಲ್ಕು. — ಎಪ್ಪತ್ತು. -ಪತ್ತು. Seventy (C.). — ಎಪ್ಪತ್ತು ಎಮ್ಬತ್ತು. Seventy or eighty (B. 4, 48); or 70 and 80 (C.); or 70 times 80 (C.). — ಎಪ್ಪತ್ತು ನಾಲ್ಕು. Seventy-four (C.; Čh. v. 325). — ಎಪ್ಪತ್ತು ಲಕ್ಷ. Seventy lacs (C.; B, 5, 226). — ಎಪ್ಪತ್ತೊಮ್ಬತ್ತು. Seventy-nine (C.; also ಎಪ್ಪತ್ತ್ರೊಮ್ಬತ್ತು, C.). — ಎಪ್ಪತ್ತ್ರೊಮ್ಬು. = ಎಪ್ಪತ್ತೊಮ್ಬತ್ತು, q. v. (My.). — ಎಪ್ಪತ್ನಾಲ್ಕು. = ಎಪ್ಪತ್ತು ನಾಲ್ಕು (Čh. v. 322; C.).

ಎಬಡ ĕbaḍa. = ಎಬ್ರಾಸಿ. A man who has difficulty

in speaking (S. Mhr.);—a foolish, silly man (My.).

ಎಬಡತನ ĕbaḍatana. The manner or being of an ĕbaḍa (S. Mhr.);—silliness (My.).

ಎಬಡಿ ĕbaḍi. A woman who has difficulty in speaking (S. Mhr.);—a silly woman (My.).

ಎಬಡಿಸು ĕbaḍisu. To be afflicted with difficulty in speaking (S. Mhr.).

ಎಬ್ಬಿರಿಸು ĕbbirisu. = ಎಬ್ಬಿಸು, ಎಬ್ಬ್ರಿಸು. (My.).

ಎಬ್ಬಿಸು ĕbbisu. = ಎಬ್ಬಿರಿಸು, etc., ಎರ್ಬಿಸು, ಎಬ್ಬಿಸು, ಎಬ್ಬೇಸು. To rouse, to cause to rise, to awaken; to lift up; to raise; to take away; to steal (C.); to enliven, to give life (Bp. 22, 27). See Bp. 16, 20; 22, 42; 31, 23; 47, 57; J. 28, 47. ವ್ಯಾಜ್ಯಗಳನ್ನು ಎಬ್ಬಿಸಿ (B. 2, 25). ಮೇಲಿನ ಚಪ್ಪ ತೆಗೆದು, ಒಳಗಿನ ಪತ್ರೀ ಎಬ್ಬಿಸಿ ಕೊಣ್ಡು (3, 52). ನರಿಗಳು... ಕಲಕಲಾಟ ಎಬ್ಬಿಸುತ್ತವೆ (3, 75). ನಾಲ್ಕು ಅಣೆ ರೊಕ್ಕಾ ಎಬ್ಬಿಸು! (3, 78). ಈ ವಜ್ರವು.. ಒನ್ದು ದೇವಾಲಯದೊಳಗಿನ ಮೂರ್ತಿಯ ಕಣ್ಣೊಳಗೆ ಕೂಡ್ರಿಸಿತ್ತು; ಅಲ್ಲಿನ್ದ ಒಬ್ಬ ಸಿಪಾಯಿ ಅದನ್ನು ಎಬ್ಬಿಸಿ ಕೊಣ್ಡು ಹೋದನು (4, 174). ಮನೆಯ ದೇವರನ್ ಒಯ್ಯೆ ಕಳ್ಳನು, ಶುನಕನ್ ಎಬ್ಬಿಪುದು; ಶುನಕನಿನ್ದ ಕನಿಷ್ಠ ದೇವರು! ದಿನವು ನೈವೇದ್ಯ ಉಣ್ಡ ದೇವರು ಇನಿತುವು ಎಬ್ಬಿಸಲಿಲ್ಲ! (Jns. 42, 12).

ಎಬ್ಬು ĕbbu. = ಎರ್ಬು, ಎಬ್ಬು q. v. To rise. **2**, to rouse (Grj. 6, 68). — ಎಬ್ಬಟ್ಟು. -ಅಟ್ಟು. = ಎರ್ಬಟ್ಟು, ಎಬ್ಬಿಟ್ಟು. To follow, to pursue; to chase; to harass. ದುರಿತಮ್ ಎಬ್ಬಟ್ಟೆ (Bp. 25, 13). ಬೌದ್ಧಮುಖ್ಯನನ್ ಅರಿದೆನಲ್ಕೆ ಎಬ್ಬಟ್ಟೆ (50, 18). ಕಿಱುಕಿಱುಯ ಸಮಯಿಗಳನ್ ಎಬ್ಬಟ್ಟೆ (52, 30). ಪರರನ್ ಎಬ್ಬಟ್ಟೆ ನಿಲಿಸಿದನು (59, 55). ಕಾಯ್ವುದು ಅಪಮೃತ್ಯುಗಳನ್ ಎಬ್ಬಟ್ಟಿ! (61, 90). ಯಮನ ಆಳ್ಗಳನ್ ಎಬ್ಬಟ್ಟುವ ಯತ್ನಕ್ರಮಗತಿಗಳ ಕಾರ್ಯವ ಬಲಿಸು! (Dp. 2). See Grj. 6, 4; Č. Bp. 47, 11.

ಎಬ್ಬ್ರಿಸು ĕbbrisu. = ಎಬ್ಬಿರಿಸು. (My.).

ಎಬ್ರಾಸಿ ĕbrâsi. = ಎಬಡ, ಏಬ್ರಾಸಿ. A foolish, silly man (C.; Tu. ಎಬುಳನ್ತೆ; Tĕ. ಎಬ್ಬೆರಾಸಿ, ಎಬ್ರಾಸಿ, ಏಭ್ರಾಸಿ, ಏಭ್ಯರಾಸಿ; Tĕ. ಎಬ್ಬೆ, ಏಭ್ಯ, nasty; ಎಬ್ಬೆತನ, ಎಬ್ಬೆರಿಕ nastiness, disgust; loathsomeness; ಏವ, ಏವೆ, dislike, disgust; baseness, vileness, *cf.* ಏಸಿಕೆ).

ಎಮ್ ĕm. 1. = (ಎಮ್ಮ), ಎವ್, ನಮ್. The form which is used for the formation of the plural of ಆಂ 1, q. v. *Cf.* ಎನ್ 2. ಎಮ್ಮುಮಂ (Abh. P. 9, 46). — ಎಮ. = ಎಮ್ಮ. Of us, our. — ಎಮಗಿಬ್ಬರಿಗೆ. -ಇಬ್ಬರಿಗೆ. To both of us (Bp. 40, 15; 45, 5). — ಎಮತು. -ಅತು. = ಎಮತ್ತು, ಎಮ್ಮತು, ಎಮ್ಮದು, ಎಮ್ಮುತು. That of us, ours (Šmd. 178-180; Kk. 61). — ಎಮತ್ತು. -ಅತ್ತು 1. = ಎಮತು, etc. — ಎಮ್ಮ. = ಎಮ. ಎಮ್ಮಯ (= ಎಮ್ಮಯೆ, Bp. 39, 59). — ಎಮ್ಮತು. -ಅತು. = ಎಮತು, etc. — ಎಮ್ಮದು. -ಅದು 1. = ಎಮತು, etc. — ಎಮ್ಮನಿರ್ಬರನು. -ಇರ್ಬರನು. Both of us (accusative; Bp. 42, 34). — ಎಮ್ಮನಿಬರನು. -ಇನಿಬರನು. All of us here (accus.; Bh. 1, 8; 57). — ಎಮ್ಮುತು. -ಉತು. = ಎಮತು. ಎಮ್ಮುತಯ್ವರುಂ (Šmd. 180).

ಎಮ್ ĕm. 2. = ಎಣ್. Eight. — ಎಮ್ಬತ್. = ಎಮ್ಬತ್ತು. See ಎಮ್ಬತೆಣ್ಬು. — ಎಮ್ಬತೆಣ್ಬು. = ಎಮ್ಬತ್ತೆಣ್ಬು. (Ch. v. 326. 329; My.). — ಎಮ್ಬತ್ತು. -ಪತ್ತು. Eighty (C.). ಎಮ್ಬತ್ತು ವರುಷಂಗಳು (Bp. 27, 62). — ಎಮ್ಬತ್ತು ಸಾವಿರ. Eighty thousand. ಎಮ್ಬತ್ತು ಸಾವಿರ ಕುದುರೆಗಳಿಗೆ (Bp. 44, 51). — ಎಮ್ಬತ್ತೆಣ್ಬು. -ಎಣ್ಬು. Eighty-eight (C.). — ಎಮ್ಬತ್ತೆಣ್ಬು ಕೋಟಿ. Eighty-eight crores. ಎಮ್ಬತ್ತೆಣ್ಬು ಕೋಟಿ ಧನ (Bp. 5, 57). — ಎಮ್ಬತ್ತೆರಡೂ ಕಾಲು. -ಎರಡೂ-. Eighty-two and a quarter (My.; B. 4, 100).

ಎಮ್ ĕm. 3. = ಅಮ್, ಎನ್ 1, etc. See ಎಮ್ಬ, ಎಮ್ಬು 1.

ಎಮ ĕma. Well! indeed! (ಅಂಗೀಕಾರಾರ್ಥ Šmd. 69). ನಿಮಗೆ ಅಕ್ಕೆ, ಎಮ, ಅಬ್ಜಗರ್ಭನ ಆಯುಂ ಶ್ರೀಯುಂ! (Šmd. 69). ಸಿಂಗರಮ್ ಅಕ್ಕೆ, ಎಮ! ಅಂಜಂ (69). ಆತಂ ಮೇಣ್ ಸುರನ್ ಅಕ್ಕೆ, ಎಮ! (83). ಎಲ್ಲಂಗಮ್ ಎಲ್ಲ ಧನಮುಮನ್ ಎಲ್ಲ ಎಡೆಯೊಳಮ್ ಎಲ್ಲ ತೆಱದೊಳಂ ಕುಡುಗೆ, ಎಮ! (183).

ಎಮ ĕma. Tbh. of ಯಮ (Nn. 92; My.).

ಎಮುಕೆ ĕmakĕ. = ಎಮಿಕೆ 1. (My.).

ಎಮಿಕೆ ĕmikĕ. 1. A bone (My.; Tĕ. ಎಮಿಕೆ, ಎಮುಕ; *cf.* ಎಲು, etc.).

ಎಮಿಕೆ ĕmikĕ. 2. = ಹೆಮಿಕೆ. A small golden ornament with pearls worn by women in the tragus of the ear (My.; *cf.* ಹೇಮ?).

ಎಮೆ ĕmĕ. = ಇಮೆ, ಎವೆ. An eyelash (ಪಕ್ಷ್ಮನ್ Hlâ.); an eyelid (My.). ಕಣ್ಣೆಮೆ (ವರ್ತ್ಮನ್ Hlâ.). — ಎಮೆ ಇಕ್ಕು. To shut the eyelids. ಸಮದೃಷ್ಟಿಯಾಗಿ ಸಿಲ್ಕಿದುವು, ಎಮೆಯಿಕ್ಕಲ್ ಮಱೆದುವು ಅವಳ ಧವಲಕಟಾಕ್ಷಂ (Šmd. 264). — ಎಮೆದುಱುಗಲ್. -ತುಱುಗಲ್. A large number of eyelashes or eyelids (Abh. P. 11, 184).

ಎಮ್ಪಲಿ ĕmpali. The name of a tree (R.; Tĕ. ವೆಮ್ಪಲಿ, a small wild shrub with a leaf resembling that of the tamarind, the purple Galega).

ಎಮ್ಬ ĕmba. = ಅನ್ಬ 1. See s. ಎನ್ 1.

ಎಮ್ಬು ĕmbu. 1. = ಅಮ್ಬು 4. To say, etc. (without the past tense and negative form). ಎಮ್ಬುತ್ತದೆ, ಎಮ್ಬುವಣ, ಎಮ್ಬುವನ, ಎಮ್ಬೋಣ (My.). ಎರಡಂ ಬೆರಸಿ ಒನ್ದೆ ಎಮ್ಬುವದು ಅದಾಗದು (Bp. 3, 72). ಬಲ್ಲೆನೆನ್ದು ಎಮ್ಬುವರು ಎಲ್ಲರು ಹಿರಿಯರೇ? (Sp.). ಎಮ್ಬುವ ಹಾಗೆ (Si. 68). ಎಮ್ಬುವ (Si. 88. 99. 152. 168. 227. 329; B. 3, 1. 4. 26; 4, 155; 5, 193). ಎಮ್ಬುವದಾಗಿ (= ಎಮ್ಬದಾಗಿ G.). Frequently in proverbs, *e. g.* ಅಱುಯೆ ಎಮ್ಬುವದು ಆನೆಯ ಕೊಟ್ಟು ಕಲಿ! — (*Cf. e. g.* ಉಮ್ಬು, ಕೊಮ್ಬು, ತಿಮ್ಬು).

ಎಮ್ಬು ĕmbu. 2. = ಇಮ್ಬು 3. — ಎಮ್ಬು ಕೆಯ್. = ಇಮ್ಬು-. To assent (ಅನುಮತ Šmd. Dh.; ಅಪ್ಪು ಕೆಯ್, ಅಂಗೀಕಾರ Kk. 59).

ಎಮ್ಬುವಿಕೆ ĕmbuvikĕ. Saying, etc. (Si. 253. 453).

ಎಮ್ಮ ĕmma. See s. ಎಮ್ 1.

ಎಮ್ಮು ĕmmu. (= ಎಮ್ 1). — ಎಮ್ಮುಮಂ. Us; (or: also us, us too (see ಉಮಂ 2). Bp. 2, 18; 3, 57; 4, 67; 10, 43. 45; 13, 25; 24, 34; 28, 38; 30, 19; 32, 46; 39, 43; 46, 15; 55, 33; Č. Bp. 47, 18.

ಎಮ್ಮೆ ĕmmĕ. 1. A female buffalo (ಕಾಸರಿ, ಮಹಿಷಿ Mr. 184; C.; T. ಎರುಮೈ, M. ಎರಿಮೆ, ಎರುಮೆ, Tu. ಎರ್ಮೆ; Tĕ. ಎನು, a he-buffalo, ಎನುಮು, a she-buffalo). ಎಮ್ಮೆಯ ಕೋಡು (ಗವಲ); ಹಸು ಎಮ್ಮೆ ಮೊದಲಾದುವೆಲ್ಲಂ ಜೀವಧನಮ್ ಎಮ್ಬುದು (Hlâ.). ಆವು ಎಮ್ಮೆ ಮೊದಲಾದವೆಲ್ಲಂ (ಪಾದಬನ್ಧನ Nr.). ಕಾಡೆಮ್ಮೆ (J. 28, 52). ಕಱುವದು ಒನ್ದೆರಡೆಮ್ಮೆ (Dp. 4). ಎಮ್ಮೆಯ ಮೇಲೆ ಮಱುಗಿದ ಹಾಗೆ. — ಎಮ್ಮೆ ಕಱುತೋ? ಪುಣ್ಯ ಕಱುತೋ? — ಎಮ್ಮೇ ಕಱು ಸಾಯ ಬೇಕು, ಹಿರೇ ಮಗಳ ಗಣ್ಡ ಸಾಯ ಬೇಕು (Prvs.). — ಎಮ್ಮೆ ಗಿಮ್ಮೆ. reit. ಎಮ್ಮೆ ಗಿಮ್ಮೆ ತನ್ದರೆ ಗಿನ್ದರೆ ತವರ

ಮನೆಗೆ ಕೊಟ್ಟೇಯಾ? ನನಗೆ ಇಕ್ಕೀಯಾ? (Prv.). — ಎಮ್ಮೆಚೇಱು. A large black scorpion (My.; ವೃಶ್ಚಿಕ, ಶೂಕಕೀಟ Nr.; *cf.* ಎಲೆಚೇಱು). — ಎಮ್ಮೆದಾಣ್ಡೆಗ. The spotted billed duck, Anas poecilorhyncha (Bd.). — ಎಮ್ಮೆವೋರಿ. -ಹೋರಿ. A male buffalo-calf (Abh. P. 4, after 54; 13, 53. 78). — ಎಮ್ಮೆವಳ್ಳಿ. -ಬಳ್ಳಿ. The plant Convolvulus argenteus (ವ್ಯಾಲಿ, ಕೋಠರ ಪುಷ್ಪ Mr. 148).

ಎಮ್ಮೆ ĕmmĕ. 2. = ಹೆಮ್ಮೆ. (My.).

ಎಯ್ ĕy. 1. About this syllable see ಅಯ್ 1.

ಎಯ್ ĕy. 2. (ಎಯ್ಯು). = ಎಯ್ಯಿ, ಏದು 1. A porcupine (T. ಎಯ್, M. ಎಯ್ಯಲ್, Tu. ಎಯಿ; see ಇಸು 3, ಏಯ್). — ಎಯ್ಯ ಮುಳ್ಳು. A porcupine's quill (ಶಲಲ, ಶಲ Hlâ., Nr.). — ಎಯ್ಯ ಮೃಗ. A porcupine (ಶ್ವಾವಿಧ್, ಶಲ್ಯ Nr.; ಶಲ ಲ, ಶಲ್ಯಕ Mr. 164).

ಎಯ್ಯಿ ĕyyi. = ಎಯ್, etc. (ಶಲಲ, ಶಲ್ಯಕ, ಶ್ವಾವಿಧ್ Hlâ.).

ಎರ್ ĕr. = ಎಡ್, etc. See ಎರ್ಡು.

ಎರ ĕra. 1. = ಎಗಱೆ No. 1, etc. The jujube, Zizyphus jujuba Lam. ಎರನು (ಕುವಲ Nr.). — ಎರದ ತರು. (ಕರ್ಕ ನ್ಧು, ಬದರಿ, ಕುವಲಿ Mr. 113). — ಎರದ ಪಣ್. (ಕಾಲ Mr. 520). — ಎರದ ಮರ. (ಘೋಣ್ಟೆ, ಕೋಲಿ, ಬದರಿ, ಕರ್ಕನ್ಧು Nr.). — ಎರ ದ ಹಣ್ಣು. (ಕೋಲ, ಬದರ, ಕುವಲ, etc. Nr.).

ಎರ ĕra. 2. = ಎರವು q. v., etc. (My.).

ಎರ ĕra. 3. (or ಎಱ?). = ಎರಕ (?). — ಎರಕೋಲು. The iron axle of a carriage (S. Mhr.). *Cf.* ಇರಸು.

ಎರಕ ĕraka. (or ಎಱಕ, fr. ಎಱ್ 2?). Any metal infusion (My.; Tu.; T. ಉರುಕ್ಕು; M. ಉರುಕ್ಕ, melting; ಉ ರುಕ್ಕು, what is melted; fused metal; T., M. ಉರುಕ್ಕು, Tu. ಎರಗು, to melt); molten state, fusion (My.). ಎರಕದ್ದು, any cast thing (C.). — ಎರಕ ಹೊಯಿ. To pour melted metal into a mould, to cast (My.). ಎರಕ ಹೊಯಿದರೂ ನರಕ ತಪ್ಪದು (Prv.).

ಎರಕಲ ĕrakala. — ಎರಕಲಕಾಮ್ಬೋದಿ. A tune so called (My.).

ಎರಕೆ ĕrakĕ. Tbh. of ಏರಕಾ. ಅಸ್ತ್ರಾವಳಿ ಸವೆಯಲ್, ಎರಕೆಗಳ ಲಿ ಇಟ್ಟಾಡಿದರು (Bhâgavata 3, 2, 48).

ಎರಡು ĕraḍu. = ಎರಟ್, ಎರ್ಡು. Two (ಉಭಯ, etc. Mr. 434; ಯುಗ Nn. 84; ಯುಗ, ದ್ವಿತಯ 90; ದ್ವನ್ದ್ವ, ದ್ವಿತಯ 91; ನೀವಿ, ಯುಗ್ಮ 105; ಅಮಳ್, ಜುಗಮು, ಜವಳ Kk. 60; C.; T. ಇರಣ್ಡು, Tĕ. ರೆಣ್ಡು, Tu. ರಡ್ಡು; see ಇಕ್; ರಟ್ಟಿಸು). ಒನ್ದು ಎರಡು ಮೂಱು (Šmd. 54; see 10. 19. 32. 46. 60. 197. 214. 221. 377. 388; Bp. 40, 73; 51, 20). ಎರಡು ಹಸುವಂ ಗೋಯುಗಮ್ ಎಮ್ಬುದು (Hlâ.). ಎರಡು (= ಎರಡೂ) ಕೆಯ್ಯನು ಬಲಿದು (Bh. 1, 10, 33). ಎರಡಱಲ್ಲಿ (Šmd. 32 Cm.). ಎರಡಱಲಿ (Bp. 35, 32). ಎರಡಱ (Šmd. 91). ದನ್ತಮ್ ಎರಡಱ ನಡುವು (ಪ್ರತಿಮಾನ Mr. 155). ಎರಡಱೊಳ್ (Kk. 95). ಎರಡಱೊಳಂ (Šmd. 62). ಎರಡಂ (150). ಎರಡರ್ಕೆ; ಎರಡಕ್ಕೆ (Bp. 58, 47). ತೋಳನ್ ಎರಡಂ ನೀಡು ವನು (Bp. 47, 29). ಎರಡುಂ (38, 43. 54). ಎರಡುಮನ್ ಈಸಿ ಕೊಣ್ಡು (50, 36). ಎರಡುಮಂ ಕೂಡಿ ನಡೆಸುವಡೆ (53, 13). ಎರಡು ದಾಸರಿಗೆ ನಮ್ಬಿ, ಕುರುಡ ದಾಸ ಕೆಟ್ಟ (Prv.). — ಎರಡಕ್ಕೆ ಹೋಗು. To go to void excrement (C.). — ಎರಡನೆಯ. -ಅನೆಯ. Second in place, time, rank, etc.; a second, a perfect (as a perfect Alexander; My.). ಒನ್ದನೆಯಂ, ಎರಡನೆಯಂ (Šmd. 243). ಎರಡನೆಯ ವರ್ಣಂ (371). ಸರಸತಿಗೆ ಎರಡನೆಯ ಬೀಣೆ ಎನೆ ಸೌಭಾಗ್ಯಂ (408). ಎರಡನೆಯ ಭಾಲಾಮ್ಬಕ (Bp. 53, 69). ಎರಡನೆಯ ಮುಕ್ಕಣ್ಣ (1, 8). ಎರಡನೆಯ ಶಂಕರ (1, 61). ಎ ರಡನೆಯ ತಮ್ಬು (10, 43). ಎರಡನೆಯ ತಮ್ಬುದ್ವೀಪ (2, 6). ಎರಡ ನೆಯ ಶಿವ (2, 38). ಎರಡನೆಯಿಶ್ವರ (2, 19). ಎರಡನೆಯ ದಿನಮಣಿ (J. 28, 7). 2, other, different. ಎರಡನೆಯವ (B. 1, 6; 2, 33. 44). ಎರಡನೆಯ ಹಕ್ಕಿ (2, 6). ಎರಡನೆಯ ದಾರಿಕಾಱ (2, 14). ಎರಡನೆಯ ಪ್ರಾಣಿ (3, 10). ಎರಡನೆಯ ಯಾವದಾದರೊನ್ದು ವಸ್ತು (3, 91). ಎರಡನೆಯ ಪಾರಿವಾಳ (3, 113). ಎರಡನೆಯದು (4, 19). ಎರಡನೆಯ ಸ್ಥಳ (4, 157). ಎರಡನೆಯಾಕೆ (5, 283). ಎರಡನೆಯ ಸೇವಕ (5, 285). — ಎರಡಮ್ಬಗೆ. -ಬಗೆ. To think of or intend two different things: to play tricks, to act deceitfully. ಕೂಡಿದಂಗೆ ಎರಡಂ ಬಗೆವಾತನುಂ ನರಕದೊಳ್ ಬೀಳ್ವಲ್ಲಿಗೆ ಏಂ ಸನ್ದ ಯಂ? (Šmd. 89). — ಎರಡಯಿದು. -ಅಯಿದು. Ten (My.). ಎರ ಡಯಿದು ತಿರದ ಅಸುರಪತಿಗೆ (Bp. 53, 19). 2, seven (My.). 3, two or five (My.). — ಎರಡಯ್ದು. -ಅಯ್ದು. = ಎರಡಯಿದು. ಎ ರಡಯ್ದು or ಎರಡಯ್ದುಗಳ್ (Šmd. 170). — ಎರಡಷ್ಟು. -ಅಷ್ಟು. Twice as much (B. 4, 116). — ಎರಡಾಗು. -ಆಗು. To become separated, to be divided (Bp. 32, 36; 42, 2; Ršv. 13, 83). — ಎರಡಾನುಂ. -ಆನುಂ. (Šmd. 391). Howsoever two, at least two; about two. — ಎರಡಿಡು. -ಇಡು. To form or become two companies. ಇದಿರ್ಚ, ತದ್ಬಲಮ್ ಎರಡಿಟ್ಟು, ತಗ್ಗು, ಅಡಸಿ, ಬೊಬ್ಬಿಱಿದು, ಅಡಿದುದು; ಏನನ್ ಎನ್ದಪೆಂ? (Ršv. 13, 88). — ಎರಡು ಎರಡುವರೆ. Two or two and a half (B. 4, 35; My.). — ಎರಡು ಜಾತಿಗಳು. Two castes (Bp. 55, 19). — ಎರಡು ಜೀವದವಳು. A pregnant woman (My.). — ಎರಡು ತ ಲೆಯ ಉರಿಸಿಂಗಿ. See ಉರಿಸಿಂಗಿ. — ಎರಡು ತಲೆಹಾವು. = ಇತ್ತಲೆ ಗುಯ್ಯ, ಇತ್ತಲೆಹಾವು, ಇರ್ತಲೆಹಾವು. (Bd.; My.). — ಎರಡು ನಾಲಿ ಗೆಯವ. A double-tongued, deceitful man, a liar (C.). — ಎರಡು ನುಡಿ. To speak two things: to be insincere, malevolent or fault-finding. ಎರಡು ನುಡಿವಂ (ಪುರೋಭಾಗಿ, ದ್ವಿಜಿಹ್ವ Mr. 230). — ಎರಡು ಬಗೆ. 1. = ಎರಡಮ್ಬಗೆ. (My.). See Prv. s. ಕರೆ 1; Dp. 5, 7. — ಎರಡು ಬಗೆ. 2. Two ways, manners, notions or opinions (Bp. 32, 17). — ಎರಡು ಮಾಡು. To split, to tear asunder, etc. ಎರಡು ಮಾಡೋಣ (ವಿದರ G.). — ಎರಡು ಮೂಱು. Two or three (B. 2, 46; 3, 11); etc. — ಎರಡು ಮೂಱುಂ. Two and three (= 5 ಸುರಮಹೀಜ, Bp. 5, 64). — ಎರಡುವರೆ. -ಅರೆ. Two and a half (My.; B. 3, 103). — ಎರಡು ಸಾವಿರ. Two thousand. ಎರಡು ಸಾವಿರ ಬೌದ್ಧರ (Bp. 50, 18). ಎರಡು ಸಾವಿರದ ಮುನ್ನೂಱು ವರುಷಗಳ (B. 4, 218). — ಎರಡು ಸಾಸಿರ. = ಎರಡು ಸಾವಿರ. ಎರಡು ಸಾಸಿರ ರಸನೆಯುಳ್ಳವ, he with two thousand tongues: Mahâšêsha (Bp. 1, 9). — ಎರಡು ಹೊತ್ತು. Morning and evening (S. Mhr.). — ಎರಡೂ. -ಊ 7. Also two; the very two, the two, both. ನನ್ನ ಎರಡೂ ಕಾಲುಗಳು ಹೋದವು (B. 3, 124). ಆ ಟೊಂಗಿಯನ್ನು ಎರಡೂ ಕೆಯ್ಲಿ ಗಟ್ಟಿಯಾಗಿ ಹಿಡು ಕೊಣ್ಡು (4, 38). ಎರಡೂ ಬಾಯಿ, the two or both openings (4, 158). ಎರಡೂ ಮೆಯ್, even on both sides (4, 103). — ಎರಡೂವರೆ. = ಎರಡುವರೆ. (B. 4, 103. 125; My.). — ಎರಡೆರಡು. rep. Two and two, *i. e.* four; or: two times two. ಎರಡೆರಡು ರಸನೆಯುಳ್ಳವ, he with four tongues: Brahmâ (Bp. 1, 9). 2, two and two, in a distributive sense. ಎರಡೆರಡು ಅವಱೊಳ್ ಸವರ್ಣಂ (Šmd. 13). ಎರಡೆರಡು ಒನ್ದಾಗಿ ಪತ್ತುವುವು (255). ಆ ಎರಡೆರಡು ಅಕ್ಷರಂಗಳಲ್ಲಿ (ಆ ಯುಗಂ ಗಳೊಳ್ 15 Cm.). ಎರಡೆರಡಾಗಿ (ಯುಗಲತೆ 255 Cm.). ಎರಡೆರ ಡು ಮಾಸಂ ಕೂಡಿದೊಡೆ ವಸನ್ತ, ಗ್ರೀಷ್ಮ, etc. ಎನು ಆಱುಂ ರುತುಗಳ್ ಅಕ್ಕು (Hlâ.). ದೇವರು ಎಲ್ಲರಿಗೂ ಎರಡೆರಡು ಕಣ್ಣುಗಳನ್ನು ಕೊಟ್ಟ ದ್ದಾನೆ (B. 4, 168). See B. 3, 3. 106; Bp. 46, 35.

ಎರಣ ĕraṇa. The dung of a calf (ಕಱುವಿನ ಸಗಣ Šm. 33; -ಸೆಗಣ Kk. 69; ಕಱುವಿನ ಸೆಗಣಿ Šs.; *cf.* ಎಣ್ಡೆ, ಎರುಬು).

ಎರದು ĕradu.=ಎರೆದು. P. p. of ಎರೆ 4.

ಎರಪು ĕrapu.=ಎರವು. (My.).

ಎರಲ್ ĕral. 1.=ಎರಳ್ 1, ಎಲರ್, ಎಲಲ್. (Šmd. 41). Wind, air (ಅನಿಲ Kk. 16; Šm. 13).

ಎರಲ್ ĕral. 2. ಎರಲು.=ಎರಳ್ 2, ಹೆರಲ್, ಹೆರಳ್. The braided or plaited hair of females (My.).

ಎರಲ್ ĕral. 3. Playing, dancing, or frisking about. ಎರಲೆಸ್ದು ದಿಂಕೆಸ್ದು ಗೊಣ್ದುಗಳೊಳ್ ಬಿನದಿಪಾಟಂ (Šs.).

ಎರಲೆ ĕralĕ.=ಎರಳೆ. An antelope, a deer (My.; T. ಇರಲೈ, Tĕ. ಲೇಡಿ). ಪುಲಿ ಕರಡಿ ಎರಲೆ (Šmd. 129). ಆ ಎರಲೆ ಪೋನುವು (129). See Bh. 1, 20, 51; J. 28, 52. — ಎರಲೆ ಗುಬುಪ. -ಕುಱುಪ. = ಎರಳೆಗುಱುಪ. — ಎರಲೆವಕ್ಕಿಗ. -ಪಕ್ಕಿಗ. The moon (Čt. I, 107; II, 6).

ಎರವ ĕrava. See s. ಎರೆ 4.

ಎರವಣಿಗ era2-vaṇiga. A man who borrows. ಗಣ್ಡಿಗನ್ ಎರವಣಿಗಂ ಸರವಣ್ಣಿಗಂ ಪಟ್ಟಸಾಲಿಗಂ (Šmd. 233; Kâvy. I, 4, 2).

ಎರವಲ್ ĕraval. -ಲು.=ಎರವು. (Bp. 51, 20; My.).

ಎರವಿಗ ĕraviga.=ಎರವಣಿಗ. (My.).

ಎರವು ĕravu. (fr. ಎರೆ 4).=ಎರ 2, ಎರಪು, ಎರವಲ್. (Šmd. 247). That is asked for or desired: an object of desire. 2, a thing which one desires to borrow;—a thing borrowed (for temporary use, as a book, a chair, etc.; C.; ಸಿರಿ Nn. 150; T. ಇರವಲ್; M. ಇರವು; Tĕ. ಎರುವು, ಎರುವಲೆ). ಎರವಿನಲ್ಲಿ (Nn. 150). ಎರವುಗಳು (Bp. 40, 58). ಎರವಿನ ಚಿನ್ನಾ ಧರಿಸಿ, ತಾನೂ ಅರಸಿ ಎನ್ದಳು.—ಎರವು ನಮ್ಬಿ, ನಿಜಾ ಮಱತ.—ಎರವು ಸಿರಿಯಲ್ಲ, ಬಾವು ಡೊಳ್ಳಲ್ಲ, ನೆರಮನೆಯಕ್ಕನ ಗಣ್ಡ ಬಾವನಲ್ಲ (Prvs.). See Rsv. 1, 36; 11, 165. 3, the state of borrowing from one another: distant relationship, deficient affection or love (J. 2, 54; 4, 54; 26, 58);—difference, discordance; the state or quality of being adverse, hurtful or detrimental, that of impairing, damaging or endangering; deficiency; harm. ಅಫುವಿನ ವ್ಯಸನದ ಸಲುವಾಗಿ ಪ್ರಾಣಕ್ಕೆ ಸಹ ಎರವಾಗುತ್ತಾರೆ (B. 4, 41; My.). ತಮ್ಮ ಜೀವಿತಕ್ಕೆ ಸಹ ಎರವಾಗುತ್ತಾರೆ (4, 60; My.). ಸ್ವಾಭಾವಿಕಮಯ್ಲ್ಲಿ ಏಟಿಬವದಟಿನ್ದ ಎಷ್ಟೋ ಜನರು ಪ್ರಾಣಕ್ಕೆ ಎರವಾಗುವದು! (4, 223; My.). ತನ್ನ ರೈತರಿಗೆ, ಗುಡ್ಡದೊಳಗೆ ಹೋಗಿ ಇರ ಬೇಕು, ಇಲ್ಲದಿದ್ದರೆ ಜೀವಕ್ಕೆ ಎರವಾದೀರಿ ಎನ್ದು, ಅಪ್ಪಣೆಯ ಕೊಟ್ಟನು (5, 59). ನಿನ್ನ ಜೀವಕ್ಕೆ ಎರವಾದೀತು (C.). See Bp. 1, 29; 61, 68. — ಎರವಿಕ್ಕು. -ಇಕ್ಕು. To grant an object of desire. ಎರವಿಕ್ಕಿದ ಬೆಲ್ಲದ ಪೊಲ್ ಅಪೂರ್ವಮ್ ಆಗೆ ಪೇಟ್ದಿಂ ಕೃತಿಯಂ (Čh. v. 2). 2, to lend one a thing that he wishes to borrow (My.). — ಎರವೀ. -ಈ. = ಎರವಿಕ್ಕು. ಎರವನ್ ಈಯನು (Bp. 60, 15). — ಎರವು ಕೊಡು.=ಎರವೀ. ತಮಗೆ ಮತ್ತೊಬ್ಬರು ಎರವು ಕೊಡ ಬೇಕೆನ್ತ. . . ಅಪೇಕ್ಷೆ ಇದ್ದರೆ (B. 4, 88). ಮಕ್ಕಳನ್ ಎರವ ಕೊಟ್ಟವರ್ ಉಣ್ಟೆ? (Bh. 1, 10, 18). — ಎರವು ತರು. To take a borrowed thing home. ಯಾಚಿತಕವೆನ್ದು ಕೇಳುವದಟಿನ್ದ ಹೊನ್ದಲ್ ಪಟ್ಟದು, ಎರವು ತನ್ದದಕ್ಕೂ ಹೆಸರು (Si. 300). — ಎರವು ಬೇಡು. To ask for what one wishes to borrow: to ask a loan. ಅಮುಗದಲ್ಲಿ ಪಾತ್ರಪಾಡುವಾಗ ಮದ್ದಳೇ ಎರವು ಬೇಡಿದರನ್ತೆ (Prv.). — ಎರವುಮುಟ್ಟು. A thing borrowed; a thing that one desires to borrow. ಎರವುಮುಟ್ಟು ಕೊಡು (= ಎರವಿಕ್ಕು No 2, C.). ಎರವುಮುಟ್ಟು ತೆಕ್ಕೊಳ್ಳು, to borrow (C.). — ಎರವುಮುಯಿಮುಟ್ಟು. Things of borrowing and returning. ಎರವುಮುಯಿಮುಟ್ಟು ಉಣ್ಬು ವಸ್ತೂತ್ಕರದೊಳಗೆ (Bh. 1, 10, 18).

ಎರಳ್ ĕraḷ. 1.=ಎರಲ್ 1, etc. (Šmd. 41).

ಎರಳ್ ĕraḷ. 2. ಎರಳು.=ಎರಲ್ 2, etc. (My.).

ಎರಳೆ ĕraḷĕ.=ಎರಲೆ. An antelope, a deer (masc. and fem.), including e.g. the black and spotted antelopes (ಕಮಲ, ಮೃಗ Nn. 29; ಕೃಷ್ಣ, ಪೃಷತ 47; ಹರಿಣಿ, ಮೃಗ 95; ಮೂರುತಪ್ರೇಮಿ, ಶಮ್ಬರ, ಕೃಷ್ಣ Mr. 163; ಮೃಗ, ಕುರಂಗ, ಹರಿಣ, etc., ಜಂಕೆ Si. 168; ಕುರಂಗಿ, ಕದಲಿ Nr.; C.). ಬೋರೇ ವರ್ಣದ ಎರಳೆ, ಮಚ್ಚೇ ಎರಳೆ (ಕದಲಿ Si. 169). See ಗಣ್ಡೆರಳೆ. — ಎರಳೆಗುಱುಪ. -ಕುಱುಪ. The antelope-marked: the moon (Šm. 16).

ಗೆದಿ gĕdi. = ಗೆಲಿ 1. To conquer; to gain (S. Mhr.; ಜಯಿಸು G.). ಗೆದಿಯಲ್ ಪಟ್ಟ (ಜಿತ); ಗೆದಿಯ ತಕ್ಕದ್ದು (ಜೇಯ); ದಿಕ್ಕು ಗೆದಿಯೋಣ (ದಿಗ್ವಿಜಯ); ಗೆದಿಯುವ ಹವಣಿಕೆ (ದೇವನ); ಪ್ರತಿಜ್ಞೆಯನ್ನೆ ಜೂಜನೊಳಗೆ ಗೆದಿಯೋಣ (ಪಣ); ವೈರಿಯ ಗೆದಿಯುವವನು (ಪರನ್ತಪ G.). P. p. ಗೆದ್ದು.

ಗೆದಿಸು gĕdisu. = ಗೆಲಿಸು. (S. Mhr.).

ಗೆದ್ದಲಿ gĕddali. = ಗೆದಲು, etc. (S. Mhr.). ಱೆಕ್ಕೆ ಬನ್ದ ಗೆದ್ದಲಿ (ಶಲಭ G.).

ಗೆದ್ದಲು gĕddalu. = ಗೆದ್ದಲಿ, etc. (My.). ಗೆದ್ದಲು ಹುತ್ತವಿಕ್ಕೆ, ಹಾವಿಗೆ ಮನೆ ಮಾಡಿತು (Prv.).

ಗೆದ್ದು geddu. = ಗೆಲಿತು, ಗೆಲಿದು, ಗೆಲ್ದು. P. p. of ಗೆದಿ, ಗೆಲ್ಲು. (C.). ಗೆದ್ದರೆ ಕೆಯ್ ಕಾಲು, ಸೋತರೆ ಕಿವಿ ಮೂಗು. — ಗೆದ್ದರೆ ಆಡುವದಕ್ಕೆ ಬನ್ದಿದ್ದೆವು, ಸೋತರೆ ನೋಡುವದಕ್ಕೆ ಬನ್ದಿದ್ದೆವು ಎಮ್ಬನ್ತೆ. —

ಗೆದ್ದರೆ ಹಲವರು ಗೆದ್ದರು, ಸೋತರೆ ಕೊಂಕಣಿಗರ ಗಣ್ಡು ಸೋತ (or ಕೋಮಟಿಗರ ಪೋರ ಸೋತ, Prvs.). ಅರಸನನ್ನು ಗೆದ್ದ ಬಟಿಕ (B. 5, 52). ಕಾಳೆಗದಲ್ಲಿ ಗೆದ್ದವನು (ಧುರಜೈತ್ರ Nn. 94). ಗೆದ್ದವಂ (ಜಿಷ್ಣು Mr. 512).

ಗೆಪ್ತಿ gĕpti. Tbh. of ಜ್ಞಪ್ತಿ. (My.).

ಗೆಬಱು gĕbaṟu. = ಕೆದಱು 1. To scratch, as the ground (S. Mhr.).

ಗೆಬ್ಬು gĕbbu. = ಗೆಬಱು. (S. Mhr.); to loosen a stone, etc. by scratching or digging with the nails (S. Mhr.).

ಗೆಯ್ gĕy. = ಕೆಯ್ 2, etc., ಗೆಯಿ, ಗೆಯು, ಗೆಯ್ಯು, ಗೇ, ಗೈ. To perform, to do; to prepare, to make; to work, to till (ಶಿಲ್ಪ Šmd. Dh.). ಗೆಯಲುಂ or ಗೆಯ್ಯಲುಂ (Šmd. 86). ಗೆಯ್ಯಲಿಂ! (277). ಗೆಯ್ವಂ (267). ಗೆಯ್ದು (66. 133). ಗೆಯ್ದಪುದು (134). ಗೃಹಗರ್ಜನೆ ಗೆಯ್ವವ (ಗೇಹೇನರ್ದಿ, ಗೇಹೇಶೂರ, etc.); ಎನ್ದೂ ಗೆಯ್ಯದ ಭೂಮಿ (ಖಿಲ); ತಡದು ಗೆಯ್ವವನು (ದೀರ್ಘಸೂತ್ರಿ); ಮೆಲ್ಲನೆ ಗೆಯ್ವವ (ಕುಣ್ಠ, etc.); ಹೊಲ್ಲೆಹ ಗೆಯ್ವವನು (ನೃಶಂಸ, etc. Hlâ.). ಗೆಯ್ದ ನೆಲ (ಸೀತ್ಯ, etc., ಉತ್ತ ಭೂಮಿ Si. 301). ವಿಪ್ರಪ್ರಸನ್ನತರ್ಪಣಂಗೆಯ್ (J. 28, 25). See *e. g.* ಅನ್ದ-, ಇಕ್ಕಡಿ-, ಉದಯಂ-, ಏ-, ಒಪ್ಪಂ-, ಕೆಲಸಂ-, ಕ್ಷೇಮ-, ತಪ-, ತುಱಿಲ್-, ದನಿ-, ನಿದ್ದೆ-, ನಿದ್ರೆ-, ಪುಣ್ಯಂ-, ಪೂರಣಂ-, ಪ್ರತಿ-, ಬಿಜಯಂ-, ಬಿನ್ನಪಂ-, ಮುಂ-, ಮುದ್ದು-, ಸಜ್ಜು-, ಸೆಱೆ-, ಹರದು-, etc., etc.; Grj. 1, 133; 10, 116; Bp. 21, 17. — ಗೆಯ್ಯ ಬಲ್ಲಹ. Knowing how to work, etc. (Bp. 9, 46). — ಗೆಯ್ವೊಕ್ಕಲಿಗ. -ಒಕ್ಕಲಿಗ. A husbandman (ಕ್ಷೇತ್ರಾಜೀವ, ಕೃಷಿಕ, ಕುಟುಮ್ಬಿ, etc. Hlâ.).

ಗೆಯಿ gĕyi. = ಗೆಯ್, etc. (My.). ಆಲೋಕನ ಗೆಯಿದು (Bp. 44, 8). ಮೊದಲು ಬಿತ್ತಿ ಬಟಿಕ ಗೆಯಿದ ಕ್ಷೇತ್ರ (ಬೀಜಾಕೃತ, etc Si. 301). See ಬಿಜಯಂ-.

ಗೆಯಿಸು gĕyisu. = ಕೆಯ್ಸು, etc. See ಬಿಜಯಂ-.

ಗೆಯು gĕyu. = ಗೆಯಿ, etc. See ಏ-.

ಗೆಯ್ತ gĕyta. = ಕೆಯ್ತ.

ಗೆಯ್ಮೆ gĕymĕ. = ಕೆಯ್ಮೆ. ಅವಗಂ ಗೆಯ್ಮೆಯಿಲ್ಲದ ಇಳೆ (ಖಿಲ Mr. 92).

ಗೆಯ್ಯು gĕyyu. = ಗೆಯು, etc. ಶೋಕವನು ಗೆಯ್ಯುವರು ಸತಿ ಸುತರು ಬಾನ್ಧವರು (Dp. 1).

ಗೆಯ್ಸು gĕysu. = ಗೆಯಿಸು, etc. To cause to perform, etc. ಗೋತ್ರವಧೆ ಗೆಯ್ಸಿ (J. 2, 21). ಉಲ್ವ ಉದಕವು ಜ್ಜನಂ ಗೆಯ್ಸಿ (28, 20). See ಪ್ರಸನ್ನಂ-.

ಗೆರಸೆ gĕrasĕ. = ಕೆರಸೆ, etc. (My.; see Prvs. s. ದೋಳು). 2, = ಗರಸೆ. (R.; Tĕ. ಗರಿಸೆ). — ಗೆರಸೆಬಾಯಿಯವ. = ಕೆರಸೆ-. (My.). — ಗೆರಸೆಬಾವಿ. A basket-well, a well made with rings of wicker (R.; Tĕ.).

ಗೆರಿಸೆ gĕrisĕ. = ಗೆರಸೆ No. 1. (My.).

ಗೆರೆ gĕrĕ. (fr. ಕೆರೆ 1). A scratch, as with a finger-nail or a chisel (My.); a line; a streak (ರೇಖೆ Čt. I, 48; Mr. 332; Šm. 16; C.; Si. 327; Tĕ. ಸೆರೆ, ಸೆಲೆ; T. ಕಿಱಿ, a scratch; a line). ಕಣ್ದುಡಿಗೆ ಶೋಭಿಸುವ ಗೆರೆ (ಸೋಗೆ Šm. 72, o. r. ಗೆಱೆ). See J. 11, 24; B. 3, 30. 97; 5, 30. 169; ಕೊಂಕು-, ಸಯ್ತು-. — ಗೆರೆ ಹಾಕು. To mark with lines by a ruler, to rule (My.). 2, to make a sign in the form of a line, to mark (My.); to draw a line over, to blot out (My.).

ಗೆರೆಸೆ gĕrĕsĕ. = ಗೆರಸೆ No. 1, etc. (My.). ಶೀರು ಮುಗಿಚಿ ಚಲ್ಲುವ ಗೆರೆಸೆ ಮುನ್ತಾದದು (ಸೇಕಪಾತ್ರ, ಸೇಚನ Si. 85).

ಗೆಱ gĕṟa. (= ಗೀಱು 2; Te. ಗೀಱು, ಗೆಱೆ; see Šm. 72 s. ಗೆರೆ). — ಗೆಱ ಬಾಱು. dupl. The state of being full of scratches, as a vessel (My.).

ಗೆರ್ದೆ gĕrdĕ. — ಗೆರ್ದೆವಾಯ್. Mdb. MS.'s reading of ಎರ್ದೆ-.

ಗೆರ್ಬು gĕrbu. To have sexual intercourse (ಮೈಥುನ Šmd. Dh.; M. ಚೆರಿ, to turn, bow; to be bent; to recline; ಚೆರಿವು, reclining; *cf.* ಗೆಲ್ 2?).

ಗೆಲ್ gĕl. 1. = ಗೆದಿ, ಗೆಲಿ 1, ಗೆಲು 1, ಗೆಲ್ಲು. To win, to gain; to overcome, to conquer; to triumph. (T. ಕೆಲಿ, ವೆಲ್ಲು; M. ವೆಲ್ಲು; Tĕ. ಗೆಲುಚು). P. ps. ಗೆಲ್ದು (Šmd. 122; Bp. 37, 24), (ಗೆದ್ದು, q. v.). ನೆರೆದ ಅರಸುಗಳನ್ ಅನಿಬರುಮಂ ಗೆಲ್ದನ್ ಒರ್ಬನೆ ಪಾರ್ಥಂ (Šmd. 122). ಜನಪನ್ ಆ ದಾಯಿಗನ ಮಱುಜೂಜಿನಲಿ ಗೆಲ್ದನು ಧರೆಯಂ (Râm. 26, 25). ಗೆಲ್ದವ (ಜಿತಕಾಶಿ, ಜಿತಾಹವ Hlâ.). ಸಸಿನೆ ಗೆಲ್ದವ (ಜಿತಾಹವ Mr. 300). ಗೆಲಲ್ ಬನ್ದಂ (Šmd. 277). ಗೆಲಲ್ ಇನ್ನಾರ್ ಅರ್ಪರ್? (292). ಗೆಲ್ಗುಂ (267). ಗೆಲ್ವ ರಥ (ಜೈತ್ರರಥ Mr. 285). See Šŝv. 4, 64. 128; J. 2, 4.39; 6 sum. — ಗೆಲ ನುಡಿವವಂ. = ಗೆಲೆ ನುಡಿವವನು. (ಪ್ರಸಕ್ತ, ಪ್ರಶ್ರಿತ Mr. 237). — ಗೆಲಲ್ ಪಡೆ. = ಗೆಲ್. (Čpr. 1, 27). — ಗೆಲೆ ನುಡಿವವನು. A man who speaks so as to win (the heart of another), a well-behaved man (ಪ್ರಸಕ್ತ, ಪ್ರಸೃತ Hlâ.). — ಗೆಲೆವರ್. -ಬರ್. To come to conquer, etc. (Abh. P. 3, 40; 5, 54. 107; 15, 19; Rŝv. 4, 69; V. 4, 36). — ಗೆಲೆವೊನ್ದು. -ಪೊನ್ದು. To meet for overcoming, to resist (ತಳ್ವೊಯ್, etc., ಪ್ರತಿಹತ Šs.).

ಗೆಲ್ gĕl. 2. = ಗೆಲಿ 2, ಗೆಲು 3. To bring into contact with, to apply to (the body, as a fragrant substance, J. 11, 41; see ಕಿಡು 1, ಗಡೆ 2, ಗೆಡೆ 1).

ಗೆಲ gĕla. = ಗೆಲವು. ಗೆಲಮೆನೆ ಜಯ (Čt. I, 83; *cf.* ಗೆಲ್ಲ).

ಗೆಲವು gĕlavu. (Šmd. 247). = ಗೆಲ, ಗೆಲು 2, ಗೆಲುವು, (ಗೆಲ್ಲ). Gain; victory (ವಿಜಯ, ಜಯ Nr.; C.; Tĕ. ಗೆಲುಪು; M. ಕೆಲ್ಪು, T. ಕೆಲ್ಪು, strength, power). 2, a winning, happy, sprightly air (C.). — See Bp. 6, 3; 32, 17; 42, 14; 49, 23; 52, 42; Bh. 1, 8, 40; J. 12, 26; 14, 9; 23, 31. 48; 27, 9; Šŝv. 2, 14; ಸೋಲು-. — ಗೆಲವು ಸೋಲು. Gain and loss (C.).

ಗೆಲಿ gĕli. 1. = ಗೆಲ್ 1, etc. (C.). P. ps. ಗೆಲಿತು, ಗೆಲಿದು. See Bp. 9, 51; 12, 26; 27, 28; 41 sum.; 43, 15; 44, 60; 49, 24; 50, 14. 34. 76; 52, 32; Bh. 2, 4, 5. 7; 2, 13, 46; Prll. 3, 5.

ಗೆಲಿ gĕli. 2. = ಗೆಲ್ 2, etc. (Bh. 10, 5, 41).

ಗೆಲಿತು gĕlitu. P. p. of ಗೆಲಿ 1. (My.).

ಗೆಲಿದು gĕlidu. (= ಗೆದ್ದು, etc.), ಗೆಲಿತು.

ಗೆಲಿಸು gĕlisu. = ಗೆದಿಸು, ಗೆಲ್ಲಿಸು. To cause to win, etc. (C.; Bp. 59, 55).

ಗೆಲು gĕlu. 1. = ಗೆಲ್ 1. (C.). P. p. ಗೆದ್ದು (C.). ಗೆಲುವವನು (ಜೈತ್ರ, ಜೇತೃ Nr.). ಗೆಲುವ ರಥಂ (ಜೈತ್ರರಥ Hlâ.). ಅವನಾನೊಬ್ಬನು ಹಗೆಯ ಗೆಲಲು ಸಮರ್ಥನಾಗಿ ಇದಿರಾಗ ನಡೆದಾನು, ಅತನು ಅಥ್ಯಮಿತ್ರ್ಯ, etc. (Nr.). ಗೆಲ ಬಾರದುದು (ಅತರ್ಕ್ಯ Nn. 88. 90). ಗೆಲೆನು (Bp. 43, 14). See Bp. 58, 66; Bh. 1, 8, 11. 18.

ಗೆಲು gĕlu. 2. = ಗೆಲವು, etc. — ಗೆಲು ಗೆಯ್. To cause happiness (Bh. 4, 2, 44). — ಗೆಲುಮೊಗ. A winning, sprightly countenance (My.).

ಗೆಲು gĕlu. 3. = ಗೆಲ್ 2, etc. (Bh. 1, 13, 2).

ಗೆಲುಗೆ gĕlugĕ. Winning, etc. (My.).

ಗೆಲುವಿಕೆ gĕluvikĕ. Winning, etc. (ವಿಜಯ, ಜಯ Si. 296; ಜಯನ 390).

ಗೆಲುವು gĕluvu. = ಗೆಲವು. (My.).

ಗೆಲುಹ gĕluha. = ಗೆಲವು, etc. (ವಿಜಯ, ಜಯ Nr.).

ಗೆಲ್ಲ gĕlla. = ಗೆಲವು. (ಜಯ Čt. II, 35; Čpr. 5, 73; Šśv. 4, 64. 94). — ಗೆಲ್ಲಂಗೊಳ್. -ಂ-ಕೊಳ್. To gain the victory, to be victorious (Abh. P. 16, 96). — ಗೆಲ್ಲದುತ್ತಮದೇವ. -ಉತ್ತಮ-. N. (Bp. 58, 9). — ಗೆಲ್ಲಸೇಸೆ. A sêsĕ of victory (V. 42, after 21). — ಗೆಲ್ಲ ಸೋಲ. = ಗೆಲವು ಸೋಲು. ಗೆಲ್ಲ ಸೋಲವದೇಕೆ? (Bp. 59, 11).

ಗೆಲ್ಲಿಸು gĕllisu. = ಗೆಲಿಸು, etc. To cause to win, etc. (My.).

ಗೆಲ್ಲು gĕllu. = ಗೆಲ್ 1, etc. (My.). ಗೆಲ್ಲುವವನು (ಜೈತ್ರ, etc. Si. 382). ಗೆಲ್ಲುವ ಸ್ವಭಾವವುಳ್ಳವನು (ಜೇತೃ, etc. 283). ಗೆಲ್ಲುವ ದಕ್ಕೆ (260. 282). ಗೆಲ್ಲಲ್ ಪಡು (282). ಇವನ್ನ ಗೆಲ್ಲ ಬಹುದು (282).

ಗೆಲ್ಲುವಿಕೆ gĕlluvikĕ. = ಗೆಲುವಿಕೆ. (My.).

ಗೆಳತಿ gĕḷati. = ಕೆಳದಿ, etc. (ಹೆಟ್ಟುಗೆ Čt. I, 15; ಹೆಟ್ಟುಗೆ, ಸಖಿ Šm. 74; Kk. 29, o. r. ಗೆಣತಿ; ಕೆಳದಿ, ಸಖಿ Šs.; C.; S. Mhr. in two meanings).

ಗೆಳತೆ geḷatĕ. = ಗೆಳತಿ, etc. (B. 4, 139).

ಗೆಳಯ gĕḷaya. = ಗೆಳೆಯ, etc. (My.).

ಗೆಳಿಯ gĕḷiya. = ಕೆಳೆಯ, etc. (ಮಿತ್ರ, ಸುಹೃತ್, etc. Dhw.; S. Mhr.).

ಗೆಳೆ gĕḷĕ. = ಕೆಳೆ 2, etc. (My.; Bh. 1, 6, 7; *cf.* ಗೆಡೆ 1). — ಗೆಳೆಗೊಳ್. = ಕೆಳೆಗೊಳ್. (J. 19, 49).

ಗೆಳೆಗಾರ್ತಿ gĕḷĕ-gârti. = ಗೆಣೆಗಾತಿ. (My.).

ಗೆಳೆತನ gĕḷĕtana. = ಗೆಣೆತನ, etc. Companionship, etc. (C.; S. Mhr. in two meanings; B. 1, 14; 2, 10. 36; 3, 33; ಮೈತ್ರ್ಯ G.).

ಗೆಳೆಯ gĕḷĕ-a3. = ಗೆಳಯ, ಗೆಳಿಯ, etc. (C.; B. 1, 1. 8; 2, 9. 36). See ಕೂಡು-, ತಿಸುಳಿ-, ನೂಱೆಲೆ-, where however ಕೆಳೆಯ may be meant).

ಗೆಱಸು gĕḻasu. = ಗೆಱಸು, etc. (ಗೆಡ್ಡೆ Šmd. I; T. ಕಱಂಗು, M. ಕಱಚ್ಚು).

ಗೇ gê. = ಗೆಯ್, etc. To perform, etc. P. p. ಗೇದು (My.; *cf.* Mhr. ಘೇಣೇಂ, to do). ಗೇಯದೇ ಇರುವ ಭೂಮಿ (ಖಿಲ Si. 100). ಊರಿಗೆ ಅಧೀನನಾಗಿ ಗೇಯುವ ಬಡಿಗೆಯವನು (ಗ್ರಾಮತಕ್ಷ 339).

ಗೇಕು gêku. = ಗಿಕ್ಕು, ಜೀಕು. The sedge Cyperus hexastachyus Rottl. (ಘನ, ಭದ್ರಾತಕ Nn. 15; ಭದ್ರಾತಕ Mr. 138). — ಗೇಕಿನ ಗಡ್ಡೆ. = ಗಿಕ್ಕನ-, q. v. The root of C. h.

ಗೇಣ್ gêṇ. 1. (Šmd. 58). = ಗೇಣ, ಗೇಣು. A span measured by the extended thumb and little finger (ವಿತಸ್ತಿ, ಕಿಷ್ಕು Nr.; ತಾಲ Hlâ., Mr. 324; ಕಿಷ್ಕು Si. 405; ಪರಿಮಾಣಿನ ಅನ Šm. 96; Tĕ. ಜೇನುಡು, ಜೇನೆ, ಜಾನೆ; M., T. ಚಾಣ್; Tĕ. ಜೇನೆ, ಶಾನೆ, ಸೇನಾ, much, long; T., M. ಚೇಣ್, breadth, height, length; distance = ದೂರ; T. ಚೇಯ್, ಚೇಯ್ಮೆ, length; distance = ದೂರ; ಗೇ, high; distant = ದೂರ; see ಕೇೞ್, ಗೆಣ್ಪು, ಚಾಪು, ಸಾನೆ). ಬೆರಳು ಹನ್ನೆರಡಾಗಲ್ ಒನ್ದು ಗೇಣ್ ಅಕ್ಕು, ಗೇಣೆರಡಾಗಲ್ ಒನ್ದು ಮೊೞನ್ ಅಕ್ಕು (Mr. 325); ಕಿಱುವೆರಳ ಗೇಣ್ (ವಿತಸ್ತಿ 324). See Ršv. 9, 22; ಮೂಗೇಣ್. — ಗೇಣ್ವಾಯ್. -ಬಾಯ್. A span-long mouth (Šmd. 81; Mdb. MS. ನೇಣ್ವಾಯ್).

ಗೇಣ್ gêṇ. 2. A long knife, a sword (ನಿಡುಸುರಗಿ Čt. I, 8; ಸುರಗಿ Čt. II, 21; Kk. 40; Šm. 43. 96; T. ಚೇಣ್ಣೈ, a weapon = ಆಯುಧ). ಕಣ್ಗಳ್ ಮನೋಜವೀರನ ಗೇಣ್ಗಳ್ (Šmd. 117). See Ršv. 13, 70; V. 4, 36; Šśv. 3, 16; ಕಿಱುಗೇಣ್.

ಗೇಣ gêṇa. = ಗೇಣ್ 1. See ಅಯ್ಗೇಣ, ಎಱು ಗೇಣ.

ಗೇಣಿ gêṇi. Rent, contract (My.; Tu.). — ಗೇಣಿಚೀಟು. A lease (My.; Tu.).

ಗೇಣು gêṇu. = ಗೇಣ್ 1. (C.). ದರ್ಭೆಯ ಬೆರಳುಗೇಣು (ಗೋಕರ್ಣ), ಕಿಱುಕುಣಿಕೆಯ ಗೇಣು (ವಿತಸ್ತಿ Hlâ.). ಗೇಣು (ಕಿಱು ಬೆರಳಿನಿನ್ದ ಒಡಗೂಡಿ ಚಾಚಲ್ ಪಟ್ಟ ಅಳತೆ, ವಿತಸ್ತಿ Si. 211). ಗೇಣಿನೊಳ್ ಪವಿತ್ರಾಂಗುಲಿಗೆ (ಗೋಕರ್ಣ Mr. 324). ಗೇಣು ಬಿಟ್ಟು ಅಗುಱು ದಾಟದ ಹಾಗೆ (Prv.). — ಗೇಣಗಲ. -ಅಗಲ. The distance or length (breadth) of a span (Si. 288). — ಗೇಣು ಗೇಣು. rep. (B. 4, 39). — ಗೇಣುದ್ದ. -ಉದ್ದ. The height or length of a span. ಗೇಣುದ್ದ ತಪ್ಪಿದರೆ ಮಾರುದ್ದ ತಪ್ಪುವದು (Prv.). See Prv. s. ಚೋಟುದ್ದ. — ಗೇಣುಹೊಟ್ಟೆ. The belly (or stomach) that is only a span in length or breadth (C.; Dp. 173, 6). ಗೇಣುಹೊಟ್ಟೆಗೆ ಯಾಕೆ ಅಷ್ಟು ಚಿನ್ತೆ ಮಾಡುತ್ತಿ? (C.).

ಗೇಣೆ gêṇĕ. N. of a plant (ಮಗ್ಗಾರೆ, o. rs. ಮಂಗಾರೆ, ಮದ್ಗಾರೆ Mr. 119).

ಗೇಣ್ಡ gêṇḍa. = ಗೇಣ್ಡಾಮೃಗ, q. v. (My.; B. 5, 246).

ಗೇಣ್ಡಾಮೃಗ gêṇḍâ-mṛiga. A rhinoceros (My.; B. 5, 248. 250; Si. 290; Mhr., H. ಗೇಣ್ಡಾ).

ಗೇಣ್ಡು gêṇḍu. = ಗೇಣ್ಡುಕ. (Sk.; *cf.* ಚೆಣ್ಡು).

ಗೇಣ್ಡುಕ gêṇḍuka. *A ball for playing with.*

ಗೇನ gêna. Tbh. of ಜ್ಞಾನ. (C.). — ಗೇನಯ್ಯ. -ಅಯ್ಯ. N. (S. Mhr.).

ಗೇನವನ್ತ gêna-vanta. Tbh. of ಜ್ಞಾನವನ್ತ (S. Mhr.).

ಗೇನಿಕೆ gênikĕ. Tbh. of ಜ್ಞಾನಿಕೆ. Consideration, reflection, thought (S. Mhr.).

ಗೇನಿಸು gênisu. Tbh. of ಜ್ಞಾನಿಸು. To investigate, to consider, to reflect (C.).

ಗೇಪಕ gêpaka. Tbh. of ಜ್ಞಾಪಕ. (My.).

ಗೇಬೆ gêbĕ. The state of being swollen from disease (My.). — ಗೇಬೆಮೋಱೆ. A swollen face (My.). — ಗೇಬೆಸಿದ್ದ. A man whose body is swollen (My.). — ಗೇಬೆಹೊಟ್ಟೆ. A swollen belly (My.).

ಗೇಮೆ gêmĕ. = ಕೆಯ್ಮೆ, etc. Work (My.).

ಗೇಯ gêya. To be sung; singing, a singer; a song, a chant. 2, N. of a vṛitta (Čh.).

ಗೇಯಿಸು gêyisu. = ಗೆಯಿಸು, etc. To cause to work, etc. (My.).

ಗೇರ್ gêr. (= ಕೊರ 1). The sound produced in the chest and throat by phlegm (in the ಗೂರು, My.). — ಗೇರ್ ಗೇರ್. rep. (My.).

ಗೇರಾಯಿಸು gêrâyisu. = ಗಿರಾಯಿಸು. To surround, to encompass, to hem in (My.; Mhr. ಘೇರಣೇಂ; Mhr., H. ಘೇರ, a circumference).

ಗೇರಿ gêri. Giddiness (My.; Mhr. ಘೇರೀ). ತಲೆ ಗೇರಿ ತಿರುಗುತ್ತದೆ (My.).

ಗೇರು gêru. ಗೇರ್ (Šśv. 3, 32). = ಕೇರ್ 2, etc. The marking-nut tree, Semecarpus anacardium

L. f. (ಅರುಷ್ಕರ Nr., Si. 454; ಭಲ್ಲಾತಕ Mr. 115; ಪಾವಕ 526; ಭಲ್ಲಾತಕ, ಮಹಾಕಾಲ Nn. 97; ಪಾವಕ, ಭಲ್ಲಾತಕ 122; My.). ಸಸನೆ ಇರಲಾಱದ ಬಡ್ಡಿ ಗೇರು ಚುಚ್ಚಿಸಿ ಕೊಣ್ಡಳು (for tattooing, Prv.). — ಗೇರ ಕಾಬ್. The marking-nut (ಬೀಜಬೇರುಷ್ಟ Mr. 144 in one MS.; o. r. ಬೇರೂಷ್ಟ in one, ಬೇರುಷ್ಕ, in another, ಬೇಚಿಷ್ಕ, in another). — ಗೇರ ಪಣ್ಣು. A ripe gêru fruit of a red colour (Rśv. 9, 23). — ಗೇರ ಮರ. = ಕೇರ ಮರ, ಗೇರು. (ವೀರವೃಕ್ಷ, ಅರುಷ್ಕರ, ಅಗ್ನಿಮುಖಿ, ಭಲ್ಲಾತಕೀ Nr.). — ಗೇರುಪಪ್ಪು. A half of the roasted marking-nut (My.). — ಗೇರುಬೀಜ. = ಕೇರು-. (My.). — ಗೇರುಮರ. = ಗೇರ-. (ವೀರವೃಕ್ಷ, etc. Si. 131). 2, an American tree naturalized in India, the cashew-nut tree, Anacardium occidentale L. (St. & Pl.; Tě. ಜೀಡಿ-ಮಾಮಿಡಿ-ಚೆಟ್ಟು; M. ಕಶು-ಮಾವು). — ಗೇರುಮಾವು. A kind of mango (My.).

ಗೇಱು gêṟu. = ಕೇಱು. (My.).

ಗೇರ್ gêr. = ಗೇರು, etc. — ಗೇರ್ಕಾಯಿಮರ. = ಗೇರ ಮರ. (St. & Pl.).

ಗೇಲಿ gêli. Ridicule, derision (My.; Tě. ಗೇಲಿ, ಗ್ರೇಣಿ, ಗೆಗ್ಗಿಲಿ; ಗ್ರೇಣಿಂಚು, ಕೇಗರಿಂಚು, to ridicule; ಕೇರು, to chuckle, giggle; T. ಕೇಲಿ, censure, aspersion, calumny; *cf.* ಕಿಲ). — ಗೇಲಿಗೊಳಿಸುವಿಕೆ. -ಕೊಳಿಸುವಿಕೆ. Ridiculing, etc. ಹೀಗಳೆದು ಗೇಲಿಗೊಳಿಸುವಿಕೆ (ಅಚ್ಛುರಿತಕ, ಹಂಗಿಸಿ ನಗುವದು Si. 73). — ಗೇಲಿ ಮಾಡು. To ridicule (ಒಬ್ಬನನ್ನು or ಒಬ್ಬನಿಗೆ, My.).

ಗೇಸ್ತ gêsta. Tbh. of ಗೃಹಸ್ಥ. (My.; Tě. ಗೇಸ್ತು).

ಗೇಹ gêha. *A house* (ಮನೆ Nn. 133).

ಗೇಹಿನಿ gêhini. A house-wife, a wife. (R.).

ಗೇಹೇನರ್ದಿ gêhê-nardi. *A poltroon, a dung-hill cock.*

ಗೇಹೇಶೂರ gêhê-śûra. *A poltroon, etc.*

ಗೇಹೋಪವನ gêha-upavana. *A garden near a house.*

ಗೈ gĕi. = ಗೆಯ್, etc. (My.), *e. g.* ನಿದ್ದೆಗೈ, to sleep (Si. 254); ಯೋಚನೆಗೈ, to reflect, etc. (Si. 71).

ಗೈರ gaira. = ಗೈರು. Dis-, un-, mis-, out of, etc. (Mhr.).

ಗೈರಖರ್ಚು gaira-kharču. Extra or vain expenses (My.; Mhr.).

ಗೈರಮಾಮೂಲ್ gaira-mâmûl. That is against custom or usage (My.).

ಗೈರಾಜರ್ gairâjar. = ಗೈರುಹಾಜರು. (My.).

ಗೈರಾದಾ gairâdâ. Unoccupied, waste (Br., H.); due, owed (My.; Br., H.).

ಗೈರಿಕ gairika. (fr. ಗಿರಿ). *Red chalk.* 2, mineral, ore (ಧಾತು, ಗಾಜು Mr. 98, o. r. ಜಾಜು). 3, *gold.*

ಗೈರು gairu. = ಗೈರ. (My.).

ಗೈರುವಾಜಿಬೀ gairu-vâjibî. ಗೈರವಾಜಿಬೀ. Unreasonable, improper (My.; Br.; Mhr., H. ಗೈರವಾಜವೀ).

ಗೈರುವಿಲೆ gairu-vilĕ. Out of its place; lost (My.).

ಗೈರುಹಾಜರು gairu-hâjaru. = ಗೈರಾಜರ್. Absent (My.; Br.; Mhr. ಗೈರಹಜೇರ).

ಗೈರೇಯ gairêya. *Red chalk, bitumen*

ಗೊ gŏl-ŏ4. (= ಕೊ, ಗೋ). See ಇದು-ಗೋ.

ಗೊಂಯಿ gŏṁyi. = ಗುಂಯಿ, ಗೊಯ್ (used expressly of the musquito, C.).

ಗೊಗ್ಗ gŏgga. (= ಒಗ್ಗ). (My., in the sense of ಒಗ್ಗ, used especially to frighten children). — ಗೊಗ್ಗಯ್ಯ. -ಅಯ್ಯ. N. (Bp. 37, 6; 58, 6).

ಗೊಂಕೆ gŏṅkĕ. (= ಕುಂಕೆ). The throat (ಗೋಙ್ Šmd. II; Šs.; ಗೋಣಿ Čt. I, 9, probably ಗೋಣು; M. ಕೊಙ್ಙ, the throat).

ಗೊಂಗಡಿ gŏṅgaḍi. A cloak (blanket) worn over the head and face (C.; Mhr., H. ಘುಂಗಟ, ಘುಂಗೂಟ). 2, a cumbly or blanket (C.; Tě. ಗೊಂಗಡಿ, -ಡು, -ಳಿ; Mhr. ಘೋಂಗಡೀ, ಘೋಂಗಡೇಂ). ಅಂಗಡೀ ಮಾಟಿ, ಗೊಂಗಡೀ ಹೊದ್ದ.—ಕೆಟಿಯೊಡಿದ ವನ ಗೊಂಗಡಿ ಕಿತ್ತು ಕೊಣ್ಡ ಹಾಗೆ (Prvs.). 3, a long, good tamarind fruit (My.). — ಗೊಂಗಡಿಕೊಪ್ಪೆ. The hood into which a cumbly is made (C.). — ಗೊಂಗಡಿಗೊಪ್ಪೆ. = ಗೊಂಗಡಿಕೊಪ್ಪೆ. (My.).

ಗೊಂಗು gŏṅgu. = ಗುಂಗು. (Sd.).

ಗೊಂಗೆ gŏṅgĕ. 1. (= ಗೊಂಚೆ). A mass, a heap (ಕದಳಿ, ಜಂಗುಳಿ, ನೆರವಿ, ಗುಪ್ಪು, etc. Šm. 54, o. rs. ಗೊಮ್ಬೆ, ದೊಮ್ಬೆ).

ಗೊಂಗೆ gŏṅgĕ. 2. The large grey babbler, Garrulus albifrons (Bd.). *Cf.* ಗೊನಗಾ.

ಗೊಚ್ಚೆ gŏččĕ. = ಗೊಜ್ಜೆ. (My.).

ಗೊಜಗು gŏjagu. 1. To speak indistinctly or inarticulately (My.; M. ಕೊಂಜು, ಕೊಙ್ಙ, T. ಕೊಂಜು).

ಗೊಜಗು gŏjagu. 2. Indistinct or inarticular speech (My.).

ಗೊಜಿ gŏji. = ಗಜಿ 1. — ಗೊಜಬಿಜ. = ಗಜಬಿಜ. (My.).

ಗೊಜ್ಜಗೆ gŏjjagĕ. = ಗುಜ್ಜಗೆ, etc. (Rśv. 10, after 31).

ಗೊಜ್ಜಲು gŏjjalu. Mud, mire (ಕೆಸಱು My.).

ಗೊಜ್ಜು gŏjju. 1. Acidity, sourness (C.; *cf.* ಕಟು 3 ?).

ಗೊಜ್ಜು gŏjju. 2. A thick mess of boiled brinjals, mangoes, etc. to which tamarind, chillies, salt, etc. are added (My.; Tě.; Tu. ಗೊಜ್ಜ; T., M. ಕುಟಿಕುಟಿ, slimy, soft; see s. ಕುಸುರಿ 1 and *cf.* ಗೊದ).

ಗೊಜ್ಜುಗೆ gŏjjugĕ. = ಗೊಜ್ಜಗೆ, etc. (Rśv. 9, 6).

ಗೊಜ್ಜೆ gŏjjĕ. = (ಕೊಱಚೆ), (ಗಜ್ಜು), ಗೊಚ್ಚೆ. Putridity; mud, mire (My.; *cf.* ಗೊದಕು).

ಗೊಂಚಲ gŏṅčala. = ಗೊಂಚಲು. (S. Mhr.).

ಗೊಂಚಲು gŏṅčalu. ಗೊಂಚಲ್. A cluster; a bunch (ಗುಚ್ಛಕ, ಸ್ತವಕ Nr.; ಮಂಜರಿ, ವಲ್ಲರಿ Mr. 106; ಗುಚ್ಛ Kk. 20; ತೊಂಗೆ, ತೊಂಗಲ್, ತೊಮ್ಬೆ, ತೊಡಮ್ಬೆ, ಜೊಮ್ಪ, etc., ಗುಚ್ಛ; C.; *cf.* ಗುದಿ 3, ಗೊನೆ, Tbh. ಕೊಚ್ಚು). ಹೊಸತಾಗಿ ಹೊಱ ಹೊಮ್ಮಿದ ಪತ್ರಪುಷ್ಪಫಲಾದಿಗಳ ಗೊಂಚಲು (ಮಂಜರಿ; ವಲ್ಲರಿ Nr.; see Si. 122). ಮರದ ಗೊಂಚಲು (ವಲ್ಲರಿ, ಮಂಜರಿ Hlâ.). ಹೂವಿನ ಗೊಂಚಲು (ಸ್ತವಕ, ಗುಚ್ಛಕ, ಗುಚ್ಛ, ಗುಲುಂಛ Hlâ.; see Si. 124; Šmd. 73). ಅಲರ್ಗಳ ಗೊಂಚಲ್ (J. 3, 3). ಮುತ್ತುಗಳ ಗೊಂಚಲು (3, 17). ಕಾಯ ಗೊಂಚಲು (B. 2, 41). See Bp. 11, 34; B. 4, 54. — ಗೊಂಚಲ್ಮಿಂಚು. A cluster of lightnings (Rśv. 13, after 77).

ಗೊಂಚಿ gŏṅči. (= ಗೊಂಗೆ 1), ಗೊಂಚೆ. A mass, etc. (ಜಂಗುಳಿ, ತೆರಳ್ಕೆ, ದೊಸ್ದುಳಿ, ನೆರವಿ, ಗುಣ್ಡು, ಗುಮ್ಪು, ಗೊನ್ದಣಿ, etc., ಶ್ರೇಣಿಕೆ Kk. 17).

ಗೊಂಚೆ gŏṅčĕ. = ಗೊಂಚಿ. A mass; a cluster. (ಬೇಡರ್) ಗೊಂಚೆಯ ಸರಳ್ಗಳ ಪಿಡಿದು, . . ಅಡವಿಯೊಳು ಬೇಂಟೆಯನಾಡುತ್ತಿರ್ದರು (Râghč. 17, 67).

ಗೊಟ gŏṭa. = ಗುಟು, etc. — ಗೊಟ ಗೊಟ. = ಗುಟು ಗುಟು. (My.).

ಗೊಟಕು gŏṭaku. = ಗುಟಕು, etc. (C.); the last gulping sound of a dying person (S. Mhr.).

ಗೊಟರು gŏṭaru. = ಕೊಟ್ರು, (ಗೊಡಗು). A hole, a hollow (in a wall, well, hill, or tree; *cf.* Sk. ಕೋಟರ). — ಗೊಟರು ಬೀಳು. A hollow to be formed (My.).

ಗೊಟ್ಟ gŏṭṭa. 1. = ಕೊಟ್ಟ 1. A bamboo tube for administering food or medicine to cattle (C.; Tē.; Mhr. ಘೋಟೀಂ; *cf.* ಕೊಟಿಲ್).

ಗೊಟ್ಟ gŏṭṭa. 2. = ಕೊಟ್ಟೆ, q. v. A mango-stone (S. Mhr.; Mhr. ಕೋಯ; Tu. ಗೊಟ್ಟು).

ಗೊಟ್ಟ gŏṭṭa. 3. = ಗೊಟ, etc. (S. Mhr.).

ಗೊಟ್ಟ gŏṭṭa. 4. (= ಕೋಣ್ಟು). A corner (My., in ಗೊಟ್ಟಕೆ ಬೀಳು, ಗೊಟ್ಟಕೆ ಹಾಕು, used of an arji).

ಗೊಟ್ಟಚಿ gŏṭṭaci. = ಗೋಟಚಿ. N. of a plant (ನೆಲಬೇವು, etc. Mr. 147 in one MS., o. rs. ಗೊಟ್ಟಚ್ಚಿ, ಗೋಟಚಿ). See ಪನ್ನಂಗಿ.

ಗೊಟ್ಟಿಗೆ gŏṭṭigĕ. = ಘೋಟಿಗೆ. Tbh. of ಘೋಟಿಕಾ. A mare (J. 7, 5).

ಗೊಟ್ಟು gŏṭṭu. 1. Obstinacy (Tē.); crookedness, craft (*cf.* the terms s. ಕುಡುದು). — ಗೊಟ್ಟಾಟ. -ಆಟ. Deceit, falsity (Bp. 24, 75).

ಗೊಟ್ಟು gŏṭṭu. 2. (= ಗೊಡ್ಡು). The state of being hard to get or very scarce (My.; Tē. ಗೊಟ್ಟು, ಗೊಡವೆ, the state of being hard, difficult, hard to read, puzzling, hard to get; see ಕುಟಿ 1). ನೀರಿಗೆ ಗೊಟ್ಟಾಯಿತು (My.). ಹೆಸರು ಮಾತ್ರ ಕ್ಷೀರಸಾಗರಭಟ್ಟರು, ಮನೆಯಲ್ಲಿ ಮಜ್ಜಿಗೆನೀರಿಗೆ ಗೊಟ್ಟು (Prv.). 2, the state of being dry. — ಗೊಟ್ಟ ಕೆಱೆ. A dry tank (My.). ಕೆಟ್ಟವರಿಗೂ ಅಱಿದವರಿಗೂ ಗೊಟ್ಟ ಕೆಱೆ ತವರ ಮನೆ (Prv.). — ಗೊಟ್ಟುಕಾಲ. Drought (My.; Tē.). — ಗೊಟ್ಟುವಳ್ಳ. -ಪಳ್ಳ. The dry bed of a stream (V. 14, after 81).

ಗೊಟ್ಟೆ gŏṭṭĕ. The mons veneris (S. Mhr.).

ಗೊಟ್ರು gŏṭru. = ಗೊಟರು. (My.).

ಗೊಡ gŏḍa. = ಗೊಳ. An imitative sound. (Mhr. ಗುಡ). — ಗೊಡ ಗೊಡ ಎನ್ನು. A sound heard in the body when suffering from flatulence (My.). 2, a sound heard in continuous vomiting (My.).

ಗೊಡಗು gŏḍagu. (fr. ಕೊಡೆ 2). = ಗೊಡುಗು. A hollow, a hole (in a grain-pit or well, My.).

ಗೊಡಚಿ gŏḍaci. = ಕೊಡಚಿ. — ಗೊಡಚಿಗಣ್ಣು. -ಕಣ್ಣು. An eye with a protuberance from its ball (S. Mhr.). — ಗೊಡಚಿಗಿಡ. = ಕೊಡಚಿಗಿಡ. (Z.).

ಗೊಡರು gŏḍaru. (= ಗುಟ್ರು, etc., ಗೊಬಕು). — ಗೊಡರು ಗೊಡರು. rep. The bellowing sound of a bull-frog (S. Mhr.). — ಗೊಡರು ಹಾಕು. To grunt or bellow as an ox or a bull (My.).

ಗೊಡಲು gŏḍalu. Trash, chaff (? Râm. 6, 44, 10).

ಗೊಡವೆ gŏḍavĕ. Connexion; intercourse; concern with, care about (C.; J. 6, 35; Bh. 3, 5, 22; *cf.* ಕುಟಿ 1; ಗೋಜು 2). ಊರಿಗೆ ಹೋಗದವರಿಗೆ ದಾರೀ ಗೊಡವೆ ಯಾಕೆ? — ತಡವ ಮಾಡುವವನ ಗೊಡವೆ ಬೇಡ (Prvs.). See B. 3, 82; 4, 137. 199; Prvs. s. ದಣ್ಣ, ದುರ್ಗ, ಪರಲೋಕ, ಪೆಣ್ಣಾರಿ, ಪ್ರಸ್ತ, ಮಡಿ 3.

ಗೊಡುಗು gŏḍugu. = ಗೊಡಗು. (My.).

ಗೊಡ್ಡ gŏḍḍa. 1. (fr. ಕುಟಿ 1?). A complicated, perplexing affair: peril, jeopardy (? Abh. P. 9, 156; 10, 10; Tē.).

ಗೊಡ್ಡ gŏḍḍa. 2. = ಕೊಡ್ಡ 1. N. of a plant (ನಿರ್ಗುಜ್ಜ Mr. 116 in one MS., o. r. ಗೊಡ್ಡ in two MSS., ಗೋದ in another).

ಗೊಡ್ಡಿ gŏḍḍi. A barren woman (C.; Tē. ಗೊಂಡಿ). ಗೊಡ್ಡಿ ಹೆಱುವಳೇನು? ಬೊಡ್ಡಿ ಅೞುವಳೇನು? (Prv.). 2, a male in female attire, at play (S. Mhr.).

ಗೊಡ್ಡು gŏḍḍu. (= ಗೊಟ್ಟು 2). The state of being barren or sterile (C.; Tē., Tu.); that of being sapless, etc.; a barren cow, etc. (Mhr. ಖೋಡ, an old cow of which the womb is closed; an old tree which bears no longer). ಗೊಡ್ಡಿನ ಹಾಲು (as a wonderful thing, Bp. 9, 24; see also 60, 45). ಮೂಱಕ್ಕೆ ಆಱಕ್ಕು, ಅಱು ಹನ್ನೆರಡಕ್ಕು, ಹೇೞುವ ಗೊಡ್ಡು ಹೈನಕ್ಕು ಪಾಪಂ ಪಾಱೂ ಕಾಲಕೆ (Sp.). ಚರಿಪ ಅರಣ್ಯದ ಪಕ್ಷಿಗೆ ಒನ್ದು ತರು ಗೊಡ್ಡಾಗಲ್, ಫಲಂ ತೀವಿದ ಆ ಮರಗಳ್ ಪುಟ್ಟವೆ? (Sš. 8). ಸೂಲು ತಪ್ಪಿದರೆ ಗೊಡ್ಡೇ? (Prv.). See Prv. s. ಮಡ್ಡಿ 1. — ಗೊಡ್ಡ ಹುಣಿಸೇ ಮರ. A tall tree, Albissia odoratissima Benth. (Z.). — ಗೊಡ್ಡಾಕಳ್. -ಆಕಳ್. A barren cow (ವಶೆ, ಬಸೆ Šmd. 342; ವಶೆ, ಬನ್ಧ್ಯೆ Nr.; C.). — ಗೊಡ್ಡಾಟ. -ಆಟ. Nonsense (Bp. 28, 43). *Cf.* ಗೊಟ್ಟಾಟ. — ಗೊಡ್ಡುಎಮ್ಮೆ. A barren buffalo. See Prv. s. ಮಡ್ಡುಹುಲ್ಲು. — ಗೊಡ್ಡುಕೆಲಸ. Useless, unprofitable work (C.). — ಗೊಡ್ಡುದನವು. = ಗೊಡ್ಡಾಕಳ್. (Dp. 148, 3). — ಗೊಡ್ಡುಮರ. A barren tree (C.). — ಗೊಡ್ಡುಮಾತು. A vain word (C.). — ಗೊಡ್ಡುಸಾಱು. A broth without strength (My.). ಗೊಡ್ಡುಸಾಱಿಗೆ ಜಡ್ಡುತುಪ್ಪ (Prv.). — ಗೊಡ್ಡುಹರಟೆ. Useless talk (My.). See Prv. s. ಮಡ್ಡಿಯನ್ನ.

ಗೊಣ gŏṇa. 1. = ಕೋಣ s. ಗೋಣ್. See ಎಣೆಗೊಣ.

ಗೊಣ gŏṇa. 2. = ಕೊಣ 2. — ಗೊಣ ಗೊಣ ಎನ್ನು. = ಕೊಣ ಕೊಣ ಎನ್ನು. (My.; T. ಕುಣಗುಣ-).

ಗೊಣ gŏṇa. 3. = ಗುಣ, etc. — ಗೊಣಗುಟ್ಟು. = ಗುಣಗುಟ್ಟು. (My.; Tē. ಗುನಿ, ಗೊಣಗೊಣಲಾಡು).

ಗೊಣಗ gŏṇagu3-a3. (= ಗೊನಗಾ). A man who nasalizes (My.). Feminine ಗೊಣಗಿ.

ಗೊಣಗು gŏṇagu. 1. N. of a plant (ಗುಣಿ Mr. 139; Tē. ಗುನುಕೆ, ಗುನುಕು, a sort of wild corn which is eaten in times of scarcity).

ಗೊಣಗು gŏṇagu. 2. To nasalize (My.).

ಗೊಣಗು gŏṇagu. 3. Nasalization (My.). ಗೊಣಗು ಮಾತು (My.).

ಗೊಣಗು gŏṇagu. 4. Grumbling, murmuring (My.). — ಗೊಣಗಾಟ. -ಆಟ. = ಗೊಣಗು. (My.).

ಗೊಣಸು gŏṇasu. (= ಕುಣಿಕೆ 2), ಗೊಲಸು. A link of a chain (C.). 2, a loop (ಬಲಿಯಂ ಸರಿವ ಕುಣಿಕೆ Mr. 380; see ಕುಣಿಕೆ 2). 3, an ornamental bunch of five pearls (My.).

ಗೊಣೆಯ gŏṇĕya. The middle of a bow-string (? Abh. P. 14, 171).

ಗೊಣ್ಡು gŏṇḍu. (or **ಗೋಣ್ಡು**). (= ಗೋಣ್ಟು?). See Šs. s. ಎರಲ್ 3.

ಗೊಣ್ಡೆ gŏṇḍĕ. = ಕೊಣ್ಡೆ 4. A cluster; a tuft; a tassel (C.; B. 4, 210; Šsv. 3, 27; Tĕ., M. ಕೊಣ್ಡೆ; T. ಕೊಣ್ಡೈ; T. also ಕುಡಿಲ್; Mhr. ಗೋಣ್ಡಾ). See ಅನನ್ತನ-. **2,** impervious or thickset state (Tĕ.; See ಕುಟಿ 1). **3,** an amaranth, Gomphrena globosa Lin. (My.). — ಗೊಣ್ಡಾರಣ್ಯ. -ಅರಣ್ಯ. An impervious jungle (My.; *cf.* Sk. ಗೋಣ್ಡವನ).

ಗೊಣ್ಡೆಯ gŏṇḍĕya. A mass (Bh. 6, 8, 13).

ಗೊಣ್ಣೆ gŏṇṇĕ. 1. — ಗೊಣ್ಣೆವುಟಿ. -ಪುಟಿ. An insect found in timber (ಘುಣ Nr.).

ಗೊಣ್ಣೆ gŏṇṇĕ. 2. Mucus of the nose (C.). **2,** a blot of ink (S. Mhr.).

ಗೊತ್ತು gŏttu. = ಗುಱುತು, etc., ಗೊನ್ತು. A mark, etc. (C.; Čpr. 4, 8; Šsv. 2, 28). **2,** knowledge, acquaintance (C.). **3,** appointment, rule, regulation, order (C.; Tĕ.). ಇಷ್ಟು ಹೊತ್ತು ಹೀಗೆ ಅಭಿನಯಿಸ ಬೇಕು ಎಮ್ಬ ಗೊತ್ತು (ತಾಲ Si. 64). ಪಾಪಿಗಳನ್ನು ಶಿಕ್ಷಿಸುವದಕ್ಕಾಗಿ ಯಮಲೋಕದೊಳಗೆ ಗೊತ್ತು ಮಾಡಲ್ ಪಟ್ಟಿರುವ ಯಾತನಸ್ಥಾನ (79). ಹೀಗಿರ ಬೇಕು, ಹೀಗೆ ನಡ ಕೊಳ್ಳ ಬೇಕೆಮ್ಬ ಗೊತ್ತು (247). ಗೊತ್ತಾಗಿರುವ ಸ್ಥಲ (ವಿಷಯ, ಆಶ್ರಯ 390). ಅಳತೆ ತೂಕ ಮುನ್ತಾದ ಗೊತ್ತು (ಪ್ರಮಾಣ 420). ಗೊತ್ತಿಲ್ಲದೆ (ವೃಥಾ 468). ಸತ್ತು ಹೋಗದೆ ಅತಿ ಜೀವವಿರಲು, ಮೋಕ್ಷದ ಗೊತ್ತು ತಿಳಿ! (Sp.). **4,** an appointed place; a place of resort or shelter (ಗವಿ, ಗರುಡಿ, ನೆಲೆ, etc., ಆಶ್ರಯ Kk. 64; Šm. 58); a place where cattle are tied (My.). — See B. 1, 5; 2, 29. 33. 38. 43; 3, 29. 41. 72. 73. 85; 4, 18. 19. 20. 21. 28. 67. 81. 94-97. 100. 105. 195. 208; 5, 84. 109. 164. 178. 188. 189. 209. 214. 216. 227. 267. 289. — ಗೊತ್ತುಗೆಡು. -ಕೆಡು. To become objectless or vain, etc. See Sp. s. ರಾಜಾನ್ನ.

ಗೊತ್ತುಗಾಱ gŏttu-gâṟa. A male acquaintance (C.). **2,** a person of mark or distinction, a headman (ವಲ್ಲಭ Si. 441; My.). ಶ್ರೇಷ್ಠನಾದ ಗೊತ್ತುಗಾಱ (ಬೃನ್ದಾರಕ, ಮುಖ್ಯ 407).

ಗೊದ gŏda. Thickened state (see s. ಕುಸುರಿ 1 and *cf.* ಗೊಜ್ಜು 2). — ಗೊದ ಗೊದ. rep. The thickened state of an ambali, a pâyasa, etc. (My.).

ಗೊದಕು gŏdaku. Mud, mire (*cf.* ಕೊಚ್ಚೆ, ಗೊಜ್ಜೆ).

ಗೊದಗು gŏdagu. = ಗೊದಕು. (My.).

ಗೊದಮ gŏdama. A piece of wood in the form of a bat, one side being round, used in leading and checking the course of an idol car (My.). *Cf.* ಗುದಗೆ.

ಗೊದಳೆ gŏdaḷĕ. N. of a fish (Ršv. 5, 115).

ಗೊದ್ದ gŏdda. 1. = ಕೊಡ್ಸ 2, q. v. ಗೊದ್ದದ ಮರ or ಗೊದ್ದನ ಮರ, the sun-paper tree, Ficus asperrima Roxb. (My.).

ಗೊದ್ದ gŏdda. 2. A kind of black ant the bite of which pains rather much (C.; Tĕ. ಗೊಟ್ಟಿ-ಚೆದಲು, the kind of termites called a soldier ant: *cf.* ಗೊಡಿಲೆ).

ಗೊದ್ದ gŏdda. = ಗುದ್ದ. (Tbh. of ಗೋಧೆ). See ಹೆಪ್ಪೆ-.

ಗೊದ್ದೆ gŏddĕ. Pig's dung (My.).

ಗೊದ್ದೆ gŏddĕ. Tbh. of ಗುದ. (My., used of that of females; Tĕ. ಗುದ್ದೆ; *cf.* ಗೊಳ್ಳಿ).

ಗೊನಗಾ gŏnagâ. (= ಗೊಣಗ). The bird called the babbler (Pr.; S. Mhr.). *Cf.* ಗೊಂಗೆ 2.

ಗೊನೆ gŏnĕ. = ಗೊಲೆ 2. A cluster or bunch of fruit, applied to plantains, mangoes, grapes, cocoanuts, etc. (C.; Tĕ. ಗೊಲೆ; M. ಕುಲೆ; T. ಕುಲೈ; *cf.* ಕೊತ್ತು 2, ಗುತ್ತಿ). See B. 2, 15. 37; 3, 29; ಒಳ್-, ಪೆರ್-; Prv. s. ಬಾಯಿ 1.

ಗೊನೆಗಾಱ gŏnĕ-gâṟa. A man who gathers plantains, cocoanuts, arecanuts, etc. (My.).

ಗೊನ್ತು gŏntu. = ಗೊತ್ತು, etc. (My.).

ಗೊನ್ತೆಮುಗೊರುಚೆಟ್ಟು gŏntĕma-gŏru-čeṭṭu. The plant Paederia fetida (Tĕ.; ಸಾರಣಿ, etc. Si. 160).

ಗೊನ್ದ gŏnda. = ಗೂದೆ 1. (St. & Pl.).

ಗೊನ್ದಣ gŏndaṇa. = (ಕೊತ್ತಣೆ), ಗೊನ್ದಣಿ, ಗೊನ್ದಳ. A mass; an assemblage; a concourse of people, a crowd, a throng (ದೊನ್ದಳಿ, ಗಡಣ Čt. I, 34; ನಿಕುರುಮ್ಬ II, 47; ಒಡ್ಡು Šm. 96; ಕೇಟಿ, ಸಾಲ್, ವಿಕೀರ್ಣ 107; Abh. P. 3, 116; Grj. 2, after 106; 10, after 79; J. 12, 4). ಶಬರರ ಗೊನ್ದಣಂ (ಬೇಡು Šm. 32). ಹಬ್ಬದ ಗೊನ್ದಣ (My.).

ಗೊನ್ದಣಿ gŏndaṇi. = ಗೊನ್ದಣ, etc. (ತೆರಳ್ಕೆ, ಸಾಲ್, ದೊನ್ದಳಿ, ಗೊಂಗೆ, ನೆರವಿ, ಗುಮ್ಪು, etc. Šm. 54; ಜಂಗುಳಿ, ಗೊಂಚಿ, ಗುಮ್ಪು, ಗುಣ್ಪು, etc. Kk. 17).

ಗೊನ್ದಣಿಸು gŏndaṇisu. To assemble (v. i.), etc. (ಸಮೂಹ Šmd. Dh.; Grj. 6, 63); to be plentiful, etc. (ಬಾಹುಲ್ಯ Šmd. Dh.).

ಗೊನ್ದಲ gŏndala. Confusion (B. 4, 137; Tĕ. ಕೊನ್ದಲ; Mhr. ಗೋನ್ಧಳ); bustle (C.; Mhr.); tumult (C.; Mhr.).

ಗೊನ್ದಲಿಗ gŏndaliga. A man who makes music in honour of Pârvatî and sings her stories (S. Mhr.; Mhr. ಗೋನ್ಧಳ, a tumultuous festivity in propitiation of dêvî).

ಗೊನ್ದಳ gŏndaḷa. = ಗೊನ್ದಣ, etc. (Č. Bp. 42, 15; J. 3, 17).

ಗೊನ್ದಳಿಸು gŏndaḷisu. = ಗೊನ್ದಣಿಸು. (Čpr. 7, 114).

ಗೊನ್ದಿ gŏndi. = ಗೊನ್ದು, (ಗೊಲ್ಲಿ). An alley, a lane, a bye-place (My.; Tĕ. ಗೊನ್ದಿ, ಗೊರಜೆ, ಗೊಜ್ಜೆ; M. ಕುಟುಕ್ಕು; T. ಕೋಜು; Mhr. ಗೋಣ್ಣಾ). See ಸನ್ದಿ-. **2,** a narrow passage in the ocean, a strait (My.).

ಗೊನ್ದು gŏndu. = ಗೊನ್ದಿ. (My.).

ಗೊಪ್ಪೆ gŏppĕ. = ಕೊಪ್ಪೆ. (C.). — ಗೊಪ್ಪೆಮರ. The Papaw tree, Carica papaya L. (St. & Pl.).

ಗೊಬಕು gŏbaku. = ಗುಬುಕು. The note of a frog (S. Mhr.). — ಗೊಬಕು ಗೊಬಕು. rep. (S. Mhr.).

ಗೊಬ್ಬರ gŏbbara. (fr. ಕೊಬ್ಬು 1). Manure (C.; Tu.). ಗೊಬ್ಬರದ ಕಿಚ್ಚು (ಕರೀಷಾಗ್ನಿ, ಕರ್ಮ Nr.). ದನಾ ತಿಮ್ಬುವವನಿಗೆ ಗೊಬ್ಬರದಾಣೆ ಏನು? (Prv.). ಮರ್ಬೆಮ್ಬ ಗೊಬ್ಬರಮಂ ತಳಿದು (Ršv. 11, 68). ಸಮತೆಯೆನ್ದೆಮ್ಬ ಗೊಬ್ಬರವ ಚೆಲ್ಲಿ (Sarpabhûshaṇa in B. 5, 319). **2,** the measles (S. Mhr.; Mhr. ಗೋವರ).

ಗೊಬ್ಬಳಿ gŏbbaḷi. = ಗೊಬ್ಬುಳಿ, etc. (My.). See ಕಸ್ತೂರಿ-.

ಗೊಬ್ಬು gŏbbu. (Tu. ಗೊಬ್ಬು, a play, dance, game; *cf.* ಕುಪ್ಪ 2). — ಗೊಬ್ಬೂರ್. -ಊರ್. N. (Bp. 56 sum.; 56, 1. 10. 14. 32. 42). ಎಲ್ಲಿಯೂ ಇಲ್ಲದ್ದು ಗೊಬ್ಬೂರಲ್ಲಿ ಉಣ್ಟನ್ತೆ (Prv.).

ಗೊಬ್ಬುಳಿ gŏbbuḷi. = ಬೊಬ್ಬುಳಿ, etc. (My.).

ಗೊಮ್ gŏm. A sound emitted by some big flies (S. Mhr.).

ಗೊಮ್ಬೆ gŏmbĕ. 1. = ಕೊಂಗೆ 1, etc. A mass, etc. (ಬೊಮ್ಬಲ್, ತುಱುಗಲ್, ಗೊನ್ದಣಿ, ಗುಮ್ಮೆ, etc., ಸಮೂಹ Šs.; Šmd. 54, where o. r. ಗೊಂಗೆ).

ಗೊಮ್ಬೆ gŏmbĕ. 2. = ಬೊಮ್ಬೆ. An image, an idol; a puppet, a doll (C.); the pupil of the eye (C.; B. 3, 30). ಕಬ್ಬಿಣಗೊಮ್ಬೆ (ಸ್ಥೂಣೆ Si. 420). ಗೊಮ್ಬೆಯವು ತಾವೇತಕು ಇಲ್ಲವು, ಅಪ್ರಯೋಜನವು; ಗೊಮ್ಬೆಯಪ ದೇವರನೆ ಮಾಱಿಯೆ, ತಮ್ಬಿಗೆಯ ತಪ್ಪಲೆಯ ಕೊಣ್ಡರೆ, ಉಮ್ಬುದಕೆ ಕುಡಿವದಕೆ ಬಾಹವು (Jñs. 42, 14). ಆನೆಯ ಕಣ್ಣುಗೊಮ್ಬೆ ತಲೆಕೆಳಗು (Prv.). See Prv. s. ನೋಡು. — ಗೊಮ್ಬೆಮದುವೆ. A sham-marriage with dolls made by children (C.). — ಗೊಮ್ಬೆಯಾಟ. -ಆಟ. A puppet-show (C.).

ಗೊಯ್ gŏy. = ಕೊಂಯಿ. (S. Mhr.).

ಗೊರ gŏra. = ಕೊರ 1. (My.).

ಗೊರಗು gŏragu. = ಗೊರಬು, ಗೊರಬು. A kind of hood or cloak made of leaves or grass (My.; T. ಕುಡಲೈ).

ಗೊರಜೆ gŏrajĕ. N. of a plant (ಗುರ್ವೆ Mr. 149). — ಗೊರಜೆಪಲ್ಯ. A common weed used as a potherb, Digera arvensis Forsk. (Z.). — ಗೊರಜೆಮರ. A small tree commonly cultivated, Flacourtia catafracta Roxb. (St. & Pl.).

ಗೊರಟೆ gŏraṭĕ. = ಗೋರಣ್ಟೆ. (S. Mhr.).

ಗೊರಪ gŏrapa. = ಕೊರಪ. (My.).

ಗೊರಬ gŏraba. = ಗೊರಬು. (G.).

ಗೊರಬು gorabu. = ಗೊರಗು. (S. Mhr.).

ಗೊರವ gŏrava. A class of Šaiva beggars (C.; Abh. P. 8, after 62). ಗೀರ್ವಾಣಭಾಷೆಗಳ್ ಏಕೆ ಗೊರವಗೆ? (Abhâ. 1, 40). **2,** Šiva, practising as a mendicant (S. Mhr.; ಮುಕ್ಕಣ್ಣ Čt. I, 2; II, 28; ಶಿವ Kk. 4; ಬೆಳ್ಳಡಿ 76; ಈಶ್ವರ Šm. 2). ಗೊರವನಲ್ಲದೆ ಪೊಗಟೆಂ (Šmd. 57, o. r. ದೇವರಲ್ಲದೆ). See Bp. 18, 9. 12; 32, 15. 54; 50, 54; 52, 7; Šsv. 4, 30. 63; ಕೀಱು-, ಬೂದಿ-, ಬೋಱು-. **3,** = ಗೊರವಂಕ. (Šsv. 3, 33).

ಗೊರವಂಕ gŏravaṅka. = ಗೊರವಂಕೆ. The common Maina, Acridotheres tristis or the Pastor (Bd.; My.; T. ಕುರಗ; Tĕ. ಕೊರವಂಕೆ, ಗೊರವಂಕೆ, ಗೋರಿ, ಗೋರಕ, ಗೋರಂಕೆ, ಗೋರಿಂಕೆ, ಗೋರುವಂಕೆ).

ಗೊರವಂಕೆ gŏravaṅkĕ. = ಗೊರವಂಕ. (ಸಾರಿಕೆ Si. 484).

ಗೊರವಿ gŏravi. = ಗೊರವು. An evergreen tree which makes good torches, Ixora parviflora Vahl. (Z.; My.; T. ಕೋರಾನ್; Tĕ. ಕೊಱವಿ, ಕೊಱಿವಿ, ಕೊಱವೆ, a firebrand; the touchwood tree, used for torches, Sapindus tetraphyllus; see s. ಕೊಳ್ಳಿ). — ಗೊರವಿಕಡ್ಡಿ. A branch of the ಗೊರವಿ used by post-runners (My.).

ಗೊರವಿತಿ gŏraviti. A female of the gŏrava-beggars (My.). ಸೂಳೆ ಮುಪ್ಪಾಗಿ ಗೊರವಿತಿ ಆದಳು (Prv.).

ಗೊರವು gŏravu. = ಗೊರವಿ. (My.).

ಗೊರಸು gŏrasu. = ಗೊರಸೆ, ಗೊರಿಸೆ, ಗೊರುಸು. A hoof (My.; B. 4, 191; T. ಕುರಚ್ಚೈ; Tĕ. ಕೊರಿಜೆ, ಗೊರಿಜೆ, ಗೊರಿಸೆ; *cf.* ಕೊಳಗ 2 & Sk. ಖುರ). ಧರ್ಮವಿಲ್ಲದ ಅರಸು ಮುರಿದ ಕಾಲಿನ ಗೊರಸು (Dp. 54). See Si. 274. 406. — ಗೊರಸುಹುಲ್ಲು. The plant Saccharum spontaneum (ಕಾಶ, ಇಕ್ಷುಗನ್ಧೆ, etc. Si. 163; T. ಕುರ).

ಗೊರಸೆ gŏrasĕ. = ಗೊರಸು. (My.).

ಗೊರಿಮಿಡಿ gŏrimiḍi. = ಗೋರಿಮಿಡಿ. (ವಾಯಸೋಲಿ, ಸ್ವಾದುರಸೆ, ವಯಃಸ್ಥೆ, ಕಾಕೋಲೀ ಸೊಪ್ಪು Si. 158; Tĕ. ಕೊರಿಮಿಡಿ, ಗುಲಿಮಿಡಿ, ಗೊಲುಮಿಡಿ; *cf.* ಗೋರಟೆ).

ಗೊರಿಸೆ gŏrisĕ. = ಗೊರಸು. (My.; Si. 274. 431).

ಗೊರುಸು gŏrusu. = ಗೊರಸು. (My.).

ಗೊರೆ gŏrĕ. A sound, voice, word (Bh. 1, 8, 76; T. ಕುರೈ; *cf.* ಕೊರಲ್ಬು).

ಗೊಱ್ gŏṟ. A sound in imitation of snoring (*cf.* ಕೊರೆ 1). — ಗೊಱ್ ಗೊಱ್. rep. (C.).

ಗೊಱಕು gŏṟaku. = ಕುಱುಕೆ, etc. (My.).

ಗೊಱಟೆ gŏṟaṭĕ. = ಕೊಟ್ಟೆ, etc. (My.).

ಗೊಱಲೆ gŏṟalĕ. (= ಕೊಱಲೆ No. 2, ಗೊದ್ದ 2). A kind of termites (S. Mhr.).

ಗೊಱಿಕೆ gŏṟikĕ. = ಗೊಱಕು, etc. (My.).

ಗೊಱುಕು gŏṟuku. = ಗೊಱಿಕೆ, etc. (My.).

ಗೊಱ್ಱು gŏṟṟu. The grumbling sound in the belly, or when going to stool, at the time of diarrhoea (S. Mhr.).

ಗೊರ್ಕು gŏṟku. = ಗೊಱಕು, etc. (My.).

ಗೊರ್ಕೆ gŏṟkĕ. = ಗೊಱಕು, etc. (My.).

ಗೊಲಸು gŏlasu. = ಗೊಣಸು Nos. 1 & 3. (My.; Tĕ. ಗೊಲಸು, a chain).

ಗೊಲುಮಿಡಿ gŏlumiḍi. (ಇಕ್ಷುಗನ್ಧೆ, ಕೋಕಿಲಾಕ್ಷ, etc., ಕೊಳವಂಕೆ Si. 147).

ಗೊಲೆ gŏlĕ. 1. (Knot-place): the notched extremity or horn of a bow (ಕೊಪ್ಪು, ಪಿಳ್ಕು, ಕೋಟೆ Šm. 43; ಕೊಪ್ಪು 101; ಕೊಪ್ಪು, ಪಿಳ್ಕು, ಧನುಃಕೋಟಿ Šs.; Čpr. 6, after 64; Abh. P. 7, 115; 14, 180; T. ಕುದ್ಯೈ, ಕುಲೈ; M. ಕುದೆ; *cf.* ಕೊಲಕೆ, etc., ಕುದೆ).

ಗೊಲೆ gŏlĕ. 2. = ಗೊನೆ. A cluster, etc. (My.).

ಗೊಲ್ಲ gŏlla. = ಗೊಲ್ಲಳ. (Tbh. of ಗೋಪಾಳ). A cowherd (ತುಱುವಳ, ಗೋಪ Šmd. 33; C.; Tĕ.; Si. 113. 186. 317. 439; Bp. 9, 12; 40, 31. 32; V. 6, 31; ಜಾತಿ-). ಗೊಲ್ಲರ ಹಳ್ಳಿ (ಅಭೀರಪಲ್ಲಿ, ಘೋಷ Nr.). ಗೊಲ್ಲರ ಅರಸಾಗಿ ಮಜ್ಜಿಗೆಗೆ ದರಿದ್ರ (Prv.). See Prv. s. ನಿಲಬಾಕು. 2, the assistant of a cash-keeper (My.). — ಗೊಲ್ಲಗೇರಿ. -ಕೇರಿ. A herdmen's street (Bp. 54, 40; My.).

ಗೊಲ್ಲತಿ gollati. = ಗೊಲ್ಲಿತಿ, ಗೊಲ್ಲಿತ್ತಿ. A female of the gŏllas (C.; Bp. 10 sum.; 10, 7).

ಗೊಲ್ಲವಾಳಿಗ gŏllavâḷiga. = ಗೊಲ್ಲ. (ಆಳೆಯುಮ್ಬ Čt. 1, 61; *cf.* ಗೋಪಾಲಕ).

ಗೊಲ್ಲಳ gŏllaḷa = ಗೊಲ್ಲ. (Bp. 9, 15. 16; 43, 50; 54, 16). — ಗೊಲ್ಲಳರಾಜ. A gŏllaḷa headman (Bp. 9, 35). — ಗೊಲ್ಲಳರಾಯ. = ಗೊಲ್ಲಳರಾಜ. (Bp. 24, 76).

ಗೊಲ್ಲಿ gŏlli. (= ಕೊಲ್ಲಿ?). A corner, a retired place (My.; *cf.* ಗಲ್ಲಿ, ಗೊಂಡ್ಡಿ; see M. s. ಗೋಟು 1). **2**, pudendum muliebre (My.; Tĕ.; Tu. ಕೊಯಿಲೆ; M. ಕುಟುಚ್ಚಿ; T., M. ಕೂದಿ; *cf.* ತುಲ್ಲು).

ಗೊಲ್ಲಿತಿ gŏlliti. = ಗೊಲ್ಲತಿ, etc. (ಗೋಪಿ Šm. 33; My.).

ಗೊಲ್ಲಿತ್ತಿ gŏllitti. = ಗೊಲ್ಲಿತಿ, etc. (My.).

ಗೊಳ್ gŏḷ. Imitation of the sound produced in loud laughter (*cf.* ಗಳ್ಳನೆ). ಗೊಳ್ಳೆನ್ತ ನಕ್ಕನು (My.).

ಗೊಳ gŏḷa. = ಗೊಡ. — ಗೊಳ ಗೊಳ್ ಎನ್ನು. = ಗೊಡ ಗೊಡ ಎನ್ನು, Nos. 1 & 2. (My.). 3, a sound produced at the evacuations of diarrhoea (S. Mhr.; *cf.* ಗೊಬ್ಬು).

ಗೊಳಗೊಳಿಕೆ (gŏḷa-kŏḷikĕ). = ಕೊಳಗುಳಿಕೆ, etc. (Z.; My.). **2**, the yellow thistle, Argemone mexicana L. (Z.).

ಗೊಳಲಿ gŏḷali. = ಬೊಳಲಿ. Husk, chaff, chiefly of paddy (S. Mhr.). **2**, the rind of a tamarind fruit (My.).

ಗೊಳೇ gŏḷê. = ಗೊಳೋ. (S. Mhr.).

ಗೊಳೋ gŏḷô. The sound produced in lamentation and weeping (My.; *cf.* ಗೋಳ್). ಗೊಳೋ ಎನ್ದು ಅಳುವದು (ಕ್ರನ್ದಿತ, ರುದಿತ, ಕ್ರುಷ್ಟ Si. 73).

ಗೊಳ್ಳೆ gŏḷḷĕ. The anus of males (My.; *cf.* ಗೊದ್ದೆ).

ಗೋ gô. gĕl-ô3. (= ಕೋ 1, ಗೊ). See ಆಗೋ, ಇಗೋ.

ಗೋ gô. = ಗೋವು. *A cow* (ಪಶು Nn. 5). 2, *a bull.* 3, *a ray of light* (ಮರೀಚಿ, ಕಿರಣ 5). 4, *heaven* (ಗೀರ್ವಾಣನಿಕೇತನ, ಸ್ವರ್ಗ 5). 5, *a thunder-bolt* (ವಜ್ರ 5). 6, *an arrow* (ಬಾಣ, ಅಮ್ಬು 5). 7, *the earth* (ಧರಾತಲ 5). 8, *a quarter, a region* (ದಿಶಿ, ದಿಕ್ಕು 5). 9, *water* (ಉದಕ 5). 10, *an eye* (ಲೋಚನ, ಕಣ್ 5). 11, *speech.* 12, *Sarasvatī* (ವಾಣಿ, ಸರಸ್ವತಿ 5). 13, the hairs of the head (or of the body, ತಿರೋಜ 5; ಕೇಶ Mr. 496). 14, the belly (ಕುಕ್ಷಿ, ಹೊಟ್ಟೆ 5; ಕುಕ್ಷಿ 496). 15, a tree (ಭೂಜ, ಮರ 5). 16, a wave (ವೀಚಿ, ನೀರತೆರೆ 5). 17, a bird (ವಿಹಂಗ, ಪಕ್ಷಿ 5). 18, a horn (ಶೃಂಗ, ಕೋಡು 5). 19, the sun. 20, the moon. 21, a mountain (ಪರ್ವತ, ಬೆಟ್ಟ 5).

ಗೋಕಣ್ಟಕ gô-kaṇṭaka. *The plant Asteracantha longifolia* Nees. 2, = ನೆಗ್ಗಿಲ್, q. v.

ಗೋಕರ್ಣ gô-karṇa. A cow's ear. 2, *a kind of deer, Antilope picta* (ರೋಮಿ, ಚಮರಿಮೃಗ Mr. 163). 3, *a span from the tip of the thumb to that of the ring-finger.* 4, a serpent. 5, a place of pilgrimage on the Western Coast. ಎಲ್ಲರೂ ಗೋಕರ್ಣಕ್ಕೆ ಹೋದರೆ ಗೋಕರ್ಣದವರು ಗಾಳಕ್ಕೆ ಹೋದರು. — ಗೋಕರ್ಣದ ಕೆಲಸಿಯ ವ್ಯಾಪಾರ (Prvs.). See Prv. s. ತಿರಿ 3.

ಗೋಕರ್ಣಿ gô-karṇi. *The plant Sanseviera zeylanica* Willd.

ಗೋಕುಲ gô-kula. A herd of kine, a multitude of cattle (J. 13, 37); *a cow-house or station.* 2, a tract or village on the river Yamunâ, the residence of Kṛishṇa during his youth (J. 15, 11);—the mud-figures of men, cattle, etc. in representation of the village made on the 8th of śrâvaṇa (Mhr.). See ಶರೆ 6.

ಗೋಕುಲಾಷ್ಟಮಿ gôkula-ashṭami. The 8th of śrâvaṇa-kṛishṇapaksha, the birthday of Kṛishṇa (My.; Mhr., Br.).

ಗೋಕ್ಷುರ gô-kshura. *The plant Asteracantha longifolia* Nees. 2, the plant Tribulus lanuginosus (see ನೆಗ್ಗಿಲ್).

ಗೋಕ್ಷುರಕ gô-kshuraka. *Asteracantha longifolia.* 2, = ಗೋಕ್ಷುರ 2.

ಗೋಗರೆ gôgarĕ. The bellowing sound of a bull-frog (*cf.* ಗೊಡರು). **2**, ಗೋ (= ಗೋಳ್) -ಕರೆ 1, to beg loudly and repeatedly in an humble way (My.). — ಗೋಗರೆಗಪ್ಪೆ. -ಕಪ್ಪೆ. The bull-frog (My.; Tĕ. ಗೋಣ್ಡ್ರುಕಪ್ಪೆ).

ಗೋಗರೆತ gôgarĕta. The act of begging loudly and repeatedly in an humble way (My.).

ಗೋಗಿ gôgi. (= ಗೋಣಿ 2). The Deckanee hemp, Hibiscus cannabinus L. (Tĕ. ಗೋಗು, ಗೊಲುಗು, ಗೋನು, ಗೊಂಗೂರೆ, Hibiscus cannabinus = ಪೀಲು, ಗುಡಫಲ sic!). — ಗೋಗಿನಾರು. A hemp produced from the gôgi (Si. 127; Tĕ. ಗೋಗುನಾರೆ).

ಗೋಗಿಸು gôgisu. To vomit (? Bp. 25, 30).

ಗೋಚರ gô-čara. Ranged by cattle; offering range or field or scope for action, within the range of, accessible, attainable, within the power; perceivable by the mind, sense, or the eye. 2, the range of cattle, pasturage; *range in general, district, province; an abode, a dwelling place.* 3, *an object of sense.*

ಗೋಚರಿಸು gôčarisu. To come within the range of the mind or of the eyes, to become perceivable, to appear (Mr. 539; J. 28, 7. 8; My.).

ಗೋಚಿ gôči. = ಗೋಸಿ. A clout, a cloth to cover the privities (My.; Tĕ.; *cf.* ಕೋವಣ, ಗವಸಣಿ).

ಗೋಚು gôču. (fr. ಗೋರು 1). To sweep together, to heap (as filth, My.; *cf.* ಗುಡಿಸು 2); to plunder (My.).

ಗೋಜಲ gô-jala. Cow's urine (ಗೋಮೂತ್ರ Mr. 182).

ಗೋಜಾತಿ gô-jâti. Cattle. 2, cattle-like nature, a brutish, beastly, lewd nature (My.).

ಗೋಜಿಹ್ವೆ gô-jihvĕ. *The plant Phlomis esculenta* Roxb. (or Elephantopus scaber, or a kind of Hieracium).

ಗೋಜು gôju. **1.** = ಗುಂಜು 2. (My.).

ಗೋಜು gôju. **2.** = ಗುಂಜು 3. The state of being entangled, as thread (My.). **2**, that of being connected or of having to do with, intercourse, etc. (C.; *cf.* ಗೊಡವೆ). ಅವನು ಅಕೆಯ ಗೋಜಿಗೆ ಹೋಗದೆ (B. 4, 185). **3**, that of being embarrassed, trouble, etc. (C.; Tĕ. ಗೋಜು, ಗೋಡು).

ಗೋಂ gôṅ. (= ಗೋವೆ). — ಗೋಂಜೋಳ. Maize or Indian corn (S. Mhr.).

ಗೋಟ gôṭa. A harassing, pestiferous person (? Bp. 40, 52; Tĕ. ಗೋಜಾಡು, ಗೋಟಾಡು, to dun, pester, harass).

ಗೋಟಚಿ gôṭači. = ಗೊಟ್ಟಚಿ, q. v.

ಗೋಟಿ gôṭi. Harassing (?). — ಗೋಟಿಗೊಳಿಸು. -ಕೊಳಿಸು. To harass (? Râm. 1, 5, 32).

ಗೋಟು gôṭu. **1.** = ಕೋಣ್ಟು. A corner, an angle; a point of the compass, a quarter or region;

an edge (ಅತ್ರಿ, ಪಾಲಿ Nr.; ಅತ್ರಿ Mr. 442, o. r. ಗ್ಗೋರು; ದೆಸೆ Bhn. 41; Bh. 10, 6, 16; M. ಕೊಲ್ಲಿ, ಕೊಳ್ಳು, ಕೋಡಿ, ಕೋಡು, corner; *cf.* ಗೊಲ್ಲಿ; for "bending" see ಕೊಲ್ಲೆ and ಕೋಡು 1).

ಗೋಟು gôṭu. 2. (= ಕೋಜು 2). The state of being joined, mingled or mixed. 2, fringe, ribbon, edging, trimming (My.; Tĕ.). — ಗೋಟಾಡಿಸು. -ಆಡಿಸು. To mix together, to stir (S. Mhr.).

ಗೋಟು gôṭu. 3. The state of being full grown, but hard (Tĕ. ಗೊಣ್ಟು, ಗೋಟು). 2, = ಕೋಟದಿಕೆ. (C.). — ಗೋಟಡಿಕೆ. -ಅಡಿಕೆ. A hard, inferior kind of areca nut (C.; B. 4, 164; Tĕ. ಗೋಟುಪೋಕ, ಗೊಣ್ಟು-). ಅದರೆ ಬಸ್ದು ಅಡಿಕೆಮರ, ಹೋದರೆ ಒಂದು ಗೋಟಡಿಕೆ (Prv.).

ಗೋಟು gôṭu. 4. (= ಕೊರಟು). A stunted division of the tamarind fruit (My.).

ಗೋಟು gôṭu. The border or hem of a garment, etc. (S. Mhr., Tĕ.; Mhr., H. ಗೋಟ). 2, a cloak of broadcloth (My.).

ಗೋಟೆ gôṭĕ. = ಕೊಪ್ಪ, etc. (My.).

ಗೋಟ್ಟಿ gôṭṭi. Tbh. of ಗೋಷ್ಠಿ (Šmd. 370). — ಗೋಟ್ಟಿಗಳ್ಗುಡಿ. -ಕಳ್-ಕುಡಿ. To drink toddy in company (ಸಪೀತಿ, ಸಹಪಾನಕ Hlâ.). See Prv. s. ಗಾಡೆ.

ಗೋಡಂಬೆ gôḍambĕ. The seed of the Semecarpus or marking-nut tree (Mhr., S. Mhr.).

ಗೋಡು gôḍu. Sediment taken from the bottom of wells, tanks, etc. (My.).

ಗೋದುಂಬೆ gôdumbĕ. *A kind of cucumber, Cucumis madraspatanus.* 2, a Coloquintida.

ಗೋಡೆ gôḍĕ. Tbh. of ಕೋಟೆ (Šmd. 338). A wall (ಕುಡ್ಯ, ಭಿತ್ತಿ Nr.; Mr. 194; ವಣ್ಣ 497; ಪಾಲಿ, ಭಿತ್ತಿ Nn. 31; ಭಿತ್ತಿ 112; ಕೇರ್ Ct. I, 60; Kk. 46; ಕೇರ್, ಕುದುರ್ Šm. 57; C.; Tĕ. ಗೋಡ; Sk. also ಕುಡ್ಯ). ಗೋಡೆ ಬಿದ್ದರೆ ಜಗಲೀ ಮೇಲೆ.—ಗೋಡೆ ಇದ್ದರೆ ಚಿತ್ರ ಬರೆಯ ಬಹುದು.—ಗೋಡೆ ತೊಳದರೆ ಬರಿ ಮಣ್ಣೇ.—ಗೋಡೇ ಹಾಯುವವ ಬೇಲೀ ಹಾಯನೇ? (Prvs.). See Bp. 52, 32; 60, 49; ಅಡ್ಡ-, ಅರ-, ಕನ್ನಡಿ-. — ಗೋಡೆಗನ್ನ. -ಕನ್ನ. A hole made by burglars in a wall (C.). See ಬಲು-. — ಗೋಡೆಮಲ್ಲಯ್ಯ. N. (Bp. 58, 5).

ಗೋಣ್ gôṇ. = ಗೋಣು, ಗೋಣು, ಗೋಂಟ್ 2. The nape of the neck, the neck; the throat (ಗೊಂಕ Šmd. II; Ct. I, 9 as ಗೋಣಿ; ಕೊರಲ್, ಕತ್ತು, ಗಲ Šm. 71, o. r. ಗೋಂಟ್; ಗಲ Bhn. 55; Bh. 1, 7, 40; 7, 1, 18; Šsv. 3, 53. 56; 4, 9; J. 12, 42). — ಗೋಣ. -ಅ 3. = ಗೊಣ. A man with a neck. See ಎಣ-. — ಗೋಣಡಿಗೊಳ್. -ಕೊಳ್. To put the neck down (Šsv. 4, 25). — ಗೋಣ್ಮುರಿ. 1. To twist the neck (Šsv. 4, 6). — ಗೋಣ್ಮುರಿ. 2. = ಗೋಟ್-. Twisting the neck; injuring, killing (ಹಿಂಸೆ Ss.). — ಗೋಣ್ಮೊಟಗು. = ಗಳಧ್ವನಿ. (J. 11, 22).

ಗೋಣ gôṇa. = ಕೋಣ, etc. (Bp. 54, 52). — ಗೋಣಗೊಯ್ಕ. -ಕೊಯ್ಕ. = ಗೋಣು-. A woman who is a cut-throat (Bp. 40, 55). — ಗೋಣಗೊಯ್ಲು. -ಕೊಯ್ಲು. A cutting of throats (Bh. 8, 24, 42)

ಗೋಣ gôṇa. Tbh. of ಘೋಣೆ. (ಪ್ರೋಥ, ಮುಸುಡು Mr. 274). 2, an ox (*cf.* ಕೋಣ).

ಗೋಣಿ gôṇi. 1. One of the Tatsamas (Šmd. 384; Šm. 77). A sack, a pack-sack (ಸ್ಯೋನ G.; C.; Mhr.; Tĕ. ಗೋಣೆ, ಗೋನೆ; M. ಕೋಣಿ; T. ಕೋಣಿ, ಕೋಣಿಗೈ, ಕೋಣಿಯಲ್; see ಗವಸಣಿ). ಗೋಣಿ ಬಲ್ಲುದೆ ಎತ್ತಿನ ಆ ದುಃಖವ? (Dp. 87). ಅಣ್ಣೆಯ ಹಣ್ಣಿಗೆ ಗೋಣೀ ತ್ಯಾಪೆ ಹಚ್ಚ್ಯಾರೋ? (Prv.). See Bp. 18, 6; 32, 51; Si. 309. 320; ಕಲು- No. 1, ಪೆಟ-, ಬಲು-; Prvs. s. ಪ್ರಾಣಿ, ರಾಣಿ. — ಗೋಣಿಚೀಲ. = ಗೋಣಿ. (My.). — ಗೋಣಿತಟ್ಟು. Sackcloth (C.; Mhr. ಗೋಣತಾಟ). — ಗೋಣಿದಡಾರ. A confluent kind of small-pox (My.). — ಗೋಣಿಯ ಮಲ್ಲಿದೇವ. N. (Bp. 58, 9).

ಗೋಣಿ gôṇi. 2. = ಕೋಣಿ. (R.; perhaps Si. 127).

ಗೋಣಿ gôṇi. 3. = ಉಗುನಿ, ಒಗನಿ, ಕೋನು. — ಗೋಣಿಮರ. A small medicinal tree, Salvadora persica L. (St. & Pl.; see Si. 127). See ಗುಡ್ಡದ-, ಚಿಟ್ಟ-.

ಗೋಣಿ gôṇi. 4. = ಕೋಳಿ 2. The tree called Ficus elastica Roxb. (My.); the Ficus religiosa (ಪಿಪ್ಪಲ Mr. 118, o. r. ಗೋಳಿ). See ಕಲುಗೋಣಿ No. 2.

ಗೋಣಿ gôṇi. = K. ಗೋಣಿ No. 1. A sack; (a burden of cares, etc. Mhr.); ragged clothes. 2, the measure of a drôṇa.

ಗೋಣಿಕಾಪುತ್ರ gôṇi-kâputra. (Šmd. 385; Kk. 98). A burdensome bad son.

ಗೋಣು gôṇu. = ಕೋಣ್, etc. (C.). See B. 3, 64. 94; 4, 134; Prvs. s. ಬಾಣ, ಕಳುನ. — ಗೋಣುಗೊಯ್ಕ. -ಕೊಯ್ಕ. A man who is a cut-throat (S. Mhr.). — ಗೋಣುಗೊಯ್ಕೆ. = ಗೋಣ-. (S. Mhr.). — ಗೋಣುಮಾರಿ. A man who kills, *i. e.* cuts the throat (Bh. 6, 7, 15).

ಗೋಣ್ಟು gôṇṭu. = (ಗೊಟ್ಟ 4), ಕೋಟು 1. A corner, etc. (ಅಣಿ, ಅತ್ರಿ, ಕೋಟಿ, ಅತ್ರ, ಕೋಣ Hlâ.; ಕೋಣೆ Kk. 82, o. r. ಗೋಣ್ಟ); a point of the compass, etc. (ಅನ್ತರಾಲ, ಎದಿಶ, ಪ್ರದಿಶ Hlâ.; Mr. 59; ದಿಗ್ಮೂಲೆ Ct. I, 42; ದೆಸೆ, ದಿಕ್ಕು Kk. 16; Šm. 13). See Rsv. 9, 7; 13, 90; ಮೂಗೋಣ್ಟು.

ಗೋಣ್ಡ gôṇḍa. *A person with a prominent navel; a prominent navel.* 2, a man of the province of Gôṇḍavana.

ಗೋಣ್ಡವನ gôṇḍa-vana. The province of Gôṇḍavana (*cf.* ಗೊಣ್ಡಾರಣ್ಯ).

ಗೋತ gôta. (= ಗಂಜಳ). The old, fetid urine of cattle (S. Mhr.).

ಗೋತ gôta. A dip, as of a bird or a paper-kite (Mhr.; My); a ruinous business; a loss; a fruitless trip (Mhr., H. ಗೋತಾ, ಗೋತ). — ಗೋತ ಹಾಕು. To die (My.).

ಗೋತಮ gôtama. N. of several ṛishis. See ಗೌತಮ.

ಗೋತ್ರ gô-tra. Protection or shelter for cows, a cow-pen; a herd of cattle (ಪಶುವ್ರಜ, ಗೋಸಮೂಹ Nn. 16); cattle (ಪಶು Mr. 503). 2, *family, race, lineage; kin* (ಕುಲ, ಬನ್ಧು 16; ವಂಶ 503); offspring (ಸನ್ತತಿ, ಪುತ್ರರ್ 16). 3, *a name, an appellation; the family name* (ನಾಮ, ಪೆಸರ್ 16; ಪೆಸರ್ 503). 4, *a mountain* (ಅಚಲ, ಪರ್ವತ 16; ಅದ್ರಿ 503). 5, the earth (ಧರೆ, ಭೂಮಿ 16; ಧರೆ 503). 6, a country (ಜನಾನ್ತ, ದೇಶ 16). 7, a road (G.). 8, a field (G.). 9, knowledge (G.). See Bp. 57, 19. — ಗೋತ್ರಯ. -ಅಯ. N. (Bp. 23, 14).

ಗೋತ್ರಜ gôtra-ja. *Born in the same family, a relation* (ಸನಾಭಿ, ಸಗೋತ್ರ, ಸಪಿಣ್ಡ Hlâ.; Mr. 311).

ಗೋತ್ರಪುತ್ರಿ gôtra-putri. Pârvatî (Bp. 61, 36).

ಗೋತ್ರಭಿದ್ gôtra-bhid. The mountain-splitter: *Indra.*

ಗೋತ್ರವಧೆ gôtra-vadhĕ. Murder or destruction of family or kin (J. 2, 21).

ಗೋತ್ರಾಗ್ರ gôtra-agra. The summit of a mountain (Grj. 3, 113).

ಗೋತ್ರಾದ್ರಿ gôtra-adri. A principal mountain; one of seven principal mountains (Čpr. 3, 104).

ಗೋತ್ರಾನ್ತ gôtra-anta. Destruction of families, etc. 2, *a patronymic.*

ಗೋತ್ರಾರಿ gôtra-ari. Indra.

ಗೋತ್ರಾರಿಪುತ್ರ gôtrâri-putra. Arjuna (J. 25, 13).

ಗೋತ್ರೆ gôtrĕ. *A herd of kine.* 2, *the earth.*

ಗೋತ್ರೈಕಪಾಲಕ gôtra-êka-pâlaka. Krishṇa (J. 6, 5). 2, the ocean (6, 5).

ಗೋದ gôda. = ಗೋರ್ಧ. The brain. (Sk.; G.).

ಗೋದಣ (gô-taṇa = taṇavu?). = ಗೋದಲಿ, ಗೋದಲು, ಗೋದಲೆ, ಗೋದ್ಲಿ. A sort of long crib made of planks (occasionally of mud), along which, on both sides, cattle are tied (Bp. 24, 57).

ಗೋದರುಡು (gô-taruḍu). A morbid swelling of the testicles (ಅಣ್ಡವಾತ, My.).

ಗೋದಲಿ gôdali. = ಗೋದಣ, etc. (C.; B. 4, 42).

ಗೋದಲು gôdalu. = ಗೋದಲಿ. (My., occasionally).

ಗೋದಲೆ gôdalĕ. = ಗೋದಲಿ. (C.; B. 4, 41).

ಗೋದಾನ gô-dâna. Presenting with cows, the gift of a cow (Grj. 2, 63).

ಗೋದಾರಣ gô-dâraṇa. *A plough.* 2, *a spade, a hoe.*

ಗೋದಾವರಿ gô-dâvari. Granting water or kine: the Godavery river (ಗೋದೆ Mr. 414). See Šmd. 103; Kk. 92; Šm. 52.

ಗೋದಿ gôdi. = ಗೋದಿವೆ, etc. Wheat, Triticum vulgare Villars. (ಗೋಧೂಮ Nr.; Mr. 373; Si. 304; C.; T. ಕೋದಿ; M. ಕೋದಮ್ಬು). See ಕಾಡು-, ಜವೆ-. ಗೋದಿ ಕಾಯೋ, ಮಗನೇ! ಅನ್ದರೆ ಊಬು ಚುಚ್ಚಿ ಕೊಣ್ಡ (Prv.). — ಗೋದಿಕಲ್ಲು. A stone for grinding wheat. ಹಾಡುವ ಗುಬ್ಬಿಗೆ ಗೋದಿಕಲ್ಲು ಕಟ್ಟಿದ ಹಾಗೆ (Prv.). — ಗೋದಿಕಲ್ಲುಶಾಸ್ತ್ರ. A ceremony for consecrating the gôdikallu, performed before the muñji or marriage (My.). — ಗೋದಿಕಾಯಿ. A grain of wheat; wheat (C.). — ಗೋದಿನಾಗರ. Naga tripudians (My.). — ಗೋದಿಬಣ್ಣಿಗೆನಾಗರಹಾವು. The cobra or cobra di capello, Naga tripudians (Bd.). — ಗೋದಿಬಸರ್ನ. The herb Andrographis echioides N. ab E. (Z.). — ಗೋದಿರವೆ. = ಗೋದಿಸಜ್ಜಗೆ. (My.). — ಗೋದಿಸಜ್ಜಗೆ. Granulated wheaten flour, rolong (C.). — ಗೋದಿಸರ. A string of gold beads in the form of grains of wheat (S. Mhr.; Si. 218). — ಗೋದಿಸಬು. Wheaten flour paste (C.). — ಗೋದಿಹಿಟ್ಟು. Wheaten flour (C.).

ಗೋದಿವೆ gôdivĕ. = ಗೋದುವೆ. (Si. 304).

ಗೋದುಮೆ gôdumĕ. = ಗೋದುವೆ. (My.). — ಗೋದುಮೆಹಾವು. The cobra, Naga tripudians (My.).

ಗೋದುವೆ gôduvĕ. = ಗೋದಿ, ಗೋದಿವೆ, ಗೋದುಮೆ. Tbh. of ಗೋಧೂಮ (Šmd. 359; I, 48; My.).

ಗೋದುಹ್ gô-duh. (ಗೋಧುಕ್). *A milker; a herdsman.*

ಗೋದೆ gôdĕ. A knot of a plant, or a bulbous root (ಗ್ರನ್ಥಿ Mr. 121).

ಗೋದೆ gô-dĕ. = ಗೋದಾವರಿ. *The Godavery river.*

ಗೋದ್ಲಿ gôdli. = ಗೋದಣ, etc. (C.).

ಗೋಧ gôdha. = ಗೋಧೆ. An iguana (ಉಡು Mr. 163).

ಗೋಧನ gô-dhana. Possession of cows or property in cattle. 2, *a multitude or number of cattle.*

ಗೋಧಾಪದಿ gôdhâ-padi. *The plant Cissus pedata* Lam. (see ಚೆಪ್ಪುತಟ್ಟು).

ಗೋಧಿ gôdhi. *The forehead.* 2, an iguana. 3, the Gangetic alligator.

ಗೋಧಿಕಾತ್ಮಜ gôdhikâ-âtmaja. *An iguana.*

ಗೋಧಿಕೆ gôdhikĕ. ಗೋಧಿಕಾ. *A kind of lizard or alligator, Lacerta godica,* the aquatic iguana (Si. 89).

ಗೋಧೂಮ gôdhûma. (also ಗೋಧುಮ). = ಗೋದಿ, ಗೋದಿವೆ, ಗೋದುಮೆ, ಗೋದುವೆ. *Wheat.*

ಗೋಧೂಮವರ್ಣ gôdhûma-varṇa. = ಗೋದಿಬಣ್ಣಿಗೆನಾಗರಹಾವು. Wheat-colour: a serpent with whitish spots (ಚುಬ್ಬು ಸಂಜನಿಸಿದ ಸರ್ಪಂ Mr. 402).

ಗೋಧೂಲಿ gô-dhûli. Dust of the earth, dust raised by cattle on the road when coming home: the period comprised between 30 palas before and 30 palas after sunset. 2, evening twilight (Mhr., S. Mhr.).

ಗೋಧೂಲಿಲಗ್ನ gôdhûli-lagna. Marriage performed in the period of gôdhûli (C.; Mhr.); evening twilight (J. 31, 49; 33, 25. 27; My.).

ಗೋಧೆ gôdhĕ. = ಗೊದ್ದ, ಗೋಧ. *A large kind of lizard;* an iguana (ಉಡು Nr.). 2, *a leathern fence for the left arm worn by archers.*

ಗೋನರ್ದ gô-narda. Bellowing like a bull; the bird Ardea sibirica; N. of a people. 2, *the fragrant grass Cyperus rotundus.*

ಗೋನರ್ದೀಯ gô-nardîya. N. of Patañjali, the founder of the yôga philosophy, and of a grammarian. (R.).

ಗೋನಸ gô-nasa. = ಗೋನಾಸ. *The rock snake, Boa constrictor, Python molurus.*

ಗೋನಾಸ gô-nâsa. = ಗೋನಸ. *The Boa constrictor* (ಹೆಬ್ಬಾವು Hlâ.; ಅಜಗರ, ವಾಹಸ, etc., ಹಿರಿಯ ಹಾವು Mr. 400).

ಗೋನಾಳಿ gônâli. The throat, the neck (ಕಣ್ಠ, ಗಲ Nr.). *Cf.* ಗೋಮನಾಳಿ, etc.; ಗೋಣ್.

ಗೋನಿಕಾಯ gô-nikâya. A herd of kine (ಜಾಲ, ಗೋಸಮೂಹ Nn. 34).

ಗೋನು gônu. **ಗೋನ್.** = ಗೋಣೆ 3, etc. (ಆಸಿವರ್ಣ, ಗೋಮಿಕೆ Mr. 139). — ಗೋನ ಮರ. The tree Careya arborea Roxb. (or Salvadora persica Lin.). See Nr. s. ಬಗನಿ. — ಗೋನುಮರ. = ಗೋನ-. (ಪೀಲು, ಗುಡಫಲ, etc. Si. 127). See ಬೆಟ್ಟದ-.

ಗೋನ್ದ gônda. Gum (S. Mhr.; Mhr., H.).

ಗೋನ್ದು gôndu. = ಗೋನ್ದ. (My.). See Prv. s. ಬೋನ್ಸು.

ಗೋನ್ದೆ gôndĕ. A bull, an ox (ವೃಷಭ Kk. 6; ಬಸವ, ವೃಷಭ Šm. 5; Tĕ. ಗೋದೆ, any horned cattle, a beast; ಗೊಡ್ಡು-, a bull). — ಗೋನ್ದೆವಟಿಯಿಗೆಯ. -ಪಟಿಯಿಗೆಯ. Whose banner is a bull: Šiva (Šm. 2).

ಗೋಪ gô-pa. = ಗೋಪು No. 1, ಗೋವ 1. *A cowherd* (ಪಶುಪಾಲಕ, ಗೋರಕ್ಷ Nn. 53). 2, *the chief of a cow-pen.* 3, *the superintendent of several villages, the head of a district.* 4, a king (ಭೂಪ, ಅರಸು 53). 5, Krishṇa (ವಿಷ್ಣು, ಹರಿ 53). 6, Šiva (ಶಂಕರ, ಈಶ್ವರ 53). 7, Indra (ದೇವೇನ್ದ್ರ, ಇನ್ದ್ರ 53).

8, Brahmâ (ಪಿತಾಮಹ, ಬ್ರಹ್ಮ 53). 9, the sun (ಪತಂಗ, ಸೂರ್ಯ 53). 10, the moon (ಚನ್ದ್ರ 53). 11, the mountain Mêru (ಮೇರು, ಮಹಾಮೇರು 53). 12, the bird Garuḍa (ಸುಪರ್ಣ, ಗರುಡ 53). 13, a bull (ಸೌರಭ, ವೃಷಭನು 53). 14, *myrrh.*

ಗೋಪಕಾಮಿನಿ gôpa-kâmini. A cowherd's wife; a herds-woman (ತುರುಗಾತಿ Ct. II, 106).

ಗೋಪಟುತ್ವ gô-paṭutva. Eloquence (Bp. 1, 6).

ಗೋಪತಿ gô-pati. = ಗೋಪ. A bull; *a bull roaming about at liberty.* 2, *the sun.* 3, *Indra.*

ಗೋಪತಿಧ್ವಜ gôpati-dhvaja. Whose banner is a bull: Śiva (Bp. 24, 46).

ಗೋಪತಿವಾಹನ gôpati-vâhana. Who rides on a bull: Śiva (Bp. 51, 82).

ಗೋಪಥ gô-patha. A cattle path, etc. 2, title of a brâhmaṇa treatise of the Atharva vêda. (R.).

ಗೋಪಧ್ವಜ gôpa-dhvaja. Śiva (V. 9, 68).

ಗೋಪನ gôpana. Guarding, preserving, keeping, protecting, protection; hiding, concealment. See ಅಡಂಗು, ಉಳಿ, ಮಡಗು, ಹುದುಗು.

ಗೋಪವನಭುಗಿನ gô-pavanabhuk-ina. The bright âdiśêsha-serpent (Bp. 1, 6).

ಗೋಪವಲ್ಲಿ gôpa-valli. The plant Ichnocarpus frutescens. 2, the creeper Sanseviera roxburghiana. 3, = ಮಾಯಿಣಿ, ಮಾಗಿಣಿ (Mr. 131).

ಗೋಪವಾಹನ gôpa-vâhana. Indra's vehicle: Airâvata (Bp. 1, 6). 2, Brahmâ's vehicle: the haṁsa (1, 6). 3, Vishṇu's vehicle: Garuḍa (1, 6). 4, whose vehicle is an ox, Śiva (61, 18).

ಗೋಪಸ್ತ್ರೀ gôpa-strî. A herds-woman (My.).

ಗೋಪಾದಪ gô-pâdapa. The svarga tree (Bp. 1, 6).

ಗೋಪಾನಸಿ gôpa-anasi. *The wood of a thatch, the bamboo frame-work on which it rests;* the eaves (or the end of the eaves) of a house (ಲೋವೆ Hlâ., Mr. 200; see Nr. s. ಲೋವೆ, and ಚೂರು).

ಗೋಪಾಯಿತ gôpâyita. *Guarded, preserved.*

ಗೋಪಾಲ gô-pâla. ಗೋಪಾಳ. = ಗೋಪ, ಗೋವಳ. *A cowherd;* 2, a caste of Vaishṇava mendicants (S. Mhr.). 3, = ಗೋಪಾಲಿ, q. v. 4, Śiva. 5, Kṛishṇa. 6, alms (My.). ಅವನಿಗೆ ಗೋಪಾಲ ಹಾಕ ಬೇಕು (My.). — ಗೋಪಾಲದವ. -ಅವ. A mendicant in general (My.). See Prv. s. ನೇಪಾಲ. — ಗೋಪಾಲಪುಟ್ಟಿ. A small bamboo basket carried by mendicants (S. Mhr.). — ಗೋಪಾಲಪುಟ್ಟಿಯ ತೊಪ್ಪಲು. A twining shrub, whose capsules when burst, resemble a hanging alms-basket, Aristolochia indica Willd. (Z.). — ಗೋಪಾಲಬುಟ್ಟಿ. = ಗೋಪಾಲಪುಟ್ಟಿ. ಗೋಪಾಲಬುಟ್ಟಿಯಲ್ಲಿ ಶನೀಶ್ವರ ಹೊಕ್ಕ ಹಾಗೆ (Prv.). — ಗೋಪಾಲಭಟ್ಟ. N. (Bp. 56, 42). — ಗೋಪಾಲರಾಯ. N. (My.). See Prv. s. ಗೋಳಿ 2.

ಗೋಪಾಲಕ gô-pâlaka. (= ಗೊಲ್ಲವಾಳಿಗ). A cowherd. 2, = ಗೋಪಾಲಿ, ಗೋಪಾಲಿತ. N. of the author of a vocabulary (Mr. 4).

ಗೋಪಾಲಿ gô-pâli. = ಗವಳಿ. 2, = ಗೋಪಾಲಕ No. 2 (Nn. 3, o. r. ಗೋಪಾಲ). — ಗೋಪಾಲಿಹಣ. A kind of gold fanam (My.).

ಗೋಪಾಲಿತ gô-pâlita. = ಗೋಪಾಲಿ No. 2. See Hlâ. s. ಕೋ 3.

ಗೋಪಿ gôpi. *A cowherd's wife,* especially applied to the cowherdesses of vṛindâvana, the companions of Kṛishṇa's sports; Kṛishṇa's foster-mother (My.); *a milkmaid* (ತುರುವಳ್ತಿ, ಗೊಲತಿ Śm. 33). See Bp. 10, 7; 54, 40. 2, *the plant Ichnocarpus frutescens* R. Br. 3, = ಗೋಪೀಚನ್ದನ (My.).

ಗೋಪಿತ gôpita. Protected; hidden, concealed.

ಗೋಪಿತಕ್ರಿಯಾಕಾರಕ gôpita-kriyâ-kâraka. A kind of čitra (Kâvy. III, 2, B, 75 seq.).

ಗೋಪಿತ್ತೆ gô-pittĕ. = ಗೋರೋಜ, q. v.

ಗೋಪೀಚನ್ದನ gôpî-čandana. A species of white clay, used by Vaishṇavas to make sectarian marks on the forehead, etc. (C.).

ಗೋಪೀನಾಥ gôpî-nâtha. Kṛishṇa; N. (B. 4, 183; C.).

ಗೋಪು gôpu. Tbh. of ಗೋಪ. N. (My.; B. 2, 7). 2, an ornament for the neck (S. Mhr.; Mhr. ಗೋಫ).

ಗೋಪುಚ್ಛ gô-pučča. A cow's tail; *a necklace consisting of two* (or more) *strings.*

ಗೋಪುರ gô-pura. = ಗೋಹುರ. *A town-gate;* a pyramidal tower over the gate of a city, over the gate of the encircling wall of a temple, etc.; a gate so overbuilt; *a gate in general.* See Bp. 53, 30; Śśv. 1, 67. 68; B. 5, 55. 2, *the fragrant grass Cyperus rotundus.*

ಗೋಪ್ಯ gôpya. To be protected, to be taken care of; to be kept secret or hidden; —(hidden). 2, *the son of a female slave* (ತೊತ್ತಿಂಗೆ ಪುಟ್ಟಿದಂ Mr. 310). See ಅಡಗು; Bp. 47, 8 (N.); Prv. s. ಪ್ರಾಪ್ತಿ.

ಗೋಪ್ಯಕ gôpyaka. *A servant, a slave.*

ಗೋಮತ್ gô-mat. *Rich in cattle.*

ಗೋಮತಲ್ಲಿಕೆ gô-matallikĕ. *A tractable and good cow* (ಬಳ್ಳಿ ತಪ್ಪ ಹಸು Mr. 180).

ಗೋಮನಾಳಿ gômanâḷi. = (ಗೋನಾಳಿ), ಗೋಮರಾಳಿ, ಗೋಮಲಾಳಿ, ಗೋಮಾಳೆ, ಗೋಮ್ಯಾಳಿ. The neck or throat including also the Adam's apple and its corresponding place in beasts (S. Mhr.).

ಗೋಮನ್ತ gômanta. N. of a mountain. (Bhâgavata 10, 53 sum.).

ಗೋಮಯ gô-maya. *Cowdung* (ಅಡೆ Kk. 62). See ಹೋರಿಯಡೆ.

ಗೋಮಯಪಿಣ್ಡ gômaya-piṇḍa. A cake of cowdung. See ಕುರುಳ್.

ಗೋಮಯಪಿಣ್ಡಪುಂಜ gômayapiṇḍa-puñja. A heap of cow-dung cakes. See ಬಾನ್.

ಗೋಮರಾಳಿ gômarâḷi. = ಗೋಮನಾಳಿ. (S. Mhr.).

ಗೋಮಲಾಳಿ gômalâḷi. = ಗೋಮರಾಳಿ. (S. Mhr.).

ಗೋಮಾಂಸ gô-mâṁsa. Beef (C.). As beef may not be eaten by most Hindus, it is used in swearing, as ಈ ಕೆಲಸ ನಾನು ಮಾಡಿದರೆ ಗೋಮಾಂಸ ತಿನ್ದ ಹಾಗಾಗುತ್ತದೆ (C.).

ಗೋಮಾನ್ತಕ gômântaka. The town of Goa (Mhr.; B. 2, 52).

ಗೋಮಾಯು gô-mâyu. Making sounds like cattle: *a jackal;* a kind of frog.

ಗೋಮಾರಿ gô-mâri. The bots, a disease of cattle caused by ticks: many animals perish by it (My.; Tĕ.; T. ಕೋಮಾರಿ).

ಗೋಮಾಳ gô-mâḷa. A public pasture-ground (My.).

ಗೋಮಾಳೆ gômâḷĕ. = ಗೋಮಲಾಳಿ, etc. The Adam's apple (My.).

ಗೋಮಿ gômi. *Rich in herds;* the owner of cattle or cows. See ತುರುವಾಳ.

ಗೋಮಿಕೆ gômikĕ. N. of a tree (= ಗೋನು, q. v.).

ಗೋಮಿನಿ gômini. (Šmd. 103). The great Lakshmî: the śakti of Vishṇu (ರಾಮೆ, ಮಹಾಲಕ್ಷ್ಮಿ Nn. 24; ಲಲಾಮೆ, ಮಹಾಲಕ್ಷ್ಮಿ 26; ಕಮಲೆ, ಮಹಾಲಕ್ಷ್ಮಿ 29; ಲಕ್ಷ್ಮಿ Mr. 18). ಮುಖಂ ಸುರತೋತ್ಸವಗೋಮಿನಿಮುಖಂ (Šmd. 81 Mdb. MS.).

ಗೋಮಿನೀತನುಜ gôminî-tanuja. Kâma (Mr. 22).

ಗೋಮು gômu. 1. A sort of centipede; one of the blemishes incidental to a horse, viz. a conspicuous line of reversed hair resembling a centipede (S. Mhr.; Mhr. ಗೋವು).

ಗೋಮು gômu. 2. Affectation of greatness, airs (R.; Mhr. ಗೋಮಾ).

ಗೋಮುಖ gô-mukha. A cow's mouth or face (ಪಶುತುಣ್ಡ, ಗೋವಿನ ಮುಖ Nn. 20); a square or round platter of wood, metal, or stone, to which a snout or spout is attached and which is used to put idols on (My.). 2, spreading unguents, plastering, smearing; *ointment, unguent* (ವಿಲೇಪನ, ಅನುಲೇಪನ 20; ಅನುಲೇಪನ Mr. 472). 3, a kind of musical instrument (ವಾದ್ಯಭೇದ 20). 4, purity, purification (ಶುದ್ಧ, ವಿಶುದ್ಧ 20). 5, the being fond of intoxicating liquor (ಆಸವಾಸಕ್ತತೆ, ಮದ್ಯಗೋಷ್ಟಿ 20). 6, a hole, a breach, a chasm.

ಗೋಮುಖವ್ಯಾಘ್ರ gômukha-vyâghra. A cow-faced tiger, *i. e.* a wolf in sheep's clothing (My.).

ಗೋಮುಖಸೂತ್ರ gômukha-sûtra. The snout or spout of the gômukha platter (My.; ಪ್ರಣಾಲಿ, etc. Si. 94).

ಗೋಮೂತ್ರ gô-mûtra. Cow's urine (ಗೋಜಲ Mr. 182).

ಗೋಮೂತ್ರಿಕೆ gô-mûtrikĕ. Similar to the course of cow's urine (fem.). 2, an artificial verse the second half of which repeats nearly all the syllables of the first (Kâvy. III, 2, B, 57. 60 seq.). See Bh. 10, 6, 24.

ಗೋಮೇದಕ gô-mêdaka. A gem or precious stone of a reddish colour (ಬನ್ಧುರ, ಪಿಶಂಗಾತ್ಮ Mr. 101).

ಗೋಮೇದಿಕ gômêdika. = ಗೋಮೇದಕ. (J. 17, 23).

ಗೋಮೇಧ gô-mêdha. The offering or sacrifice of a cow. (My.).

ಗೋಮ್ಯಾಳಿ gômyâḷi. = ಗೋಮರಾಳಿ, etc. The back or nape of the neck (ಅವಟು G.).

ಗೋಯುಗ gô-yuga. *The yoke or pair of oxen or other beasts.*

ತಕ್ತೆ taktĕ. = ತಕತೆ. A tabular statement, list, etc.; an account of particulars, as of receipts, expenses, etc. (My.; Mhr., H. ತಕ್ತಾ; Br.).

ತಕ್ಯ takya. A pillow, a cushion, or pad (Mhr., H. ತಕ್ಯಾ). ತಿಪ್ಪೆಯ ಮೇಲೆ ಕುಣ್ಡ್ರುವವಗೆ ತಕ್ಯ ಯಾತಕ್ಕೆ? (Prv.).

ತಕ್ರ takra. *Buttermilk with a fourth part of water* (according to others with still more water; ಅಳೆ Mr. 182). See ಅಳೆ, ಕಟಿಲ್. ತಕ್ರ ತಕ್ರನಿಗೆ ಸಹಾ ದುರ್ಲಭ (Prv.). See Prv. s. ತುಕ್ರ.

ತಕ್ರಬಲಿ takra-bali. A kind of dish or food. ಮೂಲಂಗಿ ಮೊದಲಾದವು ಉಳ್ಳಿ ಅಲ್ಲಂಗಳೊಳ್ ಪುಳಿವೆರಸಲ್ ಅವು ತಕ್ರಬಲಿಗಳಕ್ಕುಂ (Mr. 219).

ತಕ್ಷ taksha. A cutter; *a carpenter.*

ತಕ್ಷಕ takshaka. *A carpenter.* 2, *one of the principal serpents of pâtâla.* 3, N.

ತಕ್ಷಣ takshaṇa. Tbh. of ತತ್ಕ್ಷಣ. (My.; Tĕ.).

ತಕ್ಸೀರು taksîru. = ತಕಶೀರು. (My.).

ತಗ taga. 1. (= ತಗವೆ, ತಗೆ 2, ತಡ 1, ತೆಯ್ಯ). Stop, delay, etc. (ತಡದರ್ಥಂ Čt. I, 46; see ತಗೆ 1, ತಂಗು).

ತಗ taga. 2. = ತಗದು 1, ತಗೆದು. P. p. of ತಗೆ 1. See J. s. ತಗೆ 1 (ತಗ ತಗವ, ತಗ ತಗದು).

ತಗಚಿ tagači. = ಚಗಚೆ, etc. (ಪ್ರಪುನ್ನಾಡ, ಪ್ರಪುನಾಟ, ಏಡಗಜ, ದದ್ರುಘ್ನ, ಚಕ್ರಮರ್ದಕ, etc. Nr. *a;* My.; Sk. ತರ್ಕಣ, ತರ್ಕಲ, ತರ್ಬಟ).

ತಗಚೆ tagačĕ. = ತಗಚಿ, etc. (Hlâ.; My.). **2,** the undershrub Cassia occidentalis L. (St. & Pl.). **3,** the Indian mulberry tree, Morinda citrifolia L. (St. & Pl.). See ದೊಡ್ಡ-.

ತಗಜೆ tagajĕ. = ತಗಚೆ, etc. (Nr. *b*).

ತಗಡಿ tagaḍi. = ತಿಗಡಿ. (My.).

ತಗಡು tagaḍu. Metal beaten into a plate, a flat piece or sheet of metal (My.; Tĕ., T.; M. ತಗಡು, ತಗಿಡು; Mhr. ತಕಟ). See B. 3, 86; 4, 96. 124; Prv. s. ಬೇಗಡೆ.

ತಗಣಿ tagaṇi. = ತಗಣೆ, ತಗುಣಿ, ತಿಗಣೆ, ತಿಗುಣಿ. A bug (S. Mhr.; B. 1, 24; Tu. ಚಗುಳಿ, ತಗುಲೆ; Mhr. ಢೇಕೂಣ). — ತಗಣಿಗೊಮ್ಬು. -ಕೊಮ್ಬು. A peculiar thing or article of a peasant's cart (S. Mhr.).

ತಗಣೆ tagaṇĕ. = ತಗಣಿ, etc. (My.). ತಗಣೇ ಉಪದ್ರ ಮಗಳಿಗೂ ಬಿಡಲಿಲ್ಲ (Prv.). See Sp. s. ಒಕ್ಕಲಿಕ್ಕು.

ತಗದು tagadu. 1. = ತಗ 2, ತಗೆದು. P. p. of ತಗೆ 1, q. v.

ತಗದು tagadu. 2. (fr. ತಗು). That is not fit or proper (Abh. P. 14, 93).

ತಗರ್ tagar. 1. To be stopped or impeded; to impede, etc. (ಗತಿಬನ್ಧನ Šmd. Dh., Šm. 104; ತಗೆ Šmd. II, Kk. 93).

ತಗರ್ tagar. 2. ತಗರು. = ಟಗರು, etc. A ram (ಅಜಭೇದ Šmd. Dh.; ಅಜ Šm. 104; ಏಲಕ, ಏಡಕ, ವೃಷ್ಣಿ, ಮೇಷ, etc. Nr.; My.; Tĕ.; Bp. 29, 4; Mhr., H. ತಗರ, ತಂಗಡೀ). — ತಗರ್ದೇರ. -ತೇರ. Having a ram for his vehicle: fire (ಅನಲ Šm. 11). — ತಗರ್ವೆಣಗಿಸು. -ಪೆಣಗಿಸು. To cause rams to fight (J. 6, 39).

ತಗರ tagara. 1. = ತವರ, etc. Tbh. of ತಮರ or ತ್ರಪು. Tin (My.; Tĕ., T., M.).

ತಗರ tagara. 2. A shrub with fragrant white flowers, cultivated in gardens, Tabernaemontana coronaria Br. (ನನ್ದಿವಟ್ಟ Mr. 125; Tĕ. ತಗರೆ = ನನ್ದಿವರ್ಧನ).

ತಗರ್ಚೆ tagarčĕ. = ತಗಚೆ, etc. (ಪ್ರಪುನ್ನಾಡ, ಏಡಗಜ, etc. Si. 159).

ತಗಲಿಸು tagalisu. = ತಗಿಲಿಸು, ತಗುಲಿಸು. To cause to come in contact with, etc. ಚೈತ್ರದಲ್ಲಿ ಮೈತ್ರನಾದರೂ ಮೆಯ್ ತಗಲಿಸ ಕೂಡದು (Prv.).

ತಗಲು tagalu. = ತಗಿಲು, ತಗುಲು, (ತಗುಳ್). To come in contact with; to touch; to hit (v. i., My.; Tĕ. ತಗಲು, ತಗುಲು); to have sexual intercourse with (My.). ತಗಲಿದವನಿಗೆ ಹಗಲಿರುಳೇನು? (Prv.). See Si. 198. 247; B. 3, 45. 82; 5, 56. — ತಗಲಗೊಡು. -ಕೊಡು. To allow to come in contact, etc. (B. 5, 224). — ತಗಲು ಹಾಕು. (*i. e.* ತಗಲ-). To bring into contact, to join, to attach (My.). ತಗಲು ಹಾಕಲ್ ಪಟ್ಟದು (ಸಂಗೂಢ, ಸಂಕಲಿತ Si. 379; see also 303).

ತಗಲು tagalu. = ತಗುಲು, ದಗಲ್, q. v. (B. 4, 51; T. ತಗಲ್).

ತಗಲುಗಾಱ tagalu-gâṟa. A dishonest man, a cheat (My.). ತಗಲುಗಾಱನಿಗೆ ಬಗಲ ಮೇಲೆ ಜ್ಞಾನ (Prv.).

ತಗವುದು tagavudu. (= ತಗಹು 1). See s. ತಗೆ 1.

ತಗವೆ tagavĕ. (fr. ತಗೆ). (= ತಗ 1). Stop, delay; an impediment. ತಗವಪ್ಪೊಡೆ (= ತಗವೆ ಅಪ್ಪೊಡೆ, Šmd. 67, o. r. ತೆ-).

ತಗಹು tagahu. 1. (= ತಗವುದು). An obstacle; a hindrance, an impediment (ಪ್ರತಿಬನ್ಧ, ವಿಷ್ಕಮ್ಭ Mr. 453). ತಗಹಿಂ ಸಿಲ್ಕಿದಂ (Šmd. 157).

ತಗಹು tagahu. 2. (fr. ತಗು). Connection (Bp. 28, 54; Râm. 6, 13, 8); a continuous line or row; order (ಪಂಙ್ತಿ, ಪಂಕ್ತಿ Šm. 105).

ತಗಹುದು tagahudu. (for ತಗವುದು, 3rd person singular of a verb ತಗಸು, fr. ತಗು). It joins, it comes upon one (Bh. 1, 10, 13).

ತಗಾದೆ tagâdĕ. Urging for payment, dunning (My.; Mhr., H. ತಗಾದಾ). 2, a claim, suit, or dispute (Br., R., as H.).

ತಗಿಚಿ tagici. = ತಗಚಿ, etc. (ಪ್ರಪುನ್ನಾಡ, etc. Si. 159).

ತಗಿಲಿಸು tagilisu. = ತಗಲಿಸು, etc. (My.; Si. 63).

ತಗಿಲು tagilu. = ತಗಲು, etc. (My.). ಒನ್ದಕ್ಕೊನ್ದು ತಗಿಲಿದದು (ವ್ಯೂಢ, ಸಂಹತಿ Si. 418; see also 354. 273).

ತಗಿಸು tagisu. = ತೆಗಸು 1. (My.; B. 5, 161; *cf.* ತಕ್).

ತಗು tagu. To be (joined), fit or proper, to suit (T., M., Tĕ.). See ತಕ್ಕ, ತಗದು 2, ತಗಹು 2, ತಗಹುದು.

ತಗುಣೆ tagunĕ. = ತಗಣೆ, etc. (ಮತ್ಕಣ Mr. 166). ಮೊಗೆ ನೀರಿನೊಳಗೊನು ನೆಗೆದ್ ಅಡಿದನ್ದಿಗೆ, ತಗುಣೆ ಹೆಬ್ಬುಲಿಯ ಹಿಡಿದನ್ದು ಹೆಣ್ಣಿನ ಬಗೆಯ ನಮ್ಬುವದು (Sp.).

ತಗುಲಿಸು tagulisu. = ತಗಲಿಸು, etc. (My.).

ತಗುಲು tagulu. = ತಗಲು, etc. (My.).

ತಗುಲು tagulu. = ತಗಲು, etc. (My.).

ತಗುಲುವಿಕೆ taguluvikĕ. Touching, etc. ಜೇನೆ ತಗುಲುವಿಕೆ (ಸ್ಪರ್ಶ, etc. Si. 392).

ತಗುಸಿ tagusi. Decrease, want, deficiency, defect, scarcity (ಕುನ್ದು Bhu. 52; T. ತವಕ್ಕ; see ತವು 1; ತಗ್ಗು 1).

ತಗುಳ್ tagul̤. = (ತಗುಲು, etc.), ತಗುಳು 1. To be joined together; to come near, to approach, to meet, to unite one's self with; to commence (ಸನ್ಧಾನ Šs.; ಅಯ್ದು Šmd. Cm. 15. 189. 219. 279. 381; ಪತ್ತು 136; ಕೂಡಿ ಕೊಣ್ಡಿರು 348; ಬರ್ 381). **2,** to run after; to chase, to pursue; to drive away; to push back (ಅನುಧಾವನ Šmd. Dh.). P. p. ತಗುಳ್ದು. ತಗುಳ್ದಂ (Šmd. 49). See Šmd. 80; Čpr. 3, 9; 5, 79; Abh. P. 4, 38; 10, after 91; Bp. 3, 36; 21, 20; 37, 19; 51, 67; 54, 36; Rsv. 8, 102; Šsv. 4, after 99; J. 5, 27; 8, 39; 24, 67; 25, 27. 30; ಬೆನ್ನಗುಳ್.

ತಗುಳಿಸು tagul̤isu. To chase, to drive away (Bp. 60, 27).

ತಗುಳು tagul̤u. 1. = ತಗುಳ್. P. p. ತಗುಳಿ. (Bp. 13, 21. 23; 43-52; 50, 54. 80; 57, 37; 59 sum; Bhâgavata 10, 17, 21).

ತಗುಳು tagul̤u. 2. Coming near, etc. — ತಗುಳು ಮಗುಱು. Approaching and receding (J. 22, 29).

ತಗುಳ್ಚು tagul̤cu. 1. To join (v. t.), to attach, to put to (Čpr. 6, after 64). ಕೋಡ ಮೊನೆಯೊಳ್ ತಗುಳ್ಚಿದ ಸೂನುಗಿಗತ್ತಿ (Rsv. 6, after 11). **2,** to join one's self to, to get to, to come under the rule of. ಅರೆ ವಸ್ತುವಿನರ್ಥಮನ್ ಉಸಿರುತ್ತಿರೆ ಸಂಹಿತೆಯಂ ತಗುಳ್ಚುವುದು (ಅಯ್ದುವುದು, Šmd. 77 Cm.). **3,** to undertake anything, to engage in (ಉದ್ಯೋಗ Šmd. Dh.); to employ. ಕೊಟಿಸಕ್ಕದಮುಂ ತಗುಳ್ಚಿ (Šmd. 78).

ತಗುಳ್ಚು tagul̤cu. 2. (To put fire to), to set on fire, to kindle, to damage with fire (ಅಗ್ನಿದಾಧನ Šmd. Dh.; *cf.* ತಾಗುಳ?).

ತಗುಳ್ಪ tagul̤pa. The state of being joined, union (Čpr. 8, 96).

ತಗೆ tagĕ. 1. To stop, to arrest, to obstruct, to impede; to stun (ಸ್ತಮ್ಭನ Šmd. Dh.; ತಗರ್ Šmd. II; T. ತಗ್ಗೈ; see ತಂಗು 1, ತಡೆ 1). P. ps. ತಗ, ತಗದು, ತಗೆದು. ತಗೆದುದು (ತಳ್ವೊಯ್ದುದು, ಅಳಿಕಿಸಿದುದು, ಅಣ್ಣಲೆದುದು, etc., ಪ್ರತಿಹತ Šs.). ತಗದುದು (ತಗರ್ದುದು Kk. 93). ತಗ ತಗವ (J. 12, 22). ತಗ ತಗದು (J. 8, 39). — ತಗವುದು. = ತಗಹು 1. Arresting. 2, an impediment (ವಿಷ್ಕಮ್ಭ, ಪ್ರತಿಬನ್ಧ Hlâ.). 3, a trap, a snare (ಉನ್ಮಾಥ, ಕೂಟಯನ್ತ್ರ Hlâ.).

ತಗೆ tagĕ. 2. = ತಗ 1, etc. Stopping, etc. — ತಗೆವುಗಿಲ್. -ಮುಗಿಲ್. An obstructing cloud: the state of being greatly clouded (Abh. P. 9, 84).

ತಗೈರು tagairu. Dismissal, turning out (My.; Br., H.).

ತಗ್ಗಚ್ಚಿ taggačči. = ತಗಚ್ಚಿ, etc. (ಪ್ರಪುನ್ನಾಡ, ಏಡಗಜ, etc. Si. 159).

ತಗ್ಗಿ taggi. = ತಕ್ಕಿಲೆ. (ಜಯೆ, ಜಯನ್ತಿ, ತರ್ಕಾರಿ, etc. Mr.; ಜಯೆ, etc., ತಕ್ಕಿಲೇ ಗಿಡ Si. 137). **2,** N. of a tree (ಕರಿ Mr. 118). **3,** a large shrub, Clorodendron phlomoides L. f. (St. & Pl.). See Bp. 45, 41.

ತಗ್ಗಿ taggi. Tuggee, the practice of strangling and robbing, the practice of child-stealing (My.; H. ಠಗೀ).

ತಗ್ಗಿಸು taggisu. To make low; to bow, as the face or head; to lessen; to appease (My.; B. 4, 181). ತಗ್ಗಿಸಲ್ ಪಟ್ಟುದು (ಶಾನ್ತ, ಶಮಿತ Nr.).

ತಗ್ಗು taggu. 1. = ತಗ್ಗ್, ತಱು. To be or become low; to be depressed; to be bent down or inclined; to stoop (v. i.); to be humble, to humble one's self; to become less, to decrease; to fall in price; to be appeased, etc. (C.; Tĕ. ತಗ್ಗು, ತಱಗು, ತಱುಗು; Tu. ತಗ್ಗು). ತಗ್ಗಿದ ನೆಲ (ಪ್ರವಣ Nr.). ತಗ್ಗಿ ಇರ್ದುದು (ಅಧಃಕ್ಷಿಪ್ತ, ನ್ಯಂಚಿತ Mr. 449). ತಗ್ಗಿದವ ಎನ್ದಿಗೂ ನುಗ್ಗಾಗ (Prv.). See Čpr. 2, 44; Bp. 13, 25; 21, 40; 28, 55; 45, 41; 47, 16; Prv. s. ಮೆಟ್ಟು 1.

ತಗ್ಗು taggu. 2. = (ತರಗು, ತಾಗು 4), ತೆಗ್ಗು. Low ground; the state of being low; a depression, a sinking; a declivity; a hole; a flat, a valley; diminution; decrease; (diminu-

tiveness); scarcity, dearness; etc. (C.; Tĕ.). ತಗ್ಗಾದ ಗುಜ್ಜ (ವಾಮನ, ನೀಚ, etc. Si. 372). ಅಗಲ ಉದ್ದಗಳು ಸರಿಯಾಗಿ ತಗ್ಗುಗಳಿಲ್ಲದೇ ಇರುವನ್ನಾದು (ನಿಘ 400). See Prv. s. ಬೊಗ್ಗು 1. — ತಗ್ಗಾಳು. -ಆಳು. A dwarfish man (My.). — ತಗ್ಗುಗದ್ದೆ. A low paddy-field. ತಗ್ಗುಗದ್ದೆಗೆ ಮೂಱು ಬೆಳೆ, ಎತ್ತರ ಗದ್ದೆಗೆ ಒನ್ದೆ ಬೆಳೆ (Prv.). — ತಗ್ಗುದವಸ. Dear grain (My.). ತಗ್ಗುದವಸಕ್ಕಾಗಿ ಹಗ್ಗಾ ಕೊಣ್ಡ ಹಾಗೆ (Prv.). — ತಗ್ಗು ದಿನ್ನೆ. Dale and hill, low and rising ground, flats and prominences (My.; B. 4, 66). — ತಗ್ಗುನೆಲ. = ತಗ್ಗುಭೂಮಿ. (My.). — ತಗ್ಗುಬ್ಬು. -ಉಬ್ಬು. = ತಗ್ಗುದಿನ್ನೆ. (My.). — ತಗ್ಗುಭೂಮಿ. Low ground; a flat (My.; B. 4, 116). — ತಗ್ಗುಮುಗ್ಗು. Ups and downs, unevenness (My.; ವಿಷಮ G.; Tĕ. ತಗ್ಗುಮೊಗ್ಗು). — ತಗ್ಗುಶ್ರುತಿ. A note below the key, a deadened or muffled tone (My.).

ತಂ tan̊. ತಙ್. = ತಙ್, ತನ್ 1, ತಮ್ 2. Coolness. — ತಂಗದಿರ್. -ಕದಿರ್. = ತಣ್ಗದಿರ್. A cool ray. — ತಂಗದಿರ. -ಅ 3. = ತಣ್ಗದಿರ. Who has cool rays: the moon (ಚನ್ದ್ರ Kk. 11 *b*). — ತಂಗದಿರಗಲ್ಲು. -ಕಲ್ಲು. = ಚನ್ದ್ರಕಾನ್ತ. (Śšv. 1, 50). — ತಂಗದಿರ್ವಕ್ಕಿ. -ಪಕ್ಕಿ. The Greek partridge, as subsisting upon moon-beams (ಚಕೋರ Kk. 21). — ತಂಗಾಳಿ. = ತಣ್ಗಾಳಿ. A cool breeze. ತಂಗಾಳಿ ಕಣ್ಡರೆ ಮಂಗವಾದರೂ ಉಲ್ಲಾಸಿಸುತ್ತದೆ (Prv.). See Bh. 1, 5, 5. 10; J. 2, 65; 3, 8; 17, 40; 30, 19. — ತಂಗೊಳ. -ಕೊಳ. = ತಣ್ಗೊಳ. A cool pond (Rśv. 2, 37; V. 4, 3; J. 30, 36).

ತಂಕ tan̊ka. = ಟಂಕ, etc. (Sk.).

ತಂಗಳ taṅgaḷa. = ತಂಗಳು. (My.; Tĕ. ಚಲಿದಿ, ಚದ್ದಿ). ಹಂಗಿನ ಅರಮನೆಗಿನ್ತ ಇಂಗಡದ ಗುಡಿ ಲೇಸು; ಭಂಗಬಟ್ಟು ಉಣ್ಬ ಬಿಸಿಯನ್ನ ಕಿನ್ತಲು ತಂಗಳವೆ ಲೇಸು! (Sp.).

ತಂಗಳು taṅgaḷu. = ತಂಗಳ. Any cold food, as rice, bread, etc., stale food (My.). ಇದ್ದ ತಂಗಳು ನನಗಿಕ್ಕು, ನಿನಗೆನ್ದೆನ್ದಿಗೂ ಹಸಿವಿಲ್ಲದ ಹಾಗೆ ಮಾಡುತ್ತೇನೆ. — ಉಡಕ್ಕಿಲ್ಲದವ ಮೆಯ್ಲಿಗೆಗೆ ಹೇಸ, ಉಣ್ಬಕ್ಕಿಲ್ಲದವ ತಂಗಳಿಗೆ ಹೇಸ. — ಎಂಜಲಿಗೆ ಹೇಸದವಳು ತಂಗಳನ್ನಾ ಬಿಟ್ಟಾಳೇ? — ತಂಗಳುಣ್ಡ ಬಡ್ಡಿ ಗಣ್ಡನ ಹಸಿವೆ ಅಱಿಯಳು (Prvs.). ತಂಗಳ ಮಾಂಸ (My.; B. 5, 287). See Prv. s. ತಂಗಿ and ತಮ್ಮ.

ತಂಗಿ taṅgi. A younger sister (C.; T. ತಂಗೈ, M. ತಂಗೆ; Tĕ. ಚೆಲ್ಲೆ, ಚೆಲ್ಲೆ). ತಂಗಿಯ ಅಧಿಪಂ (ಶ್ಯಾಲಕ Mr. 313). ತಂಗಿ ಬಡವಳಾದರೆ ತಂಗಳ ಹಿಟ್ಟಿಗೂ ಗತಿಯಿಲ್ಲವೇ? (Prv.). It is often used as an epithet of endearment for a female younger than one's self. See Bp. 3, 28; 24, 35; B. 3, 80. 81; 4, 177; Si. 191. 192; J. 30, 51; 31, 29; ಕಿಱುದಂಗಿ. — ತಂಗಮ್ಮ. -ಅಮ್ಮ. = ತಂಗಿ. (My.; B. 3, 53).

ತಂಗು taṅgu. 1. = ತಳುಗು, ತಾಗು 3. To stop; to stay, to tarry, to sojourn, to lodge (My.; T.; M. ತಂಙು, ತಙ್ಙು; see ತಗೆ 1, ದಕ್ಕು 1). ಊರು ಬಿಟ್ಟು, ಹೊಲಗೇರಿಯಲ್ಲಿ ತಂಗಿದರು. — ಕಾಶಿಗೆ ಹೋಗಿ ತಂಗಿದರೂ ಕಾಸಿನ ಆಸೆ ಬಿಡಲಿಲ್ಲ (Prvs.).

ತಂಗು taṅgu. 2. Stoppage, halt: a day's journey (My.). — ತಂಗುಮನೆ. A lodging house (My.).

ತಂಗು taṅgu. = ಟಂಗು. (My.; Si. 271. 279). 2, tight (My.; Mhr., H.).

ತಂಗುಡ taṅguḍa. = (ತಂಗು), ತಂಗುಳ. A horse's or an elephant's trappings (ಗುಱಿ, ಬಿಂಚೆ, ಪಕ್ಕರಕ್ಕೆ Kk. 58, o. r. ತಂಗುಳ).

ತಂಗುಳ taṅguḷa. = ತಂಗುಡ, q. v.

ತಂಗೇಡಿ taṅgēḍi. The plant Cassia auriculata Lin. (My.; Tĕ. ತಂಗಡಿ, ತಂಗೇಡು; M. ಚಿಮುಡೆ). — ತಂಗೇಡಿಬೊಬ್ಬುಡೆ. Chips of ತಂಗೇಡಿ (My.).

ತಚ್ಚಣ tat-caṇa. Tbh. of ತತ್‌ಕ್ಷಣ. (My.).

ತಜಿವಿಜಿ tajiviji. = ತಜವೀಜು. (My.).

ತಜಿವೀಜು tajivīju. Investigating; planning, contriving, arranging (My.; Mhr., H. ತಜವೀಜ).

ತಜ್ಜ tad-ja. Produced at that moment: immediate, instantaneous. (R.).

ತಜ್ಜ್ಞ tad-jña. Knowing that; a knowing or intelligent man. (R.).

ತಂಜಾವೂರು tañjâ-ûru. Tanjore (B. 4, 81; My.; T. ತಂಜೈ, ತಂಜಾವೂರ್).

ತಟ taṭa. 1. A sound in imitation of beating or throbbing. (*Cf.* ತಟ್ಟು 1, ತಾಟು; Sk. ತಟತಟ, rumbling, etc.). — ತಟಗುಟ್ಟು. -ಕುಟ್ಟು. To hammer, as a goldsmith (My.). 2, to wander about (My.). — ತಟ ತಟನೆ. rep. With repeated blows (Bp. 14, 17; *cf.* Mhr. ತಾಡಕನೆ, ಥಡಥಡ). 2, with repeated throbs or pulsations (2, 34; Tĕ. ತೊಟ ತೊಟ). — ತಟ ಪಟ. reit. = ತಟ ತಟನೆ No. 2. (My.). 2, danger to life, extreme peril (ಪ್ರಾಣಬಾಧೆ Bhn. 66, o. r. only ತಟ). ತಟಕಿನಿನ್ದ ತಟ ಪಟವಾಯಿತು (Prv.).

ತಟ taṭa. 2. = ತೊಟ. An imitative sound. — ತಟ ತಟನೆ. rep. In many drops. ತಟ ತಟನೆ ಕಣ್ಣೀರು ಸುರಿ (My.).

ತಟ taṭa. 3. (T. ತಟ್ಟು, scarcity; *cf.* ತಡ 3). — ತಟ ಮಟ. reit. Deficiency, insufficiency, as of food; difficulty, trouble (My.; V. 38, 33). *Cf.* ತಟ್ಟುಮುಟ್ಟು.

ತಟ taṭa. 4. Probably a meaningless prefix. ತಟವಟ. -ಮಟ. = ಅಟಮುಟ. Fraud, trickery, untruth (My.; Tĕ. ತಟಮಟ, ತಟವಟ). — ತಟವಟಗಾಱ. A deceitful man, a liar (My.).

ತಟ taṭa. = ತಡ, (ತಡಿ, ತಡೆ), ದಡ. *The declivity or side of a hill* (ಸಾನು, etc., ಗಿರಿಯ ಪೊರೆ Mr. 96). 2, *a bank or shore* (ದಡ Čt. II, 91; Nn. 51); a bound. 3, a term applied to certain parts of the human body, which have, as it were, sloping sides (see s. ಕಕುದ್ಮತಿ). 4, a field. 5, the sky or horizon. — ತಟವುಚ್ಚು. -ಉಚ್ಚು. To free one's self or deviate from the boundary, to go beyond ordinary limits: to pierce right through (Bp. 22, 10; 40, 4; 46, 33).

ತಟಕು taṭaku. = ತೊಟ್ಟು 4. A drop, as of water, honey, etc. (My.; B. 4, 2); a small quantity, a little (ಕೊಂಚ, ತುಸ, ಅಲ್ಪ, ತ್ರುಟಿ, etc. Si. 370; My.; B. 3, 95). ತಟಕು ಬಿದ್ದು, ಮಠಾ ಕೆಡಿಸಿತು. — ತಟಕಿನಿನ್ದ ತಟ ಪಟವಾಯಿತು (Prvs.).

ತಟಕ್ಕನೆ taṭakkanĕ. 1. = ತೊಟಕ್ಕನೆ. In drops (My.).

ತಟಕ್ಕನೆ taṭakkanĕ. 2. = ಚಟಕ್ಕನೆ, ತಟಾರನೆ. Quickly, suddenly (My.; Tĕ. ತಟುಕನೆ). ತಟಕ್ಕನೆ ಸೀತ (My.). ತಟಕ್ಕನೆ ದೀಪವನ್ನು ಆಱಿಸಿದನು (My.).

ತಟಜ taṭa-ja. Born on or near the shore (Čpr. 1, 92).

ತಟವಾಣಿ taṭavâṇi. A female of the taṭṭu breed (R.; Mhr., H. ತಟಾಣೀ; Br., T. ತಟ್ಟುವಾಣಿ; see ತಟ್ಟು 2). 2, a trickish, deceitful woman (My.).

ತಟಸು taṭasu. = ತಡಸು 3. N. of a plant (ನಿಟಿಲ Mr. 120, o. rs. ತಡಸು, ನಿಟಲ, ನಿರಿಳ).

ತಟಸ್ಥ taṭa-stha. Situated on a bank or shore; standing near; indifferent, neutral; standing still; awaiting intently (Sk., Mhr.). ತಟಸ್ಥನಾದವನಿಗೆ ತಣ್ಣೆಯೇನು? (Prv.).

ತಟಾಕ taṭâka. = ತಡಾಗ, q. v. (ತೀರ್ಥ, ಕೆಱೆ Nn. 48; ಜಲಾಧಾರ, ಕೆಱೆ Mr. 417).

ತಟಾಕಬನ್ಧನ taṭâka-bandhana. The embankment of a tank (ಕೆಱೆಯ ಏರಿ Nn. 99).

ತಟಾಯ್ taṭây. A contraction of ತಟ್ಟಿ ಹಾಯ್, to proceed after having touched, to pass by or over, as a village, a river (My.). ತಟಾಯ್ದು or ತಟಾದು ಹೋಗು (My.). 2, to pass right through, as a ball (My.).

ತಟಾಯಿಸು taṭâyisu. (i. e. ತಟ್ಟಿ ಹಾಯಿಸು). To make pass by or cross; to have one's self taken over, etc. (My.). ತಟ್ಟು ಇದ್ದರೆ ತಟಾಯಿಸಿ ನಡದಾನು (Prv.). 2, to pass right through, as a ball (My.).

ತಟಾರನೆ taṭâranĕ. = ಠಟಕ್ಕನೆ 2. Quickly, all at once (My.; Tĕ. ತಟಾಲುನ, ತಥಾಲುನ; Mhr. ತಡಕ; cf. ತಟ್ಟನೆ).

ತಟಿ taṭi. = (ತಟ, ತಟೆ), ತಡಿ, (ತಡೆ, ದಣ್ಡೆ 1, ದಣ್ಡೆ 2). *A shore or bank.*

ತಟಿತ್ taṭit. = ತಟಿತ್ತು (Šmd. 106). Lightning (Ršv. 8, 99; My. Amara; Sk. ತಡಿತ್, ತಳಿತ್).

ತಟಿತ್ತು taṭittu. = ತಟಿತ್, q. v.

ತಟಿದ್ವಲ್ಲರಿ taṭit-vallari. Forked lightning (Abh. P. 5, after 53).

ತಟಿನಿ taṭini. Having a bank: *a river.*

ತಟಿನ್ಮಾಲಿಕೆ taṭit-mâlikĕ. A garland of lightnings (V. 14, 27).

ತಟಿಲ್ಲತೆ taṭit-latĕ. Forked lightning (Bp. 61, 66; the correct form is ತಟಿಲ್ಲತೆ).

ತಟೆ taṭĕ. = (ತಟ), ತಡೆ. (Sk.).

ತಟ್ಟ taṭṭa. = ಚಟ್ಟ 2, etc., ತಟ್ಟು 3, ತಟ್ಟೆ 1, (ತಡ 4). Flatness, levelness (Tĕ., M. ತಟ್ಟ; T. ತಟ್ಟೈ; T. ತಟ್ಟು, to flatten; cf. ಚಪಟೆ). 2, a thin, emaciated fellow (? Bp. 51, 53). — ತಟ್ಟತಳ. (Šmd. 386; Kk. 98). A flat palm of the hand.

ತಟ್ಟನೆ taṭṭanĕ. = ತೊಟ್ಟಗೆ, ತೊಟ್ಟನೆ, ತೊಟ್ಟನೆ. Quickly; suddenly, all at once (My.; Tĕ. ತಟ್ಟುನ; cf. ತಟಾರನೆ). ಜಟ್ಟಿಯಾದರೂ ತಟ್ಟನೆ ಹಾಱ ಬೇಕು.—(ಭಿಕ್ಷೆಗಾಱನು ಬರುವಲ್ಲಿ) ತಟ್ಟನೆ ಆಡಿದರೆ ಕೊಟ್ಟಸ್ಟು ಫಲ.—ತಟ್ಟನೆ ಬಾ! ಎನ್ದರೆ ತುಟೀ ಬಿಟ್ಟನನ್ತೆ (Prvs.). See J. 39, 44; B. 2, 40; Prv. s. ಪೊಟ್ಟಣ.

ತಟ್ಟಾಮಾಲೆ taṭṭamâlĕ. A play at which children turn round rapidly till they become giddy (My.).

ತಟ್ಟಿ taṭṭi. = ತಡಿಕೆ, q. v. A frame of bamboos, etc., a tatty (C.; T., M., Tu.; Mhr. ತಾಟೀ; T. ತೆಟ್ಟು, Tĕ. ತಟ್ಟಂಚು, to join, to intertwine; see ತೆತ್ತು). 2, matting, a bamboo mat (My.; Mhr. ತಟ್ಯಾ). — ತಟ್ಟವಲೆ. -ಬಲೆ. A kind of net (Bh. 7, 6, 81). — ತಟ್ಟವೆಣೆ. -ಪೆಣೆ. To plait screens (ತಟ್ಟಿ ಮೊಡಱು Šmd. II; Kk. 76).

ತಟ್ಟಿ taṭṭi. = ತಟ್ಟು 1. ತಟ್ಟಿ ಹೇೞುವೆತ್ತುವಂ ಧೌರೇಯಕನೆನಿಕು (Mr. 350).

ತಟ್ಟಿಯ taṭṭiya. Flatness: want of liveliness or vigour (? Bh. 2, 14, 61; cf. ತಟ್ಟ No. 2).

ತಟ್ಟಿಸು taṭṭisu. 1. To stammer, to stutter (T. ತತ್ತು, ತೆತ್ತು, to walk uncertainly; to stammer, etc.). — ತಟ್ಟಿಸಿ ಮಾತಾಡು. = ತಟ್ಟಿಸು. (ಉಗ್ಗು G.).

ತಟ್ಟಿಸು taṭṭisu. 2. To cause to tap, etc. (My.).

ತಟ್ಟು taṭṭu. 1. To tap; to touch; to come close, to come on in the way; to pat; to strike, to beat; to clap; to slap; to knock (ತಾಡನ Šmd. Dh.; Šm. 88; My.; Tĕ., T., M.; cf. ತದೆ, ತಾಟು 1; T. also ತಣ್ಡು, to touch); to clap on a thing, as cow-dung on a wall (My., T.); to drive, to beat off or back, to remove (My.; Tĕ., T.; see ಪೊಱ-). ಕೆಲಸವಿಲ್ಲದ ಕುಮ್ಬಾಱ ಮಕ್ಕಳ ಕುಣ್ಡೀ ತಟ್ಟಿದ (Prv.). See Bp. 32, 44; Ššv. 4, 81; B. 2, 53; 5, 176. 191. 199. 203. 221; ಮುನದಟ್ಟು; Prv. s. ತೊಟ್ಟು 2. — ತಟ್ಟುಚ್ಚು. -ಉಚ್ಚು. To pass right through, as an arrow (J. 13, 18). — ತಟ್ಟ್ಯಾಡು. -ಆಡು. To knock one against the other. ಜೋಗಿ ಜೋಗಿ ತಟ್ಟ್ಯಾಡಿದರೆ ಬುಱಿಡೆ ಬುಱಿಡೆ ತಟ್ಟ್ಯಾಡಿತು (Prv.).

ತಟ್ಟು taṭṭu. 2. Touching (see ತಾಗುದಟ್ಟು); a slap or pat; a blow (My.; T., M.). ತಟ್ಟನಲ್ಲಿ ಬಿದ್ದಾಗ್ಯೆ ಗಟ್ಟಿ (an ingot, etc.) ಆಗಲಾಱ (Prv.). 2, a blow or knock of disease, cholera, danger, death (M.); fatigue, exhaustion (My.). 3, the measles (S. Mhr.; Tĕ. ತಟ್ಟಮ್ಮ, T. ತಟ್ಟಮ್ಮೈ). — ತಟ್ಟುಮುಟ್ಟು. (= ತಟಮುಟ). A knock or blow of misfortune, a great strait or dilemma (My.).

ತಟ್ಟು taṭṭu. 3. = ತಟ್ಟ, etc. Flatness. 2, the flat, *i. e.* the blade, of a sword. ಅಡ್ಡಾಯುಧದ ತಟ್ಟು (ಖಡ್ಗಫಲ, ಪುಷ್ಕರ Hlâ.). — ತಟ್ಟುಬಳೆ. A flat, broad, plain bracelet (My.; Si. 219).

ತಟ್ಟು taṭṭu. 4. = ಥಟ್ಟು. (ಸಮೂಹ Šs.; Mhr., H. ಥಾಟ; cf. ತಣ್ಡ)

ತಟ್ಟು taṭṭu. 5. (Tbh. of ತಟ ?). Side; direction (C.; Tĕ.; Tĕ. also ತೊಟ್ಟು; Mhr. ಥಡ, a side or face). — ತಟ್ಟಾಗು. -ಆಗು. (ಬದಿಗಾಗು, ಸರಿ, ಕೆಲಸಾರು G.). — ತಟ್ಟುವರಿಯಿಸು. -ಪರಿಯಿಸು. To make go to one side or aside (Ršv. 6, after 11).

ತಟ್ಟು taṭṭu. 1. = ತಟ್ಟಿ, ತಾಟು 2. Sackcloth (My.; Mhr. ತರಟ, ತಾಟ). See ಗೋಣಿ-. 2, the cloth or cloak of a Bauddha or Jaina mendicant (ಕ್ಷಪಣಕಾಚ್ಛಾದನ Šmd. Dh.; Šm. 88; ಸವಣರ ಉಳ್ಳುಡೆ Čt. I, 64; Bp. 51, 53 ?).

ತಟ್ಟು taṭṭu. 2. A small breed of horses, a pony or tattoo (My.; Tĕ., T., M.; Si. 273; Mhr., H. ತಟೂ, ತಟ್ಟೂ; see ತಟವಾಣಿ).

ತಟ್ಟುಕ taṭṭu-uka. (Šmd. 239). A man who slaps, strikes, etc.

ತಟ್ಟೆ taṭṭĕ. 1. = ತಟ್ಟ, etc. Flatness, levelness (My.; T.). 2, a flat, lid-like bamboo or rattan basket for setting out fruits, wares, etc. (C.). 3, the same made of wood or metal, a platter or plate (ಪಾತ್ರೆ Mr. 212, o. r. ತಾಟ; My.; M.; T. ತಟ್ಟೈ; Mhr. ತಾಟ; see ತಾಟ 1). See Bp. 12, 11; 33, 18: Si. 241; ಕೆಲದಟ್ಟೆ, ಪೊನ್ದಟ್ಟೆ. 4, a flat, young, beanless pod (cf. ಚಟ್ಟು). ತಟ್ಟೆ ಬಯಿಸಿ ಕೊಣ್ಡರೂ (though he is beaten and

blamed for having stolen the pods) ತಟ್ಟೇ ಹುಳಿ ಚನ್ನಾಗಿತೆ (Prv.). — ತಟ್ಟೆಕಾಲು. The feet of a platter (My.); two cross legs, upon which the warp of a weaver's loom rests (R.).

ತಟ್ಟೆ taṭṭĕ. 2. A thick bamboo, or an areca-palm stem, split in two (My.; T. ತಟ್ಟೈ, ತಟ್ಟು, a corn stalk, see ದಣ್ಟು; a bamboo).

ತಟ್ಲೆ taṭlĕ. A woman's shoe (S. Mhr.).

ತಡ taḍa. 1. =(ತಗ 1, etc.), ತಡೆಪ, ತಡೆವು, ತಡೆವು 2, ತಡಹು 2, ತಡೆ 2 q. v., (ತಳ್ 2, ತಳವು, ತಳು, ತಳುವು 2, ತಳ್ವು 2). Impeding (see s. ಪುಸಿ 2); check, impediment, obstacle, hold. **2,** delay (My.; J. 17, 37); etc. ಮೊನೆಯೊಳ್ ಸೂಜಿ ತಡವಾಯಿತು (Šmd. 263). ತಡವ ಮಾಡುವವನ ಗೊಡವೆ ಬೇಡ (Prv.). — ತಡಕೆಯ್. A hand that checks or holds fast: an embrace. ತಡಕೆಯ್ಯಂ ಮಾಡಿದಂ (ಪಟ್ಕಿ ತಟ್ಕಿಯ್ಸಿದಂ Šmd. I; Šm. 2, 8; the ಪಟ್ಕಿ is not in Mdb. MS.). — ತಡಗಟ್ಟು. -ಕಟ್ಟು. = ತಡೆಗಟ್ಟು 1. To stop, as water (My.). 2, to stop by charms, to charm, as snakes, tigers, etc.; to tie a charm to the wrist, as against fever, to the ear, as against headache (My.; Tĕ.). — ತಡಗಲ್ಲು. -ಕಲ್ಲು. A stone put as an impediment (My.). — ತಡಗಾಲ್. -ಕಾಲ್. (Šmd. 206). = ತಡಂಗಾಲ್, ತಡೆಗಾಲ್. A foot that obstructs; a foot that comes athwart; hindrance (My.). 2, a trip, a false step. — ತಡಂಗಲಸು. -ಂ-ಕಲಸು. = ತಡಂಗಲಿಸು. To be obstructed, entangled, or mixed. ನಳನಳಿಪ ಕೇಸರದ ಸಸಿಯೊಳ್ ತಡಂಗಲಸಿ ಬೆಳೆದ ದವನದ ಕಣ್ಗೆವನ್ದ ವನದ ನಡುವೆ (Čpr. 7, after 92). — ತಡಂಗಲಿಸು. -ಂ-ಕಲಿಸು. = ತಡಂಗಲಸು. (Čpr. 1, 92; 6, after 97; 8, 98; V. 4, 12). — ತಡಂಗಾಲ್. -ಂ-ಕಾಲ್. (Šmd. 206). = ತಡಗಾಲ್. — ತಡಗುಣ್ಡಿ. A hole or pit with a checking bank (ಜಲಪ್ರತ್ಯಯ Šmd. II; see s. ತಡಗುಣ್ಡಿಗೆ). — ತಡಗುಣ್ಡಿಗೆ. = ತಡಗುಣ್ಡಿ. (ಜಲಪ್ರತ್ಯಯ Kk. 76, o. r. ಜಲಪಾತ್ರೆ). — ತಡಬಡಿಸು. -ಪಡಿಸು. To impede, to cause to trip or stagger (Bp. 26, 28). See another ತಡಬಡಿಸು s. ತಡ 3. — ತಡಬಡು. -ಪಡು. To hesitate in walking, to trip (Dp. 59, 3). — ತಡ ಮಾಡು. To delay, to loiter, to be slow (C.; B. 2, 1; 5, 205. 235). See another ತಡ ಮಾಡು s. ತಡ 3. — ತಡಪ್ಪರೆ. -ಂ-ಪರೆ. To spread for opposition: to oppose; to repel; etc. (ತಡಪ್ಪೊಯ್, ತಳ್ಪೊಯ್, ತೊಡರ್, ಮಾರ್ಕೊಳ್, etc., ಪ್ರತಿಹತ Šs.). — ತಡಪ್ಪೊಯ್. -ಂ-ಪೊಯ್. = ತಳ್ಪೊಯ್. (ಏಪ್ರೂನ್ Šmd. II; ತಡಪ್ಪರೆ, etc. Šs.). — ತಡಮ್ಮೆಟ್ಟು. -ಮೆಟ್ಟು. To walk slowly (Abh. P. 7, 27). — ತಡವಾಗು. -ಆಗು. Delay to occur (Bp. 38, 34; C.; B. 3, 123). See another ತಡವಾಗು s. ತಡ 3. — ತಡ ಹಾಯು. To cross over or through obstacles: to pass right through (G. 40. 258).

ತಡ taḍa. 2. = ತಡದು, ತಡೆದು. P. p. of ತಡೆ 1, in ತಡ ಕೊಳ್ಳು, to delay, to wait; to keep down, etc.; to bear patiently (My.). ಸ್ವಾಮಿರಾಯನು ಸಿಟ್ಟು ತಡ ಕೊಣ್ಡು (B. 3, 81; My.). ಕಡುಕೋಪ ಬನ್ದಾಗ ತಡ ಕೊಣ್ಡವನೇ ಜಾಣ (Prv.).

ತಡ taḍa. 3. = ತಲ್, (ತಹ 2), ತಳ 1. Perplexity, confusion, embarrassment, fear. (Tĕ. ದಡ; cf. ತಟ 3, ದಡ 2; M. ತಜ್ಜು, to stop; to be entangled, see ತಂಗು). — ತಡ ಬಡ. reit. or dupl. = ತಡ, ತಡಪ್ಪಡ. (Bp. 40, 62; Tĕ. ದಡ ಬಡೆ, ತಡಬಾಟು). — ತಡಬಡಾಯಿಸು. To get perplexed, etc. (My.). — ತಡಬಡಿಸು. = ತಡಪ್ಪಡಿಸು. To cause to get perplexed or to fail, to perplex, to disorder (Bp. 38, 19; 56, 17). 2, to get perplexed, confused, etc. (My.); to turn the wrong way. — ತಡವಾಗು. -ಆಗು. To get perplexed or confused (Čpr. 7, 100). — ತಡ ಮಾಡು. = ತಡಮ್ಮಾಡು. To turn the wrong way (v. t.): to delude; to perplex; to cause to fear (ಏಪರ್ಯಾಸ Šmd. Dh.; ತಳ್ಳಂಕಗೊಳಿಸು Šmd. II; Kk. 92). — ತಡಪ್ಪಡ. -ಂ-ಬಡ. = ತಡಬಡ. (ತಳ್ಳಂಕ Čt. II, 21). — ತಡಪ್ಪಡಿಸು. = ತಡಬಡಿಸು. (Bp. 47, 13; Ršv. 6, 33; Č. Bp. 5, 13). — ತಡಮ್ಮಾಡು. -ಂ-ಮಾಡು. = ತಡ ಮಾಡು (Šmd. Dh.). — ತಡವಾಗು. -ಆಗು. = ತಡವಾಗು. (Abh. P. 16, 93).

ತಡ taḍa. 4. (= ತಟ್ಟ). — ತಡಪ್ಪರೆ. -ಂ-ಪರೆ. Levelness, evenness (ಸಮನೆನಿಪ್ಪ ಅರ್ಥಂ Kk. 69).

ತಡ taḍa. 5. (Touching, stroking; groping; see ತಡವು 3). — ತಡವರಿಸು. -ಪರಿಸು. (To cause one's self to run and feel about): to feel one's way, as with the hands or feet, to grope; to seek (ಅನ್ವೇಷಣ Šmd. Dh. Mdb., o. rs. ಅಸೌಪ್ಪನ, ಆಸೌಪ್ಪನ; My.; Grj. 4, 129; Bp. 53, 63; J. 18, 21). 2, to stroke (My.; Râm. 4, 3, 17).

ತಡ taḍa. Tbh. of ತಟ (Šmd. 388 Mdb.).

ತಡಕಸ taḍakasa. Disturbance; vexation; hurt, injury (ಉಪಹತಿ Bhn. 52, o. r. ತಡಗಸ).

ತಡಕಿಸು taḍakisu. To cause to seek (My.)

ತಡಕು taḍaku. 1. To grope for, to seek (Ršv. 1, 23; My.).

ತಡಕು taḍaku. 2. = ತಡಿಕೆ, etc. (My.).

ತಡಗಣಿ taḍagaṇi. = ತಡಗುಣಿ. The pulse Vigna (or Dolichos) catjang Endl. (My.).

ತಡಗಸ taḍagasa. = ತಡಕಸ, q. v.

ತಡಗುಣಿ taḍaguṇi. = ತಡಗಣಿ. (My.).

ತಡತ taḍata. (fr. ತಡೆ 1). The act of restraining or keeping down, as wrath; the state of being stopped, as water (My.); the state of lasting or wearing well, as cloth (My.).

ತಡದು taḍadu. = ತಡೆದು. P. p. of ತಡೆ 1. (C.).

ತಡಪ taḍapa. Delay, slowness. — ತಡಪವ್ಪೆಟ್. -ಂ-ಪೆಟ್. To become slow (Čpr. 6, 69).

ತಡಪು taḍapu. Hindrance (My.); impediment: a small plate at the end of a screw to prevent it from becoming loose (My.). **2,** a small cloth that occasionally is tied to the lower back-part of the body, also over one's clothes, to do the service of an apron (My.).

ತಡವು taḍavu. 1. = ತಳಹು, ತಳುಗು, ತಳುವು 1, ತಳ್ವು 1. To stop (ಸ್ತಿಮಿತಭಾವ Šmd. Dh.; ಸ್ತಿಮಿತ Šm. 108).

ತಡವು taḍavu. 2. = ತಡ 1, etc. Delay (My.). — ತಡವು ಮಾಡು. = ತಡ ಮಾಡು. (Bp. 47, 45; 51, 68).

ತಡವು taḍavu. 3. = ತಡಹು 1, ತಳುಕು 1. To touch or rub gently with the hand, to stroke (ಕರದೆ ನೇವರಿಸು Šm. 108; My.; Tĕ., T., M.; B. 1, 26; 2, 26; cf. ತಟ್ಟು 1). ತಡವಿದರೆ ಮುಡಿ ಸಹಾ ಕೆಡುವದು (Prv.). See ಮೆಯ್ದಡವು. **2,**

to feel one's way with the hands, to grope (ಹಸ್ತಾನ್ವೇಷಣ Šmd. Dh.; My.; Tĕ., T., M.).

ತಡವೆ taḍavĕ. A time, a turn (My.; Tĕ. ತಡವು, ತಡವೆ, ತೇಪೆ; T. ತಡವೈ, ತಾಟ್ಟು).

ತಡಸಲು taḍasalu. = ತಡಸು 2. (My.).

ತಡಸಲು taḍasalu. A water-fall (S. Mhr.; Mhr. ಧಡಕಣೇಂ, to dash against, as water, etc.).

ತಡಸು taḍasu. 1. To stay, to wait (Č. Bp. 47, 22). **2,** (= ತಡಿಸು), to stop, to hinder, to impede. **3,** to cause to halt or stop (J. 6, 51. 55).

ತಡಸು taḍasu. 2. The state of impeding one another or of being in one's way, as thick-set plants in a paddy-field (My.).

ತಡಸು taḍasu. 3. = ತಟಸು, q. v. — ತಡಸಿನ ಗಿಡ. A moderate tree with small eatable fruits, Grewia tiliaefolia Vahl. (Z.; My.).

ತಡಹು taḍahu. 1. = ತಡವು 3. To stroke (J. 31, 59).

ತಡಹು taḍahu. 2. = ತಡ 1, etc. Stop, cessation, etc. (J. 10, 42).

ತಡಾಕ taḍâka. = ತಟಾಕ, ತಡಾಗ.

ತಡಾಕು taḍâku. Smartness, shrewdness (My., fr. Mhr. ತಡಕ).

ತಡಾಗ taḍâga. *A pond, a pool, a reservoir.*

ತಡಿ taḍi. 1. = ತಟ್, ದಡಿ 1. A thick staff, a cudgel (T., M.; M. also: stout, robust; T., M. ತಡಿ, to grow thick; to become heavy and fat, as the body; to swell; *cf.* ದಟ್ಟು). — ತಡಿಕೋಲ್. dupl. = ತಡಿ. (Râghč. 17, 67; T.).

ತಡಿ taḍi. 2. Wet, damp, moistness (Tĕ.; *cf.* ತಣ್). — ತಡಿಪುಡಿ. The state of being not sufficiently or properly mixed with water, etc., as clay, etc. (My.).

ತಡಿ taḍi. 3. = ದಡಿ 2. A saddle made of woolen or cotton cloth (C.); a mattress (C.).

ತಡಿ taḍi. 4. = ತಡೆ 1. (C.).

ತಡಿ taḍi. (= ದಣ್ಡೆ 1, etc.). Tbh. of ತಟ (Šmd. 338 Mdb.; Čt. II, 91). (ಮರ್ಯಾದೆ, ಕೂಲದೇಶ Hlâ., Mr. 406). ತೊಱೆಯ ತಡಿ (ತೀರ, ತಟ, ಕೂಲ, etc. Nr., Hlâ.). ಎರಡು ತಡಿಯ ನಡು (ಪಾತ್ರ); ಸಮುದ್ರದ ತಡಿಯ ಬನ (ವೇಲಾವನ Hlâ.). ಸಮುದ್ರದ ತಡಿ (ಜಲಧಿತೀರ Nn. 152). See Šmd. 273; Čpr. 1, 129; Lîlv. 3, 2; Bp. 52, 11; 60, 46; Bh. 1, 5, 5; Č. Bp. 2, 4. — ತಡಿಗೊಳ್. -ಕೊಳ್. = ತಡಿವಿಡಿ. (Ršv. 1, after 102). — ತಡಿದಡಿ. -ತಡಿ. rep. (Čpr. 1, 90; 5, after 39; 7, 32). — ತಡಿವಿಡಿ. -ಪಿಡಿ. To be along shore (Čpr. 1, 82; 5, 45; Ršv. 6, 9).

ತಡಿಕೆ taḍikĕ. = ತಟ್ಟಿ No. 1, ತಡಕು 2, ದಡ್ಡಿ 2. A frame of bamboos, straw, leaves, etc., used as a door, blind, screen, etc., a tatty (My.; Tĕ.). — ತಡಿಕೆವಲೆ. A framework-net used by fowlers (Bh. 3, 13, 23; Abhâ. 2, 72).

ತಡಿತ್ taḍit. = ತಟಿತ್. *Lightning.*

ತಡಿತ್ವಾತ್ taḍit-vat. *A cloud.*

ತಡಿಸು taḍisu. To stop; to detain, to hinder; to keep off (My.). See Prvs. s. ಪಿತೂರಿ, ಮುಟಿ³.

ತಡೆ taḍĕ. 1. = (ತಗೆ 1), ತಡಿ 4. To allow time to pass, to delay, to lose time; to wait; to loiter; to stop (ಕಾಲಕ್ಷೇಪ Smd. Dh.; C.; Tĕ.; M.: to be obstructed, be caught or entangled; *cf.* Mhr. ತಟಣೇಂ, to stop or wait for, tarry in expectation of; ತಱುಬು). P. ps. ತಡ, ತಡದು, ತಡೆದು. ತಢೆದುದು (ತಮ್ಮಡ Šmd. II). ತಡೆವನ್ತೆ ಏಂ ಕಾರಣಂ, ಕುರುಪತೀ, ಎಮಗೀಗಳ್? (151). ತಡದರ್ಥಂ (ತಗಂ Čt. I, 46). ತಡದು ಗೆಯ್ವವನು (ದೀರ್ಘಸೂತ್ರಿ, ಜಡಕ್ರಿಯ Hlâ.). See Ršv. 5, 33; 13, after 61 & 95; J. 28, 45; 30, 28; Râm. 26, 21; B. 5, 130. **2,** to stop; to detain (ತಱುಬು Čt. I, 51; J. 2, 28); to restrain, to check, to keep down, as anger, etc.; to endure; to bear patiently (J. 4, 29; 8, 28; My.; M.). ಕಡ್ಡಿ ತಡೆವುದೆ ಕಡಲಂ? (Bh. 1, 19, 18). ಹಸಿವೆಯನ್ನೂ ನೀರಡಿಕೆಯನ್ನೂ ತಡೆಯುವ ಗುಣ (B. 5, 35). **3,** to be bearable, to agree with (My.). ಮುಪ್ಪಿನವರಿಗೆ ರಾತ್ರೀ ಊಟ ತಡೆಯುವದಿಲ್ಲ (B. 5, 152). **4,** to be able to bear or stand, as a vessel may bear knocks or blows without being broken; to last, to wear well, as cloth (My.).

ತಡೆ taḍĕ. 2. (Šmd. 250). = ತಡ 1, etc. A check, an impediment, an obstacle; restraint (My.; Tĕ.; T. ತಡೈ; Si. 107. 201. 376. 391; Bh. 6, 2, 2; J. 4, 20); a small plate at the end of a screw to prevent it from loosening; a bit of wood, etc., placed in the hole of the ear-lobe to keep it open (My.); a charm (My.); delay (My.; Tĕ.). — ತಡೆಕಟ್ಟು. = ತಡಗಟ್ಟು No. 2. (My.). ತಡೇ ಕಟ್ಟುವವನ ಮುನ್ದೆ ಮುಡಿಯೇನು? (Prv.). — ತಡೆಗಟ್ಟು. 1. = ತಡಗಟ್ಟು. (My.). — ತಡೆಗಟ್ಟು. 2. A dam (My.); that is tied to the wrist, etc., as a charm (My.). — ತಡೆಗಟ್ಟೆ. -ಕಟ್ಟೆ. A dam (My.). — ತಡೆಗಡಿ. -ಕಡಿ. To cut so as to impede or stop (J. 20, 15. 46. 48; 22, 27; 25, 52). ಕಾಡ ಕೋಣಗಳ ಹಿಮ್ಮಡವ ತಡೆಗಡಿದು (Râghč. 17, 74). 2, to overcome an impediment (J. 12, 43). — ತಡೆಗಾಲ್. -ಕಾಲ್. = ತಡಗಾಲ್. (Grj. 3, 22; Ršv. 13, after 95; J. 25, 54). — ತಡೆಗೆಡವು. -ಕೆಡವು. To throw down so as to impede one's progress: to impede, to stop (J. 8, 37). — ತಡೆಗೆಡೆ. -ಕೆಡೆ. To be impeded and fall, to stumble (Ršv. 6, after 24). — ತಡೆಗೊಳಿಸುವಿಕೆ. -ಕೊಳಿಸುವಿಕೆ. Impeding, stopping (ಉದ್ದಾನ, ಬನ್ಧನ Si. 265). — ತಡೆವಿಡು. -ಬಿಡು. To let go the check of something, to free one's self (J. 8, 29). — ತಡೆವೇಟೆಕಾತಿ. -ಬೇಟೆಕಾತಿ. A huntswoman who stops or charms (Bh. 3, 8, 10). — ತಡೆ ಹಾಕು. To stop (My.); to make objections (B. 5, 289); to raise obstacles (My.).

ತಡೆ taḍĕ. Tbh. of ತಟಿ. ತೊಱೆಯ ತಡೆ (ತಟ Mr. 413).

ತಡ್ಡು taḍḍu. = ತರಡು, etc. (S. Mhr.). See ಬೆಕ್ಕಿನ ತಡ್ಡ ...

ತಣ್ taṇ. = ತಂ (ತೆಂ), etc. Coolness, cold. (T., M.; *cf.* ಚಳಿ 2, ತಣಿ 1). — ತಣ್ಗದಿರ್. -ಕದಿರ್. = ತಂಗದಿರ್. A cool ray (Lîlv. 3, 2. 7). — ತಣ್ಗದಿರ. = ತಂಗದಿರ. (ಚಳಿಗದಿರ, ತಿಂಗಳ್, ಇಂಗದಿರ, etc., ಚನ್ದ್ರ Šm. 15. 16; Ršv. 13, 61). — ತಣ್ಗದಿರನನ್ವಯ. -ಅನ್ವಯ. The lunar race (J. 15 sum.). — ತಣ್ಗದಿರಾಡಿ. -ಅಡಿ. The Greek partridge (ಜೊನ್ನವಕ್ಕಿ Čt. I, 38). — ತಣ್ಗರಗ. -ಕರಗ. A cool jar: a crystal jar (Abh. P. 7, after 106; V. 4, 25). — ತಣ್ಗಲ್. -ಕಲ್. The moon-gem (ಚನ್ದ್ರಕಾನ್ತ Šs.). — ತಣ್ಗಾಳಿ. = ತಂ-. (Čpr. 2, after 93; 6, 93; Abh. P. 9, after 120). — ತಣ್ಗೊಳ. = ತಂ-. (J. 18, 13). — ತಣ್ಜೊಡರ್.

-ಸೊಡರ್. (Šmd. 83). An extinguished lamp. — ತಣ್ಣೀರ್. -ನೀರ್. -ರು. Cool or cold water (C.; B. 4, 158). ತಣ್ಣೀರು ಆದರೂ ಪುಣ್ಯದಿನ್ದ ದೊರಕ ಬೇಕು (Prv.). — ತಣ್ಣೀರ್ದಳಿ. -ತಳಿ. To sprinkle cold water (J. 19, 16). — ತಣ್ಣೆರಲ್. -ಎರಲ್. A cool breeze (Čpr. 8, 103; Ršv. 2, 27). — ತಣ್ಣೆಲರ್. -ಎಲರ್. (Šmd. 214). A cool breeze (Čpr. 3, 15. 94; 5, after 19; J. 8, 18; 29, 49). — ತಣ್ಣೆಲೆ. -ಎಲೆ. A cool leaf. ಅರಲ್ದ ತಾವರೆಯ ತಣ್ಣೆಲೆ (Čpr. 7, after 92). — ತಣ್ಣೆಳಲ್. -ನೆಳಲ್. (Šmd. 190). A cool shade (Čpr. 7, 80; Abh. P. 14, 194; Bp. 5, 45; Ršv. 1, after 130). — ತಣ್ಬನಿ. -ಪನಿ. A cool drop (Čpr. 7, 84). — ತಣ್ಬಿಸಿಲ್. Assuaged, moderate heat or shine of the sun (Abh. P. 2, 5; 11, 177). — ತಣ್ಬುೞಿಲ್. -ಪುೞಿಲ್. (Šmd. 78). A cool sandbank or island; cool sand (Abh. P. 7, after 31; 9, after 75; 14, 48; V. 4, 25).

ತಣಕ್ taṇak. = ತಳಕ್. A sound in imitation of quick motion and flashing. — ತಣಕ್ಕೆನ್ನು. -ಎನ್ನು. A quick motion or flash to take place. ತಣಕ್ಕೆನ್ತ ಹಾಱಿದನು; ತಣಕ್ಕೆನ್ತ ಮಿಂಚಿತು (My.).

ತಣಕಾಯಿಸು taṇakâyisu. (fr. ತನಕ). To inquire after, etc. (My.).

ತಣಲು taṇalu. Glowing coals (My.; T. ತಣಲ್; T. ತಣಿಲ್, fire).

ತಣವ taṇava. = ತಳವಾರ. (? Bp. 32, 22).

ತಣವು taṇavu. = ತಣಿವು. (ಸೌಹಿತ್ಯ, ತರ್ಪಣ, ತೃಪ್ತಿ Si. 317; My.).

ತಣಸು taṇasu. = ತಣಿಸು 2, ತಣ್ಣಸ. Coldness; wetness (My.).

ತಣಾಯಿಸು taṇâyisu. = ತಣಕಾಯಿಸು. (My.).

ತಣಿ taṇi. 1. (= ದಣಿ). To grow cool or of proper temperature; to be refreshed; to be satisfied or satiated; to be or become sufficient; to be calmed or appeased (ತೃಪ್ತಿ Šmd. Dh.; My.; T., M.; Tĕ. ತನಿ). **2,** to be subdued, get feeble or fatigued (ದಟ್ಟಸ್ಥಱ Čt. II, 34; T., M.). See Čpr. 2, 57. 84; 7, 88; Grj. 1, 62; 4, 47. 64; Bp. 15, 25; 42, 34; 59, 3. 24; Bh. 8, 27, 7; ಬಸುಱುದಣಿ, ಮನ-, ಮನನ್-. P. ps. ತಣಿತು (Čt. II, 34), ತಣಿದು (C.).

ತಣಿ taṇi. 2. (Humbled state), shame, modesty (ನಾಚಿಕೆ G.).

ತಣಿಗೆ taṇigĕ. = ತಳಿಗೆ. (My.).

ತಣಿಪು taṇipu. 1. = ತಣಿಸು 1. To satisfy, to refresh, to appease, etc. (ತೃಪ್ತಿ Šmd. Dh.; Abh. P. 2, 8; Ršv. 8, 117).

ತಣಿಪು taṇipu. 2. = ತಣಿವು, etc. (Čpr. 9, 22).

ತಣಿವು taṇivu. = ತಣವು, ತಣಿಪು 2, (ತಣು), ತಣುವು 1. Satiety, satiation, etc. (ಪರ್ಯಾಪ್ತ, ಉಪಸವ್ಪನ್ನ, ತರ್ಪಣ, ತೃಪ್ತಿ, ಸೌಹಿತ್ಯ Nr., Hlâ.; Čpr. 3, 43; Bp. 35, 2; Ššv. 1, 21; Mhr. ಥಣೀ). ತಣಿವಿಲ್ಲದವನು (ಅಸೇಚನಕ Hlâ.). ಮಾಱಿ ತಣಿವಿಲ್ಲದಂ (ಅಸೇಚ Mr. 231). ಆವುದಱ ಕಾಣ್ಕೆಯಿಂ ತಣಿವು ಕಡೆಗಣಿಸದು, ಅದು ಅಸೇಚನಕಂ (Nr.).

ತಣಿಸು taṇisu. 1. = ತಣಿಪು 1. (Bp. 4, 47; 22, 58; 24, 53; 25, 2; 26, 19; 27, 59; 32, 30; 39, 63; 46, 75; 61, 54; Ššv. 1, 11). — ತಣಿಸು ತಣಿಸು. rep. (Bp. 6, 29).

ತಣಿಸು taṇisu. 2. = ತಣಸು, etc. (My.).

ತಣು taṇu. (Šmd. 59). (= ತಣುವು).

ತಣುವು taṇuvu. 1. = ತಣಿವು, etc. (My.).

ತಣುವು taṇuvu. 2. = ತನು, etc. (My.).

ತಣ್ಟೆ taṇṭĕ. 1. (= ಜಣ್ಟೆ). Connection, intercourse (ಗೊಡವೆ My.). ತಣ್ಟೆ ತೀರಿದರೂ ತಕರಾರು ಹೋಗಲಿಲ್ಲ. -ತುಣ್ಟುಮುಣ್ಡೇ ತಣ್ಟೆ ಹಱೀತು (Prvs.).

ತಣ್ಟೆ taṇṭĕ. 2. A quarrel, a dispute; a troublesome and a necessary business (My.; Mhr., H. ತಣ್ಟಾ); trouble, annoyance (My.; Tĕ.; T. ತಣ್ಡೈ). ತಣ್ಟೆಯವನ ನಣ್ಟಿಕೆ ಸಲ್ಲ, ಒಣ್ಟಿಯಾಗಿ ಹೋಗ ಸಲ್ಲ (Prv.). See Prvs. s. ಒಣ್ಟಿ 2, ಒಣ್ಟಿಗ, ಪ್ರೇಮ. — ತಣ್ಟೆಯವ. -ಅವ. A troublesome man (My.).

ತಣ್ಟ್ಲು taṇṭlu. = ತಣ್ಟೆ 2. — ತಣ್ಟ್ಲ ಮಾರಿ. A troublesome person (My.).

ತಣ್ಡ taṇḍa. A mass; a multitude; a crowd; a troop; a company, a party (ಗುಮ್ಮಿ, ಗುಣ್ಪು, ಬವ್ಬಲ್, ತುಱುಗ, etc., ಶ್ರೇಣಿಕೆ Šm. 54; ಜಂಗುಳಿ, ಘಟ್ಟು, ಕದಲೆ, ಗಡಣ, etc., ಶ್ರೇಣಿಕೆ Kk. 17; ಓಳಿ Bhn.; My.; Tĕ.; Mhr. ತಾಣ್ಡಾ; see T., M. s. ತಡಿ 1; cf. ದಟ್ಟು 2). ತಣ್ಡದ ಜನರು ಹಿಣ್ಡು ಒಡ ಕೊಂಡು ಹೋದರೆ ಮುಣ್ಡೆಯರಿನ್ದ ಕಡೆ (Prv.). See Bp. 4, 5; Abh. P. 13, after 54; 13, 63; Grj. 2, after 106; Prll. 3, 30; J. 5, 13; 6, 34; ಇತ್ತಣ್ಡ; ತಣ್ಡೋಪತಣ್ಡ. — ತಣ್ಡ ತಣ್ಡ. rep. (Bp. 6, 20; 11, 2; 24, 1; 28, 48; 59, 27; 61, 10; J. 17, 10). — ತಣ್ಡಮ್ಬೆಱ್. -ಒ-ಪೆಱ್. To meet or come together, to convene (V. 36, 65).

ತಣ್ಡಕ taṇḍaka. *Right preparation, complete performance;* decoration; 2, *a composition abounding in compound words* (*cf.* ದಣ್ಡಕ). 3, a juggler, a cheat. 4, the trunk of a tree.

ತಣ್ಡಕಾಱ taṇḍa-kâṟa. One who amasses; a man who has a large amount of— (Bp. 38, 25).

ತಣ್ಡವಾಳ taṇḍavâḷa. = ತಾಣ್ಡವಾಳ. Cast iron (Si. 332; T.; Tĕ. ತಣ್ಡವಾಳ).

ತಣ್ಡಸ taṇḍasa. = ತಾಣ್ಡಸ. Pincers, tweezers, tongs (ಲಾಳಿ, ಗಾಳುಕ, ಇಕ್ಕುೞ Mr. 883; Bp. 44, 14; My.; Tĕ. ತಣ್ಪಸ, ತಣ್ಡಸ; M. ತನಾಸ್ಸು; Portuguese *tenaz).*

ತಣ್ಡಸಿ taṇḍasi. = ತಣ್ಡಸು. (Ršv. 5, 58).

ತಣ್ಡಸು taṇḍasu. = ತಣ್ಡಸಿ. N. of a thorny tree (ಕಣ್ಟಕಿ Mr. 121).

ತಣ್ಡಾ taṇḍâ. = ತಣ್ಡೋ. ತಣ್ಡಾ ಮುಣ್ಡಾ ವಾಸುದೇವ (= ತಣ್ಡೋ- -; Prv.).

ತಣ್ಡಿ taṇḍi. = ಚಣ್ಡಿ 2. Cold; coldness (C.; Mhr., H. ಥಣ್ಡೀ; B. 5, 86. 239. 257); wetness (My.).

ತಣ್ಡು taṇḍu. (= ತಡಿ 1? or Tbh. of ದಣ್ಡ?). A staff; a club (Bp. 38, 18; 42, 19; T.); a heavy (iron) club (Čpr. 7, 139).

ತಣ್ಡು taṇḍu. 1. Tbh. of ತರ್ದುೞ. (Si. 310).

ತಣ್ಡು taṇḍu. 2. *One of Šiva's door-keepers or attendants, and an original teacher of the arts of dancing and mimicry.*

ತಣ್ಡುಲ taṇḍula. *Rice cleaned from the husk* (ಅಕ್ಕಿ Mr. 14). 2, *the vegetable substance Erycibe paniculata.* ತಣ್ಡುಲಂ ವಸ್ತುಮೂಲಂ (Prv.).

ತಣ್ಡುಲಚೂರ್ಣ taṇḍula-čûrṇa. Broken rice. See ನುಚ್ಚು.

ತಣ್ಡುಲಪ್ರಕ್ಷಾಲಜಲ taṇḍula-prakshâla-jala. Water in which rice has been washed. See ಕಚ್ಚುರ.

ತಣ್ಡುಲೀಯ taṇḍulîya. *The plant Amaranthus polygonoides* Roxb. See ಕಿಱುಕುಸಾಲೆ.

ತಣ್ಡುಲೀಯಕ taṇḍulîyaka. = ತಣ್ಡುಲೀಯ. (ಮುದಿಷ್ಟ, ನೀರದರವ, ಕಿಱುಕುಸಾಲೆ Mr. 142, o. rs. ಮುದ್ರಿಷ್ಟ, ನೀರಧ-).

ತಣ್ಡೆ taṇḍĕ. A foot-ornament of women (= ಗಗ್ರ My.; M.; T. ತಣ್ಡೈ).

ತಣ್ಡೇಲ್ taṇḍêl. The master of a boat, a Tindal (My.; Tĕ.; Mhr. ತಾಣ್ಡೇಲ; T., M. ತಣ್ಡಲ್).

ತಣ್ಡೋ taṇḍô. = ತಣ್ಡಾ. — ತಣ್ಡೋ ಮುಣ್ಡೋ ವಾಸುದೇವ. An expression used of a man who is free from domestic incumbrances, but at the same time without refuge and destitute (My.).

ತಣ್ಡೋಪತಣ್ಡ taṇḍa (as if Sk.) -upataṇḍa. Crowds upon crowds, etc. (My.; Tĕ.).

ತಣ್ಣ taṇṇa. (= ತಣ್). — ತಣ್ಣ ತಣ್ಣನೆ. rep. (Šmd. 229). Very cool.

ತಣ್ಣಗೆ taṇṇagĕ. = ತಣ್ಣನೆ. Cool; cold; cooling, refreshing; in good health, happy; calm; finished, as work; extinguished, as a light (My.; B. 1, 22; 4, 119; Si. 228; J. 28, 5). ಎಣ್ಣೆ ತಣ್ಣಗಾದರೆ ಬೆಣ್ಣೆಯ ಹಾಗೆ ಇದ್ದೀತೇ?—ಗಾಣಿಗಿತ್ತಿ ಅಯ್ಯೋ ಅನ್ದರೆ ನೆತ್ತಿ ತಣ್ಣಗಾದೀತೇ?—ತಣ್ಣಗಿದ್ದರೆ ಮಣ್ಣಾದರೂ ಅಸಾಧ್ಯ (Prv.).

ತಣ್ಣನೆ taṇṇanĕ. = ತಣ್ಣಗೆ. (Šmd. 89; Čpr. 1, 59; 2, 83. 84; (Abh. P. 3, 77; Bp. 18, 16; My.; Si. 138). See ತಣ್ಣ-. — ತಣ್ಣನೆ ಪಣ್ಣನೆ. reit. (Čpr. 3, 94).

ತಣ್ಣನ್ನ taṇṇanna. = ತಣ್ಣನೆ, ತಣ್ಣಾನೆ. ತಣ್ಣನ್ನ ಉಸುಬು (ತಣ್ಬುಱಲ್ G.).

ತಣ್ಣಸ taṇṇasa. = ತಣಸು. Coldness, frigidity, cold, coolness (ಶೈತ್ಯ Čt. I, 2; II, 28; Abh. P. 11, 153; J. 13, 57; 18, 34; 30, 35). — ತಣ್ಣಸನ್ದೋಱು. -ಂ-ತೋಱು. Coldness to appear (J. 30, 12). — ತಣ್ಣಸವ್ಪಡೆ. -ಂ-ಪಡೆ. To get cold or cool (J. 30, 16).

ತಣ್ಣಾನೆ taṇṇânĕ. = ತಣ್ಣನೆ. (My.).

ತಣ್ಣಿತು taṇṇitu. = ತಣ್ಣಿತ್ತು (Šmd. 96). That is cold or cool; coolness; coldness (ಕೋಟ, ಕೋಡು, ಶೈತ್ಯ Kk. 23; ಕುಳಿರ್, ಕೋಡು, ಕೊಟ್ಟ, ಶೈತ್ಯ Šm. 36).

ತಣ್ಣಿತ್ತು taṇṇittu. = ತಣ್ಣಿತು, q. v. (Čpr. 8, 69).

ತಣ್ಪಳಿ taṇpaḷi. ತಣ್ಪಳಿವೊಸರುವ ಪ್ರಭೆ (Čt. I, 57, o. r. ತಾಣ್ಪಳಿವಿಸರುವ ಪಣ್ಣೊವ್ಪೆ).

ತಣ್ಪು taṇ-pu. (Šmd. 248). = ತಮ್ಪು, etc. Coolness; cold; a cooling, refreshing quality; happiness. ತಣ್ಪಿನ ತವರ್ಮನೆ (Ršv. 10, after 31). See Čpr. 2, 83; 8, 62. 90; Abh. P. 12, 28; Bp. 18, 30; 30, 28. — ತಣ್ಪುವಡೆ. -ಪಡೆ. To get cold or cool (Čpr. 1, after 101). — ತಣ್ಪುಎಱು. -ಬೀಱು. To bestow coolness or refreshment profusely (Šsv. 4, 136).

ತಣ್ವಣ taṇvaṇa. The sound of the lute (ವೀಣೆಯ ಧ್ವನಿ Mr. 81).

ತತ್ tat. = ತಱ1, ತಳ1, in ತತ್ತಱ, ತತ್ತಳ.

ತತ್ tat. = ತತು, ತತ್ತ1, ತತ್ತು, ತದ್ q. v., (ತತಿ 2, ತತುವು), ತದು.

ತತ tata. *Extended, drawn, stretched out; spread, diffuse.* 2, *any stringed musical instrument.* 3, wind, air.

ತತವಿತತಾದಿವಾದ್ಯ tata-vitata-âdi-vâdya. Various stringed and other musical instruments (Bp. 37, 2. 69; 59, 29).

ತತಸ್ tatas. From that; *from that place; afterwards, then; therefore.*

ತತಾ tatâ. = ತಾತಾ. — ತತಾತೂತು. = ತಾತಾತೂತು. (My.).

ತತಿ tati. 1. Extent; a series, a line, a range; a number, a crowd, a troop (ಸ್ತೋಮ Mr. 422); a sacrificial act, a ceremony.

ತತಿ tati. 2. = ತತುವು. (Tbh. of ತತ್). A proper time or season (S. Mhr.; Tĕ.; T. ತದಿ; Mhr. ತಥೀ, on that day, at that time).

ತತು tatu. = ತತ್, etc. Tbh. of ತದ್.

ತತುಕ್ಷಣ tatu-kshaṇa. = ತತ್ಕ್ಷಣ. (Bp. 24, 26; My.).

ತತುವ tatuva. Tbh. of ತತ್ವ 2. (Bh. 3, 8, 30; My.).

ತತುವು tatuvu. = ತತಿ 2. (My. occasionally).

ತತ್ಕಾಲ tad-kâla. That time; *time being, present time;* at that time. ತತ್ಕಾಲಂ, *at the time being;* directly, immediately.

ತತ್ಕಾಲೋತ್ಪನ್ನಧಿ tatkâla-utpanna-dhi. *Possessed of presence of mind.*

ತತ್ಕ್ರಿಯ tad-kriya. *Performing a particular work or service.*

ತತ್ಕ್ಷಣ tad-kshaṇa. = ತಕ್ಷಣ, ತಚ್ಚಣ, ತತುಕ್ಷಣ. That or the same moment. ತತ್ಕ್ಷಣಂ, *at the time being, at the same time, instantly, forthwith.*

ತತ್ತ tatta. 1. = ತತ್, etc. ತತ್ತರಣ (J. 14, 24). ತತ್ತಳವಿ (-ಅಳವಿ, 14, 15).

ತತ್ತ tatta. 2. Tbh. of ತಥ್ಯ. (J. 31, 43). ತನಯರೊಳ್ ತನ್ನ ತಾನೆ ದೊರ ಕೊಣ್ಡವಂ ತತ್ತನನ್ದನಂ (J. 28, 57).

ತತ್ತಕಾರ tatta-kâra. Truthfulness (Râm. 4, 3, 20).

ತತ್ತರ tat (= ತರ) -tara. = ತರತರ. Trepidation, trembling, shuddering (My.; T., M.; see Mhr. s. ತರ 2). — ತತ್ತರಗುಟ್ಟು. -ಕುಟು. To tremble, to shudder (My.). — ತತ್ತರಗೊಳ್ಳು. -ಕೊಳ್ಳು. To begin to tremble (My.).

ತತ್ತರಿಸು tattarisu. To tremble, etc. (My.; B. 4, 90).

ತತ್ತಱ tat-taṟa. = ತತ್ತಳ, ತಱತಱ. Perplexity, confusion, embarrassment (Čh. v. 19; Tĕ.). See ಎತ್ತಱ-. — ತತ್ತಱನ್ದಱ. -ಂ-ತಱ. To cut so that confusion arises (Grj. 6, 5). ತತ್ತಱ ಬಿತ್ತಱ. Mental embarrassment (V. 11, 8).

ತತ್ತಱಿ tattaṟi. = ತತ್ತಱ. — ತತ್ತಱಿದಱ. -ತಱ. = ತತ್ತಱನ್ದಱ. (Bh. 3, 18, 34).

ತತ್ತಳ tat-taḷa. = ತತ್ತಱ. (J. 30, 23). ತತ್ತಳದ ರಾವುತಂ (Šmd. 162). — ತತ್ತಳಂಗೊಳ್. -ಂ-ಕೊಳ್. To get perplexed (J. 14, 15).

ತತ್ತಿ tatti. = ತೆತ್ತಿ. An egg (ಅಣ್ಡ Nr.; ಕೋಶ, ಅಣ್ಡ, ಪೇಶಿ Mr. 167; C.; T. ತರಳ, ತಿರಡ್ಡಿ, ತಿರಳ್, ತಿರಳೈ, roundness; a ball; a round lump; ತಿರಟ್ಟು, to make round; *cf.* ತೆರಳು 2). See B. 2, 6; 3, 20. 113. 120; 4, 119. 132. 193.

ತತ್ತು tattu. A tripping, a stumbling (T.); peril, misfortune (Grj. 4, 97; T.).

ತತ್ತು tattu. Tbh. of ತತ್, in ತತ್ತುಗೊತ್ತು, in the sense of "the master of that" (My.).

ತತ್ತುದು tattudu. Third person singular of the imperfect of ತಱು 1 (J. 25, 58).

ತತ್ತುವ tattuva. = ತತುವ. (Dp.; T.).

ತತ್ತ್ವ tad-tva. = ತತ್ವ 2. (Sk.).

ತತ್ತ್ವಮಸಿ tad-tvam-asi. Thou art that, viz. the supreme soul (a common vêdântic expression, *e. g.* Abhâ. 3, 19).

ತತ್ಪರ tad-para. *Subsequent to that;* following after, inferior. 2, *having that as one's highest object or aim, intent upon, totally devoted to, attending to closely and anxiously* (ಪ್ರೇಮಿ, ಪ್ರಬರ್ಹ, ಪರಾಯಣ, ಪ್ರೇಮುಗೆಯ್ವವ Mr. 229).

ತತ್ಪರತೆ tad-paratĕ. Entire devotion or addiction to. (Čpr. 3, after 38; 8, after 4).

ತತ್ಪುರುಷ tad-purusha. The original or supreme soul. 2, a class of compounds in which the last number is defined or qualified by the first without losing its original independance (Šmd. 89 Mdb. Cm.; 196. 201. 209; Kâvy. I, 3, 6-9. 49-52).

ತತ್ಪುರುಷವಕ್ತ್ರ tatpurusha-vaktra. One of the faces of Šiva (Ššv. 5, 6).

ತತ್ಪೂರ್ವ tad-pûrva. Prior, former. (My.).

ತತ್ರ tatra. 1. *In that, therein; on account of that; there; thither; then.*

ತತ್ರ tatra. 2. Tbh. of ತನ್ತ್ರ. — ತತ್ರ ಬಿತ್ರಿ. reit. Jugglery. ತತ್ರ ಬಿತ್ರಿಯವನ ಮುನ್ದೆ ಕತ್ತೆಯ ಹಾಗೆ ಆದ (Prv.).

ತತ್ರಭವತ್ tatra-bhavat. Your honour there: *venerable, respectable* (used in speaking of a person not present). See ಪೂಜಾವಚನ.

ತತ್ರಾಣಿ tatrâṇi. (tatṟâṇi). — ತತ್ರಾಣಿಕೋೞಿ. The pochard, Fuligula ferina (Bd.).

ತತ್ವ ta-tva. 1. The letter or syllable ತ (Šmd. 103. 350).

ತತ್ವ tatva. 2. = ತತುವ, ತತ್ತುವ, ತತ್ತ್ವ. The state of being that; true state, real state; reality, truth; essential nature; the very essence; the real nature of the human soul as being one and the same with the universal soul; a principle; a first principle or an elementary substance: bhû, salila, têja, anila, âkâša (Mr. 53), or satva, rajas, tamas (ಸತ್ವಾದಿಗಳು 259), or any one of the twenty-five Sâṅkhya first principles; the number 25 (ಇಪ್ಪತ್ತಯ್ದು 348); *Brahma;* a kind of šlêsha (Kâvy. III, 3, B, 148 seq.); slow time in music. — ತತ್ವವೆಱು. -ಪೆಱು. The essence (of something) to have been born or be (Bp. 61, 1).

ತತ್ವಜ್ಞ tatva-jṅa. Knowing the truth or true nature of anything; understanding the principles of a science thoroughly (Kâvy. III, 3, B, 148).

ತತ್ವಜ್ಞಾನ tatva-jṅâna. = ತತ್ವಾಲೋಕ, q. v.

ತತ್ವಾರ tatvâra. Want, lack (My.). ಹೆಸರು ಮಾತ್ರ ಕ್ಷೀರಸಾಗರಭಟ್ಟ, ಮನೆಯಲ್ಲಿ ಮಜ್ಜಿಗೆನೀರಿಗೆ ತತ್ವಾರ (or ಗೊಟ್ಟು, Prv.).

ತತ್ವಾಲೋಕ tatva-âlôka. Knowledge of the truth, etc. (ತತ್ವಜ್ಞಾನ Šmd. 8 Cm.).

ತತ್ಸಮ tad-sama. The same with it; equal to it. 2, one of the terms that are not borrowed from Saṁskṛita, but exist in Kannaḍa as well as in Saṁskṛita (Šmd. 220. 384-387; Čt. II, 2; Kk. 3. 95. 100; Šm. 77. 119; see ಸಮಾನ); the Šmd. adduces 21 such tatsamas (384).

ತಥಾ tathâ. *So, thus.* 2, *yes, it is so.* See Prv. s. ರಾಜ.

ತಥಾಗತ tathâ-gata. Being in such a state or condition. 2, *a Buddha; a Jina.*

ತಥ್ಯ tathya. = ತತ್ತ 2. *True, real, genuine; truth, reality.* (J. 9, 31). ಸಂಸಾರಿಗೆ ತಥ್ಯ, ರೋಗಿಗೆ ಪಥ್ಯ (Prv.).

ತದ್ tad. = ತತ್, etc. *He, she, it, that, this.* 2, *therefore.* (Šmd. 100).

ತದಕು tadaku. 1. To strike, to beat (My.).

ತದಕು tadaku. 2. Striking, beating. See Prv. s. ಮುದುಕ.

ತದನನ್ತರ tad-anantara. Nearest or next to that; immediately upon that, thereupon, then (J. 7, 19; 10, 38; 24, 65; C.).

ತದಲು tadalu. = ತಡ್ಲು. A frame of thorns, etc., used as a gate in a hedge (My.; T. ತದಲ್, firmness, stability, *cf.* ತಗೆ; ತೆತ್ತು, a hedge of briers, etc.; a wicket or small gate; lines of intrenchment).

ತದಾ tadâ. *At that time, then.*

ತದಾತ್ವ tadâtva. *Time being, present time.*

ತದಾನೀಂ tadânîm. *Then.*

ತದಾರಭ್ಯ tad-ârabhya. Beginning from that time, thence, since then (My.; Tĕ.).

ತದಿಕು tadiku. = ತದುಕು. The gum olibanum tree, Boswellia thurifera (ಸಲ್ಲಕಿ, ಗಜಪ್ರೇಮಿ Mr. 123; Čpr. 5, after 64).

ತದಿಗಿಣ tadigiṇa. Sounds used in beating time in music (My.; *cf.* ತನ್ದನತಾನ). — ತದಿಗಿಣಥೋ. = ತದಿಗಿಣ. (My.).

ತದಿಗೆ tadigĕ. Tbh. of ತೃತೀಯೆ (Šmd. 343. 359. 373; Šm. 19).

ತದೀಯ tadîya. His, hers, its, theirs; such. (Bp. 3, 6; 4, 56; 18, 49).

ತದು tadu. Tbh. of ತಪ್. (Bp. 19, 32).

ತದುಕು taduku. = ತದಿಕು. (ಸಲ್ಲಕಿ, ಗಜಪ್ರಿಯೆ Hlâ.; ಗಜಭಕ್ಷ್ಯೆ, ಸುವಹೆ, ಸುರಭಿ, ರಸೆ, ಮಹೇರಣೆ, ಕನ್ದುರುಕಿ, ತಲ್ಲಕಿ, ಹ್ಲಾದಿನಿ Nr.; ಗಜಭಕ್ಷ್ಯೆ, etc., ಆನೇ ಬೇಲ Si. 153; Ršv. 5, after 55). ತದುಕಿನ ಧೂಪ (ಯಾವನ, ತುರುಷ್ಕ, ಪಿಣ್ಡಕ, ಸಿಹ್ಲ Nr.; ಪಿಣ್ಯಾಕ, ಸಿಹ್ಲ Si. 406). ತದುಕಿನ ಮಡ್ಡಿ (ಯಾವನ, ತುರುಷ್ಕ, etc., ಅನ್ದುಗ ಬೊಂಕ, ಹಾಲುಮಡ್ಡಿ Si. 227; *cf.* ಮಡ್ಡಿಯ ಧೂಪ).

ತದೆ tadĕ. = ಸದೆ. To strike (ತಾಡನ Šmd. Dh.; T. ತೆಯ್, M. ತಯ್; Tĕ. ತನ್ನು; *cf.* ತಗಲು, ತಟ್ಟು 1).

ತದ್ಗತ tad-gata. Gone to that; *bent or intent on.*

ತದ್ಗುಣ tad-guṇa. The quality or virtue of anything; possessing these qualities. 2, a figure of speech in rhetoric, transferring the quality of one thing to another (Kâvy. III, 3, B, 121. 140 seq.).

ತದ್ದಿನ tad-dina. That day (J. 10, 26); during the day; day by day. 2, the day of mourning for deceased relations (ಮೃತತಿಥಿ My.; Tĕ.).

ತದ್ದು taddu. = ದದ್ದು. Tbh. of ದದ್ರು. (ದದ್ರು Nr., Mr. 384; Si. 202). ತದ್ದುಳ್ಳವನು (ದದ್ರುಣ, ದದ್ರುರೋಗಿ Nr.).

ತದ್ಧರ್ಮ tad-dharma. Having that business; that business; that religion (My.).

ತದ್ಧಿತ tad-d-hita. Good for that, etc. 2, an affix which forms nouns from other nouns. 3, a noun formed by a

taddhita affix, a derivative noun. See Šmd. 6. 88. 110. 120. 232. 245. 252; Kâvy. I, 1a, 6; I, 4, 1 seq.

ತದ್ಧಿತಪ್ರತ್ಯಯ taddhita-pratyaya. = ತದ್ಧಿತ No. 2. (My.).

ತದ್ಧಿತಲಿಂಗ taddhita-linga. = ತದ್ಧಿತ No. 3. (Šmd. 88 Cm.).

ತದ್ಧಿತಾನ್ತ taddhita-anta. = ತದ್ಧಿತ No. 3. (My.).

ತದ್ಬಲ tad-bala. *A sort of arrow;* a sort of bow (ದಣ್ಡಾಸನ, ತೀರಿ, ಬಿಲ್ಲ ಭೇದ Mr. 294).

ತದ್ಭವ tad-bhava. Born or coming from that (Šmd. 236). 2, a word corrupted from Samskṛita (Šmd. 334. 360. 375. 377. 383), (or from any other language).

ತದ್ಭಾವ tad-bhâva. The becoming that. 2, the substance, thing, or nature of that (Šmd. Dh. No. 67).

ತದ್ಯಮ (tad-yama). Kindness, gentleness, mildness, peaceable behaviour (ಸಾಮ Čt. II, 49 in one MS.).

ತದ್ಲು tadlu. = ತದಲು. (My.).

ತದ್ವಚನ tad-vačana. That speech or word. (Šmd. 100).

ತದ್ವತ್ tad-vat. *Having or containing that.* 2, *like that, in that manner, thus.* 3, also, likewise.

ತನ್ tan. 1. = ತಂ (ತಜ್), etc., ತನು. — ತನ್ನೆಲೆವುಳುಕ ಗಿಡ. -ಎಲೆ-ಪುಳುಕ-. The herb or low shrub Crotolaria verrucosa Lin. (St. & Pl.).

ತನ್ tan. 2. = ತನ್ನ, ತಾ 1, ತಾಂ 1, ತಾನ್ q. v., ತಾನು. (Šmd. 178). Gen. ತನ (see ತನತು), Dat. ತನಗೆ (My.; Šmd. 133. 178; Nr.; Nn. 73; J. 8, 2; 28, 57; 29, 34; 30, 49; Bh. 1, 8, 8), ತನಗೆ (Si. 69. 264. 265. 267. 293), ತಂಗೆ. Plural ತಮ್ (ತಮ್ಮ್). ತನಗೆ ಇಲ್ಲದ ಮಾರಿ ತಮ್ಮಡಿಗೆ ವರಾ ಕೊಟ್ಟೇತೇ?— ತನಗೆ ಬನ್ದ ಹಾನಿ ಅರ್ಥದಿನ್ದ ಹೋಯಿತು.— ತನಗೆ ಇಲ್ಲದವನು ಪರರಿಗೇನು ಕೊಟ್ಟಾನು?— ತನಗೆ ಇಲ್ಲ, ಕೂಸಿಗೆ ಏನು ಹೊದ್ದಿಸಲಿ?— ತನಗೆ ಇಲ್ಲದವಳು ಮಕ್ಕಳಿಗೇನು ಹೊದಿಸ್ಯಾಳು? (Prvs.). ನಾಳೆ ತಿಳುವಳಿಕೆ ಹುಟ್ಟಿತೆನ್ದರೆ ತನಗೆ ತಾನೇ ಇದೆಲ್ಲಾ ತುಣ್ಡುತನ ಕಡಿಮೆ ಆದೀತು (B. 4, 200). — ತನ ತನಗೆ. rep. (Bp. 10, 4; 18, 82; 57, 8; J. 13, 24). — ತನ್ದು. = ತನ್ನದು. (My.).

ತನ tana. An affix for forming true Kannada words, *e. g.* ಕಲಿತನಂ, ಆಳ್ತನಂ, ಪೆಣ್ತನಂ (Šmd. 248); words like ಆರೋಹಕತನ are wrong formations (248).

ತನಕ tanaka. = (ಅನಕ), ತನ್ಕ. Up to that measure: till, until, as far as (C.; Tĕ. ದನಕೆ, ದಾಕಾ, ದಾಕೆ; M. ತನೆ, T. ತನ್ಯೆ, quantity, number, measure). ತನಿವಾರತನಕ (B. 1, 7). ಹುಡುಗರು ಹದಿನಾಲು ವರ್ಷದವರಾಗುವ ತನಕ (1, 12). ಇನ್ದಿನ ತನಕ (2, 33). ಅಯ್ಯೂಬಿ ತನಕ (2, 42); ಕಡೆತನಕ (4, 197). ಇಷ್ಟು ದಿವಸತನಕ (4, 199). See Bp. 27, 22; 49, 18; 57, 12; 61, 57; B. 2, 6. 7; 3, 10. 67; 5, 59. 64. 72. 243; ಅಲ್ಲಿ-, ಇಲ್ಲಿ-, ಎಲ್ಲಿ-.

ತನಕಿ tanaki. Ascertaining; examination (My.; H. tanqih; Br. ತನಕಿ, ತನಕ್ಕಿ, ತನಿಖಿ).

ತನಖೆ tanakhĕ. An assignment on the revenues, an order for money; a standard rent-roll of villages (Mhr., H. ತನಖಾ; Br. ತನಖಾ, ತನಿಖಿ; R.).

ತನತು tanatu. ತನ-ಅತು. = ತನತ್ತು, ತನ್ನದು (Šmd. 178; Kk. 61). Its, hers. ನಿನತು ಚಲಮ್, ಎನತು ಶೌರ್ಯಂ, ತನತು ಮಹಾಧೈರ್ಯಮ್ ಅವನಿಪತಿಗೆ (Šmd. 179).

ತನತ್ತು tanattu. ತನ-ಅತ್ತು 1. = ತನತು, etc. (Šmd. 178; Čt. II, 102). See Šmd. 179. 144.

ತನಯ tanaya. *A son.* Feminine ತನಯಳ್ = ತನಯೆ. (Bp. 4 sum.; 5, 5; 11, 38; 42, 17).

ತನಯೆ tanayĕ. *A daughter.*

ತನಿ tani. 1. To thrive, to develop, to become full-grown, etc. P. p. ತನಿತು (Čpr. 3, 15).

ತನಿ tani. 2. The state of having thriven, full, strong, fully developed, complete, matured, abounding in agreeable qualities, rich, etc. (T. ತಣಿ, M. ತಱಿ, Tĕ. ತನಿ, to thrive, prosper, grow, increase, become full or fleshy). — ತನಿಗಣ್ಡ. -ಕಣ್ಡ. A big piece of flesh (Abh. P. 13, after 54). — ತನಿಗನ್ಧ. = ತನಿಗಮ್ಪು. (J. 26, 8). — ತನಿಗಮ್ಪು. -ಕಮ್ಪು. A full or rich fragrance (Šmd. 77; Čpr. 7, 49; Abh. P. 3, after 75; J. 3, 8; 15, 9). — ತನಿಗರ್ಬು. -ಕರ್ಬು. Juicy sugar-cane (V. 4, 29). — ತನಿಗಿಚ್ಚು. -ಕಿಚ್ಚು. A great, blazing fire (Abh. P. 11, 144). — ತನಿಗುದಿ. -ಕುದಿ. To be completely boiled (Bh. 1, 20, 54). — ತನಿಗುಳ್ಳ. (Si. 149). A kind of prickly nightshade. — ತನಿಗೆಣ್ಡ. -ಕೆಣ್ಡ. A glowing coal (Rśv. 5, 34; V. 30, after 35; J. 3, 32; 13, 12). — ತನಿಗೆದಱು. -ಕೆದಱು. 1. To be greatly or completely scattered (Bh. 8, 23, 20; Râm. 3, 6, 7). — ತನಿಗೆದಱು. -ಕೆದಱು. 2. The state of being profusely scattered (J. 9, 24). — ತನಿನಗೆ. Great laughter (Râm. 6, 10, 10). — ತನಿಪರಿಮಲ. = ತನಿಗಮ್ಪು. (Râm. 2, 7, 3). — ತನಿಬೀಜ. A seed full of vital power (Bh. 2, 13, 9). — ತನಿಬೆಲ್ಲ. Delicious jaggory (Bh. 1, 15, 7). — ತನಿಯೆಱೆ. -ಎಱೆ. To throw delicious food to snakes to appease them (My.; Bh. 8, 2, 15). — ತನಿರಸ. A superior fluid, essence; excellent taste or flavour; great beauty. ಕಾಳ ಸೊಳಗೆ ಕಾರ್ಮುಗಿಲ ಅಂಜನವ ಕಲಿಸಿ ತನಿರಸದೊಳು ಪೊರೆಳ್ದಿದ ನೀಲಪುತ್ರಿಕೆಗಳನ್ತೆ (Râghč. 17, 64). ಕುಱಿ ಕಬ್ಬಿನೊಳು ಹೊಕ್ಕು, ಅಱಿವದೇ ತನಿರಸವ, ಪೊಱಗಣ ಸೋಗೆಯಗಿವನ್ತೆ? (Sp.). See J. 15, 47; 21, 57. — ತನಿವಣ್. -ಪಣ್. A fully ripe fruit. ನೇಱಿಲ ತನಿವಣ್ಣಂ (Šmd. 85 Mdb.). See Čpr. 7, 88; Bp. 18, 16; 48, 11; Rśv. 2, 47; J. 3, 11. 31; 28, 20. — ತನಿವಣ್ಣು. = ತನಿವಣ್. (Bp. 20, 26). — ತನಿವಾಲ್. -ಪಾಲ್. Rich milk (V. 9, 107). — ತನಿವೀರರಸ. Great heroism (J. 8, 31; 12, 25; 13, 51; 23, 26). — ತನಿವೆಚ್ಚು. -ಪೆಚ್ಚು. To increase much (Čpr. 3, 45). — ತನಿವೆಳಗು. -ಬೆಳಗು. A great or brilliant light or lustre (Bh. 2, 2, 1). — ತನಿವೇಟ. -ಬೇಟ. Various love-gestures (Rśv. 11, 93). — ತನಿವೇಸಿಗೆ. -ಬೇಸಿಗೆ. A very hot season (J. 15, 5). — ತನಿಸುಖ. Great pleasure or joy. ಅನಾತುರದೊಳು ಚೊಕ್ಕಟದ ತನಿಸುಖವ ಮುಕ್ಕುಳಿಸುವ ಅನುಭವಿ (Čidakhaṇḍânubhavasâra 1, 7). — ತನಿಸೂಱೆ. Enormous plundering (Bh. 2, 4, 12). — ತನಿಸೊಬಗು. Great beauty (J. 6, 25). — ತನಿ ಸೋಂಕು. (or -ಸೊಂಕು). To cling to closely (Čpr. 7, 94). — ತನಿಹರಕೆ. Great blessing or praising (Bh. 1, 7, 30). — ತನಿಹಳುಕು. A large piece (Bh. 2, 2, 103).

ತನು tanu. = ತಣುವು 2, ತನ್ 1, ತನುವು, ತಮ್ಪು. (My.).

ತನು tanu. *Thin, slender, emaciated; small, minute; delicate, fine.* 2, *the body; self.* 3, *the skin.* ತನುವಱಿಯದ ನೋವಿಲ್ಲ, ಮನವಱಿಯದ ಪಾಪವಿಲ್ಲ (Prv.). — ತನುಗಮ್ಪು. -ಕಮ್ಪು. Fragrance of the body (J. 6, 12).

ತನುಕರಣ tanu-karaṇa. An organ, or the organs, of the body (Bp. 4, 65).

ತನುಜ tanu-ja. *A son* (ತನುಜಾತ Mr. 309; ಮಗ Nn. 48. 92).

ತನುಜಾತ tanu-jâta. = ತನುಜ. (Mr. 309; ಬಾಲಿಶ, ಮಗ Nn. 131).

ತನುಜಾತೆ tanu-jâtĕ. = ತನುಜೆ. (J. 2, 51).

ತನುಜೆ tanu-jĕ. A daughter. See ಜನಕ-.

ತನುತರ tanu-tara. Thinner, more minute; uncommonly small or insignificant (Šsv. 2, 86).

ತನುತ್ರ tanu-tra. *Armour, mail.*

ತನುತ್ರಾಣ tanu-trâṇa. *Armour, mail.*

ತನುತ್ವ tanutva. Thinness, etc. See ಕಟಿಲ್.

ತನುಧನಪ್ರಾಣ tanu-dhana-prâṇa. Body, property and life (J. 17, 35).

ತನುಧರ್ಮ tanu-dharma. The right, merit, or nature, of the body (Bp. 42, 20).

ತನುಭವ tanu-bhava. = ತನುಜ. (Bp. 24, 62. 63).

ತನುಮಧ್ಯೆ tanu-madhyĕ. N. of a vṛitta (Čh.)

ತನುಮನಧನ tanu-mana-dhana. Body, mind and property (Bp. 1, 17; 2, 42; see ಅರ್ಥಪ್ರಾಣವಪುಸ್).

ತನುವಿಕಾರ tanu-vikâra. Gesticulation (ಅಂಗಹಾರ Mr. 75).

ತನುವಿದಾಹ tanu-vidâha. Burning or great heat of the body (Čpr. 4, 33).

ತನುವು tanuvu. = ತನು, etc. (My.).

ತನುಸಮ್ಭವ tanu-sambhava. = ತನುಭವ. (J. 2, 35).

ತನೂಕರಣ tanû-karaṇa. Making thin or fine, attenuation, diminishing, weakening; paring. See ಒರೆ; ಕೆತ್ತು.

ತನೂಕೃತ tanû-kṛita. *Made thin; pared.*

ತನೂಜ tanû-ja. = ತನುಜ. (Čh. v. 11; Čpr. 2, after 53; Bp. 2, 3; 25, 25).

ತನೂಜೆ tanû-jĕ. = ತನುಜೆ. See Čpr. 5, 102; Bp. 4, 32; ಶೈಲರಾಜ-.

ತನೂದರಿ tanu-udari. Having a thin, delicate belly (Čh. v. 89; Čpr. 7, 139).

ತನೂನಪಾತ್ tanû-napât. The son or descendant of himself: *Agni.*

ತನೂನಪಾತ tanû-napâta. = ತನೂನಪಾತ್. (Mr. 46).

ತನೂಭವ tanû-bhava. = ತನುಭವ. (ಮಗ Nn. 126; Šmd. 227).

ತನೂರುಹ tanû-ruha. *The hair of the body; the wing of a bird.*

ತನೆ tanĕ. = ಜನೆ, ತೆನೆ 2, ಸೆನೆ. The embryo of beasts; pregnancy (ಪ್ರಜನ, ಉಪಸರ Nr.; *cf.* Sk. ಘನ, the fetus in its second month). ತನೆ ಕರಗಿದ ಆಕಳು (ಸ್ರವದ್ಗರ್ಭೆ, ಅವತೋಕೆ Nr.). ತನೆಯ ಆವು (ಪ್ರಷ್ಠೌಹಿ, ಗರ್ಭಿಣಿ Hlâ.). ತನೆ ಬಲಿಯೆ ಪಲಿಕ್ನಿ ಎನಿಸುಗು; ತನೆ ನಿಲಲು ಪ್ರಷ್ಠೌಹಿ (Mr. 180). See ಎಳದನೆ.

ತನ್ಕ tanka. = ತನಕ. (My.).

ತನ್ತರ tantara. Tbh. of ತನ್ತ್ರ. (My.). ತನ್ತರವಿದ್ದವನಿಗೆ ಮನ್ತರ ಬೇಡ (Prv.).

ತನ್ತಿ tanti. Tbh. of ತನ್ತ್ರಿ. (My.; Si. 61; B. 4, 97. 124. 157; B. 5, 219). — ತನ್ತಿಟಪ್ಪಾಲು. The telegraph (My.).

ನಿಶ್ಚೇತನ niś-cêtana. Without consciousness; without reflection; unreasonable, (foolish); without animation. (Čpr. 4, 53; Bp. 8, 12; 54, 14).

ನಿಶ್ಚೇಷ್ಟ niś-cêshṭa. Motionless; powerless, helpless; incapable of motion or effort. (Bp. 36, 14).

ನಿಶ್ಚೇಷ್ಟಾವಲಮ್ಬನ niścêshṭâ-avalambana. Hanging down motionless. See ನೆಬಲ್.

ನಿಶ್ಚೇಷ್ಟಿತ niś-cêshṭita. = ನಿಶ್ಚೇಷ್ಟ. (Bp. 3, 25).

ನಿಶ್ಚೇಷ್ಟೆ niś-cêshṭĕ. Motionlessness; incapability of motion or effort; want of power. See ಬದಿಲ್ಲು.

ನಿಶ್ಚೈತನ್ಯ niś-caitanya. Want of strength or power (My.).

ನಿಶ್ವಸಿತ ni-śvasita. Breath having been drawn in, inspired (Sk.). 2, = ನಿಃಶ್ವಸಿತ (Čpr. 3, 54).

ನಿಶ್ವಾಸ ni-śvâsa. Inspiration, inhaling; sighing (Sk.). 2, = ನಿಃಶ್ವಾಸ (Čpr. 3, after 32; 4, 40; 5, after 9; 5, 98; J. 14, 22).

ನಿಶ್ವಾಸೋಚ್ಛ್ವಾಸ niśvâsa-ucchvâsa. Inhaling and exhaling (Čpr. 4, after 76).

ನಿಶ್ಶಂಕ niś-śanka. = ನಿಃಶಂಕ. (Šmd. 335; Bp. 53, 55; My.).

ನಿಶ್ಶಂಕತೆ niś-śankatĕ. = ನಿಃಶಂಕತೆ. (Bp. 16, 18). — ನಿಶ್ಶಂಕತೆ ವೆಡ್. -ಪೆಡ್. To obtain freedom from fear, etc. (Šsv. 4, 58).

ನಿಶ್ಶಂಕೆ niś-śankĕ. = ನಿಃಶಂಕೆ, ನಿಸ್ಸಂಕೆ. (My.).

ನಿಶ್ಶಬ್ದ niś-śabda. = ನಿಃಶಬ್ದ. (My.).

ನಿಶ್ಶಲ್ಯ niś-śalya. = ನಿಃಶಲ್ಯ. (My.).

ನಿಶ್ಶೇಷ niś-śêsha. = ನಿಃಶೇಷ. (My.).

ನಿಶ್ಶ್ವಾಸ niś-śvâsa. = ನಿಃಶ್ವಾಸ. (My.).

ನಿಷ್ nish. = ನಿಃ, etc.

ನಿಷಂಗ ni-sanga. Union. 2, *a quiver.*

ನಿಷಂಗಿ ni-sangi. A bowman, an archer (ಬಿಲ್ಲಾಳು G.).

ನಿಷಣ್ಣ ni-sanna. Seated, sitting, perched, etc.; gone to. (Čpr. 3, after 2).

ನಿಷತ್ ni-sat. Sitting down; sinking down.

ನಿಷದ್ಯೆ ni-sadyĕ. A couch. 2, *a market-place.*

ನಿಷದ್ವರ nishat-vara. *Mud, mire.*

ನಿಷಧ nishadha. *N. of a mountain.* 2, N. of the kingdom of Nala; Nala (Râm. 3, 2, 17).

ನಿಷಾ nishâ. = ನಿಶಾ No. 1. (Mv.).

ನಿಷಾದ ni-sâda. *N. of a wild aboriginal tribe, described as hunters, fishermen, robbers, etc.,* a Hŏlĕya (ಜನಂಗವು, ದುಷ್ಕರ್ಮ, ಹೊಲೆಯ Mr. 381; Bp. 57, 77). 2, *the last note of the musical scale* (Mr. 76, see ಸಪ್ತಸ್ವರ). 3, = ನಿಷದ್ವರ, mud, clay (Bp. 21, 27).

ನಿಷಾದಿ ni-sâdi. = ನಿಸಾದಿ 2. Sitting down or on. 2, *an elephant-driver* (ಉದ್ದಣ್ಡಗಜವೇಱುವಂ Mr. 247).

ನಿಷಿಕ್ತ ni-sikta. Sprinkled, sprinkled or poured upon (Bp. 39, 68).

ನಿಷಿದ್ಧ ni-siddha. Prohibited, forbidden, kept back, prevented, denied. (My.). ನಿಷಿದ್ಧವಾದ ವಸ್ತು ಅಶುದ್ಧವೆನ್ದರೆ ಕಸೂತಿ ಹಾಕಿದ್ದು ಯಾಕೆ? (Prv.). See Prv. s. ಪ್ರಸಿದ್ಧ.

ನಿಷೂದನ ni-shûdana. = ನಿಸೂದನ. (Sk.; My.).

ನಿಷೇಕ ni-sêka. Sprinkling, pouring upon or into; impregnation. 2, a ceremony performed before impregnation at the first menstruation (My.). 3, a ceremony performed upon impregnation (Sk.).

ನಿಷೇಧ ni-sêdha. *Prohibition, forbidding, keeping off or back, hindering, preventing; negation, denial* (Šmd. 291); discontinuance (ಬಾಧ, ಮಾಣಿಸುವುದು Nn. 64; ಮಾಣಿಸುಹ 93); exception. — ನಿಷೇಧರೂಪ. The negative form of a verb (My.).

ನಿಷೇಧಪರ nishêdha-para. Intent upon objection or denial (Kâvy. III, 3, B, 92).

ನಿಷೇಧಿಸು nishêdhisu. To prohibit, to forbid (My.).

ನಿಷೇವಣ ni-sêvana. Waiting on, serving, service, worship. (My.);—enjoying, using. See ಮರುನ್-.

ನಿಷೇವ್ಯಮಾಣ ni-sêvyamâṇa. Being waited upon, served, attended, etc. Feminine ನಿಷೇವ್ಯಮಾಣೆ (Čpr. 3, after 50).

ನಿಷ್ಕ nishka. = ನಿಕ್ಕ. *A golden ornament for the neck or breast.* 2, *a weight of gold varying in value at different times.* 3, *gold.* See Si. s. ಬೆಸೆ 1.

ನಿಷ್ಕಣ್ಟಕ nish-kaṇṭaka. = ನಿಃಕಣ್ಟಕ. Thornless; free from danger or trouble.

ನಿಷ್ಕಪಟ nish-kapaṭa. Guileless, free from deceit or fraud. (My.). 2, guilelessness (My.).

ನಿಷ್ಕಪಟತನ nish-kapaṭatana. Guilelessness (My.; ದಾಕ್ಷಿಣ್ಯ G.).

ನಿಷ್ಕಪಟಸ್ಥ nishkapaṭa-stha. = ನಿಷ್ಕಪಟ No. 1. (My.).

ನಿಷ್ಕಪಟಿ nish-kapaṭi. A guileless, candid person (My.).

ನಿಷ್ಕಮ್ಪ nish-kampa. Not shaking, motionless, immovable (Šmd. 251).

ನಿಷ್ಕರ nish-kara. Taking away, removing; preparing, accomplishing. See ಉಪ-.

ನಿಷ್ಕರುಣ nish-karuṇa. = ನಿಃಕರುಣ. Pitiless, unmerciful, merciless, cruel.

ನಿಷ್ಕರುಣಿ nish-karuṇi. A pitiless, unmerciful, cruel person (Bp. 4, 55; My.).

ನಿಷ್ಕರ್ಮ nish-karma. Inactive. 2, sinless (Bp. 54, 20).

ನಿಷ್ಕರ್ಮಿ nish-karmi. Sinless (Bp. 22, 60; 51, 27).

ನಿಷ್ಕರ್ಷ nish-karsha. Drawing out, extracting; extraction of the essence: the essence of a thing, chief point, main point. 2, ascertainment, certainty, decision, settlement. (My., as ನಿಷ್ಕರ್ಷೆ).

ನಿಷ್ಕರ್ಷಿಸು nish-karshisu. To ascertain, to determine, to settle (My.).

ನಿಷ್ಕಲ nish-kala. Without parts, undivided, indivisible. (Bp. 7, 14; 51, 27; 61, 44; Šsv. 5, 24). 2, waned; impotent, barren; infirm.

ನಿಷ್ಕಲಂಕ nish-kalanka. Stainless, spotless, sinless, without blemish. (Bp. 46, 76; 61, 44; Šsv. 5, 24; My.).

ನಿಷ್ಕಲಂಕೇನ್ದು nishkalanka-indu. The moon without spots (J. 15, 36).

ನಿಷ್ಕಲೆ nish-kalĕ. *An elderly woman past childbearing or in whom menstruation has ceased* (ಹೊಲೆ ಕೆಡಲು Mr. 302). 2, absence of fine arts or skill in ನಿಷ್ಕಲಾತಿವರು (Bp. 58, 18).

ನಿಷ್ಕಾಪಟ್ಯ nish-kâpaṭya. Guilelessness (My.).

ನಿಷ್ಕಾಮ nish-kâma. Free from desire; disinterested, unselfish;—absence of desire or lust (My.).

ನಿಷ್ಕಾಮಿ nish-kâmi. A person free from desire or lust (Śmd. 64; Bp. 44, 54; My.).

ನಿಷ್ಕಾರಣ nish-kâraṇa. Causeless; groundless (Ćt. II, 121; Bp. 43, 15; B. 5, 180; My.).

ನಿಷ್ಕಾಸ nish-kâsa. Going out, exit. 2, a veranda. 3, *waning, disappearance.*

ನಿಷ್ಕಾಸಿತ nish-kâsita. = ನಿಃಕಾಸಿತ. *Turned out, expelled.* 2, gone forth or out. 3, reviled, reproached. 4, blown, expanded. See Mr. s. ಅವಕುಂಚಿತ.

ನಿಷ್ಕುಟ nish-kuṭa. *The hollow of a tree* (ಕೋಟರ, ಮರದ ಹೊಳಲು, ಪೋಟೆ Nn. 142). 2, *a garden (or yard) attached to a house* (ಹಿತ್ತಿಲ್, ಹಿತ್ತಲ 142; ಹಿತ್ತಲ Mr. 480).

ನಿಷ್ಕುಟಿ nish-kuṭi. *Large cardamoms.*

ನಿಷ್ಕುಹ nish-kuha. *The hollow of a tree.*

ನಿಷ್ಕೃತಿ nish-kṛiti. Doing away, removing. 2, *expiation, atonement; compensation, discharge of a debt or obligation.*

ನಿಷ್ಕೇವಲ nish-kêvala. = ನಿಕೇವಲ. Belonging exclusively.

ನಿಷ್ಕ್ರಮ nish-krama. Going out, coming forth. 2, *any intellectual faculty.*

ನಿಷ್ಕ್ರಮಣ nish-kramaṇa. Going out or forth; exit. See ಜಲ-, ತೋಡು. 2, the ceremony of taking a child out of the house for the first time to see the sun.

ನಿಷ್ಕ್ರಾಮಿತ nish-krâmita. Caused to go out, driven out (ಹೊರಗೆ ಹಾಕಿಸಿ ಕೊಣ್ಡವ G.).

ನಿಷ್ಟಪ್ತ nis-tapta. Purified by heat, free from impurities (Ćpr. 4, after 75); burnished, made bright.

ನಿಷ್ಟ್ಯ nishṭye. *An outcast, a barbarian, a mléćcha.*

ನಿಷ್ಠ ni-stha. (= ನಿಟ್ಟು). Staying or being in or on, situated on, grounded on, fixed in; firm; intent on; devoted to, practising (My.); skilled in; believing in. 2, the state of being intent on, intention, aim, object (Śmd. 94).

ನಿಷ್ಠಾನ ni-sthâna. *Sauce, condiment* (ಅಮ್ಬುಲಿ Mr. 215). See ಪಳಿದ್ಯ.

ನಿಷ್ಠಿತ ni-sthita. = ನಿಷ್ಠ. (Bp. 3, 78; 6, 16; 21, 5; 61, 43; J. 7, 14).

ನಿಷ್ಠೀವ ni-shṭhîva. *Spitting, spitting out.*

ನಿಷ್ಠೀವನ ni-shṭhîvana. *Spitting, spitting out.*

ನಿಷ್ಠುರ ni-shṭhura. = ನಿಟ್ಟುರ, ನಿಟ್ಟೂರ, ನಿಷ್ಠೂರ. *Hard, rough, rugged; harsh, coarse, gruff, unkind, cruel, severe;* contumelious (ಕಠೋರ, ವಿಷ Nn. 11; ಕುಮುದ, ಕಠೋರ 29; ಪರುಷ, ತೀಕ್ಷ್ಣ 119; ಹೇಯ, ಕೋಪ 137; Kâvy. III, 1, A, 15). ದುಷ್ಟನಿಗೆ ಕಷ್ಟ ಬನ್ದರೂ ನಿಷ್ಠುರಗುಣ ಬಿಡಲಾರ (Prv.). See Prv. s. ಮುನಿಸು.

ನಿಷ್ಠುರತನ ni-shṭhuratana. = ನಿಷ್ಠುರತೆ. (B. 4, 73; G. 343).

ನಿಷ್ಠುರತೆ ni-shṭhuratĕ. Harshness, gruffness (of speech); coarseness; reviling, abuse (Sk.); severity (Grj. 9, after 83).

ನಿಷ್ಠುರತ್ವ ni-sthuratva. = ನಿಷ್ಠುರತೆ. (Sk.; My.).

ನಿಷ್ಠೂರ ni-shṭhûra. = ನಿಷ್ಠುರ, etc. (ವ್ರಜಿನ Nn. 64; ಜರಠ 146; My.). — ನಿಷ್ಠೂರನಂಜಯ. o. r. of ನಿಷ್ಠೂರಸಂಜಯ (in a My. MS.). — ನಿಷ್ಠೂರಸಂಜಯ. N. of the commentator of the Śabdamaṇidarpaṇa (see IV. XIII). The probably oldest copy of the Śmd. at Mdb. does not give the commentator's name; that copy's commentary, though essentially identical with the others used by the editor, differs, however, from them in many particulars.

ನಿಷ್ಠೆ ni-sthĕ. = ನಿಟ್ಟೆ. Position, station; *condition, state;* stand-point, basis. 2, devotion or attachment to, devotedness; *ordinary and uniform practice;* religious duty; believing in, faith, reliance. 2, conversancy with, skill; *eminence, excellence, perfection.* 3, *conclusion, the end or catastrophe of a drama, etc.* 4, *destruction, death.* 5, *fixed or certain knowledge, certainty.* 6, *trouble, affliction.* ನಿಷ್ಠೆಯಿದ್ದವನಿಗೆ ನಷ್ಟವಿಲ್ಲ.— ನಿಷ್ಠೆಯಿಲ್ಲದವ ಭ್ರಷ್ಟನಾದಾನು (Prvs.). See ಮಜ್ಜಾಸಾರ.

ನಿಷ್ಠೇವ ni-shṭhêva. *Spitting, spitting out.*

ನಿಷ್ಠೇವನ ni-shṭhêvana. *Spitting, spitting out.*

ನಿಷ್ಠ್ಯೂತ ni-shṭhyûta. *Spit out, ejected, thrown out.*

ನಿಷ್ಠ್ಯೂತಿ ni-shṭhyûti. *Spitting, spitting out.*

ನಿಷ್ಣಾತ ni-snâta. Immersed; *deeply versed in, conversant with, learned.*

ನಿಷ್ಪಕ್ವ nish-pakva. *Decocted, boiled.*

ನಿಷ್ಪಕ್ಷಪಾತ nish-pakshapâta. = ನಿಃಪಕ್ಷಪಾತ. Impartial; impartiality (My.; B. 5, 8).

ನಿಷ್ಪತ್ತಿ nish-patti. Going forth or out; birth. 2, being prepared; *completion, conclusion, termination, consummation.* See ತೀರ್ಚು.

ನಿಷ್ಪನ್ದ ni-spanda. = ನಿಷ್ಪಿನ್ದ. Motionless, immovable. (Śsv. 4, 20).

ನಿಷ್ಪನ್ನ nish-panna. = ನಿಷ್ಪಿನ್ನ. Gone forth or out; sprung up, arisen, born; *accomplished, done, finished, ready.*

ನಿಷ್ಪಾದ್ಯ nish-pâdya. To be effected or accomplished; achievable; to be produced; to be ripened (ವೃಷ್ಟಿನಿಷ್ಪಾದ್ಯ Hlâ. II, 6).

ನಿಷ್ಪಾಪ nish-pâpa. Free from sin, sinless, guiltless. (J. 32, 13).

ನಿಷ್ಪಾವ nish-pâva. *Fanning, winnowing, cleaning corn, etc.* 2, = ನಿಷ್ಪಾವಕ (ಅವರೆ Nr.).

ನಿಷ್ಪಾವಕ nish-pâvaka. = ನಿಷ್ಪಾವಕ. *A species of pulse, Phaseolus radiatus* (also Dolichos lablab, see ಅವರೆ).

ನಿಷ್ಪೀಡನ nish-pîdana. = ನಿಃಪೀಡನ No. 1. (My.). See ಮುಷ್ಟಿ-.

ನಿಷ್ಪೇಷಣ nish-pêshaṇa. Rubbing together, grinding, pulverizing. (My.).

ನಿಷ್ಪ್ರತ್ಯೂಹ nish-pratyûha. = ನಿಃಪ್ರತ್ಯೂಹ. Unobstructed, unimpeded.

ನಿಷ್ಪ್ರಪಂಚ nish-prapañća. = ನಿಃಪ್ರಪಂಚ. Without prapañća; without deceit, pure, honest. (Bp. 29, 33).

ನಿಷ್ಪ್ರಭ nish-prabha. = ನಿಃಪ್ರಭ.

ನಿಷ್ಪ್ರಯೋಜಕ nish-prayôjaka. Useless; needless (My.). Fem. ನಿಷ್ಪ್ರಯೋಜಕಳು.

ನಿಷ್ಪ್ರಯೋಜನ nish-prayôjana. Without motives; causeless, groundless;— useless; needless; uselessness (My.).

ನಿಷ್ಪ್ರವಾಣಿ nish-pravâṇi. Fresh from the loom, *quite new and unbleached.*

ನಿಷ್ಫಲ nish-phala. = ನಿಃಫಲ. *Bearing no fruit, fruitless, barren;*— useless, unprofitable (ವೃಥೆ, etc. Mr. 462; My.). See Bp. 23, 38; 57, 15.

ನಿಷ್ಫಲೆ nish-phalĕ. *A woman in whom menstruation has ceased.*

ನಿಷ್ಯನ್ದಿ ni-syandi. Moving, blowing (used of the wind, Čpr. 4, 30).

ನಿಸ್ nis. = ನಿಃ, etc. *Out, forth, outward, out of, out from, away from; no, not, without.*

ನಿಸಂಗಿ ni-saṅgi. = ನಿಃಸಂಗಿ. — ನಿಸಂಗಿನಿರಾಳದೇವ. N. (Bp. 58, 7).

ನಿಸದ nisada. (Tbh. of ನಿಶ್ಚಯ?). Certainty, truth; certainly (ನಿಶ್ಚಯ, ಸತ್ಯ Čt. II, 11; ನಿಶ್ಚಯ, ನನ್ನಿ, ಸತ್ಯ Kk. 64; ನಿಶ್ಚಯ, ನನ್ನಿ, ನನಸು, ವಲಂ, ವೆಱಂ, ದಲ್, ಸಾಜ, ದಿಟ Šm. 34; Čpr. 2, 28; 3, 37). ನಿಸದದಿಂ (Šr. 87).

ನಿಸರ್ಗ ni-sarga. Letting go; relinquishment; evacuation, voiding excrement (ವರ್ಜನ, ವಿಮುಕ್ತ Mr. 488, one MS. ವಿಸರ್ಗ). 2, giving away, bestowing; a grant. 3, creation. 4, *the natural state, natural or peculiar character, true or natural form* (ನಿಜ್ಜಯಾಕಾರ Šmd. 32 Cm.; 38. 45; Râm. 1, 16, 28).

ನಿಸಾದಿ nisâdi. 1. Tbh. of ನಿಶಾದಿ. (Šmd. 335).

ನಿಸಾದಿ nisâdi. 2. Tbh. of ನಿಷಾದಿ. (Šmd. 335).

ನಿಸಿ nisi. To squeeze with the thumb and forefinger (My.).

ನಿಸಿ nisi. Tbh. of ನಿಶೆ. (Šmd. 357). — ನಿಸಿವಗೆಯ. -ಪಗೆಯ. The sun (ಸಪ್ತಾಶ್ವ Kk. 45; ಸೂರ್ಯ Šm. 14).

ನಿಸೂದನ ni-sûdana. = ನಿಷೂದನ. *Killing, destroying.*

ನಿಸೃಷ್ಟ ni-srishṭa. Let go, dismissed, set free; delivered; deposited; given, bestowed; allowed (ಬಿಟ್ಟದ್ದು G.).

ನಿಸೃಷ್ಟಾರ್ಥ nisrishṭa-artha. Finished, accomplished (Čpr. 8, after 92). 2, an envoy; a messenger (6, after 18; Sk.).

ನಿಸ್ತರಂಗ nis-taranga. Waveless, without waves (Čpr. 1, 138).

ನಿಸ್ತರಣ nis-taraṇa. Going out or forth, coming out (of danger); crossing over; passing or spending time.

ನಿಸ್ತರಿಸು nis-tarisu. = ನಿಸ್ತರಿಸು. To spend or pass time, to wait, to bear or endure (Abh. P. 11, after 107).

ನಿಸ್ತರುಣ nis-taruṇa. Not becoming a young man or boy (Bp. 61, 44).

ನಿಸ್ತರ್ಹಣ nis-tarhaṇa. *Crushing, destroying, slaughter.*

ನಿಸ್ತಲ nis-tala. *Not flat, round, globular.*

ನಿಸ್ತಾರಕ nis-târaka. Causing to pass over; rescuing, delivering; a saviour. (Bp. 58, 52).

ನಿಸ್ತಾರ್ತ nistârta. Tbh. of ನಿಸ್ತೀರ್ತಾರ್ಥ. (My.).

ನಿಸ್ತುಲ nis-tula. Unequalled, unrivalled (Šsv. 5, 24).

ನಿಸ್ತೂಕ nis-tûka. Without weight, light, pithless, weak; weakness (My.). ನಿಸ್ತೂಕವಾದವನು ಮಸ್ತಕವನ್ನು ಎತ್ತಲಾಱ (Prv.).

ನಿಸ್ತೇಜ nis-têja. Devoid of brilliancy or energy; dull; impotent; — want of brilliancy. — ನಿಸ್ತೇಜವ್ಮೆಟ್. -ಪೆಟ್ To become devoid of brilliancy (Abh. P. 2, 66).

ನಿಸ್ತ್ರಾಣ nis-trâṇa. = ನಿತ್ರಾಣ, ನಿತ್ರಾಣ. Want of strength, weakness.

ನಿಸ್ತ್ರಾಣಿ nis-trâṇi. = ನಿತ್ರಾಣಿ, ನಿತ್ರಾಣಿ. A weak person.

ನಿಸ್ತ್ರಿಂಶ nis-trimśa. More than thirty; more than thirty fingers in length: *a sword, a scimitar, a sacrificial knife.*

ನಿಸ್ತ್ರಿಗುಣ nis-triguṇa. Destitute of the three qualities (Bp. 61, 44).

ನಿಸ್ಪೃಹ ni-spṛiha. = ನಿಃಸ್ಪೃಹ. (My.).

ನಿಸ್ಪೃಹತೆ ni-spṛihatĕ. = ನಿಸ್ಪೃಹೆ. (Bp. 20, 27).

ನಿಸ್ಪೃಹೆ ni-spṛihĕ. Freedom from desire; absence of covetousness (My.).

ನಿಸ್ರಾವ ni-srâva. = ನಿಃಸ್ರಾವ. Flowing down or off; *the scum of boiled rice.*

ನಿಸ್ವನ ni-svana. *Noise, sound, voice.* See ಶರ; Šsv. 4, 71.

ನಿಸ್ವಾನ ni-svâna. = ನಿಸ್ವನ. *Noise, etc.*

ನಿಸ್ಸಂಶಯ nis-saṁśaya. = ನಿಃಸಂಶಯ. (My.).

ನಿಸ್ಸಂಸಾರಿ nis-saṁsâri. = ನಿಃಸಂಸಾರಿ. (Bp. 33, 17).

ನಿಸ್ಸಂಕ nis-saṅka. Tbh. of ನಿಶ್ಶಂಕ (Šmd. 335).

ನಿಸ್ಸಂಕೆ nis-saṅkĕ. Tbh. of ನಿಃಶಂಕೆ. Boldness; disrespect (ಅವಜ್ಞೆ Šmd. II; Kk. 91).

ನಿಸ್ಸಂಗ nis-saṅga. = ನಿಃಸಂಗ. (My.).

ನಿಸ್ಸಂಗತ್ವ nis-saṅgatva. = ನಿಃಸಂಗತ್ವ. (My.).

ನಿಸ್ಸಂಗಿ nis-saṅgi. = ನಿಃಸಂಗಿ. (Bp. 7, 3; 27, 42; My.).

ನಿಸ್ಸತ್ವ nis-satva. = ನಿಃಸತ್ವ. Without strength, etc., pithless, sapless; absence of power, want of energy, weakness (My.; ಏತಾನ Čb.).

ನಿಸ್ಸನ್ತತಿ nis-santati. = ನಿಸ್ಸನ್ತಾನ. (My.).

ನಿಸ್ಸನ್ತಾನ nis-santâna. = ನಿಃಸನ್ತಾನ. (Bp. 61, 38; My.).

ನಿಸ್ಸನ್ದೇಹ nis-sandêha. = ನಿಃಸನ್ದೇಹ. (My.).

ನಿಸ್ಸನ್ದೇಹಿ nis-sandêhi. = ನಿಃಸನ್ದೇಹಿ. (Bp. 51, 29; My.).

ನಿಸ್ಸರಣ nis-saraṇa. = ನಿಃಸರಣ. (My.).

ನಿಸ್ಸಹಾಯ nis-sahâya. = ನಿಃಸಹಾಯ. (Šsv. 4, after 65).

ನಿಸ್ಸಾಣ nissâṇa. = ನಿಸ್ಸಾಳ. (G.; Tĕ.; M. ನಿಷಾಣ; T. ನಿಜಾನ).

ನಿಸ್ಸಾರ nis-sâra. = ನಿಃಸಾರ. (ಲಘು Nn. 145, Mr. 528; Bp. 24, 41; 40, 80; B. 3, 36; My.).

ನಿಸ್ಸಾಳ nissâḷa. = ನಿಸ್ಸಾಣ. A kettle-drum (ಭೇರಿ Bhn. 31; Bp. 5, 29; Bh. 1, 12, 7; 8, 23, 8; J. 4, 18. 30; 7, 3; 12, 5. 12; 13, 24. 41).

ನಿಸ್ಸೀಮ nis-sîma. = ನಿಃಸೀಮ. (Bp. 24, 74; 26, 56; 61, 45; J. 27, 1).

ನಿಸ್ಸ್ವ nis-sva. = ನಿಃಸ್ವ. (My.).

ನಿಹನನ ni-hanana. *Slaying, killing.*

ನಿಹಾಕೆ ni-hâkĕ. *An iguana, or the Gangetic alligator* (= ಗೋಧಿಕೆ).

ನಿಹಿಂಸನ ni-hiṁsana. *Killing, slaughter.*

ನಿಹಿತ ni-hita. *Placed, laid, deposited;* fixed; infixed, attached; treasured up (Čpr. 2, after 59; 6, 97; Bp. 19, 4).

ನಿಹೀನ ni-hîna. Deprived of; — *low, vile, of low origin.*

ನಿಹ್ನವ ni-hnava. *Denial, abnegation;* concealment, secrecy; *deception; mistrust; doubt, suspicion;* a secret; — atonement, expiation. See ಅಪನಮ್ಬುಗೆ, ದಾಯುರುಕು.

ನಿಹ್ರಾದ ni-hrâda. *Sound, noise.*

ನಿಳಿಮ್ಪ ni-ḷimpa. = ನಿಲಿಮ್ಪ. (Čpr. 1, 84; 4, 74; Grj. 6, 6).

ನಿಳಿಮ್ಪಕಾನ್ತೆ niḷimpa-kântĕ. The wife of a god (Šsv. 3, 22).

ನಿಳ್ಕು niḷku. (= ನಿಲುಕು, etc.). To stretch one's self upwards, to rise up to one's full height, to stretch one's self (ಉಪರಿಸ್ಪರ್ಶನ Šmd. Dh.; Čpr. 7, 127; Šsv. 1, 7). ಕಪಿಧ್ವಜಂ ನಿಳ್ಕಿ, ನಿವರ್ತಿಸುತ್ತುಮಿರೆ (Šmd. 280). ನಲಿನಿಯಂ ನೆಟ್ ನೆಗೆವ ನಿಡುಮಿಗ್ಗಿಲಿಂ ನಿಳ್ಕಿ ನೋಡಿ (Rsv. 2, after 8). ತಡಿಯೊಳ್ ನಿಸ್ದು ನಿಳ್ಕಿ ನೀಡಿದ ಮದಗಜದ ಕರದ ಮಾರ್ಪೊಡಿಪು

(6, after 24). **2,** to come or be within reach, to be reachable (Čpr. 7, 102; Šsv. 2, 80). *Cf.* ನಿಲ್.

ನಿಲಿ nili. = ನೆಟಿಲ್. — ನಿಲಿ ನಿಟಿಲ್. rep. The sound of breaking. ಹೊಡಿದನ್ ಅಹಿತರಿದೆ ನಿಲಿ ನಿಟಿಲೆನಲು ಧನುವ (Râm. 3, 6, 6).

ನೀ nî. = ನಿನ್, etc. Thou (My.). Plural ನೀವು. See its declension s. ನಿನ್. ನೀ ಕಪಟಿಯಾದರೆ ನಿನಗೆಲ್ಲರು ಕಪಟಿಗಳೇ! (Prv.).

ನೀ nî. = ನಿೞ, etc.

ನೀಂ nîṁ. 1. = ನೀ, etc. Thou (Šmd. 262. 263). ಕಳೆ ನೀಂ! (45). ನೀಂ ಪೆತು (109). ನೀಂ ಕಾಮಂ (110).

ನೀಂ nîṁ. 2. = ನಿಮ್, etc. You (Šmd. 262. 263; Bh. 2, 13, 36). Also ನೀಂಗಳ್ in one Šmd. MS.

ನೀಕರಿಸು nî-karisu. To disrespect, to contemn (Bp. 49, 8; Râm. 6, 53, 34; Tê. ನ್ಯಕ್ಕಾರ, disrespect, contempt).

ನೀಕಾಶ nî-kâša. = ನಿಕಾಶ. *Like, resembling.*

ನೀಗಿಸು nîgisu. To cause to quit, etc. (My.).

ನೀಗು nîgu. To quit, to leave, to abandon, to give up, to get rid of; to lose; to remove, to take away, to do away; to squander (ತ್ಯಜನ Šmd. Dh.; My.; Tê.; T. ನೀಕ್ಕು, ನೀಂಗು, ನಿಯದು; M. ನೀಕ್ಕು). (**2,** to be got rid of, to go off or away, to vanish; Tê. ನಿಗ್ಗು; T. ನೀಂಗು; M. ನೀಙ್ಙು). ಸಂಕಟಗಳನ್ನು ನೀಗುವದು (B. 3, 70). ಕಷ್ಟವನ್ನು ನೀಗುವದು (5, 104. 202. 205). ಚಳಿಯನ್ನು ನೀಗು (5, 296). ಅಸು ನೀಗಿತು ಅಸುರನ ತನುವ (Bh. 1, 10, 38). ಕರ್ಕೋಟಕನ ದೆಸೆಯಿನ್ದ ಅಸುವ ನೀಗದೆ, ಸಾರಿದನು ಋತುಪರ್ಣಭೂಪತಿಯ (Râm. 3, 2, 14). ಅಭಿಮಾನವಂ ನೀಗು (Bp. 21, 47). ಭಾಷೆಯಂ ನೀಗು (39, 17). ನೀಗಿದರೂ (though I want to get rid of it) ಬಡತನ ಬಿಡದು. — ನೀಗುವವನಿಗೆ ಭಾಗ ಸಿಕ್ಕಿದರೂ ಭೋಗಕ್ಕೆ ಬಾರದು (Prvs.). See Bp. 1, 36; 31, 21; 34, 10; 36, 19; 40, 8. 48; 42, 13; 54, 61; 60, 25; Č. Bp. 32, 44; Bh. 8, 22, 44; Psv. 14, 28; V. 14, 61; J. 13, 40; 14, 17; 22, 41. — ನೀಗಾಡು. -ಆಡು. To renounce. ಒಡಲ ಹೋಗಾಡಿದರು (though—) ನುಡಿ ನೀಗಾಡಿದರು (though—) ನಡೆಯೊಳು ಎಚ್ಚರಿನು ಬಿಡದಿದಲು (though—) ಪರವಶ, ದೃಢಮನವಿಡಿದು (though—, Sp.).

ನೀಚ nîca. *Low, not high, short, small;* deep, lowered, bass (in music); situated below; *low, base, vile, mean.* ನೀಚನ ಸಂಗವೂ ಈಚಲ ನೀರೂ ನಾಚಿಗೆ ಕೆಡಿಸುವದು. — ನೀಚರ ಸಭೆಗೆ ಹೋದರೆ ನಾಚಿಕೆಗೇಡಾಗುವದು. — ನೀಚರ ಸಂಗ ಅಭಿಮಾನಭಂಗ. — ನೀಚನಿಗೆ ಊಹುವಸ್ತು ಕೊಟ್ಟರೂ ನಾಚಿಕೆಗೇಡಿತನ ಹೋದೀತೇ? (Prvs.). 2, the lowest point of a planet, the seventh house from the highest point. — ನೀಚಾಟ. -ಆಟ. Base conduct (My.). See Prv. s. ಪೇಚಾಟ.

ನೀಚಕಿ nîcaki. The top; *the head of an ox.*

ನೀಚತನ nîcatana. Lowness, meanness, vileness (My.; B. 4, 89; ನಿಕರ್ಷ G.).

ನೀಚಾತ್ಮ nîca-âtma. A mean person (B. 5, 73).

ನೀಚೈರ್ಗತ nîcais-gata. (Šmd. 99). Gone downwards.

ನೀಚೈಸ್ nîcais. (Šmd. 99). Low, down, downwards, deep; — *short, small, little, dwarfish.*

ನೀಟ nîṭa. 1. = ನೀಳ. Length (ನೀಳ Bhn. 31; My.; T. ನೀಟ್ಟ; M. ನೀಟ್ಟ, ನೀಡು; see ನಿಡು). — ನೀಟಸಾಲು. A long line or row (My.).

ನೀಟ nîṭa. 2. = ನೀಟು No. 2. (My.).

ನೀಟು nîṭu. = ನೀಟ 2. Straightness: the state of not being curved, that of standing upright; the rêpha (ೃ, ವಿಸರ್ಜ Nn. 62, o. r. ಗೀಟು). **2,** properness; neatness, elegance, beauty, tidiness (My.; Tê. ನೀಟು, ನೇಟು; T. ನೇತ್ತಿ, ನೇಙ್ಙ; M. ನೇಙ್ಙ; Mhr. ನೀಟ; *cf.* ನಿಜಿತ, ನೆಟ್ಟ, ನೇರ್ 3). ಆಡಿನ ಕೋಡುಗಳು ಮೇಲುಗಡೆಗೆ ನೀಟಾಗಿರುತ್ತವೆ (B. 5, 23). ನೀಟಾಗಿ ನಡೆದರೆ ಕಾಟ ಬಾರದು. — ಊಟದಲ್ಲಿ ನೀಟಾಗಿರ ಬೇಕು (Prvs.). — ನೀಟುದಾರಿ. A nice road (My.).

ನೀಟುಗಾತಿ nîṭu-gâti. A tidy woman (My.).

ನೀಟುಗಾಱ nîṭu-gâṟa. A tidy man (My.).

ನೀಡ nîḍa. = ನೀಡು, ನೀಳ. A resting place; *a bird's nest.*

ನೀಡಜ nîḍa-ja. = ನೀಳಜ. Nest-born: *a bird.*

ನೀಡಱ್ nîḍaṟ. Whirling; giddiness; swoon (Abh. P. 14, after 34; *cf.* ನಿಟ್ಟನೆ). ನೀಡಱನ್ ಎಚ್ಚತ್ತು (Abh. P. 16, 15).

ನೀಡಿಸು nîḍisu. To cause to put (Bp. 57, 35); to cause to give (My.); etc.

ನೀಡು nîḍu. 1. = ನೀೞ್. To extend, to stretch out, as the fingers, the arms, the tongue, etc. (ಪ್ರಸಾರಣ Šmd. Dh.; My.; T., M. ನೀಟ್ಟು; *cf.* ನಿಗುರ್). **2,** to hold out, to offer, to present, to give; to serve out, to set (before one, as rice); to put (My.; T., M. ನೀಟ್ಟು). ನೀಡಿದ ಬೆರಳ ತಳಂ (ಪಾಣಿ Hlâ.). ನೀಡದವನಲ್ಲಿ ಹೋಗಿ ಬೇಡಿ ಕೊಳ್ಳುವವ ಮೂಢನು. — ಚಾಪೆಯಿರುವಷ್ಟಕ್ಕೆ ಕಾಲು ನೀಡ ಬೇಕು (Prvs.). See Čpr. 5, 63. 96; Bp. 1, 46. 51; 5, 41; 8, 15; 10, 2; 11, 11; 12, 35; 14, 32; 21, 32; 24, 82; 26, 62. 67; 27, 40; 33 sum.; 33, 11; 40, 42; 43, 84; 47, 29. 39; 48, 24; 50, 4. 36; 57, 34; 59, 2. 20; 60, 23. 28; Râm. 5, 8, 57; Rsv. 2, 48; 5, 21. 39; 6, after 24; J. 11, 1; 15, 20; 16, 18. 41; 29, 33. 43; Si. 288; B. 5, 41.

ನೀಡು nîḍu. 2. = (ನಿಡು, ನೀಳ), ನೀಱ್. Extension, length (ದೀರ್ಘತೆ Čt. I, 38; M., T.); delay (Grj. 6, 34; 8, 29; Ssv. 2, 64. 122). **2,** further (Šm. 24); abundantly, much, etc. (ಅಧಿಕಾರ್ಥಂ Šmd. 291; ಕರಂ, ನೆಱ, etc., ಪಿರಿದು Kk. 49; Rsv. 6, 2; 13, after 86). **3,** presenting. — ನೀಡಡಿ. -ಅಡಿ. A long foot: a stretched leg (Grj. 7, 57; 8, 24). — ನೀಡಡಿಗೊಳ್. -ಕೊಳ್. To stretch a leg (Ssv. 3, 52; 4, after 19 & 24). — ನೀಡುಂ. -ಉಂ. = ನೀಡು No. 2. (Šmd. 391; ವಿಶೇಷವಾಗಿ 172 Cm.; Čpr. 3, after 102; 8, 43. 49). — ನೀಡು ಕರಿಸು. = ನೀಟ್ಟಿರಿಸು, q. v. (Šmd. 28). — ನೀಡು ಮಾಡು. To make long: to raise (J. 12, 4). — ನೀಡು ಮೊನೆ. Long, persevering fighting (Bh. 3, 10, 52). — ನೀಡುಮ್ಮಾಡು. -ಂ-ಮಾಡು. Idleness, sloth (ಆಲಸ್ಯಂ Čt. I, 51). 2, to delay.

ನೀಡು nîḍu. Tbh. of ನೀಡ. (ಕರಕ, ಗೂಡು Nn. 50).

ನೀಡುಕಾಱ nîḍu-kâṟa. A man who presents (arrows to a warrior, Bh. 8, 26, 11).

ನೀಡೋದ್ಭವ nîḍa-udbhava. *A bird.*

ನೀಣ್ಟಿಸು nîṇṭisu. = ನಿಟ್ಟಿಸು. (J. 4, 9).

ನೀಣ್ಟು nîṇṭu. To throw away (ಬಿಸುಡು Čt. I, 42, o. r. ವೀಣ್ಟು).

ನೀತ nîta. Led, conducted, guided; carried; brought; well-behaved. See ಆ-, ಪ್ರಣೀತ, ವಿ-.

ನೀತಿ nîti. Leading, guiding, guidance;—conduct, propriety;—right or moral or prudent behaviour;—political wisdom or science, political economy, policy, statesmanship;—moral philosophy, ethics, precepts for prudent and moral behaviour; prudence;—acquirement, acquisition. See Nn. s. ನಿಯತ. ಸುಮ್ಮನಿಹುದಿದು ನೀತಿಯೇ ನಿನಗೆ? (Bp. 61, 18). ನೀತಿಗಳ್ (55, 6). ನೀತಿಯುಳ್ಳವನ ಮನೆದೀಪದಲ್ಲಿ ಜಾತಿಭೇದವೇನು?— ನೀತಿಯುಳ್ಳವನ ಮಾತು ಕೋತಿಯಾದೀತೇ?— ನೀತಿಯುಳ್ಳವನು ಖ್ಯಾತಿ ಪಟ್ಟಾನು.—ಜಾತಿ ಕೆಟ್ಟರೂ ನೀತಿ ಬಿಡ ಬಾರದು (Prvs.). See Prvs. s. ಪ್ರೀತಿ, ಮತ. — ನೀತಿ ಗೀತಿ. reit. (Bh. 1, 5, 15).

ನೀತಿಕೆ nîtikĕ. N. of a vritta (Čh.).

ನೀತಿಗ nîtiga. A well-conducted, virtuous man (ಸಚ್ಚರಿತ Čt. I, 89).

ನೀತಿಪರ nîti-para. Engrossed in or intent upon political wisdom, etc. (Šmd. 138).

ನೀತಿಮಾರ್ಗ nîti-mârga. The path of morality; moral conduct (My.).

ನೀತಿಯುತೆ nîti-yutĕ. A woman possessed of proper or prudent behaviour (Čh. vs. 127. 221).

ನೀತಿವನ್ತ nîti-vanta. A man who knows the rules of moral or prudent behaviour, a moral, just or prudent man (My.). ಮಾತು ಮಾತಿಗೆ ತಪ್ಪುವವನು ನೀತಿವನ್ತನಲ್ಲ (Prv.).

ನೀತಿವಿದ nîti-vida. A man versed in political science, etc. (J. 11, 32).

ನೀತಿವಿಹೀನ nîti-vihîna. Devoid of propriety, etc. (Bp. 45, 21).

ನೀತಿವೇದಿ nîti-vêdi. Knowing proper behaviour, etc.; *knowing policy, a politician.*

ನೀತಿಶಾಸ್ತ್ರ nîti-śâstra. The science of ethics or politics; any work on political economy, ethics or morals (My.).

ನೀಧ್ರ nîdhra. = ನೀವ್ರ. *The edge of a thatch, the edge of a roof.*

ನೀನ್ nîn. (Šmd. 59). = ನಿನ್, etc. Thou. The form of ನೀಂ 1 which appears before vowels. ನೀನ್ ಆರ ಮಗಳ್? (153). See Šmd. 109. 143. 155. 177. 178. 262. 263. 292. 298. 299; J. 31, 33.

ನೀನು nînu. = ನೀನ್, etc. Thou. The present form of ನೀಂ 1 (C.); see its declension s. ನಿನ್. Its plural is ನೀವು. ನೀನು ನಾನು ಎಮ್ಬ ಭೇದ ಜ್ಞಾನಿಗುಣ್ಟೇ?—ನೀನೇ ಸೆಟ್ಟಿ ಅನ್ದರೆ ಮಾನದ ಅಣ್ಡಿನಲ್ಲಿ (the lower bottom part of a bamboo mâna) ಅಳದ ಹಾಗೆ (Prvs.).

ನೀಪ nîpa. Situated low, deep. 2, *the Kadamba tree, Nauclea cadamba* Roxb.

ನೀಮ್ nîm. = ನಿಮ್, etc. You. The form of ನೀಂ 2 before vowels. ನೀಮಿರೆ (Šmd. 263). ಈವೊಡೆ ನೀಮ್ ಬಳ್ಳಿದಿರ್ (298). ನೀಮ್ ಇರಲ್ ಪಟ್ಟಿರ್ (299).

ನೀರ್ nîr. = (ಈರ), ನೀರು, ನೀರ್. (Said to be Tbh. of ನೀರ Šmd. 365; Čt. II, 81). Water (ಅಪ, ತೋಯ, ಘನರಸ, ಪಯಸ್, ಪುಷ್ಕರ, ಮೇಘಪುಷ್ಪ, ಕ, ಪಾನೀಯ, ಸಲಿಲ, ಉದಕ, ವಾರಿ, ವಾರ್, ಶಮ್ಬರ, ಅರ್ಣಸ್, ಪಾಥಸ್, ಕುಶ, ಜಲ, ವನ, ಕ್ಷೀರ, ಅಮ್ಬಸ್, ಅಮ್ಬು, ನೀರ, ಭುವನ, ಅಮೃತ, ಜೀವನೀಯ, ದಕ Hlâ.; ಕುಶ, ಉದಕ, etc. Mr. 404; ಕೃಪೀಟ 484; ಜಲ Nn. 26; ಉದಕ 43; ಕಾಣ್ಡ 116; see Si. 81; Tĕ. ನೀರು; Tu., T. ನೀರ್; M. ನೀರ್, ನೀಟು); the colour or lustre of a gem (My.). Declension: ನೀರ, ನೀರಂ, ನೀರ್ಗೆ, ನೀರಲ್ಲಿ, ನೀರಿನ್ದ, ನೀರಿಂ; ನೀರ್ಗಳ್ (Rśv. 13, 88). ನೀರೊಳ್ ಮುಟಿುಂಗಿದಂ (Šmd. I). ಮರಕ್ಕೆ ಎಟಿ ನೀರಂ! (115). ನೀರಲ್ಲಿ ಕೀಲಾಲ ಎಮ್ಬುದು (Hlâ.). ನೀರಿಲ್ಲದ ಭೂಮಿ (ಮರು, ಧನ್ವ); ನೀರ ದೋಣಿ (ಅವಗಾಹ, ಜಲದ್ರೋಣಿ); ತೊಟಿಯ ನೀರಿಂ ಬೆಳವ ಭೂಮಿ (ನದೀಮಾತೃಕ); ಮುಟಿಯ ನೀರಿಂ ಬೆಳವ ಭೂಮಿ (ದೇವಮಾತೃಕ); ನೆಲದೊಳಗುಳ್ಳ ಪ್ರಾಣಿಗಳೆಲ್ಲಂ ನೀರೊಳಗೊಳವು (Hlâ.). ನೀರ ಸುಟಿ (ಆವರ್ತ); ನೀರ ಹೆಚ್ಚುಗೆ (ಪೂರ); ನೀರೊಳಗಣ ಹನ್ದಿ (ಶಂಕು); ನೀರೊಳಗಣ ಬೆಕ್ಕು (ಉದ್ರ); ನೀರೊಳಗಣ ಚಿಪ್ಪು (ಜಲಶುಕ್ತಿ); ಬಾವಿಯ ನೀರನೆತ್ತುವ ಜನ್ತ್ರವಿಶೇಷವು (ಸಲಿಲೋದ್ವಾಹನ, etc.); ನೀರ ಬೊಬ್ಬುಳಿಕೆ (ಬುದ್ಬುದ); ನಾವೆಯೊಳಗಣ ನೀರ ಚಲ್ಲುವ ಮರಗೆ (ಸೇಕಪಾತ್ರ); ನೀರ ಹರಿಯಲೀಯದೆ ಕಟ್ಟಿದ ಕಟ್ಟೆ (ಆಧಾರ); ನೀರ ನಡುವೆ ಕಟ್ಟಿದ ಕಟ್ಟೆ (ಸೇತು); ನಾಲ್ಕು ಭಾಗದೊಳಗೊನ್ದು ಭಾಗ ನೀರ ಬೆರಸಿದ ಮಜ್ಜಿಗೆ (ತಕ್ರ Nr.). ನೀರ ತೆರೆ (ಧಾರ, ತರಂಗ Nn. 12). ನೀರ ಹರಹು (ಅರ, ಧಾರೆ, ಪ್ರವಾಹ, etc. Mr. 415). ನೀರ ಮುರುಹು (ಚಕ್ರಾದಿ 416). ನೀರ ಹರುಕುಣಿ (ಯಾನ, etc. 422). ನೀರು ನೆಟಿಲಿಲ್ಲದ ಠಾವು (ಮರು Nr.). ನೀರ್ ಪೊಸ ತಪ್ಪ ಮೌಕ್ತಿಕಂಗಳ ತೊಡವು (Abh. P. 3, 72). ಹಿರಿದು ಪಾಪವ ಮಾಡಿ, ಹರಿವ ನೀರೊಳು ಮುಟಿುಗೆ ಕರಗೊಡೇ ಪಾಪ? (Sp.). ನೀರ ಬೊಬ್ಬುಳಿ ನೆಚ್ಚಿ, ಸಾರಿ, ಕೆಡದಿರು, ಮರುಳೆ! (Sp.). ನೀರಂ (Bp. 42, 4; 57, 80; 60, 8); ನೀರಲಿ (28, 65). See Čpr. 4, 15; 5, 63; Rśv. 8, 124; 13, after 95; J. 12, 8; 15, 2; 28, 17. 55; ಎಳ-, ಕಣ್-, ಕುಡಿ-, ತಿಳಿ-, ನಡು-, ವನ್-, ಪೊಯ್-, ಬಿಸು-, ಬೆನ್-, ಮುನ್-, ಸೊಕ್ಕು-. — ನೀರಡಕಿ. -ಅಡಕಿ. A woman who brings water to the house (ಪೋಟಿ Mr. 304, o. r. ನೀರಡಿಕಿ). — ನೀರಡಿಕೆ. -ಅಡಿಕೆ. = ನೀರಟ್ಕೆ (Šmd. 28). Thirst (ತೃಷೆ Nr.; ತರ್ಷ, ಪಿಪಾಸ Mr. 235; ಉದನ್ಯೆ, etc. Si. 317; ತೃಷ್ಣೆ 420; J. 28, 35; My.; B. 1, 18; 5, 133). — ನೀರಡಿಸು. -ಅಡಿಸು. To be thirsty (Abh. P. 7, 103; J. 26, 76; My.; B. 2, 13). ನೀರಡಿಸಿದಾತ (ತೃಷಿತ, ತರ್ಷಿತ, ಪಿಪಾಸು, ಪಿಪಾಸಿತ Hlâ.). ನೀರಡಿಸಿದಂ (ತರ್ಷಿತ, ಪಿಪಾಸಿತ Mr. 235). — ನೀರಣುಗ. -ಅಣುಗ. The moon (ಚನ್ದ್ರ Šm. 15. 16). — ನೀರ ತೇರ್. A cloud (ಮೇಘ Šs.; Rśv. 13, after 77). — ನೀರ ನಾಯಿ. = ನೀರು-. A water-dog, (an otter? My.; B. 4, 132; *cf.* ನೀರ ಬೆಕ್ಕು). — ನೀರ ಪೊಟ್ಟಣ. A black cloud, a cloud—of the rainy season (ಕಾರ ಮುಗಿಲ್ Čt. I, 87). — ನೀರ ಬಟ್ಟೆ. A water-passage (ಕೋಡಿ Bhn. 4). — ನೀರ ಬೆಕ್ಕು. = ನೀರು-. (My.; ಉದ್ರ G.). — ನೀರ ಬೆತ್ತ. The tree Barringtonia acutangula (ಹಿಜ್ಜಲ G., sic!). — ನೀರ ಮಡಿ. Cloth that is simply washed in water without the addition of soap, etc. (My.). ನೀರ ಮಡಿ ತೊಳೆಯುವದು (B. 5, 287). — ನೀರ ಮಾಡು. To liquefy (My.; B. 4, 97). — ನೀರ ಹಿಪ್ಪಲಿ. The plant Jussiaea repens Lin. (ತೋಯಪಿಪ್ಪಲಿ, ಶಾರದಿ G.). — ನೀರಳೇ ಹಾವು. = ನೀರುಳ್ಳಿ-, ನೀರೊಳ್ಳೆ-. A kind of snake (ಅಲಗರ್ದ, ಜಲವ್ಯಾಲ Si. 77). — ನೀರಟ್ಕಿ. -ಅಟ್ಕಿ. = ನೀರಡಿಕೆ (Šmd. 28). (ಉದನ್ಯೆ, etc. Hlâ.; Abh. P. 1, 103). — ನೀರಾಗು. -ಆಗು. To become liquid, to melt, as metals, sugar, salt, etc. (My.; B. 4, 97). 2, the bath after menstruation to be taken. ಅಕೆಗೆ ನೀರಾಗ ಬೇಕು (My.). — ನೀರಾಟ. -ಆಟ. Sporting or gamboling in water (ಜಲಕ್ರೀಡೆ Šs.; Rśv. 2, after 8; Šśv. 1, 7). ಆನೆ ನೀರಾಟದಲಿ ಮೀನ ಕಣ್ಣು, ಅಂಜುವದೆ? (Sp.). ನೀರಾಟಕ್ಕೆ ಹೋಗಿ, ಹೇಟಾಟ ಕಳಕೊಣ್ಡ (Prv.). — ನೀರಾನೆ. -ಆನೆ. A kind of aquatic animal (J. 6, 7; Č. Bp. 2, 3; Si. 88). — ನೀರಾಮೆ. -ಆಮೆ. A turtle. — ನೀರಾಮೆಬಳ್ಳಿ. A species of medicinal plant (ವಾರ್ಷಿಕ, ತ್ರಾಯಮಾಣೆ, ತ್ರಾಯನ್ತಿ, ಬಲಭದ್ರಿಕೆ Si. 159). — ನಿರಾಮ್ಬು. -ಅಮ್ಬು. = ನೀರೆಸರು. (My.). — ನೀರಾರಮ್ಬ. Wet cultivation

(My.; Tĕ.). — ನೀರಾವರಿ. -ಆವರಿ. ನಿರಾವರಿಕೆ. -ಆವರಿಕೆ. Abundance of water: soil fit for wet cultivation (My.). ನೀರಾವರೀ ಬೆಳೆ (Si. 119); ನೀರಾವರೀ ಭೂಮಿ (138. 300). — ನೀರಿಡು. -ಇಡು. = ನೀರೆಱೆ. (Śēv. 2, 72). — ನೀರಿಪ್ಪೆ. -ಇಪ್ಪೆ. = ನೀರು ಹಿಪ್ಪೆ. A kind of Bassia which grows in watery places (ಮಧೂಲಕ Nr.). — ನೀರಿೞಿ. -ಇೞಿ. To descend into water: to bathe (after mourning). ನೀರಿೞಿದವನು (ಅಪಸ್ನಾತ, ಮೃತಸ್ನಾತ Nr.). 2, water to grow less (My.). — ನೀರಿೞಿಹ. -ಇೞಿಹ. Bathing (after mourning, ಅಪಸ್ನಾನ, ಮೃತಸ್ನಾನ Hlâ.). — ನೀರುಡ. -ಉಡ. = ನೀರುಡು. (Si. 89). — ನೀರುಡು. -ಉಡು. The aquatic iguana (ನಿಹಾಕೆ, ಗೋಧಿಕೆ Nr.; Č. Bp. 2, 3). — ನೀರುಣ್. -ಉಣ್. To drink water (used of beasts, Čpr. 2, 22; Śēv. 2, 55). — ನೀರುಪ್ಪು. -ಉಪ್ಪು. Salt water. ನೀರುಪ್ಪಿನಲಿ ಕಲಸಿದವು (ಎಲೆ, ಕಾಯಿ, etc., ಲವಣೋದಕ Mr. 216). — ನೀರುಪ್ಪಿಗಿಡ. -ಉಪ್ಪಿ-. = ಗೊಳಗೊಳಿಕೆಗಿಡ. Barleria longiflora Lin. (St. & Pl.). — ನೀರುಳ್ಳಿ. 1. -ಉಳ್ಳಿ. The onion, Allium cepa Lin. (ಲತಾರ್ಕ, ದುದ್ರುಮ, ಹರಿತವರ್ಣವಾದ ಉಳ್ಳಿ Nr.; Si. 159; My.). *Cf.* ಈರುಳ್ಳಿ. ನೀರುಳ್ಳಿ ನೀರಲ್ಲಿ ತೊಳದರೆ ನಾಱಿಕೋದು ತಪ್ಪೀತೇ? — ನೀರುಳ್ಳಿಯವನ ಸಂಗಡ ಹೋರಾಟಕ್ಕೆ ಹೋದರೆ ಮೋೞಿಯೆಲ್ಲ ನಾಱಿದೇ? (Prvs.). — ನೀರುಳ್ಳಿ. 2. = ನೀರಳೆ, ನೀರೊಳ್ಳೆ. ನೀರುಳ್ಳೀ ಹಾವು (= ನೀರಳೇ ಹಾವು My., occasionally). — ನೀರೂಣ್ಬ. -ಊಣ್ಬ. Drinking of water (said of plants, Čpr. 1, 94). — ನೀರೂೞಿಗ. -ಊೞಿಗ. The service of bringing water (My.). — ನೀರೆಱೆ. -ಎಱೆ. To pour water. ಮರಕ್ಕೆ ನೀರೆಱೆವ ಹರಿಕಣಿ (ಆಲವಾಲ Hlâ.). (ಕೂಸಿಗೆ) ಹೆಚ್ಚು ನೀರೆಱೆದು, ಇಟ್ಟು ತೊಟ್ಟಿಲೊಳ್ (Prll. 3, 26). ಎಲ್ಲರ ಬಾಱಿಗ್ಗೆ ನೀರನೆಱೆದು (*i. e.* ಅದನ್ನು ಮುಱುಗಿಸಿ or ಕೆಡಿಸಿ), ಆರುಂ ಕಾಣದೇ (*i. e.* ಕದ್ದು ಕೊಣ್ಡೀ) ಭಕ್ಷಿಪಾ ಗಣಿಕಂ ಹೆಗ್ಗಣಕಂ ಸಮಂ (Śâ. 94). ನೀರೆಱೆವಂ (ನೀರ್ಕುಟಿಗ Kk. 37). ಉತ್ತಮರುಗಳ ಒಕ್ಕಲಿಗೆ ನೀರೆಱೆವಂ (Abhâ. 2, 52). See Čpr. 1, 95; J. 7, 29; 15, 5. — ನೀರೆಸರು. -ಎಸರು. A kind of plain pepper-water (without the addition of pulse, My.). — ನೀರೇಱು. -ಏಱು. Water to rise (Čpr. 7, 127); to rejoice (7, 2. 127). — ನೀರೊಟ್ಟಿಲ್. -ಒಟ್ಟಿಲ್. The ocean. — ನೀರೊಟ್ಟಿಲಾಣ್ಮ. Lord of the ocean: Neptune (ವರುಣ Kk. 15, o. r. ಸೀರೊಟ್ಟಿಲಾಮ್ಬು). — ನೀರೊತ್ತು. -ಒತ್ತು. Tide (ವೇಲೆ, ವಾರಿವೃದ್ಧಿ Hlâ.). — ನೀರೊಳ್ಳೆ. = ನೀರುಳ್ಳಿ 2. A harmless water-snake (My.). — ನೀರೋಟ. -ಓಟ. Stream, current (My.). 2, the condition of a place being so as to let water run off (My.). — ನೀರೋಡು. -ಓಡು. Water to run off or dry up (Čpr. 4, 85).

ನೀರ nîra. *Water* (ನೀರ್ Šmd. 365; Čt. II, 81).

ನೀರಜ nîra-ja. 1. The garden plant Costus speciosus Sm. (ಕೋಷ್ಠ Mr. 143). 2, a lotus (Čpr. 1, 79. 81). ನೀರಜದ ಕೈರವದ ಬಳ್ಳಿ (ಬಿಸಿನಿ Mr. 420). 3, a pearl.

ನೀರಜ nî-raja. 2. = ನಿರಜ. Free from passion or impurity; free from dust (Abh. P. 3, 110); not menstruating.

ನೀರಜಮಿತ್ರ nîraja-mitra. = ನೀರಜಸಖ. (Abh. P. 3, 110).

ನೀರಜಶರ nîraja-śara. Kâma (J. 16, 10).

ನೀರಜಸಖ nîraja-sakha. Lotus-friend: the sun. (My.).

ನೀರಜೆ nîrajĕ. = ನಿರಜೆ. A woman free from impurity, etc.

ನೀರದ nîra-da. 1. Water-giving: a cloud. (Čpr. 4, 41; Rśv. 13, 19).

ನೀರದ nî-rada. 2. Toothless. (Rśv. 8, 116).

ನೀರದಮಾರ್ಗ nîrada-mârga. The sky (Čpr. 8, 39).

ನೀರದರವ nîrada-rava. (ಕಿಱುಕುಸಾಲೆ, etc. Mr. 142; *cf.* ಮೇಘನಿನದ).

ನೀರದಾಧ್ವ nîrada-adhva. The sky (Č. Bp. 47, 15).

ನೀರಧರ nîra-dhara. A cloud (Čpr. 4, 40; Bp. 61, 85).

ನೀರಧಿ nîra-dhi. The ocean. (Bp. 5, 68).

ನೀರನ್ಧ್ರ nî-randhra. Having no openings, close, uninterrupted; coarse, thick. (My.).

ನೀರರುಹ nîra-ruha. A lotus. (Čpr. 8, 9).

ನೀರಸ nî-rasa. = ನಿರಸ. Without juice, sapless, withered; powerless, unsavoury, insipid; weak. See Čpr. 7, 67; Čh. v. 40; Kâvy. II, 1, A, 12, 20-28; Bp. 1, 18; J. 16, 10.

ನೀರಸನಿ nî-rasani. (ಭಾಳವರ್ಣ, ಕುಟನ್ನಟ, ಲವಂಗ Mr. 142).

ನೀರಾಗ nî-râga. = ನಿರಾಗ. (Čpr. 6, 11).

ನೀರಾಗಿ nî-râgi. A person free from passion, anger, or envy (Bh. 2, 13, 36).

ನೀರಾಜನ nî-râjana. = ನೀರಾಜನೆ No. 1. (Čpr. 8, after 24; Bp. 47, 16; V. 9, after 21; J. 7, 17; 15, 24).

ನೀರಾಜನೆ nî-râjanĕ. Waving lights before an idol, a king, etc. as an act of adoration; the lamp used for it. 2, lustration of arms, a military and religious ceremony held by kings or generals on the 19th of Âśvina before taking the field. See ಲೋಹಾಭಿಸಾರ.

ನೀರಾಜಿತ nî-râjita. Illuminated (Čpr. 6, 43).

ನೀರಾಜಿಸು nî-râjisu. = ನಿರಾಜಿಸು, q. v. (V. 9, after 21).

ನೀರಾಂಜನ nî-rânjana. = ನೀಲಾಂಜನ. The lamp lighted before an idol (My.).

ನೀರು **nîru.** = ನೀರ್, etc. (C.). ಕಣ್ಣ ನೀರು (ಅಶ್ರು, etc.); ಹೞುಗಲಿಕ್ಕುವ ನೀರು (ನಾವ್ಯ); ಅಗರ್ತೆಯ ನೀರು (ದ್ರಾಗ್ಭೃತಕ Hlâ.). ನೀರುಗಳು (Si. 83). ನೀರಿನ (81. 83). ನೀರಿಗೆ (C.), ನೀರಿಂಗೆ Mr. 40, 4). ಒಕ್ಕಲಿಲ್ಲದ ಊರು ಕೊೞೆತು ನಾಱುವ ನೀರು (Dp. 54). ಮೀನು ಬಲ್ಲುದೆ ನೀರು ಹವುಳು ಸೋದೆಮ್ಬುದನು? (76). ನೀರ ಕಡೆಗೆ ನಾಟದ ಮರ ಚಿಗುರದೇ ಬಿಟ್ಟೀತೇ? — ನೀರಲ್ಲಿ ನೋಡಿದವನ್ನ ಊರಲ್ಲಿಡ ಬಾರದು, ಎಣ್ಣೆಲಿ ನೋಡಿದವನ್ನ ಕಣ್ಣಲಿ ನೋಡ ಬಾರದು (a proverb resting on superstition). — ನೀರಲ್ಲಿ ಬರದ ಬರಹಾನ ಹಾಗೆ. — ನೀರಾದರೂ ನಾಱಿ ಬಾರದು. — ನೀರಿನ ಒಳಗಣ ಮುಳ್ಳಿನ ಹಾಗೆ. — ನೀರಿನ ಮೇಲಣ ಗುಳ್ಳೇ ಹಾಗೆ. — ನೀರಿನಿನ್ದ ಪಾಪ ಹೋದರೆ ನೀೞೆಯಿನ್ದ ಪಾಪ ಹೋಗದೇ? — ನೀರಿನೊಳಗಣ ಕಪ್ಪೆ ಬಯಿಲ್ಗೆ ಹಾಕಿದ ಹಾಗೆ. — ನೀರಿಲ್ಲದ ತಾವು ಊರು ಕಟ್ಟಿದ ಹಾಗೆ. — ನೀರು ಇದ್ದರೆ ಊರು, ನಾರಿ ಇದ್ದರೆ ಮನೆ. — ನೀರು ಎಲ್ಲಾ ಒನ್ದೇ, ಬಡಿದ ಕೋಲು ಮಾತ್ರ ಬೇಱೆ. — ನೀರು ಹಳ್ಳಕ್ಕೆ ಹೋದೀತೇ ಹೊರ್ತು ದಿನ್ನೆಗೆ ಹೋದೀತೇ? — ನೀರಾದರೂ ಮಜ್ಜಿಗೆ, ಮರುಳಾದರೂ ತಾಯಿ. — ನೀರಿನದು ನೀರಿಗೆ ಹೋಯಿತು, ಹಾಲಿನದು ಹಾಲಿಗೆ ಹೋಯಿತು. — ನೀರು ಹೊಱುವ ಬಡ್ಡಿಗೆ ಊರ ಪಾರುಪತ್ಯವು ಯಾಕೆ? — ನೀರೊಳಗಣ ಕಪ್ಪೆ ನೀರು ಕುಡಿಯದೆ ಬಿಟ್ಟೀತೇ? — ನೀರೊಳಗೆ ಮೋೞೆ ನೋಡಿ, ಮರನೇಱಿದ ಹಾಗೆ. — ನೀರು ಸೇದಿದ ಹಾಗೆ ಬರುತ್ತದೆ, ಮಾತು ಆಡಿದ ಹಾಗೆ ಬರುತ್ತದೆ. — ನೀರೊಳಗೆ ಹೋಮ ಮಾಡಿದ ಹಾಗೆ (Prvs.). See Bp. 54, 11; 60, 25; Si. 81. 82. 83. 85. 90. 91. 116. 383; B. 1, 18; 3, 34; 4, 97; 5, 154. — ನೀರಿನವ. -ಅವ. A water-man (My.); ನೀರಿನವಳು, a water-woman (My.). — ನೀರುಎಮ್ಮೆ. A kind of aquatic animal (Si. 88). — ನೀರುಒಣ್ಟೆ. A kind of aquatic animal (Si. 88). — ನೀರುಕಟ್ಟು. = ನೀರುಗಣ್ಟಿ, q. v. (My. occasionally). — ನೀರು ಕಟ್ಟು. To apply water, to water, to turn water (on land, My.). — ನೀರುಕಾಗಿ. 1. = ನೀರುಗಾಗೆ, ನೀರ್ಗಾಗೆ. (ಮದ್ಗು Si. 177; My. as -ಕಾಗೆ). — ನೀರುಕಾಗಿ. 2. The plant Pistia stratiotes (ವಾರಿಪರ್ಣಿ, ಕುಮ್ಭಿಕೆ Si. 95). — ನೀರುಕಾರು. Tongs for coals, also for putting water on them, used by goldsmiths (My.; Tĕ.). — ನೀರುಕಾಲುವೆ. A channel (My.; Si. 116). — ನೀರುಕುದುರೆ. A kind of aquatic animal (Si. 88). — ನೀರುಕೊಕ್ಕರೆ. A curlew

(ಕ್ರುಂಚ್, ಕ್ರೌಂಚ Si. 174). — ನೀರುಕೋೞಿ. = ನೀರುಗೋೞಿ. (My.; Si. 174). ಚಿಕ್ಕ ನೀರುಕೋೞಿ (ಪ್ಲವ 177). — ನೀರುಗಂಗಾಳ. A circular vessel for holding water, a basin (C.). — ನೀರುಗಣಿಗಿಲು. -ಕಣಿಗಿಲು. The water hog-weed, Barringtonia acutangula (My.). — ನೀರುಗಣ್ಟಿ. -ಕಣ್ಟಿ. = ನೀರುಕಟ್ಟಿ, ನೀರುಗಣ್ಟಿಗ. A man who, according to the rates fixed by government, has to turn water from a reservoir on the surrounding fields (My.). — ನೀರುಗಣ್ಟಿಗ. -ಕಣ್ಟಿಗ. = ನೀರುಗಣ್ಟಿ. (My.). — ನೀರುಗಣ್ಣು. -ಕಣ್ಣು. A small opening in a well or in the soil from which water issues: a spring (My.). — ನೀರುಗರಗ. A kind of garaga (My.). — ನೀರುಗಾಗೆ. -ಕಾಗೆ. = ನೀರುಕಾಗಿ 1, etc. A kind of cormorant, shag, diver (ಮದ್ಗು Nr.; ಮುದ್ಗು, ಜಲವಾಯಸ Hlâ.);—the Javan cormorant, Crabo javannica (Bd.). — ನೀರುಗಾಳಿ. A cold wind that comes over water (My.). — ನೀರುಗೋಡಗ. -ಕೋಡಗ. The Gangetic porpoise, Delphinus gangeticus. ಶಿಶುಮಾರ ಎನ್ದು, ಮೊಸಳೆ; ನೀರುಗೋಡಗ ಎನ್ದೂ, ಎಮ್ಬರು (Nr.). — ನೀರುಗೋಳಿಗಿಡ. A small potherb growing wild in watery places, Portulaca oleracea L. (St. & Pl. & Z.). — ನೀರುಗೋೞಿ. -ಕೋೞಿ. = ನೀರುಕೋೞಿ. A water-fowl. ಪ್ಲವ ಎನ್ದು, ಮುಣ್ಡುಮುಟಿಕ; ನೀರುಗೋೞಿ ಎನ್ದೂ, ಎಮ್ಬರು (Nr.). — ನೀರುಚಂಚಲಿ. The potherb Marsilia quadrifolia (ವಿತುನ್ನ, ಸುನಿಷಣ್ಣಕ Si. 159). — ನೀರುಚಲ್ಲಾಟ. Throwing water about (ಸೂಸಾಟ G.). — ನೀರುಚೀಲ. The bladder (ತಿಲಕ, ಕ್ಲೋಮ Si. 205). — ನೀರುತುಳಸಿಗಿಡ. = ಕಾಮುಕಸ್ತೂರಿಗಿಡ. (St. & Pl.). — ನೀರುತೊಟ್ಟಿ. A water-trough (ನಿಪಾನ, ತೀರ್ಥ Si. 429; My.). — ನೀರುದಗೆ. Thirst (My.). — ನೀರುದಾರಿ. A water-course (ಜಲಮಾರ್ಗ Si. 82; My.). 2, a path leading to water (My.). — ನೀರುನಾಯಿ. = ನೀರ ನಾಯಿ. The river otter, Lutra nair (Gz.). — ನೀರು ಬಿಡು. To let on water, as from a tank; to pour water, to make a libation; to discharge, or ooze out, as water. ದಾನವನ್ನು ಕೊಟ್ಟು ನೀರ ಬಿಡೋಣ (ತರ್ಪಣ); ತನ್ದೆಯ ಹೆಸರ್ಲಿ ನೀರ ಬಿಡೋಣ (ಪಿತೃತರ್ಪಣ); ಬೆಳದಿಂಗಳಿಗೆ ನೀರು ಬಿಡುವ ಕಲ್ಲು (ಬಿದುಗಲ್ಲು G.). — ನೀರುಬೆಕ್ಕು. = ನೀರ-. An otter (ಉದ್ರ Si. 88). — ನೀರುಬೊಕ್ಕೆ. A water-pit (Si. 88). — ನೀರುಬ್ಬರ. -ಉಬ್ಬರ. A spring. ಬೆಟ್ಟದಲ್ಲಿ ಹುಟ್ಟುವ ನೀರುಬ್ಬರ (ಉತ್ಸ, ಪ್ರಸ್ರವಣ Si. 115). — ನೀರುಬ್ರಹ್ಮಿ. A herb growing on the margin of tanks, etc., the Thyme-leaved Gratiola, Herpestis moniera H. B. (St. & Pl.). — ನೀರುಮಜ್ಜಿಗೆ. Butter-milk made thin with water (My.). See Prv. s. ಯಾರ್. — ನೀರುಮುೞೆ. = ನೀರ್ಮುೞೆ. Rain that brings water to fields, tanks, etc. (C.). — ನೀರು ಮುಟ್ಟು. To touch water after voiding urine or purging: to void urine (My.; Tĕ.); to discharge the bowels (My.). — ನೀರುಮೊಸರು. Diluted curds (ತ್ರಪ್ಸ್ಯ, ದ್ರಪ್ಸ್ಯ Nr.). — ನೀರುಮ್ಬೞಿ. A rent-free grant of government to one who has built a tank, a well, a water-course, etc. for the public welfare (My.). — ನೀರುವರಿ. 1. -ಪರಿ. Stream, current (ವೇಗ, ಪ್ರವಾಹ Nr.). — ನೀರುವರಿ. 2. Water-cess (My.). — ನೀರುವಱಿಗೋಲ್. -ಪಱಿಗೋಲ್. A rudder (ಅರಿತ್ರ Mr. 416). — ನೀರುಸೀನಿನಗಿಡ. A half shrub, Clorodendron serratum Spr. (Z.). — ನೀರುಹಕ್ಕಿ. = ನೀರ್ವಕ್ಕಿ. A water-bird: the Indian or Siberian crane, Ardea sibirica (ಪುಷ್ಕರಾಹ್ವ, ಸಾರಸ Si. 174). ಬಣ್ಣಗಳಿನ್ದ ಚಿತ್ರಮಾಗಿರುವ ನೀರುಹಕ್ಕಿ (ಕಾರಣ್ಡವ 177). — ನೀರುಹನ್ದಿ. The skate fish (ಶಂಕು Si. 88). — ನೀರುಹಬ್ಬೆ. The water-reed Calamus fasciculatus Roxb. (ಪರಿವ್ಯಾಥ, ವಿದುಲ, ಶೀತ, ವಾನೀರ, ವಂಜುಲ Si. 128). — ನೀರುಹಲಸು. A small tree growing in wet soil, Barringtonia acutangula Gaertn. (ನಿಚುಲ, ಅಮ್ಬುಜ, ಇಜ್ಜಲ Si. 136). — ನೀರುಹಾವು. = ನೀರ್ವಾವು. A water-snake (My.). — ನೀರುಹಿಪ್ಪೆ. = ನೀರಿಪ್ಪೆ. (ಮಧೂಲಕ Si. 127). — ನೀರುಹೊಗೆ. Fog arising from water (My.).

ನೀರುಜ nî-ruja. = ನಿರುಜ. Free from sickness, well; painless.

ನೀರೂಪ nî-rûpa. = ನಿರೂಪ 2. Formless, shapeless; misshapen.

ನೀರೇಜ nîrê-ja. Born in water: a lotus (Čpr. 8, 10).

ನೀರೇಜಜ nîrêja-ja. = ನೀರೇಜಭವ.

ನೀರೇಜಜಾಣ್ಡ nîrêjaja-aṇḍa. The universe (Râm. 5, 8, 57).

ನೀರೇಜಭವ nîrêja-bhava. Brahmâ (Bp. 54, 48).

ನೀರೇರುಹ nîrê-ruha. = ನೀರೇಜ. (Abh. P. 3, 105).

ನೀರೋಗ nî-rôga. = ನಿರೋಗ. Free from sickness, healthy, well.

ನೀರೋಗಿ nî-rôgi. = ನಿರೋಗಿ. A healthy person (ಸಜ್ಯ, ಅರುಜ Nn. 101).

ನೀಱ niṟa. A fine, gay man, a beau; a gallant; a lover; a dear man. ಮೂಱಾಳಿಯುಮ್ ಓದಾಳಿಯುಮ್ ಏಱಾಳಿಯುಮ್ ಅಪ್ಪನಾಗಿ, ಪಡಪಾಳಿಯೆ ಕೇಳ್, ನೀಱಂ ಜೂದಾಳಿಕರಂ, ನೀಱಿಗೆ ಮಾತಾಳಿ; (ಅವಳಂ) ಕಳೆಯೆ ಸಿಗ್ಗಾಳಿಯಮಂ! (Šmd. 239; Kâvy. I, 4, 32). ನಗೆವಡಿಕಾಱಂ ನೀಱಂ ಬಗೆಕಾಱಂ ಪಾಱಿಕಾಱನ್ ಒಳ್ನುಡಿಕಾಱಂ ಪಗೆಕಾಱನ್ ಆಗಿಯುಂ ಕೆಯ್ಮೆಗೆ ತಕ್ಕಂ, ಕೆಯ್ದುಕಾಱನ್ ಎನಿಸಲ್ಕಾಱಂ (235; Kâvy. I, 4, 4). See Abh. P. 1, 118; Ršv. 6, after 24; 7, 15; 13, 104; ಕಡು-.

ನೀಱತೆ niṟatĕ. = ನಿಱತೆ. (ಸೊಬಗು Čt. I, 77; ಬಲ್ಲ ತೆಱನದು I, 97; see ನೀಟು).

ನೀಱಲು niṟalu. = ನೀಱಲೆ, ನೀಲ್ರ್, ನೇಱಿಲ್, etc. A common tree with purple berries, Eugenia jambolana Lam. — ನೀಱಲ ಬಣ್ಣ. A purple colour (B. 4, 70). — ನೀಱಲ ಮರ = ನೀಱಲು. (ಜಮ್ಬು G.).

ನೀಱಲೆ niṟalĕ. = ನೀಱಲು. (Z.).

ನೀಱಿಗೆ niṟigĕ. = ನಿಱಿಗೆ (G.). ಉಟ್ಟು ಕೊಣ್ಡ ಸೀರೆಯ ನೀಱಿಗೆ (ಸೀವಿ G.). ಸೈಲ ಅಂಗಿಯ ಎದೆಯ ಮೇಲೆ ಹಾಗೂ ಹೆಗಲ್ ಮೇಲೆ ನೀಱಿಗೆಗಳು ಬೀೞುವ ಹಾಗೆ ಮಾಡಿರುತ್ತಾರೆ (B. 5, 298). — ನೀಱಿಗೆಗಟ್ಟು. -ಕಟ್ಟು. Folds, or wrinkles, to be formed. ಮೆಯ್ ಮೇಲಿನ ನೀಱಿಗೆಗಟ್ಟಿದ ಚರ್ಮ (ತೆರೆ); ನೀಱಿಗೆಗಟ್ಟಿದ್ದು (ಬಲಿ); ನೀಱಿಗೆಗಟ್ಟಿದವನು (ಬಲಿನ G.).

ನೀಱು niṟu. Powder; ashes (T.; M. ನೀಱು, ನೂಱು; Tĕ. ನಿಗುಱು, ನಿವುಱು, ನೀಱು; T. ನೀಱು, M. ನೀಱು, ನೂಱು, to be reduced to powder; T. ನೀಱ್ಱು, ನೂಱು, M. ನೀಱು, Tĕ. ನೂಱು, to reduce to powder; *cf.* ನುಗ್ಗು 2, etc.). See ತಿರು-; Bp. 56, 35.

ನೀಱೆ niṟĕ. A fine, beautiful woman, a beauty; a damsel; a gay woman; a courtesan. See Šmd. s. ನೀಱ; Abh. P. 3, 40; 5, 6; 9, 162; Grj. 3, after 91; Ršv. 7, 11; 7, after 13; 7, 17; 11, 84; J. 6, 25. 28; 8, 17. 20; 16, 3; 30, 2. 14; ಕಡು-; Prv. s. ನೀರು.

ನೀರ್ nîr. = ನೀರ್, etc. — ನೀರ್ಕಡೆ. A public necessary (My.). — ನೀರ್ಕುಟಿಕ. 1. A boatman (ಅಮ್ಬಿಗ Šs.). — ನೀರ್ಕುಟಿಕ. 2. = ನೀರ್ಕುಟಿಗ, q. v. — ನೀರ್ಕುಟಿಗ. (Šmd. 237). A man who (gratuitously) gives water (to drink, ನೀರೆಱೆವಾತ Šm. 46, o. r. ನೀರ್ಗುಟಿಕ; ನೀರೆಱೆವ Kk. 37, o. r. ನೀರ್ಕುಟಿಕ). — ನೀರ್ಗಾಗೆ. -ಕಾಗೆ. = ನೀರುಗಾಗೆ. (ಮದ್ಗು, ಜಲಕಾಕ Mr. 171). — ನೀರ್ಗಾಯ್. -ಕಾಯ್. An unripe cocoanut that

contains water (Čpr. 1, after 101). — ನೀರ್ಗಿಚ್ಚು. -ಕಿಚ್ಚು. (Šmd. 218). Submarine fire. — ನೀರ್ಗುಟಿಕ. -ಕುಟಿಕ. = ನೀರ್ಕುಟಿಗ, q. v. — ನೀರ್ಗುಡಿ. -ಕುಡಿ. = ನೀರಂ ಕುಡಿ (Šmd. 195). To drink water (Čpr. 5, after 39; Bp. 60, 24; J. 3, 40). — ನೀರ್ಗುಡಿಸು. -ಕುಡಿಸು. To give water to drink. ನೀರ್ಗುಡಿಪುದು (ನಿವಾಪ, ಪಿತೃತರ್ಪಣ Hlâ.). — ನೀರ್ಗುಳ್ಳೆ. A water-bubble (My. as ನೀರ್ಗುಳ್ಳೆ). ನೀರ್ಗುಳ್ಳೆ, ಗಾಳೀ ಸೊಡರ್... ಇವುಂ ಸಿರಿ ಪುಲ್ಲಗ್ರದ ತುನ್ತುಱಿಯ್! (Sk. 74). — ನೀರ್ಗೊಳ್. -ಕೊಳ್. To take water, to drink (Rśv. 6, 23). — ನೀರ್ತಿಳಿ. Water to become clear. ಬೆಳಗಿದುದೆಣ್ದಿಸಂ ದೆಸೆ, ನೀರ್ತಿಳಿದುದು (Šmd. 219). ಹಾವಸೆ ಕಿಡಲೊಡಂ ನೀರ್ತಿಳಿವುದು (295). — ನೀರ್ದಳಿ. -ತಳಿ. To sprinkle water (Čpr. 1, 123; Rśv. 12, 22). — ನೀರ್ದಾಣ. -ತಾಣ. Any piece of water, a pond, etc. (ಜಲಾತಯೆ Nr.; Šsv. 3, 49; Bh. 3, 13, 15). — ನೀರ್ದೆಗೆ. -ತೆಗೆ. To draw in, as water (Čpr. 7, 140). 2, to dry up (Čpr. 5, 132; Rśv. 5, 36). — ನೀರ್ದೇರ್. -ತೇರ್. Water-vehicle: a cloud (ಮುಗಿಲ್, ಮೋಡ, ಮೇಘ Šm. 14; Kk. 12). — ನೀರ್ನೆಲೆ. A place to rest upon in water. ನೀರ್ನೆಲೆ ತಪ್ಪ (ಅಗುರ್ Šmd. I). — ನೀರ್ಪಡಿಸು. To soak (Šâstrasâra in W. v. 1643. 1644. 1645). — ನೀರ್ಪೊಯ್. = ನೀರ್ವೊಯ್. To pour water (J. 29, 31). — ನೀರ್ಮುಱಿ. = ನೀರುಮುಱಿ. — ನೀರ್ಮುಱಿಗಱಿ. -ಕಱಿ. To let fall abundant rain (J. 10, 8). — ನೀರ್ಮಿಂದು. To bathe in water (Bp. 56, 54). — ನೀರ್ಮುಟ್ಟು. Water to touch (J. 9, 25). — ನೀರ್ಮೊಗೆ. To scoop or draw water (J. 3, 38; 6, 6). — ನೀರ್ಲಕ್ಕಿಗಿಡ. A large shrub, the three-leaved chaste-tree, Vitex trifolia L. (St. & Pl.). — ನೀರ್ವಕ್ಕಿ. -ಹಕ್ಕಿ. = ನೀರುಹಕ್ಕಿ. (J. 15, 9). — ನೀರ್ವನಿ. -ಪನಿ. A water-drop (Abh. P. 13, 11; Šsv. 2, 55; J. 6, 3; 19, 5). — ನೀರ್ವಾನಸೆ. -ಮಾನಸೆ. A mermaid, a nymph (Čpr. 3, 20). — ನೀರ್ವಾನಿಸ. -ಮಾನಿಸ. A merman (Čpr. 5, after 39). — ನೀರ್ವಾನಿಸೆ. -ಮಾನಿಸೆ. (Šmd. 218, o. r. ನೀರ್ವಾವಸೆ). = ನೀರ್ವಾನಸೆ. — ನೀರ್ವಾವು. -ಪಾವು. = ನೀರಳೇ ಹಾವು, etc. A water-snake (ಅಲಗರ್ದ, ಜಲವ್ಯಾಲ Hlâ., Nr.). — ನೀರ್ವುಗು. -ಪುಗು. To enter, or go into, water (Rśv. 6, after 24; 9, 11). — ನೀರ್ವುಟ್ಟು. -ಪುಟ್ಟು. A paddle (Šsv. 1, 43). — ನೀರ್ವೂ. -ಪೂ. = ನೀರ್ವೂವು. (Čpr. 1, after 101; Abh. P. 1, 114). — ನೀರ್ವೂವು. -ಪೂವು. A lotus (ಕಮಲ Šs.; ತಾವರೆ Kk. 13). — ನೀರ್ವೆರಸು. -ಬೆರಸು. Water to be mixed with (Bp. 14, 9). — ನೀರ್ವೊಗಿಸು. -ಪೊಗಿಸು. To cause to go into water (Rśv. 14, 147). — ನೀರ್ವೊನಲ್. -ಪೊನಲ್. A stream, a rivulet (Abh. P. 1, 117; 9, 151). ಬೇರ್ವೆರಸು ಕಾಯ್ತು ಪಲಸು, ಎಳನೀರ್ವೊನಲಂ ಕಱಿವ ತೆಂಗು (Šmd. 81). — ನೀರ್ವೊಯ್. = ನೀರ್ಪೊಯ್. (Abh. P. 16, 55; J. 30, 35).

ನೀರ್ಲು **nîrlu.** = ನೀಱಲು, etc. ನೀರ್ಲ ಹಣ್ಣು (ಜಾಮ್ಬವ G.).

ನೀಲ **nîla.** = ನೀಳ. (ಉದ್ದ Nn. 30).

ನೀಲ nîla. *Dark-blue or black* (ವರ್ಣ, ವರ್ಣಭೇದ Nn. 30; ಕಪ್ಪು Mr. 511); dyed with indigo. 2, a gem, the sapphire (ಸುರತ್ನ, ರತ್ನಭೇದ 30; ರತ್ನ 511). 3, the blue mountain (ಅಚಲ, ಪರ್ವತಭೇದ 30; ಶೈಲ 511). 4, one of the monkeys attending on Râma (ವಾನರಕುಲ, ವಾನರಭೇದ 30). 5, bad; wicked, vicious; vile, low; sin, crime (ಪಾಪ, ಪಾತಕ 30; ಅಧರ 511). 6, slow, lazy, dull (ಮನ್ದ 511). 7, a vicious or silly horse (ಕಿಱುಬೆಳ್ಪುದೋಱಿ ನೀಲಂ Mr. 275). 8, one of the treasures of Kubêra. 9, a kind of house (ಗೃಹಭೇದ 30). 10, indigo. 11, ten palas (halas) of copper. ಹತ್ತು ಹಲ ತಾಮ್ರದೊಳು ನೀಲಂ (Mr. 60). ಎಳೆಯ ನೀಲ (ರಾಜಾವರ್ತ Kk. 85; Šm. 69). ನೀಲದ ಮಣಿ ಪವಣಿಸಿದ ನೂಲ್ಲಾದರೆ ನೀಲದ (*i. e.* ನೀಲದ ಮಣಿಯ) ಕ್ರಯ ಬಾಯೀತೇ? — ನೀಲ ಬಾಲಕಗೆ ಚನ್ದ, ಕೋಲು ಓಲೆಕಾಱಿಗೆ ಚನ್ದ. — ನೀಲ ಮಾಱಿ, ಓಲೆ ಮಾಡಿದರೂ ಸಾಲದ ಉಪದ್ರ ನಿಲ್ಲಲಿಲ್ಲ (Prvs.). — ನೀಲಗಿಡ. A low under-shrub, Indigofera aspalathoides Vahl. (St. & Pl.).

ನೀಲಕಣ್ಠ nîla-kantha. Blue-necked: *a peacock* (ಮಯೂರ, ನವಿಲ್ Nn. 49; ಕೇಕಿ Mr. 512). 2, *a sparrow* (ಗುಬ್ಬಿ 49; 512). 3, a quail (ಲಾವುಗೆ 49). 4, a serpent (ಭೋಗಿ, ಸರ್ಪ 49; ಕಾದ್ರವೇಯ 512). 5, a locust or grass-hopper (ಮಿಡಿಚೆ 49). 6, *Śiva* (ವೃಷಧ್ವಜ, ಈಶ್ವರ 49; ರುದ್ರ 512); N. (My.). ನೀಲಕಣ್ಠನ ಮದುವೆಗೆ ನೀಲೀ ಸೊಪ್ಪಿನ ಪಳದೆ (Prv.). 7, sign for a long letter (Čh.). 8, the nape, the neck (ಕಣ್ಠ, ಕೊರಲು 49; ಗ್ರೀವ 512). — ನೀಲಕಣ್ಠಂ. The metrical foot — ◡ — — (Čh.). — ನೀಲಕಣ್ಠಾಯ್ಯ. -ಅಯ್ಯ. N. (Bp. 59, 2).

ನೀಲಕನ್ಧರ nîla-kandhara. = ನೀಲಕಣ್ಠ. (My.).

ನೀಲಕೇತು nîla-kêtu. = ನೀಲಧ್ವಜ. (J. 9, 5. 11).

ನೀಲಗಲ nîla-gala. = ನೀಲಕನ್ಧರ. (Bp. 1, 66; 25, 11).

ನೀಲಗಾಱ nîla-gâṟa. = ನೀಲಿಗಾಱ. (S. Mhr.).

ನೀಲಗಿರಿ nîla-giri. The Neilgherries. (My.). See Prv. s. ನೀಲಮಣಿ.

ನೀಲಗ್ರೀವ nîla-grîva. *Śiva.*

ನೀಲಂಗು nîlaṅgu. *A species of worm growing in the inside of animals.* 2, an insect in general (ಪುಲ್ಲಕ, ಕ್ರಿಮಿ, ಕೀಟ, etc., ಪುೞ Mr. 396, o. r. ಪುೞು); a caterpillar (ಕೋಱೀ ಹುೞ G.).

ನೀಲತೆ nîlatĕ. Blueness, blackness. See ಎ-.

ನೀಲಧ್ವಜ nîla-dhvaja. (= ಅಸಿತಧ್ವಜ). N. of a prince (J. 8, 1 seq.).

ನೀಲಮಣಿ nîla-maṇi. The sapphire. (Čpr. 1, 39). ನೀಲಮಣಿ ಬೇಕಾದರೆ ನೀಲಗಿರಿಗೆ ಹೋಗ ಬೇಕೇ? (Prv.).

ನೀಲಮೇಘಶ್ಯಾಮ nîla-mêgha-śyâma. Kṛishṇa or Vishṇu (My.).

ನೀಲಮೇಘಶ್ಯಾಮಲ nîla-mêgha-śyâmala. = ನೀಲಮೇಘಶ್ಯಾಮ. (J. 13, 23).

ನೀಲಲೋಹಿತ nîla-lôhita. Dark-blue mixed with red: purple, dark-red. (Abh. P. 13, after 133). 2, *Śiva.*

ನೀಲಾಂಗ nîla-aṅga. Dark-bodied: Kṛishṇa; Râma (J. 18, 48). 2, the Indian crane. 3, the blue jay.

ನೀಲಾಚಲ nîla-aćala. The blue mountain (ಕಱಿವೆಟ್ಟು Šs.).

ನೀಲಾಂಜನ nîlâñjana. Tbh. of ನೀರಾಜನ. (My.).

ನೀಲಾಬ್ಜ nîla-abja. = ನೀಲಾಮ್ಬುಜನ್ಮ. (Čpr. 8, 101; Šsv. 1, 43).

ನೀಲಾಬ್ದ nîla-abda. A dark cloud (Šsv. 1, 43).

ನೀಲಾಮ್ಬರ nîla-ambara. *Balarâma* (ಬಲ Mr. 21).

ನೀಲಾಮ್ಬರಿ nîlâmbari. N. of a râga (My.).

ನೀಲಾಮ್ಬುಜನ್ಮ nîla-ambujanma. *The blue water-lily.* See ಕನ್ನೆಯ್ದಿಲು.

ನೀಲಾಲಕಿ nîla-alaki. A woman with dark locks (J. 16, 1).

ನೀಲಾಶ್ಮ nîla-aśma. = ನೀಲಮಣಿ. (Čpr. 1, 137).

ನೀಲಿ nîli. *The indigo shrub, Indigofera tinctoria* Lin. (ರಂಗಿಣಿ Mr. 131). 2, a kind of disease, black and blue marks on the body from bruises, etc. 3, indigo, the dye. (My.). 4, a female gnome or evil spirit (Kâlî) that uses to speak lies (My.; Te., T.). 5, dark-blue (Čpr. 8, 30). — ನೀಲವ್ವ. -ಅವ್ವ. Kâlî (S. Mhr.). — ನೀಲಿಗಣ್. -ಕಣ್. A kind of eye disease (Bp. 18, 66). 2, an eye with a bluish pupil (My.). — ನೀಲಿಗಪ್ಪಡ. -ಕಪ್ಪಡ. A dark-blue

cloth (Bp.). — ನೀಲೀ ಗಿಡ. = ನೀಲಿ No. 1. (My.; B. 4, 54). — ನೀಲೀ ಬೀಜ. The seed of Cassia tora L., used by indigo dyers (Z.; My.). — ನೀಲೀ ಮಾತು. A word of Nîli: a falsehood (My.). ನೀಲೀ ಮಾತು ನಿಜವಲ್ಲ (Prv.). — ನೀಲೀ ವಾರ್ತೆ. A false report (My.).

ನೀಲಿಕೆ nîlika. A blue-flowering Barleria (ಬಾಣ, etc., ಗೋರಟೆ Mr. 123).

ನೀಲಿಕೆ nîlikĕ. *The small tree Nyctanthes arbor tristis* Lin. 2, the five-leaved chaste tree, Vitex negundo L. (ಕರೇಲಕ್ಕಿ G.).

ನೀಲಿಗಾಱ nîli-gâṟa. = ನೀಲಗಾಱ. A manufacturer of indigo (My.); an indigo dyer (My.).

ನೀಲಿನಿ nîlini. *The indigo shrub.*

ನೀಲೀರಾಗ nîlî-râga. Having the colour of indigo; as unchangeable as the indigo colour: *constant in affection;* a firm and constant friend (ಸ್ಥಿರವಾಗಿ ಸ್ನೇಹ ಮಾಡುವವನು Hlâ.; ಎಡೆವಿಡದ ವಿನಯಿತಂ Mr. 241).

ನೀಲೋತ್ಪಲ nîla-utpala. *The blue water-lily, Nymphaea cyanea* Roxb. (ಕುಮುದ, ಕಪ್ಪೇಱ ಇರ್ದ ನೆಯ್ದಿಲ್ Mr. 420); a blue lotus. See ಕನ್ನೆಯ್ದಿಲು.

ನೀಲೋತ್ಪಲಸಖ nîlôtpala-sakha. The moon (Bp. 35, 24).

ನೀವಾಕ nî-vâka. *The increased demand for grain in times of dearth, competition of buyers in consequence of scarcity* (ಧಾನ್ಯಾದಿಗಳ ಅರ್ಘಮಂ ಪಾರ್ವುದು; ಮೇಣು ಧಾನ್ಯವ ಪೊಯಿವುದಱ ಪೆಸರು Nr.); *dearth, scarcity;* collecting or laying up grain in times of dearth.

ನೀವಾರ nîvâra. *Rice growing wild* (ಹೊಡೆ Mr. 372).

ನೀವಿ nîvi. *A cloth worn round a woman's waist; the ends of the cloth passed round the loins so as to hold the whole together* (ನಿಱಿ Nn. 105; ಉಚ್ಚಯ Mr. 343; see ನೆಱಿ 1). 2, *capital, principal, stock.* 3, a stake at play, a wager (ಪಣ, ಒಡ್ಡಿದು 105). 4, junction, union (ಯೋಗ, ಕೂಟ 105). 5, a pair (ಯುಗ್ಮ, ಎರಡು 105). 6, compassion (ಕರುಣ 105). 7, a saddle (ಪಲ್ಲಣ, ಹಲ್ಲಣ 105). 8, sexual intercourse (ಮೋಹನ 105).

ನೀವಿಸು nivisu. To cause to use gentle friction, etc. (My.).

ನೀವು nivu. 1. = ನೀಂ 2, ನೀಮ್, etc. You. The plural of ನೀನು (C.). See its declension s. ನಿಮ್. ನೀವಾದರೇನು, ನಾವಾದರೇನು? ಬಾವಿಲಿ ನೀರು ಬನ್ದರೆ ಸರಿ.—ನೀವು ನಾಗಲೋಕದವರಾದರೆ ನಾವು ನಾಕಲೋಕದವರು (Prvs.). ನೀವಿಬ್ಬರೂ (B. 4, 6). See Bp. 14, 25; 22, 41. 61; 23, 30; 24, 24. 28; 32, 43; 37, 5; 40, 84; 47, 66; 48, 23; 58, 38; Bh. 2, 13, 36.

ನೀವು nivu. 2. To rub softly, to use gentle friction, to stroke down any member of the body, to make straight or smooth by stroking, as the hair, the beard, cloth, etc. (ಎಱವು Šmd. I; Čpr. 7, 127; My.; T.; *cf.* ನಿವರು).

ನೀವೃತ್ nî-vṛit. *An inhabited country.*

ನೀವ್ರ nîvra. = ನೀಧ್ರ. *The edge of a thatch, the edge or side of a sloping roof, eaves.* 2, a thatch, a roof.

ನೀಶಾರ nî-šâra. *A warm cloth, a blanket* (ಹಚ್ಚಡ G.; ರಜಾಯಿ G.). 2, curtains. 3, an outer tent or screen.

ನೀಸು nîsu. (Tbh. of ನಯಿಸು). To cause to go: to manage, to accomplish, to fulfil (My.).

ನೀಹಾರ nî-hâra. = ನಿಬ್ಬಾರ. *Fog, mist; frost, hoar-frost; dew.* 2, evacuation (Čpr. 3, after 36).

ನೀಳ್ nîḷ. = (ನಿಗುಳ್), ನೀಡು 1. To grow long or high, to extend, to extend one's self, to be stretched out, to spread, etc. (ಪ್ರಸಾರಣ Šmd. Dh.; Čpr. 1, after 79; 1, 93. 106; 5, 40; 6, 2; 7, 44; 8, 57; Abh. P. 3, 97; 14, 106; T., M. ನೀಳ್, ನೀಳು). ನಿಜತೇಜಂ ನೀಳ್ದ ಕರ್ನೆಯ್ದಿಲವೊಲಿರೆ (Šmd. 251, o. r. ನೀಳ್ದು). ನೆಗೆದಯ್ ಲೋಕದ ನೀಳ್ದ ತುತ್ತತುದಿಯಂ ನೀಂ (229). (ಭೃಂಗತತಿ) ನೀಳ್ದೆಱಗಿದ (ನೀರಜದ) ಕೇಟ್‌ಸಳ್ವಟಿಯೊಳ್ ಒಯ್ಯನೆ ಜಾಱ (Čpr. 7, 60). ನೀಳ್ದಲರ್ದ ಬಾಲ (ಲಲಾಮ Mr. 498). ನೀಳ್ದ ಕುರುಳ್ (Čt. II, 98). See Grj. 8, 46; Ršv. 3, 17; 5, 85; 6, after 11; 8, 47; Č. Bp. 47, 18; Šmd. s. ಬಳ್ವಳ; J. 3, 5; 17, 29.

ನೀಳ nîḷa. = ನೀಟ 1, ನೀಡು 2, ನೀಲ, ನೀಳು, (ನೀಳ್ಪು), ನೀಟ್. Extension, length, height, tallness (ದೀರ್ಘ, ಆಯತ Nr.; Mr. 446; ಆಯತಿ Si. 425; ನೀಟ Bhn. 31; My.; T., M.). ಸೀರೆಯ ನೀಳ (ದೈರ್ಘ್ಯ, ಆಯಾಮ, ಆನಾಹ Nr.). ನೀಳವಾದದು (ದೀರ್ಘ, ಆಯತ Si. 372). ಬಹಳ ನೀಳವಾದದು (ಪ್ರಾಘಿಷ್ಠ 384). ನೂಱು ಗಾವುದ ನೀಳವಾದ ದೊಡ್ಡ ಬೆಟ್ಟದನ್ಥಾ ಮಹಾ ಮೀನು (ತಿಮಿ 88). ನೀಳವಾದ ತುಂಗೇ ಗಡ್ಡೆ (ಕುರುವಿನ್ದ, etc. 162). ನೀಳಕೆಯ್ (Bp. 50, 68); ನೀಳತೋಳ್ (58, 25); ನೀಳನಾಲಿಗೆ (18, 16). ನೀಳವಾದರೂ ಗಾಳಿಗೆ ಏನು? (Prv.). See Bp. 20, 1; 35, 49; 48, 6; 51, 81; 53, 68; 60, 48.

ನೀಳ nîḷa. = ನೀಡ.

ನೀಳಜ nîḷa-ja. = ನೀಡಜ. (ಪಕ್ಷಿ Mr. 167).

ನೀಳಿತು nîḷitu. That is long (ದೀರ್ಘ, ಆಯತ Hlâ.).

ನೀಳು nîḷu. (ನೀಳ್). = ನೀಳ, etc. (T.; M. ನೀಣ್, ನೀಳ್, ನೀಟ್). — ನೀಳದು. -ಅದು. That is long, high or tall. ನೀಳದಱ ನೆರಳೂ ಬೋಱಿಯ ಮಾತೂ ಗಾಳಿಯ ಹಾಗೆ.—ನೀಳದಱ ಮೇಲೆ ನಿನ್ತರೆ ಗಾಳಿಗೇನು? (Prvs.).

ನೀಳ್ಕೊಳಿ nîḷ(nîḷu)-kŏḷi. (Extension-seizure): distraction; wandering. — ನೀಳ್ಕೊಳಿಗೊಳ್. -ಕೊಳ್. To become distracted, to wander or rove (J. 19, 29).

ನೀಳ್ಪು nîḷpu. Length, etc. (ನಿಡಿದು Čt. II, 53; Čpr. 3, 81). — ನೀಳ್ಪುವೆಱ್. -ಪೆಱ್. To grow long, to extend. ನಿಡುದಲೆ, ನೀಳ್ಪುವೆತ್ತ ನಗೆಗಣ್ (Šmd. 78).

ನೀಟ್ nîṭ. = ನೀಡು 2, etc. Length, etc. — ನೀಟ್ಟಿರಿಸು. = ನೀಡು ಕರಿಸು (Šmd. 28). To make long, to lengthen, to uncoil, etc. ನೀಟ್ಟಿರಿಸಿದಂ (217). ಬರ್ಕುಡಿತನೀರ್ಗೆ, ಪಱ ಪಟ್ಟಿರ್ಕೆಯ ಪಣ್ಣೆಲೆಯ ಮುಡಿಗೆ ದೇಸಿಗರಂ ದೇವರ್ಕಳ್ಗೊಡೆಯುರ್ (o. r. -ರ) ಮಾಟ್ಪರೆ? ನೀಟ್ಟಿರಿಸದೆ ನಿನ್ನು (o. r. ನಿಮ್ಮ) ದೊರೆಗೆ ಬೋಱಿಯರ್ ಒಳರೇ? (39. 345). See Ššv. 2, 71. — ನೀಟ್ಕೆಯ್ಸು. To make long, to extend, to spread out (Grj. 1, 107).

ನು nu. 1. = ಅಂ 1 (am 1), etc., *e. g.* ಇರ್ದಪನು (Hlâ. s. ಅಗಿ), ತಿವಿದನು (Bh. 1, 10, 38), ಕೊಡುವನು (Bp. 21, 35), ಆದನು, ಮಾಡಿದನು (22, 47).

ನು nu. 2. = ಅಂ 3 (am 3), etc., *e. g.* ಅಧಿಪನು (Bp. 3, 18), ಪುತ್ರನು (3, 24), ಆತನು (18, 74), ಅವನು (20, 24), ಅಯ್ಯನು (21, 3), ಅರ್ಭಕನು (24, 84), ಬಿಜ್ಜಳನು (37, 66); ವಿಪ್ರನು, ಬ್ರಾಹ್ಮಣನು, ಅಭ್ಯುದಿತನು (Nr. s. ಅಗು); ಕ್ಷತ್ರಿಯನು (Hlâ. s. ಅಗದು), ಶೂದ್ರನು (s. ಆಗಿ);—ನೊಗನು (Nr. s. ಆರು 4), ಎರನು (s. ಎರ 1), ನೆಣನು (s. ನೆಣ), ನೊಣನು (s. ನೊಣ), ಮರನು (s. ಬಂಜೆಮರ), ತೋಳನು (see ವನಾಶ್ವ), ಮೊಲನು (My.), ಹೆಣನು (s. ಪರೇತ).

ನು nu. *Now? what? indeed?* 2, indeed, certainly. 3, *or.*

ನುಗಿ nugi. (= ನುಗ್ಗು 2). To reduce to fine particles, to powder, with the fingers, stones, etc. (My.).

ನುಗಿಚು nugiču. = ನುಣ್ಚು. To get out of (the hand, etc.) by wriggling (as a bird), to slip (from the hand, as a rope, generally ನುಗಿಚಿ ಕೊಳ್ಳು, My.).

ನುಗುಳ್ nuguḷ. = (ನುಗ್ಗು 1), ನುಸುಳ್ 1, etc. To enter a door or a small, narrow passage or opening, to go in with difficulty, to squeeze through, to creep in, to get into, to enter (ದ್ವಾರಪ್ರವೇಶ Šmd. Dh.; see T., M. s. ನೊಟಿ). P. p. ನುಗುಳ್ದು.

ನುಗುಳ್ಚು nuguḷču. To cause to enter a small, narrow passage, etc. (ಸೂಕ್ಷ್ಮದ್ವಾರಪ್ರವೇಶ Šmd. Dh.).

ನುಗ್ಗಿ nuggi. = ನುಗ್ಗೆ. (ಮೋಚಕ Mr. 510). See ಕಾಡು-. — ನುಗ್ಗೀ ಗಿಡ. (ಅಕ್ಷೀವ, ತೀಕ್ಷ್ಣಗನ್ಧಕ, ಮಧುಶಿಗ್ರು, ಶಿಗ್ರು G.). — ನುಗ್ಗೀ ಬೀಜ. (ಶಿಗ್ರುಜ, ಶ್ವೇತಮರಿಚ G.).

ನುಗ್ಗಿಸು nuggisu. 1. To cause to creep in or squeeze through (My.).

ನುಗ್ಗಿಸು nuggisu. 2. To cause to powder, etc. (My.).

ನುಗ್ಗು nuggu. 1. = (ನುಗುಳ್), ನುರ್ಗು 1. To pass by pressing, to squeeze through, to force one's self into, to enter without permission, as a door, a house, to creep into, as into a hole (J. 8, 32; My.). ನುಗ್ಗಿದವನಿಗೆ ಹಗ್ಗ ತಪ್ಪೀತೇ?—ಕಿವಿ ಕತ್ತ ಮೂಟಿ ಬೇಲಿ ನುಗ್ಗ ಹೆದಱುವಳೇ? (Prvs.). ದನ ಬೇಲಿ ನುಗ್ಗಿತು (My.). — ನುಗ್ಗಾಡು. -ಆಡು. To be addicted to passing through by force, as cattle through a hedge or fence (My.).

ನುಗ್ಗು nuggu. 2. = (ನುಗಿ, ನುಱು 1), ನುಱುಸು, ನುಱುಕು, ನುಱುಗು, ನುರ್ಗು 2, ನುರ್ಚು 1, ನುಳ್ಗು. To reduce to small bits or powder by pressing with the hand, etc. or by pressing or beating with a stone, a piece of wood, etc., to crush, to powder, to grind (My.; Tě.; T. ನುಕ್ಕು, ನುಣಂಗು, ನುಣಿ, ನುಣುಕ್ಕು, ನೊಱುಕ್ಕು; Tě. also ನುಱುಚು, ನುಱುಮು, ನುಲುಚು; *cf.* ನೀಱು; see ನಱುಜು). **2,** to be crushed, etc. (Čpr. 2, 44; T. ನುಣುಂಗು, ನೊಱುಂಗು; M. ನುಱುಙ್ಙು). — ನುಗ್ಗೊತ್ತು. ನುಗ್ಗ ಒತ್ತು. = ನುರ್ಗೊತ್ತು. To press so as to crush (Bp. 23, 26; 52, 48).

ನೆಯ್ nĕy. 2. = ನೇಯ್ 2. (Tbh. of ಸ್ನೇಹ? cf. ನೇಹ 1). Ghee (ಘೃತ Šmd. Dh.; Šm. 102; T. ನೆಯ್, blood, see ನೆಣ & ನೆತ್ತರ್; fat, grease, oil; ghee; ಇಗ್ನೇಯ, ನೇ, ನೇಯ, love, friendship; ghee; M. ನೆಯಿ, ನೈ, Te. ನೆಯ್ಯಿ, fat, grease, oil; ghee). See ನಟು-.

ನೆಯಿ nĕyi. 1. = ನೆಯ್ 1, etc. P. p. ನೆಯಿದು (B. 4, 163; My.; Si. 334). ನಾರು ನೂಲು ಕ್ರಿಮಿಜ ರೋಮಂಗಳಿನ್ದ ನೆಯಿದ ಆ ಸೀರೆ ನಾಲ್ಕು ತೆಱನಕ್ಕು (Mr. 341).

ನೆಯಿ nĕyi. 2. = ನೇ 2, ನೇಯ. Weaving; a web. See ನೆಯಿಕಾಱ.

ನೆಯಿಕಾಱ nĕyi-kâṟa. A weaver (ಕುವಿನ್ದ, ಜೇಡ G.).

ನೆಯಿಗೆ nĕyigĕ. = ನೆಯ್ಗೆ, ನೇಗೆ, ನೇಯಿಗೆ, ನೇಯ್ಗೆ. Weaving; a web (My.). — ನೆಯಿಗೆಯವ. -ಅವ. = ನೇಯಿಗೆಯವ. A weaver (Si. 337. 396; My.). — ನೆಯಿಗೆಹುಟಿ. A spider (ತನ್ತುವಾಯ, ಊರ್ಣನಾಭ, ಮರ್ಕಟಕ Si. 171).

ನೆಯ್ಗೆ nĕygĕ. = ನೆಯಿಗೆ, etc. (ಊಕೆ Šm. 78; ವಾಣಿ, ವ್ಯೂತಿ Nr.; My.); entwining or being entwined. ಹೊರಸಿನ ನೆಯ್ಗೆಯ ಊಕೆಯ ... (ಎಟ್ಟಿ Šmd. I). ಊತ ಸ್ಯೂತ ಇವು ನೂಲ ನೆಯ್ಗೆಯಲ್ಲಿಯೂ ಹೊಲಿಗೆಯಲ್ಲಿಯೂ ವರ್ತಿಸುಗು (Nr.). — ನೆಯ್ಗೆಗೊಳ್. -ಕೊಳ್. To be entwined. ನೆಯ್ಗೆಗೊಣ್ಡಿರ್ದ ಹೊದಱ್ (ವೀರುಧ, ಗುಲ್ಮ, etc. Mr. 108).

ನೆಯ್ಗೆಕಾಱ nĕygĕ-kâṟa. A weaver (My.). ನೆಯ್ಗೆಕಾಱನ ನಾಳಿ (ವೇಮ, ವೇಮದಣ್ಡ Nr.).

ನೆಯ್ದಲ್ nĕydal. -ಲು. = ನೆಯ್ದಳೆ, ನೆಯ್ದಿಲ್, ನೆಯ್ದಿಲೆ. A water-lily (ಇನ್ದೀವರ, ಉತ್ಪಲ Hlâ.; ಕೋಮಳೆ Šmd. II; ಕೋವಳ್ Šm. 26; Čpr. 1, 44; 2, 36; 9, 26; T., M.). ನೆಯ್ದಲ ವರ್ಣ (ಶ್ಯೇನಿ Hlâ.). See ಕನ್-, ಬಿಳಿಯ-. — ನೆಯ್ದಲ್ಗೊಳ. -ಕೊಳ. A pond abounding with lilies (ಕುಮುದ್ವತಿ, ಕುಮುದಿನಿ, ಕೈರವಿಣಿ Hlâ.; Abh. P. 5, 80).

ನೆಯ್ದಲೆ nĕydalĕ. = ನೆಯ್ದಲ್. (Si. 446; My.).

ನೆಯ್ದಿಲ್ nĕydil. -ಲು. = ನೆಯ್ದಲ್. (ಉತ್ಪಲ, ಕುವಲಯ Nr.; ಕಮಲ, ಉತ್ಪಲ Nn. 29; ಕುಮುದ 29; ಪದ್ಮ, ಉತ್ಪಲ 54; ಕುಮುದ Mr. 506; ಕೋಮಳೆ Kk. 85). ನೆಯ್ದಿಲ ಗಡ್ಡೆ (ಶಾಲೂಕ); ತಾವರೆಯ ನೆಯ್ದಿಲ ಕಾವು (ನಾಲ Nr.). See ಕನ್-, ಕರ್-, ಬಿಳಿಯ-; Rŝv. 9, 4. — ನೆಯ್ದಿಲ ನಲ್ಲ. The moon (ಇರುಳೆಱೆಯ Čt. II, 6). — ನೆಯ್ದಿಲ ಮಯ್ದುನ. = ನೆಯ್ದಿಲ್ಗೆಳೆಯ. The moon (Bh. 1, 7, 19). — ನೆಯ್ದಿಲ್ಗೆಳೆಯ. The moon (ಚನ್ದ್ರ Kk. 44; Šm. 16). — ನೆಯ್ದಿಲ್ಗೊಳ. -ಕೊಳ. = ನೆಯ್ದಲ್ಗೊಳ. (Abh. P. 1, 105). — ನೆಯ್ದಿಲ್ನಲ್ಲ. = ನೆಯ್ದಿಲ ನಲ್ಲ (ಚನ್ದ್ರ Čt. I, 107).

ನೆಯ್ದಿಲೆ nĕydilĕ. = ನೆಯ್ದಲ್. (ಇನ್ದೀವರ, ಉತ್ಪಲ Mr. 419; ಉತ್ಪಲ, ಕುವಲಯ Si. 95; My.). ನೆಯ್ದಿಲೆಯಾದರೂ ಕೊಯ್ದರೆ ಬಯ್ದಲೇ ಮೇಲೆ (Prv.). See Si. 94. 95. 96. 153; Rŝv. 9, 9; J. 2, 65; 8, 21; 26, 24. — ನೆಯ್ದಿಲೆಗಣ್ಗೆ. -ಕಣ್ಗೆ. The water-lily on account of the eye (sic! J. 30, 4).

ನೆಯ್ನಾರ್ nĕynâr. = ನಯ್ಯನಾರ್, etc. (Bp. 9, 41). See ಇಡುಗುಡಿಯ-, ಚೊಕ್ಕ-, ತಿರುವಾರೂರ-, ನಕ್ಕ-, ಪಿಳ್ಳೆ-.

ನೆಯ್ಯಿನಾರ್ nĕyyinâr. = ನೆಯ್ನಾರ್. See ಪಿಳ್ಳೆಯ-.

ನೆಯ್ಯು nĕyyu. = ನೆಯ್ 1, etc. (My.). ನೆಯ್ಯುವವನಿಗೆ ಲಾಳಿ, ನಗಕ್ಕೆ ಗಾಳಿ (Prv.).

ನೆಯ್ಸು nĕysu. = ನೇಯಿಸು. (My.).

ನೆರ nĕra. 1. = ನೆರದು, ನೆರೆ 2, ನೆರೆದು. P. p. of ನೆರೆ 1, in ನೆರ ನೆರದು (Bp. 18, 62).

ನೆರ nĕra. 2. = ನೆರವು, ನೆರೆ 3, ನೆರೆವು 2. -ವೆರ್ಗ or ನೆರವು (Šmd. 56). Adjoining, being next to or contiguous, nearness; joining, coming near (to assist); assistance (Čpr. 3, 93). — ನೆರನಾಡು. An adjoining district (B. 5, 20; My.). — ನೆರಮನೆ. = ನೆರೆ-. A neighbouring house: next door (My.; G. 108). ನೆರಮನೆ ಹಾಟಿಾದರೆ ಕಱುಗಳ ಕಟ್ಟುವೆನು. — ನೆರೆಮನೇ ಜಕಣಿಗೆ ತವರ ಮನೇ ಸೀರೆಯೋ? — ಎರವು ಸಿರಿಯಲ್ಲ, ಬಾವು ಡೊಳ್ಳಲ್ಲ, ನೆರಮನೇ ಅಕ್ಕನ ಗಣ್ಡ ಭಾವನಲ್ಲ. — ನೆರಮನೇ ಹೋಳಿಗೆಗೆ ತುಪ್ಪ ಕಾಯಿಸಿದ ಹಾಗೆ (Prvs.). See Bp. 25, 27; 48, 20; 53, 73; J. 5, 57; Prv. s. ಪರಮಗತಿ. — ನೆರಮನೆಯವ. -ಅವ. A neighbour (Bp. 47, 8; My.). — ನೆರವ್ವಡೆ. -ಂ-ಪಡೆ. To accept (with pleasure, Abh. P. 10, after 160); to take for one's assistance (12, 49). — ನೆರವ್ಬರ್. -ಂ-ಬರ್. To come to assist (Abh. P. 14, after 128). — ನೆರವ್ವಿಡಿ. -ಪಿಡಿ. To lay hold on (something) as auxiliary (Čpr. 2, 27). — ನೆರವಲ. -ಬಲ. An auxiliary force (Abh. P. 10, 62). — ನೆರವೂರು. -ಊರು. = ನೆರೆ-. A neighbouring village (Bp. 44, 72). — ನೆರ ಹೊರೆಯವರು. -ಅವರು. = ನೆರೆ-. Next door and other neighbours. ನೆರ ಹೊರೆಯವರು ಕೂಡಿದರೂ ಬರುವ ಕೇಡು ತಪ್ಪಿಸಲಾಱರು (Prv.).

ನೆರಕೆ nĕrakĕ. = ನೆರಿಕೆ. A fence or a wall of bamboo, palm branches, etc. (My.; T. ನಿರೈಚ್ಚಲ್, ನಿರೈತ್ತಲ್; M. ನಿರೆ; T. ನಿರೈ, M. ನಿರೆ, to put in rows, to range in a line; to fence). ಮೆತ್ತಿದ ನೆರಕೆ (ಏಡೂಕ Nr. b).

ನೆರತು nĕratu. P. p. of ನೆರೆ 5.

ನೆರದು nĕradu. = ನೆರೆದು. P. p. of ನೆರೆ 1.

ನೆರಪು nĕrapu. = ನೆರಯಿಸು, ನೆರಸು, ನೆರಹು, ನೆರೆಪು, ನೆರೆವು 1. To bring or put together, to join, to collect, to convene (Čpr. 3, 11; Abh. P. 10, 37; Bp. 1, 11; 50 sum.; 50, 42; Rŝv. 6, after 11; 13, 15; 13, after 65; J. 18, 5).

ನೆರಯಿಸು nĕrayisu. = ನೆರಪು, etc. (Bp. 16, 14).

ನೆರವಿ nĕravi. (= ನೆರವು). A union, a mass, a meeting, a crowd, a multitude, a flock, etc. (ಗುಣ್ಪು Šmd. II, Kk. 81, Šm. 95; ಗೊನ್ದಣಿ, ತೆರಳ್ಕೆ, ಸಾಲ್, etc., etc., ಶ್ರೇಣಿಕೆ Šm. 54, Kk. 17; ಮೊತ್ತ Bhn. 10; My.). ಬೆಸದರ ನೆರವಿ (ಕೊತ್ತಟಿ Šmd. I). ಕಾಗೆಯ ನೆರವಿ (ಕೊತ್ತಟಿ Kk. 82; Šm. 30). See Čpr. 1, after 101; 5, after 39; 5, 78; 8, after 4; Grj. 10, after 79; Bp. 22, 29; 57, 45; 58, 50; Čh. v. 78; Bh. 1, 10, 18; J. 7, 4; 28, 22. — ನೆರವಿದೊಱೆ. -ತೊಱೆ. A crowd that resembles a river (J. 6, 9).

ನೆರವು nĕravu. = ನೆರ 2 (Šmd. 56). A mass. ಎಲೇ, ಅಱಿಗಿ, ನಿನ್ನತಂ ನೆರವಿನೋದಿನ ಕಬ್ಬಿಪುನ್ ಓದದಿರ್ ಸುಧಾನಿಲಯದ ಮುನ್ದೆ! (Grj. 1, 26). 2, assistance, help (Čpr. 2, 54; 5, 98; Abh. P. 8, after 61; ಸಹಾಯ G.; C.). ಸರಸ್ವತಿ ಕೆಯ್ನೆರವಾಗೆ ಪೇಳ್ದಿಪಳ್ (Šmd. 109). ಸಂಕಟದಲ್ಲಿ ನೆರವಾಗುವವನೇ

ಗೆಳೆಯನು (B. 1, 8). ಅವರು ತಮ್ಮ ಗಣ್ಣನ್ದಿರಿಗೆ ಯಾವಾಗಲು ಕೈಯ್ಲಾದ ಮಟ್ಟಿಗೆ ನೆರವಾಗುವರು (3, 32). ನನಗೆ ನೀನು ನೆರವಾಗುವಿಯಾ? (4, 139). ಅವನು ನನಗೆ ನೆರವಾಗಿ ಬರುತ್ತಾನೆ, ಅವನು ನನ್ನ ನೆರವಿಗೆ ಬರುತ್ತಾನೆ (My.). See Grj. 3, after 91; Bp. 29, 30; 38, 58; 57, 13; Šsv. 5, 60; B. 4, 108. 153.

ನೆರಸು nĕrasu. = ನೆರಪು, etc. (Bh. 4, 5, 26).

ನೆರಹು nĕrahu. = ನೆರಪು, etc. (Bh. 1, 10, 15; Râm. 4, 6, 29; J. 17, 57). ನೆರಹಿದ ಉಪಕರಣ (ಪರಿವರ್ಹ, ಪರಿಚ್ಛದ Mr. 202). ಕುಱಿಗಳ ಹಿಣ್ಡು ಹಿಣ್ಡಂ ಛನ್ದದಲಿ ನೆರಹಿ (Bp. 28, 21).

ನೆರಳ್ nĕraḷ. = ನೆರಳು 2, etc. (J. 8, 5; 18, 23).

ನೆರಳು nĕraḷu. 1. = ನರಲ್, etc. (My.). See Prv. s. ಮುರುಳ.

ನೆರಳು nĕraḷu. 2. = ನೆೞಲ್ 1, etc. Shade, etc. (ಛಾಯ, ಪ್ರತಿಬಿಮ್ಬ Si. 446; ಛಾಯೆ G. 214; C.). ತಪ್ಪ ಸಾಧಿಸುವನಲ್ಲಿ ಪ್ಪವನೆ ಕಡುಹೆಡ್ಡ, ಸರ್ಪನ ಉಱಿಹೆಡೆಯು ನೆರಳಲ್ಲಿ ಸೇರಿದ ಕಪ್ಪೆಯನ್ತಕ್ಕು (Sp.). ಮುಱುಕವಿಲ್ಲದ ಹೆಣ್ಡತಿಗಿನ್ತ ಮರದ ನೆರಳು ಲೇಸು (Prv.). ಒನ್ದು ನಾಯಿ ಮಾಂಸದ ಕರಣೆಯನ್ನು ಕಚ್ಚಿ ಕೊಣ್ಡು, ಹಳ್ಳಾ ದಾಟುವಾಗ ನೀರೊಳಗೆ ತನ್ನ ನೆರಳು ಕಣ್ಡಿತು (B. 2, 4). ಆಲದ ಮರದ ನೆರಳು ದಟ್ಟವಾಗಿ, ಬಹು ತಮ್ಪಿರುತ್ತದೆ (2, 22). ಕೆಟ್ಟ ಹುಡುಗರ ನೆರಳಿಗೆ ಸಹ ಹೋಗ ಬಾರದು (4, 1).

ನೆರಿಕೆ nĕrikĕ. = ನೆರಕೆ. (My.).

ನೆರಿಗಿಲು nĕrigilu. = ನೆಗ್ಗಿಲ್, etc. (St. & Pl.).

ನೆರೆ nĕrĕ. 1. To join (v. i.), to be united; to come together, to assemble; to associate with (ಸಂಯೋಗ Šmd. Dh.; ಸಮ್ಮೇಲನ Šm. 102; T. ನೆರುಂಗು, M. ಞೆರುಙ್ಙು to be pressed, thronged). P. ps. ನೆರೆದು (Šmd. 264), ನೆರದು. ನೆರೆದ ಅರಸುಗಳನಿಬರುಮಂ ಕಾದಿ ಗೆಲ್ದನ್ ಒರ್ಬನೆ ಪಾರ್ಥಂ (Šmd. 122). ಜಾಣ್ ನೆರೆದುದು or ಜಾಣ್ನೆರೆದುದು (190). ಯಾಗಂಗಳಲ್ಲಿ ಬ್ರಾಹ್ಮಣರು ನೆರೆದು ಸ್ತುತಿಯಿಸುವ ಠಾವು ಅವುದಾನೊನ್ದುಣ್ಟು, ಅದು ಸಂಸ್ತಾವ (Nr.). ಪರಿಜನಂಗಳು ಪುರಜನಂಗಳು ನೆರದು (Bp. 46, 35). ಜಯಜಯಧ್ವನಿ ನೆರೆಯೆ (53, 26). ಸನ್ತೆ ನೆರೆಯುವದಕ್ಕಿನ್ತ ಮುಂಚೆ ಗಣ್ಟುಗಳ್ಳರು ನೆರೆದರು (Prv.). ಸನ್ತೆ or ಸಭೆ ನೆರೆಯಿತು (My.). See Čh. v. 78; Čpr. 5, 55. 60. 61; 7, after 4; Bh. 1, 10, 89; 2, 13, 31; Bp. 27, 5; 58, 49; 61, 3; Râm. 1, 13, 12; Ršv. 6, after 11 (twice); 13, after 70; J. 1, 12; 11, 17; 16, 4; 18, 38. **2,** to have sexual intercourse (ಸುರತ Šm. 102; Čpr. 2, 40; 4, 80; 6, 79. 83; 8, after 67; Bp. 35, 30. 31; 40, 16; 42, 32; Ršv. 11, 94. 105; J. 2, 65; 5, 56; 26, 25; 28, 5; Si. 182; My.).

ನೆರೆ nĕrĕ. 2. = ನೆರ 1, etc. P. p. of ನೆರೆ 1, in ನೆರೆ ನೆರೆದು (Ršv. 6, after 11; 13, after 77; J. 3, 37; 19, 5; 29, 46).

ನೆರೆ nĕrĕ. 3. = ನೆರ 2, etc. Adjoining; proximity, neighbourhood; union, company (coition; ಕೂಟ Šmd. Dh.; Šm. 102). ಪಾರಿಜಾತಂ ನೆರೆಯೊಳ್ ಇರುತಿರೆ ಭೂರುಹಂಗಳ ನೆೞಲನರ್ಥಿಸಿ ಸಾರಿದನ ಪೊಲು (Bp. 60, 40). ಕೊಂಕುಣಿಲ್ಲಿ ಕುರು ಸಲ್ಲ, ಕೊಂಕಣಿಗರ ನೆರೆ ಸಲ್ಲ.—ತಿಗಳ ತಾ ಕೆಡುತ್ತಾ ಏಱು ನೆರೇ ಕೆಡಿಸಿದ (Prvs.). See Sp. s. ತರಹೀನ; Prv. s. ಅಭಿಚಾರಿ. — ನೆರೆ ಕರೆ. Neighbours and people within calling (My.). — ನೆರೆಮನೆ. = ನೆರಮನೆ. (B. 1, 9; 2, 7; 3, 59; My.). — ನೆರೆಯವ. -ಅವ. A neighbour (My.). — ನೆರೆಯುಪ್ಪರಿಗೆ. -ಉಪ್ಪರಿಗೆ. An adjoining palace (Bh. 1, 7, 14). — ನೆರೆಯೂರ್. -ಊರ್. = ನೆರೆವೂರ್. (V. 9, after 69). — ನೆರೆವೂರ್. -ರು. = ನೆರವೂರು. (Bp. 14, 2; 16, 1; 46, 5; B. 2, 13). — ನೆರೆಶಬ್ದ. A word with an altered initial joined to another to amplify its meaning (My.). — ನೆರೆಹಳ್ಳಿ. A neighbouring hamlet (B. 3, 121). — ನೆರೆ ಹೊರೆ. dupl. (J. 5, 59; Abhâ. 2, 52). ನೆರೆ ಹೊರೆಯ ಹಲವು ರಾಜ್ಯಗಳನ್ನು ಜಯಿಸಿ (B. 4, 218). — ನೆರೆ ಹೊರೆಯವರು. = ನೆರ-. (B. 2, 41; 3, 28; 4, 153; My.).

ನೆರೆ nĕrĕ. 4. (ನೆಱೆ). To move about, to whirl about, to be confused, to be eager or possessed of impetuous ardour (ಸಮ್ಭ್ರಮ Šs.; see ನಿಟ್ಟನೆ).

ನೆರೆ nĕrĕ. 5. = ನರೆ 1. To become grey. ನೆರತ ಕೂದಲು (My.). ಕೂದಲು ನೆರತು ಹೋಗುವಿಕೆ (ಪಲಿತ Si. 195).

ನೆರೆ nĕrĕ. 6. = ನರೆ 2. Greyness (J. 10, 38; My.).

ನೆರೆಪು nĕrĕpu. = ನೆರಪು, etc. To bring together, etc. (ಸಂಗ್ರಹ Šmd. Dh., o. r. ನೆರಪು; 402).

ನೆರೆವು nĕrĕvu. 1. = ನೆರೆಪು, etc. (Bp. 40, 89).

ನೆರೆವು nĕrĕvu. 2. = ನೆರವು, etc. Assistance (Bp. 61, 23).

ನೆಱ nĕṟa. 1. = ನೆಱು. A vital point, member or organ; a secret (ಜೀವಸ್ಥಾನ, ಮರ್ಮ Hlâ.; T. ನೆಱ, the vitals; a swelling on the hip, or under the arm, or on the neck, caused by a boil, or wound in another part of the body). See ಕಡು-; Abh. P. 11, after 140; 14, after 100.

ನೆಱ nĕṟa. 2. = ನೆಱೆ 3. See ನೆಱವಣಿಗೆ. ನೆಱಂ, completely, altogether (Čpr. 7, 48). — ನೆಱಜಾಣ. Replete with wisdom (My.).

ನೆಱತೆ nĕṟatĕ. Fullness, completeness (ಪರಿಪೂರ್ಣ, ಭೋಗ Mr. 454, o. r. ಅಭೋಗ, probab'; ಆಭೋಗ; Bh. 8, 5, 15; Râm. 6, 53, 27).

ನೆಱದು nĕṟadu. = ನೆಱೆದು. P. p. of ನೆಱೆ 2.

ನೆಱನ್ nĕṟan. = ನೆಱಲ್. — ನೆಱನೆನೆ, with a crash (Abh. P. 9, 67).

ನೆಱಪು nĕṟapu. To complete (Čpr. 3, 73; 4, 18; 7, 26. 69. 74).

ನೆಱಯಿಸು nĕṟayisu. To make complete; to supply. ತದ್ಭಾಷೆಯ ಕೊಱತೆ ನೆಱಯಿಸುವಂ (Bp. 36, 13).

ನೆಱಲ್ nĕṟal. (= ನೆಱೆ 1, etc., ನೇಲ್) To hang down motionless or powerless; to faint (ನಿಶ್ಚೇಷ್ಟಾವಲಮ್ಬನ Šmd. Dh.; ಜೋಲ್ Šmd. II; ನೇಲ್ Kk. 74; T., M. ನಿಱು, to weigh, poise, balance). See Kâvy. II, 1, 25; Čpr. 5, 17; 7, 102; 8, 7.

ನೆಱವಣಿಗೆ nĕṟa-vaṇigĕ (or aṇigĕ). = ನೆಱೆವಣಿಗೆ. Fullness, completeness; accomplishment; nicety, propriety; goodness, good state (ಅಭೋಗ, ಪರಿಪೂರ್ಣತೆ Hlâ.; ಚೊಕ್ಕಳಿಕೆ Šmd. 387 Mdb. Cm.: [illegible] Bhn. 34; see Bh. 5, 11, 8; 6, 6, 6; 8, 5, 15; 10, 7, 31; Râm. 6, 47, 26). ಆಚಾರದ ಓದಿನ ನೆಱವಣಿಗೆ (ಬ್ರಹ್ಮವರ್ಚಸ Hlâ.).

ನೆಱವು nĕṟavu. Fullness, completeness. (T., M. ನಿಱವು; T. also ನಿಱೈವು). — ನೆಱವೇಱಿಸು. -ಏಱಿಸು. To make complete, to fulfil, to accomplish (My.; T. ನಿಱವೇಱ್ಱು). ಇದನ್ನಷ್ಟು ನೆಱವೇಱಿಸುವದಕ್ಕಾಗಿ (B. 4, 18). ನೆಱವೇಱಿಸಲ್ ಪಟ್ಟಿರುವದು (ಸಿದ್ಧ, ನಿರ್ವೃತ್ತ, ನಿಷ್ಪನ್ನ Si. 382). ಮಾತನ್ನು ನೆಱವೇಱಿಸು (My.). — ನೆಱವೇಱು. -ಏಱು. To be completed, fulfilled or accomplished, as a work, a thought, a word, etc. (My.; Si. 404; Tĕ., T.).

ನೆಱಿ ne̤ri. 1. = ನಿಱ 2, etc. (My.). ನೆಱಿಯುಡಿಗೆಗಳ್ (Bh. 1, 10, 2). ಹೊಂಗಳ ಸೀರೆನೆಱಿಯ ಗಜ್ಜು (ಸೀವಿ Si. 459).

ನೆಱಿ ne̤ri. 2. = ನಿಱ 3. — ನೆಱಿಮುಗಿಲು. = ನಿಱಿಮುಗಿಲ್. (Bh. 8, 23, 36).

ನೆಱಿ ne̤ri. 3. = ನೆಱೆ 1. To suspend (Čpr. 1, after 101; 8, after 44).

ನೆಱಿಗೆ ne̤rigĕ. = ನಿಱ 2, etc. (My.).

ನೆಱು ne̤ru. = ನೆಱ 1. A vital organ, etc. (ಮರ್ಮ Nr.). *Cf.* ನೆಱೆ ಕೊಳ್ No. 2 s. ನೆಱೆ 3.

ನೆಱೆ ne̤rĕ. 1. = (ನೆಱಲ್), ನೆಱ 3. To hang down, to be suspended. ನೆಱದನೆನೆ ಜೋಲ್ವಂ (Kk. 91).

ನೆಱೆ ne̤rĕ. 2. = ನಱ. To become entire, full, complete, accomplished, ready, perfect, full-grown, mature, sufficient; to arrive at the age of menstruating (ಸಮುಗ್ರತ್ತ Šmd. Dh.; ಸಮುಗ್ರತೆ Šm. 116; ಸಮ್ಪೂರ್ಣ Kk. 71; My.; T. ನಿಱೈ; M. ನಿಱ; *cf.* ನಿಱ 1); to be realized, to occur (ಬರ್ Šmd. 183 Cm.); to become replete or plenteous, to prevail (ಪೆರ್ಚುಗೆಯಾಗು Šmd. 3 Cm.; ಬಹುಲ Šm. 116; T., M.); to suffice (Bp. 59, 2). P. ps. ನೆಱದು, ನೆಱೆದು. ಮಿಯ್ಗುರಿಯಲ್ ಪಾಣ್ಣವರ್ಗ ನೆಱೆಸುವ್ವ ಬರಿಸಂ (Šmd. 73). ಮೆಯ್ ನೆಱೆಯಲ್ ಆದವಳು (ನಗ್ನಿಕೆ, ಅದೃಷ್ಟರಜಸಾರಿ); ಕುಡಲ್ ನೆಱೆದ ಕೂಸು (ವರ್ಯೆ, ಪತಿಂವರೆ Hlâ.). ಮೆಯ್ ನೆಱೆಯಲ್ ಆದವಳು (ಗೌರಿ, ನಗ್ನಿಕೆ, ಅನಾಗತಾರ್ತವೆ Nr.). ನೆಱೆದ ಪೆಣ್ (ತುಱುಮಿಣ್ಡೆ Šm. 73). ಹೆಣ್ಣು ನೆಱೆಯಿತು, ಅವಳು ನೆಱೆದವಳು (My.). See Šmd. 118. 135. 291; Čpr. 1, 46. 48. 81. 95; 2, 16; 4, 18. 62; Abh. P. 4, after 53; Bp. 8, 8; 35, 32; Grj. 9, 51; Č. Bp. 11, 4; Rsv. 4, 117; 5, 65; 8, 98. 116; J. 11, 17; Si. 184. 195. 422; ಎಡೆ ನೆಱೆ.

ನೆಱೆ ne̤rĕ. 3. = ನೆಱ 2, ನೆರ್. Completeness; maturity, etc.; (a vital organ, *cf.* ನೆಱು, etc.);— completely, perfectly, fully, well, exceedingly, much, etc. (ಅಧಿಕ Šmd. 391; Šm. 58; ಬಹುಳ Šm. 116; ಚನ್ನಾಗಿ Šmd. 31. 70. 194 Cm.; occasionally used only to complete a verse, ಪಾದಪೂರಣಾರ್ಥಂ Čt. I, 19; II, 34). ಸೀನೆನಗೆ ವಸನ್ತನಾಗಮನಂ ನೆಱೆ ಸೂಚಿಸಿ (Čpr. 7, 41). See Šmd. 71. 230. 272; Čpr. 2, 20. 35. 81; Bp. 18, 18; 20, 22; 23, 27; 43, 50; Bh. 1, 5, 8; 2, 4, 12; Šm. 30. 53. 73. 83. 109. 119; Rsv. 5, 21. 44; 6, 36; J. 2, 12; 25, 5; 28, 4. 18; 29, 49; Dp. 54. **2,** a great flow of water (in a river), a flood (My.). —ನೆಱೆ ಕೊಳ್. To seize or use the whole substance or essence of anything, to use for one's self to the utmost (ಸರ್ವಸ್ವಹರಣ Šmd. Dh.; Sâstrasâra in W. v. 1254; Rsv. 5, after 55). 2, = ನೆಱೆಗೊಳ್, to pierce or penetrate the vitals, to pierce to the quick (ಮರ್ಮಭೇದ Šmd. Dh., o. r. ವರ್ಮಭೇದ; Abh P. 14, 60). — ನೆಱೆಗಚ್ಚು. -ಕಚ್ಚು. To bite excessively (Râm. 5, 8, 59). — ನೆಱೆಗೊಳ್. = ನೆಱೆ ಕೊಳ್ No. 2. (Čpr. 8, 65; Abh. P. 9, 158; Kâvy. II, 1, 25). — ನೆಱೆಜಾಣ. = ನೆಱ-. (My.). — ನೆಱೆದಿಂಗಳ್. = ನೆಱೆವೆಱೆ. (Abh. P. 5, 66; J. 30, 9). — ನೆಱೆವೆಟ್ಟು. -ಬೆಟ್ಟು. A puncheon, a tool having a figure on it with which impressions are made (ಪಡಿಯಚ್ಚು Šm. 68; Kk. 47). — ನೆಱೆವೆಱೆ. -ಪೆಱೆ. The full moon (Rsv. 11, 143; V. 5, 1[illegible]).

ನೆಱೆ ne̤rĕ. 4. = ನಿಱ 2, etc. (My.). — ನೆಱೆವಿಡಿ. = ನಿಱಿವಿಡಿ. (Bh. 4, 8, 12).

ನೆಱೆಯುವಿಕೆ ne̤rĕyuvikĕ. Menstruation to take place. ಹೊಂಗಳು ತಿಂಗಳು ತಿಂಗಳಿಗೆ ಮೆಯ್ ನೆಱೆಯುವಿಕೆ (ಋತು Si. 422, *only* in Si.).

ನೆಱೆವಣಿ ne̤rĕ-vaṇi (or aṇi). = ನೆಱೆವಣಿಗೆ. (ಜೊಕ್ಕಳಿಕೆ Šmd. 387).

ನೆಱೆವಣಿಗೆ ne̤rĕ-vaṇigĕ (or aṇigĕ).= ನೆಱವಣಿಗೆ. (Šmd. 219).

ನೆರ್ nĕr. = ನೆಱೆ 3, etc. — ನೆಗಿರಱೆಯ. -ತಱೆಯ. A full (*i. e.* perfectly equal) younger brother (Abh. P. 14, 22).

ನೆರ್ನೆರ್ nĕrnĕr. = ನಿರ್ನಿರ್ q. v., etc.

ನೆರ್ನೆರ nĕrnĕra. = ನೆರ್ನೆರ್, etc. (ನಿರ್ನಿರ, ನಿರ್ನಿಮಿತ್ತಂ Kk. 93; see Šmd. s. ನಿರ್ನೆರ).

ನೆರ್ಪು nĕrpu. (Šmd. 50). (= ನೆಪ್ಪ 2).

ನೆರ್ಮು nĕrmu. = ನೆಮ್ಮು 1. (Abh. P. 5, 115; 16, 14; Šsv. 3, after 35). ತರೀರಿಯಂ ನೆರ್ಮಿದ ಕುತ್ತಂ (Sâstrasâra in W. v. 1269).

ನೆಲ್ nĕl. (Šmd. 58). = ನೆಲ್ಲು. Paddy, rice in its husk, rice as growing; a grain of paddy (ವ್ರೀಹಿ, ಸ್ತಮ್ಬಕರಿ Hlâ.; ಅಣು Hlâ.; ಆಶು, ವ್ರೀಹಿ Nn. 86; M. ನೆಲ್; T. ನೆಲ್, ನೆಲ್ಲು). ನೆಲ್ಲುಂ ಕೌಂಗುಂ (Šmd. 84. 256). ನೆಲ್ಲಗದ್ದೆ (ವ್ರೈಹೇಯ Hlâ.). ಒನ್ದು ನೆಲ್ಲನಿತು (Bp. 40, 77).

ನೆಲ nĕla. 1. (fr. ನಿಲ್). Ground, soil; land; ground, floor; a portion of the earth: a country, a kingdom; the earth (ಅಲ್ಪವಸುಧೆ Bhn. 48; ರಾಜ್ಯ Čt. II, 63; ಇಳೆ 44; ಎಳೆ, ಬುವಿ, ಪೊಡವಿ, etc., ಮೇದಿನಿ Šm. 37; ಪೊಡವಿ, ಬೂವಿ, etc., ಧರೆ Kk. 16; C.; T., M. ನಿಲ; Tě. ನೆಲವು). ನೆಲದಿನ್ದುಮ್ಬಂ (Šmd. 63). ನೆಲದೊಳಗುಳ್ಳ ಪ್ರಾಣಿಗಳೆಲ್ಲಂ ನೀರೊಳಗೊಳವು (Hlâ.). ತಗ್ಗಿದ ನೆಲ (ಪ್ರವಣ); ನೆಲದಲ್ಲಿ ಅಡಿಗಡಿಗೆ ಪೆಲ್ಲಹಿಸುವುದು (ಉಲಿತ, etc. Nr.). ಜವುಗಿನ ನೆಲ (ಪಿಪ್ಪಲ, ಶ್ಲಕ್ಷ್ಣ Nn. 62). ಉದ್ದದ ನೆಲ (ತೆವರ್ Čt. II, 35). ನೆಲದ ಪವಣ್ (ಮುತ್ತರ್ II, 102). ಯಾವ ಪುರುಷನು ವ್ರತದ ವರದಿನ್ದ ನೆಲದಲ್ಲಿ ಮಲಗುತ್ತಾನೋ, ಅನ್ತಾವನು ಸ್ಥಾಣ್ಡಿಲಶಾಯಿ, etc. (Si. 250). ಉಟಿದೇ ಇರುವ ನೆಲ (ಖಿಲ 100). ಗೆಯ್ದ ನೆಲ (ಸೀತ್ಯ, ಕೃಷ್ಟ, ಹಲ್ಯ 301). ನೆಲನುಮ್ ಆಗಸಮಿನ್ತು ಹಾಳಾಹಳದಹನಮಯಮ್ ಆಗಲ್ (Bp. 58, 64). ನೆಲಕ್ಕೆ ಹಲ, ರಾಜ್ಯಕ್ಕೆ ಬಲ.—ನೆಲದಲ್ಲಿ ಉಣ್ಣುವವನ ಸಂಗಡ ಎಲೇ ಕೇಳದ ಹಾಗೆ.—ನೆಲದ ಸಂಗತ ಸಾಲ ಮಾಡಿ, ಪಲಾಯನ ಮಾಡಿದನ್ತೆ.—ನೆಲದೊಳಗೆ ಇದ್ದರೂ ಖಲನಿಗೆ ಹೆದರ ಬೇಕು.—ನೆಲ ಬಲವನ್ತನಿಗೆ, ಕುಲ ನೇಮವನ್ತನಿಗೆ.—ನೆಲು ಹಱದರೆ ನೆಲದ ಮೇಲೆ (Prvs.). See Šmd. 28. 94. 127. 130. 188. 225; Čpr. 1, 75. 89; 1, after 101; Bp. 42, 2; 45, 6; 52, 33; 54, 81; 55, 28. 29; 57, 48; 60, 4; Rsv. 5, 34. 42; 6, 34; Bh. 1, 8, 15. 59. 86; J. 4, 12; 17, 4; Dp. 1; B. 4, 14. 25. 26; 5, 295; Prvs. s. ಬಲ 2. — ನೆಲಕಂಟಿಗಿಡ. A small shrub, Naregamia alata W. A. (St. & Pl.). — ನೆಲಕಡಲೆ. A frequently cultivated annual plant, the earth-nut or Manilla-nut, Arachis hypogaea Lin. (St. & Pl.; My.; ಕಲಾಯ, ಸತೀಲಕ, ಹರೇಣು, ಖಣ್ಡಿಕ Si. 304, sic!). — ನೆಲಗಟ್ಟ. = ನೆಲಗಟ್ಟು. ನೆಲಗಟ್ಟಗಟ್ಟಿಸು. -ಕಟ್ಟಿಸು. (Bp. 53, 29). — ನೆಲಗಟ್ಟು. -ಕಟ್ಟು. = ನೆಲಗಟ್ಟು. Ground smoothed and plastered, pavement (ಕುಟ್ಟಿಮ, ಬದ್ಧಭೂಮಿಕ Hlâ.; ಕುಟ್ಟಿಮ Nr., Mr. 192; G.; My.; Bh. 2, 13, 25; B. 4, 121). — ನೆಲಗನ್ನ. -ಕನ್ನ. A hole made in the ground by burglars (Bp. 31, 5). — ನೆಲಗುಪ್ಪಳ. -ಕುಪ್ಪಳ. A creep-

er, Ipomaea digitata L. (Z. ad St. & Pl.; Batatas paniculata Chois., St. & Pl.; Convolvulus paniculatus Lin.; Si. 161). — ನೆಲಗುಮ್ಮ. A kind of bird (S. Mhr.). — ನೆಲಗುಳ್ಳ. A kind of prickly nightshade, Solanum jacquini Lin. (Solanum xantocarpum Schr. & W., ನಿದಿಗ್ಧಿಕೆ, ಕಣ್ಟಕಾರಿಕೆ, ವ್ಯಾಘ್ರಿ Hlâ.; ನಿದಿಗ್ಧಿಕೆ, ಸ್ಪೃತಿ, ವ್ಯಾಘ್ರಿ, ವೃಹತಿ, ಕಣ್ಟಕಾರಿಕೆ, ಕುಲಿ, ಕ್ಷುದ್ರೆ, etc. Nr.; My.). See ಕಿಱುಯ-, ಬಿಳಿಯ-. — ನೆಲತಾಟಿ. = ನೆಲತಾಳೆ, ನೆಲದಾಟ್. (Si. 151). — ನೆಲತಾಳೆ. = ನೆಲದಾಟ್. (ಮುಸಲಿ, ತಾಲಮೂಲಿಕೆ Si. 151). — ನೆಲದಗಲ. -ಅಗಲ. The breadth of the ground, etc. (Č. Bp. 47, 47). — ನೆಲದಮರ್ದುಣಿಸು. = ನೆಲನಮರ್ದುಣಿಸಿ. (ಬ್ರಾಹ್ಮ Ks.). — ನೆಲದಾಣ್ಮ. -ಆಣ್ಮ. A king (J. 27, 39). — ನೆಲದಾವರೆ. 1. -ತಾವರೆ. The plant Hibiscus mutabilis Lin. (ಅವ್ಯಥೆ, ಅತಿಚರೆ, ಪದ್ಮಚಾರಿಣಿ, etc. Nr.). — ನೆಲದಾವರೆ. 2. -ಆವರೆ. = ನೆಲಾವರೆ. (St. & Pl.). — ನೆಲದಾಟ್. -ಟು. -ತಾಟ್. The plant Curculigo orchioides Roxb. (ತಾಲಮೂಲಿಕೆ, ಮುಸಲಿ Nr.). — ನೆಲದೆಱೆಯ. -ಎಱೆಯ. A king (J. 14, 9). — ನೆಲನಮರ್ದುಣಿ. -ಅಮರ್ದುಣಿ. A Brâhmaṇa (ದ್ವಿಜ Kk. 34, o. r. ನೆಲನಮರ್ದುಣಿಸಿ). — ನೆಲನಮರ್ದುಣಿಸಿ. = ನೆಲನಮರ್ದುಣಿ. q. v. — ನೆಲನಾರಿಂಗ. = ನೆಲಕಂಚ. (St. & Pl.). — ನೆಲನೆಲ್ಲಿ. A small herb, Phyllanthus madraspatensis L. (St. & Pl.). 2, a small creeping plant, Polygonum elegans Roxb. (Z.; My.). 3, = ಅಜ್ಝಟೆ, ಅಮಲೆ, ಝುಟೆ, ಎತುನ್ನಕ (G.; see ಕಿಱುಯ ನೆಲ್ಲಿ). — ನೆಲನೇಱಿಳೆ. (ನಾದೇಯಿ, ಭೂಮಿಜಮ್ಬುಕೆ Si. 130. 151). — ನೆಲನೊಡೆಯ. -ಒಡೆಯ. (Šmd. 240). The lord or owner of the land. — ನೆಲಬಣ್ಣಿಣಿ. The large black bee (Čt. I, 28). — ನೆಲಬೇವು. The plant Gentiana cherayta Roxb. (ಕಿರಾತತಿಕ್ತ, ಭೂನಿಮ್ಬ, ಅನಾರ್ಯತಿಕ್ತ Nr., Si. 157; ಭೂತಿಕ, ಭೂನಿಮ್ಬ 405; see Mr. 147 s. ಪನ್ನಂಗಿ). 2, the country chirayit, Andrographis paniculata Nees. (St. & Pl.; *cf.* ದೇಶಾವರ). — ನೆಲಮನೆ. An apartment in the ground, a cellar (My.; B. 4, 61; 5, 212; ಗುಪ್ತಿ G.; *cf.* ನೆಲಮಾಳಿಗೆ); a dungeon (ಸುರಂಗ G.). — ನೆಲಮಾಗಳಿಬೇರು. The plant Fluggea leucopyrus Willd. (St. & Pl.; My.). — ನೆಲಮಾಳಿಗೆ. = ನೆಲವಾಳಿಗೆ. A subterraneous apartment; a granary (My.; ಗರ್ತ, ಅವಟ, ನೆಲದೊಳಗಿರುವ ಕಣಜ, ಹಗೇವು Si. 75; ಗುಪ್ತಿ 426). — ನೆಲಮುಕ್ಕಜಕ್ಕಿ. A kind of demon (Šâstrasâra in W. v. 1269). — ನೆಲವರೆ. -ಅವರೆ. The plant Cassia abovata Collad., which is used like nĕlâvarĕ (Z.; My.). — ನೆಲವಲ. -ಬಲ. (Šmd. 386). A land-force. — ನೆಲವಾಳಿಗೆ. = ನೆಲಮಾಳಿಗೆ. (Čpr. 5, 105). — ನೆಲವೆಣ್. -ಪೆಣ್. The earth personified as a woman (Rŝv. 6, 24). ನೆಲವೆಣ್ಣುಮಗಳ್, Sîtâ (J. 18, 60). — ನೆಲಸಮ. = ನೆಲಸಮಾನ. (My.). — ನೆಲಸಮಾನ. Level with the ground (My.). ಪಟ್ಟಣದೊಳಗಿನ ಮನೆಗಳನ್ನೂ ಮೇಲುಪ್ಪರಿಗೆಗಳನ್ನೂ ಗುಡಿಗಳನ್ನೂ ಕೆಡವಿಸಿ, ನೆಲಸಮಾನ ಮಾಡಿಸಿದನು (B. 5; 45). — ನೆಲಸಮ್ಪಿಗೆ. A fragrant garden-flower, Kaemferia rotunda L. (St. & Pl.; My.). — ನೆಲಸರಿ. = ನೆಲಸಮಾನ. (Rŝv. 6, 34; My.). — ನೆಲಹಲಸು. The ananas (My.; S. Mhr. occasionally). — ನೆಲಹಾಗ. A sexton's fees (My.). — ನೆಲಹಾದಿ. A land-way (B. 4, 160). — ನೆಲಹಿಪ್ಪಲಿಬಳ್ಳಿ. A creeping herb, Lippia nodiflora Rich. (St. & Pl.). — ನೆಲಾವರಿಕೆ. -ಆವರಿಕೆ. = ನೆಲಾವರೆ. (St. & Pl.; My.). — ನೆಲಾವರೆ. -ಆವರೆ. (Šmd. 345). A plant furnishing the cathartic Senna leaves, Tinnevelly Senna, Cassia lanceolata Forsk. (St. & Pl.; T. ನೆಲ ಆವರೈ).

ನೆಲ nĕla. 2. = ನೆಲವು, etc. (My.).

ನೆಲಕಲ (nĕla-kala). (A man like a stone of the ground?): a miser (ಲೋಭಿ Šmd. 25; II; Čt. I, 10; II, 17; Kk. 84; Šm. 57).

ನೆಲವು nĕlavu. = ನೆಲಹು, etc. (My.).

ನೆಲಸು nĕlasu. To become established; to take up habitation, to settle; to stay, to stand; to obtain (ನೆಲೆಗೊಳ್ Šmd. 6. 94. 187. 205. 225. 289. 351 Cm.; ನಿಲ್ 65 Cm.; My.; T. ನಿಲ್ಚ, M. ನಿಲಿ). See Šmd. 69. 170. 352; Čh. v. 99. 183; Čpr. 1, 76. 131; 3, 55. 84; 6, 92; Abh. P. 9, 55; Grj. 10, 115; Bp. 38 sum.; 44, 4; 50, 25; 53, 21; 56, 47; 59, 55; Rŝv. 13, 4; J. 5, 65. 67.

ನೆಲಹು nĕlahu. (fr. ನೆಱ್1? or ನೇಲ್?). = ನಿಲ2, ನೆಲ2, ನೆಲವು, ನೆಲು, ನೆಲುವು, ನೆಲುಹು. A net-work of rope (or rattan), in which pots and other things are suspended from the beams of the house, or from either end of the pole on the shoulder of a carrier or porter (ಕಾಚ, ಶಿಕ್ಯ Hlâ.; My.). ಕಮ್ಬಿಯನ್ ಅವಲಮ್ಬಿಸಿರ್ಪ ನೆಲಹು (ವಿಹಂಗಿಕಾಲಮ್ಬಿ, ಕಾಚ); ನೆಲಹಿನಲ್ಲಿ ಇರಿಸಲ್ ಪಟ್ಟುದು (ಕಾಚಿತ, ಶಿಕ್ಯಿತ Nr.).

ನೆಲು nĕlu. = ನೆಲಹು, etc. (My.). ನೆಲು ಹಱಿದರೆ ನೆಲದ ಮೇಲೆ.— ನೆಲು ಹಱಿದು, ಬೆಕ್ಕಿನ ಮುನ್ದೆ ಬಿದ್ದ ಹಾಗೆ (Prvs.).

ನೆಲುವು nĕluvu. = ನೆಲಹು, etc. (My.). (ಕಾಚ, ಶಿಕ್ಯ Si. 412). ಕಾವಡಿದಬ್ಬೆಯಲ್ಲಿ ನೆಲುವು (ಶಿಕ್ಯ, etc. 344).

ನೆಲುಹು nĕluhu. = ನೆಲಹು, etc. ನೆಲುಹಿನ ಗಡಿಗೆ (Bp. 14, 11). ಕವ್ವಿಯ ನೆಲುಹು (43, 25).

ನೆಲೆ nĕlĕ. Standing; standing place; a place of residence, an abode; an apartment of a house; a story of a house; a place; place; ground; footing; basis: firmness; certainty; certain knowledge; bottom: a mystery, a secret (ಪೊದಿಲ್, ಇಕ್ಕೆ, ಹಕ್ಕೆ, ಚಾವಡಿ, ತಾಣ, ಬೀಡು, etc., ಆಶ್ರಯ Šm. 58; ನಿಜಾಗಾರ, ನಿಧಾನ 106; ಗವಿ, ಗರುಡಿ, etc., ಆಶ್ರಯ Kk. 64; ಸ್ಥಾನ Šmd. 24. 80 Cm.; ಕಕ್ಷಾನ್ತರ, ಪ್ರಕೋಷ್ಠ Hlâ.; My.; T. ನಿಲೈ, M. ನಿಲ). ಅವನಿಗೆ ನೆಪ್ಪ ನೆಲೆ ತಿಳಿಯುವದಿಲ್ಲ (My.). ಮನೆಯ ನೆಲೆ (ಗೃಹಭೂಮಿ, ವಾಸ್ತು Hlâ.). ನೆಲೆಯ ತೀವಿದ ಉಪ್ಪರಿಗೆ (ಸುಧಾಧವಲಿತ, ಸೌಧ Mr. 193). ಅದು ನೆಲೆ! (Bp. 10, 2; 53, 19). ನೆಲೆಯಿಲ್ಲದವನ ಮಾತು ಹೊಲೆಗಿನ್ತ ಹೆಚ್ಚು (Prv.). See Čpr. 1, 77; Abh. P. 3, after 17 and 26; 4, 11; 7, after 62; Bp. 1, 30; 10, 16; 40, 40; 43, 24; 57, 15; 60, 61; Râm. 1, 7, 14; J. 26, 41; 30, 41; ಕಲ್ನೆಲೆ. — ನೆಲೆಕಟ್ಟು. = ನೆಲೆಗಟ್ಟು. (J. 17, 23). — ನೆಲೆಗಟ್ಟು. -ಕಟ್ಟು. = ನೆಲಗಟ್ಟು. (ಕುಟ್ಟಿಮ, ನಿಬನ್ಧಾಭೂಮಿ Nr.; Č. Bp. 5, 48; My.). 2, a fixed abode. ಕೋಪವೆಮ್ಬುದು, ಕೇಳಿ, ಪಾಪದ ನೆಲೆಗಟ್ಟು! ಕೂಪದೊಳು ನೇಣು ಹಱಿದನ್ತೆ ನರಕಕೆ ಕೋಪಿ ತಾನ್ ಇಱಿವ (Sp.). — ನೆಲೆಗಾಣ್. -ಕಾಣ್. The bottom to appear;—to see the bottom (also figuratively, My.). ನೆಲೆಗಾಣ ಬಾರದುದು (ಅಗಾಧ Nr.). — ನೆಲೆಗಿಡು. -ಕಿಡು. The foundation to be destroyed, to be ruined (Abh. P. 6, 33). — ನೆಲೆಗೆಡಿಸು. -ಕೆಡಿಸು. To destroy one's firm position, station or welfare (J. 8, 32). — ನೆಲೆಗೆಡು. -ಕೆಡು. Footing, firm position, etc. to be impaired; to lose ground, etc. (J. 28, 40). — ನೆಲೆಗೊಳ್. -ಗೊಳ್ಳು. -ಕೊಳ್. To take footing; to take root, as plants, etc.; to take one's place; to occupy, as one's place; to touch the ground; to become established or settled; to take up habitation (ನೆಲಸು, q. v.; ನಿಲ್ Šmd. 24. 70 Čm.; My.). ಸಿರಿ ನೆಲೆಗೊಣ್ಡುದಲ್ಲಿ (Šmd. 145). ಚಿತ್ತದಲ್ಲಿ ನೆಲೆಗೊಣ್ಡುದು (ಎರ್ದೆವತ್ತಿದುದು Čt. II, 12). ವರ್ತಕನ ಮನಸ್ಸಿನಲ್ಲಿ ಅವನ

ಮೇಲೆ ಸಂಶಯವು ಪೂರಾ ನೆಲೆಗೊಂಡಿತು (B. 4, 169). ನಾಟುವಣ್ಣುಗಳು ನಾಲ್ಕೆಣ್ಟು ದಿವಸದಲ್ಲಿ ನೆಲೆಗೊಮ್ಬುವವು (Prv.). See Šmd. 209. 365; Bp. 17, 13; 46, 53; 47, 57; 50, 31; 54, 76; J. 6, 34; 18, 51; 24, 78. — ನೆಲೆಗೊಳಿಸು. -ಕೊಳಿಸು. To put down, to place, to establish, etc. (ಊಱು G.; Bp. 2, 11; Ršv. 6, after 11; J. 2, 64; 18, 37. 42; 30, 50; My.). ನೆಲೆಗೊಳಿಸೋಣ (ಸ್ಥಾಪನ G.). — ನೆಲೆದೀಪ. A lamp that is never removed from the niche in which it stands, and is adored when lighted, etc. (My.). — ನೆಲೆದೀವಿಗೆ. = ನೆಲೆದೀಪ. (My.). — ನೆಲೆ ನೆಲೆ. rep. (Č. Bp. 5, 3). — ನೆಲೆಮನೆ. An abode, a place of residence (Bp. 30, 22; Bh. 1, 8, 23). — ನೆಲೆಮಾಡ. = ನೆಲೆವಾಡ. An upper story with various apartments (Abh. P. 1, 124; Ršv. 11, after 124). — ನೆಲೆಮೊಲೆ. A stout, full breast (Šm. 118; Ršv. 7, 17; 10, after 57; J. 8, 20; 30, 7). — ನೆಲೆಯಾಗು. To become a basis, etc.; to be established, to get a firm footing, to obtain, to be in use (Čpr. 1, 93. 109; Bp. 24, 2; 51, 47; Šm. 118). — ನೆಲೆಯುಪ್ಪರಿಗೆ. An upper story with its various apartments (Bh. 1, 8, 69; 1, 7, 14). — ನೆಲೆವಡೆ. -ವಡೆ. To take footing, to stand (Šsv. 3, after 35). — ನೆಲೆವನೆ. -ಮನೆ. A house furnished with stories (ಕರುಮಾಡ, ಉಪ್ಪರಿಗೆ Šs.). 2, = ನೆಲೆಮನೆ (Bp. 19, 25; Râm. 4, 2, 40; J. 18, 1). — ನೆಲೆವಾಡ. = ನೆಲೆಮಾಡ. (J. 10, 50; V. 5, 5. 12). — ನೆಲೆವೀಡು. -ಬೀಡು. = ನೆಲೆಮನೆ. (Čpr. 1, 99). — ನೆಲೆವೆಱ್. -ಪೆಱ್. To become constant or continual (V. 14, 27). — ನೆಲೆವೆರ್ಚಿಸು. -ಪೆರ್ಚಿಸು. To increase (v. t., Čpr. 3, 102). — ನೆಲೆವೆರ್ಚು. -ಪೆರ್ಚು. To increase in or to obtain ground, to extend, to increase (v. i., Čpr. 6, 81; 7, 127; Abh. P. 3, 52; 9, 109; 14, 2. 71; 16, 42).

ನೆಲ್ಲಿ nĕlli. The emblic myrobalan, Phyllanthus emblica Lin. (Emblica officinalis Gaert., ಧಾತ್ರಿ, ಆಮಲಕಿ, ಶಿವೆ Hlâ.; Nr., except ಶಿವೆ; Mr. 122; ಆಮಲಕ Nn. 6; My.; Tĕ., T., M.; Bp. 45, 39; Šsv. 3, 32; J. 19, 6). See ಅಡವಿ-, ಅರ-, ಅಡ-, ಕಿಱಿಯ-, ಕಿಱು-, ನೆಲ-, ಭೂ-. — ನೆಲ್ಲಿ ಚಟ್ಟು. = ಚಟ್ಟು 3. (My.). — ನೆಲ್ಲಿಯ ಕಾಯಿ. Its fruit (ಧಾತ್ರೀಫಲ Nn. 166; B. 2, 17). ನೆಲ್ಲೀ ಕಾಯಿ ಹುಲ್ಲಿಗೆ ಅದೀತೇ?—ಗಟ್ಟದ ಉಪ್ಪು, ಬೆಟ್ಟದ ನೆಲ್ಲೀ ಕಾಯಿ (Prvs.). — ನೆಲ್ಲಿಯ ಮರ. The nĕlli tree (ತಿಷ್ಯಫಲೆ, ಆಮಲಕಿ, ಅಮೃತೆ, ವಯಸ್ಥೆ Nr.; Si. 135; ಅಕ್ಷ Nn. 37; ತ್ರೀಪರ್ಣಿ Si. 420). — ನೆಲ್ಲಿಹಿಣ್ಡಿ. A kind of nĕlli pickles (My.).

ನೆಲ್ಲು nĕllu. = ನೆಲ್. (ಶಾಲಿ, ವ್ರೀಹಿ, ಸ್ತಮ್ಬಕರಿ Mr. 373; My.; Si. 304. 305. 434; ಭತ್ತ, ವ್ರೀಹಿ G.; Oryza sativa L., Z.). ಬೇಗ ಬೆಳೆವ ನೆಲ್ಲು (ಪಾಟಲ); ಕರಿಯ ನೆಲ್ಲು (ಅಣು); ಷಷ್ಟಿಕಮೆಮ್ಬ ನೆಲ್ಲುಗಳು ಬೆಳೆವ ಭೂಮಿ (ಷಷ್ಟಿಕ್ಯ); ನೆಲ್ಲು ಕಱವೆಯೂ ಬೆಳೆವ ಭೂಮಿ (ವ್ರೈಹೇಯ, ಶಾಲೇಯ Nr.). ನೆಲ್ಲಪ್ಪ ಗದ್ದೆ (ವ್ರೈಹೇಯ; Mr. 94). ಸಿತಶಾಲಿ ಕೆಂಗಡಿವೆ ಕೆಮ್ಬುತ್ತಿ ರಾಜಾನ್ನಮ್ ಬಯಿಲಮ್ ಎಮ್ಬಿವು ನೆಲ್ಲ ಭೇದಂಗಳಕ್ಕು (373). ರಾಜಾನ್ನ ನೆಲ್ಲಿಂಗೆ (Bp. 27, 16). ನೆಲ್ಲನ್ನು, ನೆಲ್ಲಿನ, ನೆಲ್ಲಿಗೆ (My.). ನೆಲ್ಲೂ ಮೊಸರೂ ಕಲಸಿದ ಹಾಗೆ (Prv.). — ನೆಲ್ಲಕ್ಕಿ. -ಅಕ್ಕಿ. Rice (My.). ನಲ್ಲನ್ ಒಲ್ಲೀ ಒಲ್ಲ, ನೆಲ್ಲಕ್ಕಿಬೋನೊಲ್ಲ, ಅಲ್ಲನೆ ಒಲ್ಲ, ಮೊಸರೊಲ್ಲ; ಯಾಕೊಲ್ಲ? ಇಲ್ಲದಕ್ಕೊಲ್ಲ (Sp.). — ನೆಲ್ಲುಊಬುಮುಳ್ಳು. A bristle of a beard of rice (ಕಂಶಾರು, ಧಾನ್ಯಶೂಕ Si. 448). — ನೆಲ್ಲುಗದ್ದೆ. A paddy-field (ವಪ್ರ, ಕೇದಾರ, ಕ್ಷೇತ್ರ Si. 302). — ನೆಲ್ಲುಹುಲ್ಲುಸರವೆ. A band of paddy straw (My.). ನೆಲ್ಲುಹುಲ್ಲುಸರವೆ ಹಾಕು, to tie a cord of paddy straw to the right leg as a challenge, expressing that all opponents are like straw (My.).

ನೆವ nĕva. = ನೆಪ, ನೆವನ, ನೆವನು. Tbh. of ನಿಭ. A pretence, a pretext, a plea (ಅಪದೇಶ Nr.; Si. 460; ನಿಭ, etc. Hlâ.; ವ್ಯವಧಾನ, ತಿರೋಧಾನ, ಅಪವಾರಣ Mr. 435; ಕೂಟ, ಕಪಟ Nn. 152; C.; Tĕ.; ನಿಮಿತ್ತ G.). ಒನ್ದಱಿನ್ದ ತಿಳಿಸದನ್ತೆ ಮತ್ತೊನ್ದಱನ್ನು ತೋಱುವದು ಮುನ್ದಾದ ನೆವವು (ವ್ಯಾಜ, ಅಪದೇಶ Si. 72). ನೆವದಿನ್ದ ಹೋದರೆ ನೋವು ತಪ್ಪೀತೇ? (Prv.). See Čpr. 1, after 101; 2, 13; 8, 29; Bp. 3, 18; 5 sum.; 35, 44. 48; 36, 47; 38, 19; 47, 19. 25. 56; J. 3, 12; 19, 50. — ನೆವಂಗೊಳ್. -ಂ-ಕೊಳ್. = ನೆವ ತೆಗೆ. (Ršv. 4, after 14). — ನೆವ ತೆಗೆ. To take a pretext, to hold out as a pretext (B. 4, 80; My.). — ನೆವ ಮಾಡು. To make a pretext, to pretend (B. 4, 6; My.). — ನೆವ ಹೇಳು. To utter a pretext, etc. (B. 4, 6; My.).

ನೆವನ nĕvana. = ನೆವ, etc. (My.; B. 1, 14).

ನೆವನು nĕvanu. = ನೆವನ. (My.; G. 87. 302). Abl. ನೆವನಿನ್ದ (My.).

ನೆವರು nĕvaru. = ನವುಲು 1. ನೆವರಿ ಕೊಣ್ಡು ಹೋಗುವವ ಬವರಕ್ಕೆ ಬನ್ದಾನೇ? (Prv.).

ನೆಸೆ nĕsĕ. 1. = ನೆಗೆ 1. (ಉತ್ಪವನ Šmd. Dh. in all MSS.; see remarks ad ನೆಗೆ 1).

ನೆಸೆ nĕsĕ. 2. = ನೆಗೆ 2. To go upwards, to jump, to jump or fly about. P. ps. ನೆಸದು, ನೆಸೆದು, ನೆಸ್ತು. (Bp. 17, 2; 24, 44; 44, 7. 47; 49, 39; 57, 45). 2, to raise. ಬಾಲಂಗಳಂ ನೆಸದು (60, 32). — ನೆಸ್ತಾಟ. -ಆಟ. Jumping about (from anger). ನೆಸ್ತಾಟಕ್ಕೆ ಹೋಗಿ, ಮುಸ್ತಾಟ ಹೆಚ್ಚಿತು (Prv.). — ನೆಸ್ತಾಡು. -ಆಡು. To jump about (My.).

ನೆಸೆ nĕsĕ. = ನಸಿ, etc. (My.). ನೆಸೆ ಕೊಟ್ಟವ ಹಸೆ ಕದ್ದು ಕೊಣ್ಡು ಹೋದ (Prv.).

ನೆಳ್ಳು nĕḷḷu. 1. = ನರಲ್, etc. (My.).

ನೆಳ್ಳು nĕḷḷu. 2. = ನೆಱಲ್ 1, etc. (My.).

ನೆೞಲ್ nĕḻal. 1. = ನಳ್ಳು 3, ನೆರಳ್, ನೆರಳು 2, ನೆಳ್ಳು 2, ನೆೞಲು. Shade; shadow; shelter, protection (ಆತಪತ್ರಾದಿ ಛಾಯೆ Šmd. I; T. ನಿೞಲ್, ನೀೞಲ್; M. ನಿೞಲ್; Tĕ. ನೀಡ); a reflection, a reflected counterpart (ಜಲದರ್ಪಣ ಪ್ರತಿಬಿಮ್ಬ Šmd. I; T., M., Tĕ.). ನೆೞಲ್ಗಳ್ (J. 8, 5; 15, 2). ನೀರು ನೆೞಲಿಲ್ಲದ ಠಾವು (ಮರು Nr.). See Šmd. 284; Čpr. 1, 72. 90; 6, 47; 7, 125; 8, after 4; Abh. P. 7, 52; Bp. 20, 14; 42, 5; 51, 32; 60, 46; Ršv. 5, 42; 6, after 11; J. 30, 19; ತಣ್ಣೆೞಲ್, ಪಡಿ-. — ನೆೞಲ್ಗವಿ. -ಕವಿ. Shadow to spread over (J. 29, 45).

ನೆೞಲ್ nĕḻal. 2. = ನೇೞಲ್. A certain tree (ಒನ್ದು ಮರಂ Šmd. Dh.). ನೆೞಲ ಮರ (ಶ್ಯಾಮೆ, ಮಹಿಲೆ, ಲತೆ, ಗೋವನ್ದನಿ, ಗುನ್ದ್ರೆ, ಪ್ರಿಯಂಗು, ಫಲಿನಿ, ಫಲಿ, ವಿಷ್ವಕ್ಸೇನೆ, ಗನ್ಧಫಲಿ, ಕಾರಮ್ಭೆ, ಪ್ರಿಯಕ Nr.; Si. 135, which adds = ಪ್ರೇಂಕಣಗಿಡ; *cf.* T., M. ಞಾವಲ್).

ನೆೞಲು nĕḻalu. = ನೆೞಲ್ 1, etc. (My.). ನೆೞಲುಗಳು (Bh. 1, 5, 5). ನೆೞಲು ಇದ್ದ ಮರ ಚನ್ದ, ನಳಿನವಿದ್ದ ಕೊಳ ಚನ್ದ.—ನೆೞಲು ಇಲ್ಲದ ಬಱೀಲಿ ಬಲವುಳ್ಳವನಾದರೂ ಕಳಕಳಿಸನೇ?—ನೆೞಲು ಬೂರಗಕ್ಕಿಲ್ಲ, ಕೂಱಿಗೆ ನೀತಿಯಿಲ್ಲ.—ನೆೞಲು ಸೇರ ಬೇಕೆನ್ದು, ಹಬಿವಕ್ಕೆ ಹೋದ ಹಾಗೆ.—ನೆೞಲು ನೋಡಿ, ನಿಜ ಮಱೆತ (Prvs.). ಪಾಣ್ಡವರ ನೆೞಲಿರಲು ನಿನಗೆ ರಾಜ್ಯವನಾಳ್ವ ಫಲ ಜನಿಸಲಱಿಯದು (Bh. 1, 8, 32). See Bp. 19, 46; 22, 29; 32, 26; Bh. 2, 13, 28. — ನೆೞಲುಗೆಡು. -ಕೆಡು. Shadow to be impaired or gone (Bp. 60, 51).

ನೆೞಿಲ್ nĕḻil. = ನಿಱುಲು, ನಿಱಿ, ನೆಱಿನ್. A sound imitating that of breaking (*cf.* ನಱು 2; M. ಞೆಱುಕ್ಕು, to

crash, burst; ಇಾಟ್ಟು, ಇಾಳ್ಳು, ಇಾಡೆ, crashing, etc.; T. ಇಾಮಿರ್, to break). — ನೆಟಿಲೆನೆ. With a crash. ನೆಟಿಲೆನೆ ನೆಲ್ಕನೆಯೆ ಮುಱಿದುದು (Śmd. I).

ನೆಲ್ಕನೆ nĕlkanĕ. = ನೆಟಿಲೆನೆ, q. v.

ನೆಳ್ಗು nĕḻgu. = ನೆಕ್ಕು 2, etc. To sink, etc. (ಅನ್ತರ್ಲೀನ Śmd. Dh.; see M. s. ನಳ, ನೆಗ್ಗು 1; M. also ಇಾಮುಙ್ಙು = T. ನೆಮುಙ್ಙು).

ನೇ nê. 1. = ನೆಯ್ 1, etc. (My.). P. p. ನೇದು (My.; B. 5, 122). ಮಗ್ಗ ನೇಯಲಿಕ್ಕೆ ತಿಳಿಯದಿದ್ದರೂ ಹಗ್ಗ ನೇಯಲಿಕ್ಕೆ ತಿಳಿಯದೇ? (Prv.).

ನೇ nê. 2. = ನೆಯಿ 2, etc.

ನೇಕಾಱ nê-kâṟa. = ನೆಯಿಕಾಱ. (B. 4, 178. 188).

ನೇಗಲ್ nêgal. ನೇಗಲು. = ನೇಗಲ, ನೇಗಲಿ, ನೇಗಿಲ್, ನೇಗಿಲ. Tbh. of ಲಾಂಗಲ. A plough (ಲಾಂಗಲ, etc. Si. 303; My.; Tĕ. ನಾಗಲಿ, ನಾಗೇಲು; T. ಇಾಂಜಲ್, ಇಾಯಿಲ್, ನಾಂಜಲ್; M. ಇಾಙ್ಙೋಲ್, ನೆಙ್ಙಲ್; Mhr. ನಾಗರ, ನಾಂಗರ). ನೇಗಲ ಮೂಗು (ಪೋತ್ರ Si. 452). ನೇಗಲಿನ್ದ ಉಳುವವನು (ಹಾಲಿಕ 320). ನೇಗಲು ಉತ್ತರೆ ಹೊಲ, ಹಾಲು ಇದ್ದರೆ ಗೋವು (Prv.). — ನೇಗಲ ಹೊಡೆ. To drive the plough: to plough (B. 5, 99; My.). ಹೊಲವನ್ನು ನೇಗಲ ಹೊಡೆದು ಹಸನು ಮಾಡಿ (5, 115).

ನೇಗಲ nêgala. = ನೇಗಲ್, etc. (ಗೋದಾರಣ G.).

ನೇಗಲಿ nêgali. = ನೇಗಲ್, etc. (S. Mhr.). ನೇಗಲಿಯ ತುದಿ (ಪೋತ್ರ); ನೇಗಲಿಯ ಕುಡ (ನಿರೀಶ, ಕೃಷಕ, ಕುಟಕ); ನೇಗಲಿಯ ದಿಣ್ಡು (ಈಶೆ, ಈಷ್ವರಿ); ಹೊಲದೊಳಗೆ ನೇಗಲೀ ಹೊಡೆದ ಗೆರೆ (ಸೀತೆ G.).

ನೇಗಿಲ್ nêgil. ನೇಗಿಲು. = ನೇಗಲ್, etc. (ಹಲ, ಲಾಂಗಲ, ಸೀರ Hlâ., Mr. 370, Nr.; ಗೋದಾರಣ Nr.; ಶೀರ G.; My.). ನೇಗಿಲ ಈಸು (ಹಲದಣ್ಡ Nn. 7). ನೇಗಿಲ ಮುಖ (ಪೋತ್ರ 151; Mr. 487). ನೇಗಿಲ ಸಾಲು (ಸೀತೆ Hlâ., Nr.). ನೇಗಿಲ or ನೇಗಿಲು ಹೊಡೆ (ಉಱು G.). ನೇಗಿಲ ಹೊಡದದ್ದು (ಹಲ್ಯ G.). ಪೊನ್ನ ನೇಗಿಲೊಳ್ ಉತ್ತು, ಗುಳ್ಳದ ಬೀಜಮಂ ನೆಱೆ ಬಿತ್ತುವ ಅನ್ದದಿ (Bp. 60, 50). ಊರ ಮುನ್ದೆ ನೇಗಿಲ ಹೂಡಿದರೆ ಕಣ್ಡ ಕಣ್ಡವರಿಗೆ ಒನ್ದೊನ್ದು ಮಾತು (Prv.).

ನೇಗಿಲ nêgila. = ನೇಗಿಲ್, etc. (ಸೀರ G.).

ನೇಗೆ nêgĕ. = ನೇಯಿಗೆ, etc. (My.).

ನೇಜಕ nêjaka. A man who washes. See ನಿರ್ಣೇಜಕ.

ನೇಜಯ nêjaya. A short spear, a lance (Rśv. 6, after 11; 6, 64. 65; H. ನೇಜಾ, ನೇಜಾ್ರ, ನೇರಿಜಾ, ನೇರುಜಾ; cf. ನಾರಾಚ).

ನೇಜಿ nêji. = ನಾಟಿ. (Tu.).

ನೇಟು nêṭu. (= ನೀಟು, q. v.). Straightness; directness; truth (My.). ಆಕಳುಗಳ ಕೋಡುಗಳು ನೇಟಾಗಿ ಅಥವಾ ಬಾಗಿ ಇರುವವು (B. 5, 18). — ನೇಟುಸುದ್ದಿ. Direct news; true news (My.).

ನೇಣ್ nêṇ. = ನೇಣು. A cord; a rope (ಶುಲ್ವ, ರಜ್ಜು, ವಟಾರ, ವಟ, ಗುಣ, ತನ್ತ್ರಿ Hlâ., Nr., Si. 383; Grj. 1, 95; J. 11, 27; 28, 47; T. ನಾಣ್, ನಾಣಿ, ಇಾನ್; M. ಇಾಣ್). ಮೂಗುನೇಣಿಕ್ಕಿದ ಹೋರಿ (ನಸ್ತಿತ, ನಸ್ಯೋತ Hlâ.). ಕುಱಿಯುರವಣಿಸಿ, ಕೊರಳ ನೇಣಂ ಪಱಿದು (Bp. 28, 9). — ನೇಣ ಹೊಲೆಯ. An outcast with a sacrificial cord: a Brâhmaṇa (Bp. 55, 18). — ನೇಣ್ಗೆಯ್ಯ. -ಕೆಯ್ಯ. He who has a rope or noose in his hand: Varuṇa (Śm. 13).

ನೇಣು nêṇu. = ನೇಣ್. (My.). ಎತ್ತುಗಳ ಮೂಗುನೇಣು (ನಾಸ್ಯೆ); ಗಾಳದ ನೇಣು (ಶಣಸೂತ್ರ, ಪವಿತ್ರಕ Nr.). ಕೋಪವೆಮ್ಬುದು, ಕೇಳಿ, ಪಾಪದ ನೆಲೆಗಟ್ಟು! ಕೂಪದೊಳು ನೇಣು ಹಱಿದನ್ತೆ ನರಕಕೆ ಕೋಪಿ ತಾನಿೞಿವ (Sp.). See Bp. 2, 28; 3, 49; 35, 6; 57, 79; Si. 76. 452. — ನೇಣಿನ ಹೊಲೆಯ. = ನೇಣ-. (Bp. 60, 9). — ನೇಣು ಹಾಕಿ ಕೊಳ್ಳು. To hang one's self. ನೇಣು ಹಾಕಿ ಕೊಳ್ಳುವವನ ಹತ್ತರ ಕೋಣ ಕೇಳಿದ ಹಾಗೆ. — ಅಪ್ಪ ನೆಟ್ಟ ಆಲದ ಮರನಾದರೆ ನೇಣು ಹಾಕಿ ಕೊಳ್ಳ ಬಹುದೋ? (Prvs.).

ನೇಣುಗ nêṇ-uga. (Śmd. 240). A man who deals in ropes.

ನೇತಾರ nêtâra. Tbh. of ನೇತೃ (Śmd. 104).

ನೇತಿ nêti. Tbh. of ನಿಯತಿ. — ನೇತಿಗಳೆ. -ಕಳೆ. To shake the fetters off, to reject. ದುರಿತವೆಳ್ಳನಿತನಾದರು ನೇತಿಗಳೆವುದೆ ಚನ್ದ! (Kp. III, 3).

ನೇತು nêtu. P. p. of ನೇಲು.

ನೇತೃ nêtṛi. = ನೇತಾರ. Leading; *a leader, a guide; a chief, a master.*

ನೇತೃತ್ವ nêtṛitva. Leadership. (My.).

ನೇತ್ರ nêtra. = ನೆತ್ತ, ಲೆತ್ತ. A leader; leading, conducting. 2, *the eye* (ಕಣ್ Nn. 8. 29; ಅಮ್ಬಕ, ಕಣ್ಣು 66; ಅಕ್ಷಿ Mr. 516). 3, the number two (ಎರಡು Mr. 347). 4, renowned (ಖ್ಯಾತ, ಪ್ರಖ್ಯಾತ 66). 5, a good quality (ಸದ್ಗುಣ, ಒಳ್ಳೆಹ ಗುಣ 66). 6, the string with which a churning-stick is whirled round (ಗುಣ 516). 7, *the root of a tree* (ಮೂಲ, ಬೇರುಗಳು 66; ಬೇರ್ Mr. 471). 8, a pendent root (ಕುಜಾತಜಟೆ, ಮರದ ಬೀೞಲು 66). 9, *cloth, or a kind of cloth* (ಚೇಲ, ವಸ್ತ್ರ 66; ಸೀರೆ 516; *cf.* ನೆಯ್ 1). 10, the areca-nut tree (ಪೂಗ, ಅಡಕೆಯ ಮರ 66). 11, N. of a mountain (ಕುಭೃತ್, ಪರ್ವತಭೇದ 66).

ನೇತ್ರಚ್ಛದ nêtra-č-čhada. *The eyelid.*

ನೇತ್ರತ್ರಯ nêtra-traya. Śiva (My.).

ನೇತ್ರಪುತ್ರಿಕೆ nêtra-putrikĕ. The pupil of the eye (Čpr. 6, after 64; Abh. P. 11, 164).

ನೇತ್ರಬನ್ಧ nêtra-bandha. Binding or blinding the eye (by magic, ಕಣ್ಣುಗಟ್ಟು Mr. 226).

ನೇತ್ರಮೂಲಿ nêtra-mûli. A small creeping herb with sky-blue flowers, growing on the roadside, Evolvulus alsinoides Lin. (ವಿಷ್ಣುಕಾನ್ತಿ, ಜಯನ್ತಿ Mr. 128).

ನೇತ್ರರುಜ್ nêtra-ruj. *Disease of the eyes.*

ನೇತ್ರವಿರೋಧಕರಣ nêtra-virôdha-karaṇa. Causing hinderance or opposition to the eye. See ಹರಳ್ಳು.

ನೇತ್ರವೈದ್ಯ nêtra-vaidya. An oculist (My.).

ನೇತ್ರಾಮ್ಬು nêtra-ambu. Eye-water: *tears.*

ನೇತ್ರಾವತಿ nêtrâvati. N. of a river in South Canara (My.).

ನೇತ್ರಾವಳಿ nêtrâvaḷi. A kind of sîrĕ (Bp. 11, 25).

ನೇತ್ರಿ nêtri. N. of a plant (ಕೈಕವಾಕು, ಮುಸ್ತಕ, ಚಮ್ಮೆ Mr. 140).

ನೇದಿಷ್ಠ nêdishṭha. *Very near, next.*

ನೇದು nêdu. P. p. of ನೇ 1.

ನೇಪಥ್ಯ nêpathya. (= ನೈಪಥ್ಯ). *An ornament, decoration, attire* (see Hlâ. s. ತುಡುಗೆ). 2, the postscenium; the tiring-room; a stage (ರಂಗಭೂಮಿ G.).

ನೇಪಾಲ nêpâla. ನೇಪಾಳ. N. of a country, Nepal (Bp. 6, 18; 61, 30). 2, the purgative-nut plant (Mhr.; see ಜಾಪಾಳ). ನೇಪಾಳದೇಶದ ಭೂಪಾಲನಾದರೆ ಗೋಪಾಳದವನಿಗೆ ಏನು? (Prv.). — ನೇಪಾಳದ ಬೇರು. A creeper, the vomiting swallow-wort, Tylophora asthmatica W. & A. (St. & Pl.).

ನೇಮ nêma. 1. Tbh. of ನಿಯಮ (Śmd. 357. 361; Bp. 43, 21; My.; Tĕ., T., Mhr.). A rule, an order, an appoint-

ment, etc. ನೇಮವಿದ್ದರೆ ವ್ರತ, ಹೋಮವಿದ್ದರೆ ಶೋಭನ.—ನೇಮ ಹೆಚ್ಚಿ, ಹೋಮ ಮೀಱಿ, ಶ್ವಾನನ ಹಾಗೆ ತಿರಿಗಾಡುವದಾಯಿತು (Prvs.). — ನೇಮುಗಲೆ. -ಕಲೆ. Prescribed skill (? J. 11, 21). — ನೇಮ ತೆಗೆ. To find out or lay down as a rule (B. 5, 171). — ನೇಮದ ವೀರಸಂಗವ್ವೆ. N. (Bp. 59, 6). — ನೇಮನಿಷ್ಠೆ. = ನಿಯಮನಿಷ್ಠೆ. (My.). — ನೇಮಮ್ಬೊಱು. -ಂ-ಪೊಱು. To take an observance upon one's self (Bp. 50, 53; 57, 34).

ನೇಮ nêma. 2. *Half;* a part, a portion. 2, fraud, deceit (*cf.* ನೆವ; Tĕ. ನೇವ).

ನೇಮಕ nêmaka. Tbh. of ನಿಯಾಮಕ. Ruling, etc.; a rule; an order, an appointment (My.).

ನೇಮಣೂಕ nêmaṇûka. Appointment, as to a post; allowance, stipend (Mhr.; B. 5, 269).

ನೇಮಣೂಕಿ nêmaṇûki. = ನೇಮಣೂಕ. (B. 5, 269. 272).

ನೇಮವನ್ತ nêma-vanta. Tbh. of ನಿಯಮವನ್ತ. A man who practises religious observances, caste-rules, etc. (My.). ನೆಲ ಬಲವನ್ತನಿಗೆ, ಕುಲ ನೇಮವನ್ತನಿಗೆ (Prv.).

ನೇಮಸ್ತ nêma-sta. Tbh. of ನಿಯಮಸ್ಥ. = ನೇಮವನ್ತ. (My.). 2, moderate, temperate (My.).

ನೇಮಿ nêmi. = ನೆಮ್ಮಿ, ನೇಹಿ. *The circumference or ring or felly or outer rim of a wheel. 2, a windlass or framework for the rope of a well. 3, the tree Dalbergia oujeinensis* Roxb. 4, a large tree, frequently cultivated for its eatable fruit, Mimusops kauki L. (St. & Pl.). — ನೇಮಿರಾಯ. N. (see s. ಅಮ್ಮ 1).

ನೇಮಿತ nêmita. Tbh. of ನಿಯಮಿತ. (My.).

ನೇಮಿಸು nêmisu. Tbh. of ನಿಯಮಿಸು. (Čh. v. 333; Bp. 2, 46; 57, 54; B. 4, 79. 143; 5, 171. 236; Šsv. 4, 46; J. 2, 66; My.). ನೇಮಿಸಲಾಱದ ಸೊಸೆಗೆ ಪಾಯಸವೇ ಕಹಿ (Prv.).

ನೇಯ್ nêy. 1. = ನೆಯ್ 1, etc. P. p. ನೇಯ್ದು (My.; B. 4, 188). ನೇಯ್ದದೇ ಬಟ್ಟೆ, ಉಱಿದದೇ ಕರೆ (Prv.).

ನೇಯ್ nêy. 2. = ನೆಯ್ 2. (ಆಜ್ಯ Šs.).

ನೇಯ nêya. = ನೆಯಿ 2, etc. See ನೇಯಕಾಱ.

ನೇಯ nêya. 1. = ನಾಯ 2. Tbh. of ನ್ಯಾಯ (Šmd. 368, o. r. ನಾಯ. 175).

ನೇಯ nêya. 2. To be conducted or guided, to be governed. See ಪ್ರಣೇಯ; ಕೆಯ್-.

ನೇಯಕಾಱ nêya-kâṟa. = ನೆಯಿಕಾಱ. (B. 3, 103).

ನೇಯಿ nêyi. = ನೇಯ್ 1, etc. P. p. ನೇಯಿದು (B. 4, 178; My.). ನೇಯಿದರೆ ಬಟ್ಟೆ, ಕಟ್ಟಿದರೆ ಮೊಟ್ಟೆ (Prv.).

ನೇಯಿಗೆ nêyigĕ. = ನೆಯಿಗೆ, etc. (My.). ನೇಯಿಗೆ ನೇಯ್ದರೆ ಕೂಡೀತಲ್ಲದೆ ನೆಗದರೆ ಕೂಡೀತೇ?—ನೇಯಿಗೆಯಾದರೂ ನಯವಿದ್ದರೆ ನಾಣ್ಯ ಸಿಕ್ಕೀತು (Prvs.). — ನೇಯಿಗೆಯವ. -ಅವ. = ನೆಯಿಗೆಯವ. (ತನ್ತುವಾಯ, ಕುವಿನ್ದ Si. 338; My.). ನೇಯಿಗೆಯವನ ಕೆಯ್ಯೂ ಓದುವವನ ಬಾಯೂ ಚುಱುಕಾಗಿರ ಬೇಕು.—ನೇಯಿಗೆಯವನ ಮಟ್ಟು ಕಟ್ಟುವವ ಬಲ್ಲ.—ನೇಯಿಗೆಯವನಿಗೆ ಯಾಕೆ ಕೋತೀ ಮಱಿ? (Prvs.).

ನೇಯಿಸು nêyisu. = ನೆಯ್ಸು. To cause to weave (My.; B. 4, 159).

ನೇಯು nêyu. = ನೇಯ್ 1, etc. (My.; B. 3, 9; 4, 165; Tĕ.). ನೇಯುವದು (ವಾಣಿ, ವ್ಯೂತಿ); ನೂಲುಕಣ್ಡಿಕೆಯನಿರಿಸಿ ನೇಯುವ ಕೊಱವಿ (ವೇಮ Si. 343).

ನೇಯ್ಗೆ nêygĕ. = ನೇಯಿಗೆ, etc. (My.).

ನೇರ್ nêr. 1. To cut, to cut off (ಕೃನ್ತನ Šmd. Dh.; ಅರಿ Šmd. II; Kk. 88; Čpr. 6, 49; 8, 41; Abh. P. 13, 47; *cf.* ನಿರಿ). ನೇರ್ದಂ (Šmd. 50. 55). ಬಾದುಣ್ಬೆನ್ದು, ಹತ್ತನೆಯ ತಲೆಯುಮಂ ನೇರ್ದಾರ್ಗಳ್ (288).

ನೇರ್ nêr. 2. To accord, to agree; to yield assent, to agree to. (T., M.). ಶಾರದೆ ವಿನಾಯಕರ್ ನೇರದೆ (Mr. 2).

ನೇರ್ nêr. 3. = ನೇರ, ನೇರು, ನೇರ್. Straightness, (length T.); union; agreement; harmony; rightness, propriety, fitness, order (T., M.; *cf.* ನಿಗುರ್; ನಿಱು 3, ನೀಟು; ನೆರೆ 1). ನೇರ್ಗಳ್ (Šmd. 51). — ನೇರ್ಗೋಲ್. -ಕೋಲ್. A long staff: a lance (J. 4, 35). — ನೇರ್ಪಡಿಸು. To make fit or nice (Šsv. 2, 60). — ನೇರ್ಪಡು. 1. To be united; to agree; to be fitting, to fit, to be proper, becoming, or pleasant (ಸಂಶ್ಲೇಷ Šmd. Dh.; ಅಮರ್ 76; ಪೊರ್ದುಗೆಯಾಗು 76 Cm.; T.: to occur, meet, appear, happen); to be obtained or gained (My.). ಅಘೋರರುಕಂ ನೇರ್ಪಡೆ, ಚೆಲ್ವಂ ಬೀಱಿ (Ršv. 13, 70). ವನದ ನಡುವೆ ದಿಟ್ಟಿಗೆ ಕಟ್ಟೆ ನೇರ್ಪಟ್ಟ ಬಾಳ ವೀರ ಕೇರ್ಗಟ್ಟು (Čpr. 7, after 92). See Abh. P. 10, 67; 12, 60; 16, 81; Ršv. 14, 47; Šsv. 1, 53. — ನೇರ್ಪಡು. 2. Propriety, etc. ನೇರ್ಪಡುಗಿಡು. -ಕಿಡು. Propriety, etc. to be lost (Abh. P. 7, 81; 9, 85). — ನೇರ್ವಡು. -ಪಡು. = ನೇರ್ಪಡು. 1. (Čpr. 3, 20. 85).

ನೇರ nêra. = ನೇರ್ 3. Straightness; propriety, etc., pleasantness. ಅವನು ಮಾಡುವ ಕೆಲಸ ಬಹಳ ನೇರ (My.). ಅವನ ಮಾತಿನ ನೇರವೆಷ್ಟೆನ್ತ ಹೇಳಲಿ? (My.). ನೇರದಿಂ ಸ್ವರಗೆಯ್ವ ಕಲಪಿಕೋಚ್ಚಾರದಿಂ...ತೀರದೆಲ್ಲೆಲ್ಲಿಯುಂ ನನ್ದನದೊಳು (J. 3, 28). — ನೇರ ನೇರ. rep. Quite proportionate (My.); face to face (My.). — ನೇರಬೊಟ್ಟು. A mark made with coloured clay upon the middle of the forehead of females exactly under the division of hair, either round, or slightly pointed towards that division (above which the baitalĕ bŏṭṭu is worn, ತಿಂಗಳಿಗೆ, ಜೂಳೆಯ Kk. 27; Šm. 72).

ನೇರಿತು nêritu. = ನೇರಿತ್ತು (Šmd. 96. 184). That which is straight, fit, proper or right (ಸರಲ, ಸರಿಸ Nn. 63; ಸೌಧ, ಸಸಿನ, ನಿರುತ 94; ಪ್ರತ್ಯಯ, ನಿರುತ 137; ನೇರ್ಪು Čt. I, 52; Abh. P. 11, 176). Plural ನೇರಿದುವು. ನೇರಿದುವು ಬೆರಲ್ (Šmd. 170).

ನೇರಿತ್ತು nêrittu. = ನೇರಿತು, q. v. ನೇರಿತ್ತಿದು (Šmd. 109). — ನೇರಿತ್ತಂ ಮಾಡು. To make proper, to correct (ತಿರ್ದು Šmd. 4 Cm.).

ನೇರಿದು nêridu. Propriety, rectitude, religious loyalty (ಭಕ್ತಿ Čt. I, 75). — ನೇರಿದ. -ಅ 3. (Šmd. 109. 184). A Brâhmaṇa (ಸಯ್ದ Šmd. II, Kk. 93; ದಿಮ್ಮಿದ, ಸಯ್ದ, ಗನಹ, ಇಳೆಯ ಪಿರಿಯ, ದ್ವಿಜ Kk. 34, Šm. 52; Abh. P. 4, 13). ನೇರಿದರಿರ್ (Šmd. 258). — ನೇರಿದಳ್. (Šmd. 109). A Brâhmaṇa woman.

ನೇರು nêru. = ನೇರ್ 3. (Ršv. 5, after 19).

ನೇರೆ nêrĕ. A breakfast (Mhr. ನ್ಯಹಾರೀ, ನ್ಯಾಹಾರೀ; B. 5, 287).

ನೇಱಲ್ nêṟal. ನೇಱಲು. = ನೇಱಿಲ್, etc. See ಜಮ್ಬು-; Šsv. 3, 32. — ನೇಱಲುಮರ. A common tree with purple berries, Eugenia jambolana Lam. (Calyptranthes caryophyllata Swartz, My.; Tĕ. ನೇರೆಡು, ನೇರೇಡು; T. ನಾವಲ್; M. ಞಾವಲ್).

ನೇಱಲೆ nêṟalĕ. = ನೇಱಿಲ್. (My.).

ನೇಱಿಳು nêṟaḷu. = ನೇಱಿಲ್. See ಪನ್ನೇಱಿಳು.

ನೇಱಿಳೆ nêṟaḻě. = ನೇಱಿಲ್. (My.). See ಕಾಗಿ-, ಕುಣ್ಣ-, ಗನ್-, ಗುಡ್ಡ-, ನಾಯಿ-, ನೆಲ-. — ನೇಱಿಳೆಹಣ್ಣು. (ಜಮ್ಬು, ಜಾಮ್ಬವ Si. 125).

ನೇಱಿಲ್ nêṟil. ನೇಱಿಲು. = ನೀಱಲು, ನೀಱಲೆ, ನೀರ್ಲು, ನೇಱಲ್, ನೇಱಲೆ, ನೇಱಳು, ನೇಱಳೆ, ನೇಱಿಳೆ, ನೇರ್ಲು. The tree Eugenia jambolana Lam. (ಜಮ್ಬು Mr. 115; Šmd. 176; B. 4, 54; My.). See ಅರ-, ಅರಸು-, ನಾಯಿ-, Rŝv. 2, 46. 47. — ನೇಱಿಲ ಹಣ್ಣು. (ಜಮ್ಬು, ಜಾಮ್ಬವ Nr.).

ನೇಱಿಳೆ nêṟiḻě. = ನೇಱಿಲ್. (Bp. 18, 16).

ನೇರ್ nêr. = ನೇರ್ 3, q. v.

ನೇರ್ಪು nêrpu. Straightness; propriety; regular course, order, way; rectitude, uprightness (ನೇರಿತು Čt. I, 52; ಸಯ್ಪು II, 53; ಸನ್ತೆ Šs.; Čpr. 8, 83). — ನೇರ್ಪುವೆಱ್. -ವೆಱ್. To become proper, etc. (Abh. P. 16, 97).

ನೇರ್ಲು nêrlu. = ನೇಱಿಲ್. (My.).

ನೇಲ್ nêl. = (ನೆಱಲ್), ನೇಲು. To be suspended, to hang, to swing, to dangle (ಅಲಮ್ಬನ Šmd. Dh.; ನೆಱಲ್ Kk. 74; ಎಱಲ್ 72; T. ಞಾಲು, ನಾಲು; M. ಞಾನ್ಲು, ಞಾೇಲು; Tĕ. ವೇಲು; cf. ನಾಮ್ಬು 2). ನೇಲ್ಪಂ (Šmd. 288). ನೇಲ್ವುದು (Kk. 72). See Rŝv. 5, after 55; 5, 79.

ನೇಲಿಸು nêlisu. To suspend, etc. (Mg.).

ನೇಲು nêlu. = ನೇಲ್. P. p. ನೇತು (My.). ಚಣ್ಡಿಕೆಯಲ್ಲಿ ಕಟ್ಟಿ ನೇಲುವ ಹೂಮಾಲೆ (ಪ್ರಭ್ರಷ್ಟಕ); ಬಯ್ತಲೆಯಲ್ಲಿ ನೇಲುವ ಹೂಮಾಲೆ (ಲಲಾಮಕ Nr.). — ನೇತಾಡು. -ಆಡು. = ನೇಲು. To hang, etc. (My.). ಜುಟ್ಟಿನಲ್ಲಿ ನೇತಾಡುವ ಹುವ್ವಿನ ಸರ (ಪ್ರಭ್ರಷ್ಟಕ, ಶಿಖಾಲಮ್ಬ Si. 229); ಕೊರಳಲ್ಲಿ ನೇತಾಡುವ ಒಡವೆ (ಲಮ್ಬನ, ಲಲನ್ತಿಕೆ 218). ನೇತಾಡುವವನ ಹತ್ತರ ಮಾತಾಡಲಿಕ್ಕೆ ಹೋದರೆ ಜೋತಾಡುವದು ಸಿಕ್ಕೀತು.—ಕಾಟನಾಯಕನ ಮನೆಗೆ ಕನ್ನಾ ಹಾಕಿದರೆ ನೇತಾಡುವದೆರಡು ಭಂಗೀ ಚೀಲ.— ನೂಲು ಹಿಡಿದು ಜೋಲುವವನ ಕಾಲು ಹಿಡಿದು ನೇತಾಡಿದ (Prvs.). See Prv. s. ಬೇತಾಳ.

ನೇವಣ nêvaṇa. = ನೇವಳ, etc. (Râm. 6, 53, 95).

ನೇವಣಿಸು nêvaṇisu. To make a necklace of (Bh. 10, 10, 10).

ನೇವರಿಸು nêvarisu. = ನಿವರಿಸು. To make straight, smooth or proper by gently rubbing with the hand or by fingering; to rub gently with the hand, to stroke (My.; Tĕ. ನೇವರಿಂಚು; cf. ನಿವರು). ಕರದೆ ನೇವರಿಸುವಲ್ಲಿ ತಡವೆವ್ವು ಶಬ್ದಮದು (Šm. 108). ಕುರುಳಂ ಕೂರುಗುರಿನ್ದೆ ನೇವರಿಸುತಂ (Rŝv. 7, 10). ಕುರುಳಂ ನೇವರಿಸಿ (8, after 82). ಧನುವ ನೇವರಿಸಿದನು (Râm. 3, 6, 7). See Čpr. 7, 127; Râm. 3, 8, 23; 6, 12, 37; 6, 53, 29. 101; Rŝv. 4, after 14; J. 26, 12.

ನೇವಳ nêvaḷa. (Šmd. 157). = ನೇವಣ, ಲೇವಳ, ಲೇವಾಳ. A necklace of silver or gold (Tĕ. ನೇವಳ, ನೇಹಳ; Grj. 3, after 91; Bp. 4, 37; 42, 11; 44, 48; cf. ನೇಲ್? M. ಞಾೇಲ್ಚಿ, ornamental hangings). **2,** a silver or gold girdle or zone (Tu.). ನೇವಳವಾದರೆ ಹವಳದ್ದು ಆದೀತೇ? (Prv.).

ನೇವುರ nêvura. Tbh. of ನೂಪುರ q.v. (ಅನ್ದುಗೆ Bhn. 21; Grj. 3, 118; 4, 19; Bp. 42, 11; V. 4, 86). See ಎರ-.

ನೇಸಱ್ nêsaṟ. (Šmd. 59). **ನೇಸಱು.** The sun (ಪೊತ್ತು, ಸೂರ್ಯ Šmd. I; ಬಾನ ಜೊಡರ್ Čt. I, 91; ರವಿ I, 95. 103; II, 20; ನಿಸಿವಗೆಯ, ತಾವರೆಗೆಳೆಯ, ಪೊತ್ತು, etc., ಸೂರ್ಯ Šm. 14 Kk. 45; ಇನ, ಸೂರ್ಯ Si. 435; T. ಞಾಯಿಱು, ನಾಯಿಱು, ನಾಯಿಱು; M. ಞಾಯಱು, ಞಾಯಿಱು; T. ನೀಱಿಲ್ light; M. ನೇರ, the sun, daylight; cf. ನೆಗಱ್ 2). ನೇಸಱ ಬಟ್ಟಂ (ಪೊತ್ತು Čt. I, 35). ಅವನಾನೊಬ್ಬ ವಿಪ್ರ ನಿದ್ರೆಗೆಯ್ಯುತ್ತಿರಲು ನೇಸಱು ಅಸ್ತಮಯ ಮಾದುಹುದು, ಅವನೊಬ್ಬ ಬ್ರಾಹ್ಮಣನು ಮಲಗಿರಲು ನೇಸಱು ಉದಯ ಮಾದುಹುದು, ಆ ಇಬ್ಬರು ತಱುವಾಯಿನ್ದ ಅಭಿನಿರ್ಮುಕ್ತನು ಅಭ್ಯುದಿತನು ಎನಿಸುಗು (Nr.). ಕುಮುದಂಗಳ ನಗೆ ಬತ್ತಿದುವು ಪಾಯ್ವ ನೇಸಱಿನ್ ಅಗಳ್ (Lilv. 3, 5). ತಱಿ ತಱಿನೆ ನೇಸಱ್ ಮೂಡಿದುದು (Šmd. I & 229). See Šmd. 156. 264; Čpr. 4, 72; Abh. P. 9, 112; J. 7, 50; Si. 255; ಪಡು-, ಮುನ್-. — ನೇಸಱಣುಗ. -ಅಣುಗ. Yama (ಜವ, ಅಱ, etc., ಅನ್ತಕ Šm. 12). — ನೇಸಱುಗಲ್. -ಕಲ್. The sun-stone: crystal (ಸೂರ್ಯಕಾನ್ತ Šs.). — ನೇಸರ್ಗಲ್. = ನೇಸಱುಗಲ್. (ಮಾರ್ತಾಣ್ಡೋಪಲ Čt. II, 81). — ನೇಸರ್ಗುವರ. -ಕುವರ. Yama (Kk. 15). — ನೇಸರ್ಪಡು. The sun to set (Abh. P. 15, after 38). — ನೇಸರ್ಮುಯಣ. (Šmd. 217). The sunny season of spring.

ನೇಸ್ತ nêsta. = ನೇಹ. Love (My.).

ನೇಸ್ತಗಾತಿ nêsta-gâti. A female friend (My.).

ನೇಸ್ತಗಾಱ nêsta-gâṟa. A male friend (My.).

ನೇಹ nêha. Tbh. of ಸ್ನೇಹ. (ತಕ್ಕು Čt. II, 36; ಅಕ್ಕಱು II, 72; ಕಾದಲ್ಮೆ II, 81; Kk. 88; ಕಾದಲ್ಮೆ, ನಲ್ಮೆ, ಒಱಲ್, ಕೂರ್ಮೆ Šm. 75; Kk. 30; Grj. 2, after 106; Râm. 6, 53, 101). 2, a sexual organ (Bp. 42, 15). — ನೇಹಗಲಹ. -ಕಲಹ. A lover's quarrel, mere wanton quarrelsomeness (J. 26, 5).

ನೇಹಿ nêhi. Tbh. of ನೇಮಿ. A large timber tree, Ougeinia dalbergioides Benth. (St. & Pl.).

ನೇಱಲ್ nêḷal. = ನೆಱಲ್ 2. (ಪ್ರಿಯಂಗು, ಶ್ಯಾಮ, ಫಲಿನಿ Mr. 111).

ನೈ nĕi. nay. For Kannaḍa (or Tbh.) words that appear with this initial in writ see ನೆಯ್ or ನಯ್.

ನೈಋತ್ಯ nairitya. Tbh. of ನೈರ್ಋತ್ಯ. (J. 15, 11; B. 4, 115).

ನೈಕ na-êka. *Not one, more than one, several, many, manifold.*

ನೈಕಭೇದ naika-bhêda. *Of many kinds, various.*

ನೈಕಷೇಯ naikashêya. (fr. ನಿಕಷೆ). A child of Nikashâ: *a râkshasa, a fiend.*

ನೈಗಮ naigama. (fr. ನಿಗಮ). Relating or belonging to the vêda. 2, *a road.* 3, *a townsman, a citizen.* 4, *a trader, a merchant* (see s. ವಣಿಜ).

ನೈಚಿಕೆ naičikĕ. (fr. ನೀಚಿಕ). *An excellent cow* (ತಲೆಯಾವು Hlâ.). 2, the head or forehead of an ox (ಹಣೆ Mr. 179).

ನೈಚ್ಯ naičya. (fr. ನೀಚ). Lowness, vileness; humility (My.; Tĕ.).

ನೈಜ naija. (fr. ನಿಜ). *Own, one's own,* inherent. 2, real; reality, truth (ನನ್ನಿ, ಸತ್ಯ Kk. 48). See Bp. 3, 68; 57, 19; J. 9, 27; 26, 9; 27, 20; Šś. s. ಬೇಡ 2.

ನೈಜಾಮು naijâmu. (fr. ನಿಜಾಮು). Relating or belonging to the nijâmu, Nizâm (My.).

ನೈಪಥ್ಯ naipathya. = ನೇಪಥ್ಯ. (J. 2, 27; 10, 6; Tĕ.). — ನೈಪಥ್ಯಂಗೆಯ್. -ಗೆ-. To attire one's self (Rŝv. 5, after 19). — ನೈಪಥ್ಯನ್ದಳೆ. -ತಳೆ. To put on ornaments (Rŝv. 6, after 11). — ನೈಪಥ್ಯಮ್ಬಡೆ. -ಂ-ಪಡೆ. To be decorated (Rŝv. 6, after 11).

ನೈಪಾಲಿ naipâli. (fr. ನೇಪಾಲ). Nepaulese. 2, *red arsenic.*

ನೈಪುಣ್ಯ naipuṇya. (fr. ನಿಪುಣ). Dexterity, cleverness, skill; dexterous, etc. (Čpr. 3, 27; 4, after 12; Bp. 46, 39).

ನೈಮಿತ್ತಕ naimittaka. (fr. ನಿಮಿತ್ತ). Accidental, occasional, produced by particular circumstances. (My.).

ನೈಮಿಷ naimisha. (fr. ನಿಮಿಷ). Momentary. 2, N. of a forest. (J. 22, 22).

ನೈಮೇಯ naimêya. = ನಿಮಯ. *Barter, exchange.*

ನೈಯಗ್ರೋಧ naiyagrôdha. (fr. ನ್ಯಗ್ರೋಧ). *Belonging to or made of the nyagrôdha.*

ನೈಯಾಯಿಕ naiyâyika. (fr. ನ್ಯಾಯ). Knowing the nyâya philosophy or the laws of logic; a dialectitian, a logician. (Čpr. 1, 25).

ನೈರಸ nairasa. (fr. ನೀರಸ). The state of being devoid of taste, unsavory; saplessness (Bp. 56, 57).

ನೈರುತಿ nairuti. Tbh. of ನೈಋತಿ. (My.).

ನೈರುತ್ಯ nairutya. Tbh. of ನೈಋತ್ಯ. (Bp. 1, 64; 2, 28; My.).

ನೈಋತ nairṛita. (fr. ನಿಋತಿ). (= ನಿರುತಿ). Relating to nirṛiti; south-western. 2, *the ruler of the south-west quarter.* 3, a child of Nirṛiti: *a râkshasa, a demon.*

ನೈಋತಿ nairṛiti. = ನೈರುತಿ. The south-west quarter. 2, a râkshasa.

ನೈಋತ್ಯ nairṛitya. = ನೈಋತ್ಯ, ನೈರುತ್ಯ. Relating to nirṛiti; south-western.

ನೈರ್ಮಲ್ಯ nairmalya. (fr. ನಿರ್ಮಲ). Stainlessness, purity; virtue (ಪುಣ್ಯ, ನಿರ್ಮಲ Nn. 68; Bp. 54, 59). See ತಿಳಿ.

ನೈಲ್ಯ nailya. (fr. ನೀಲ). Blueness; dark-blue, blackness. (My.).

ನೈವೇದ್ಯ naivêdya. (fr. ನಿವೇದ್ಯ). = ನಿವೇದನ. An offering of eatables presented to a deity, an idol or any deified object. (Bp. 33, 10; J. 30, 40; Si. 242; My.). ನೈವೇದ್ಯಕ್ಕೆ ನಾಯಿ ಮುಟ್ಟಿದರೆ ನೈಷಧಪತಿ ಏನು ಮಾಡ್ಯಾನು? (Prv.). See Jñs. s. ಎಚ್ಚಿಸು. — ನೈವೇದ್ಯ ಈ. To present a naivêdya (Bp. 33, 10). — ನೈವೇದ್ಯ ಕೊಡು. = ನೈವೇದ್ಯ ಈ. (B. 4, 133). — ನೈವೇದ್ಯ ತೋಱಿಸು. To show eatables at one's dinner to a deity (linga, etc.) before eating them (B. 5, 61; My.). — ನೈವೇದ್ಯ ಮಾಡು. = ನೈವೇದ್ಯ ಕೊಡು. (My.).

ನೈಶಾಟ naiśâṭa. (fr. ನಿಶಾಟ). Relating to a demon or demons (Râm. 3, 6, 4).

ನೈಷಧ naishadha. (fr. ನಿಷಧ). Relating to Nishadha. 2, Nala (see Prv. s. ನೈವೇದ್ಯ). 3, an epic poem treating on Nala's adventures (My.).

ನೈಷ್ಕಿಕ naishkika. (fr. ನಿಷ್ಕ). *A mint-master.*

ನೈಷ್ಠಿಕ naishṭhika. (fr. ನಿಷ್ಠೆ). Steady, firm, devoted; vowing abstinence and chastity. (My.).

ನೈಷ್ಠಿಕತನ naishṭhikatana. Constancy, steady adherence to rule, firm belief (My.).

ನೈಸರ್ಗಿಕ naisargika. (fr. ನಿಸರ್ಗ). Natural, innate, inherent, original. (My.).

ನೈಸ್ತ್ರಿಂಶಿಕ naistrimśika. (fr. ನಿಸ್ತ್ರಿಂಶ). *A swordsman.*

ನೊಗ nŏga. = ನಗ 3. Tbh. of ಯುಗ (Šmd. 343). A yoke (ಯುಗ Nn. 90; ಸಂಯ, ಸಾಮ್ಯ, ಯುಗ Mr. 286; ಕೂಬರ, ಯುಗನ್ಧರ Si. 277; J. 25, 26; C.; Tĕ.; T., M. ನುಗ). 'ನೊಗನು ತಲೆಯಾರು ಬಣ್ಣಿ ಎಮ್ಬವೆಲ್ಲಂ ಹೂಡುವ ಎತ್ತುಗಳು ಕ್ರಮದಿನ್ದ ಯುಗ್ಯ ಪ್ರಾಸಂಗ್ಯ ಶಾಕಟ ಎನಿಸುಗು; ನೊಗದ ಕೀಲು (ಯುಗಕೀಲಕ); ತಿದ್ದಲಿನ್ದು ನೊಗದ ಕೆಲದಲ್ಲಿ ಕಟ್ಟಿದ ಹೋರಿ (ಯುಗಪಾರ್ಶ್ವಗ, ಪೃಷ್ಠವಾಹ್ Nr.). ಬಣ್ಣಿಯ ನೊಗ (ಯುಗ Si. 410). ನೊಗ ಇದ್ದರೆ ನೇಗಲು, ಮಗ ಇದ್ದರೆ ತನ್ದೆ (Prv.). — ನೊಗಪಟ್ಟಿ. The broad strap attached to a yoke and passed round the ox's neck (My.).

ನೊಚ್ಚಗೆ nŏččagĕ. = ಲೊಚ್ಚಗೆ. Agreeableness, pleasant feeling arising *e. g.* for the body from sitting before a fire, for the mouth from eating betel-nut, or for the ear from hearing pleasant words (My.; *cf.* ನಚ್ಚು 1). ನುಚ್ಚಿಗೆ ಬೆಚ್ಚುವವ ನೊಚ್ಚಗೆಮಾತಾಡಿದರೂ ನಚ್ಚಿಗೆ ಸಾಲದು (Prv.).

ನೊಚ್ಚಿತು nŏččitu. That is one's desire: that is to the full satisfaction of one's desire (Abh. P. 10, 153).

ನೊಣ nŏṇa. = ನೊಣವು, ನೊಳ, ನೊಳವು. A fly (Bp. 46, 59; 60, 43; My.; T., M. ನುಳಮ್ಬು, ನೊಳ್ಳಲ್, a musquito or gnat; M. ನುಬಿಮ್ಬು, a gnat, chiefly an eye-fly, *cf.* ನೊರಜು). ಕಾಡ ನೊಣ (ದಂಶ, ವನಮಕ್ಷಿಕೆ); ಕರಿಯ ನೊಣ (ನೀಲಮಕ್ಷಿಕೆ, ಚರ್ವಣೆ); ದೊಡ್ಡ ನೊಣ (ಪತಂಗಿಕೆ, ಪುತ್ರಿಕೆ); ಜೇನ ನೊಣನು (ಸರಘೆ, ಮಧುಮಕ್ಷಿಕೆ Nr.). ನೊಣ ಕೂಡಿಸಿದ ಜೇನು ಮಣುವಾದರೆ ಹೆಣ ಹೊತ್ತವನಿಗೇನು? — ನೊಣ ಕೂತರೆ ವ್ರಣ ಹೊರ್ತು ಹೆಣ ಜೀವಿಸೀತೇ? — ನೊಣದನ್ತೆ ತಾನೂ ಕೆಟ್ಟು, ಪರರನ್ನೂ ಕೆಡಿಸುತ್ತಾನೆ. — ನೊಣ ಬಿದ್ದ ಊಟಾ ಮಾಡಿ ಕಳಕಳಿಸಿದ ಹಾಗೆ. — ನೊಣ ಮಣುವಾದೀತೇ? — ಬೆಲ್ಲವಿದ್ದ ಕಡೆ ನೊಣ, ದಡೆ ನಾಲ್ಕಕ್ಕೆ ಮಣ (Prvs.). See Si. 175. 176. 367. — ನೊಣಕಸ. A common plant, Plectranthos cordifolius Don. (Z.). — ನೊಣಗಿಚ್ಚಿಯಾಟ. A play at which one loses when a fly sits down on his peg (My.). — ನೊಣದ ಗಿಡ. = ನೊಣಕಸ. (Z.). — ನೊಣಬೇಸಟಿಕ್ಕಯ್ಯ. N. (Bp. 58, 11).

ನೊಣಚು nŏṇacu. = ನುಣ್ಚು, etc. (My.).

ನೊಣಬ nŏṇaba. A man of a caste-division of the Kuṛubas (My.).

ನೊಣವು nŏṇavu. = ನೊಣ. ನೊಣವಿಂಗೆ (Bp. 23, 6).

ನೊಣೆ nŏṇĕ. 1. (= ನುಂಗು). To swallow (ಗಿಲನ Šmd. Dh.; Čpr. 4, 34; Abh. P. 13, 45; Rŝv. 8, 120; V. 4, 120).

ನೊಣೆ nŏṇĕ. 2. To clean with the tongue the teeth of substances lodged between them (My.).

ನೊತ್ತು nŏttu. = ನತ್ತು. (My.).

ನೊದೆ nŏdĕ. = ಮೊದೆ. (My.).

ನೊನ್ದಿಸು nŏndisu. = ನನ್ದಿಸು, ನುನ್ದಿಸು. To extinguish, to quench (Bp. 19, 58; My.; B. 4, 60; T. ನುದು, ನೊದು, ನೂರ್). ನೊನ್ದಿಸಿದಷ್ಟೂ ಉರಿದರೆ ಹನ್ದಿ ಏನು ಮಾಡೀತು? (Prv.).

ನೊನ್ದು nŏndu. 1. = ನನ್ದು 1, ನುನ್ದು. To be extinguished, to go out, to be quenched (My.; B. 4, 31. 60; T. ನೂರ್). 2, = ನೊನ್ದಿಸು (My.).

ನೊನ್ದು nŏndu. 2. P. p. of ನೋ.

ನೊಪ್ಪ nŏppa. = ನೊಪ್ಪನೆ (Šmd. 229). ನೊಪ್ಪ ನೆಗೆದು (Grj. 1, 104). — ನೊಪ್ಪ ನೊಪ್ಪನೆ. (Šmd. 229). ನೊಪ್ಪ ನೊಪ್ಪನೆ ಪೇಱ್ (229 Mdb.). — ನೊಪ್ಪನೆ. = ನೊಪ್ಪ, q. v.

ನೊಯ್ nŏy. ನೊಯು. = ನೋ, etc. ನೊಯ್ಯುವೇ ಕರಬಿಸರುಹಂಗಳ್? (Bp. 38, 36).

ನೊಯಿಸು nŏyisu. = ನೋಯಿಸು. To cause to feel pain (Tĕ. ನೊಂಚು). ನಿಷ್ಠುರನುಡಿಯಿನ್ದ ಅವರ ಮನಸ್ಸು ನೊ

ಯಿಸ ಬಾರದು (B. 4, 72). ನೊನ್ದವನಿಗೆ ನೊಯಿಸಿದರೆ ಕೊನ್ದ ಪಾಪ ವಲ್ಲವೇ? (Prv.).

ನೊಯ್ಯು nŏyyu. = ನೊಯ್. (My.). P. p. ನೊನ್ದು.

ನೊರಜು nŏraju. = ನೊರಂಜು (Šmd. 48), ನುಸಿ 2, No. 2. A (musquito or) gnat, an eye-fly (ತುಷ Mr. 177; ಭೃಂಗಾರಿ G.; Bh. 6, 5, 38; Ššv. 3, 45; C.; see s. ನೊಣ). ಕುರುಜು ಮೇರುವೆ ಇಲ್ಲ, ನೊರಜುಗಳ ಸ್ವರ ಹೆಚ್ಚು (Prv.).

ನೊರಂಜು nŏranju. = ನೊರಜು, q. v.

ನೊರೆ nŏrĕ. Foam, froth, scum (ಫೇನ, ಡಿಣ್ಡೀರ, ಅಬ್ಧಿಕಫ Hlâ., Nr., Mr. 415; ಫೇನ Nn. 6; ಜತ್ತುಳ Kk. 13, Šm. 35; C.; Tĕ. ನುರುಗು, ನುರುವು, ನುರ್ವು; M. ನುರೆ, T. ನುರೈ). ಸಮುದ್ರದ ನೊರೆ (ಫೇನ, etc. Si. 334). ನೊರೆ ಕಾಟುವಾಗ್ಯೆ ಹರ ಎನ್ದರೆ ಬಿಟ್ಟೀತೇ? (Prv.). See Čpr. 8, after 4; 8, 97; Bp. 51, 53; 61, 66; Č. Bp. 42, 14; Bh. 3, 6, 25; J. 6, 3. 9; ಬೆಳ್ನೊರೆ. — ನೊರೆಗಟ್ಟು. -ಕಟ್ಟು. Foam, etc. to be formed (My.). — ನೊರೆಗಡಿಯಣ. -ಕಡಿಯಣ. A bit full of foam (Râm. 6, 30, 10). — ನೊರೆನೆತ್ತರ್. Foamy or scummy blood (Abh. P. 13, 47). — ನೊರೆಮಾಲೆ. A garland of foam (Ršv. 13, after 77). — ನೊರೆವಾಯ್. -ಬಾಯ್. A mouth covered with or containing foam (Bp. 20, 11; 46, 56; V. 11, 61). — ನೊರೆವಾಲು. = ನೊರೆಹಾಲು. Frothing milk fresh from the cow (My.). — ನೊರೆವಿಣ್ಡು. -ಪಿಣ್ಡು. A foam-mass (Ršv. 6, after 24). — ನೊರೆವುಲ್. -ಪುಲ್. Frothy, soft grass (Čpr. 4, 47). — ನೊರೆಹಪ್ಪಳ. A kind of rice-happaḷa (C.). — ನೊರೆಹಾಲು. = ನೊರೆವಾಲು. See Sp. s. ಉಣ್ಣೆ 2.

ನೊಱಜು nŏṟaju. = ನಱುಜು, etc. (My.).

ನೊಸಲ್ nŏsal. = ನೊಸಲು. The forehead (ಲಲಾಟ, ಅಲಿಕ, ಗೋಧಿ Nr., Hlâ.; ಪಣೆ, ಹಣೆ Šm. 71. 96; T., M. ನುದಲ್; Tĕ. ನುದುರು; Tu. ನೆಸಲ್; *cf.* ಮುಸುಡು). ನೊಸಲನ್ ಅಲೆವ ಕುರುಳು (ಭ್ರಮರಕ Hlâ.). ನೊಸಲೊಳ್ ಅಲೆವ ಕುರುಳ್ಗಳ್ (ಅಲಿ Mr. 320). ನೊಸಲ ಇಲುವು (ಲಲಾಟಾಸ್ಥಿ, ಶಂಖ Nr.). See Čpr. 2, 89; 4, 14; 5, 127; Bp. 4, 28; 38, 41; 36, 23; 43, 32; 46, 13; Ršv. 6, after 11; 13, 63; J. 5, 7; ಪೆಱ-. — ನೊಸಲಕ್ಕರ. -ಅಕ್ಕರ. The writ of destiny on the forehead (Šmd. 69; Čpr. 8, 87). — ನೊಸಲ ಕಣ್ಣು. An eye on the forehead (Bp. 27, 14). ನೊಸಲ ಕಣ್ಣ, who has an eye on the forehead: Šiva (9, 30). ನೊಸಲ ಕಣ್ಣ ದೇವ, Šiva (Šmd. 162). — ನೊಸಲ ಪಟ್ಟ. A plate on which a favourite god's name is written and put on the forehead by the bride and bridegroom; a plate on which some laudatory words are written, put on the forehead of horses; etc. (ಲಲಾಟಿಕೆ Nr.). — ನೊಸಲ ಬರಹ. = ನೊಸಲಕ್ಕರ. (Bp. 61, 7). — ನೊಸಲ ಬೊಟ್ಟು. A mark made with sandal, etc. on the forehead. ಗೋರೋಜನ ಸುಗನ್ಧದಿನ್ದ ರಚಿಸಿದ (ಬೇಡತಿಯರ) ನೊಸಲ ಬೊಟ್ಟು (Râghc. 17, 65).

ನೊಸಲು nŏsalu. = ನೊಸಲ್. (Bp. 47, 31; My.). ಆನೆಯ ನೊಸಲು (ಅವಗ್ರಹ, ಲಲಾಟ Hlâ.). ನೊಸಲಿನ ಬರಹ ಬಸಲೆಯಿನ್ದ ಒರಸ ಬಹುದೇ? (Prv.).

ನೊಳ nŏḷa. = ನೊಳವು (Šmd. 56), ನೊಣ, etc. (ಮಚ್ಛ Kk. 85; Šm. 44. 85).

ನೊಳಲೆ nŏḷalĕ. (ನೊಱಲೆ). = ಮೊಳಲೆ. A shell or tube (?; see ನಾಯ್-, ನಾಯಿ-; *cf.* ನಳ್ಳಿ? Tu. ನೊಲ್ಲು, a kind of water-snake).

ನೊಳವು nŏḷavu. = ನೊಳ, q. v. ಸಂಚರಿಸುವ ನೊಳವು (Šmd. 56).

ನೊಳ್ಚೆ nŏḷčĕ. = ನುಸುಳ್. To creep in, etc. (T. ನುಳೈ, M. ನುಱು; My. occasionally).

ಬೆಳ bĕḷa. 4. = ಬೆಳ್ 2, ಬೆಳೆ 2. — ಬೆಳಸಾಲ ಕುಣ್ಟೆ. An instrument for removing the weeds from both sides of a furrow of a green, growing crop (S. Mhr.). — ಬೆಳವೊಲ. -ಪೊಲ. (Šmd. 81 Mdb., o. r. ಬೆಳೆ-). A field of standing corn.

ಬೆಳ bĕḷa. 5. An abbreviation of ಬೆಳಗಿ, P. p. of ಬೆಳಗು 1. — ಬೆಳ ಬೆಳಗು. rep. To become very bright. ಚನ್ದ್ರನುದಯಂಗೆಯ್ಯೆ ದೆಸೆ ದೆಸೆಗಳೆಲ್ಲಮುಂ ಚನ್ದ್ರಿಕೆಗಳಿನ್ದ ಬೆಳ ಬೆಳಗಿ, ಬೆಳ್ಪೆಯೊಲಾಯ್ತು (J. 26, 17).

ಬೆಳಕು bĕḷaku. = ಬೆಳ 2, ಬೆಳಗು 2. Light;—a lamp (My.; M. ವಿಳಕ್ಕು; ಆಲೋಕ Si. 404; ಛಾಯೆ, ಕಾನ್ತಿ 446). ಬೆಳಕು ಇಲ್ಲದಿದ್ದರೂ ಬಟಿಕೆಗೆ ಕಡಿಮೆ ಇಲ್ಲ.—ಬೆಳಕು ಇಲ್ಲದೆ ಹೊಳಕು ಕಣ್ಡೀತೇ?—ಕೋಣೇಲಿ ಬೆಳಕಿಲ್ಲೆನ್ನು, ರಾತ್ರೀಲಿ ಕಿಟಕಿ ತೆಱದನನ್ತೆ (Prvs.). — ಬೆಳಕರೆ. -ಅರೆ (= ಪರೆ). To dawn (My.). — ಬೆಳಕಿಡು. -ಇಡು. To place a lamp. ಬೆಳಕಿಡುವದಕ್ಕೆ ಇಲ್ಲದವ ಮಲಕು ಬಯಸಿದ ಹಾಗೆ (Prv.). — ಬೆಳಕುದೋಱು. -ತೋಱು. To show or manifest light (Č. Bp. 47, 24). — ಬೆಳಕು ಬಿಡು. To give passage to the light: to stand out of the light (My.). — ಬೆಳಕು ಮಾಡು. To light, to give light to (My.). ದೀವಿಗೆಗಿನ್ತ ಹೆಚ್ಚು ಹೊಳೆದು ಜಗವೆಲ್ಲಾ ಬೆಳಕು ಮಾಡುವನ್ತಾ ಒಡವೆಯಾವದು? ಸೂರ್ಯನು (B. 2, 24).

ಬೆಳಗಿಸು bĕḷagisu. To lighten, to fill with light (as the sun the points of the compass, J. 20, 42). **2,** to cause to make bright, to cause to scour or polish (My.).

ಬೆಳಗು bĕḷagu. 1. To shine, to become bright; to manifest one's self (ತೊಳಗು, ಕಾನ್ತಿ Šmd. Dh.; ಕಾನ್ತ 399 Cm.; Tĕ. ವೆಲುಗು; T. ವಿಳಂಗು). ಬೆಳಪಂ or ಬೆಳಪ್ಪಂ (Šmd. 275). ಗಣ್ಡಮಾರ್ತಣ್ಡನ್ ಅಲರ್ಚುಗೆಮ್ಮಂ! ಗೆಲ್ದು ಬೆಳಪ್ಪನ್ ಈಗೆ ಬೀರಂಗಳಂ! (275 Mdb.). ಬೆಳಗಿದುದೆಣ್ಬಂ ದೆಸೆ (219). ಹಬ್ಬುಗೆಯ ಹದಿನಾಲ್ಕು ಲೋಕದ ಮಬ್ಬುಗಳನೀಡಾಡಿ ನಭದೊಳಗೊಬ್ಬನೇ ರವಿ ತೊಳಗಿ ಬೆಳಗುವ ವೋಲು (Bh. 1, 8, 9). ಭಾನು ಬೆಳಗಲು ಲೋಕ ಚೇಷ್ಟಿಸುವುದು (Abhâ. 6, 23). ಸದಮಲೋದಕಕಣಂಗಳು . . . ವಿಲಸಿತರತ್ನಾದಿಗಳ ವೊಲು ತವೆ ಬೆಳಗುತಿರಲ್ (Bp. 22, 56). ಶರಣನಿಧಿಸೌರಾಷ್ಟ್ರ ಸೋಮೇಶ್ವರನ್ ಅನಶ್ವರಮೂರ್ತಿ ಶಬರೇಶ್ವರನ ರೂಪಂ ಧರಿಸಿ, ತಾ ತದ್ಭಸ್ಮಚಿಹ್ನೆಗಳುವೆರಸಿ ತೋಱಲು ಮಸಿಯಱುವೆಯಾವರಿಸಿ ಬೆಳಗುವ ನೂತ್ನರತ್ನದ ಪರಿಯೊಳ್ (44, 1). ಕೊಳನ ಜಲದಲಿ ಕೋಟಿದೀಪಂ ಬೆಳಗೆ (50, 58). ಬೆಳಗುವ ಚನ್ದ್ರದೀಪ್ತಿ (51, 19). ಬೆಳಗುವನಲಂ (53, 53). ಮನೆ ಬೆಳಗಿದುದು (—was kindled, 56, 33). ಅತುಲದಿವ್ಯಾಮೃತನವೀನದ್ಯುತಿ ಬೆಳಗೆ (57, 85). ಬೆಳಗುತ್ತಿರುವದು (ಶುಭ್ರ, ದೀಪ್ತ Si. 455). See Čpr. 1, 113; 9, 30; Bp. 30, 21; 38, 60; Râm. 1, 13, 8. **2,** to cause to shine; to fill with light; to manifest (Čpr. 1, 65; 8, 35; 9, 32; J. 31, 18). ತೆಗೆದಯ್ ಮೋಕ್ಷದ ಬಟ್ಟೆಯಂ, ಬೆಳಗಿದಯ್ ತ್ರೈಲೋಕ್ಯದೊಳ್ ಧರ್ಮಮಂ (Šmd. 255 from Lîlv.). **3,** to kindle, as a lamp (Bp. 31, 6; Tĕ. ವೆಲುಗಿಂಚು). **4,** to scour, to polish (My.; Bp. 12, 34; 14, 9; 47, 13; B. 1, 19; 5, 284).

ಬೆಳಗು bĕḷagu. 2. = ಬೆಳಕು, etc. Shine, lustre, light (ಪ್ರಕಾಶ, ಆಲೋಕ, ಉದ್ಯೋತ Hlâ.; ಕಳೆ, ಕದಿರ್, ಮಿನುಗು, ಹಬೆ, ಮಿಂಚು, ಡಾಳ, ಮಿಱುಗು, ಪೊಳಪು, ತೊಳಪು, ಪೊಗರ್, ತೊಳಗು, ಛವಿ, ಕಾನ್ತಿ Šm. 15; Kk. 25; Tĕ. ವೆಲುಗು, ವೆಲುಂಗು);—the dawn (My.; B. 4, 136). ತಿಱಿಯ ಬೆಳಗು (ಆಲೋಕ, ಉದ್ಯೋತ Mr. 47). ಬೆಳಗಿನ ಜಾಮ (ಉಷೆ Si. 476). ಅಳಿಯನ ಕುರುಡು ಬೆಳಗಾದರೆ (ಕಾಣುವದು).—ಬೆಳಗ ವರೆಗೆ ಕಡದ ಬೆಣ್ಣೆ ಮೋಳ ಬೆಕ್ಕಿನ ಪಾಲು ಆಯಿತು (Prvs.). ನೇಸಱಿನ ಬೆಳಗಿಗೆ ಗೂಗೆಗಳು ಸಂಚರಿಸುವವೆ? (Abhâ. 1, 42). See Čpr. 1, after 101; 6, 48. 59; Grj. 4, 36; Bp. 3, 34; 12, 34. 46. 50; 15, 24; 22, 7; 27, 77; 42, 24; Č. Bp. 4, 7; Šśv. 2, 114; Râm. 6, 12, 34; J. 8, 18; ಕಮ್-, ಕೆಮ್-, ತಾಣದೀವಿಗೆವೆಳಗು, ನುಣ್-, ಪಸುರ್ವೆಳಗು, ಪೆರ್ವೆಳಗು, ಬಳ್ಳಿವೆಳಗು, ಬೆರಕೆವೆಳಗು, ಬೆಳ್ವೆಳಗು, ಮೆಯ್ವೆಳಗು, ರನ್ನವೆಳಗು, etc., etc.; Prvs. s. ಭ್ರಮರ, ಶಕುನ. — ಬೆಳಗಡಗು. -ಅಡಗು. Light to disappear, to grow dark (Bh. 1, 8, 93). — ಬೆಳಗ ಜಾವ. (Bp. 39, 30). ಬೆಳಗ ಜಾವು (22, 7. 25). The period of dawn. — ಬೆಳಗಂಜಾವ. -ಂ-. = ಬೆಳಗ ಜಾವ. (My.). — ಬೆಳಗನ್ನಕ. -ಅನ್ನಕ. Till dawn (Bp. 57, 15). — ಬೆಳಗಱು. -ಅಱು. Light to go out or become less, to grow dark or dim. ಬೆಳಗಱುದುದು (ಮಸಮಸವಾದುದು Kk. 70; ಮಸಮಸ Šm. 65). — ಬೆಳಗಾಗು. -ಆಗು. Light to appear; to dawn. ಬೆಳಗಾದ ಮೇಲೆ ಬೆಟ್ಟದ ಯೋಚನೆ (Prv.). See Bp. 41, 23; 43, 48; 50, 14; 53, 23; B. 3, 25; 5, 42; Prv. s. ನಡುವಿರುಳು. — ಬೆಳಗಾತ. = ಬೆಳಗಾನಾ. Till dawn; at dawn (My.). ಅಳಿಯನ ಮೋಱೆ ಬೆಳಗಾತ ಕಾಣ ಬಹುದು (Prv.). — ಬೆಳಗಾನಾ. = ಬೆಳಗಾತ. (My.). ಬೆಳಗಾನಾ ರಾಮಾಯಣ ಕೇಳಿ, ರಾಮನಿಗೆ ಸೀತೆ ಏನಾಗ ಬೇಕೆನ್ದ (Prv.). — ಬೆಳಗಿಲಿ. -ಇಲಿ. Devoid of light. — ಬೆಳಗಿಲಿಗಣ್. -ಕಣ್. (Šmd. 221). A blind eye. — ಬೆಳಗುಜಾವ. = ಬೆಳಗ ಜಾವ. — ಬೆಳಗುಜಾವಗೋಱಿ. -ಕೋಱಿ. A cock of the (*i. e.* which crows at) dawn (Č. Bp. 4, 7). — ಬೆಳಗುಮುಂಜಾನೆ. At day-break (B. 2, 32). — ಬೆಳಗುಸೊಡರ್. A burning lamp. See Bĕdagučaupadi s. ನಡು 1. — ಬೆಳಗುಱು. -ಉಱು. To lose one's lustre. ತಾರಗೆ ಬೆಳಗುಱುದುವು (Lîlv. 3, 5). — ಬೆಳಗೊನ್ದಿಸು. -ಒನ್ದಿಸು. To kindle. ಬಹುದೀಪಂಗಳಂ ಬೆಳಗೊನ್ದಿಸುವ ವೋಲ್ (Bp. 50, 56).

ಬೆಳಗುವಿಕೆ bĕḷaguvikĕ. Shining; causing to shine (ದೇವನ Si. 437). ಯುದ್ಧಪ್ರಯಾಣಾದಿಗಳಲ್ಲಿ ಆಯುಧಗಳನ್ನು ಧರಿಸಿದ ಅರಸುಗಳಿಗೆ ರಕ್ಷೆಯಾಗಿ ಆರತಿಯನ್ನು ನಿವಾಳಿಸಿ ಬೆಳಗುವಿಕೆ (291).

ಬೆಳತಿಗೆ bĕḷatigĕ. = ಬೆಳನ್ತಿಗೆ (Šmd. 48), ಬೆಣ್ತಿಸೆ. Whiteness; brightness. — ಬೆಳತಿಗೆಗಣ್. -ಕಣ್. A bright eye (Čpr. 6, after 64; 7, 106; Grj. 3, 109). — ಬೆಳತಿಗೆಬೆಳ್ದಿಂಗಳ್. Bright moonshine (Grj. 4, after 104). — ಬೆಳತಿಗೆಯಕ್ಕಿ. = ಬೆಣತಿಗೆಯಕ್ಕಿ. (My.; Tu. ಬೊಳನ್ತೆಯರಿ).

ಬೆಳತು bĕḷatu. = ಬೆಳರ್ತು of ಬೆಳರ್ 1. (J. 8, 4; 25, 3).

ಬೆಳದು bĕḷadu. = ಬೆಳೆದು. P. p. of ಬೆಳೆ 1, *e. g.* Bp. 1, 38; 25, 7; 50, 79; 57, 23; 59, 12.

ಬೆಳನ್ತಿಗೆ bĕḷantigĕ. = ಬೆಳತಿಸೆ, q. v.

ಬೆಳಯಿಸು bĕḷayisu. = ಬೆಳಸು 1, etc. To cause to grow or increase, etc. (Bp. 6, 7).

ಬೆಳರ್ bĕḷar. 1. To become white or bright (ಧಾವಲ್ಯ Šmd. Dh.; M. ವಿಳರ್, ವಿಳಱು). P. ps. ಬೆಳರ್ದು,

ಬೆಳತುರ್ (287 Cm.; Abh. P. 3, 72; Rsv. 7, 9; V. 3, 2), ಬೆಳತು (q. v.).

ಬೆಳರ್ bĕḷar. 2. = ಬೆಳುರ್. A white or shining white colour (T. ವಿಳರ್). — ಬೆಳರ್ಗೆಮ್ಪು. -ಕೆಮ್ಪು. (Šmd. 54; Čpr. 6, 69; Abh. P. 5, 53; Rsv. 11, 100). A dazzlingly red colour. ಬೆಳರ್ಗೆಮ್ಪಿನ ಪೆಮ್ಪುನಾಳ್ದ ಬಾಯ್ದೆಱೆ! (Šmd. 78, o. r. ಬೆಳಗೆಮ್ಪಿನ). ಪಸರಿಸಿದತ್ತು ಮೂಡಣ ದೆಸೆಯೊಳ್ ಬೆಳರ್ಗೆಮ್ಪು (266, o. r. ಬೆಳಗೆಮ್ಪು). — ಬೆಳಮಾಡ. A shining white upstair house (Rsv. 12, 53). — ಬೆಳರ್ವಣ್ಣ. -ಬಣ್ಣ. = ಬೆಳರ್. (ಧವಲಕಾನ್ತಿ Čt. II, 28; ಬಿಳಿದು Kk. 25, two MSS. ಬೆಳುರ್ವಣ್ಣ; V. 3, 3; 9, 31). — ಬೆಳರ್ವಾಯ್. -ಬಾಯ್. A shining bright mouth (on account of its teeth, Grj. 3, after 91).

ಬೆಳರ್ಪು bĕḷarpu. Shining white colour (Čpr. 3, 102).

ಬೆಳಲ bĕḷala. = ಬಲವಲ, ಬಲೋಲ, ಬೆಳವಲ್, ಬೆಳವಲ 1, (ಬೆಱಲ್?), ಬೇಲ. A small spinous tree, the elephant- or wood-apple tree, Feronia elephantum Corr. (T. ವಿಳವು, ವಿಳಾ, ವೆಳ್ಳಿಲ್; M. ವಿಳಾ; Tĕ. ವೆಲಗೆ). ಬೆಳಲಮರ (ಕಪಿತ್ಥ, ದಧಿತ್ಥ, ಗ್ರಾಹಿ, ಮನ್ಮಥ, etc. Nr.; *cf.* Sk. ಮಾಲೂರ).

ಬೆಳವ bĕḷava. = ಬೆಳುವ. A wild pigeon (My.; Tĕ. ಬೆಳವೆ; see ಬೂದ-, ಹಸರು-).

ಬೆಳವಣಿಗೆ bĕḷavaṇigĕ. = ಬೆಳವಳಿಗೆ, ಬೆಳಿವಣಿಗೆ, ಬೆಳುವಣಿಗೆ. Growing, growth; increase, prosperity (ವರ್ಧನ G.; My.; see B. 3, 17; 5, 50. 250). — ಬೆಳವಣಿಗೆಕಾಲ. Time of growth or increase (ಆಯತಿ G.).

ಬೆಳವಲ್ bĕḷaval. ಬೆಳವಲು. = ಬೆಳಲ, etc. (ಕಪಿತ್ಥ Mr. 115).

ಬೆಳವಲ bĕḷavala. 1. = ಬೆಳವಲ್, etc. (ಕಪಿತ್ಥ, ಗ್ರಾಹಿ, ದನ್ತಶಠ, ಮನ್ಮಥ G.; B. 2, 3).

ಬೆಳವಲ bĕḷavala. 2. (= ಬಳ್ವಳ, or ಬೆಳವೊಲ s. ಬೆಳ 4?). (Abundant growth): N. of a fruitful tract of country, partly belonging to Mysore, partly to South-Mahratta. See Sp. s. ತೊಗೆ.

ಬೆಳವಳಿಗೆ bĕḷavaḷigĕ. = ಬೆಳವಣಿಗೆ, etc. (J. 29, 12).

ಬೆಳವಾರ bĕḷa-vâra. An outcast, a low man (Tĕ. ವೆಲಿ, outside; excommunication or exclusion from caste; ವೆಲಿವಾಡ, a village of Pariars). ಎಲ್ಲರಂ ಬಾಧಿಪಾ ತಳವಾರಂ ಬೆಳವಾರಂ (Sś. 97).

ಬೆಳವಿಗೆ bĕḷavigĕ. Growth, growing up, increase (Bh. 1, 8, 23; J. 30, 39; 31, 13. 70; 32, 56).

ಬೆಳವು bĕḷavu. Tbh. of ಬಿಲ್ವ. (Ššv. 3, 32). ಬೆಳವಿನ ಮರ (ಬಲಪತ್ರೆಮರ St. & Pl.).

ಬೆಳಸು bĕḷasu. 1. = ಬೆಳಯಿಸು, ಬೆಳಿಸು, ಬೆಳೆಯಿಸು, ಬೆಳೆಸು. To cause to grow; to increase (v. t.); to grow (v. t.), to raise, as a crop;—to bring up to maturity, to rear, to foster (Bp. 25, 7; 40, 40; My.); to use more words than are necessary (My.). ಬೆಳಸುವವ ಬಿಟಿಸಿದರೆ ಬಳ್ಳಕಾಱು ಇಲ್ಲವೇ? (Prv.).

ಬೆಳಸು bĕḷasu. 2. Growth, increase (ಪರಿಣಾಮು Hlâ.); that which has grown and stands in a field: a crop of corn, etc. growing, standing corn, etc. (of five colours, Abh. P. 1, 64; My.). ಬೆಳಸುಂ ಕುನ್ದದು ಪಾಱಿನೊಳ್ (?) ಎನ್ದಂ (Šmd. 256). See Bp. 30, 12; 35, 37; 40, 58; 57, 14; J. 25, 5; ಅಯ್ದುಡೆವೆಳಸು, ಮೂವೆಳಸು.

ಬೆಳಸೆ bĕḷasĕ. Millet or other grain not yet hard (ದುಗ್ಧಿಕಾಖ್ಯ Mr. 375). See ಗುಬ್ಬಿಬೆಳಸೆ.

ಬೆಳಿಗ್ಗೆ (bĕḷagu2-ggĕ). When it dawns, at dawn (ಹಗಲಿನಾದಿ Si. 37; My.; B. 2, 45. 49; 3, 22).

ಬೆಳಿಗ್ಯೆ (bĕḷagu2-gyĕ). = ಬೆಳಿಗ್ಗೆ. (ಪ್ರತ್ಯೂಷ, ಅಹರ್ಮುಖ, ಕಾಲ್ಯ, ಉಷಃ, ಪ್ರಭಾತ, etc., ಪ್ರಾತಃಕಾಲ Si. 37; My.; B. 3, 121; 5, 183).

ಬೆಳಿವಣಿಗೆ bĕḷivaṇigĕ. = ಬೆಳವಣಿಗೆ, etc. (ವರ್ಧನ Čb.).

ಬೆಳಿಸು bĕḷisu. = ಬೆಳಸು 1, etc. (C.). ಬಿಸಿಲನು ಬೆಳಿಸಿದನು ಗ್ರೀಷ್ಮರ್ತುರ್ (Bhâgavata 10, 18, 2). ಉಪಜೀವನದ ಸಲುವಾಗಿ ಜಡೆಗಳನ್ನು ಬೆಳಿಸಿ ಕೊಣ್ಡು ಸೋಗ ಮಾಡುವವ (ಧರ್ಮಧ್ವಜ G.). ಅವನು ದಕ್ಷಿಣಕ್ಕೆ ತನ್ನ ರಾಜ್ಯವನ್ನು ಬಹಳ ಬೆಳಿಸಿದನು (B. 4, 81). ಅಂಗಡಿಕಾಱರು ಹದಿನಯ್ದು ಹರದಾರಿಯೊಳಗೆ ತೆಂಗಿನ ಕಾಯಿಯ ಬೆಲೆಯನ್ನು ಮೂಱು ಪಾಲು ಬೆಳಿಸಿದರು (4, 179). ಅವನ ಆಪ್ತನಾದ ಒಬ್ಬ ಮನುಷ್ಯನು ಅವನ ಸಲಹಿ ಬೆಳಿಸಿದನು (B. 5, 229).

ಬೆಳು bĕḷu. = ಬೆಳ್ 1, etc. — ಬೆಳುಗನ್ನಡ. -ಕನ್ನಡ. Bright, splendid Kannaḍa (Subhâshitanîtikanda). — ಬೆಳುಗಾಯಿ. -ಕಾಯಿ. A white kâyi (V. 37, after 10; J. 30, 4). — ಬೆಳುಗಾರ. -ಕಾರ. = ಬಳಿ-, ಬಿಳ-, ಬಿಳು-. Borax (ಟಂಕಣ, ರಸಯೋನಿ Nr.; ಟಂಕಣ Mr. 102; My.; Tĕ. ವೆಲಿಗಾರ, T. ವೆಣ್ಕಾರ, ವೆಲಿಗಾರ). — ಬೆಳುಗೊಡೆ. -ಕೊಡೆ. = ಬೆಳ್ಗೊಡೆ. (Bp. 50, 16; Bh. 6, 8, 12; Râm. 1, 13, 4). — ಬೆಳುದಿಂಗಳ್. -ತಿಂಗಳ್. -ಳು. = ಬೆಳ್ದಿಂಗಳ್. (ಚನ್ದ್ರಿಕೆ, ಕೌಮುದಿ, etc. Hlâ.; ಮೇಚಕ, ಕೌಮುದಿ Nn. 60; My.; Čpr. 8, 40; Bp. 8, 25; 12, 37). ಬೆಳುದಿಂಗಳೊಡನೆ ಕೂಡಿದ ಇರುಳು (ಜ್ಯೋತ್ಸ್ನಿ Nr.). — ಬೆಳುನಗೆ. = ಬೆಳ್ನಗೆ. (Bh. 1, 15, 19). — ಬೆಳುವಟ್ಟೆ. -ಪಟ್ಟೆ. A white waistband (Râm. 3, 6, 5; 6, 44, 7). — ಬೆಳುವಣ್ಣ. -ಬಣ್ಣ. White colour or lustre (ಧವಲಕಾನ್ತಿ Čt. I, 2; ಬಿಳಿದು Šm. 69). — ಬೆಳುವೆಳಗು. -ಬೆಳಗು. = ಬೆಳ್ವೆಳಗು. (Čpr. 6, 52).

ಬೆಳುಕ bĕḷu-ka. (Šmd. 241, Mdb. ಬಳಕ).

ಬೆಳುಪು bĕḷupu. = ಬಿಳುಪು, etc. (Čpr. 8, 42; Bp. 4, 25; 34, 5). ತೆಳುಪಾದ ಮೆಯ್, ಬೆಳುಪಾದ ಗಮ್ಪು ಎಮ್ಬನ್ತೆ (Prv.).

ಬೆಳುರ್ bĕḷur. = ಬೆಳರ್ 2. — ಬೆಳುರ್ವಣ್ಣ. -ಬಣ್ಣ. = ಬೆಳರ್ವಣ್ಣ, q. v. (*cf.* ಬೆಳುವಣ್ಣ).

ಬೆಳುವ bĕḷuva. = ಬೆಳವ. (Râm. 3, 3, 18).

ಬೆಳುವಣಿಗೆ bĕḷuvaṇigĕ. = ಬೆಳವಣಿಗೆ, etc. (B. 3, 40; 4, 48; My.).

ಬೆಳೆ bĕḷĕ. 1. (= ಬಳೆ 1, the grammatically peculiar meanings of which are commonly given also to ಬೆಳೆ). To grow (v. i.), as corn, grass, trees, etc. (ಸಸ್ಯವೃದ್ಧಿ Šmd. Dh.; ಸಸ್ಯಾವಳಿ 255; C.; T. ವಿಳೈ, M. ವಿಳೆ); to increase, etc. P. ps. ಬೆಳೆದು, ಬೆಳದು (q. v.). ನೆಲ್ಲುಂ ಕೌಂಗುಂ ಮಾವುಂ ಮಲ್ಲಿಗೆಯುಂ ಬೆಳೆವುವಲ್ಲಿ ಕಬ್ಬಿನ ರಸದಿಂ (256). ಜವೆ ಕಿಱುಜವೆ ಅಱುವತ್ತು ದಿನಕ್ಕೆ ಬೆಳೆದು ಬಹ, ಷಷ್ಟಿಕಮೆಮ್ಬ ನೆಲ್ಲುಗಳು ಬೆಳೆವ ಭೂಮಿ (ಯವ್ಯ, ಷಷ್ಟಿಕ್ಯ); ನೆಲ್ಲು ಕಱಿವೆಯೂ ಬೆಳೆವ ಭೂಮಿ (ವ್ರೈಹೇಯ, ಶಾಲೇಯ); ಹಾರಕು ಬೆಳೆವ ಕೆಯಿ (ಕೌದ್ರವೀಣ); ಹೆಸಱು ಬೆಳೆವ ಕೆಯಿ (ಮೌದ್ಗೀನ Nr.). ಬೆಳದ ತೆನೆ (ಕಣಿಶ Mr. 372). ಬೆಳೆದುದು (ಹೊಡೆಮರಳಿದುದು Bhn. 16). ಬೆಳದದು (ಮೂರ್ಛಿತ, ಸೋಚ್ಛ್ರಯ Si. 428). ಬೆಳೆದನ್ತಾದು (ಪ್ರವೃದ್ಧ, ಪ್ರೌಢ, ಏಧಿತ 374). ಕಡೆಗೂ ಬೆಳೆದಿ

ರುವದು (ಪ್ರವೃದ್ಧ, ಪ್ರಸೃತ 377). ಬಹಳ ಮೇಲಕ್ಕೆ ಬೆಳದದು (ಉಚ್ಚ, etc. 372). ಉದ್ದವಾಗಿ ಬೆಳದು ಬೊಗ್ಗಿದನ್ಥಾದು (ಬನ್ಧುರ, ಉನ್ನತಾನತ 372). ಗಣ್ಡುಸರ ಮುಖದಲ್ಲಿ ಬೆಳದ ಕೂದಲು (ಶ್ಮಶ್ರು 216). ತಲೇ ಮೇಲೆ ಕೂದಲು ಬೆಳೆಯದ ಬೋಳುತಲೆಯವನು (ಮುಣ್ಡ, etc. 198). ಪತ್ರವ್ಯವಹಾರವು ಬಹಳೀ ಬೆಳೆದದೆ (B. 4, 87). See Grj. 4, 86; Rśv. 6, after 24; Č. Bp. 11, 4; J. 3, 5; Dp. 54, 1. **2,** to bear a crop. ಅಱುವತ್ತು ದಿನಕ್ಕೆ ಬೆಳೆವ ಷಷ್ಟಿಕಗದ್ದೆ (ಷಷ್ಟಿಕ್ಯ); ತೊಱೆಯ ನೀರಿಂ ಬೆಳವ ಭೂಮಿ (ನದೀಮಾತೃಕ); ಮೞೆಯ ನೀರಿಂ ಬೆಳವ ಭೂಮಿ (ದೇವಮಾತೃಕ Hlâ.). ಧರೆ ಬೆಳೆದುದು (Šmd. 187). ಮೞೆಯಿಲ್ಲದೆ ಪೊಯ್ನೀರಿಂ ಬೆಳಗುಮೆ ಧರೆ? (Čh. v. 20). See Bp. 55, 13; 60, 23; J. 3, 4. **3,** to grow (v. t.), to raise, as a crop (My.; M., T.). ಎಲ್ಲಾ ಧಾನ್ಯವ ಬೆಳವ ಭೂಮಿ (ಉರ್ವರೆ, ಸರ್ವಸಸ್ಯೆ Hlâ.). ಕಲಮೆಯಂ ಬೆಳವ ಕೆಯ್ (ಶಾಲೇಯ Mr. 94). ಎಲ್ಲವಂ ಬೆಳವ ಮಹಿ (ಉರ್ವರೆ 92). See Bp. 60, 19; B. 5, 100. 319).

ಬೆಳೆ bĕḷĕ. 2. = ಬೆಳ್ 2, ಬೆಳ 4. Growing; growth; produce, crop (My.; B. 5, 99; M. ವಿಳೆ); standing corn, etc. (My.). ಬೆಳೆದ ಬೆಳೆಗಳ್ (Č. Bp. 11, 4). ಹತ್ತೀ ಬೆಳೆಗೆ ಉಷ್ಣಹವೆ ಬೇಕು (B. 4, 26). ಮೞೆಯಿಲ್ಲದ ಬೆಳೆ, ಮತಿಯಿಲ್ಲದ ಕೂಸು ಸಮ.—ಬೆಳೆ ಹೊಗೞಿಸಿ ಉಣ್ಣ ಬೇಕು, ಹಯನು ಹಂಗಿಸಿ ಉಣ್ಣ ಬೇಕು.—ಬೆಳೇ ಸಿರಿ ಮೊಳೆಯಲೇ ಕಾಣುವದು (Prvs.). ಹೊಲ ಗದ್ದೆ ಮುನ್ತಾದ ಬೆಳೆಗಳನ್ನು ಕುಯ್ಯುವಿಕೆ (ಲವ, etc. Si. 395). **2,** what is to grow: seed, seedlings.—ಬೆಳೆಗೆಯ್. -ಕೆಯ್. A field of standing corn, etc. (see Šmd. & Kâvy. s. ಛಲಲಲೆ).—ಬೆಳೆಗೇಡು. -ಕೇಡು. A failure of crops (B. 5, 102; My.).—ಬೆಳೆದಾಳ್. -ತಾಳ್. To bear or have a crop (Rśv. 6, 2).—ಬೆಳೆ ನೆಡು. To plant seedlings. ಪೊಡವಿ ಕಡಿಯದೆ ಬೆಳೆಯ ನೆಡುವದೇನೊ? (Dp. 148).—ಬೆಳೆ ಬಿತ್ತು. To sow (My.).—ಬೆಳೆ ಮಾಡು. To raise a crop (My.).—ಬೆಳೆಯಿಡಿಸು. To have planted or sown (My.). ಹೊಲ ಗದ್ದೆ ಮುನ್ತಾದ ಭೂಮಿಯ ಬೆಳೆಯಿಡಿಸಿ ಬದುಕುವವನು (ಕ್ಷೇತ್ರಾಜೀವ, ಕರ್ಷಕ, etc. Si. 300).—ಬೆಳೆಯಿಡು. -ಇಡು. To plant; to sow (My.).—ಬೆಳೆಯಿಡುವಿಕೆ. -ಇಡುವಿಕೆ. Planting, etc. ಉತ್ತು ಬೆಳೆಯಿಡುವಿಕೆ (ಕೃಷಿ Si. 298). ಉತ್ತು ಬೆಳೆಯಿಡುವಿಕೆ ಮುನ್ತಾದ ಕೃಷಿಕರ್ಮದಿನ್ದ ಜೀವಿಸುವಿಕೆ (ಅನೃತ, ಕೃಷಿ 299).—ಬೆಳೆವಿಣಿಲು. -ಹಿಣಿಲು. A big hump (Bh. 3, 17, 36).—ಬೆಳೆವೊಲ. -ಪೊಲ. = ಬೆಳವೊಲ, q. v.—ಬೆಳೆಸಾಲ ಕುಣ್ಟೆ. = ಬೆಳಸಾಲ ಕುಣ್ಟೆ. (My.).

ಬೆಳೆಯಿಸು bĕḷĕyisu. = ಬೆಳಯಿಸು, etc. (J. 3, 31).

ಬೆಳೆಯುವಿಕೆ bĕḷĕyuvikĕ. Growing, etc. (ಸ್ಫಾತಿ, ವೃದ್ಧಿ Si. 389). ಹೊಟ್ಟೆಯೊಳು ಗಡ್ಡೆ ಬೆಳೆಯುವಿಕೆ (ವಿದ್ರಧಿ 201).

ಬೆಳೆಸು bĕḷĕsu. = ಬೆಳಸು 1, etc. (B. 4, 55; My.).

ಬೆಳ್ಕಱ್ bĕḷkar̤. To become afraid, to fear (ಅಳ್ಕಱ್, ಭಯ Šmd. Dh., o. r. ಬೆಚ್ಚಱ್; Abh. P. 9, 4; 15, 66; V. 37, 190; Tĕ. ಬೆಳ್ಕುಱು; T. ವೆಙ್ಗು, ವೆಳ್ಗು, to fear; to be ashamed; see ಬಿಡಿಯು). P. p. ಬೆಳ್ಕಿರ್ದು, (ಬೆಳ್ಕಿತ್ತು, Abh. P. 5, 81; 15, 30). ಉರಗರಗಿದರ್, ದೈತ್ಯರ್ ಬೆಳ್ಕಿರ್ದರ್, ಅಳ್ಕಿದರಿನ್ದ್ರನ್, ಈಶ್ವರನ ಮನಮಲ್ಲಾಡಿತ್ತು (Šmd. 266).

ಬೆಳ್ಪಳ bĕḷpaḷa. (Šmd. 109). (= ಬೆಪ್ಪಳ, etc.). Trembling, tremulousness, quivering, moving about, agitation; tremblingly, unsteadily, etc. (ತರಲಾರ್ಥಂ Šmd. 395; ಸಂಚಲ Šmd. II, Kk. 86; ಸಂಚಲ Kk. 53, o. r. ಬೆಬ್ಬಳ; cf. ಮೆಳ್?).

ಬೆಳ್ಪಳಿ bĕḷpaḷi. Great lustre (ಪೆರ್ಬೆಳಗು Čt. I, 23), brightness, splendour (ನಿರ್ಮಳ Kk. 86, o. r. ನಿರ್ಮಲ; ನಿರ್ಮಳಿಕೆ 53, o. r. ನಿರ್ಮಲತೆ; ನಿರ್ಮಲ Šm. 69).

ಬೆಳ್ಪಳಿಸು bĕḷpaḷisu. = ಪೆಳ್ಪಳಿಸು, (ಬೆಬ್ಬರಿಸು). To tremble, to be full of agitation (Śśv. 4, 113). ಬೆರ್ಚಿ ಬೆಳ್ಪಳಿಸಿ ಬನ್ದಂ (Šmd. 20).

ಬೆಳ್ಪು bĕḷpu. = ಬಿಳುಪು, etc. Whiteness, etc. (ನಿರ್ಮಲತೆ Šmd. II). ಅಲರೊಳ್ ಬೆಳ್ಪು or ಅಲರ್ಗೆ ಬೆಳ್ಪು (167). ಪೂಗಳ ಬೆಳ್ಪು or ಪೂಗಳ ಬೆಳ್ಪುಗಳ್ (170). ಕುದುರೆಯ ಬಾಳ ಬೆಳ್ಪಾಗೆ ತಿಲಕನ್, ಅಡಿ ಬೆಳ್ಪಾಗೆ ಕಣಬನ್ ಅಕ್ಕುಂ (Mr. 276). See Čpr. 3, 81; 7, after 62; 8, 73. 75; Bp. 12, 20; 46, 56; Rśv. 6, 4; J. 18, 36; 25, 5; ಕಡುವೆಳ್ಪು, ಕಿಱುಬೆಳ್ಪು, ಪೊಸವೆಳ್ಪು.—ಬೆಳ್ಪು ದೋಱು. -ತೋಱು. Whiteness to appear: to be white. ಕುದುರೆಯ ಮುಖ ಬೆಳ್ಪುದೋಱಿರೆ ಬೊಲ್ಲನಕ್ಕು, ಕಾಲ್ಮೊಗಮ್ ಅಯ್ದೆ ಬೆಳ್ಪುದೋಱಿರೆ ಮಂಗಲಂ (Mr. 276).

ಬೆಳ್ಳ bĕḷl-a3. A white or bright man: an innocent, harmless man (Bp. 9, 19; My.).

ಬೆಳ್ಳಗೆ bĕḷlagĕ. Whiteness; white (C.). ಊರೆಲ್ಲಾ ತೊಳೆದರೂ ಮಸಿ ಬೆಳ್ಳಗಾಗದು (Prv.). ಬೆಳ್ಳಗಿರುವ ಹಾಲು (My.). See B. 3, 30. 36; 4, 36. 71; Prv. s. ಮೆಯ್.

ಬೆಳ್ಳನ್ನ bĕḷl-anna1. White (C.). ಬೆಳ್ಳನ್ನ ಹಾಲು (B. 2, 32; see 3, 44; 4, 71).

ಬೆಳ್ಳವಾರ bĕḷlavâra. = ಬೆಳ್ಳಾರ. A snare, a net for for snaring game, a noose (ಪಾಶ, ಬನ್ಧನಗ್ರನ್ಥಿ, ವಾಗುರೆ, ಮೃಗಜಾಲಿಕೆ Hlâ.; Tĕ. ವಲ್ಲೆ, ವಲ್ಲೆ-ತಾಡು, a noosed rope, a noose for catching cattle; ವೇಲು, to hang, dangle).

ಬೆಳ್ಳಾನೆ bĕḷl-âne4. = ಬೆಳ್ಳಗೆ. (My.). ಬೆಳ್ಳಾನೆಯದು; ಬೆಳ್ಳಾನೇ ಬಟ್ಟೆ; ಬೆಳ್ಳಾನೇ ಹಾಲು (My.).

ಬೆಳ್ಳಾರ bĕḷlâra. = ಬೆಳ್ಳವಾರ. (ಜಾಲಿಕ, ವಾಗುರ Mr. 380; Śśv. 3, 23. 25. 49; J. 6, 20).—ಬೆಳ್ಳಾರವಲೆ. -ಬಲೆ. = ಬೆಳ್ಳಾರ. (Bh. 1, 20, 51; 3, 13, 10. 23. 25).—ಬೆಳ್ಳಾರಸುತ್ತು. An encompassment with snare-nets (Bh. 3, 13, 24).

ಬೆಳ್ಳಿ bĕḷli. The white metal: silver (ರಜತ, ಕಲಧೌತ, ರೂಪ್ಯ, ತಾರ Hlâ., Mr. 98; ಶ್ವೇತ Hlâ., Mr. 467, Nn. 103; ದುರ್ವರ್ಣ, ರಜತ, ರೂಪ್ಯ, ಖರ್ಜೂರ, ಶ್ವೇತ Nr.; ಕಲಧೌತ, ರಜತ Nn. 44; ಪಿಂಜರಿ Čt. II, 80; ಪಿಂಜರ Kk. 47, Šm. 68; Si. 331; My.; T., M. ವೆಳ್ಳಿ, ವೆಳ್ಳಿಕ್ಕ, ವೆಳ್ಳಿ; Tĕ. ವೆಲ್ಲೆ, ವೆಣ್ಡಿ). ಹೊನ್ನು ಬೆಳ್ಳಿಯುಂ (ಕುಪ್ಯ Hlâ.). ಹೊನ್ನು ಬೆಳ್ಳಿಗಳನು ಕರಗಿಸಿ ಮಾಡಿದುದು (ಕೃತ); ಹೊನ್ನನೂ ಬೆಳ್ಳಿಯನೂ ಅಚ್ಚಾಗಿ ಬೆಟ್ಟದೊಡೆ ರೂಪ್ಯ ಎನಿಸುಗು (Nr.). ಬೆಳ್ಳಿ ಬೆಸೆಯ ಬೇಕಾದರೆ ಕಳ್ಳೀ ಹಾಲು ಬೇಕೇ?—ಬೆಳ್ಳಿಯಕದರೂ ಬಳ್ಳಿ ಮಾಡ ಬೇಕಾದರೆ ಕೊಳ್ಳಿ ಬೇಕು.—ಬೆಳ್ಳಿಯಾದರೆ ಕಳ್ಳಗೆ ಆಗದೇ?—ಬೆಳ್ಳಿಯಿದ್ದವನಿಗೂ ಕೊಳ್ಳೀ ಭಯ ತಪ್ಪಲಿಲ್ಲ (Prvs.). **2,** the planet Venus (My.; T., M. ವೆಳ್ಳಿ). See Bp. 34, 5; 58, 31; Rśv. 11, 23; J. 26, 17; Si. 330; Prv. s. ಮಾಣಿ.—ಬೆಳ್ಳಿಗೊಪ್ಪರಿಗೆ. -ಕೊಪ್ಪರಿಗೆ. A kŏpparigĕ of silver (Č. Bp. 47, 40).—ಬೆಳ್ಳಿ ಬಂಗಾರ. Silver and gold (B. 3, 15).—ಬೆಳ್ಳಿಯ ಬೆಟ್ಟ. = ಬೆಳ್ಳಿವೆಟ್ಟು. (Grj. 6, 40).—ಬೆಳ್ಳಿವಟ್ಟಲ್. -ಬಟ್ಟಲ್. A cup of silver (Grj. 4, 130).—ಬೆಳ್ಳಿವೆಟ್ಟು. -ಬೆಟ್ಟು. The silver mountain (ಪಿಂಜರಿವೆಟ್ಟು, ರಜತಾದ್ರಿ Šm. 10).

ಬೆಳ್ಳುಚಿ bĕḷluči. N. of a plant (ಗೂಡೆ Mr. 134, one MS. ಬೆಳ್ಳುಚಿ).

ಬೆೞಲ್ bĕḷal. (= ಬೆಳಲ, etc.?). N. of a tree (ಬನ್ದುಮರಂ Šmd. I).

ಬೇ bê. 1. = ಬೆಯ್ಯು, ಬೇಯು. To be consumed with fire, to be burnt up;—to be burnt or scorched by the sun's heat, etc.;—to be prepared, as

food for the table, by boiling, to be cooked;—to burn with a fever, with grief, etc. (ದಾಹ Šmd. Dh.; My.; T., M. ವೇ; Tĕ. ವೇಗು; *cf.* ಬಿಸು 1, etc.). P. p. ಬೆನ್ದು (Šmd. 276. 279; Čpr. 5, 132; Bp. 16, 25; 54, 80; 56, 36; 60, 18; C.); third person singular imperfect also ಬೇಯಿತು (My.), ಬೇಯಿತ್ತು (Bp. 56, 35). ಬೇವ (J. 31, 55). ಅರೆ ಬೆನ್ದುದು (ಅಪಕ್ವ, ಪೌಲಿ Nr.). ಔಷಧಂ ಬೇಯಲು ಕಷಾಯಮೆನಿಕ್ಕು (Mr. 390). ಒಲೆ ಸೊಟ್ಟಾದರೆ ಬದನೆಕಾಯಿ ಬೇಯದೇ?—ಬೆನ್ದ ಬಾಯಿಗೆ (to one who has no real knowledge) ಬನ್ದದ್ದೇ ಮಂಗಲಾಷ್ಟಕ.—ಬೆನ್ದ ಮನೆಗೆ ಹಿರಿದದ್ದೇ ಲಾಭ (Prvs.). See Čpr. 4, 45; Bp. 2, 13; 18, 88; 36, 8; 50, 28. 33. 37; 52, 14; 54, 50; 56, 38; 60, 58; Ršv. 5, 36; 37. 46; Bh. 1, 8, 89. 90; J. 15, 3; 24, 37. 47.

ಬೇ bê. 2. (=ಬ್ಯಾ). An humble, pitiable sound (used in begging). **2,** to beg with an humble, pitiable voice. P. p. ಬೇತು. ಬೇತು ಕೊಣ್ಡು ನಿಲ್ಲುತ್ತಾನೆ (My.).

ಬೇ bê. Without (Mhr., H.; see ಬೇಕೂಬ, etc.).

ಬೇಕರೆ bê2-karĕ. A person who cries out for alms with an humble, pitiable voice (My.).

ಬೇಕು bêku. = ಬೇಟ್ಕು, ಬೇಟ್ಕುಂ, (ಬೇಹು 1). Third person singular future of ಬೇಡು 1: It desires: it is wished, desired, solicited or requested; it is desirable; it is requisite, it is required, it is necessary; it is wanted; it is fit; it is due, it must;—he or she is desirable, etc., etc.;—thou art desirable, etc., etc.; you are desirable, etc., etc.;—they are desirable, etc., etc. (ಬೇಹು Bhn. 45; C.; T. ವೇಣುಂ, ವೇಣ್ಡುಂ; M. ವೇಣಂ, ವೇಣ್ಡು; Tu. ಬೋಡು). ಪುರುಷರೊಳಗಭಿಮಾನವೇ ಬೇಕು (Bp. 40, 48). ಅಂಗಿಯನ್ನು ಇಟ್ಟು ಕೊಳ್ಳ ಬೇಕೋ? ಇಟ್ಟು ಕೊಳ್ಳ ಬಾರದೋ? (B. 4, 93). ಬೇಕು ಬೇಡೆನ್ನು, ಉಸುರಲೊಲ್ಲೆ (Bp. 14, 10). ಬೆಕ್ಕುಗಳು ಪೂರ್ಣವಾಗಿ ಬೆಳೆಯ ಬೇಕಾದರೆ ಹದಿನೆಣ್ಟು ತಿಂಗಳು ಬೇಕು (B. 5, 33). ಒನ್ದು ವಿದ್ಯದೊಳಗೆ ತುಮ್ಬಾ ಜ್ಞಾನವುಳ್ಳವನಾಗಿ ಚನ್ನಾಗಿ ಕೆಲಸಾ ಮಾಡ ಹತ್ತ ಬೇಕಾದರೆ ಬಹಳ ದಿವಸ ಬೇಕು (5, 81). ಕರೆದೆವಾಂ ಜೂಜಂಗೆ, ಬೇಕೇ? (Bh. 2, 13, 39). ತೋಟ ಬೇಕೇ? (2, 13, 47). ಒನ್ದು ತೆಱದ ಮಗನಾದೊಡಂ ಬೇಕು (J. 28, 57). ಸಚೇಲಸ್ನಾನವ ಮಾಡಲಿಕೆ ಬೇಕು (Bp. 55, 35). ಇವನನಱಿಯಲು ಬೇಕು (Râm. 3, 2, 22). ಅರ್ಥಮಂ ತತ್ಕಾಲಕೀಯ ಬೇಕು (J. 29, 17). ಕಣ್ಡುದ ನುಡಿಯ ಬೇಕು (Bh. 1, 8, 16). ವಿನಾಶವನೆಸಗ ಬೇಕು (1, 8, 56). ದ್ರೋಹ ಮಾಡ ಬೇಕೆಮ್ಬ ಕೆಟ್ಟ ಇಚ್ಛೆ (ವ್ಯಾಪಾದ Si. 48). ಹೆಬಿರ ಒಡವೆಯನ್ನು ಅಪಹರಿಸಿ ದಕ್ಕಿಸಿ ಕೊಳ್ಳ ಬೇಕೆಮ್ಬುವ ದುರಾಶೆ (ಅಭಿಧ್ಯೆ 68). ಬೇಟೆಯಾಡುವ ಕೆಲಸಕ್ಕೆ ನಾಯಿಗಳು ಬೇಕೇ ಬೇಕು (B. 3, 40). ಬಿಸಿಯಾದ್ದು ಆಱಿಸ ಬೇಕು, ಹಸಿಯಾದ್ದು ಕಾಯಿಸ ಬೇಕು.—ಬೇಗೆ ಹತ್ತಿದ್ದಲ್ಲಿ ಹೊಗೆಗೆ ನಿಮಿತ್ಯ ಕೇಳ ಬೇಕೇ? (Prvs.).—Occasionally the form ಬೇಕಿಲ್ಲ is used instead of ಬೇಡ (but not in My.).—ಬೇಕಾಗು. -ಅಗು. To be solicited, to be desired, to be required, to become or be necessary, etc. (ಬೇಡಿ ಇರು Šmd. 60 Cm.). ಎಣಿಸ ಬೇಕಾದುದು (ಗಣನೀಯ Nr.). ಬೇಕಾದುದು (ಪ್ರಯೋಜನ Nn. 132). ಬೇಕಾದನಿತನ್ ಆದಡೆ ತನ್ದಪೆಂ (Bp. 14, 11). ಬೇಕಾದನಿತು ವಿತ್ತವನಿತ್ತು (28, 22). ಬೇಕಾದಷ್ಟು (ಕಾಮ, ಪ್ರಕಾಮ, ಇಷ್ಟ, etc. Si. 317). ಮನಸ್ಸಿಗೆ ಬೇಕಾದದು (ಅಭೀಷ್ಟ, ಹೃದ್ಯ, etc. 368). ಬೇಕಾದದು (ಲಘು, ಇಷ್ಟ 412). ಮಾಡ ಬೇಕಾದ ಕೆಲಸಗಳನ್ನು ಮಾಡುತಿ ರುವಿಕೆ (ಪರಾಕ್ರಮ 441). ತನಗೆ ಬೇಕಾದನ್ಥಾ ಪುರುಷನು (ರಮಣ, etc. Dhw.). ಎಳೆಯಂಗೆ ಬೇಕಾದುದು ಇಲ್ಲದಿರೆ ಮಱುಗುವಳ್ (J. 28, 16). ಬೇಕಾದ್ದು ಇದ್ದರೂ ಸೋಕೋದು ತಪ್ಪಲಿಲ್ಲ.—ಬೇಕಾದ್ದು ಕೊಟ್ಟರೂ ನೂಕಿಸಿ ಕೊಳ್ಳೋದು ತಪ್ಪಲಿಲ್ಲ.—ಬೇಕಾದದಾದರೆ ಬೇಗ ಸಿಕ್ಕೀತೇ? (Prvs.). ಬೇಕಾದ ಹಾಗೆ (ಪ್ರಕಾಮ G.). ಕಱುವಿಗೆ ತುಸ ಹುಲ್ಲು ಬೇಕಾಗಿತ್ತು (B. 2, 21). ಎಲೆಗಳ ತೂತುಗಳಲ್ಲಿ ಹವೆಯೊಳಗಿನ್ದ ತಮಗೆ ಬೇಕಾದ ವಾಯುವನ್ನು ಹೀರಿ ಕೊಣ್ಡು, ಬೇಡಾದನ್ಥ ತಮ್ಮೊಳಗಿನ ವಾಯುವನ್ನು ಹೊಱಗೆ ಬಿಡುವ ಗುಣವುಣ್ಟು (3, 36). ಕಾಱು ಬೇಕಾಗಿದ್ದರೆ (3, 91). ಅವಳು ಬೇಕಾದಷ್ಟು ನೆವ ಹೇಱಿ (4, 6). ವಿಜಯನಗರಕ್ಕೆ ಹೋಗಿ, ಬೇಕಾದ ಹಾಗೆ ಸುಲಿಗೇ ಮಾಡಿ (4, 10). ಕೊತವಾಲನು ಎಲ್ಲರಿಗೂ ಬೇಕಾದವನಾಗಿದ್ದನು (4, 20). ಹತ್ತೀ ಕಾಯಿಗಳು ಬಲಿತು ಹಣ್ಣಾಗಲಿಕ್ಕೆ ಹೆಚ್ಚು ಕಡಿಮೆ ಎರಡು ತಿಂಗಳು ಬೇಕಾಗುತ್ತದೆ (4, 27). ಒಳ್ಳೇ ನಡತೆಯ ಮನುಷ್ಯನು ಎಲ್ಲರಿಗೂ ಬೇಕಾದವನು (4, 35). ಈ ಅಚ್ಚುಕೂಟದಲ್ಲಿ ಒನ್ದು ದಿವಸದಲ್ಲಿ ಹೊಱಡುವಷ್ಟು ಪ್ರತಿಗಳನ್ನು ಲೇಖಕರ ಕೆಯ್ಲಿ ಬರಿಸ ಬೇಕಾದರೆ ಹದಿನಯ್ದು ಲಕ್ಷ ಲೇಖಕರು ಬೇಕಾಗುವರು (4, 103). ಸೂಜಿಗಳನ್ನು ಮಾಡುವ ಕೆಲಸಕ್ಕೆ ಬೇಕಾಗುವಷ್ಟು ಮನ್ದಿ ಇನ್ನೊನ್ದು ಯಾವ ಕೆಲಸಕ್ಕೂ ಬೇಕಾಗುತ್ತಿರಲಿಕ್ಕಿಲ್ಲ (4, 157). ಮಾವತನು ಆನೆಯ ಗಣ್ಡಸ್ಥಲಕ್ಕೆ ತ್ರಿವಿದು, ಬೇಕಾದತ್ತ ಅದನ್ನು ತರುತ್ತಾನೆ (5, 240). ಆ ಮೊಸಳೆಗಳಿಗೆ ಬೇಕು ಬೇಕಾದನ್ಥ ಸವಿ ಸವಿ ಆಹಾರಗಳನ್ನು ಒಯಿದು, ನೈವೇದ್ಯ ಕೊಡುತ್ತಿದ್ದರು (4, 132). ಕಟ್ಟಿಗೆಗಳನ್ನು ಕೆತ್ತಿ, ಬೇಕು ಬೇಕಾದ ಹಾಗೆ ಜೋಡಿಸಿ ಕೊಳ್ಳ ಬೇಕು (4, 152). ಆ ಹಾಳೆಯನ್ನು ಬೇಕು ಬೇಕಾದ ಹಾಗೆ ಕೊಱೆದು (4, 225).—ಬೇಕನ್ನು. -ಅನ್ನು. To say "it is wished or desired", "it is desirable," etc., etc. ಬೇಕನ್ದಾ ಕ್ಷಣ ನಾಕ ಸೇರುವನೇ?—ಬೇಕನ್ತ ಬಯಸಿದ್ದು ಬೇಸಱವಾದೀತೇ? (Prvs.). It is used to express "purposedly": ನಾನು ಬೇಕನ್ತ ಕನ್ನಡಿಯನ್ನು ಒಡಿದೆನೋ? (B. 3, 82). ಬೇಕನ್ತ ಅಲ್ಲಿ ನಿಲ್ಲುವನು (5, 205). ಬೇಕನ್ತ ತಡ ಮಾಡಿದನು (5, 236).—ಬೇಕೆನ್ನು. -ಎನ್ನು. = ಬೇಕನ್ನು. (Bp. 24, 76; J. 5, 23).

ಬೇಕೂಬ bê-kûba. Not proper: foolish, silly; a fool (My., Si. 401; Mhr., H.).

ಬೇಗ bêga. Tbh. of ವೇಗ (Šmd. 342; Čpr. 5, 8. 106; Bp. 46, 56; 57, 2). Speed; quickly (C.). ಅಮ್ಬಿನ ಬೇಗ (ದೀಪ್ತಿ, ವೇಗ, ತೀವ್ರತೆ Hlâ.). ಬೇಗ ನಡಿಯುವವನು (ಜಂಘಾಲ, etc. Si. 282).—ಬೇಗನೆ. ಬೇಗನೇ. Quickly (C.; B. 1, 10; 3, 124; 5, 72).—ಬೇಗ ಮಾಡು. To hasten, to act with precipitance (Bp. 56, 20; ಸರಸರಿಸು G.). ಬೇಗ ಮಾಡಿದವನಿಗೆ (ಒನ್ದು ಹಣಕ್ಕೆ) ಹಾಗೂ ವೀಸ (Prv.).

ಬೇಗಡಿ bêgaḍi. = ಬೇಗಡೆ 1. (B. 1, 5).

ಬೇಗಡೆ bêgaḍĕ. 1. Talc mineral, Mica resembling glass (Tĕ.);—laminae of tin covered over with some colouring substance (My.; Tĕ.; Mhr. ಬೇಗಡ). ಬೇಗಡೇ ತಗಡಾದರೆ ಬುಗಡಿಗೆ ಆದೀತೇ? (Prv.).—ಬೇಗಡೆಬೆಸೆ. -ಬೆಸೆ. To affix such laminae (Čpr. 1, 134).

ಬೇಗಡೆ bêgaḍĕ. 2. A bore, a hole, as in a gem (ಬೆಜ್ಜ Bhâ. 12; Bh. 7, 1, 10; 8, 4, 15; 8, 26, 17).

ಬೇಗಾರಿ bêgâri. Labour exacted by a government or a person in power without giving remuneration for it (My.; Mhr., H. ಬಿಗಾರ).

ಬೇಗು bêgu. 1. ಕೆಯ್ಮಾಡೆನೆ ಬೇಗೆಮ್ಬುದರ್ಥಂ (Čt. I, 51).

ಬೇಗು bêgu. 2. = ಬೇಹು 2. Spying (My.; Tĕ. ವೇಗು, ವೇಗು; T. ವೇ, ವೇಯ್, ವೇಗು, ವೇವು; M. ವೇವು; Tĕ. ವೇಗಿಂಚು, to keep awake, v. i.; ವೇಗು, to watch without sleeping; ವೇಹು, to wish for, hope, expect, watch for; *cf.* ಬೇಡು 1?).

ಬೇಗುಗಾಱ bêgu-gâṟa. = ಬೇಹುಕಾಱ. (My.; T. ವೇವುಕಾರ; Tĕ. ವೇಗುಲವಾಡು).

ಬೇಗುದಿ (bê-kudi2). Burning heat: affliction, distress, grief (ಸನ್ತಾಪ Čt. II, 89; Šs.; Bhn. 12; Bh. 8, 23, 40). — ಬೇಗುದಿಗೊಳ್. -ಕೊಳ್. To begin to grieve, etc. (J. 13, 12; 19, 13).

ಬೇಗೆ bêgĕ. = ಬೆಂಗೆ. Fire; heat; wild fire in jungles (My.; Bp. 54, 54; 56, 24; 60, 58; Ršv. 5, 45; J. 13, 47; Tĕ. ವೇಡಿ, fever). — ಬೇಗೆಗಿರ್ಚು. -ಕಿರ್ಚು. Wild fire (Abh. P. 13, 48; 15, after 39). — ಬೇಗೆಗೊಳ್. -ಕೊಳ್. To be heated, burnt (or boiled, Ršv. 5, 36). — ಬೇಗೆ ಬೀಳು. Wild fire to originate (My.). — ಬೇಗೆ ಹತ್ತು. Wild fire to break out (My.). ಬೇಗೆ ಹತ್ತಿದ್ದಲ್ಲಿ ಹೊಗೆಗೆ ನಿಮಿತ್ಯ ಕೇಳ ಬೇಕೇ? (Prv.).

ಬೇಚಿರಾಕು bê-cirâku. Untenanted, desolate (My.; Br.; Mhr., H. ಬೇಚಿರಾಖ).

ಬೇಜಾ bê-jâ. Meaningless, senseless, groundless, bad (My.; Br., H.).

ಬೇಜಾರು bê-jâru. Weariness (from fatigue, pain, vexation), annoyance (My.; Br.; Si. 398; Mhr. ಬೇಜಾರ).

ಬೇಟ bêṭa. 1. (fr. ಬಿಡು 1). Separation, parting, especially the separation of lovers (ವಿರಹಾರ್ಥ Bhn. 41; Bh. 2, 9, 17).

ಬೇಟ bêṭa. 2. (fr. ಬೇಡು 1). = ಬೇಣ್ಟ. Longings (T. ವೇಟ್ಟಲ್, ವೇಡ್ಗೈ, ವೇಳ್. desire, lust): sexual passion, erotic sentiments, the pleasures of sense; amorous pastime; love-gestures (ಉಬುಗು Šmd. I). ನವವಿಧರತೋಪಚಾರದಿನ್ ಎನ್ದುಂ ಪಟಿಸದು ಬೇಟಂ (Šmd. 291; see Šmd. s. ಬಾಬ್ವಿಣ). ಹಣವುಳ್ಳಂ ಹೆಣನಾದೊಡಂ, ಒಲಿದ ಪೋಲಾರೆ ನ್ದಡಂ ಬಿಟ್ಟರರ್ ಕ್ಷಣಮಾತ್ರಂ; ಬಹು ಕೂಟ ಬೇಟಗಳಲೇ ಸೋತನ್ದ ದಿಂ ಹಾಲ ಮುನ್ದಣ ಬೆಕ್ಕಾಡುವೋಲ್ ಅಡಿ, ಸರ್ವಧನ ತಾಂ ಪೋಗಲ್ಕೆ ಮಾ ತಾಡರ್ ಆಯ್; ಗಣಿಕಾಸ್ತ್ರೀಗುಣಮೇತಕಯ್? (Šš. in W. v. 614). ಪರಸತಿಯ ಬೇಟದಿ ಪುಣ್ಡತನದಲಿ ಹೆಣ್ಡರನು ಬಿಟ್ಟಿರ್ದ ಪೋಟರು (Abhâ. 2, 2). See Čpr. 3, 42. 43; 5, 121; 8, 53. 56; Grj. 2, after 106; Bp. 40, 40; 42, 7; 45, 29; Č. Bp. 47, 15; Râm. 1, 5, 32; 1, 14, 24; 3, 7, 22; Ršv. 11, 93. 152. 156; J. 6, 34; 7, 6; 15, 5. 26; 26, 7; 29, 35; 30, 23; Abhâ. 2, 78. 102; ಒಳ್ಬೇಟ, ಕಣ್ಬೇಟ, ಕಿವಿವೇಟ, ತನಿವೇಟ, ಪೊಸವೇಟ.

ಬೇಟಕಾರ್ತಿ bêṭa-kârti. (Šmd. 244). A woman of erotic sentiments; one making love-gestures (Râm. 1, 5, 32).

ಬೇಟಿ bêṭi. = ಬೆಟ್ಟ, etc. (My.).

ಬೇಟೆ bêṭĕ. = ಬೆರಡು, ಬೇಣ್ಟೆ. Hunting, the chase (Čpr. 5, 120; Šsv. 3, 2; J. 5, 67; C.; ಆಚ್ಛೋದನ, ಮೃಗಯೆ, etc. Si. 342; Tĕ. ಏಟ, ವೇಟ; T. ವೇಟ್ಟ, ವೇಟ್ಟೈ, ವೇಡು; M. ವೇಟ್ಟ; Tu. ಬೋಣ್ಟೆ). ಬೇಟೆಯಲ್ಲಿ ಕುಶಲವಾದ ನಾಯಿ (ವಿಶ್ವಕದ್ರು Si. 342). ಪೇಟೆಯಲ್ಲಿರುವವಗೆ ಬೇಟೆಯ ಸುದ್ದಿ ಯಾಕೆ? — ಬೇಟೆಗೋಸ್ಕರ ಬನ್ದು, ಲೂಟ ಮಾಡಿದ ಹಾಗೆ (Prvs.). **2,** animals pursued and taken by sportsmen, game (C.; B. 3, 31; 4, 10. 11. 212). — ಬೇಟೆನಾಯಿ. A hunting dog (B. 4, 41; ವಿಶ್ವಕದ್ರು Čb.). — ಬೇಟೆಯಾಡು. -ಆಡು. To hunt (C.). ಬೇಟೆಯಾಡಲ್ ಪಡುವ ಬೇಟೆ ಬೇಟೆ ಮೃಗಜಾತಿಗಳು (ಕೃಷ್ಣಸಾರ, ರುರು, ನ್ಯಂಕು, etc. Si. 170). ಬೇಟೆಯನಾಡಲೆನ್ದು, ನಡೆ ತಹ ಕಿರಾತರ್ (Râghč. 17, 64). ಬೇಟೆಯಾಡುವದಕ್ಕೆ ಕಲಿತ ಮಲ್ಲ ಬೇಟೆ ನಾಯಿಯ ಟೊಂಕ ಮುಟಿದ (Prv.). See J. 6, 20; B. 3, 75; 5, 28.

ಬೇಟೆಕಾತಿ bêṭĕ-kâti. A huntswoman. See ತಡೆವೇಟೆಕಾತಿ.

ಬೇಟೆಕಾಱ bêṭĕ-kâṟa. = ಬೇಟೆಗಾಱ, ಬೇಣ್ಟೆಕಾಱ. A hunter, a sportsman. ಹಕ್ಕಿಯ ಬೇಟೆಕಾಱಂ (ಜೀವಾನ್ತಕ, ಶಾಕುನಿಕ Nr.).

ಬೇಟೆಗಾಱ bêṭĕ-gâṟa. = ಬೇಟೆಕಾಱ, etc. (My.; B. 3, 10). ಬೇಟೆಗಾಱ ತೋಟ ಮಾಡ್ಯಾನೇ? (Prv.). See Prv. s. ಮೊಲ. — ಬೇಟೆಗಾಱನ ಹಕ್ಕಿ. The common Indian king-fisher, Alcedo bengalensis (Bd.; My.).

ಬೇಡ bêḍa. 1. A huntsman (ಕಣ್ಬಕ, ಲುಬ್ಧಕ Nn. 39; T., M.; T. ವೆಟ್ಟು, to cut down; *cf.* ಬೆರಡು); a tribe of forest people living by the chase (ಬಿಲ್ಲ Čt. I, 93; ಬಿಯದ, ಬಿಲ್ಲ, ಶಬರ Šm. 32; C.; the Bêḍas at present are fowlers, farmers, merchants, peons, etc.). ಬೇಡರ ಪಳ್ಳಿ (ಪಕ್ಕಣ, ಶಬರಾಲಯ Hlâ.). ಬೇಡರ ಹಳ್ಳಿ (ಪಕ್ಕಣ, etc. Nr.). ಬೇಡರ ತಾಣ (ಪಕ್ಕಣ Šm. 32). ಬೇಡರ್ ಮೊದಲಾಗುಳ್ಳ ಅನ್ತ್ಯಜಾತಿಗಳು (ಕಿರಾತ, ಶಬರ, ಪುಲಿನ್ದ, ಭಟ, ಮೂಲ, ಮ್ಲೇಚ್ಛ Hlâ.). ಬೇಡರ ಪಾಳ್ಯ (ಪಕ್ಕಣ, etc. Si. 114). ನವಿಲುಗಱಿಯುಟ್ಟ ಬೇಡನು (ಕಿರಾತ); ಸೊಪ್ಪನುಟ್ಟ ಬೇಡನು (ಶಬರ); ಬೇಡರ ಭಾಷೆಯನ್ನು ಬಲ್ಲವನು (ಪುಲಿನ್ದ Si. 341). ಬೇಡರ ವೋಲ್ ಮುಸಗಿ ತುಱುಗೊಳಲ್ ಬಱಿ ಸನ್ದಂ (Šmd. 281). See Bp. 54, 76; 58, 36. 48. 57. 64; Ršv. 5, 28. 122; Šsv. 4, 6. 92; J. 28, 52; ಮ್ಲೇಚ್ಛ. — ಬೇಡಜಾತಿ. A Bêḍa-tribe. ಭಿಲ್ಲರ್ ಕಿರಾತರ್ ಪುಲಿನ್ದ ಶಬರರ್ ಅಟವಿಚರರ್ ಬೇಡಜಾತಿಗಳು (Mr. 379). — ಬೇಡರವನು. -ಅವನು. = ಬೇಡ. (ವ್ಯಾಧ, ಮೃಗವಧಾಜೀವ, ಮೃಗಯು, ಲುಬ್ಧಕ Si. 341). ಬೇಡರವಗೆ ಗಾಡೀ ಸವಾರಿ ಯಾಕೆ? (Prv.). — ಬೇಡರಸ. -ಅರಸ. A chief of huntsmen (Abh. P. 4, 38). — ಬೇಡವಟ್ಟ. -ಹಟ್ಟ. A village of huntsmen (Abh. P. 8, after 54). — ಬೇಡವಡೆ. -ಪಡೆ. A company or force of huntsmen (Abh. P. 4, after 37; 7, after 115; Râghč. 17, 68. 73; J. 28, 40). — ಬೇಡವೆಣ್. -ಪೆಣ್. A Bêḍa woman (Ršv. 5, after 55; 5, 112).

ಬೇಡ bêḍa. 2. A short form of ಬೇಡದು, 3rd person singular negative of ಬೇಡು 1 (the contrary of ಬೇಕು). It does not desire: it is not wished, desired, solicited or requested; it is not desirable; it is not requisite, required or necessary; it is not wanted; it is not fit; it is not due, it must not;—he or she is not desirable, etc., etc.;—thou art not desirable, etc., etc.;—you are not desirable, etc., etc.;—they are not desirable, etc., etc. (C.; ನಿಷೇಧ Si. 469; ವಾರಣ 473; T. ವೇಣ್ಡಾಂ; M. ವೇಣ್ಡ; Tu. ಬೊಡ್ಚಿ). In politely accosting the forms ಬೇಡಿರಿ or ಬೇಡರಿ are used (B. 4, 75. 76. 77; 5, 132. 133). ಇದಟಕೊಳ್ ಸಾಕಲ್ಯಸಂಜ್ಞೆ ಪೇಟಿವೆನಲ್ ಬೇಡ! (Šmd. 61). ಬೇಡ ಗಡಾ, ಬೇಡ ಗಡಾ ನಿನಗಾತನೊಳ್ ಚಲಂ! (143). ಕಿವಿಗೆ ಸೊಗಯಿಸದೆಡೆಯೊಳ್ ಆದನೆಸಗಲ್ ಬೇಡ (268). ಸೊಪ್ಪಿಕ್ಕುಮೆನವೇಡ (269). ನಮ್ಮೊಳು ಭೀತಿ ಬೇಡ! (Bh. 1, 8, 74). ಪಾತಕನ ಹೆಸರೆ ಮೂಱು ಲೋಕದೊಳಗೆ ಯಾತಕ್ಕು ಬೇಡ (Sp.). ಈಶತ್ವಮಿಲ್ಲದೇ ನೀನೀಶನೆನ್ನಾದಿ? ಈಶನೀಶನೆನ ಬೇಡ! ಲೋಕಕೆ ಮಾನೀಶನೆ ಈಶ (Sp.). ಅಸೂಯೆಗೀಡಾಗ ಬೇಡ! (J. 29, 17). ಇದನ್ನು ಮಾಡು! ಅದನ್ನು ಮಾಡ ಬೇಡ! ಎನ್ದು, ಹಿರಿಯರು ಕಿಱಿಯರಿಗೆ ಹೇಳುವದೇ ಆಜ್ಞೆ (B. 3, 53). ಮೆತ್ತಗಾಗಿರ ಬೇಡವೇ? (Bp. 38, 35). ಇತ್ತ ಬರ ಬೇಡ! ಎಲವೊ, ಹೋಗು! (40, 12). ಅಱಿಯವೇಡ (40, 24). ನಿಮ್ಮ ದುರುಕ್ತಿಗಳು ಬೇಡ (56, 24). ಕಾಕುಮಾತು ಆಡ ಬೇಡ, ಪೋಕವಿಟ್ಟೆಗೆ

ಹೋಗ ಬೇಡ.— ಪೂಮಾಲೆಯಿಲ್ಲದಿದ್ದರೆ ರೂಮಾಲೆ ಬೇಡವೋ?— ಬಡವಗೆ ಆಸೆ ಹೇಳಿ ಬೇಡ, ಬಲ್ಲಿದವಗೆ ಬಾಸೆ ಹೇಳಿ ಬೇಡ.— ಹಾರುವನಿಗೆ ಆಳಾಗ ಬೇಡ, ಗಾಣಿಗನಿಗೆ ಎತ್ತಾಗ ಬೇಡ (Prvs.). ಈ ಪುಸ್ತಕವನ್ನು ಮಾಸ ಬೇಡ! (B. 2, 1). ಪೊಱ ಬೇಡಂಗಡಿಸಾಲಪೂರ ಹೊಣೆಯಂ ನಿಸ್ಸ್ವಂಗಳಂ ಪಾಪಪಂ, ಮಱೆವೇಡಾತ್ಮಜಮಿತ್ರನೈಜಸತಿಯೊಳ್ ನ್ಯಾಯಂಗಳೊಳ್ ಸತ್ಯಮಂ, ಸೆಱೆವೇಡಂಗನೆಪಕ್ಷಿವೃದ್ಧತರುಣೀಗೋವಿಪ್ರ ದಾರಿದ್ರರಂ, ತೆಱ ಬೇಡೊತ್ತೆಗೆ ಬಡ್ಡಿಯಂ (Šš. 34). Honorific plural ಬೇಡಿರಿ! (C.), ಬೇಡಿ! (My.). — ಬೇಡನ್ನು. -ಅನ್ನು. = ಬೇಡೆನ್ನು. ಯಾರು ಬೇಡನ್ನುತ್ತಾರೆ? (who does object? My.). ಬೇಡನ್ನರೂ ಮಗ ಆಡು ಕಾಯೋದು ಬಿಡುವದಿಲ್ಲ (Prv.). — ಬೇಡ ಬೇಡ. rep. (Bp. 21, 47; 43, 52). ಬೇಡ ಬೇಡೆನ್ನದೆ ಬಿಡಿಸಿದಂ (Šmd. 272). — ಬೇಡವಾಗು. -ಆಗು. = ಬೇಡಾಗು. (My.). ಬೇಡವಾದ್ದು ಕೂಡಿಸಿದರೆ ಆದೀತೇ? (Prv.). — ಬೇಡವೆನ್. -ಎನ್. = ಬೇಡೆನ್. ಬೇಡವೆಮ್ಬುದು (ವಾರಣ Nr.). — ಬೇಡಾಗು. -ಆಗು. To be undesirable, etc., etc. ಎಲೆಗಳ ತೂತುಗಳಲ್ಲಿ ಹವೆಯೊಳಗಿನ್ದ ತಮಗೆ ಬೇಕಾದ ವಾಯುವನ್ನು ಹೀರಿ ಕೊಣ್ಡು, ಬೇಡಾದನ್ನ ತಮ್ಮೊಳಗಿನ ವಾಯುವನ್ನು ಹೊಱಗೆ ಬಿಡುವ ಗುಣವುಣ್ಟು (B. 3, 36). ಜೇಡನ ಬಲೆಯಲ್ಲಿ ಕಾಱು ಇದ್ದದಱಿನ್ದ ಅವನಿಗೆ ಅವು ಬೇಡಾಗಿದ್ದರೆ (3, 91). ಲೋಕಾಪವಾದದಿನ್ದ ಜನರಿಗೆ ಬೇಡಾದವನು (ಅಭಿಶಸ್ತ G.). — ಬೇಡೆನ್. -ಎನ್. ಬೇಡೆನ್ನು. To forbid, etc.; to refuse, etc. ಬೇಡೆನುಹ (ನಿಷೇಧ); ಬೇಡೆನ್ದು ಒಱಲುಹ (ಆಕ್ರೋಶನ, etc. Nr.). ಬೇಡೆನ್ದು ಬಿಟ್ಟನು (My.). ಬೇಡೆನವೇಡ! (Ršv. 13, 26).

ಬೇಡ bêḍa. 3. A man of a timid heart, a timid man (ಭೀತಚಿತ್ತ Bhn. 4; Bp. 9, 32; 31, 6; see ಬೆಳ್ಕಱ್).

ಬೇಡತಿ bêḍati. A female of the Bêḍa tribe (ಶಬರಿ G.; My.; see Râghč. 17, 66; Šsv. 2, 7; Bh. 1, 8, 87; ಎಳೆ ವೇಡತಿ).

ಬೇಡಿ bêḍi. A chain, a fetter (My.; Br.; B. 5, 151; Mhr., H.). ಆನೇ ಬೇಡಿ (ಶೃಂಖಲ, ಅನ್ದುಕ, ನಿಗಲ Si. 271). ಬೇಡಿಲಿ (or ಬೇಡೀಲಿ) ಇದ್ದವಗೆ ನಾಡಿನ ಯೋಚನೆಯೇ?— ಬೇಡಿಲಿ ಬಿದ್ದರೂ ಕೇಡು ಬಿಡಲಿಲ್ಲ (Prvs.).

ಬೇಡಿಕೆ bêḍikĕ. Asking, entreating (My.).

ಬೇಡು bêḍu. 1. (Šmd. 90). = ಬೇಱ್. To wish, to desire (ಬಯಸು Šmd. 387 Cm.; T. ವೇಣ್ಡು);—to solicit, to beg, to pray, to entreat, to request (ಯಾಜ್ಞೆ Šmd. Dh.; Šm. 95; C.; T. ವೇಣ್ಡು; Tĕ. ವೇಡು; Tu. ಬೇಡು; T. also: to be necessary, be wanted; see ಬೇಕು, ಬೇಡ 2, ಬೇಹ). ಬೇಡಿದನಿಷ್ಟಮುಂ ಸಲಿಪುದು ಕರ್ಣಂಗೆ ಜನ್ಮವ್ರತಂ (Šmd. 89). ಜಾತವೇದಂ ಪಟುಕಪಟಮಯವ್ಯಾಜದಿಂ ಬೇಡಿ, ಪೆತ್ತಂ (285). ಕುಱುಪತಿಯಂ ವಿಷ್ಣು ಬೇಡಿದಂ ಧರೆಯುರೆಯಂ (77). ದಾನಿಯಂ ದಾನಮಂ ಬೇಡಿದಂ (157). ಅವುದು ಮಾಡಲ್ ಬೇಡಿದುದು, ಅದುವೆ ಕರ್ಮಂ (155). ಬೇಡುವಂ or ಬೇಳ್ವಂ (28). ಬೇಡುವವ (ಅರ್ಥಿ, ಮಾರ್ಗಣಕ, ಯಾಚಕ, ವನೀಪಕ Hlâ.). ಬೇಡುವಂ (ಎರೆವಂ, ಯಾಚಿಸುವಂ Šm. 47). ಬೇಡುವವನು (ಮಾರ್ಗಣ, ಯಾಚಕಜನ Nn. 70). ಬೇಡುವವನು (ವನೀಪಕ, ಯಾಚನಕ, ಮಾರ್ಗಣ, ಯಾಚಕ, ಅರ್ಥಿ, ಕೇಳುವವನು Si. 367). ಮಾಱಲ್ ಬೇಡಿ ಅಂಗಡಿಯಲ್ಲಿ ಪಸರಿಸಿದ ದ್ರವ್ಯವು (ಕ್ರಯ್ಯ); ಆಗಲು ಬೇಡಿದುದು (ಭಾವುಕ, ಭವಿಕ, ಭವ್ಯ); ಬೇಡಿಕೊಳುಹ (ಪ್ರಾರ್ಥನ Nr.; *cf.* ಬೇಡುಹ). ಬೇಕಾದದು ಹೋಗಿ ಬೇಡದ್ದು ಆಗುವಿಕೆ (ಪ್ರಪಂಚ, ವಿಪರ್ಯಾಸ Si. 412). ಇನ್ನು ಮೇಲೆ ಇನ್ಥಾ ಕೇಡುಗಳು ಉಣ್ಟಾಗ ಬಾರದೆನ್ದು, ನಾವು ದೇವರನ್ನು ಕುಱಿತು ಬೇಡಿ ಕೊಳ್ಳುತ್ತೇವೆ (B. 5, 2). ಅವನು ಅರಸನಲ್ಲಿ ಏನಿಕೆ ದ್ರವ್ಯ ಬೇಡಿದ್ದನು (5, 67). ತನ್ದೆಯ ಕೀರ್ತಿ ಹೆಚ್ಚಾಗಲೆನ್ದು, ದೇವರಿಗೆ ಬೇಡಿ ಕೊಣ್ಡಳು (5, 72). ಈ ಮುದುಕ ಬಿಕ್ಕೆ ಬೇಡಿ, ಕಾಱು ತರುತ್ತಾನೆ (2, 38). ಕುಣ್ಬರು ತಮ್ಮಲ್ಲಿ ಬಿಕ್ಕೆ ಬೇಡ ಬನ್ದರೆ ತಮ್ಮ ಕೆಯ್ಯಾದದು ಕೊಟ್ಟು, ಅವರನ್ನು ಕಳುಹಿಸ ಬೇಕು (4, 34). ತಲೆಗೆ ಎಣ್ಣೆ ಇಲ್ಲ, ತನು ಮೃಗನಾಭಿ ಬೇಡಿತು.— ನಾನಾರಾಯನ ಹತ್ತರ ಹೋಗಿ, ನಾಲ್ಕು ಕಾಸು ಬೇಡಿದ.— ಪೆಟ್ಟು ಕೊಟ್ಟಾಗ್ಯೂ ಹಿಟ್ಟು ಬೇಡೋದು ಬಿಡಲಿಲ್ಲ.— ಬೇಡಿ ಉಣ್ಣ ನಾಲಿಗೆ ನಾಡು ಕಣ್ಡಿತು.— ಕಳ್ಳತನ ಎಮ್ಬ ಕಾಮಧೇನು ಇರುವಾಗ ಬೇಡಿ ತಿಮ್ಬುವ ಬಣ್ಡಜನ್ಮ ಯಾಕೆ?— ಬೇಡಿ ಕೊಣ್ಡಷ್ಟೂ ಹೇಡಿತನ ಹೋಗಲಿಲ್ಲ.— ಬೇಡಿ ಕೊಣ್ಡು ತಿನ್ನ ಬಹುದು, ಕದ್ದು ಕೊಣ್ಡು ತಿನ್ನ ಬಾರದು.— ಬೇಡುವದೇ ಕಷ್ಟ, ಬೇಡಿದರೂ ಇಲ್ಲವೆನ್ನುವದು ಅತಿಕಷ್ಟ (Prvs.). See Čpr. 3, 103; 5, 102; Bp. 1, 65; 9, 32. 49; 22, 40; 26, 14. 67; 30, 30; 32, 63; 42, 6; 43, 60; 46, 47. 51; 47, 39; 50, 68. 80; 53, 39; Č. Bp. 47, 3; J. 4, 65; 5, 12. 59; 26, 52; Sp. s. ಮುನ್ನೀ; Prv. s. ಓಕೆ.

ಬೇಡು bêḍu. 2. A multitude of huntsmen or Bêḍas (ಬೇಡರ ಸಮೂಹ Šmd. Dh.; ಶಬರಸಮೂಹ Šm. 95; ಬೇಡರ ಗೊನ್ದಣ Šm. 32; *cf.* ಬೀಡು 3; T. ವೇಡು, a tribe of wild people).

ಬೇಡುವಿಕೆ bêḍuvikĕ. = ಬೇಡಿಕೆ. (My.; B. 5, 67; ಯಾಜ್ಞೆ, ಅಭಿಶಸ್ತಿ, ಯಾಚನೆ, ಅರ್ಥನೆ, ಕೇಳಿ ಕೊಳ್ಳುವದು Si. 245; ಯಾಜ್ಞೆ, ಭಿಕ್ಷೆ, ಅರ್ಥನೆ, ಅರ್ದನೆ, ಕೇಳುವಿಕೆ, ತಿರಿದಾಡುವಿಕೆ 287).

ಬೇಡುಹ bêḍuha. Soliciting, begging, praying, etc. (ಅಧ್ಯೇಷಣೆ, ಏಷಣೆ, ಯಾಜ್ಞೆ, ಯಾಚನೆ, ಪ್ರಾರ್ಥನೆ Hlâ.; ಯಾಚೆ, ಭಿಕ್ಷೆ, ಅರ್ಥನೆ, ಅರ್ದನೆ Nr.).

ಬೇಡೆ bêḍĕ. = ವೇಡೆ 1. *A boat.*

ಬೇಣ್ಟ bêṇṭa. = ಬೇಟ 2. (Čpr. 6, 85).

ಬೇಣ್ಟಿಗ bêṇṭiga. A hunter (Šsv. 3, 24).

ಬೇಣ್ಟೆ bêṇṭĕ. (Šmd. 48). = ಬೇಟೆ, etc. (ಆಚ್ಛೋಟನ, ಮೃಗಯೆ, ಮೃಗವ್ಯ, ಪಾಪರ್ದ್ಧಿ, ಆಖೇಟಕ Hlâ., Mr. 270; ಸರವಿ Šmd. II, Čt. I, 7, Šm. 108; ಸರಡು, ಸರವಿ Kk. 51; ಸರ, ಸರವಿ Šm. 31; My.; Bp. 27, 22). ಬೇಣ್ಟೆಯ ಉಳಿ (Šmd. I). ಬೇಣ್ಟೆಯ ತೆರೆ (ಪಱಿಪ I). ಬೇಣ್ಟೆಯ ಕೆರ (ಎಕ್ಕವಡ Čt. II, 36). ಬೇಣ್ಟೆಯ ನಾಯಿ (ವಿಶ್ವಕದ್ರು Hlâ.). ಮುಳಲ ಬೇಣ್ಟೆಯಂ ಮಾಡಿದ ಪೋಲ್ (Šmd. II). See Ršv. 5, 52; Šsv. 3, 48. 64; J. 2, 54; 28, 40; 29, 23; ಮಿಗವೇಣ್ಟೆ. — ಬೇಣ್ಟೆಯಾಡು. = ಬೇಟೆಯಾಡು. (Bp. 34, 17; Râghč. 17, 67). — ಬೇಣ್ಟೆವಸನ. -ಬಸನ. Pursuit of hunting (Čpr. 8, after 4). — ಬೇಣ್ಟೆವೋಗು. -ಪೋಗು. To go a hunting, to go to the chase (Ršv. 5, after 50).

ಬೇಣ್ಟೆಕಾಱ bêṇṭĕ-kâṟa. = ಬೇಟೆಕಾಱ, etc. (ವ್ಯಾಧ, ಮೃಗವಧಾಜೀವ, ಮೃಗಯು, ಲುಬ್ಧಕ Nr.; Bp. 9, 48; 34, 23. 36; 47, 36).

ಬೇತಾಳ bêtâḷa. = ವೇತಾಲ. (Abh. P. 14, after 90; J. 22, 23; My.). ಬೇತಾಳನಾದರೆ ನೇತಾಡ್ಯಾನು, ಮಾತಿಗೆ ಪ್ರಸವವೇದನೆ.— ಬೆನ್ನ ಹಿನ್ದೆ ಬನ್ತು ಬೇತಾಳ.— ಬೇತಾಳಗೆ ಜ್ಯೇಷ್ಠಾದೇವಿಯೇ ಒಪ್ಪಿದ ಹೆಣ್ಡತಿ.— ಕಾಡು ಬೆಳದರೆ ಬೇಡನಿಗೆ ಬಿಡ ಬೇಕು, ನಾಡು ಸೊಕ್ಕಿದರೆ ಬೇತಾಳನಿಗೆ ಬಿಡ ಬೇಕು (Prvs.). See Prv. s. ಬಾಯಿಗೆ ಬರು.

ಬೇತು bêtu. P. p. of ಬೇ 2.

ಬೇತು bêtu. Plan, scheme, plot; purpose, design; method; form (Mhr., H.; ಉದ್ದೇಶ, ಸಂಕೇತ Čb.).

ಬೇದ bêda. 1. Tbh. of ವೇದ (Čt. II, 44). — ಬೇದಬಿಜ್ಜಿಗ. Brahmâ (ಅಜ್ಜ Čt. II, 3; ಬೊಮ್ಮ Kk. 9; ಬಿದಿ, ಅಲರಿಜ, ಬೊಮ್ಮ, etc., ಬ್ರಹ್ಮ Šm. 8).

ಬೇದ bêda. 2. Tbh. of ಭೇದ (My.; B. 5, 23).

ಬೇದನೆ bêdanĕ. Tbh. of ವೇದನೆ (Šmd. 342).

ಬೇನೆ bênĕ. (Heat; T., M. ವೇನಲ್, ವೇನಿಲ್): pain; sickness, disease (C.). ಬೇನೆ ತಗಲುವಿಕೆ (ಸ್ಪರ್ಶ, ಸ್ಪೃಷ್ಟಿ, ಉಪತಪ್ತ Si. 392). ಒಳಗೊಳಗೆ ಬಸುಱೆಱುವ ಬೇನೆ (Bp. 3, 14). ಬೇನೆ ಗಾನದಿನ್ದ ಹೋದೀತೇ?— ಬೇನೆ ನಿತ್ತರೂ ಹೇನಿನ ಕಾಟ ನಿಲ್ಲಲಿಲ್ಲ (Prvs.). See ಇರ್ಬೇನೆ, ಕಣ್-, ಹೊಟ್ಟೆ-. — ಬೇನೆ ಬರು. Pain

or disease to come, be brought on or be created (B. 4, 32. 53. 141; My.). — ಬೇನೆ ಬೀೞು. Pain or disease to happen: to become unwell (My.). ಹಿನ್ದಕ್ಕೊಮ್ಮ ಬೇನೇ ಬಿದ್ದಿದ್ದನು (B. 3, 59). ಮಱುದಿವಸವೇ ಬೇನೆ ಬೀೞುತ್ತಾನೆ (4, 139). ಕುಟುಮ್ಬದೊಳಗಿನವರು ಬೇನೆ ಬೀೞುತ್ತಾರೆ (5, 90). ಯಾರಾದರೂ ಬೇನೆ ಬಿದ್ದರೆ (5, 304). — ಬೇನೆಯವ. -ಅವ. A sick, diseased man (ಅಭ್ಯಮಿತ, ರೋಗಿ, ಅಭ್ಯಾನ್ತ, ಆಮಯಾವಿ G.; B. 4, 76).

ಬೇಪರವಾ bê-paravâ. Carelessness, inattention (My.; Br., Mhr., H.).

ಬೇಪಾರ bêpâra. Tbh. of ವ್ಯಾಪಾರ. (My.; Br.; Mhr., H.). — ಬೇಪಾರ ಸಾಪಾರ. reit. (My.).

ಬೇಫಾಮು bê-phâmu. Inadvertence, heedlessness (My.; Br., Mhr., H.).

ಬೇಬನ್ದು bê-bandu. Devoid of order, confused; disorder, etc. (My.; Br., Mhr., H.).

ಬೇಯಿಸು bêyisu. = ಬೆಯಿಸು, ಬೇಸು. To consume with fire, to burn up. 2, to prepare, as food for the table, by boiling;—to bake, as bread (My.; Tĕ. ವೇಯಿಂಚು). ಬೇಯಿಸಿದ ಅನ್ನ ಪಾಯಸವಾಗದೇ? (Prv.). 2, to pain (v. t.), to afflict (J. 8, 47).

ಬೇಯು bêyu. = ಬೇ 1, etc. P. p. ಬೆನ್ದು. ಬೇಯುವದು (C.).

ಬೇರ್ bêr. (Šmd. 58). = ಬೇರು, ಬೇರ್ 1. A root (ನೇತ್ರ Hlâ., Mr. 471; ಮೂಲ Nn. 66; ಜಟೆ Mr. 518; T., M. ವೇರ್). ಬೇರ್ಗಳ್ (Šmd. 51. 112. 133; Čpr. 1, 90; J. 3, 36). ನೆಲಾವರೆಯ ಬೇರಂ (Šmd. 345). ಬೇರ್ ಪೞಿದುದು (219). ಪಸರಿಸಿದ ಬೇರ್ (ಪಾದ, ಮೂಲ Mr. 104). ಸಂತಯದ ಬೇರ್ (Bp. 11, 15). ಭವದ ಬೇರ್ (37, 24). ಬೇರಿಂ (Čpr. 1, 71). — ಬೇರಿೞಿ. -ಇೞಿ. A root to descend. ಬೇರಿೞಿಯೆ ಜಡೆಗಳ್ (Ršv. 1, 134). — ಬೇರೂಱು. -ಊಱು. To fix the root, to root, as plants, etc.; to take root, to be established; to spring up, to originate. See Bh. 2, 2, 114; J. 30, 30.

ಬೇರ bêra. 1. Tbh. of ವೈರ (Šmd. 357). Enmity (Tĕ. ವೇರ). 2, an enemy (ಮಱುವಸಲ, ಮೂಱಿಡಿ, ಪಗೆ Šs.; see ರಕ್ಕಸಬೇರ).

ಬೇರ bêra. 2. Tbh. of ವ್ಯಾಪಾರ. (My.; Tĕ.). — ಬೇರ ಮಾಡು. To traffic (My.).

ಬೇರಿ bêri. 1. Tbh. of ವ್ಯಾಪಾರಿ. (Si. 298; Tĕ.; M. ಬಿಯಾರಿ).

ಬೇರಿ bêri. 2. Tbh. of ಭೇರಿ (Šmd. 339; My.).

ಬೇರೀಜು bêrîju. The total of an addition: an amount (Mhr.); the total assessment of a land, a village, a district, etc. (My.; Br.). ಒಟ್ಟುಬೇರೀಜು (ಸಮೂಹ್ನಾಯ Čb.).

ಬೇರು bêru. = ಬೇರ್, etc. (C.; Tĕ. ವೇರು). ಮರದ ಬೇರು (ಪಾದ, ಮೂಲ Hlâ.). ಮೂಲ ಎನ್ದೊಡೆ ಬೇರಿಂಗೆ ಪೆಸರು (Nr.). ಕುಲದ ಬೇರಿಗೆ (Bp. 3, 58). ದುರ್ಭವದ ಬೇರು (61, 79). ಯುದ್ಧದ ಬೇರನ್ನು ಕಿತ್ತು ಚೆಲ್ಲ ಬೇಕು (B. 5, 70). ಕಬ್ಬಿನ ಬೇರುಗಳು (ಮೋರಟ, ಐಕ್ಷವಮೂಲ Si. 335). ಬೇರು ಇಲ್ಲದ ವೃಕ್ಷವೇೞಿ ನೋಡುವದೇನು? (Dp. 167). ಬೇರು ಇದ್ದರೆ ನಾರು ಸಿಕ್ಕೀತು.— ಬೇರು ಬಲ್ಲವಗೆ ಎಲೆ ತೋಱಿಸೋದು ಯಾಕೆ?—ಬೇರು ಹೋದ ಮೇಲೆ ಮರದ ಯೋಚನೆ ಯಾಕೆ? (Prvs.). — ಬೇರಿನ ಪಲ್ಲೆ. Roots used as vegetables (My.). — ಬೇರುಕಡಲೆ. = ನೆಲಕಡಲೆ. (St. & Pl.). — ಬೇರುಗೊಲೆ. -ಕೊಲೆ. Destruction of the root, utter ruin (Bh. 7, 19, 22). — ಬೇರು ದರಿಸಲೆ (= ಧರಿಸಲೆ). With the roots, by the roots (My.). ಕಬ್ಬು ಸೀಯೆನ್ದು, ಬೇರು ದರಿಸಲೆ ತಿನ್ನ ಬಾರದು (Prv.). — ಬೇರು ಬಿಡು. To begin to root (My.). ಒನ್ದು ಮೊಳಿಕೆ ಕೆಳಗೆ ನೆಲದೊಳಗಿೞಿದು ಬೇರು ಬಿಡುತ್ತದೆ (B. 3, 35). — ಬೇರುವೆರಸೆ. -ಬೆರಸೆ. With the roots (My., also ಬೇರುವರಿಸೆ, ಬೇರುವೆರಸಲೆ). — ಬೇರು ಸಹ. = ಬೇರು ದರಿಸಲೆ. (ಸಮೂಲ Čb.; My.). — ಬೇರು ಸಹಿತ. = ಬೇರು ಸಹ. (Bp. 57, 16; My.).

ಬೇರುಗ bêr-uga. (Šmd. 240). A man who deals in, or sells, roots.

ಬೇರುಣ್ಡ bêrunḍa. Tbh. of ಭೇರುಣ್ಡ. (My.).

ಬೇರುಷ್ಟ bêrushṭa. See Mr. s. ಗೇರಕಾಟ್.

ಬೇರೋಜು bê-rôju. Without wages for a day.

ಬೇರೋಜುಗಾಱ bêrôju-gâṟa. A man without employment, an unemployed man (My.). ಬೇರೋಜುಗಾಱ ಸರ್ವಮೊಕ್ತಿಯಾರ (is entirely his own master, Prv.).

ಬೇರೋಜುದಾರ bêrôju-dâra. = ಬೇರೋಜುಗಾಱ. (My.).

ಬೇಱ್ bêṟ. ಬೇಱು. = ಬೇರ್ 2. Separation; the state of being separate, apart, or different (ಇತು Nn. 164; T. ವೀಱು, ವೇಱು, ವೇಱ್ಱು; M. ವೇರ್, ವೇಱು; Tĕ. ವೇಱು; cf. ಬೀೞ 2; Tĕ. ಬೆಡ, to separate or fly off, as a splinter, etc.; ವೀಡು, to be separated, loosened; T. ವೀಱು, to be split, cleft = ಏಱಿ; to be alone; Tĕ. ವೀಲು, to split, burst asunder). — ಬೇಱು ನುಡಿ. To express separation, etc. ಬೇಱು ನುಡಿವೆಡೆಯೊಳ್ ಆ ವ್ಯತಿ ಪೃಥಕ್ ಎನಾ ಅನ್ತರ ಮೆಮ್ಬ ಪೆಸರ್ಗಳಕ್ಕು (Mr. 534). — ಬೇಱು ಮಾಡು. To separate, to set apart. ಬೇಱು ಮಾಡುವುದು (ಹಃ, ಪೃಥಕ್ Nn. 163).

ಬೇಱೆ bêṟe. (= ಬೇಱ್). Separation, etc.;—separate, apart, different, other, else; separately, etc. (My.; ಅನ್ಯವಾಗಿ Šmd. 74 Cm.; Tĕ. ವೇಱೆ; T., M. ವೇಱೆ); further (Bp. 36, 28; ತಿರ್ದಿ ನರನ್ ಉದ್ದಮಿಸೆ ಬೇಱೆಟ್ಟಿಂ Šmd. 280). ಬಗೆಯೊಳ್ ಪೞತೊನ್ದನ್ ಅಣಂ ಬಗೆಯಲ್ ಗಡ ನಿನಗೆ ಸುಮತಿ ಬೇಱಾಂ ಬೇಱೆಂ (Šmd. 277; Kâvy. I, 5, 39). ಬೇಱೆಲ್ಲಿ? (Bp. 57, 70). ಬೇಱೆಂ ಗತಿಗಳುಣ್ಟೇ? (51, 6). ಬೇಱೆ ಪಾಣ್ಡವರಿರಲಿ! ರಾಯನ ನೂಱು ಮಕ್ಕಳು ಪುರವನಾಳಲಿ! ಬೇಱೆ ಕೌರವರಿರಲಿ! ಪಾಣ್ಡವರಾಳಲಿ ಇಭಪುರಿಯ! ನೂಱರೊಡನೆ ಅಯ್ವರನು ಧರಿಸಿರಲಾಱದು ಪುರಿ (Bh. 1, 8, 3). ಬೇಱೆನು? (2, 13, 24). ನೃಪತಿಲಕರಿದ್ದರು ಬೇಱೆ ರಚಿಸಿದ ರಾಜಭವನದಲಿ (2, 13, 14). ಗುಡಿಯ ಬೋದಿಗೆ ಕಲ್ಲು, ನಡುರಂಗ ತಾ ಕಲ್ಲು, ಕಡೆ ಮೂಲೆ ಸೆಱಗು ತಾ ಕಲ್ಲು; ವರವನು ಕೊಡುವಾತ ಬೇಱೆ (Sp.). See Čpr. 3, 16; 8, 42; J. 3, 18. — ಬೇಱೂರ್. -ಊರ್. ಬೇಱೂರು. Another town or village (Čpr. 5, after 66; V. 9, after 71; B. 3, 72; see Sp. s. ಬಾಯಾಱು). — ಬೇಱೆ ಬೇಱೆ. rep. Separately, one by one, severally; separate, different; various, many (ಪೃಥಗರ್ಥಂ Šmd. 392; ಪ್ರತ್ಯೇಕ 255 Cm.; ಒನ್ದೊನ್ದಾಗಿ 352 Cm.; ಪರಸ್ಪರ, ಮಿಥಸ್, ಅನ್ಯೋನ್ಯ, ಇತರೇತರ Hlâ.; ಇತರೇತರ, ಅನ್ಯೋನ್ಯ, ಪರಸ್ಪರ Mr. 437). ಹಿಮವತ್ ನಿಷಧ ವಿನ್ಧ್ಯ ಮುನ್ತಾದ ಪುಗಳೆಲ್ಲಾ ಪ್ರಸಿದ್ಧಗಳಾದ ಆಯಾ ಬೆಟ್ಟಗಳ ಬೇಱೆ ಬೇಱೆ ಹೆಸರುಗಳು (Si. 115). ಬೇಱೆ ಬೇಱೆ ರೂಪವುಳ್ಳದು (ವಿವಿಧ, ಬಹುವಿಧ, ನಾನಾ ರೂಪ, ಪೃಥಗ್ವಿಧ 279). ಒನ್ದೊನ್ದು ಕಟ್ಟಿಗೆಯನ್ನು ಬೇಱೆ ಬೇಱೆ ಮಾಡಿ ಮುಱಿಯ ಹೇೞಿದನು (B. 2, 30). ಬೇಱೆ ಬೇಱೆ ಮಾಡು (ಹಿಂಜು G.). See Bp. 51, 6; Bh. 2, 13, 9. 12; Ršv. 5, after 22; 6, after 11; J. 2, 27; Si. 170. 237. 284. — ಬೇಱೆ ಮಾಡು. To separate (B. 4, 27; G. 382. 532). ಬೇಱೆ ಮಾಡಿದರೆ ನಾಱೋದು ತಪ್ಪೀತೇ? (Prv.). 2, to change, to alter (v. t., My.). — ಬೇಱೆಯಾಗು. -ಆಗು. (also ಬೇಱಾಗು, see Šs. s. ಮೆಳೆ). To become separate, to separate (v. i.); to be removed or withheld; to become different, changed, etc. ಬೇಱೆಯಾಗಿರುವಿಕೆ (ಪ್ರಕಾರ, ಭೇದ Si. 448). ಇಬ್ಬರು ಮಕ್ಕಳು ತಲೆಗೆ ಅಯು ಸಾವಿರ ರೂಪಾಯಿ ಪಾಲು ಹಂಚಿ ಕೊಣ್ಡು, ಬೇಱೆ

ಯಾದರು (B. 2, 25). ಬೇಱೆಯಾದರೂ ಹಾಱ್ಯಾಡೋದು ತಪ್ಪಲಿಲ್ಲ (Prv.). See Si. 47. 183. 257. — ಬೇಱೆವೇಱೆ. = ಬೇಱೆ ಬೇಱೆ. (Čpr. 7, after 120). — ಬೇಱೊನ್ದು. -ಒನ್ದು. Another thing, something else; another. ಪುರೋಚನನು ತಾನೊನ್ದು ನೆನೆದರೆ ದೈವಗತಿ ಬೇಱೊನ್ದ ನೆನೆದುದು (Bh. 1, 8, 87). ಆ ಕುಮತಿ ಬೇಱೊನ್ದು ಉಪಾಯಮಂ ಚಿನ್ತಿಸಿ (J. 28, 29). ಬೇಱೊನ್ದು ದಿನ (ಅನ್ಯೇದ್ಯುಸ್); ಇನ್ನು ಬೇಱೊನ್ದು ದಿನ (ಇತರೇದ್ಯುಸ್ Si. 477). See Šmd. 131; Čpr. 5, after 59; Bp. 41, 17; 47, 50; 48, 28; 55, 28; B. 2, 4. — ಬೇಱೊಬ್ಬ. -ಒಬ್ಬ. Another man; another (Si. 258; B. 4, 49).

ಬೇರ್ bêr. 1. = ಬೇರ್, etc. — ಬೇರ್ಗೊಲೆ. -ಕೊಲೆ. = ಬೇರುಗೊಲೆ. Root-killing: entire destruction or ruin (J. 7, 40). — ಬೇರ್ವರೆ. -ಪರೆ. A root, or roots, to spread (Čpr. 3, 20; Bp. 38, 42; Šsv. 2, 69). — ಬೇರ್ವೆರಸು. -ಬೆರಸು. Together with the root or roots, from the root. ಬೇರ್ವೆರಸು ಕಾಯ್ತು ಪಲಸು, ಎಳನೀರ್ವೊನಲಂ ಕಱೆವ ತೆಂಗು (Šmd. 81).

ಬೇರ್ bêr̤. 2. = ಬೇಱ್. — ಬೇರ್ಕೆಯ್. To separate; to disjoin (ವಿರಲಂ ಮಾಡು Šmd. 336; ಬೇಱೆ ಮಾಡು Mdb. Cm.; ಕಳೆ Mdb. Cm. in vritti 98; see 163). ಬೇರ್ಕೆಯ್ವ ಭಾವಂ (ಬಿರ್ಚು Čt. I, 24). — ಬೇರ್ಪಡಿಸು. To make a difference; to distinguish (J. 6, 42); to separate. — ಬೇರ್ಪಡಿಸುಹ. Making a difference, etc. (ಭೇದ, ಅನ್ತರ Nr.). — ಬೇರ್ಪಡು. To be separated, to separate (ವಿವಿಕ್ತ Šmd. Dh.; Čpr. 2, 42). 2, to be spread out, opened, unfolded or exposed (ವಿವರ Šmd. Dh.). ಬೇರ್ಪಟ್ಟಂ (Šmd. 79. 217). 3, to become different, to be altered (*only* in Si.). ಬಣ್ಣವೇ ಮೊದಲಾಗುಳ್ಳ ಬೇರ್ಪಟ್ಟಿರುವದು (ವರ್ಣಾದಿಭೇದ Si. 321). ಬೇರ್ಪಟ್ಟವನು (ಇತರ, ಅನ್ಯ 454).

ಬೇಲ bêla. = ಬೆಳಲ, etc. (ಕಪಿತ್ಥ, ದಧಿತ್ಥ, ಗ್ರಾಹಿ, ಮನ್ಮಥ, ದಧಿಫಲ, ಪುಷ್ಪಫಲ, ದನ್ತಶಠ Si. 126; see Mr. 117 s. ಯಾಱಿ; My.). ಆನೇ ಹಿನ್ದೆ ಬೇಲದ ಕಾಯಿಯಾ ಹಾಗೆ (also ಆನೆ ನುಂಗಿದ ಬೇಲದ ಕಾಯಿಯಾ ಹಾಗೆ, Prv.). See Šsv. 3, 32; ಆನೆ-, ನಾಯಿ-, ನಾಯ್-, ಹುಳಿ-.

ಬೇಲಿ bêli. A hedge, a fence (ಆವೇಷ್ಟಕ, ವೃತಿ Hlâ.; ಅರಘಟ್ಟಕ, ವೃತ್ತಿ Mr. 192; ತೋಹು Mr. 380; C.; B. 5, 20. 115. 302; T., M. ವೇಲಿ). ಯಜ್ಞಶಾಲಾರಕ್ಷಣಾರ್ಥವಾಗಿ ಸುತ್ತು ಬರಲಿಕ್ಕೆ ಇಕ್ಕಿದ ಬೇಲಿ (ಕುಮ್ಬೆ Nr.). ಊರ ಸುತ್ತಲೂ ಹಾಕಿರುವ ಬೇಲಿ ಮುನ್ತಾದ ತಡೆಗಳು (ಪ್ರಾಚೀನ Si. 107). ಬೇಲಿಯೆದ್ದು ಹೊಲ ಮೇಯುವಾಗ್ಯೆ ಕಾಯೋದು ಯಾರು?—ಗೋಡೇ ಹಾಱುವವ ಬೇಲೀ ಹಾಱನೇ?—ಪೋಲಿಯವನ ಹೊಲಕ್ಕೆ ಬೇಲಿಯುಣ್ಟೇ?—ಬೈರಾಗಿಗೆ ಬಯ್ಲಾದರೇನು? ಬೇಲಿಯಾದರೇನು? (Prvs.). See Prv. s. ಜೋಲಿಗಾಱ. — ಬೇಲೂರು. -ಊರು. N. of places (My.).

ಬೇವಸ bêvasa. (fr. ಬೇ 1). Sorrowful thought, grief, anxiety (ಚಿನ್ತೆ Čt. I, 58. 95; II, 20; ದುವ್ಮಾನ, ಉವ್ಮಳ Šs.; ಚಿನ್ತಿಪುದು, ತನ್ದೂರಿಪುದು Kk. 52). See Abh. P. 13, 125; 14, 184; 15, 65; Šsv. 2, 25.

ಬೇವಾರಸು bê-vârasu. Without heir, master or proprietor (My.; Br., Mhr., H.).

ಬೇವು bêvu. The neem tree or margosa tree, Melia azadirachta Lin. (ಅರಿಷ್ಟ, ಸರ್ವತೋಭದ್ರ, ಹಿಂಗುನಿರ್ಯಾಸ, ನಿಮ್ಬ, etc. Nr.; ನಿಮ್ಬ, ಅರಿಷ್ಟ, ಪಿಚುಮನ್ದ Mr. 115; C.; T., M. ವೇಪ್ಪ, ವೇಮ್ಬು; Tĕ. ವೇಮು). ಬೇವಿನ ಗಿಡ (ಅರಿಷ್ಟ, etc. Si. 136). ಬೇವು ಸೀಯಾಗದು, ಸಕ್ಕರೆ ಕಹಿಯಾಗದು (Prv.). See Bp. 3, 75; 60, 49; Šsv. 3, 32; B. 5, 41; ಅರೆ-, ಕರಿ-, ಗನ್ಧ-, ಗರಡ-, ನೆಲ-; Sp. s. ಬಣ್ಣಿಗ್ಹಡು.

ಬೇಷು bêshu. Good, proper, well (My.; Mhr., H. ಬೇಶ).

ಬೇಸಕಿ bêsaki. = ಬೇಸಗೆ, etc. (B. 5, 141. 205).

ಬೇಸಗೆ bêsagĕ. (fr. ಬಿಸು 1). = ಬೇಸಕಿ, ಬೇಸಿಗೆ. The hot season (from the middle of March to the middle of June, My.; ನಿದಾಘ, ಗ್ರೀಷ್ಮ Hlâ.; ನಿದಾಘ Mr. 72; ಮುಶೀರ, ಗ್ರೀಷ್ಮ Nn. 91; T. ವೇನಲ್, ವೇನಿಲ್, see ಬೇಗೆ, ಬೇನೆ; Tĕ. ವೇಸಗಿ, ವೇಸಂಗಿ, ವೇಸಲಿ, ವೇಸವಿ; Tĕ. ವೇಡಿ, ವೇಡಿಮಿ, heat). See Râghĕ. 17, 64; Rsv. 5, 32. 46; J. 13, 10; 15, 3. 18; 21, 36. — ಬೇಸಗೆಕಾಲ. The hot weather (My.; ಉಷ್ಣೋಪಗಮ, ಗ್ರೀಷ್ಮಋತು G.). — ಬೇಸಗೆಗಾಲ. = ಬೇಸಗೆಕಾಲ. (Abh. P. 7, 85). — ಬೇಸಗೆಪಯಿರು. Vegetables grown in the hot weather (My.).

ಬೇಸಗೆ bêsagĕ. Tbh. of ವೈಶಾಖ (Šmd. 340. 357; Šm. 20).

ಬೇಸತ್ತು bêsattu. P. p. of ಬೇಸಱ್ 1.

ಬೇಸದರ್ bê-sadar. That is not the heading. See ಸದರ್-.

ಬೇಸಱ್ bêsar̤. ಬೇಸಱು. 1. To grow weary or fatigued; to get tired of, to be disgusted, to be vexed (ಆಸಱ್, ಆಲಸ್ಯ Šmd. Dh.; C.; Tĕ. ವೇಸಱು, ವೇಸಾಱು; T. ವೇಜಾಱು). P. p. ಬೇಸತ್ತು (Šmd. 285 Cm.; Čpr. 1, 76; C.). See Bp. 18, 7. 51; 28, 9; 38, 31; Bh. 1, 8, 45; J. 2, 62; 16, 26; 22, 30; B. 3, 125.

ಬೇಸಱ್ bêsar̤. ಬೇಸಱು. 2. = ಬೇಸಱ. Weariness, fatigue; disgust, vexation, dispiritedness (Čpr. 8, after 4 & 79; J. 2, 43; 17, 1; 18, 39; My.; Tĕ. ವೇಸಟ; T. ವೇಟ್ಟ್ಕೈ). ಬೇಸಱಿಗೆನ್ತಾ, ಹಾಸರಕತ್ತೆ ಅಡಿಸಿದ (Prv.). — ಬೇಸಱಾಗು. -ಆಗು. = ಬೇಸಱ್ 1. To grow weary or fatigued; to get tired of, to feel dislike, etc. ರಾಜನು ತನ್ನ ಎರ್ಡನೇ ಮಗನ ಮೇಲೆ ಬೇಸಱಾಗಿ (B. 5, 47). ನಿನಗೆ ಬೇಸಱಾಗುವ ಕೆಲಸಾನಾವು ಹೇೞಲಾಱೆವು (5, 134). 2, to become a matter of dislike, etc. (see ಬೇಸಱ). — ಬೇಸಱುಗೊಳ್ಳು. -ಕೊಳ್ಳು. = ಬೇಸಱಾಗು. (My.). ತನ್ನ ಉದ್ದೇಶವನ್ನು ಸಿದ್ಧಿಗೆ ಒಯ್ಯ ಬೇಕಾದರೆ ಎಷ್ಟೋ ಸಂಕಟಗಳು ತಟ್ಟಿದರೂ ಬೇಸಱುಗೊಳ್ಳುತ್ತಿದ್ದಿಲ್ಲ (5, 207). — ಬೇಸನುಡಿ. (Šmd. 217). A word of disgust; a disgusting word.

ಬೇಸಱ bêsar̤a. = ಬೇಸಱ್ 2. (Bp. 2, 42; 14, 8; C.; ಉದಾಸ G.). ಒನ್ದೇ ಕಡೆಯಲ್ಲಿ ಕುಳಿತು ಕುಳಿತು, ನಿಮಗೆ ಬಹಳ ಬೇಸಱ ಬನ್ದಿದ್ದೀತು (B. 3, 67). ನಿದ್ದೆಯ ಹೊತ್ತಾಯಿತೆನ್ದರೆ... ತನ್ನ ಕೆಯ್ ಕಾಲು ಎತ್ತಿ ಕೊಳ್ಳುವದು ತನಗೇ ಬೇಸಱವಾಗುತ್ತದೆ (4, 134). ಬೇಸಱ ಹುಟ್ಟಿ (4, 154). ಬೇಕನ್ತ ಬಯಸಿದ್ದು ಬೇಸಱವಾದೀತೇ? (Prv.). ಆಸನದಲುಮ್ಬುವದು, ಸೂಸುವದು ಬಾಯಲ್ಲಿ, ಬೇಸಱದ ಹೊತ್ತು ಕೊಲುತಿಹುದು (a syringe or fountain, Sp.). — ಬೇಸಱಗೊಳ್ಳು. -ಕೊಳ್ಳು. = ಬೇಸಱುಗೊಳ್ಳು. (B. 5, 169; My.).

ಬೇಸಱಕೆ bêsar̤akĕ. = ಬೇಸಱಿಕೆ. (B. 5, 231. 282).

ಬೇಸಱಿಕೆ bêsar̤ikĕ. = ಬೇಸಱಕೆ. Weariness, etc. (= ಬೇಸಱ್ 2; Bh. 2, 2, 103; My.; ತ್ರಾಸ G.).

ಬೇಸಱಿಸು bêsar̤isu. = ಬೇಸಱ್ 1. (Čpr. 4, 34; Dp. 119, 1; My.).

ಬೇಸಾಯ bêsâya. Tbh. of ವ್ಯವಸಾಯ. Agriculture (My.). ಬೇಸಾಯ ಮಾಡಿದವ ಬೇಗ ಸಾಯ (Prv.).

ಬೇಸಾಯಗಾಱ bêsâya-gâr̤a. An agriculturist, a farmer (My.; ಕ್ಷೇತ್ರಾಜೀವ, ಕರ್ಷಕ, etc. Si. 300).

ಬೇಸಿಗೆ bêsigĕ. = ಬೇಸಗೆ, etc. (C.; B. 2, 48; J. 15, 2; 17, 1).

ಬೇಸು bêsu. = ಬೇಯಿಸು, etc. To consume with fire, to burn up (J. 15, 17). 2, to prepare by

boiling, etc. (C.). ತಿನ್ನುವದಕ್ಕೆ ಬಿಸಿ ಬಿಸಿ ರೊಟ್ಟಿಗಳನ್ನು ಬೇಡುತ್ತಿ; ಬೇಸುವದಕ್ಕೆ ತಿಳಿಯಲಿಲ್ಲ, ಯಾಕೆ? (B. 5, 186).

ಬೇಸ್ತವಾರ bêsta-vâra. Tbh. of ಬೃಹಸ್ಪತಿವಾರ. (My.; Tĕ.).

ಬೇಸ್ತ್ವಾರ bêstvâra. = ಬೇಸ್ತವಾರ. (My.).

ಬೇಹ bêha. = ಬೇಟ್ಪು, (ಬೇಡುವ, ಬೇಕಾದ). ಬೇಹ ವಚನ (ಅಹೋ, ಬಳ್ಳಿಹ ಮಾತು Nn. 149). ಬೇಹ ನುಡಿ (ಅಹೋ Mr. 536). ನೃಪರ ಬೇಹ ಸಭೆ (ಆಸ್ಥಾನ 462). See Bp. 35, 43; 37, 53; Bh. 1, 8, 78; 2, 4, 4. ಬೇಹುದು (= ಬೇಟ್ಪುದು, ಬೇಕು, Bp. 3, 56; 20, 8; 49, 45; 50, 38; 61, 14; Bh. 1, 8, 18; 1, 10, 10; 3, 13, 11. 42; 7, 1, 18; J. 10, 19). ಬೇಹವರ್ (Bp. 12, 41; 28, 35; J. 2, 51).

ಬೇಹರ bêhara. 1. A very clever and able man (ಭೂರಿಬುದ್ಧಿ ಬಲಯುತಂ Bhn. 23; *cf.* ವೇತ್ರ್ಯ?).

ಬೇಹರ bêhara. 2. = ಬೇಹಾರ (Šmd. 357 Mdb.).

ಬೇಹಾರ bêhâra. = ಬೇಹರ 2. Tbh. of ವ್ಯವಹಾರ (Šmd. 357. 368. 375; ವ್ಯವಹಾರ, ಭೋಗ Nn. 113; My.). ಕಿಸವಾಯ ಕಣ್ಣರೆ ಬಿಡದೇ ಬೇಹಾರ (Prv.).

ಬೇಹು bêhu. 1. = ಬೇಕು (Bhn. 45; *cf.* ಬೇಹ).

ಬೇಹು bêhu. 2. = ಬೇಗು 2. Spying (My.). ಬೇಹಿನ ಗೂಢಚರ (ಪ್ರಣಿಧಿ, ಚರ Si. 438). — ಬೇಹವ. -ಅವ. = ಬೇಹಿನವ. (Bh. 3, 18, 39. 42). — ಬೇಹಿನವ. -ಅವ. A spy, a scout (ಹೇರಿಗ Šmd. II; ಯಥಾರ್ಹವರ್ಣ, ಪ್ರಣಿಧಿ, ಅಪಸರ್ಪ, ಚರ, ಸ್ಪಶ, ಚಾರ, ಗೂಢಪುರುಷ Nr.; ಪ್ರಣಿಧಿ, ಚರ Nr.; My.). — ಬೇಹಿರಿಸು. -ಇರಿಸು. To spy (Rŝv. 5, 82).

ಬೇಹುಕಾಱ bêhukâṟa. (Šmd. 235). = ಬೇಗುಗಾಱ. A spy (Bh. 1, 16, 15). ಬೇಹುಕಾಱನಿನ್ ಅರಸಂ ಸುದ್ದಿಯಂ ಕೇಳಲ್ ಪಟ್ಟಂ (Šmd. 300).

ಬೇಹುಷಾರು bê-hushâru. Want of attention or care (My.).

ಬೇಳ್ bêḷ. 1. = ಬೇಳು 1. To offer into fire or with fire, as ghee, animals, etc. (ಹವಿಪ್ರದಾನ Šmd. Dh.; T. ವೇಡ್, ವೇಳ್; Tĕ. ವೇಲ್ಪಿಂಚು, to cause to offer a burnt offering). P. p. ಬೇಳ್ದು. ಬೇಳ್ದ ಹವಿ (ಹುತ, ವಷಟ್ಕೃತ Hlâ.). ಅಗ್ನಿಯಲ್ಲಿ ಬೇಳಲ್ ಪಟ್ಟುದು (ಅಗ್ನಿಹುತ, ವಷಟ್ಕೃತ Nr.). ಬೇಳ್ವ ತುತ್ತುಗಳು (ಚರು, ಹವಿಸ್ Mr. 260). ಹೋತೃವೆನ್ ಅನ್, ಅಧ್ವರಿಯಯ್ ಭ್ರಾತೃವೆ ನೀನ್, ಉಱಿದ ಋತ್ವಿಜರ್ ಯಾದವರ್, ಉದ್ಗಾತೃ ಶುಚಿಸಚಿವನೆನೆ ಸುರಜೈತ್ರನೆ ಪಶುವಾಗೆ ಅವೆ ಬೇಳ್ವೆವು ಮುನ್ನಂ (Šmd. 66. 412; Kâvy. I, 2, 91). See Čpr. 7, 53; J. 31, 66.

ಬೇಳ್ bêḷ. 2. (ನಿವೃದ್ಧಿ Šmd. Dh., o. r. ನಿವರ್ಧಿ).

ಬೇಳ್ bêḷ. 3. (= ಬೇಳುವೆ 2). Bewilderment, confusion, infatuation, madness (*cf.* ಬೆಗಡು, ಬೆಳ್ಪಳ; Tĕ. ಬೇಲು, trick, guile; ಬೇಲೆ, simple, ignorant; ಪ್ರೇ, ಪ್ರೇಗು, ವೇಡುಕೆ, astonishment, wonder = ಆಶ್ಚರ್ಯ, ವಿಸ್ಮ; T. ವೇಲ, a man infatuated or possessed = ವೆಱಿಯಾಟ್ಟಾಳ, see ವೆಱಿ; Mhr. ವೇಡ, madness; folly; a foolish act; a violent and unreasonable passion or desire after; *cf.* ಮೆಳ್). — ಬೇಳಾಗು. -ಆಗು. To grow bewildered, etc. (V. 9, 81; 30, 31). — ಬೇಳ್ಮಾಡು. To cause to grow bewildered, etc., to infatuate (ಮರುಳ್ಗೊಳಿಪುದು Kk. 72; Šm. 51).

ಬೇಳಮ್ಬ bêḷamba. 1. (fr. ಬೇಡು 1). Desire (J. 4, 57; 30, 19. 31; My.; T. ವೇಡ್, ವೇಳ್, to desire; T., M. ವೇಳ್, desire).

ಬೇಳಮ್ಬ bêḷamba. 2. (fr. ಬೇಳ್ 1). (An oblation with fire): destruction of human life (in fire, ಉಪಹತಿ Bhn. 20; Bh. 1, 8, 91).

ಬೇಳಿ bêḷi. = ಬೇಳೆ 2. — ಬೇಳಿಮಣಿ. = ಬೇಳಿಮಣಿ. ತಾಳದೋಲೆಯನ್ನಿಟ್ಟು, ಬೇಳಿಮಣಿಯನೆ ಕಟ್ಟಿ, ವೇಳ್ಯವನ್ನಱಿತು ನಡವವಳು ದೊರೆವದು ಶೂಲಿಯ ಕರುಣ (Sp.).

ಬೇಳು bêḷu. 1. = ಬೇಳ್ 1. P. p. ಬೇಳಿ (J. 31, 67). ಬೇಳುವರ್ (22, 31).

ಬೇಳು bêḷu. 2. (Mhr. ವೇಲ = ವಲ್ಲಿ, a creeping or climbing plant). — ಬೇಳುಬಳ್ಳಿ. A parasitical threadlike plant, Cassyta filiformis Lin. (St. & Pl.).

ಬೇಳುವೆ bêḷuvĕ. 1. (fr. ಬೇಳು 1). An oblation with fire, a burnt-offering (Bh. 1, 8, 84; T., M. ವೇಳ್ವಿ, ವೇಳ್ವಿ; Tĕ. ವೇಲಿಮಿ, ಪ್ರೇಲ್ಮಿ).

ಬೇಳುವೆ bêḷuvĕ. 2. (= ಬೇಳ್ 3). Bewilderment, etc. — ಬೇಳುವೆಯ ಬೂದಿ. Ashes of infatuation, a powder that confuses the mind (J. 26, 15).

ಬೇಳೆ bêḷĕ. 1. (fr. ಬೇಱ್). Splits, halves: split pulse (C.; B. 4, 32; Tĕ. ಬೇಡೆ). ಉದ್ದಿನ ಬೇಳೆ (Si. 313). ಹೆಸಱಿನ ಬೇಳೆ (495). ತೊಮ್ಬತ್ತಱ ಮೇಲೆ ತೊಗರೀ ಬೇಳೆ.— ಬೇಳೇ ಸಾಱಾದರೆ ಬೋಱಿಗೆ ಆಗದೇ? (Prvs.). **2,** the half of a seed of the guñja or Abrus precatorius, or the half of a ಪಾಗ or ಹಾಗ (My.; Tĕ. ಬೇಡೆ). ಸಿಕ್ಕಿಸಲು ಬೇಳೆಯೆರಡುಮನ್ ಒನ್ದು ಪಾಗಂ (Mr. 355). ಗುಲಗಂಜಿಯು ಬೇಳೆತೂಕ ಮೊದಲು ಹಣವಡ್ಡತೂಕದ ವರಿಗೂ ಇರುತ್ತೆ (Si. 328). ಹಣಕ್ಕೊನ್ದಿೀಸವನ್, ಇಪ್ಪಣಕ್ಕೊನ್ದು ಬೇಳೆಯು, ತ್ರಿಣಯನ ಮಕುಟ ವಾದರಕ್ಕಸಾಲೆಯ ಟೊಣೆಯದೆ ಬಿಡನು (Sp.). See ಇಬ್ಬೇಳೆ. **3,** the sign for half a pâga is ═ (ಎರಡು ರೇಖೆ Mr. 356; My.). — ಬೇಳೆಕಡಲೆ. (ಚಣಕ, ಹರಿಮನ್ಥಕ Si. 304). — ಬೇಳೆಕಾಱು. A half of any pulse, but especially of tŏgari (B. 4, 65; My.).

ಬೇಳೆ bêḷĕ. 2. = ಬೇಳಿ. A common herb, used as a potherb, Chenopodium album Lin. (Z.; T. ವೇಳೈ, M. ವೇಳೆ, a small shrub, edible and medicinal, Cleone pentaphylla, and other kinds; My.). See ನಾಱುಬ್ಬೇಳೆ, ನಾಱುವ ಬೇಳೆ. — ಬೇಳೆಪುಂಗಳಿ. N. of a plant (ತಿಲುವನಿ Mr. 133). — ಬೇಳೆಮಣಿ. = ಬೇಳಿಮಣಿ. Beads of the bêḷĕ shrub (My.).

ಬೇಳ್ತನ bêḷtana. (fr. ಬೇಳ್ 3). The state of being bewildered, etc. (Čpr. 8, 60; Abh. P. 3, 48; V. 3, after 31; 14, 37).

ಬೇಱ್ bêṟ. = ಬೇಡು 1. ಬೇಡುವಂ or ಬೇಟ್ಪಂ (Šmd. 28). ಬೇಟ್ಪಂ (217. 275; ಎರವಂ Čt. I, 27). ಬೇಟ್ಪ (Čpr. 3, 103) = ಬೇಹ, q. v. ಬೇಱ್ಪೊಡೆ ನೀನೊಳ್ಳಿದಯ್ (Šmd. 298). ಬೇಟ್ಪಿರ್ (Bp. 22, 54; 43, 60; 45, 37). ಬೇಟ್ಪುದು (Čpr. 3, 12. 41) = ಬೇಹುದು, q. v. ನುಡಿ! ನುಡಿಯೆ ಮಿಗೆ ಬೇಟ್ಪುದು, ಬೇಟ್ಪುದು! (Šmd. 272). ಬಗೆಗೊಗೆದಱ್ತಿಯಂ ಸಲಿಸವೇಟ್ಪುದು (Rŝv. 13, 26). ಬೇಟ್ಪಿನಿತು (Abh. P. 3, 118). ಕೊಡವೇಟ್ಪುದು (J. 29, 16). ಪಾಲಿಸವೇಟ್ಪುದು (29, 33). ಬೇಟ್ಕುಂ (= ಬೇಟ್ಕು, ಬೇಕು). ಎನಲ್ವೇಟ್ಕುಂ (Šmd. 256). ಅಳ್ಕಲ್ವೇಟ್ಕುಂ (Rŝv. 13, 22). ಬೇಟ್ಕು (= ಬೇಟ್ಕುಂ, etc., Bp. 2, 8; 22, 41; 37, 5).

ಬೈ bey. For *Kannada* words with this initial syllable in MSS. or books see ಬಯ್.

ಬೈಕ baika. Tbh. of ಭೈಕ್ಷ (Šmd. 346. 357; T. ಪೈಕ್ಕ; M. ಪೈಕ್ಕ). — ಬೈಕಂಗೊಳ್. -ಂ-ಕೊಳ್. To beg alms (Kâvy. III, 2, 82).

ಬೈರವ bairava. Tbh. of ಭೈರವ (Šmd. 339. 357; My.). See ಕಾಱು-.

ಬೈರಾಗಿ bairâgi. Tbh. of ವೈರಾಗಿ. (My.; Br.; Mhr.). An individual of a class of mendicants. ಬೈರಾಗಿಗೆ ಬಯ್ಲಾದರೇನು? ಬೇಲಿಯಾದರೇನು? (Prv.).

ಬೈಷ್ಕಾರ baishkâra. Tbh. of ಬಹಿಷ್ಕಾರ. (My.).

ಬೈಸಿಕೆ baisikĕ. The act of sitting down on one's legs and when rising pushing one of them suddenly forwards (a kind of gymnastics, used also as a punishment at school, My., also ಬೈಸಿಗೆ; Mhr. ಬೈಸಣೇಂ, to sit); a certain movement in acting or dancing (ಚಾರಿ Mr. 82). — ಬೈಸಿಕೆಗೆಯ್. To perform ಬೈಸಿಕೆ (Bh. 8, 21, 13).

ಬೊಕ್ bŏk. = ಬೊಕ್ಕ. — ಬೊಕ್ ಬೊರಲು. = ಬೊಕ್ಕ ಬೋರಲು. (My.). — ಬೊಕ್ ಬೋರಲು. = ಬೊಕ್ ಬೊರಲು. (My.).

ಬೊಕ್ಕ bŏkka. (fr. ಬೊಗ್ಗು 1). With a turn, bend or bow. — ಬೊಕ್ಕ ಬೊರಲು. = ಬೊಕ್ಕ ಬೋರಲು. — ಬೊಕ್ಕ ಬೋರಲು. (a kind of reiteration). Headlong, flatwise (My.). ಬೊಕ್ಕ ಬೋರಲು ಬೀಳು. (My.). — ಬೊಕ್ಕ ಬೋರ್ಲ್. = ಬೊಕ್ಕ ಬೋರಲು. ಬೊಕ್ಕ ಬೋರ್ಲ ಬಿದ್ದು (B. 4, 61). — ಬೊಕ್ಕ ಬೋರ್ಲು. = ಬೊಕ್ಕ ಬೋರ್ಲ. (My.).

ಬೊಕ್ಕ bŏkka. 1. Bare, uncovered, without hair (Mhr. ಬೋಡಕಾ, see ಬೋಡ). — ಬೊಕ್ಕದಲೆ. -ತಲೆ. A bare head (B. 5, 298).

ಬೊಕ್ಕ bŏkka. 2. (= ಬೊಚ್ಚು). A toothless man (My.; Tĕ. ಬೊಕ್ಕಿ, ಬೋಸಿ; T. ಪೊಕ್ಕೈ; Mhr. ಬೋಳಕೇಂ, a toothless mouth; see ಬೋಡ). ಬೊಕ್ಕನಾದರೂ ಟಕ್ಕುತನ ಬಿಡಲಿಲ್ಲ (Prv.). — ಬೊಕ್ಕಬಾಯಿ. A toothless mouth (My.). — ಬೊಕ್ಕಿ. A toothless woman (My.).

ಬೊಕ್ಕ bŏkka. 3. = ಬಕ್ಕ. See ಕೂಡು-.

ಬೊಕ್ಕಣ bŏkkaṇa. A pocket in a coat, a betel pouch, a beggar's bag, a horse's gram bag (My.; Tĕ. ಪೊಂಗಣ, ಪೊಂಕನ, ಬೊಕ್ಕಣ; T., M. ಪೊಕ್ಕಣ; Tĕ. also ಬೊಕ್ಕೆನ; T. also ಮೊಕ್ಕಣಿ; *cf.* ಪೊರೆ 5, ಪೊಲ್ 1).

ಬೊಕ್ಕಣ bŏkkaṇa. Tbh. of ಭಕ್ಷಣ. (My.).

ಬೊಕ್ಕಸ bŏkkasa. = ಬಕ್ಕಸ. (A bundle, Mhr. ಬೋಕಸಾ, ಬೋಚಕಾ; Br. ಬುಕ್ಕಿಸೆ, ಬೊಕ್ಕಿಸಾ, ಬೊಕ್ಕೆಸೆ, H. ಬಕ್ಸಾ; Tĕ. ಬೊಕ್ಕಸ, a money bag; a treasury); a treasury (of a king, of a rich man, or of a temple, My.). ಬೊಕ್ಕಸದಲ್ಲಿ ಹಣ ಉಣ್ಟೆನ್ದರೆ ಅಕ್ಕ ಸಾಕ್ಯಾಳೇ? (Prv.). — ಬೊಕ್ಕಸದ ಮನೆ. A treasury (Bp. 31, 10; My.). — ಬೊಕ್ಕಸದವನು. -ಅವನು. A treasurer (Bp. 47, 34; My.).

ಬೊಕ್ಕೆ bŏkkĕ. 1. (= ಬೊಬ್ಬೆ 1). A pustule, a pimple, a blister (in the face, the mouth, or on any other part of the body, My.; Tĕ. ಪೊಕ್ಕು, M. ಪೊಕ್ಕುಳ; see ಪುಗುಳ್; *cf.* Sk. ಪೋಟಕ, a pustule). ಬೊಕ್ಕೆಯೆದ್ದರೆ ರೊಕ್ಕ ಬನ್ದೀತೇ? — ಬೊಕ್ಕೆಗೆ ಮದ್ದು ಬೋರೇ ಹಣ್ಣೇ? (Prvs.).

ಬೊಕ್ಕೆ bŏkkĕ. 2. Any round small hole made by rats, etc. (My.; Tĕ. ಬೊಕ್ಕೆ, ಬೊರಿಯೆ, ಬೊಱಿಯೆ, ಬೊಱ್ಱಿ; Mhr. ಭೋಕ, Sk. ಭೂಕ, a bore, hole; *cf.* ಪೊಟ್ಟರೆ?). See ನೀರು-.

ಬೊಗರಿ bŏgari. = ಬುಗರಿ, etc. ಚೆಣ್ಡು ಬೊಗರಿಯನು ಆಡಿ (Dp. 50). ಬೊಗರೀ ಹಾಗೆ ತಿರುಗಿದರೂ ಹಗರತ್ವ ಹೋಗಲಿಲ್ಲ (Prv.). ಲಲಿತೇನ್ದ್ರನೀಲದಿಂ ಸವೆದ ಬೊಗರಿಯ ಸಿರಿ (Râghc. 17, 66). See ನುಣ್ಬೊಗರಿ.

ಬೊಗಸಿ bŏgasi. = ಬಗಸೆ, etc. (ಅಂಜಲಿ, ಅಂಜಲಿಪುಟ, ಪುಟ G.; M. ಪೊಡನ್ನೆ, as much as can be held by two hands; ಪೋಜ್ಞಿ, a handful; Mhr. ಬುಚಕಾ, the hand inverted with the fingers extended, so as to take up bran, flour, etc.).

ಮುೞುಕ muḻuka. = ಮುೞಕ etc., ಮುೞುಗ. See ಮುಣ್ಣು-.

ಮುೞುಕು muḻuku. 1. = ಮುೞುಗು 1, etc., ಮುೞುಂಕು q. v. (Šmd. Dh.; Bp. 59, 17). — ಮುೞುಕಾಡು. -ಆಡು. = ಮುೞ್ಕಾಡು. To immerse one's self repeatedly or playfully (Čpr. 3, 37).

ಮುೞುಕು muḻuku. 2. = ಮುಳುಗು 2, etc. (My.; T. ಮುೞುಕ್ಕು; Te. ಬುಡುಕೆ, ಮುಣಕೆ, ಮುನಕ, ಮುನುಕೆ).

ಮುೞುಗ muḻuga. = ಮುೞುಕ, etc. See ಗಣ್ಣು-, ಗುಣ್ಣು-.

ಮುೞುಗಿಸು muḻugisu. = ಮುಳುಗಿಸು, etc. To immerse (v. t.); to dip, to plunge; to bathe (v. t.);—to ruin (My.; Tu. ಮುರ್ಕಾವು). ಅರಸನ ರಾಜ್ಯವನ್ನು ಮುೞುಗಿಸಿ ಬಿಟ್ಟನು (B. 4, 146). ಕಟ್ಟಿಗೆಯ ಅಕ್ಷರಗಳನ್ನು ಕೆತ್ತಿಸಿ, ಅವನ್ನು ಒನ್ದು ತರದ ಜಿಗಟನ್ನ ರಸದೊಳಗೆ ಮುೞುಗಿಸಿ (4, 207). ಕೆಲವರಿಗೆ ಒಳಿತು ಮಾಡುವದಕ್ಕೋಸ್ಕರ ಕೆಲವರಿಗೆ ಮುೞುಗಿಸಿದನ್ತೆ ಆದೀತು (5, 112). ಬೊಬ್ಬಿಱಿದುದು ಸೇನೆ, ನಿಮಿಷಕೆ ಮೊಬ್ಬು ಮುೞುಗಿಸಿತೀ ಬಲವಂ (Bh. 8, 23, 20). ವಿಷದ ಕುಮ್ಬಳಕಾಯ ತನ್ದದನ್ ಅಸಮ ಬಹುತೀರ್ಥದಲಿ ಮುೞುಗಿಸೆ ವಿಷವೆಮ್ಬುದು ಹೋಗಿ, ಸೀಕಾಯಹುದೇ? (Jns. 22, 29).

ಮುೞುಗು muḻugu. 1. = ಮುಣಗು, ಮುಣೆಗು, ಮುಳುಗು 1, ಮುೞಗು 2, ಮುೞಿಗು, ಮುೞುಕು 1, ಮುೞಿಂಕು, ಮುೞುಂಕು, ಮುೞುಂಗು, ಮುೞ್ಕು. To go or sink under water; to sink; to become plunged in a liquid; to immerse one's self, to dive, to to dip; to set, as the sun, etc.;—to be ruined (ನಿಮಗ್ನ Šmd. Dh., the MSS. wavering between ಮುೞುಗು and ಮುಳುಗು; My.; T.; T. also ಮೂಝ್ಗು; Tu. ಮುರ್ಕು; M. ಮುಕ್ಕು, ಮುಙ್ಙು, to immerse, v. t., etc.). ಹಿರಿದು ಪಾಪವ ಮಾಡಿ, ಹರಿವ ನೀರೊಳು ಮುೞುಗೆ ಕರಗೂಡೇ ಪಾಪ? (Sp.). ಮೆಲ್ಲ ಮೆಲ್ಲನೆ ತರಣಿ ಮುೞುಗಿದಂ ಪಡುಗಡಲೊಳ್ (J. 26, 5). ಹೊತ್ತು ಮುೞುಗಲು ಬಾಡಿ ಬಚ್ಚಿಡುವದೆಲ್ಲ (an umbrella, Bēdagu čaupadi). ಮಾನು ನೀರಿನಲ್ಲಿ ಮುೞುಗಿದರೆ ಸ್ನಾನದ ಫಲ ಬನ್ದೀತೇ? (Prv.). See Čpr. 7, 139; 8, 88; Bp. 42, 2; 49, 39; 52, 15. 7; Ršv. 5, 45; 6, 6; J. 3, 39; Si. 254; B. 2, 45; 4, 31; 5, 242. 294.

ಮುೞುಗು muḻugu. 2. = ಮುೞುಕು 2, etc. (My.).

ಮುೞುಂಕಿಸು muḻuṅkisu. = ಮುೞುಗಿಸು, etc. (Bp. 27, 65).

ಮುೞುಂಕು muḻuṅku. = ಮುೞುಗು 1, etc. (ಜಲನಿಮಜ್ಜನ Šmd. Dh.; Čpr. 8, 31). ನೀರೊಳಗೆ ಮುೞುಂಕಿ ಸರ್ವ ಪಾಪಕ್ಷಯಮಾಗಲೆನ್ದು ಮಾಡುವ ಜಪವು (ಅಘಮರ್ಷಣ Nr.).

ಮುೞುಂಗು muḻuṅgu. = ಮುೞುಗು 1, etc. ಮುೞುಂಗಿದಂ (ಅದ್ದಿಂ Šmd. I, o. r. ಮುಳುಂಗಿದಂ). ನೀರೊಳ್ ಮುೞುಂಗಿದಂ (ಅದ್ದಿಂ I, o. r. ಮುಳುಂಗಿದಂ). See Čpr. 7, 143; Grj. 1, 23; Ršv. 6, after 24; 12, 12; 13, 43. — ಮುೞುಂಗಾಡು. -ಆಡು. To immerse one's self repeatedly or playfully, etc. (Č. Bp. 32, 40; 47, 6).

ಮುೞುವು muḻuvu. = ಮುೞವು. Ruin, loss. ನಿನ್ನ ಹಟನಾರಿತನವೇ ನಿನಗೆ ಮುೞುವು ಆಯಿತು (B. 2, 50). ಯಾವ ಕೋಡುಗಳ ಬಗ್ಗೆ ನನಗೆ ಬಹಳ ಗರ್ವ ಬನ್ದಿತ್ತೋ, ಆ ಕೋಡುಗಳೇ ಕಡೆಗೆ ನನ್ನ ಪ್ರಾಣಕ್ಕೆ ಮುೞುವು ಆದವು (3, 19). ಜಾಣರು ಮೋಸಹೋಗದೆ, ಧೂರ್ತರ ಹಂಚಿಕೆಗಳು ಅವರಿಗೇ ಮುೞುವಾಗುವನ್ತೆ ಮಾಡುತ್ತಾರೆ (4, 19).

ಮುೞ್ಕು muḻku. = ಮುೞುಗು 1, etc. — ಮುೞ್ಕಾಡು. = ಮುೞುಕಾಡು. (Čpr. 4, 54; Abh. P. 3, after 133; 14, 59).

ಮುೞ್ಗು muḻgu. = ಮುಗ್ಗು 1, ಮುೞಗು 1, ಮೊಗ್ಗು 1. To fall, to fall down (ಬೀೞ್ Šmd. I; ಪತನ Šmd. Dh.; Čpr. 5, 22). **2,** to make obeisance (ಪೊಡಮಡು Šmd. I).

ಮುೞ್ತಗ muḻtaga. = ಮುತ್ತಗ, etc. (ಒನ್ದು ಮರಂ Šmd. I).

ಮುೞ್ತುಗ muḻtuga. = ಮುತ್ತಗ, etc. (ಪಲಾಶವೃಕ್ಷ Ks.).

ಮೂ mû. 1. = ಮು, etc., ಮೂಱು (Šmd. 222). Three (T.). — ಮೂಗಣ್ಡುಗ. -ಕಣ್ಡುಗ. Three kaṇḍugas (My.). — ಮೂಗನ್ದಾಯ. -ಕನ್ದಾಯ. The three spaces of four months (in astrology, My.). — ಮೂಗಳ. -ಕಳ. Three kaḷas or kōlagas (My.). ಉಪ್ಪಿಲ್ಲದೆ ಮೂಗಳ ಗಂಜೀ ಕುಡಿಯುವವಗೆ ಉಪ್ಪಿದ್ದರೆ ನಾಗಳವೂ ಸಾಲದು (Prv.). — ಮೂಗಾವುದ. (Šmd. 223; My.). Three leagues. ಮೂಗಾವುದಮಂ ನಡೆದಂ (157). — ಮೂಗೆಯ್. -ಕೆಯ್. (Šmd. 223). Three hands; three branches. ಪಣೆಯುಂ ಮೂಗೆಯ್ಯ ಕವಲ್ ಕವಲ್ತು ಪಲವುಂ (223). — ಮೂಗೆರೆ. = ತ್ರಿವಲಿ. (V. 4, 110). — ಮೂಗೇಣ್. (Šmd. 223). Three spans. — ಮೂಗೊಂಕು. -ಕೊಂಕು. (Šmd. 223). Three bends or curves. — ಮೂಗೊಳ. -ಕೊಳ. = ಮೂಗಳ. (My. occasionally). — ಮೂಗೋಣ್ಬು. Three corners or sides: the place enclosed within them. ಹರ್ಮ್ಯಾದಿಗಳ ಮೂಗೋಣ್ಬು (ಕಕ್ಷ್ಯೆ, ಹರ್ಮ್ಯಾದಿಪ್ರಕೋಷ್ಠ Nr.). — ಮೂಗೋಱು. -ಕೋಱು. = ಮುಕ್ಕಾಪೆ. (My.). ಕಿಡೆ ಮೂಗೋಱುಂ ಬೋಱಿಸಿ, ನಡುದಲೆಯೊಳ್ ಮೆಟಿಸನೊಡೆದು (Šmd. 223). — ಮೂಜಗ. The three worlds (Bp. 4, 42; 11, 22; 54, 55; J. 2, 12. 25; 18, 12; 19, 4). ಮೂಜದೊಡೆಯ (Bp. 29, 29). — ಮೂಡೊಂಕು. = ಮೂಗೊಂಕು. (Bp. 17, 2). — ಮೂದಲೆ. -ತಲೆ. (Šmd. 223). Three heads. — ಮೂದೆಱ. -ತೆಱ. Three kinds (Šmd. 131; ಮೂಱು ತೆಱ 94 Cm.; ಮೂಱು ಪ್ರಕಾರ 141 Cm.; Čpr. 3, 102). — ಮೂದೇವರ್. The three (chief) gods (J. 19, 4). — ಮೂನೂಱು. (Šmd. 223). Three hundred. ಮೂನೂಱಿಪ್ಪತ್ತು (Čpr. 9, 50). — ಮೂಲೋಕ. (Šmd. 170. 223). = ಮೂಜಗ. See Šm. 114; J. 8, 25; 26, 26; 28, 2. — ಮೂವಟ್ಟೆ. -ಬಟ್ಟೆ. = ತ್ರಿಪಥ. (J. 19, 4). — ಮೂವಡಿ. -ಮಡಿ. Three folds; three times (Grj. 6, 48). ಆ ಬಕಾರಿಯೆಂ ಮೂವಡಿ. . ನೆಗೞ್ತೆಯದಟರ ಭೀಮಂ (Šmd. 81). — ಮೂವಡಿಸು. -ಪಡಿಸು. To treble (v. i., Grj. 7, after 11). — ಮೂವಣ್ಣ. -ಬಣ್ಣ. Three colours (Čpr. 8, 75; V. 4, 114). — ಮೂವತ್ತು. -ಪತ್ತು. Thirty (Bp. 27, 37; 33, 13; C.). ಮೂವತ್ತು ದಿವಸಮಂ ಮಾಸ ಎಮ್ಬುದು (Hlâ.). ತಾಂ ದಿವಸ ಮೂವತ್ತು ಮಾಸಮದು (Mr. 69). ಮೂವತ್ತು ವರುಷದ ವರೆಗೆ ಮದುವೆ ಆಗದವನಿಲ್ಲ, ಮೂಱು ಜಾವಕ್ಕೆ ಊಟ ಆಗದವನಿಲ್ಲ (Prv.).—ಮೂವತ್ತಾಱು, thirty-six (Bp. 42, 39). ಮೂವತ್ತಾಱುಂ ಗುಣಂಗಳ್ ತಮಗನುದಿನ್ (Šmd. 201). ಮೂವತ್ತಾಱುಂ ಗುಣದಿಂ (Abh. P. 1, 19).—ಮೂವತ್ತು ನಾಲ್ವತ್ತು, thirty or forty (B. 3, 111. 115).—ಮೂವತ್ತು ಮೂಱ್, -ಮೂಱು, thirty-three (Mr. 348). ಮೂವತ್ತುಮೂಱು ನೂಱು (B. 4, 174). ಮೂವತ್ತು ಮೂಕೋರ್ಟಿ (J. 19, 4). ಮೂವತ್ತಿರ್ವರ್, thirty-two persons (Čpr. 9, 51). ಮೂವತ್ತು ಮೂವರ್ (Šmd. 122).—ಮೂವತ್ತೆರಡು, thirty-two (Čh. v. 337; Mr. 348; Si. 418). ಮೂವತ್ತೊನ್ದು, thirty-one (B. 4, 100). — ಮೂವರ್. -ರು. Three persons (Šmd. 154; Bp. 32, 47; 61, 22. 24. 31. 33; Bh. 1, 8, 3; J. 2, 43). ಮೂವರ ಕಿವಿಗೆ ಮುಟ್ಟಿದ್ದು ಮೂಱು ಲೋಕಕ್ಕೆ ಮುಟ್ಟುವದು.—ಮೂವರು ಹೊತ್ತ ಬಣ್ಣೆ ಹೊಲಕ್ಕೆ ಹೋಗದು,

ಮನೆಗೆ ಬಾರದು (Prvs.). See Prv. s. ಲೋಕಾನ್ತ. — ಮೂವಳಸು. -ಬಳಸು. 1. To go round thrice (Abh. P. 9, 26). — ಮೂವಳಸು. -ಬಳಸು. 2. Three rounds or encompassings (Čpr. 8, after 44; Abh. P. 13, 99; 10, after 91). — ಮೂವಾಟ್. -ಬಾಟ್. Three states of life. ಮೂವಾಟ್ ಇಕ್ಕಿರ್ದುರ್ವರೆಯೊಳ್ (Šmd. 81. 197 Mdb.). — ಮೂಎಟ್ಟಿ. (Šmd. 223). -ಎಟ್ಟಿ (?). Three hills (?). — ಮೂವಿಧಿ. Three methods, etc. (Č. Bp. 47, 22). *Cf.* ಮೂರು ವಿಧ. — ಮೂವೆಳಸು. -ಬೆಳಸು. (Šmd. 223, o. r. -ವಳಸು). Three crops. — ಮೂಸಂಜೆ. = ಮುಚ್ಚಂಜೆ, q. v. — ಮೂಹುರಿ. Three strings or cords (Bp. 38, 14).

ಮೂ mû. 2. = ಮುದು 2, etc. Advanced age. — ಮೂದೇವಿ. The elder sister of Lakshmî, the goddess of misfortune (My.; Tĕ., T.). See Prv. s. ಮೂಸು.

ಮೂ mû. 3. = ಮೂಗು, etc. The nose. — ಮೂಕೊಱಿತಿ. A woman whose nose has been cut off (Râm. 3, 6, 8). 2, N. of a plant (ವದನಿ Mr. 122). — ಮೂಕೊಱಿಯ. A noseless man (ವಿಗತನಾಸಿಕ Nr., Mr. 389; Râm. 6, 28, 11; 6, 38, 6; 6, 47, 22; T. ಮೂಕ್ಕುಱೈಯ). — ಮೂಗಳೆ. -ಕಳೆ. To deprive of the nose (Râm.). — ಮೂಗುರ್ಚಿ. -ಕುರ್ಚಿ. (= ಮೂಕೊಱಿಯ). A noseless, disgraced man (Bh. 4, 4, 61). 2, N. of a tree (My.; *cf.* ಮೂಕೊಱಿತಿ). — ಮೂದಾಣ. The cord put through a bullock's nose (My.). — ಮೂದಾಣಿ. = ಮೂದಾಣ. (My.). — ಮೂದಾನ. = ಮೂದಾಣ. (My.).

ಮೂಕ mûka. = ಮೂಗ, (ಮೂಂಗ), ಮೂಗು. *Dumb; speechless, silent, mute* (Mhr. ಮುಕಾ); a dumb man. 2, N. of a Dânava (Bh. 3, 5 sum., etc.). ಪೋಕನಿಗೆ ನಾಕ ಸಲ್ಲ, ಮೂಕನಿಗೆ ಸ್ವಪ್ನ ಸಲ್ಲ.— ಮೂಕನ ಸ್ವಪ್ನ ಹೇಳಲಿಕ್ಕೆ ತಿಳಿಯದು, ಹೇಳಿದೆ ತೀರದು.— ಮೂಕನೆದುರಿಗೆ ಮೂಗು ತುಱಿಸಿ ಕೊಣ್ಡ ಹಾಗೆ (Prvs.). See Prv. s. ಪ್ರತ್ಯುತ್ತರ. — ಮೂಕಮುಂಚ. ಮೂಂಗನೆನೆ ಮೂಕಮುಂಚ (Čt. I, 73).

ಮೂಕತೆ mûkatĕ. Dumbness, muteness, silence (Čpr. 1, 23; 7, 46).

ಮೂಕಾಮ್ಬೆ mûka-ambĕ. N. of a šakti of Šiva (My.).

ಮೂಕಾಸುರ mûka-asura. The asura Mûka (Ššv. 4, after 17).

ಮೂಕಿ mûki. The taper pole or shaft of a carriage (My.). — ಮೂಕಿಮರ. = ಮೂಕಿ. (My.). — ಮೂಕಿಹೊಱೆ. A bundle of fire-wood of a tapering form (My.).

ಮೂಕಿ mûki. = ಮೂಗಿ. A dumb female (My.; B. 3, 50; Sk. ಮೂಕೀ).

ಮೂಕೀಭಾವ mûkî-bhâva. The state of being dumb or silent (Čpr. 1, 41; Abh. P. 7, 156).

ಮೂಕುತಿ mû-kuti. (-ಕುತ್ತು 3). = ಮೂಗುತಿ. A nose-jewel, a nose-ring (ಘ್ರಾಣಾಂಕುಶ Mr. 337; My.; T. ಮೂಕ್ಕೊಟ್ಟಿ, M. ಮೂಕ್ಕುತ್ತಿ; Grj. 3, after 91; 10, 39; Bp. 12, 20; 16, 8; Ršv. 1, after 135).

ಮೂಗ mûgu-a 3. A man with a nose. See ನಿಡು-.

ಮೂಗ mûga. Tbh. of ಮೂಕ. (ಮೂಕ, ಅವಾಚ್ Nr.; ಜಡ, ಕಲ Hlâ., Mr. 388; ಮೌನಿ Bhn. 12; Bp. 47, 65). ಮಾತಿಲ್ಲದ ಮೂಗನು (ಮೂಕ Si. 355). ಕಿವುಡನಿಗೂ ಮೂಗನಿಗೂ ಹೋಲಿಕೆಯಾದವನು (ಅನೇಡಮೂಕ 363). ಕಿವುಡಯಜಮಾನಗೆ ಮೂಗಬಣ್ಟ (Prv.).

ಮೂಗತನ mûgatana. Dumbness (My.). — ಕಿವುಡುತನ ಮೂಗತನ ಉಳ್ಳವನು (ಏಡಮೂಕ Si. 363).

ಮೂಗಿ mûgi. A person with a nose. See ನಿಡು-. 2, N. of a bird (ಘ್ರಾಣಿ Mr. 175).

ಮೂಗಿ mûgi. Tbh. of ಮೂಕಿ (ಮೂಕೆ). (My.). See Prv. s. ಮಲೆಯಾಳ.

ಮೂಗು mûgu. = ಮುಕ್ 3, ಮುಗು, ಮೂ 3. The nose (ಸಿಂಘಿನಿ, ನಾಸಿಕೆ, ನಾಸೆ, ಘ್ರಾಣ, ಘೋಣೆ Hlâ., Mr. 319; ಶ್ರವಣ, ನಾಸಿಕ Nn. 50; ಘ್ರಾಣ, ಗನ್ಧವಹೆ, ಘೋಣೆ, ನಾಸೆ, ನಾಸಿಕೆ Si. 213; My.; T. ಮೂಕು; Tĕ. ಮುಕ್ಕು, ಮೂಡಿ); a forepart; a snout, etc.; a bill or beak; the nozzle of a vessel (My.; T.; ಮುಂಗುಡಿ Bhn. 47; *cf.* ಮುನ್ 2, etc.; ಮುಸುಡಿ, etc.). ಚಿಕ್ಕ ಮೂಗಿನವ (ನಃಕ್ಷುದ್ರ); ಮೂಗಿಲ್ಲದವನು (ವಿಗ್ರ Hlâ.). ಎಱಗಿದ ಮೂಗುಳ್ಳವನು (ನತನಾಸಿಕ, etc.); ಚಪ್ಪಟೆ ಮೂಗಿನವನು (ಖುರನಸ್); ಮೂಗಿಂಗೆ ತುಷ್ಟಿ ಮಾಡುವ ಗನ್ಧ (ಸುರಭಿ, ಘ್ರಾಣತರ್ಪಣ Nr.). ಮೂಗಿನ ಕಮ್ಬು (Mr. 280); ಒತ್ತಿ ಮೂಗಂ ಚುಚ್ಚಿ ನಸ್ತಿತಂ (179). ಚಿಕ್ಕ ಮೂಗುಳ್ಳವನು (ಅವಟೀಟ, ನತನಾಸಿಕ, etc. Si. 197); ಮೂಗ ತೀಟೇ ಕಜ್ಜಿಯುಳ್ಳವನು (ಪಾಮನ, ಕಚ್ಛುರ 202); ನೇಗಲ ಮೂಗು (ಪೋತ್ರ 452); ಪಕ್ಷಿಯ ಮೂಗು (ಚಂಚು, ತ್ರೋಟಿ 178); ಕುದುರೆಯ ಮೂಗು (ಪ್ರೋಥ, ಘೋಣೆ 274); ಹನ್ದಿಯ ಮೂಗು (ಪೋತ್ರ 452). ನೆಲನ ಮೂಗಿಂಗೂಱಿ ಹಿಣ್ಡನೊಡೆದೆಕ್ಕಲಂ (Râghč. 17, 72). ಮೂಗಿಗಿನ್ತ ಮೂಗುತಿ ಭಾರ.— ಮೂಗಿನ ಮೇಲೆ ಮಸಿ ಅನ್ದರೆ ಕೋಪ.— ಮೂಗಿಲ್ಲದವಳಿಗೆ ಮೂಗುತಿ ಯಾಕೆ?— ಮೂಗು ಕೊಯಿ ಕೊಣ್ಡು, ಅವಲಕ್ಷಣ ಅನ್ನಿಸಿ ಕೊಣ್ಡ ಹಾಗೆ.— ಮೂಗು ಕೊಯಿದರೂ ಮೂಗಿನ ಸೊಳ್ಳೆ ಉಣ್ಟಲ್ಲ? ಅನ್ದ ಹಾಗೆ (Prvs.). ನಿಜತಿರವನೊಲೆದು, ಮೂಗಿನ ಮೇಲೆ ಬೆರಳಿಟ್ಟು, ಮೌನದಿಂ ನಿನ್ದು (J. 18, 47). ಮೂಗಿನ ಕತ್ತಿ (a knife for cutting off the nose, Bp. 53, 57). See Bp. 20, 12; 22, 40; 45, 29; 46, 59; 47, 2; 50, 24; Bh. 1, 10, 38; ಕುಱಿ-, ತುದಿ-, etc. — ಮೂಗಕ್ಕೆ. -ಅಕ್ಕೆ. Weeping at which tears come down also through the nose (Râm. 1, 4, 9). — ಮೂಗ ದಾಣ. = ಮೂಗು-. (My.). — ಮೂಗ ದಾರ. = ಮೂಗ ದಾಣ. (My.). — ಮೂಗಱಿ. -ಅಱಿ. To cut off the nose (V. 41, 37). — ಮೂಗಱಿಕ. -ಅಱಿಕ. (*i. e.* ಹಱಿಕ). A man whose nose is cut off (My.). — ಮೂಗಱಿಕಿ. -ಅಱಿಕಿ. (*i. e.* ಹಱಿಕಿ). = ಮೂಗುಹಱಿಕಿ. (My.). — ಮೂಗಱಿಕಿ. -ಅಱಿಕಿ (*i. e.* ಹಱಿಕಿ). = ಮೂಗುಹಱಿಕಿ. (Râm. 3, 6, 52). — ಮೂಗಿಡು. -ಇಡು. To muzzle, to string a rein through the nose. ಮೂಗಿಟ್ಟುದು (ನಸ್ತಿತ, ನಸ್ಯೋತ Hlâ.). — ಮೂಗಿಲಿ. -ಇಲಿ. A musk-rat (My.). — ಮೂಗುಕಟ್ರೆ. = ಮೂಗ್ಗಟ್ರೆ. Dyspepsy that affects the nose so that dumbness is created (My.). — ಮೂಗುಕೊಕ್ಕರೆ. A crane (ಬಕ, ಕಹ್ವ Si. 174, *only* in Si.). — ಮೂಗು ತುಱಿಸಿ ಕೊಳ್ಳು. To scratch one's nose (which when done before a ಮೂಕ, is understood as if one wanted to deride him on account of his dumbness). ಮೂಕನೆದುರಿಗೆ ಮೂಗು ತುಱಿಸಿ ಕೊಣ್ಡ ಹಾಗೆ (Prv.). — ಮೂಗುದಾಣ. The cord put through an ox's nose (My.). — ಮೂಗುದಾರ. = ಮೂಗುದಾಣ. (My.). — ಮೂಗುನೇಣ್. -ಣು. = ಮೂಗುದಾಣ. (Č. Bp. 47, 46). ಎತ್ತುಗಳ ಮೂಗುನೇಣು (ನಾಸ್ಯ Nr.). — ಮೂಗುಬೊಟ್ಟು. A trinket for the nose (My.). — ಮೂಗುಬ್ಬಸ. -ಉಬ್ಬಸ. Difficult breathing through the nose, stoppage of breath (Râm. 30, 37). — ಮೂಗುವಟ್ಟಿಗೆ. -ಪಟ್ಟಿಗೆ. Silence (ರಿಕ್ಕಟ, ಮೌನ Šs.). — ಮೂಗುವಡು. -ಪಡು. To lay hold of one's nose: to become mute or silent (ಮೌನ Šmd. Dh.). ಮೂಗುವಟ್ಟುದು (ಮೌನಾರ್ಥಂ Kk. 53). — ಮೂಗುಹಱಿಕಿ. = ಮೂಗಱಿಕಿ, ಮೂಗಱಿಕಿ. A woman whose nose is cut off (G. 421). — ಮೂಗ್ಗಟ್ರೆ. = ಮೂಗುಕಟ್ರೆ. (My.).

ಮೂಗು mûgu. Tbh. of ಮೂಕ. Dumbness (My.). — ಮೂಗುಗಾಯ. A wound of which the mouth is shut: a swelling occasioned by a blow (My., also ಮೂಗ್ಗಾಯ). — ಮೂಗುಬಲಿ. An offering to an idol without music (My.). — ಮೂಗುಮಾರಿ. A silent, mysterious Durgâ (Bh. 3, 6, 81; My.).

ಮೂಗುತಿ mû-kuti. = ಮೂಕುತಿ. (Bp. 4, 39; 14, 4; Râm. 6, 12, 34; My.). ಮೂಟೀ ಮೂಗುತಿ ಹೋದ ದೆಸೆಯಿನ್ದ ಮೂಲೀ ಕಸವೆಲ್ಲ ಹೋಯಿತು (Prv.). See Prvs. s. ಮೂಗು. — ಮೂಗುತಿಬಳ್ಳಿ. A name given to several species of Ipomaea, such as I. sepiaria Koen., I. obscura Bot. Reg., etc. (Z.).

ಮೂಂಗ mûṅga. (Tbh. of ಮೂಕ; see ಮೂಕಮುಂಚ).

ಮೂಜುವರಿ mûjuvari. = ಮೂಜೂರಿ. (My.).

ಮೂಜೂರಿ mûjûri. = ಮುಜೂರಿ No. 2, ಮೂಜುವರಿ. Refractoriness (My.; H.).

ಮೂಟೆ mûṭĕ. = (ಮುಡಿ 2), (ಮೊಟ್ಟೆ). A bundle of grain, cloth, etc., a pack, a bale (My.; Tĕ.; T. ಮೂಟ್ಟೈ; M. ಮೂಡೆ; T., M. ಮೂಟ್ಟು, to join, link, stitch together; *cf.* ಮೂಡೆ).

ಮೂಡ mûḍa. = ಮೂಡಲ್ 1 (Šmd. 145), ಮೂಡಿ, ಮೂಡು 2. The direction in which the sun rises: the east (C.; M. ಮೂಡು, root, origin). ಮೂಡಣ, ಮೂಡಣ್ಗೆ, ಮೂಡಣಿಂ, ಮೂಡಣತ್ತಣಿಂ (Šmd. 135. 147), ಮೂಡಣದಿನ್ದ (B. 4, 205). ಪಡುವ ಮೂಡ ತೆಂಕ ಬಡಗ ಪೊಡವಿಪತಿಗಳ್ ಇಲ್ಲೆನಲ್ ನಡೆದು, ಗೆಲ್ದು (145). ಮೂಡಣಿಂ ಕ್ರಮದಿನಿರ್ದ ದೆಸೆಯಾನೆಗಳು (ಐರಾವತ ಪುಣ್ಡರೀಕ ಇತ್ಯಾದಿ Hlâ.). ಮೂಡಣೆಲರೂದೆ (Ršv. 9, 30). ಮೂಡಣ ಸನ್ತೆಗೆ ಹೋಗ ಬೇಡ, ಮುಣ್ಡೇ ಮಗಳನ್ನು ತರ ಬೇಡ (Prv.). — ಮೂಡಣಂ. -ಅನ್-ಅಂ. (Šmd. 136). A man of the east. — ಮೂಡಗಡೆ. -ಕಡೆ. The east side or quarter (Bp. 24, 36; My.). — ಮೂಡಣ ತೆಂಕಣ ದೇಶ. The south-east (ಪ್ರಾಗ್ದಕ್ಷಿಣದೇಶ Nr.). — ಮೂಡಣ ದಿಕ್ಕು. = ಮೂಡಣ ದೆಸೆ. (ವಿಶಾಖ Mr. 528; B. 3, 25). — ಮೂಡಣ ದೆಸೆ. The east (ಐನ್ದ್ರಿ, ಪೂರ್ವೆ, ಪ್ರಾಚಿ Hlâ.; J. 31, 63). — ಮೂಡದೆಸೆ. The east (J. 2, 65; 17, 40). ಪಸರಿಸಿದತ್ತು ಮೂಡದೆಸೆಯೊಳ್ ಬೆಳಗೇಮ್ಪು (Šmd. 266). — ಮೂಡವೆಟ್ಟು. -ಬೆಟ್ಟು. The eastern mountain (ಪೂರ್ವಾಚಲ Šs.).

ಮೂಡಲ್ mûḍal. ಮೂಡಲು. 1. = ಮೂಡ. (Šmd. 145. 147), etc. The east (ಪ್ರಾಚಿ, ಪೂರ್ವ Mr. 58; My.); in the east. ಮೂಡಲಿರ್ದ ಪದದೊಳ್ ತಾಂ ರಾಮನೊ ವಲ್ಲಭಂ? (Šmd. 145). ಮೂಡಲಾದುದು (ಪ್ರಾಚೀನ, ಪ್ರಾಂಚ್ Hlâ.; ಪ್ರಾಚೀನ Mr. 58). ಮೂಡಲು ಮೊದಲಾದ ಎಣ್ಟು ದೆಸೆಗಂ ಕ್ರಮದಿನ್ದೊಡೆಯರು (ಇನ್ದ್ರ ಅನಲ ಯಮ ಇತ್ಯಾದಿ Hlâ.). ಮೂಡಲಲ್ಲಿ ಹುಟ್ಟಿದದು (ಪ್ರಾಚೀನ Si. 29). See Bp. 22, 28; Râm. 1, 14, 2; Bh. 2, 4, 9; Si. 28.

ಮೂಡಲ್ mûḍal. ಮೂಡಲು. 2. Dry cow-dung (Si. 315; Tĕ. ಮೂಟ; M. ಮುಳಿ, scorched or dry; *cf.* ಮುರುಣ್ಟು 2; Sk. ಮೋಣ).

ಮೂಡಾವೆ mûḍâvĕ. = ಮೂಡೆ No. 2. A pillow, a cushion (ಕವುಳುಡೆ, ಮುಲಗು Šs.; ಕವುಳುಡೆ Čt. II, 83, o. r. ಮೂಡಾವಿ).

ಮೂಡಿ mûḍi. = ಮೂಡ 1, etc. Rising of the sun, etc. (ಉದಯ Šmd. II; Kk. 75, o. r. ಮೂಡಿತು).

ಮೂಡಿಗೆ mûḍige. A quiver (ತೂಣೀರ, ಉಪಾಸಂಗ, ತೂಣ, ತೂಣಿ, etc. Hlâ.; ಡೊಣೆ, ಬತ್ತಳಿಕೆ, ಕಣೆಯ ಪೊದೆ Kk. 40; ಡೊಣೆ, ಬತ್ತಳಿಕೆ, ಪೊದೆ Šm. 43; ಇಷುಧಿ Bhn. 30; Čpr. 1, 106; Râm. 3, 6, 5; Ššv. 4, 54; J. 3, 33; My.; T. ಮೂಡು, ಮೂಯ್, M. ಮೂಡು, Tĕ. ಮೂಯು, to be covered; to cover; T. ಮೂಟ್ಟು, M. ಮೂಡಲ್, ಮೂಡಿ, ಮೂಡು, a cover; T. ಮೂಡ, M. ಮೂಡಲ್, dark sky; *cf.* ಮುಗುಚು, ಮುಸುಗು; ಮುಗಿಲ್, ಮೋಡ).

ಮೂಡಿಸು mûḍisu. To cause to rise, etc. ಉಗಿಯ ಯನ್ತ್ರದಿನ್ದ ಮೋಹರಗಳ ಮೇಲೆ ಅಕ್ಷರಗಳನ್ನು ಮೂಡಿಸುತ್ತಾರೆ (B. 5, 224).

ಮೂಡು mûḍu. 1. To rise, to arise; to originate, to be produced; to be born, to come into existence; to become visible or apparent; to come about (ಉತ್ಪತ್ತಿ Šmd. Dh.; C.). ಮೂಡಿತು (*i. e.* ಮೂಡಿದದು, ಉದಯ Kk. 75, o. r. ಮೂಡಿ). ಮೆಯ್ಯುವಿ ಮ್ಮರ್ಡಿತು (ಪುಲಕ Čt. II, 76). ತಬಿತಬಿನೆ ನೇಸರ್ಮೂಡಿದುದು (Šmd. I). ಹೊಸತಾಗಿ ಮೂಡಿದ ಮೊಳೆ (ಅಂಕುರ); ಇನ್ದ್ರಚಾಪ ಸಸಿನೆ ಮೂಡಿದಡೆ ರೋಹಿತ ಎನಿಸುಗು, ಅದು ಕೊರಡು (Nr.). ರವಿ ಮೂಡಿದಂ or ರವಿ ಮೂಡಿದುದು (Šmd. 109). ನೇಸರ್ಮೂಡಿದುದು ಮಿಬ್ಬಿ ಮೂಡುವ ತೆಱದಿಂ (217). ಎಡಗಡೆಯ ಮುಂಗಾಲ ಹೆಜ್ಜೆ ಪೂರಾ ಮೂಡಿದ್ದಿಲ್ಲ (B. 4, 170). ಕಾಗದದ ಮೇಲೆ ಅಕ್ಷರಗಳು ಮೂಡಿದ್ದನ್ನು ಕಣ್ಡನು (4, 207). See Čpr. 3, 37; 4, 54; Abh. P. 13, 74; Bp. 24, 45; 25, 21; 37, 68; 39, 51; 52, 23; 53, 14; 57, 47; 59, 14; Č. Bp. 4, 7; Ršv. 5, 39; 8, 105; 12, 42; 13, 45; J. 1, 3; 6, 11; 22, 5; 26, 5. 13. 26; 29, 9. 34; Bh. 1, 8, 48.

ಮೂಡು mûḍu. 2. = ಮೂಡ 1, etc. — ಮೂಡುಗಡೆ. = ಮೂಡಗಡೆ. (My.).

ಮೂಡೆ mûḍĕ. A straw-bundle containing pulse or râgi (My.; M.; *cf.* ಮೂಟೆ). **2,** = ಮೂಡಾವೆ, a pillow, a cushion (Ršv. 1, after 135). ನಾಡುಗಳೆಲ್ಲ ಓಡುವಾಗ ಮೂಡೇ ಅಪೇಕ್ಷಿಸಿದ (Prv.). See Prv. s. ಮೂಢಭಕ್ತಿ.

ಮೂಢ mûḍha. = ಮೂರ, ಮೋಡ, ಮೋಳ. Stupefied, bewildered, perplexed, confused;—*stupid, dull, silly, foolish, simple, ignorant;*—a fool, etc. ಮೂಢಗೆ ಹೇಳಿದ ಬುದ್ಧಿ, ಆಡಿಗೆ ಹಾಕಿದ ಮೇವು (Prv.). 2, gone astray or adrift; wrong, out of the right place (see ಶುಕ್ರ-).

ಮೂಢಚಿತ್ತ mûḍha-čitta. A foolish, silly man (ಕುಬುಬ Bhn. 61).

ಮೂಢತನ mûḍhatana. = ಮೂಢತ್ವ. (My.; B. 4, 49).

ಮೂಢತೆ mûḍhatĕ. = ಮೂಢತ್ವ. (Ššv. 4, 113).

ಮೂಢತ್ವ mûḍhatva. Stupidity, bewilderment, simplicity, folly, ignorance. (My.; ಅಚಾತುರ್ಯ Čb.).

ಮೂಢಭಕ್ತಿ mûḍha-bhakti. A simple, undiscriminating or blind devotion to, or faith in, one's guru or deity (My.). ಮೂಢಭಕ್ತಿಗೆ ಕೇಡಿಲ್ಲ, ಮೂಡೆರಾಗಿಗೆ ಭಯವಿಲ್ಲ (Prv.).

ಮೂಢಾತ್ಮ mûḍha-âtma. A person bewildered in mind, a foolish, ignorant person, a fool. (J. 11, 28; My.).

ಮೂತ mûta. *Bound, tied.*

ಮೂತಿ mûti. = ಮೋತಿ. The face, the mouth, the snout, etc. (My.; see T., etc. s. ಮುಸುಡು; ಅಸ್ರ G.).

ಮೂತ್ರ mûtra. *Urine* (ವಪುಜಲ Mr. 328). See ಮಲ-. — ಮೂತ್ರಕಟ್ಟು. = ಮೂತ್ರಬನ್ಧ. (My.).

ಮೂತ್ರಕೃಚ್ಛ್ರ mûtra-kriččhra. *Strangury.*

ಮೂತ್ರಗನ್ಧ mûtra-gandha. The smell of urine. See ಕೊಱ್ಜ 3.

ಮೂತ್ರದ್ವಾರ mûtra-dvâra. The urethra (My.).

ಮೂತ್ರಬನ್ಧ mûtra-bandha. Stoppage of urine, strangury (My.).

ಮೂತ್ರರೋಗ mûtra-rôga. A sickly discharge of urine (My.).

ಮೂತ್ರಶಂಕೆ mûtra-šankĕ. Urgent need for making water (My.).

ಮೂತ್ರಿತ mûtrita. *Voided as urine; soiled with urine.*

ಮೂತ್ರಿಸು mûtrisu. To discharge urine (Bp. 32, 26; 60, 50; My.).

ಮೂದಲಿಸು mûdalisu. To confront and upbraid, to taunt (My.; Tĕ. ಮುದಲಕಿಂಚು, ಮೂದಲಿಂಚು; T. ಮುಗದಳೈ, ಮೂದಲಿ, ಮುದರಿ). See Čpr. 10, after 86; 10, 109; Abh. P. 9, 83; 14, 133; 16, after 5; Bp. 20, 24; 28, 21; 30, 29; 32, 33; 36, 42; 39, 19; 42, 18; 44, 69; 46, 48. 50. 51; 49 sum.; 49, 13. 21; 52, 32. 33; 53 sum.; 53, 14; 56, 20; 59, 55; Rsv. 6, after 11; J. 8, 33.

ಮೂದಲೆ mûdalĕ. Confronting and upbraiding, taunt (Čpr. 1, 14; Bh. 6, 2, 4; 8, 23, 11; J. 22, 31; 23, 15; My.; T.). — ಮೂದಲೆಮಾತು. -ಮಾತು. = ಮೂದಲೆ. (Šsv. 4, 131).

ಮೂಬದಲು mûbadalu. = ಮೂಬದಲೆ. (ನಿಮಯ, ಸೈಮೇಯ, ಪರಿದಾನ, ಪರಿವರ್ತ, ಪ್ರತಿದಾನ, ವಿನಿಮಯ, ವೈಮೇಯ G.; ವಿನಿಮಯ Čb.).

ಮೂಬದಲೆ mûbadalĕ. = ಮೂಬದಲು. Exchanging, exchange, barter; sums lent and paid on running accounts without the use of receipts or documents on either side (ಪ್ರತಿ Si. 468; My.; Mhr. ಮೋಬದಲಾ, ಮೋಬಾದಲಾ; Br. ಮುಬಾದಿಲೆ, ಮೊಬಾದಲಾ).

ಮೂಮೆ mûmĕ. = ಮೂರ್ಮೆ. (ಮೂಱುಂ ಸೂಟ್ Čt. II, 85).

ಮೂರ mûra. = ಮೂಢ. 2, destroying, killing (ಮೂರದೇವ, a particular kind of demon).

ಮೂರಿ mûri. The destroying deity. See ಮಾರಿಯ-.

ಮೂರುತಿ mûruti. Tbh. of ಮೂರ್ತಿ. (My.). See ತ್ರೈ-; J. 10, 38; Dp. 32, 5.

ಮೂರುಳಿ mûruḷi. = ಮಾರುಳಿ, q. v.

ಮೂಱು mûṟu. (Šmd. 154). = ಮು, etc. (222). The number three; three (ತ್ರೇತೆ, ತ್ರಯ Nn. 98; Bp. 40, 73; C.; T. ಮೂನ್ಱು; M. ಮೂನ್ನು; Tĕ. ಮುಗುರು, ಮುಗ್ಗುರು, ಮೂಡು; Tu. ಮೂಜಿ). ಮೂಱಣ Ch. 326), ಮೂಱಱ (C.); ಮೂಱನ್ನು (Si. 62; C.); ಮೂಱಱಲ್ಲಿ (Šmd. 32. 189 Cm.; Nn. 98; Bp. 35, 32; C.); ಮೂಱಱೊಳ್ (Šmd. 189); ಮೂಱಱಂ (135); ಮೂಱರ್ಕೆ; ಮೂಱಕ್ಕೆ (Bp. 21, 27; C.). ಮೂಱು ಮಾತ್ರೆಯನುಳ್ಳದು (ತ್ರಿಮಾತ್ರಕಂ Šmd. 18 Cm.). ಮೂಱು ಲಿಂಗಂ (ಸ್ತ್ರೀ ಪುಂ ನಪುಂಸಕಗಳೆಂಬ ಮೂಱು ಲಿಂಗಂ 186 Cm.). ಮೂಱುಂ ಲಗ್ಗದೊಳಂ (Čpr. 5, after 76). ಮೂಱುಂ ಲೋಕವಿದೆಲ್ಲಂ (ತ್ರಿಭುವನಮಖಿಲಮಿದಂ); ಮೂಱು ವೇದಂಗಳುಂ (ತ್ರಯಿ); ಎರಡು ಮೂಱು ಸೂಟ್ ನುಡಿವ ನುಡಿ (ಆಮ್ರೇಡಿತ); ಪಾದ ದೇವ ಭಟ್ಟಾರಕ ಈ ಮೂಱುಂ ಹೆಸರ ಕಡೆಯೊಳು ಪೂಜಾವಚನ; ಭದ್ರ ಮನ್ದ ಮೃಗ ಎನ್ದು, ಇನ್ತು ಆನೆಗಳ್ ಮೂಱು ತೆಱನಕ್ಕುಂ; ಮೂಱು ರೇಖೆಯನುಳ್ಳ ಕೊರಳು (ಕಮ್ಬುಗ್ರೀವೆ Hlâ.). ಮೂಱು ಬಾರಿ ಉತ್ತ ಕೆಯಿ (ತ್ರಿಗುಣಾಕೃತ Nr.). ಮನ್ದಂ ಮೃಗಂ ಭದ್ರಮೆನಲು ಗಜಜಾತಿ ಮೂಱಿನ್ದಮುಕ್ಕು (Mr. 154). ಮೂಱು ವೇದಗಳು (ತ್ರಯಿ Si. 53). ಮೂಱು ದಿನದ ಬಾಟಿಗೆ ಆಱು ಜೋಡು ಓಲೆ.— ಮುಪ್ಪಾದ ಮೇಲೆ ಮೂಱು ದಿನವಿರಬಾರದು.— ಆಲಸ್ಯದವಗೆ ಎರಡು ಕೆಲಸ, ಲೋಭಿಗೆ ಮೂಱು ಖರ್ಚು (Prvs.). See Prv. s. ಮುತ್ತಯ್ದೆ. — ಮೂಱಗ್ನಿ. -ಅಗ್ನಿ. The three sacrificial fires (ತ್ರೇತೆ Si. 239). — ಮೂಱಡಿ. -ಅಡಿ. Three feet (Bp. 2, 5; J. 16, 20). — ಮೂಱಡಿಗ. -ಅಡಿಗ. Agni (ಅಗ್ನಿ Šs.). — ಮೂಱನೆಯ. -ಅನೆಯ. Third (Bp. 58, 59; B. 2, 48; C.). ಮೂಱನೆಯ ವರ್ಣಂ (Šmd. 373). ಮೂಱನೆಯ ಯುಗ (ದ್ವಾಪರ Nr.). — ಮೂಱನೆಯಂ. (Šmd. 243). A third man. — ಮೂಱನೆಯವ. -ಅವ. A third man (C.). ಮೂಱನೆಯವರು ಕೇಳದ ಮಾತು (ಅಷಡಕ್ಷೀಣ G.). ಮೂಱನೆಯವನೊಬ್ಬ (B. 3, 71). — ಮೂಱನೆಯವಳು. -ಅವಳು. ಮೂಱನೆಯಾಕೆ. -ಆಕೆ. A third woman (My.; B. 5, 283). — ಮೂಱಮ್ಬಕ. -ಅಮ್ಬಕ. Three eyes (J. 31, 46). — ಮೂಱವಸರ. -ಅವಸರ. The three times: morning, noon, and evening (Bp. 18, 42; 44, 24; 45, 10). — ಮೂಱಿರುಳ್. -ಇರುಳ್. Three nights (J. 32, 20). — ಮೂಱು ಏಣಿನ ಕಳ್ಳಿ. A large leafless, thorny and milky shrub, Euphorbia antiquorum Lin. (Z.). — ಮೂಱು ಕಟ್ಟು. Three bands or ties (J. 8, 19). — ಮೂಱು ಕಣ್. Three eyes (Bp. 50, 66). ಮೂಱು ಕಣ್ಣವ. -ಅವ. A man with three eyes (J. 16, 20). — ಮೂಱು ಗಾವುದ. = ಮೂಗಾವುದ. ಮೂಱು ಗಾವುದದೊಳಗೆ ಬ್ರಾಹ್ಮಣರಿಲ್ಲದಿದ್ದರೆ ಅಶ್ವಮೇಧಯಾಗ ಮಾಡ್ಯೇನು ಅನ್ದ ಹಾಗೆ (Prv.). — ಮೂಱು ಗ್ರಾಮ. Three villages. 2, a musical expression. ಶ್ರುತಿಯೊಳ್ ಇಪ್ಪತ್ತೆರಡು ಗಮಕಮುಕ್ಕು, ಅವಕೆ ದೇಶೀಯ ಮೇಳಮುಕ್ಕು, ಅವಕೆ ಮೂಱು ಗ್ರಾಮಮುಮ್, etc. (Mr. 78). — ಮೂಱು ದಾರಿ. A place where three roads meet and much dust is found. ಮುನ್ದಣ ಬುದ್ಧಿ ತಪ್ಪಿದರೆ ಮೂಱು ದಾರಿಯ ಮಣ್ಣೇ.— ಮೂಱು ದಾರಿ ಆಱು ಬಟ್ಟೆ (said when a business is spoiled, Prvs.). — ಮೂಱು ನಾಮ. The three sectarian lines applied to a Vaishṇava's forehead and other parts of the body. ಮೂಱು ನಾಮದವ ಸ್ವರ್ಗಕ್ಕೆ ಹೋದರೆ ಹನ್ನೆರಡು ನಾಮದವ ಎಲ್ಲಿ ಹೋದಾನು? (Prv.). — ಮೂಱು ನಾಲ್ಕು. Three or four (B. 2, 21. 35; 3, 13; C.). — ಮೂಱು ನಾಲ್ಕುಂ. Seven (Bp. 5, 64). — ಮೂಱು ಬಾರಿ. Three times (Bp. 50, 38; My.). — ಮೂಱು ಮನ್ದಿ. Three persons (C.). ಹುರುಳಿ ತಿನ್ನುವವನಿಗೆ ಕಣ್ಣ ಹಿಡಿಯುವವರು ಮೂಱು ಮನ್ದಿ (Prv.). — ಮೂಱು ಮೂಱು. Three and three, in a distributive sense, each three, every three (B. 3, 3. 106; 4, 46). — ಮೂಱು ಮೂರ್ತಿ. = ತ್ರಿಮೂರ್ತಿ. (My.). — ಮೂಱು ಮೋಹ. Three môhas (Čpr. 8, 80). — ಮೂಱು ಲೋಕ. The three worlds. ಮೂವರ ಕಿವಿಗೆ ಮುಟ್ಟಿದ್ದು ಮೂಱು ಲೋಕಕ್ಕೆ ಮುಟ್ಟುವದು.— ತಾನುಣ್ಬೋ? ಮೂಱು ಲೋಕ ಉಣ್ಬೋ? (Prvs.). — ಮೂಱು ವರುಷ. Three years. ಮೂಱು ವರುಷದ ಬುದ್ಧಿ ನೂಱು ವರುಷದ ತನಕ (Prv.). — ಮೂಱುವರೆ. -ಂ-ಅರೆ. Three and a half (My.; B. 3, 86; 5, 252). — ಮೂಱು ವರ್ಣ. Three colours;—three letters: the letters a, u, ma (My.; ಶ್ವೇತವರ್ಣಾತ್ಮಕವಾದ ಪ್ರಣವ Kp. 4, 8, 1 Cm.). — ಮೂಱು ವಿಧ. = ಮೂರ್ವಿಧ. Three modes, etc. ಪೊಲನಱಿಯದ, ನೆಲನಱಿಯದ, ಕೆಲನಱಿಯದ, ಮೂಱು ವಿಧವಱಿಯದ (Šmd. 127; *cf.* ಮೂಱು ವಿಧಿ). — ಮೂಱುಂ ಸೂಟ್. Three times (ಮೂಮೆ Čt. II, 85). — ಮೂಱು ಸಂಜೆ. Evening-twilight, nightfall (My.; ಪಿಮ್ಬುಗಲ್ G.; B. 3, 80). — ಮೂಱು ಸನ್ಧ್ಯೆ. = ತ್ರಿಸನ್ಧ್ಯ. (Bp. 39, 4). — ಮೂಱು ಸೂಟ್. -ಸೂಱು. Three times or turns (Bp. 46, 55; 51, 79; 60, 61). — ಮೂಱು ಹೊತ್ತು. The three periods of the day: morning, noon, and evening (Bp. 50, 66; My.). — ಮೂಱೂ ಕಾಲು. Three and a quarter (My.; B. 5, 255). — ಮೂಱೂ ಸಂಜೆ. = ಮೂಱು-. (ಪ್ರದೋಷ G.; B. 4, 176. 183; My.). ಮೂಱೂ ಸಂಜೆಯ ಬಿಸಲು (G. 153). — ಮೂಱೆರಡು. -ಎರಡು. Six (Bp. 1, 9; My.). — ಮೂಱೆಲೆಗನ್ನೆ. -ಎಲೆ-. The plant Hedysarum gangeticum (ವಿದಾರೀಗನ್ಧೆ, ಸಾಲಪರ್ಣಿ, ಅಂಶುಮತಿ, ಸ್ಥಿರೆ, ಧ್ರುವೆ Nr.). — ಮೂಱೆಲೆಹೊನ್ನೆ. = ಮೂಱೆಲೆಗನ್ನೆ. (Si. 150; My.).

ಮೂರ್ mûr. = ಮೂಱು, etc. (Bp. 46, 3). See ಮೂರ್ಮೆ. — ಮೂರ್ಕೋಟಿ. Three krores (J. 19, 4). — ಮೂರ್ಗಳ್. Three (plural form, Č. Bp. 47, 30). — ಮೂರ್ದಿನ. Three days (Bp. 27, 22). — ಮೂರ್ವಿಧ. = ಮೂಱು ವಿಧ. (Bp. 18, 87). — ಮೂರ್ಸೂಟ್. = ಮೂಱು ಸೂಟ್. (Bp. 9, 7; 50, 30).

ಮೂರ್ಖ mûrkha. = ಮುಕ್ಕ. Stupid, foolish, silly, ignorant;—*a fool, a blockhead.* ಮೂರ್ಖಗೆ ಹೇಳಿದ ಬುದ್ಧಿ, ಗೋ

ಕಲ್ಲ ಮೇಲೆ ಹೊಯಿದ ಮಟಿ (Prv.). See Sp. s. ಮೆಲು. — ಮೂರ್ಖನೆಯ್ದಾರ್. N. (Bp. 44, 60. 63. 64). — ಮೂರ್ಖಪಟ್ಟು. The obstinate way in which a fool grasps or handles a business (My.).

ಮೂರ್ಖತನ mûrkhatana. Stupidity, folly, foolishness, dulness, ignorance (ವ್ಯಾಮೋಹ Čb.; My.; B. 4, 161; 5, 109).

ಮೂರ್ಖತೆ mûrkhatĕ. = ಮೂರ್ಖತನ. (Sk.; Grj. 6, 11).

ಮೂರ್ಖತ್ವ mûrkhatva. = ಮೂರ್ಖತೆ. (Sk.; My.).

ಮೂರ್ಚು mûrču. 1. (= ಮುಚ್ಚು ಉ). To be stupefied, etc. See Kk. s. ಮೂರ್ಛೆವೋಗು.

ಮೂರ್ಚು mûrču. 2. (Tbh. of ಮೂರ್ಛೆ). — ಮೂರ್ಚೋಗು. (*i. e.* ಮೂರ್ಚು ಹೋಗು). To be stupefied, to faint away, etc. (ಹಮ್ಮುದವ್ವೋಗು Čt. II, 111).

ಮೂರ್ಛನ mûrčhana. Stupefying, etc. 2, fainting, swoon, stupor, etc. 3, violence, vehemence; growth, increase. 4, swelling or rising of sounds, an intonation, note, a tone or semi-tone in the musical scale (Sk.; V. 11, 8).

ಮೂರ್ಛನೆ mûrčhanĕ. ಮೂರ್ಛನಾ. = ಮೂರ್ಛನ. — ಮೂರ್ಛನೆ ತಿಳಿ. Loss of consciousness, etc. to disappear (Bp. 28, 61). — ಮೂರ್ಛನೆ ಬಿಗಿ. Stupor to seize firmly or become strong (Bp. 28, 54).

ಮೂರ್ಛಾನುಗತ mûrčhâ-anugata. Arrived at a swoon: swooned (J. 4, 43).

ಮೂರ್ಛಾಲ mûrčhâla. *Fainting, fainted, senseless.*

ಮೂರ್ಛಾವಿಲ mûrčhâ-âvila. Not clear (in one's mind) on account of stupor (Ššv. 5, 18).

ಮೂರ್ಛಾವೇಗ mûrčhâ-vêga. Violence or intensity of fainting (Čpr. 5, 18).

ಮೂರ್ಛಿ mûrčhi. A person overcome with stupor;—a puffed-up, proud or insolent man (ಸೊಕ್ಕಿದಂ Bhn. 65).

ಮೂರ್ಛಿತ mûrčhita. *Stupefied, rendered senseless, fainted, fainting.* (Bp. 46, 23; My.). Feminines ಮೂರ್ಛಿತಳು (B. 5, 132), ಮೂರ್ಛಿತೆ (My.). 2, *grown, increased, augmented, swollen, intensified, thick, solid.*

ಮೂರ್ಛಿಸು mûrčhisu. To become torpid or stupefied, to become senseless, to faint away, to swoon (Č. Bp. 19, 31).

ಮೂರ್ಛೆ mûrčhĕ. ಮೂರ್ಚ್ಛೆ. = ಮುಚ್ಚೆ 1, (ಮೂರ್ಚು 2). *Fainting, loss of consciousness, a swoon, stupor;*—spiritual stupor or blindness, hallucination (ಮರುಹು Nn. 124). 2, the rising of sounds, diatonic scale. — ಮೂರ್ಛೆಗೊಳ್ಳು. -ಕೊಳ್ಳು. = ಮೂರ್ಛೆವೋಗು. (My.). — ಮೂರ್ಛೆ ತಿಳಿ. A swoon to pass away: to recover from fainting, etc. (ಮಲಚುರು G.; My.). ಮೂರ್ಛೆ ತಿಳಿದಂ (ತೆರ್ವತ್ತಂ Kk. 91). — ಮೂರ್ಛೆದಿಳಿ. -ತಿಳಿ. = ಮೂರ್ಛೆ ತಿಳಿ. (Abh. P. 9, 111). — ಮೂರ್ಛೆರೋಗ. Epilepsy (My.). — ಮೂರ್ಛೆವೋಗು. -ಪೋಗು. To become torpid or stupefied, to become senseless, to lose consciousness, to faint, etc. (Abh. P. 10, 154; Ššv. 4, 22). ಮೂರ್ಛೆವೋದಂ (ಮುಚ್ಚಂ Kk. 75, o. r. ಮೂರ್ಚಿದಂ). See ಮುಚ್ಚುಉ. — ಮೂರ್ಛೆ ಹೊಂದು. = ಮೂರ್ಛೆಗೊಳ್ಳು. (My.; ಹಮ್ಮಯ್ಸು G.).

ಮೂರ್ತ mûrta. = ಮುಹೂರ್ತ 2. Thickened; *settled into any fixed shape, formed, substantial, solid, material, corporeal, embodied.* 2, *stupefied, unconscious, fainted, insensible.* — ಮೂರ್ತಗೊಳಿಸು. = ಮೂರ್ತಿ-. To cause to take a (sitting) posture: to cause to sit down (Bp. 4, 5). — ಮೂರ್ತ ಮಾಡು. To form a (sitting) figure: to sit down (My.).

ಮೂರ್ತಿ mûrti. = ಮೂರುತಿ. Any solid body, any material form, anything which has definite shape and limits; a material element (especially as a component of the human body);—*body, form, visible shape; matter, substance;*—embodiment, manifestation, incarnation, personification. 2, *an image, an idol, a statue, a figure, a form.* ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು (Prv.). — ಮೂರ್ತಿಗೊಳ್. -ಕೊಳ್. To assume a body or form (Abh. P. 3, 144. 145); to take a (sitting) posture: to sit down (Ššv. 1, after 72; 5, after 57; V. 14, after 31). — ಮೂರ್ತಿಗೊಳಿಸು. -ಕೊಳಿಸು. = ಮೂರ್ತಗೊಳಿಸು. (Ršv. 3, after 80; V. 14, after 27 & 28; 23, after 13). — ಮೂರ್ತಿವೆಟ್. -ಪೆಟ್. To assume a body or form (Ššv. 1, after 79).

ಮೂರ್ತಿಪೂಜೆ mûrti-pûjĕ. Idol-worship (My.).

ಮೂರ್ತಿಮತ್ mûrti-mat. Having a material or bodily form, material, embodied, corporeal, incarnate, personified.

ಮೂರ್ತಿಮದ್ವಸ್ತುಸಮ್ಮದ mûrtimat-vastu-sammada. The pleasant group of embodied objects (ಪುದ್ಗಲ, ಮೂರ್ತಿಯನುಳ್ಳ ವಸ್ತುಗಳು Nn. 96).

ಮೂರ್ತ್ಯಷ್ಟಕ mûrti-ashṭaka. Eight forms (Ššv. 5, 34; see ಅಷ್ಟಮೂರ್ತಿ).

ಮೂರ್ಧ mûrdha. The forehead;—*the head* (ತಲೆ Mr. 315);—the top. ಮೂರ್ಧ್ನಿ, on the head, at the head (My.; G.).

ಮೂರ್ಧಜ mûrdha-ja. *The hair of the head.*

ಮೂರ್ಧನ್ಯ mûrdhanya. Belonging to the head. 2, cerebral, as a letter (Šmd. 27).

ಮೂರ್ಧಪಿಂಡ mûrdha-pinḍa. A lump upon the head of an elephant: *either of the globes on the forehead of an elephant* (ಕುಮ್ಭ, ಆನೆಯ ಕುಮ್ಭಸ್ಥಲ, ಎರಡು ಕುಮ್ಭಸ್ಥಲದ ನಡುಬೀಡು ಎಮ್ಬುದು Hlâ.).

ಮೂರ್ಧವೇಷ್ಟನ mûrdha-vêshṭana. *A turban.*

ಮೂರ್ಧಾಭಿಷಿಕ್ತ mûrdha-abhishikta. Having the head anointed, inaugurated, installed;—*a consecrated king;*—*a Kshatriya;*—a royal counsellor.

ಮೂರ್ಧಾಭಿಷೇಚನ mûrdha-abhishêčana. The act of consecrating, anointing, inauguration (J. 18, 3).

ಮೂರ್ಧ್ನ್ಯಾಘ್ರಾಣ mûrdhni-âghrâṇa. Smelling at the head (Grj. 3, 110; 3, after 119).

ಮೂರ್ಮೆ mûr̤-mĕ. (Šmd. 243). = ಮೂಮೆ. Thrice.

ಮೂರ್ವೆ mûrvĕ. *The plant Sanseviera roxburghiana Shult.*, a sort of creeper from the fibres of which bow-strings and the girdle of the Kshatriyas are made.

ಮೂಲ mûla. *The root of any plant or tree* (ಬೇರ್ Nn. 66; ಮರದ ಬೇರು 100; *cf.* ಮೊದಲ್; Tĕ. ಮುದಲ = ಮೂಲ; M. ಮೂಡು, the bottom). 2, the bottom of anything (ಬುಡ್ಡ, ಮೊದಲ್ Nn. 136);—*the basis, the ground-work, the beginning;*—a wall (ಮೊದಲ್, ಶಾಲ 2 Nn. 20). 3, *root, origin;* cause; means; the first cause. 4, the original, the original text of any work. 5, original property, capital, principal, stock. 6, *the nineteenth lunar asterism.* 7, the end: termination, destruction, ruin (My.). ಮೂಲ ತಿಳಿದವಗೆ ಮೇಲೆ ತೋರಿಸ ಬೇಡ. — ಕುರುಡಿಗೆ ಮದುವೆಯಾದರೆ ಮನೇ ಗಡಿಗೆಗೆ ಮೂಲ.—ಬಡವನ ಸಿಟ್ಟು ದವಡೆಗೆ ಮೂಲ.—ಜಾಲೀ ಬಿತ್ತಲು ಕಾಲಿಗೆ ಮೂಲ.—ಮೊಣ್ಣ ಕೊಡಲಿ ಬಿಟ್ಟಿಗೆ ಮೂಲ.—ಜಾಲಿ ನೆಟು, ಕಾಲಿಗೆ ಮೂಲವಾಯಿತು (Prvs.). — ಮೂಲಗಣ್ಣು. = ಮೂ

ಲಧನ. (B. 5, 102). — ಮೂಲಬಣ್ಣವಲ. = ಮೂಲಗಣ್ಣು. (B. 5, 98; My.). — ಮೂಲಪ್ಪುರಂ. -ಂ-. To the bottom (Čpr. 5, after 42).

ಮೂಲಕ mûlaka. = ಮುಲ್ಲಂಗಿ, ಮೂಲಗೆ, ಮೂಲಂಗಿ. Having roots; rooted in, springing from;—on the ground or reason of; on account of (My.; B. 4, 92. 163). 2, an esculent root;—*the radish, Raphanus sativus* Lin.

ಮೂಲಕರ್ಮ mûla-karma. *Magical employment of roots, sorcery.*

ಮೂಲಕಾರಣ mûla-kâraṇa. The first or original cause (My.).

ಮೂಲಗೆ mûlagĕ. Tbh. of ಮೂಲಕ. (ಮೂಲಕ Hlâ.).

ಮೂಲಂಗಿ mûlaṅgi. Tbh. of ಮೂಲಕ. (ಮೂಲಕ Nr.; Mr. 95; Si. 162; My.).

ಮೂಲತಃ mûla-taḥ. From the root;—from the beginning (B. 4, 89; My.).

ಮೂಲದ್ರವ್ಯ mûla-dravya. = ಮೂಲಧನ. (ಪರಿಪಣ G.; My.).

ಮೂಲಧನ mûla-dhana. *Original property, capital, principal, stock* (Bp. 27, 1).

ಮೂಲನ mûlana. Rooting. See ನಿರ್ಮೂಲನ.

ಮೂಲನಕ್ಷತ್ರ mûla-nakshatra. = ಮೂಲ No. 6. (J. 28, 14).

ಮೂಲನಗರ mûla-nagara. *Old town, opposed to the suburbs.*

ಮೂಲನಿವಾಸಿ mûla-nivâsi. An original inhabitant, an aboriginal (B. 4, 205; My.).

ಮೂಲಬಲ mûla-bala. An original force, the principal force or army (My.); one's own army (Si. 267).

ಮೂಲಭದ್ರಿಕೆ mûla-bhadrikĕ. A certain permutation of letters (Mr. 352).

ಮೂಲಭೂತ mûla-bhûta. Become the root or original. (B. 4, 86).

ಮೂಲಮನ್ತ್ರ mûla-mantra. An original or fundamental mantra; the principal mantra of a sect (Bp. 38, 45; My.).

ಮೂಲರೋಗ mûla-rôga. = ಮೂಲವ್ಯಾಧಿ. (My.).

ಮೂಲವಿಗ್ರಹ mûla-vigraha. A base-idol: an idol of stone that is not taken out of the temple for processions (My.).

ಮೂಲವ್ಯಾಧಿ mûla-vyâdhi. The disease called piles (ಗುದಕೀಲಕ, etc. Hlâ.; ಅಸನಾಂಕುರ Mr. 386; ಅರ್ಶಸ್, ದುರ್ನಾಮಕ, ಮೊಳೇ ರೋಗ Si. 201; ಅರ್ಶಸ್, ದುರ್ನಾಮಕ G.; C.; Tĕ., T.; Mhr. ಮೂಳವ್ಯಾಧಿ).

ಮೂಲಸ್ಥಾನ mûla-sthâna. The place of origin (B. 3, 23; My.);—a principal place.

ಮೂಲಸ್ಥಾಪಕ mûla-sthâpaka. The first establisher, the founder (B. 4, 213; My.).

ಮೂಲಾಧಾರ mûla-âdhâra. A mystical circle situated above the generative organs (see ಚಕ್ರ).

ಮೂಲಿಕ mûlika. Primary, principal. 2, the first one, an elder brother (ಅಗ್ರಜ, ತನ್ನಿನ್ದವೂ ಹಿರಿಯನು Nn. 44). 3, the slough of a snake (ನಿರ್ಮೋಕ, ಹಾವಿನ ಹೆರೆ 44). 4, a weapon (ಶಸ್ತ್ರ, ಆಯುಧ 44). 5, a physician (ವೈದ್ಯನು 44). 6, a sick man (ರೋಗಿ, ವ್ಯಾಧಿಷ್ಠ 44). 7, the moon (ಮೃಗಧರ, ಚನ್ದ್ರ 44).

ಮೂಲಿಕಾಶಕ್ತಿ mûlikâ-śakti. The virtue of a medicinal root (My.).

ಮೂಲಿಕೆ mûlikĕ. ಮೂಲಿಕಾ. = ಮುರಿಕೆ. A root; a multitude or collection of roots. 2, Ceylon leadwort (ತಿಳಿ, ಚಿತ್ರಮೂಲಿಕೆ Nn. 4). ಮೂಲಿಕೆಗಳ ಮಾಱುವವನು (ಕದಲಿ, ಮೂಲಿಗ Nn. 43).

ಮೂಲಿಗ mûla-iga. (Šmd. 233). A vendor of (medicinal) roots (ಕದಲಿ, ಮೂಲಿಕೆಗಳ ಮಾಱುವವನು (Nn. 43). 2, a man of ancient times (ಪೞಯಂ Šmd. 32 Mdb.).

ಮೂಲಿತ mûlita. Rooted. See ಉನ್-, ನಿರ್-.

ಮೂಲೀಕರ್ಮ mûlî-karma. *Magical employment of roots, sorcery.*

ಮೂಲುಗು mûlugu. = ಮುಲುಕು 2. (My.; Tĕ.).

ಮೂಲೆ mûlĕ. A corner; an angle; a point of the compass (My.; Tĕ., M.; T. ಮೂಲೈ). ಎರಡು ದಿಕ್ಕುಗಳ ನಡುವೆ ಇರುವ ಮೂಲೆಗಳು (ಅಪದಿಶ, ವಿದಿಶ್ Si. 29). ಮೂಲೆಗೆ ಇಡುವನ್ಥಾದ್ದು ಮಧ್ಯದಲ್ಲಿಡ ಬಾರದು.—ಮೂಱೀ ಮೂಗುತಿ ಹೋದ ದೆಸೆಯಿನ್ದ ಮೂಲೇ ಕಸವೆಲ್ಲ ಹೋಯಿತು (Prvs.). See ಚೌ-, ದಿಗ್-; Bp. 26, 26; 28, 34. 52; 54, 12; Bh. 1, 20, 57; B. 2, 50; 4, 177; 5, 191. 227; Prv. s. ಮೊದಲು. — ಮೂಲೆದಣ್ಡಿಗೆ. = ದಣ್ಡಿಗೆ. (My.). — ಮೂಲೆಮಟ್ಟ. A mason's or carpenter's square (My.).

ಮೂಲ್ಯ mûlya. Being at the root;—to be eradicated;—to be bought for a price, purchasable. 2, original value; *price, worth, value, cost.* 3, wages. 4, capital, principal.

ಮೂಷಕ mûshaka. = ಮೂಸಕ. A thief;—*a mouse; a rat.*

ಮೂಷಕವಾಹನ mûshaka-vâhana. Gaṇêśa (My.).

ಮೂಷಿಕ mûshika. = ಮೂಸಿಕ. *A mouse; a rat;*—a thief, a plunderer.

ಮೂಷಿಕಪರ್ಣಿ mûshika-parṇi. *An aquatic plant, Salvinia cucullata* Roxb. (see ಇಲಿವಾಲ).

ಮೂಷಿಕೆ mûshikĕ. *A female rat or mouse, a rat, a mouse* (ಹೆಗ್ಗಣ Si. 170).

ಮೂಷಿತ mûshita. = ಮುಷಿತ. *Stolen.*

ಮೂಷೆ mûshĕ. = ಮುಸಿ, ಮೂಸಿ, ಮೂಸೆ. A rat, a mouse. 2, *a crucible.*

ಮೂಸಕ mûsaka. Tbh. of ಮೂಷಕ. — ಮೂಸಕದೇರ. -ತೇರ. Gaṇêśa (ವಿನಾಯಕ Kk. 5, o. r. ಮೂಸಿಕ-).

ಮೂಸಣ್ಡಿ mûsaṇḍi. (= ಮುಸುಣ್ಡಿ). — ಮೂಸಣ್ಡಿದೊತ್ತು. -ತೊತ್ತು. A perverse maid (Bp. 55, 29).

ಮೂಸಿ mûsi. Tbh. of ಮೂಷೆ. A crucible (ಮುಸಿ G.). ಭಂಗಾರವನ್ನು ಕರಗಿಸುವ ಮೂಸಿ (ತೈಜಸಾವರ್ತಿನಿ G.).

ಮೂಸಿಕ mûsika. Tbh. of ಮೂಷಿಕ. — ಮೂಸಿಕದೇರ. = ಮೂಸಕ-, q. v.

ಮೂಸು mûsu. To smell (v. t., ಆಘ್ರಾಣ Šmd. Dh.; Bp. 24, 29; Rśv. 5, after 114; My.; T. ಮೋ, ಮೋರು, ಮುಗರು; Tĕ. ಮೂರ್ ಕೊನು, ಮೂರು ಕೊನು, ಮೂತಿ ಚೂಚು, ಮೂಚೂಚು; see ಮುಣ್ಡು 1). ಮೂಸಲ್ ಪಟ್ಟುದು (ಘ್ರಾಣ, ಘ್ರಾತ Nr.). ಪೂವಂ ಮೂಸಿದಂ (Šmd. 156). ಮೂಸಿದ್ದು ಮೂದೇವಿಗೂ ಆಗದು (Prv.). — ಮೂಸಿ ನೋಡು. To explore by the smell: to smell (C.; ಆಘ್ರಾಣಿಸು, ಘ್ರಾಣಿಸು G.). ಮೂಸಿ ನೋಡಲ್ ಪಟ್ಟದು (ಘ್ರಾಣ, ಘ್ರಾತ Si. 378). ಮೂಸಿ ನೋಡಿದರೆ ಹೂಸಿನ ನಾತ ಹೋದೀತೇ? (Prv.). See Bp. 14, 30; 24, 78; 32, 27; 60, 32.

ಮೂಸೆ mûsĕ. Tbh. of ಮೂಷೆ. A crucible (My.; Tĕ.; T. ಮೂಷೈ; Mhr. ಮೂಸ, ಮೋಸ; Mhr. also: a matrix; a mould; a trace, a track). ಚಿನ್ನ ಮೊದಲಾದುದು ಕರಗಿಸುವ ಮೂಸೆ (ಮೂಷೆ, etc. Si. 345).

ಮೂಳೆ mûḷĕ. A bone (ಎಲು, ಅಸ್ಥಿ Šm. 32; ಎಲು Bhn. 31; Abh. P. 13, after 54; Šśv. 4, 15; My.; Tĕ. ಮುಡುಸು

a bone). ತಲೇ ಮೂಳಿ (ಕರ್ಪರ, ಕಪಾಲ Si. 206); ಬೆನ್ನು ಮೂಳೆಗೆ ಬುಡ (ತ್ರಿಕ 209); ಹಣೆಯ ಮೂಳೆ (ಶಂಖ, ಲಲಾಟಾಸ್ಥಿ 408).

ಮೂಟಿ mûḷa. The state of being deprived of or without, that of being bare, that of being maimed (*cf.* ಮೋಟು). **2,** a man without ears, an earless man (ಕಿವಿಯಿಲ್ಲದಂ Mr. 389). **3,** a man who has lost any member; a word of abuse: a man with a mental defect, a fool, a brute (My.; see Bp. 14, 30; 52, 10; ಕಾಟಿಮೂಟಿ). ತೋಳು ಪೂಜಿಸಿ ಕೊಳ್ಳುವದಕ್ಕೆ ಹೋಗಿ, ಮೂಟಿನಾದ.—ದೂಳಲ್ಲಿ ಬಿದ್ದವ ಮೂಟಿನಿಂದ್ದ ಕಡೆ (Prvs.). See Prv. s. ಬಡಿವಾರ. — ಮೂಟಿಕಿವಿ. A maimed ear; an ear without any ornament (My.). ಮುಣ್ಡಿಗೆ ಗಣ್ಡ ಬಾಟಿನು, ಮೂಟಿಕಿವಿಗೆ ಓಲೆ ಬಾಟಿದು (Prv.). — ಮೂಟಿನಾಯಿ. A maimed dog. ತೂಳು ಬನ್ದು ಹೇಟಿದ ಮಾತು ಮೂಟಿನಾಯಿ ಹ್ಯಾಗೆ ಕೇಳ ಬೇಕು?—ಹೆಣ್ಡತಿ ಹೆಗ್ಗಡತಿಯಾದರೆ ಗಣ್ಡ ಮೂಟಿ ನಾಯಿಗಿನ್ತ ಕಡೆ (Prvs.).

ಮೂಟಿ[೨] mûḷi. 1. = ಮೂಟಿ No. 1. See ಕತ್ತು-, ಕಾಲು-, ಕೆಯ್-. (M., T. ಮೂಳಿ). **2,** an earless woman (ಕಿವಿಯಿಲ್ಲದವಳ್ Śmd. I; Râm. 5, 2, 34; see ಕಿವಿ- No. 1). **3,** a woman without any ornament in her ears (My.; see ಕಿವಿ- No 2). **4,** a widow (My.; see ಉಚ್ಚೆ-; Prv. s. ಮುಕ್ಕ 3). ಮೂಟೀ ಮೂಗುತಿ ಹೋದ ದೆಸೆಯಿನ್ದ ಮೂಲೇ ಕಸವೆಲ್ಲಾ ಹೋಯಿತು.—ಕಿವಿ ಕಿತ್ತ ಮೂಟಿ ಬೇಲಿ ನುಗ್ಗ ಹೆದಬುವಳೇ?—ನೂಲೋ ಹೆಣ್ಡತಿಯ ಬಿಟ್ಟು, ಹೇಲೋ ಮೂಟಿಯ ತನ್ದ.—ಮಂಕುಮೂಟಿ ಯಾದರೆ ಬೆಂಕಿ ಹೊತ್ತದೇ? (Prvs.).

ಮೂಟಿ[೨] mûḷi. 2. The spout of a water-jar (ಕರಗದ ಜೂಳಿ Śmd. I).

ಮೃಕಣ್ಡು mṛikaṇḍu. N. of a ṛishi, the father of Mârkaṇḍêya.

ಮೃಗ mṛiga. = ಮಿಕ, ಮಿಗ, ಮಿಗೆ, ಮುರಗ, ಮುರಿಗ, ಮುರುಗ. *A wild beast.* 2, *any quadruped, an animal in general, e. g.* a cow (ಪಶುವ್ರಜ, ಗೋವುಗಳು Nn. 81);—*a deer, an antelope* (ಕಮಲ, ಎರಳೆ Nn. 29; ಹರಿಣಿ, ಎರಳೆ 95; ಹುಲ್ಲೆ Mr. 162);—*an elephant characterized by particular marks* (ದನ್ತಿ, ಆನೆ 81; see Hlâ. s. ಮೂಟು);—a jackal (ವನಾಯು, ನರಿ 81);—game in general (ಬೆಳ್ಮೃಗ, ನಾನಾಮೃಗ 81). 3, *the spots on the moon represented as a hare or antelope.* 4, the nakshatra Mṛigaśiras (ತಾರಗೆ, ನಕ್ಷತ್ರ 81). 5, *seeking, research, investigation.*

ಮೃಗಜಲ mṛiga-jala. Deer-water: mirage. (ಬಿಸಲ್ಕುದುರೆ G.).

ಮೃಗಜಾಲಿಕೆ mṛiga-jâlikĕ. *A net for snaring game.*

ಮೃಗಣೆ mṛigaṇĕ. *Seeking, searching, research, inquiry.*

ಮೃಗತೃಷ್ಣೆ mṛiga-tṛishṇĕ. Deer-thirst: *mirage.*

ಮೃಗದಂಶ mṛiga-daṁśa. Animal biter: *a dog.*

ಮೃಗದ್ವಿಷ mṛiga-dvisha. A lion (ಸಿಂಹ G.).

ಮೃಗಧರ mṛiga-dhara. The moon (ಚನ್ದ್ರ Nn. 44; J. 10, 5). 2, Śiva (My.). 3, the number 1 (Ĉh.). 4, a mountain (J. 10, 5).

ಮೃಗಧೂರ್ತಕ mṛiga-dhûrtaka. *A jackal.*

ಮೃಗನಯನೆ mṛiga-nayanĕ. = ಮೃಗಾಕ್ಷಿ. (Bp. 41, 5).

ಮೃಗನಾಭಿ mṛiga-nâbhi. *Musk.* ತಲೆಗೆ ಎಣ್ಣೆ ಇಲ್ಲ, ತನು ಮೃಗನಾಭಿ ಬೇಡಿತು (Prv.).

ಮೃಗನಾರಿ mṛiga-nâri. A vegetable and medicinal substance, erycibe paniculata, used as a vermifuge (ಎಳಂಗ Mr. 142).

ಮೃಗನೇತ್ರ mṛiga-nêtra. N. of a vṛitta (Ĉh.).

ಮೃಗಪತಿ mṛiga-pati. *A lion.* 2, a tiger. 3, a roe-buck.

ಮೃಗಪಾಲಿಕೆ mṛiga-pâlikĕ. A musk-deer. (R.).

ಮೃಗಪೋತ mṛiga-pôta. A young deer, a fawn;—a young wild beast (ಕೊಣಸು Ĉt. II, 80).

ಮೃಗಬನ್ಧನಿ mṛiga-bandhani. *A net for snaring game.*

ಮೃಗಭೇದ mṛiga-bhêda. A sort of quadruped. See ಉಡು.

ಮೃಗಭೇದನ mṛiga-bhêdana. A tiger; N. of an asura (Śśv. 5, 9).

ಮೃಗಮದ mṛiga-mada. *Musk.*

ಮೃಗಯಾತ್ರೆ mṛiga-yâtrĕ. Hunting, the chase (ಬಸವ. 2, 118).

ಮೃಗಯು mṛigayu. *A huntsman.*

ಮೃಗಯೆ mṛigayê. *Hunting, the chase.*

ಮೃಗರಿಪು mṛiga-ripu. *A lion* (Bp. 52, 50; Bh. 1, 8, 40).

ಮೃಗರೋಮಜ mṛiga-rôma-ja. *Woollen.*

ಮೃಗಲಂಘನ mṛiga-laṅghana. Leaping or jumping of animals. See ಕೊಣಕು.

ಮೃಗಲಾಂಛನ mṛiga-lâñchana. The moon (Lîlv. 3, 2).

ಮೃಗಲಿಂಗ mṛiga-liṅga. = ಮುರಗಲಿಂಗ. N. of a liṅga (Bp. 19, 74).

ಮೃಗವಧಾಜೀವ mṛiga-vadha-âjîva. *A huntsman.*

ಮೃಗವಾಹನ mṛiga-vâhana. Vâyu. (R.).

ಮೃಗವಿಶೇಷ mṛiga-viśêsha. A kind of quadruped. See ಉಡು.

ಮೃಗವ್ಯ mṛigavya. *Hunting, the chase.*

ಮೃಗಶಿರ mṛiga-śira. = ಮೃಗಶಿರಸ್. (My.).

ಮೃಗಶಿರಸ್ mṛiga-śiras. *The fifth lunar mansion or nakshatra.*

ಮೃಗಶಿರೆ mṛiga-śirĕ. = ಮೃಗಶಿರಸ್. (ಮೃಗಶೀರ್ಷ Mr. 39; My.).

ಮೃಗಶೀರ್ಷ mṛiga-śîrsha. *The fifth lunar mansion.*

ಮೃಗಶೃಂಗಧರ mṛiga-śṛiṅga-dhara. Carrying a stag's horn (J. 33, 40).

ಮೃಗಾಕ್ಷಿ mṛiga-akshi. A woman with eyes like an antelope's. (J. 11, 8; 30, 15).

ಮೃಗಾಂಕ mṛiga-aṅka. *The moon* (ಸಸಿ Śm. 111; Kk. 97; Śmd. 386).

ಮೃಗಾದನ mṛiga-adana. *A hyena;*—a hunting leopard.

ಮೃಗಾರಾತಿ mṛiga-arâti. A lion (ಸಿಂಹ Mr. 159).

ಮೃಗಾರಿ mṛiga-ari. A lion;—*a tiger.*

ಮೃಗಾಶನ mṛiga-aśana. A tiger;—a leopard;—a lion (G.).

ಮೃಗಿ mṛigi. = ಮುರಗಿ. *A female deer or antelope, a doe.* (Ĉpr. 4, 47; Bp. 34, 29).

ಮೃಗಿತ mṛigita. Chased, hunted after;—*sought, searched for.*

ಮೃಗೇನ್ದ್ರ mṛiga-indra. *A lion;*—a tiger.

ಮೃಗೋದ್ಭವ mṛiga-udbhava. Musk (Rśv. 13, 88; Śśv. 1, 50).

ಮೃಜೆ mṛijĕ. Wiping, cleansing; *cleaning the person by wiping, bathing, or rubbing it with unguents.*

ಮೃಡ mṛiḍa. = ಮಿಡ. *Śiva.*

ಮೃಡಾನಿ mṛiḍâni. *Pârvatî.*

ಮೃಣಾಲ mṛiṇâla. The creeping root of a lotus; *the film or fibres attached to the stalk of a lotus; the hollow or*

tubular stalk of a lotus (ಪ್ರಕಾಣ್ಡ, ತಾವರೆಯ ದಣ್ಟು Nn. 60; ವಿಸ, ಕೊನರ್ Nr.; ನಾಳ Hlâ.). ತಾವರೇ ಬಳ್ಳಿಯ ಕೊಬಿವಿಗಳು (ಮೃಣಾಲ, ಬಿಸ Si. 96).

ಮೃಣ್ಮಯ mṛid-maya. = ಮೃನ್ಮಯ.

ಮೃಣ್ಮಯಪಾತ್ರೆ mṛinmaya-pâtrĕ. An earthen vessel (ಮಣ್ಣ ಮಡಕೆ Nn. 85).

ಮೃತ mṛita. = ಮಿತ 2. *Dead, deceased;* mortal (Bp. 51, 19). 2, death (ನಿರ್ಯಾಣ, ಸಾವು Nn. 90). 3, a dead body, a corpse (ಕುಣಪ, ಹೆಣನು Nn. 11; ಶಬ, ಸಾವು 64). 4, water (ಅರ್ಣ, ಉದಕ 11). 5, disease (ರೋಗ, ವ್ಯಾಧಿ 11). 6, dispute (ವಾದ, ಜಗಳ 11). 7, begging. — ಮೃತವಾಗು. -ಆಗು. To die (My.). ಆ ಯುವತಿ ಮೃತವಾಗೆ (Bp. 32, 42).

ಮೃತತಿಥಿ mṛita-tithi. The death-day of any relation, on which śrâddha is performed (My.).

ಮೃತಪತ್ರ mṛita-patra. A written will (B. 5, 264).

ಮೃತಸಂಸ್ಕಾರ mṛita-saṁskâra. *Funeral rites or ceremonies, obsequies* (ಸಾಧನ G.).

ಮೃತಸಂಜೀವ mṛita-sañjîva. Making alive: N. of a plant (Râm. 6, 36, 45).

ಮೃತಸಂಜೀವಕ mṛita-sañjîvaka. Reviving the dead (J. 24, 9).

ಮೃತಸಂಜೀವಿ mṛita-sañjîvi. = ಮೃತಸಂಜೀವ. (Râm. 6, 36, 46).

ಮೃತಸ್ನಾತ mṛita-snâta. *One who has washed himself after a death or funeral, bathed after mourning.*

ಮೃತಸ್ನಾನ mṛita-snâna. *Ablution after a death or funeral.*

ಮೃತಾಲಕ mṛitâlaka. *A kind of loam or clay.*

ಮೃತಾಶೌಚ mṛita-aśauča. Impurity contracted through a death in one's family (My.).

ಮೃತಿ mṛiti. Death (ನಿರ್ಯಾಣ, ಸಾವು Nn. 79; ಸಾವು G.). See ಸಾಯ್; Kâvy. IV, 2, 16.

ಮೃತೆ mṛitĕ. *Food or alms obtained by begging.*

ಮೃತ್ತಾಲಕ mṛittâlaka. = ಮೃತಾಲಕ.

ಮೃತ್ತಿಕೆ mṛittikĕ. *Earth, clay, loam.*

ಮೃತ್ತು mṛittu. Tbh. of ಮೃದ್. (My.).

ಮೃತ್ಪಿಣ್ಡ mṛid-piṇḍa. A clod of earth, a lump of clay.

ಮೃತ್ಪಿಣ್ಡಸಂಘಟನ mṛitpiṇḍa-sanghaṭana. Joining clods of earth together. See ಒಟ್ಟು 2.

ಮೃತ್ಯು mṛityu. = ಮಿತ್ತು, ಮಿಟ್ಟಿ. *Death* (ಸಾವು G.; see ಬೋಟಿ 1); death personified, also as a female (Dp. 4, 4);— Yama, the god of death. ತೃಪ್ತನಿಗಾದರೂ ಮೃತ್ಯು ತಪ್ಪದು (Prv.).

ಮೃತ್ಯುಂಜಯ mṛityu-ṅ-jaya. Overcoming death. 2, *Śiva*

ಮೃತ್ಯುಂಜಯಮನ್ತ್ರ mṛityuñjaya-mantra. A mantra that overcomes death (Čpr. 5, after 35).

ಮೃತ್ಯುತಿಥಿ mṛityu-tithi. = ಮೃತತಿಥಿ. (B. 4, 215).

ಮೃತ್ಯುಪತ್ರ mṛityu-patra. = ಮೃತಪತ್ರ. (B. 5, 183).

ಮೃತ್ಯುಭಯಹರ mṛityu-bhaya-hara. Removing the peril of death or the fear of death (Bp. 46, 33).

ಮೃತ್ಯುಹರ mṛityu-hara. Remover of death: Śiva (Śśv. 4, 45).

ಮೃತ್ಸೆ mṛitsĕ. *Good earth or clay.*

ಮೃತ್ಸ್ನೆ mṛitsnĕ. *Good earth or clay.* 2, *a kind of loam or clay.*

ಮೃದ್ mṛid. ಮೃತ್. = ಮಟ್ಟಿ, ಮೃತ್ತು. *Earth, soil, clay, loam.*

ಮೃದಂಗ mṛidaṅga. *A sort of tabour* (ಮದ್ದಳೆ, ಮುರಜ Hlâ.; ಮದ್ದಳೆ Nn. 66, Mr. 80; ರಿಗ್ಗವಣೆ Čt. II, 97). 2, N. of a plant (= ಘೋಷಾತಕಿ in Sk.; ಫಲಿನಿ, ಜಾಲಿನಿ, ಹೀರೆ Mr. 146).

ಮೃದು mṛidu. = ಮಿದು, ಮಿದುವು, ಮೆತ್ತು, ಮೆದು (ಮೆಲ್, ಮೆಲು). *Soft, tender, supple, flexible, pliant.* 2, *mild, gentle;*— softness, mildness, gentleness;— weak, moderate; blunt; slow. ನಯವಿದ್ದಲ್ಲಿ ಜಾಱುವದು, ಮೃದುವಿದ್ದಲ್ಲಿ ಊಱುವದು (Prv.).

ಮೃದುತರ mṛidu-tara. Uncommonly mild, etc. (Bp. 33, 4; 38, 36; 39, 61; 57, 36).

ಮೃದುತಲ mṛidu-tala. A soft sole of the foot (Grj. 3, after 91).

ಮೃದುತ್ವಚ್ mṛidu-tvač. *A species of birch tree* (= ಭೂರ್ಜ).

ಮೃದುನೇತ್ರ mṛidu-nêtra. N. of a vṛitta (Čh.).

ಮೃದುಲ mṛidula. *Soft, tender, mild, gentle.*

ಮೃದುಯಾನ mṛidu-yâna. Slow walk (Čpr. 7, 119).

ಮೃದುವಾಕ್ಕು mṛidu-vâkku. A mild, gentle word (My.).

ಮೃದುಶಬ್ದ mṛidu-śabda. A gentle sound or word (Kk. 2).

ಮೃದುಸ್ಮಿತ mṛidu-smita. A gentle smile (Śśv. 4, 59).

ಮೃದೂಕ್ತಿ mṛidu-ukti. A gentle word (Cpr. 5, 17).

ಮೃದ್ಘಟ mṛid-ghaṭa. = ಮೃದ್ಭಾಣ್ಡ. (My.).

ಮೃದ್ಭಾಣ್ಡ mṛid-bhâṇḍa. *An earthen vessel.*

ಮೃದ್ವೀಕಾಲತೆ mṛidvîkâ-latĕ. A vine (Čpr. 1, after 101).

ಮೃದ್ವೀಕೆ mṛidvîkĕ. = ಮುದ್ದಿಕೆ, ಮುದ್ದಿಗೆ 1. A vine;— *a bunch of grapes, a grape.*

ಮೃಧ mṛidha. *War, battle.*

ಮೃನ್ಮಯ mṛid-maya. = ಮೃಣ್ಮಯ. Made of earth or clay, earthen.

ಮೃಷಾ mṛishâ. In vain, to no purpose, uselessly. 2, *wrongly, falsely, untruly.* 3, untruth.

ಮೃಷಾರ್ಥಕ mṛishâ-arthaka. *Having a false sense or meaning, untrue, absurd.*

ಮೃಷೆ mṛishĕ. = ಮೃಷಾ No. 3. Untruth (My.).

ಮೃಷ್ಟ mṛishṭa. Wiped, rubbed; *cleansed, clean, pure;*— smeared, besmeared;— prepared, dressed, savoury. 2, pepper.

ಮೃಷ್ಟಾನ್ನ mṛishṭa-anna. Delicate food, dainties (ಅಮನ್ತ್ರಣ Nn. 155; J. 6, 53).

ಮೆ mĕ. 1. An affix for the formation of nouns, *e. g.* ಒಲ್ಮೆ, ಬಲ್ಮೆ, ಕಡುಮೆ, ಮೆಯ್ಮೆ, ಕೂರ್ಮೆ, ಪೆರ್ಮೆ (Śmd. 248).

ಮೆ mĕ. 2. An affix for expressing so and so many times, *e. g.* ಒರ್ಮೆ, ಇರ್ಮೆ, ಮೂರ್ಮೆ, ಸಾಸಿರ್ಮೆ, ಪಲಮ್ಮೆ (Śmd. 242. 243).

ಮೆಕ್ಕಾ mĕkkâ. = ಮುಕ್ಕಾ, etc. (Si. 101; My.).

ಮೆಕ್ಕೆ mĕkkĕ. A climbing herb, Cucumis trigonus Roxb. (Bryonia callosa Rottl., ಉರ್ವಾರು Mr. 148; Bh. 1, 8, 76; My.; *cf.* ಮಿನಿಕೆ). ಅಕ್ಕಿಯಿನ್ದಲೆ ತೆಂಗು, ಮೆಕ್ಕೆಯಿಂ ಕಣಕ, ಜಾನಕ್ಕಿಯಿಂ ಲಂಕೆ ಕೆಡುವನ್ತೆ ದುರ್ಬುದ್ಧಿ ಹೊಕ್ಕಲ್ಲಿ ಕೇಡು (Sp.). See ದೊಡ್ಡ-, ಹಾವು-, ಹೆಮ್-.

ಮೆಚ್ಚವಣಿಗೆ mĕččavaṇigĕ. What recommends itself or is praiseworthy (ಮೆಚ್ಚನುಳ್ಳುದು Śmd. II; Kk. 75; Śm. 56).

ಮೆಚ್ಚಿಕೆ mĕččikĕ. = ಮಚ್ಚಿಕೆ, ಮೆಚ್ಚಿಗೆ. Assent, approval, approbation, liking, pleasure (My.). See ಮೆಯ್-.

ಮೆಚ್ಚಿಗೆ mĕččigĕ. = ಮೆಚ್ಚಿಕೆ. (My.).

ಮೆಚ್ಚಿಸು mĕččisu. = ಮಚ್ಚಿಸು, etc. To cause to assent, etc., to please (Bp. 12, 25; 25, 14; 31, 23; 52, 28; 53, 54; 58, 26; 61, 54; Šsv. 2, 84; J. 7, 15).

ಮೆಚ್ಚು mĕččŭ. 1. = ಮಚ್ಚು 1, etc. To assent, to agree to, to admit to be true, to approve, to be pleased with; to like (ಅಭ್ಯುಪಗಮ Šmd. Dh.; ಒಡಂಬಡು Šmd. 4. 296 Cm.; ಅಂಗೀಕರಿಸು 385 Cm.; My.; Tĕ.; T. ಮೆಚ್ಚು, to praise, laud). ಆಃ, ಸನ್ನಯಮಿಲ್ಲ! ಮೆಚ್ಚಿದೆಂ (Šmd. 20). ದೇವತೆಯರ್ ಮೆಚ್ಚಿ, ವರಮನ್ ಆರಸಂಗಿತ್ತರ್ (109). ಬಿರುದಾವಳಿಯೊಳ್ ಮೆಚ್ಚಿದನ್ತೆ ಪೇಳ್ವುದು (207). ಚದುರರ್ ಅದಂ ಮೆಚ್ಚರ್ (296). ವಿಜಯಸಿರಿ ವಾಚಾಟರಿಗೆ ಮೆಚ್ಚುವಳೆ? (Bh. 2, 13, 47). ಮೆಚ್ಚಿದವನಿಗೆ ಮಸಣವೇ ಸುಖ (Prv.). See Čpr. 7, after 94; Grj. 10, 114; Bp. 22, 19; 24, 67; 25, 26; 27, 64; 36, 16; 37, 10; 40, 41; 41, 30; 43, 40; 46, 51; 54, 76; 57, 61; 60, 60; Nn. 3; Šm. 1; J. 2, 23; 29, 32.

ಮೆಚ್ಚು mĕččŭ. 2. = ಮಚ್ಚು 2, etc. Assent, approbation; what recommends itself, is pleasant, etc.; satisfaction, pleasure. (Tĕ.). ಮೆಚ್ಚಿನೊಳ್ ಆಕ್ಷೇಪದೊಳ್ ಬೆಚ್ಚ ಓ (Šmd. 69). ನಾನಾರ್ಥರತ್ನಾಕರಂ... ಜಗದೊಳ್ ಜಾಣರ ಮೆಚ್ಚು (Nn. 168). ನಚ್ಚುಮುಚ್ಚಿನ ದಾದಿಯರ್ಗಂ ಮೆಚ್ಚನೀವುತಿರ್ದಳು ಮೋಹಿನೀದೇವಿ (Prll. 3, 26). See Čpr. 3, 45; Abh. P. 3, 67; 8, 65; Bp. 14, 13; 28, 47; 43, 37. — ಮೆಚ್ಚುಗುಡು. -ಕುಡು. To assent (Čpr. 7, after 95; 11, after 26); to give what creates satisfaction (V. 14, 56).

ಮೆಚ್ಚು mĕččŭ. 3. = ಮಚ್ಚು 3. See Bhn. 58. ಮುಬ್ಬುರ್. — ಮೆಚ್ಚುಮದ್ದು. = ಮಚ್ಚುಮದ್ದು. (G. 423).

ಮೆಚ್ಚುತು mĕččutu. That which recommends itself or is pleasant. — ಮೆಚ್ಚುತುಣ್ಣಿ. Delightful food (Šmd. 75; it is a bad compound, as it may be taken for ಮೆಚ್ಚು-ತುಣ್ಣಿ 75).

ಮೆಚ್ಚುವಿಕೆ mĕččuvikĕ. Assenting, agreeing to, etc. (G. 423).

ಮೆಟ್ಟಿಗೆ mĕṭṭigĕ. A step, a stair; steps, stairs (My.; Tĕ. ಮೆಟಿಕೆ, ಮೆಟ್ಟಿಕೆ).

ಮೆಟ್ಟಿಸು mĕṭṭisu. To cause to step or walk, to cause to tread on, etc. (My.; Rsv. 6, after 11; see ಹಿಮ್-).

ಮೆಟ್ಟು mĕṭṭu. 1. To put or place down the foot or feet; to step, to pace, to walk; to tread or trample on; to put the foot on or in, to put on, as a slipper or shoe (ಪಾದವಿನ್ಯಾಸ Šmd. Dh.; ಚರಣವಿನ್ಯಾಸ Šm. 88; My.; Tĕ.; see s. ಮಿದಿ). ಮುಟ್ಟಿತು ಮುಟ್ಟದು ದಿವಮಂ, ಮೆಟ್ಟಿತು ಮೆಟ್ಟದು ರಸಾತಲಾಗ್ರಮನೆಮ್ಬೊಲ್ ಬಿಟ್ಟಳವಾಗಿರೆ ದಿವಿಜರ ದಿಟ್ಟಿಗೆ ಸೊಗಯಿಪುದು ಮುನ್ದೆ ಮನ್ದರಶೈಲಂ (Šmd. 266). ಬಕನನ್ತಿರೆ ಮೆಲ್ಲನೆ ಮೆಟ್ಟು! (272). ಅಱಿಯಂ ಸೀಳುವಡಾನೆ ಮೆಟ್ಟಲಹುದೇ? (Sš. 11). ತೆಱಿದ ಕೆಣ್ಣವಂ ಮೆಟ್ಟಿ ಮಱುಗುವಾ ತೆಱನನ್ತೆ ಅಱಿಯದರ ಕೂಟ (Sp.). ಪುಲಿನ್ದಂ... ಕೆರ್ಪಂ ನಲವಿಂ ಮೆಟ್ಟುತ್ತೆ (Rsv. 5, 51). ಮೆಟ್ಟಿ ಸೀಳ್ವ... ಗಜಂಗಳ್ (6, after 11). ಮೆಟ್ಟಿದಲ್ಲದೆ ಹಾವು ಕಡಿಯದು. — ಮೆಟ್ಟಿದಾಕ್ಷಣ ಗಟ್ಟಿ ತಗ್ಗೀತೇ? — (ಹೇಲನ್ನು) ಮೆಟ್ಟೀ! ಅನ್ದರೆ ತಿನ್ದರೇನು ಕೊಟ್ಟೀ? ಅನ್ದ (Prvs.). See Čpr. 8, after 44; Bp. 12, 12; 22, 15; 26, 14; 32, 32; 43, 84; 45, 6; 51, 41; 60, 14; Rsv. 4, after 14; 6, after 11; 13, 96; J. 7, 17; B. 5, 297; ತಡಮ್-, ಪೆಡಮ್-, ಹಿಮ್-.

ಮೆಟ್ಟು mĕṭṭu. 2. Stepping; a step of the foot (ಅಡಿವಜ್ಜೆ Čt. I, 47); that goes (see ಪೆಡಮೆಟ್ಟು 2). **2,** the step or stop of a stringed instrument on which the finger is pressed so as to modify the tone (My.; T., Tĕ.). **3,** a sandal, a shoe (ಪಾದತ್ರಾಣ Šmd. Dh.; ಕೆರ್ಪು Šm. 88; My.; Tĕ.). ನೆಣ್ಣರೊಳಗಣ ಸಾಲ ಮೆಟ್ಟಿನೊಳಗಣ ಕಲ್ಲು. — ನಿನ್ನ ಹೊಱಿಗೆ ನನ್ನ ಮೆಟ್ಟೇ? (Prvs.). **4,** the step of a stair (Bp. 20, 21; My.). ಮೆಟ್ಟುಗಳು (ಆರೋಹಣ, ಸೋಪಾನ Si. 112; ಸೋಪಾನ, ಪಾವಟಿಗೆ G.). **5,** a kind of foot-ring of which two are put to the second toe and which tingle when struck together by walking (My.). — ಮೆಟ್ಟಕ್ಕಿ. -ಅಕ್ಕಿ. Rice which is stepped on: a large platter filled with rice on which the bridegroom has to stand at the marriage ceremonies (Grj. 10, after 82, 10, 85; Bh. 1, 16, 65; Râm. 1, 16, 46; J. 31, 16). — ಮೆಟ್ಟುಗತ್ತಿ. -ಕತ್ತಿ. = ಈಳಿಗೆ No. 2, ಈಳಿಗೆಕತ್ತಿ. (My.). — ಮೆಟ್ಟುಗಲ್ಲು. -ಕಲ್ಲು. A step-stone, a stair. ಮೆಟ್ಟುಗಲ್ಲೇ ಗಟ್ಟ, ಬಾವಿ ನೀರೇ ಭಾಗೀರಥಿ. — ಮೆಟ್ಟುಗಲ್ಲು ಚಿನ್ನವಾದರೆ ನಿನಗರವಾಸಿ, ನಿನಗರವಾಸಿ (Prvs.). — ಮೆಟ್ಟುಹಲಿಗೆ. The lower timber of a door (Si. 110).

ಮೆಟ್ರೆ mĕṭṟĕ. The throat (My.; T. ಮನ್ನೈ, ಮೊನ್ನಿ, the throat; M. ಮನ್ನೆ, Tĕ. ಮೆಡ, the neck; T., M. ಮಿಡಱು, the neck; the throat). — ಮೆಟ್ರೆಗಟ್ಟು. -ಕಟ್ಟು. A swelling of the glands of the throat (My.).

ಮೆಟ್ಲ mĕṭla. A step, a stair. See ಕಲ್ಲು-.

ಮೆಟ್ಲು mĕṭlu. = ಮೆಟ್ಲ. (My.).

ಮೆಡಱು mĕḍaṟu. To plait, as screens. ತಟ್ಟ ಮೆಡಱಿದನೆನ್ನು, ತಟ್ಟಿವೆಣದಂ (Šmd. II; Kk. 76; see ಮಿಣಿ).

ಮೆಣಸಿಗೆ mĕṇasigĕ. N. of a plant (ಅರು Mr. 139).

ಮೆಣಸು mĕṇasu. = ಮೆಱಿಸು, etc. (ವೇಲ್ಲಜ, ಮರಿಚ Nr.; ವೇಲ್ಲಜ, ಮರಿಚ, ಉಷಣ Hlâ.; ಉಷಣ, ಮರೀಚಕ Mr. 138; Bp. 33, 13; My.; B. 4, 177). ಮೆಣಸು ಕೊಟಿತರೆ ಜೋಳಕ್ಕಿನ್ತ ಕಡೆಯೇ? (Prv.). See ಕಾಡು-, ಮರ-; Prv. s. ಸಂಸ್ಕೃತ. — ಮೆಣಸಿನ ಕಸ. A common weed, Cleome monophylla Lin. (Z.). 2, the weed Vinca pusilla Murr. (Z.). — ಮೆಣಸಿನ ಕಾಯಿ. Chilli, the pod of the Spanish or Cayenne pepper, Capsicum annuum Lin. (Z.; My.; B. 4, 177). — ಮೆಣಸಿನ ಬಳ್ಳಿ. The black pepper vine, Piper nigrum Lin. (Z.; My.). — ಮೆಣಸಿನ ಹಮ್ಬು. = ಮೆಣಸಿನ ಬಳ್ಳಿ. (My.). — ಮೆಣಸು ಕಾಟಿ. ಮೆಣಸಿನ ಕಾಟಿ. A corn of black pepper (My., B. 4, 71).

ಮೆತ್ತಗೆ mĕttu-agĕ 4. = ಮೆತ್ತಿಗೆ. Softness; soft, pliant, etc.; softly; slowly (Bp. 38, 35; My.; T. ಮಿರುದು, ಮೆತ್ತು). ಮೆತ್ತಗಿರುವದು (ಮೃದು, ಮೃದುಲ, ಕೋಮಲ, etc. Si. 374). ಚೆಕ್ಕಿನ ಮೆಯ್ಯು ಹತ್ತಿಯ ಹಾಗೆ ಮೆತ್ತಗಿರುತ್ತದೆ (B. 1, 26). ಹಾವಿನ ಮೆಯ್ ಮೆತ್ತಗೆ (2, 22). ಒಣ್ಟೆಯ ಅಂಗಾಲು.. ಬಹು ಮೆತ್ತಗೆ ಇರುತ್ತವೆ (3, 64). ನೆನೆದ ಕಲ್ಲು ಮೆತ್ತಗೆ ಆದೀತೇ? (Prv.).

ಮೆತ್ತನೆ mĕttanĕ. = ಮೆತ್ತಿಗೆ. Plastering; plaster for coating walls, etc. (My.). ಮೆತ್ತನೆ ಹಾಕು (My.).

ಮೆತ್ತನೆ mĕttu-anĕ 2. = ಮೆತ್ತಾನೆ. Soft, etc. (My.).

ಮೆತ್ತನ್ನ mĕttu-anna 1. Soft, etc. (My.). ಮೆತ್ತನ್ನ ಹುಲ್ಲು (G. 63). ಮೆತ್ತನ್ನ ತೊಗಲು (B. 1, 20). See 3, 30. 31; 4, 144. 215.

ಮೆತ್ತಾನೆ mĕttu-ânĕ 4. = ಮೆತ್ತನೆ. (My.).

ಮೆತ್ತಿಗೆ mĕttigĕ. = ಮೆತ್ತನೆ. (My.).

ಮೆತ್ತಿಗೆ mĕttigĕ. = ಮೆತ್ತಗೆ. (My.).

ಮೆತ್ತು mĕttu. To coat walls with chunam or mud, to plaster, to plaster over, to lay on or apply to; to press into (J. 12, 27; My.; Tĕ.; T., M. ಮೆಝುಗು, to daub a place with cow-dung, to wax or varnish; Tĕ. ಮೇಗು, to smear, besmear; see ಮೆರುಗು); to cover (J. 14, 4). ಎಲುವನಿಕ್ಕಿ ಮೆತ್ತಿದ ಗೋಡೆ (ಏಡೂಕ Nr. *a*). ಮೆತ್ತಿದ ನೆರಕೆ (ಏಡೂಕ Nr. *b*). ಬೊಡಿದು ಮೆತ್ತುವ ಕೆಲಸ (ಪುಸ್ತ Si. 344). ಇಲಿಯನ್ನು ಒಳಗೆ ಬಿಟ್ಟು, ಬಿಲಕ್ಕೆ ಮಣ್ಣು ಮೆತ್ತಿದ.— ಕತ್ತಿಗೆ ಮೆತ್ತಿದ ಜೇನು (Prvs.). ಅಮರಾರಿಗೆ . . . ಶೇಷಾನ್ನದಲಿ ತೋಱುತ ತುತ್ತುಗಳ ತೂಗುತ ಮೆತ್ತಿ ಕೊಣ್ಣನು ಬಾಯೊಳ್ (Bh. 1, 10, 32).

ಮೆತ್ತು mĕttu. Tbh. of ಮೃದು. See ಮೆತ್ತನ್ನ, ಮೆತ್ತಾನೆ; T. s. ಮೆತ್ತಗೆ.

ಮೆತ್ತುವಿಕೆ mĕttuvikĕ. Smearing over, etc. (ಸ ಮಾಲಮ್ಭ, ವಿಲೇಪನ Si. 397).

ಮೆತ್ತೆ mĕttĕ. Bedding, a matrass (My.; Tĕ., M.; T. ಮೆತ್ತೈ).

ಮೆದಗ mĕdaga. (fr. ಮೆದೆ). A stupid man (My.). Feminine ಮೆದಗಿ (My.).

ಮೆದಡು mĕdaḍu. Tbh. of ಮೇದಸ್. Marrow; the brain (Tĕ.; ಹೃದಯದಲ್ಲಿಯೂ ಎಲುವುಗಳಲ್ಲಿಯೂ ಇರುವ ನೆಣ, ಮೇದಸ್ Si. 204).

ಮೆದಳು mâdaḷu = ಮೆದಡು. (My.).

ಮೆದು mĕdu. Tbh. of ಮೃದು. (My.; T.).

ಮೆದುಳ್ mĕduḷ. = ಮೆದುಳು. (J. 12, 45).

ಮೆದುಳು mĕduḷu. = ಮೆದಡು. (My.). ಎಲುವುಗಳ ಗೂಡಿನಲ್ಲಿರುವ ಮೆದುಳು (ಮಸ್ತಿಷ್ಕ, ಗೋರ್ಧ Si. 205).

ಮೆದೆ mĕdĕ. A heap, a pile (Bh. 1, 15, 7); a stack, especially of straw before being thrashed (ತೃಣರಾಶಿ Šm. 99; My.). **2,** a crude mass: stupidity, silliness (ಹೆಡ್ಡತನ Šm. 99). ಹುಲ್ಲುಮೆದೆ (ತೃಣ್ಯೆ, ತೃಣಸಂಹತಿ Si. 165). ಮೆದೇ ಹುಲ್ಲು ಸೂಱೆಯಾಗುತ್ತದೆ, ಹಿಡಿ ಹುಲ್ಲಿಗೆ ಒದ್ದಾಡುತ್ತಾನೆ (Prv.). — ಮೆದೆಗೆಡಹು. -ಕೆಡಹು. To make fall down in heaps (J. 12, 43). — ಮೆದೆಗೆಡೆ. -ಕೆಡೆ. To fall down in heaps (Grj. 6, after 5; 6, 8; J. 22, 23). — ಮೆದೆಯೊಟ್ಟು. -ಒಟ್ಟು. To pile, to stack (My.). — ಮೆದೆ ಹಾಕು. = ಮೆದೆಯೊಟ್ಟು. (My.).

ಮ್ಡೆದೆ mĕdĕ. (Tbh. of ಮುಂಜ). = ಬಲ್ಬಜ (Si. 163).

ಮೆದ್ದು mĕddu. P. p. of ಮೆಲು, ಮೆಲ್ಲು.

ಮೆನ್ತೆ mĕntĕ. Tbh. of ಮನ್ಥಿ. A common vegetable plant, fenugreek, Trigonella foenum graecum Lin. (My.; Tĕ. ಮೆನ್ತಿ; T. ವೆನ್ದಿಯ, ವೆನ್ದೈಯ; M. ವೆನ್ದಯ; Mhr. ಮೇಥೀ). ಮೆನ್ತೆ ತಿನ್ದಾಕ್ಷಣ ಕುನ್ತೀ ಮಗನಾದಾನೇ? (Prv.). — ಮೆನ್ತೆಕಾಯಿ. Fenugreek grain (My.). — ಮೆನ್ತೆಪಲ್ಯ. The fenugreek vegetable (My.). — ಮೆನ್ತೆಸೊಪ್ಪು. = ಮೆನ್ತೆಪಲ್ಯ. (My.).

ಮೆನ್ತೆಯ mĕntĕya. = ಮೆನ್ತೆ. (My.).

ಮೆನ್ತ್ಯ mĕntya. = ಮೆನ್ತೆಯ. (My.). ಅನ್ತ್ಯಜನಲ್ಲಿ ಹೋಗಿ, ಮೆನ್ತ್ಯ ಕದ್ದ ಹಾಗೆ (Prv.).

ಮೆನ್ಥೆಯ mĕnthĕya. (= ಮೆನ್ತ್ಯ). The creeper Gaertnera racemosa (ಅದಿಮುರ್ಕ್ತೆ, etc. Kk. 18).

ಹಬ್ಬ habba. Tbh. of ಪರ್ವ. A festival, a feast, a holiday (ಉತ್ಸವ Si. 458; C.; Bp. 28, 22; 40, 35). ಹಬ್ಬ ಹಸನಾಗಿರ ಬೇಕು, ಹಾಲು ಉಟಿಯ ಬೇಕು.— ಹಬ್ಬದ ಹೊತ್ತಿಗೆ ತಪ್ಪದೆ ಬನ್ದ.— ಹಬ್ಬ ಊಟ, ಜಾತ್ರೆ ನೋಟ.— ಹಬ್ಬ ತಪ್ಪಿದರೆ ಹೋಳಿಗೆ ತಪ್ಪೀತೇ?— ಹಬ್ಬದಲ್ಲಿ ಹರೀ ಗಣ್ಡನೇ?— ಹಬ್ಬದ ಊಟ, ಹರಿವಾಣದ ವೀಳ್ಯ.— ಊರಿಗೆ ಹಬ್ಬವಾದರೆ ನಾಯಿಗೆ ಲೊಲ್ಲೊಟ್ಟೆ.— ಬೊಬ್ಬೆ ಮಾಡಿದರೆ ಹಬ್ಬ ಆದೀತೇ?— ಶಬ್ದ ಅರ್ಥ ತಿಳಿಯದಿದ್ದರೂ ಹಬ್ಬದ ಹೋಳಿಗೆ ತಿನ್ನಲಿಕ್ಕೆ ಕಡಿಮೆ ಇಲ್ಲ.— ಸಿಬ್ಬು ಇದ್ದವ ತುಟಿಸಿ ಕೊಣ್ಡರೆ ಅದು ಒನ್ದು ಹಬ್ಬವೇ!— ಹಾಲಿದ್ದಾಗಲೇ ಹಬ್ಬ ಮಾಡು (Prvs.). See ಹೂವಿನ-. — ಹಬ್ಬಗುಳ್ಳ. A prickly shrub with yellow berries, the Indian nightshade, Solanum indicum Lin. (Z.). — ಹಬ್ಬದ ಹೂವು. The flower of Artemisia indica (ದವನ Kk. 23; Śm. 27). — ಹಬ್ಬ ಹಬ್ಬ. rep. (Bp. 42, 9). — ಹಬ್ಬ ಹುಣ್ಣಿವೆ. Feasts and full moons (My.).

ಹಬ್ಬಿಗ habbiga. A son-in-law, who is to be invited to every feast (ಅಳಿಯ Ćt. I, 26).

ಹಬ್ಬಿಸು habbisu. To cause to spread or extend, etc. (Bp. 16, 20; My.).

ಹಬ್ಬು habbu. 1. = ಪರ್ಬು 1, etc. To spread (v. i.), to extend, etc.; to spread or run, as a creeper (C.; Bh. 1, 8, 1; 3, 13, 33). ಹಬ್ಬಿದ ಬಳ್ಳಿ (ವೀರುಧ್, ಗುಲ್ಮಿನಿ Nr.). ಹಲವು ಬಳ್ಳಿಗಳು ಹಬ್ಬಿದ ಹೊದರು (ಸೌಸ್ಥೆ Nn. 162). ಹಬ್ಬೋಣ (ಪ್ರಸರ B. 4, 97).

ಹಬ್ಬು habbu. 2. = ಪರ್ಬು 2, etc. The state of being spread, extended, lengthened or long. ಬೆಕ್ಕಿನ ಮೆಯ್ ಹಬ್ಬು (B. 3, 30). — ಹಬ್ಬುಗಿಡಿ. -ಕಿಡಿ. Sparks that spread (Râm. 4, 3, 9).

ಹಬ್ಬುಗೆ habbugĕ. = ಪರ್ಬುಗೆ. Spreading, extension, vastness (ವಿಸ್ತಾರ Nr.; Bh. 1, 8, 9; 1, 20, 56; 3, 11, 16; 6, 2, 6; J. 2, 1; 28, 46).

ಹಬ್ಬುವಿಕೆ habbuvikĕ. Spreading, etc. (My.; ಪರ್ಬುಗೆ G.).

ಹಬ್ಬೆ habbĕ. Cane, Calamus rotang, rattan (see T. & M. s. ಬೆತ್ತ; *cf.* ಅಬ್ಬೆ; ಪಚ್ಚೆ No. 8; ಪ್ರಬ್ಬಲಿ). ಹಬ್ಬೆಯ ಗಿಡು (ವೇತಸ, ರಥ, ಅಭ್ರಪುಷ್ಪ, ವಿದುಲ, ಶೀತ, ವಾನೀರ, ವಂಜುಲ Nr.). ನೀರೊಳಗಣ ಹಬ್ಬೆ (ಪರಿವ್ಯಾಧ, ವಿದುಲ, ನಾದೇಯಿ, ಅಮ್ಬುವೇತಸ Nr.). ಹಬ್ಬೇ ಗಿಡ (ವೇತಸ, etc., ಪ್ರಬ್ಬಲಿಚೆಟ್ಟು Si. 128).

ಹಮರಹ hamaraha. With (My.; H.).

ಹಮಾಂ hamâm. All, together. — ಹಮಾಂಕೋಮು. All the tribes, all classes (My.; H.). — ಹಮಾಂಜಿನಸು. All kinds of articles (My.; H.).

ಹಮಾಲ hamâla. A bearer (of a palanquin, etc.); a porter (B. 5, 256; Mhr., H.).

ಹಮೀರ hamîra. = ಅಮೀರ. An emir, a nobleman, a grandee; a valiant man (My.). ಹಮೀರನಾದ ವೀರನು (ಶೂರ, ವೀರ, ವಿಕ್ರಾಂತ Si. 283).

ಹಮೇಷಾ hamêshâ. Always, ever (My.; Br.; Mhr., H. ಹಮೇಶಾ).

ಹಂಪ hampa. = ಪಂಪ No. 2. N. of a Kannaḍa author (Śmd. 4).

ಹಂಪು hampu. = ಹಪ್ಪ. See Mr. s. ಹಂಚು 1. *Cf.* ಪಂಪು No. 1?

ಹಂಪೆ hampĕ. = ಪಂಪೆ, q. v. ಹಂಪೆಗೆ ಹೋಗುವದಕ್ಕಿಂತ ಕೊಂಪೆಯಲ್ಲಿ ಇರುವದು ಲೇಸು.—ಹಂಪೆಗೆ ಹೋಗದಿದ್ದರೆ ಸಂಪಿಗೆ ನೋಡಲಿಲ್ಲವೇ? (Prvs.). — ಹಂಪಣ್ಣ. -ಅಣ್ಣ. N. (My.). — ಹಂಪಯ್ಯ. -ಅಯ್ಯ. N. (My.). — ಹಂಪೆಯಾಳ್ದ. -ಆಳ್ದ. N. of a Śivaliṅga at Hampĕ (Grj. 8, 47). — ಹಂಪೆವಿರೂಪಾಕ್ಷ. = ಹಂಪೆಯಾಳ್ದ. (My.).

ಹಂಬಲ hambala. = ಪಂಬಲ್ q. v., etc. (ಚಿಂತೆ G.; My.). ಅಹಾ! ಮರಿಗಳನ್ನು ಹಂಬಲದಿಂದ ಕಾಯುವ ಗುಣವನ್ನು ಗುಬ್ಬಿಗಳಲ್ಲಿ ಸಹ ದೇವರು ಇಟ್ಟು ಇಟ್ಟಿದ್ದಾನಲ್ಲವೇ? (B. 2, 6). ಹಂಬಲ ಬಿಟ್ಟರೂ ಮಮತೆ ಬಿಡೋದಿಲ್ಲ.—ಸೊರ್ಗಕ್ಕೆ ಹೋದರೂ ಸೊಸೇ ಹಂಬಲ ಬಿಡಲಿಲ್ಲ (Prvs.).

ಹಂಬಲಿಸು hambalisu. = ಪಂಬಲಿಸು, q. v. To feel desire, to long, etc. (C.; ಚಿಂತೆ ಮಾಡು, ದುಃಖಿಸು G.). ಹಂಬಲಿಸುವಂಥ (ಉತ್ಕ G.). ದಾರೀ ನಡೆದು, ದಣಿದು, ಮುಂದಕ್ಕೆ ಹೆಜ್ಜೆ ಇಡಲಾರದೆ, ಹಸಿವೆಯಿಂದ ಹಂಬಲಿಸುತ್ತ ಒಂದು ಗಿಡದ ಕೆಳಗೆ ಕುಳಿತುಕೊಂಡನು (B. 3, 125). ಅಂಬಲಿಗೆ ಗತಿ ಇಲ್ಲದವನಿಗೆ ಹಂಬಲಿಸುವದು ಯಾಕೆ?—ತಮ್ಮ ಒಳ್ಳೇದೇ, ಸರಿ; ನೆರಳಿಗೆ ಮಾತ್ರಾ ಹಂಬಲಿಸಬೇಕು.—ನಿಂಬೇ ಹಣ್ಣಾದರೆ ಹಂಬಲಿಸಿದರೆ ಬಂದೀತೇ?—ಬಂಬು ಹೊಡಿವವನ ಸಂಗಡ ಹಂಬಲಿಸಿದರೆ ಇಂಬು ಸಿಕ್ಕೀತೇ? (Prvs.). ವೈಥುನವನ್ನು ಕುರಿತು ಹಂಬಲಿಸಿ ಕೂಗಿ ಮೊರೆಯಿಡುವದು (ಆಕ್ರಾರಣೆ Si. 57). See J. 19, 23; 24, 47; 26, 34. 2, to mind, to regard with attention, to heed (J. 28, 56).

ಹಂಬಲು hambalu. = ಹಂಬಲ, etc. (My.). ಅಂಬು ತಾಗಿದರೂ ಹಂಬಲು ಬಿಡಲಿಲ್ಲ.—ತುಂಬಾ ಹೊಯ್ದರೂ ಹಂಬಲು ಹೋಗದು.—ದೊಂಬಿಗೆ ಹೋದವನು ಶರೀರದ ಹಂಬಲು ಬಿಟ್ಟರೆ ಲೇಸು (Prvs.).

ಹಂಬು hambu. = ಅಂಬು 3. A creeper (ವಲ್ಲಿ Si. 480; My.); a rope (for hanging). ದೊಂಬಿಸಾಕ್ಷಿ ಹಂಬಿಗೆ ಕಾರಣ (Prv.).

ಹಮ್ಮದ hammada. Loss of consciousness or of the control of the mental functions, fainting, swooning, stupor, torpor (ಹರವಸ, ಮುಚ್ಚೆ, ಮೂರ್ಛೆ Śs.; Čpr. 5, after 19; *cf.* M. ಪರುಙ್ಙು, to be perplexed, ಪಿಬ್ರಿ, intoxication?). — ಹಮ್ಮದವೋಗು. -ಒ-ಪೋಗು. To be stupefied, to faint, etc. (from fear, grief, etc., Grj. 1, after 131; 4, after 120; Rśv. 5, after 55; Śśv. 2, 10; 4, 136). ಹಮ್ಮದವೋದಂ (ಮೂರ್ಛೋದಂ Čt. II, 111).

ಹಮ್ಮಯಿಸು hammayisu. = ಹಮ್ಮಯ್ಸು. To faint, to swoon, to be stupefied, etc. (Bp. 13, 3; Rśv. 13, after 104).

ಹಮ್ಮಯ್ಸು hammaysu. = ಹಮ್ಮಯಿಸು. (Râm. 3, 8, 11; J. 4, 22; 18, 54; 19, 16; 23, 51; 24, 44; 31, 53. 63).

ಹಮ್ಮಿಣಿ hammiṇi. = ಹಿಮ್ಮಣಿ. A long and narrow money-bag or purse (B. 4, 169; Mhr. ಹಮಿಣೀ).

ಹಮ್ಮೀರ hammîra. N. of a country (Bp. 6, 19).

ಹಮ್ಮು hammu. 1. To make ropes (ರಜ್ಜುಕ್ರಿಯೆ Śmd. Dh.; T. ಪಮ್ಮು, to sew; ಪಮ್ಮು, ಪಮ್ಮು, to tack, or pin, a seam before it is sewed).

ಹಮ್ಮು hammu. 2. Pride, conceit (ಬಿಂಕಿತ್ತುದು Čt. I, 44; ಹಂತೆ, etc., ಗರ್ವ Śs.; C.; Bp. 1, 58; 30, 10; 42, 17; 46, 15; 55, 33; T. ಪಮ್ಮು, to extend = ಪರವು; to increase; to rise, to get up = ಏಱು; *cf.* ಪರ್ಬು 1 & 2, and see ಹಂತೆ). ಹಮ್ಮು ಮುರಿದ ಮೇಲೆ ಗುಮ್ಮನಾದ.—ದಮ್ಮು ಕಟ್ಟಿ ಕೊಂಡು, ಹಮ್ಮು ಕಳ ಕೊಂಡ.—ಬಿಮ್ಮಿಗೆ ಹಿಡಿದರೆ ಹಮ್ಮು ಹೋಗದೇ? (Prvs.).

ಹಮ್ಮುಗಾತಿ hammu-gâti. A proud woman (My.).

ಹಮ್ಮುಗಾಱ hammu-gâṟa. A proud man (My.).

ಹಮ್ಮುಗೆ hammugĕ. A rope, a band (Č. Bp. 41, 46; Bh. 8, 24, 25). ಹಮ್ಮುಗೆಯ ಕುಣಿಕೆಗಳು (ಸಂಕಟಕ Mr. 292).

ಹಯ್ hay. A child. (T. ಪಜ). See ಹಯ್ಕಳು.

ಹಯ haya. *A horse* (ಕುದುರೆ Nn. 8). 2, the number seven (that being the number of the horses of the sun, ಏಱು Mr. 347). See Prv. s. ಹಂದಿ.

ಹಯಗ್ರೀವ haya-grîva. N. of a daitya who seized and carried off the vêdas. (Bhâgavata 8, 23, 17). 2, N. of a form of Vishṇu.

ಹಯಘೋಷ haya-ghôsha. Neighing. See ಕೆಳಿಲ್.

ಹಯಜ್ಞತೆ haya-jñatĕ. Knowledge of horses and their management, horsemanship. (My.).

ಹಯತತಿ haya-tati. The number seven (Čh.).

ಹಯಧ್ವನಿ haya-dhvani. Neighing. See ಕೆಳಿರ್.

ಹಯನ hayana. *A covered carriage or palanquin.* (ರಥದ ಹರಿ Hlâ.).

ಹಯನಿಕರ haya-nikara. The number seven (Čh.).

ಹಯನು hayanu. = ಪಯ 2, ಹಯ್ನು, etc. Milk and all that is made of milk, as curds, butter, etc. (My.). 2, a milch cow. See Sp. s. ಗೊಡ್ಡು. 3, water: the crop that is raised by means of tank water of which the planting begins in January (My.). See Prv. s. ಹೊಗರು. — ಹಯನುಗದ್ದೆ. Lands for raising the hainu crop (My.). — ಹಯನುಬತ್ತ. The paddy of the hainu crop (My.). — ಹಯನುಬೆಳೆ. The growing hainu crop (My.).

ಹಯಪರಿಕರ haya-parikara. A horse-girth. See ಬಿಗಿ.

ಹಯಪುಚ್ಛಿ haya-pučchi. *The plant Glycine debilis* Lin.

ಹಯಪ್ರಾಸ haya-prâsa. A kind of alliteration (Čh.).

ಹಯಮಂಡಲಿ haya-maṇḍali. A ring or circular motion of horses. See ವೇಡೆಯ.

ಹಯಮಾರ haya-mâra. *The fragrant oleander, Nerium odorum* Ait. See ಕಣಗಲ.

ಹಯಮಾರಕ haya-mâraka. *The fragrant oleander.* See ಕಣಗಿಲೆ.

ಹಯಮೇಧ haya-mêdha. The horse-sacrifice. (J. 2, 47. 55; 14, 31; 20, 2).

ಹಯರಕ್ಷೆ haya-rakshĕ. The guarding or watching of a horse or of horses (J. 10, 17).

ಹಯವದನ haya-vadana. (= ಹಯಗ್ರೀವ). N. of a form of Vishṇu (My.).

ಹಯವಾಹನ haya-vâhana. Rêvanta; Kubêra. (R.).

ಹಯವ್ರಾತ **haya-vrâta.** The number seven (Čh.).

ಹಯಾಗಮನ **haya-âgamana.** The arrival of a horse (J. 17, 19).

ಹಯಾರೂಢ **haya-ârûḍha.** Mounted on a horse; a horseman, a rider. (J. 7, 8; 29, 39; 31, 43).

ಹಯಾರೋಹ **haya-ârôha.** *Mounted on horseback, a rider;* horsemanship, riding.

ಹಯಾರ್ಜುನರುಕ್ **haya-arjuna-ruk.** Shining like white horse (Bp. 38, 1).

ಹಯಿಲು hayilu. = ಅಯಿಲು q. v., ಅಯ್ಲು, ಹಯ್ಲು. Bewilderment, etc. (My.).

ಹಯಿವ hayiva. = ಹೈವ, q. v.

ಹಯ್ಕಳು haykaḷu. (fr. ಹಯ್). = ಹಕ್ಕಳು. Male or female children (My.; T. ಪಜಗಳ್; see ಪಸುಳೆ, etc.).

ಹಯ್ದ hayda. A boy (My.).

ಹಯ್ನ **hayna.** = ಹಯನು, ಹಯ್ನು. ದನ ಕರುಗಳು ಬಹಳ ಇದ್ದವು, ಹಯ್ನವೂ ಸಮೃದ್ಧಿಯಾಗಿತ್ತು (B. 4, 220). ಹಿಂದುಸ್ಥಾನದ ನೆರನಾಡುಗಳ ಕೆಲವು ಜನರಿಗೆ ಹಯ್ನವು ಬೇಕಾಗಿಲ್ಲ (5, 20).

ಹಯ್ನು **haynu.** = ಹಯ್ನ, etc. (C.). ಜೋಳದಾ ಬೋನಕ್ಕೆ ಬೇಳೆಯಾ ತೊಗೆಯಾಗಿ, ಕಾಟೆಮ್ಮೆ ಕರೆದ ಹಯ್ನಾಗಿ, ಬೆಳವಲದ ಹವಣಂ ನೋಡು! (Sp.). ಆಕಳ ಹಯ್ನು ತುಸು, ಆದಾಗ್ಯೂ ಬಹು ಆರೋಗ್ಯವು (B. 1, 21).

ಹಯ್ಯಂಗವೀನ **hayya-ṅ-gavîna.** = ಹೈಯಂಗವೀನ, q. v. (ನವನೀತ, ಬೆಣ್ಣೆ Mr. 183).

ಹಯ್ಲು haylu. = ಹಯಿಲು, etc. (My.).

ಹರ hara. 1. (fr. ಹರೆ 1). Spread, extent: broadness, breadth (C.). ಆಲದ ಎಲೆಗಳು ಹರವಿರುವದರಿಂದ ಪತ್ರಾವಳಿಗೆ ಬರುತ್ತದೆ (B. 2, 22). ಒಣ್ಟೆಯ ಅಂಗಾಲು ಹರವಾಗಿ, ಬಹು ಮೆತ್ತಗೆ ಇರುತ್ತವೆ (3, 64). ಒಂದು ಹರವಾದ ಹಲಿಗೆ (4, 225). **2,** spreading, becoming public. See ಹರವಡಿ.

ಹರ hara. 2. (fr. ಹರಿ 1). = ಹರಿ 3, ಹರು, ಹರ್. Running, etc.; flowing. — ಹರದಾರಿ. = ಅರದಾರಿ. The way or distance a man can run, three English miles (My.; B. 3, 65; ಕ್ರೋಶ G.; Tč. ಪರುಗು). ಎರಡು ಹರದಾರಿ (ಗವ್ಯೂತಿ G.); ನಾಲ್ಕು ಹರದಾರಿ (ಯೋಜನ G.). — ಹರದಾರಿಯಳತೆ. -ಅಳತೆ. The measure or distance of a haradâri (Bp. 26, 32). — ಹರನಾಳಿಗೆ. = ಹರಿ-. A gutter, etc. ನೀರ ಹರನಾಳಿಗೆ (ಕಾಷ್ಠಾಮ್ಬುವಾಹಿನಿ, ಪ್ರಣಾಲ G.).

ಹರ **hara. 1.** Bringing, conveying, carrying; taking, seizing; captivating; removing, taking away, depriving of; dividing; destroying; a seizer, etc. See ಕಾಮ-, ಪುರ-, ಪ್ರ-, ಪ್ರಾಗ್ರ-, ಪ್ರಾಣ-, ಮನೋ-, ವಾರ್ತಾ-, ಸನ್ದೇಶ-. 2, *Śiva.* 3, force, etc. (ಪ್ರಸರ, ಬಲುಹು Mr. 461; perhaps mistake for ಹಠ). 4, sign of a metrically long syllable (Čh.; Mr. 363). 5, the number eleven (Čh.). ಕರ್ಮದಿನ್ದವೆ ಹರನು ಚರ್ಮವ ತಾನುಟ್ಟನು, ಹೊಮ್ಮರಾಳನ್ ಅಜನ್ ಆದನು, ಗೋವಿನ್ದನ್ ಎಮ್ಮೆಯ ಕಾದಂ (Sp.). ಸಿರಿಯಿದ್ದವಗೆ ನರೆ ಬನ್ದರೆ ಹರನಾದಾನೇ? (Prv.).

ಹರ **hara. 2.** Tbh. of ಪರ 1. See ಹರವಸ.

ಹರ **hara. 3.** Every (My.; Mhr., H.).

ಹರಕತ **harakata.** = ಹರಕತ್ತು. ಹರಕತ ಮಾಡೋಣ (ವಾರಣ Čb.).

ಹರಕತ್ತು **harakattu.** Opposition; any measure or act in prevention; hindrance (My.; Mhr., H. ಹರಕತ).

ಹರಕಾರ **harakâra.** A courier (Mhr., H. ಹರಕಾರಾ; Br., R.).

ಹರಕೆ harakĕ. = ಪರಕೆ 1, etc. A blessing, a benediction (ಸ್ವಸ್ತಿ, ಆಶಿಸ್ Nr.; Bp. 4, 46; 5, 37; 32, 13. 43; 46, 17. 37; ಆಶಿಸ್, ಆಶೀರ್ವಾದ G.). **2,** a vow (My.; ದೇವರಿಗೆ ಬೇಡಿ ಕೊಣ್ಡು ಕುರಿ ಕೋಳಿ ಮುನ್ತಾದ್ದು ಕೊಡುವದು S. Mhr.). — ಹರಕೆ ಕಟ್ಟು. To tie money or ornaments in cloth coloured with turmeric and put them before an idol, vowed as a gift in case of delivery or recovery (My.). — ಹರಕೆ ಕೊಡು. To give a blessing, to bless (B. 5, 126. 165). 2, = ಹರಕೆ ತೀರಿಸು (My.). ಹರಕೆ ಕೊಟ್ಟರೂ ಹರಿಯೋದು ನಿಲ್ಲಲಿಲ್ಲ.— ದೊರಕಿದರೆ ಹರಕೇ ಕೊಡ ಬಹುದು (Prvs.). — ಹರಕೆಗೊಳ್. = ಪರಕೆಗೊಳ್. (Bp. 13, 7; 46, 43). — ಹರಕೆ ತೀರಿಸು. To make over to an idol what has been vowed (My.). — ಹರಕೆ ಮಾಡು. To make a vow, to vow (My.). — ಹರಕೆ ಹರಸು. = ಹರಕೆ ಮಾಡು. (My.).

ಹರಗಣ **hara-gaṇa.** A class of Kannaḍa metrical feet (Čh.).

ಹರಗಣೆ haragaṇĕ. The act of removing superfluous standing corn by means of the kunṭĕ (My.).

ಹರಗಿರಿ **hara-giri.** Kailâsa. (Bp. 44, 43; Bh. 1, 14, 5).

ಹರಗು haragu. 1. To do work with regard to corn (ಸಸ್ಯಕ್ರಿಯೆ Šmd. Dh.): to remove superfluous standing corn by means of the kunṭĕ (My.); to clean (a field) by removing the grass, weeds, etc. from it with the kunṭĕ before sowing (S. Mhr.). ಎತ್ತುಗಳನ್ನು ಹೊಲ ಹರಗುವದಕ್ಕೆ ಹಚ್ಚುತ್ತಾರೆ (B. 3, 18). ಅವರಿಗೆ ಹೊಲಾ ಹರಗುವದೂ ಬಿತ್ತುವದೂ ಅವಶ್ಯವಿಲ್ಲ (3, 111). ಅವರು ಅಲ್ಲಿಯ ಭೂಮಿಯನ್ನು ಹರಗಿ, ಅದರೊಳಗೆ ಬಿತ್ತಲಾಗಿ (5, 129). ಹರಗದ ಹೊಲ (ಅಪ್ರಹತ); ಹರಗಿದ ಹೊಲ (ಕೃಷ್ಟ); ಮೂರು ಸಾರೆ ಹರಗಿದ ಹೊಲ (ತ್ರಿಹಲ್ಯ G.).

ಹರಗು haragu. 2. The act of doing work with regard to corn, etc. — ಹರಗುವಾಳ್. -ಬಾಳ್. (Šmd. I). The iron used for it.

ಹರಟು haraṭu. To talk idly, to prate, to blab (My.; T. ಅರಟ್ಟು, ಅಲಟ್ಟು).

ಹರಟೆ haraṭĕ. = ಅರಟೆ. Idle talk, prate, jabber, babble (C.; T. ಅಲಟ್ಟು; see ರಜ್ಜೆ). ಬಾಲಸನ್ಯಾಸಿಗೆ ಹಾಯಿಹರಟೆ ಯಾಕೆ?— ಒರಟನಿನ್ದ ಹರಟೆ ಉಣ್ಟಾಗುವದು (Prvs.). ಹರಟೆಯಿನ್ದ ಹೊತ್ತು ಕಳದೆ ನಾ (Dp. 29, 2). — ಹರಟೆ ಕೊಚ್ಚು. = ಹರಟು. (B. 4, 49. 194; 5, 96). — ಹರಟೆಮಲ್ಲ. A male great prater, etc. (My.). — ಹರಟೆಮಲ್ಲಿ. A female great prater, etc. (My.).

ಹರಟೆಗಾರ haraṭĕ-gâṟa. An idle talker, a tattler, a prater (My.).

ಹರಡಿ haraḍi. = ಹರಡು 3, etc. The protuberant ends of the radius and ulna above the wrist; the ankle; the wrist. (My.). **2,** a bracelet for the wrist composed of alternate gold and coral beads (My.). — ಹರಡಿಗುಣ್ಡು. = ಹರಡಿ No. 2. (My.).

ಹರಡು haraḍu. 1. = ಪರಡು 2, etc. To spread, etc. (v. t., ಪ್ರಸಾರಣ, ಪ್ರಸಾರ Šmd. Dh.; My.); to spread,

etc. (v. i., My.). ಹರಡಿ ಕೊಳ್ಳುವದು (ವಿಸ್ತೃತ್ವರ, ವಿಸ್ಯಮರ, ಪ್ರಸಾರಿ, ಎಸಾರಿ Si. 361); ಬಹಳವಾಗಿ ಹರಡಿ ಕೊಳ್ಳುವಿಕೆ (ಪ್ರಪಂಚ, ವಿಸ್ತರ 412).

ಹರಡು haraḍu. 2. = ಪರಡು 3. To scratch with the fingers or nails, to claw (ಅಂಗುಲಿಖನನ Šmd. Dh.).

ಹರಡು haraḍu. 3. = ಪರಡು 4, ಹರಡಿ, ಹರಡೆ 2. The ankle (ಶರೀರಾಂಗಭೇದ, ಗುಲ್ಫ Šmd. Db.; ಘುಣ್ಟಕ, ಗುಲ್ಫ Hlâ., Mr. 332; Bp. 39, 34; My. exactly = ಹರಡಿ No. 1). ಪಾದದ ಹರಡುಗಳೆರಡೂ (ಘುಟಿಕೆ, ಗುಲ್ಫ); ಆ ಹರಡುಗಳೊಳಗಣ ಮೆಯಿ (ಪಾರ್ಷ್ಣಿ Nr.).

ಹರಡೆ haraḍĕ. 1. = ಪರಡೆ. The Numidian crane (ಕರ್ಕರೇಟು, ಕರೇಟು Nr.; ಗುಲ್ಫಿ Mr. 175; Bh. 1, 20, 53; 3, 4, 33; Tĕ. ಪೆಗ್ಗಡಿ). ಹರಡೇ ಹಕ್ಕಿ (ಲೋಹಪೃಷ್ಠ, ಕಂಕ Si. 172).

ಹರಡೆ haraḍĕ. 2. = ಹರಡಿ, etc. ಹೆಜ್ಜೇ ಹರಡೆ (ಘುಟಿಕೆ, ಗುಲ್ಫ Si. 207). **2,** = ಹರಡಿ No. 2 (S. Mhr.).

ಹರಡೆ haraḍĕ. = ಅರಳೆ, ಅಳ್ಡೆ, ಹರ್ಡೆ, ಹಳ್ಡೆ. The ink-nut tree (= ಅಣಿಲೆ My.; H.).

ಹರಣ haraṇa. 1. Taking; accepting, receiving; making an agreement (ಸನ್ಧಿಕೃತ್ಯ, ಸನ್ಧಿಕಾರ್ಯ, ಸನ್ಧಾನ ಮಾಡುವುದು Nn. 165). 2, seizing, carrying off or away, removing; *stealing;* withholding, annulling. 3, killing (ಕೊಲೆ 165). 4, disregarding; what is undesirable (ತನ್ನಿಚ್ಛೆಗಂ ಬಾರದುದು, ತನ್ನಿಚ್ಛೆಗೆ ಬಾರದ ಕಾರ್ಯ 165). 5, *a nuptial present.* 6, a gift to a student at his initiation.

ಹರಣ haraṇa. 2. Tbh. of ಪ್ರಾಣ (Šmd. 336; ಪ್ರಾಣ, ಜೀವ Nn. 165; Bp. 4, 63; 5, 66; 30, 24; 45, 3; B. 1, 25). ಹರಣ ಉಳಿಯೋದಾದರೆ ಮರಣಕ್ಕೆ ಅಂಜಿನು.— ಪುರಾಣಾ ತಿಳಿದವನಾದರೆ ಹರಣ ಉಳಿಸಲಿ! (Prvs.). — ಹರಣಕೆ ಹರಣಂ ತರ್. To give (one's) life for the life (of another, Bp. 13, 13). — ಹರಣ ಕೊಡು. To restore life (Bp. 46 sum.; 46, 78; 50, 61). 2, to give one's life (13, 13). — ಹರಣಂಗಳೆ. -ಂ-ಕಳೆ. To give up one's life, to die (Šŝv. 3, after 35). — ಹರಣದ ಹರಣ. The life of life (Bp. 15, 31). — ಹರಣ ಪಡೆ. To obtain life (Bp. 32, 50; 37 sum.; 47 sum.; 50, 20). — ಹರಣವೀ. -ಈ. To restore life (Bp. 28, 68). — ಹರಣವೊದಗಿಸು. -ಒದಗಿಸು. To restore life (Bp. 54, 74). — ಹರಣ ಹಿಡಿ. To keep one's life, to remain alive (Bp. 42, 32).

ಹರಣದೇಹಾರ್ಥ haraṇa-dêha-artha. Life, body and property (Bp. 39, 17).

ಹರತಾಳ haratâḷa. Tbh. of ಹರಿತಾಲ. Yellow orpiment (Čb. 170; Mhr.).

ಹರತೆ haratĕ. (= ಹರಗಣೆ). The act of removing superfluous standing corn by means of the kuṇṭĕ (My.).

ಹರದ haradu1-a3. = ಪರದ. A dealer, a trader, a merchant (ಪಣ್ಯಾಜೀವ, ವಣಿಜ್, ಪ್ರಾಪಣಿಕ, ನೈಗಮ, ವೈದೇಹ Hlâ.; ವೈದೇಹಕ, ಸಾರ್ಥವಾಹ, ನೈಗಮ, ವಾಣಿಜ, ವಣಿಜ್, ಪಣ್ಯಾಜೀವ, ವಣಿಕ, ಕ್ರಯವಿಕ್ರಯಿಕ Nr.; Bp. 8, 9; 25, 27; Râm. 5, 8, 49). ಪಡಿಯಾಸೆ ಹರದಂಗೆ, ನುಡಿಯಾಸೆ ವೇಶೆಗೆ, ಜೆಡೆಯಾಸೆ ಬೂದಿಗೊರವಗೆ, ಹಾದರಕೆಯೆಡೆಯಾಟದಾಸೆ (Sp.). ಹರದನ ಕುದುರೆಗೆ ಹಟಿಕುಜೀನ.— ಹರದರ ವರಾತ ಎನ್ದು, ಹರವಿಯಲ್ಲಿ ತಲೇ ಅಡಗಿಸಿದ ಹಾಗೆ.— ಬಾರದ ಬರಹ ಹರದರಲ್ಲಿ ಸಿಕ್ಕೀತೇ?— ವಟಿದಿ ಹೇಟಿುವ ವನಿಗಾದರೂ ಹರದನ ಹಂಗು ಬೇಕು.— ಸುತ್ತಿಗೆ ಇಲ್ಲದ ಹರದ, ಅತ್ತಿಗೆ ಇಲ್ಲದ ಮಯ್ದುನ (Prvs.). — ಹರದನ ಹಳ್ಳಿ. N. of a village in Mysore (My.).

ಹರದಿಕೆ haradikĕ. Trade, traffic (ವಾಣಿಜ್ಯ, ವಣಿಜ್ಯೆ Nr.).

ಹರದು haradu. 1. Trade, traffic (ವಣಿಜ್ಯ, ವಾಣಿಜ್ಯ, ವಣಿಜ್ಯೆ Hlâ.; ವಾಣಿಜ್ಯ Mr. 346). See ಎಲೆವರದು. — ಹರದುಗೆಯ್. = ಪರದು-. To trade (ಬೇಹಾರವಂ ಮಾಡು Šmd. 240 Cm.).

ಹರದು haradu. 2. = ಹರೆದು. P. p. of ಹರೆ 1. (My.).

ಹರಪ್ರಿಯ hara-priya. Kubêra (Čpr. 9, 68).

ಹರಯ haraya. = ಹರೆಯ. Tbh. of ಪ್ರಾಯ (Šmd. 336).

ಹರವಡಿ hara1-paḍi1. The state of becoming public or manifest; manifestation; display, parade (ಗಾಡಿಣ, ದೋಹಿಲ್, ಪ್ರಕಟ Kk. 52).

ಹರವರಿ hara1-pari3. = ಹರವಡಿ. (ಗಾರಣ, ದೋಹಿಲ್, ಪ್ರಕಟ Šs.). ಹರಿಣಂಗಳ ಹರವರಿ (Čpr. 5, 45).

ಹರವಸ hara-vasa. Tbh. of ಪರವಶ (Šmd. 342). Loss of self-control or consciousness, etc. (ಮುಚ್ಛೆ, ಮೂರ್ಛೆ Kk. 31; ಮುಚ್ಛೆ, ಜೊಂಗುಳಿ, ಮೂರ್ಛೆ Šm. 56; Čpr. 6, 84; 8, 71).

ಹರವಿ haravi. = ಪರವಿ, ಹರಿಬಿ, ಹರಿವಿ, ಹರುಬಿ, ಹರುವಿ. An earthen water-vessel of the form of the kŏḍa, but larger (ಘಟ, ಕರೀರ Hlâ.; ಘಟ, ಕರಿರ Mr. 209; ಘಟ, ಪರವಿ Nr.; ಅಲಂಜರ G.; C.; Bp. 10 sum.; 14, 12; 22, 64; 30, 14; 38, 33; 51, 57; 55, 29; Bh. 1, 10, 25. 30). ಹರವಿಯ ಅನ್ನದಲ್ಲಿ ಒನ್ದು ಅಗಳು ನೋಡಿದರೆ ಸರಿ.— ಮುರುವಿಗೆ ಬಗೆ ಇಲ್ಲದಿದ್ದರೆ ಹರವಿಗೂ ದರಿದ್ರವೇ? (Prvs.). See Prv. s. ಹರದ.

ಹರವು haravu. (= ಹರಹು 1), ಹರ್ವು 1. To spread (v. i., My.). ಎಲ್ಲ ಕಡೆಯಲ್ಲಿಯೂ ಹರವಿ ಕೊಳ್ಳೋಣ (ಸಮ್ಮೂರ್ಛನ, ಅಭಿವ್ಯಾಪ್ತಿ Si. 387). ಹರವಿದನ್ಥಾದ್ದು (ಕೀರ್ಣ, etc. Dhw.). 2, to spread, to spread out (v. t., My.; B. 3, 106; 4, 158).

ಹರಸಮಯ hara-samaya. A śaiva congregation (Bp. 50, 22).

ಹರಸು harasu. = ಪರಸು, ಹರಿಸು. To bless (as a devotee blesses Śiva, Bp. 9, 36; as a yati a śivabhakta, 32, 14. 43; as a śivabhakta others, 32, 50; 46, 7. 10. 14. 15. 16; as Sîtâ Hanumat, Râm. 5, 8, 89; as parents their children, Prll. 3, 12. 26; Bh. 1, 10, 26; B. 1, 6; as a blind man his benefactor, B. 3, 124; as a king his relations, Bh. 2, 13, 10; see Bp. 32, 44; according to My. use the giver of a blessing always ought to be either older or of a higher position than the receiver of it). 2, to make a vow (Bp. 48, 18; Bh. 1, 13, 3; ದೇವರಿಗೆ ಹರಸುವದು My.). ಹರಸೋದು ತಪ್ಪೋದಿಲ್ಲ, ತಿರಿದು ವ್ಹೋದು ಹೋಗೋದಿಲ್ಲ.— ತನ್ನ ಕಾಲಿಗೆ ತಾನೇ ಶರಣು ಮಾಡಿ ಹರಸಿ ಕೊಣ್ಡ ಹಾಗೆ (Prvs.). ಹರಸುವುದು (ಸ್ವಸ್ತಿ, ಆಶೀರ್ವಚ, ಆಶೀರ್ವಾದ Nn. 138).

ಹರಸು harasu. (= ಅರಸು?). — ಹರಸುಪಾದರೀ ಗಿಡ. (ಪಾಟಲಿ, ಅಮೋಘೆ, ಕೃಷ್ಣವೃನ್ತೆ, etc. Si. 134).

ಹರಹು harahu. 1. = ಪರಪು, (ಹರವು). To spread, to spread out or about (v. i. and v. t.; see Grj. 9, 62; Bp. 58, 50; Bh. 3, 23, 10). ಹರಹಿದನ್ಥಾದು (ಪ್ರಸರ, ವಿಕೀರ್ಣ Nn. 108); ಹರಹಿದುದು (ವಿತಾನ, ಪ್ರಸರ 115). ಹರಹಲ್ ಪಟ್ಟುದು (ವಿಸ್ತೃತ, ವಿಸ್ತೃತ, ತತ); ಅಗಲಕ್ಕೆ ಹರಹಲು ಪಟ್ಟುದು

(ಪ್ರವೃದ್ಧ, ಪ್ರಸೃತ Nr.). ಗಿಡ ಮನೆ ನೀರು ಮುನ್ತಾದ ಎಲ್ಲ ವಸ್ತುಗಳ ಮೇಲೆ ನಾನು ಪ್ರಕಾಶವನ್ನು ಹರಹುತ್ತೇನೆ (B. 3, 27).

ಹರಹು harahu. 2. Spreading, extension, expanse, vastness (Bh. 1, 12, 6; 3, 11, 16; Râm. 4, 7, 9; J. 33, 4). — ಹರಹುಗೆಡು. -ಕೆಡು. To become devoid of extension (ಅವಕುಂಚಿತ, etc. Mr. 451).

ಹರಹು harahu. 3. (= ಪರಿವು, ಹರಿವು 1). Running, flowing, flow, current. ನೀರ ಹರಹು (ಅರ, ಧಾರೆ, ಪ್ರವಾಹ, ಓಘ, ವೇಣಿ Mr. 415). — ಹರಹುಬತ್ತು. -ಪತ್ತು. A current to be checked. ಹರಹುಬತ್ತಿದುದು, that by which a current is checked: a dam (ಆಧಾರ Mr. 416).

ಹರಳಿಗ haraḷiga. = ಪರಳಿಗ, q. v. (ಜಾರ Šmd. II).

ಹರಳು haraḷu. = ಪರಲ್, etc., ಹಳ್ಳು 1. A nodule, a pebble, a stone, grit (ಶರ್ಕರೆ Nr.; ಉಪಲ Nr.; My.; B. 4, 151). 2, that which bears kernels: the castor-oil plant, Palma Christi, Ricinus communis (My.). 3, the tree Terminalia tomentosa (? ಹೊನ್ನೆ Mr. 134). ಮೂತ್ರದ್ವಾರದಿನ್ದ ಹರಳು ಬೀಳುವ ರೋಗ (ಅಶ್ಮರಿ, ಮೂತ್ರಕೃಚ್ಛ್ರ G.). ದುರುಳನ ಕಣ್ಣರೆ ಹರಳು ಚೆಲ್ಲ ಬೇಕು.— ಒರಳಲ್ಲಿ ಹರಳು ಹುರಿದರೆ ಅರಳು ಆದೀತೇ? (Prvs.). — ಹರಳಪ್ಪ. -ಅಪ್ಪ. = ಹರಳು No. 2 (playfully used). See Prv. s. ಹಗಲುದೀವಟಿಗೆ. — ಹರಳುಗಿಡ. = ಹರಳು No. 2. (ವ್ಯಾಘ್ರಪುಚ್ಛ, ಗನ್ಧರ್ವಹಸ್ತಕ, ಏರಣ್ಡ, ವರ್ಧಮಾನ, etc. Si. 134. 148). — ಹರಳುಗುಣಿಮಣೆ. A tablet with fourteen holes for a game played with pebbles, etc. (My.). — ಹರಳುಂಗರ. -ಉಂಗರ. A ring set with one or more precious stones (My.; Si. 220). — ಹರಳುಂಗುರ. -ಉಂಗುರ. = ಹರಳುಂಗರ. (Bh. 1, 6, 37). — ಹರಳು ಹರಳು. rep. (B. 3, 45; 4, 204). — ಹರಳೆಣ್ಣೆ. -ಎಣ್ಣೆ. Castor oil; lamp oil (as it is frequently used for burning in lamps, My.; Si. 134).

ಹರಳೆ haraḷe. = ಅರಳೆ 2, etc. (My.).

ಹರಳ್ಚು haraḷcu. To cause hinderance or opposition to the eye, to annoy or trouble the eye (ನೇತ್ರವಿರೋಧಕರಣ Šmd. Dh.).

ಹರಾಬಿ harâbi. = ಅರಾಬಿ. Broad, etc. (My.; H.).

ಹರಾಮಿ harâmi. A wicked, vile woman (My.). 2, vile, base, villainous (Mhr., H. ಹರಾಮೀ).

ಹರಾಮು harâmu. Unlawful; wicked, wrong; vicious, vile (My.; Mhr., H. ಹರಾಮ್); forbidden. — ಹರಾಮುಕುದುರೆ. A vicious or restive horse (My.).

ಹರಾಮುತನ harâmutana. Wickedness, etc. (My.).

ಹರಿ hari. 1. = ಪರಿ 1 q. v., etc. To run; to flow; etc. (ಧಾವನ Šmd. Dh.; Bp. 32, 20; 45, 28; 57, 2; J. 22, 36; 28, 16; Bh. 2, 4, 9. 11; C.). ಹರಿದು ಮುತ್ತುಹ (ಅಭ್ಯವಸ್ಕನ್ದನ, ಅಭ್ಯಾಸಾದನ); ಬೇಗದಿನ್ದ ಹರಿವಾತನು (ತರಸ್ವಿ, ತ್ವರಿತ, ವೇಗಿ, ಪ್ರಜವಿ, etc.); ಹರಿದು ಹೋಹಾತನು (ಅತಿಜವ, ಜಂಘಾಲ); ಒಟಿತು ಹರಿವ ಹಳ್ಳ (ಸ್ರೋತಸ್); ನೀರ ಹರಿಯಲೀಯದೆ ಕಟ್ಟಿದ ಕಟ್ಟೆ (ಆಧಾರ); ಉದಕ ಹರಿವ ಬಟ್ಟೆ (ಪ್ರಣಾಲಿ Nr.). (ಆನೆ) ಹರಿವುದು (ಸ್ಥೂಲೋಚ್ಚಯ); ಸುತ್ತುಂಗಡಲು ಹರಿದ ಕುಱುವ (ಅನ್ತರೀಪ Hlâ.). ಹಿರಿದು ಪಾಪವ ಮಾಡಿ, ಹರಿವ ನೀರೊಳು ಮುಟಿಗೆ ಕರಗೊದೇ ಪಾಪ? (Sp.). ನಿಲ್ಲದೆ ಅತಿ ಹರಿವ್ವಂ (ಜಂಘಾಲ, ವೇಗಿ Mr. 234). — ಹರಿದಾಡು. -ಆಡು. To run about (in a battle, J. 25, 46); to move about (as blood in the body, B. 3, 35; 4, 133); to creep about (as a serpent, Dp. 63, 3; B. 3, 97; as an ant, B. 4, 64). ಹರಿದಾಡುವ ಮನಸು (ಚಿತ್ತವಿಭ್ರಮ G.). — ಹರಿಯಿಡಿ. -ಇಡಿ. To beat (another) so that he runs away, to defeat, etc. ಹರಿಯಿಡಿದುದು (ಎಬ್ಬಿಸಿದುದು, ಕಡೆಗಣಿಸಿದುದು, ಇಬ್ಬಿಸುನೂಕಿದುದು, etc., ಪ್ರತಿಹತ Šs.).

ಹರಿ hari. 2. = ಪರಿ 2. P. p. of ಹರಿ 1, in ಹರಿ ಹರಿದು (Bp. 32, 17; J. 26, 4). — ಹರಿ ತರ್. (*i. e.* ಹರಿದು ಕೊಣ್ಡು ಬರ್). = ಪರಿ ತರ್. (Bp. 5, 28; 20, 14; 22, 11; 44, 6; 46, 12; 53, 16; J. 28, 54; Bh. 1, 5, 21; 1, 10, 27). ಗಿರಿಯ ತುದಿಯಿನ್ದ ಒಸರಿ ಹರಿ ತಪ್ಪ ಹಳ್ಳ (ನಿರ್ಝರ Mr. 97).

ಹರಿ hari. 3. = ಪರಿ 3, ಹರ 2, ಹರು. Running; a run; going; flowing. See ಜಲ-; Hlâ. s. ಡಯನ. — ಹರಿಕಣಿ. = ಹರುಕಣಿ. A channel for (water) to run, a water-conduit (ಪಾನ, ಸಾರಣಿ Hlâ.); a water-trench. ಮರಕ್ಕೆ ನೀರೆಱೆವ ಹರಿಕಣಿ (ಆವಾಲ, ಆಲವಾಲ Hlâ.). — ಹರಿಗುಡು. -ಕುಡು. To pay money for being ferried over a river. ಹರಿಗುಡುವುದು (ಅತರ Hlâ.). — ಹರಿಗೊಳ್. -ಕೊಳ್. To run away (Bh. 4, 2, 19). — ಹರಿದಾರಿ. = ಹರದಾರಿ. (My.; Si. 105). — ಹರಿನಾಳಿ. A waste-pipe, a gutter, a channel (ಪ್ರಣಾಲಿ Hlâ.; Mr. 422). — ಹರಿನಾಳಿಗೆ. = ಹರನಾಳಿಗೆ, ಹರಿನಾಳಿ. (S. Mhr.). — ಹರಿಯನ್ತರ. -ಅನ್ತರ. The area of a run, *i. e.* of a haridâri (Bh. 2, 13, 32). — ಹರಿಯಿಡು. -ಇಡು. To run, to hasten (Čpr. 8, after 4). — ಹರಿಹಲಿಗೆ. A plank to the one end of which a rope is fastened and on which a boy sits and is pulled along (Bh. 1, 6, 2).

ಹರಿ hari. 4. = ಪರಿ 4, ಪರೆ 1, ಹರೆ 1 (occasionally in MSS. and prints). To spread (v. i.), etc.; to disperse; to go away; to end (Bp. 45, 8. 47; J. 17, 28; 27, 38). ಗುರುರಾಯನುಪದೇಶ ದೊರ ಕೊಣ್ಡಿತಾದಡೇ ಹರಿವುದು ಪಾಪವೆನ್ತೆನಲು ವಜ್ರದಿಂ ಗಿರಿಯ ಹೊಯಿದನ್ತೆ (Sp.). See Sp. s. ಕಜ್ಜ. — ಹರಿಥಚ್ಚಕ. (ಹರಿದ ಹಚ್ಚಕ). = ಹರೆಥಚ್ಚಕ. A straggling herb with bur-like flowers that stick to hands and clothes, Pupalia cappacea Mog. (? Z.).

ಹರಿ hari. 5. (= ಹರಿಬ 1). Spread, extent: a mass, a multitude, etc. (ಜಂಗುಳಿ, ಬಳಗ, ಬಮ್ಬಲ್, ಪಸರ, etc., ಶ್ರೇಣಿಕೆ Kk. 17).

ಹರಿ hari. Green, greenish yellow, yellow. 2, *reddish brown, bay, tawny*. 3, of a shining white colour, white, bright (ಧವಲ, ಬಿಳಿದು Nn. 10; ಶುಭ್ರ Mr. 495). 4, *the sun* (ಅರ್ಕ, ಸೂರ್ಯ 10). 5, *the moon* (ಚನ್ದ್ರ 10). 6, *a ray of light* (ಅಂಶು, ಕಿರಣ 10). 7, water (ವಾರಿ, ಉದಕ 10). 8, gold (ಸುವರ್ಣ 10). 9, *a horse* (ತುರಂಗಮ 10). 10, *a lion* (ಸಿಂಹ 10). 11, a parrot (ಶುಕ, ಗಿಳಿ 10; ಗಿಳಿ 495). 12, *a peacock*. 13, a pigeon (ಪಾರಾವತ, ಪಾರಿವಾಳದ ಹಕ್ಕಿ 10). 14, *an ape* (ವಾನರ, ಕಪಿ 10). 15, *a frog* (ಭೇಕ, ಕಪ್ಪೆ 10). 16, *a snake* (ಅಹಿ, ಸರ್ಪ 10). 17, the ocean (ಅಬ್ಧಿ 10). 18, a point of the compass (ದಿಕ್, ದಿಕ್ಕು 10). 19, an arrow (ಅಮ್ಬು, ಬಾಣ 10). 20, a treasury (ಕೋಶ, ಭಣ್ಡಾರ 10). 21, a cart, a waggon (ಶಕಟ, ಬಣ್ಡಿ 10). 22, *Indra* (ಬಿಡೌಜ, ಇನ್ದ್ರ 10). 23, *Vishṇu, Kṛishna* (ಕಮಲಾಕ್ಷ, ವಿಷ್ಣು 10). 24, Šiva (ಫಣೀನ್ದ್ರ 495). 25, Brahmâ. 26, *Yama* (ಯಮ 10). 27, *Vâyu* (ವಾಯು 10). 28, N. of the author of the girijâkalyâṇa (Grj. 10, 113. 114). 29, one of the divisions (varshas) into which the known continent is divided. 30, sign for a metrically short syllable (Čh.; Mr. 363). 31, the number eight (Čh.). See ಕವಿ-; Bp. 54, 43. ಸತ್ತುಭವವನೆತ್ತಿ, ಎತ್ತು ಎಮ್ಮೆಯ ಕಾದು, ಮುತ್ತು ಪಾಣ್ಡವರಿಗಾಳಾದ ಹರಿ

ಯು ತಾನೆತ್ತಣ ದೈವ? (Sp.). ನರಸಿಂಹನವತಾರ ಹಿರಿದಾದದದುಬುತ; ಉಗರಿನ್ದ ಶರಭ ಕೊಲ್ಲುವಾಗ ಹರಿಯೂರನಟಿಯದನ್ದವಾದ (Sp.). ಹಿರಿಯ ಬೊಮ್ಮನು ಕೆಂಡ, ಕಿಡಿಯ ಹರಿ ತಾ ಕರಿಗ, ಪುರಹರನು ಶುದ್ಧ ಧವಲಕನ್; ಇವರುಗಳು ಸರಿಯೆ ದೈವಕ್ಕೆ? (Sp.). — ಹರಿಗಳಪ್ಪಣ್ಣ. -ಅಪ್ಪಣ್ಣ. Appaṇṇa, the son of a certain Hari (Bp. 56, 55). — ಹರಿ ಗಿರಿ. reit. (Grj. 6, 38; Bp. 54, 5). — ಹರಿಬುವ್ವ. A meal on the fourth day of a marriage (of smârtas or mâdhvas) at which the son-in-law is looked upon as Vishṇu, is waited on only by his mother-in-law, plays tricks with his ĕnjal, etc. (My.).

ಹರಿಕಣ್ಠ hari-kaṇṭha. A peacock (ನವಿಲ್ Mr. 168).

ಹರಿಕಥೆ hari-kathĕ. The story of Vishṇu or Krishṇa (related with music and singing). ನರೀ ಕಥೆಯ ಮುನ್ದೆ ಹರಿ ಕಥೆಯೇ? (Prv.).

ಹರಿಕಾನ್ತ hari-kânta. The sapphire (ಅಸಿತಾಶ್ಮ, ನೀಲ Mr. 101).

ಹರಿಕಾಱ hari-kâṟa. = ಪರಿಕಾಱ. A runner, a courier (ಜಂಘಾಕರಿಕ, ಜಂಘಿಕ Nr.); a swift, fleet man (ಜಂಘಾಲ, ಜವನ, ವೇಗಿ Hlâ.; ವೇಗಾಯಿಲ Šs.). 2, a hawker, a chandler (ವಾರ್ತಾವಹ, ವೈವಧಿಕ Nr.). 3, a spy (ಉದಾಸ್ಥಿತ, ಚರಭೇದ Nr.).

ಹರಿಕೆ harikĕ. 1. = ಪರಕೆ 1, ಹರಕೆ. A vow (My.); etc. ನರಕದಲ್ಲಿ ಬೀಳುವವನು ಹರಿಕೆ ಹೇಳಿದರೆ ತಪ್ಪೀತೇ? — ತಿರಿಕೆಯ ಕೂಳು ತಿನ್ದು, ಹರಿಕೆಯ ಕೋಣನಾದ (Prvs.).

ಹರಿಕೆ harikĕ. 2. = ಹಲಕು 3, ಹಲಿಕೆ. A kind of harrow (ಕೋಟೀಶ, ಲೋಷ್ಟಭೇದನ Hlâ.; *cf.* ಹರಗು 1).

ಹರಿಗಣ hari-gaṇa. A class of pure Kannaḍa feet (Čh.).

ಹರಿಗು harigu. = ಅರಗು 1, etc. A margin, etc. (Si. 101; *only* in Si.).

ಹರಿಗೆ harigĕ. = ಪರಿಗೆ, etc. Tbh. of ಫಲಕ. A shield (ಖೇಟಕ, ಫಲಕ, ಚರ್ಮ, ಆವರಣ Hlâ.; ಫಲಕ, ಫಲ, ಫರ, ಚರ್ಮ Nr.; ಫಲಕ, ಖೇಟಕ, etc. Mr. 292; ವಸು, ಖೇಟಕ Nn. 17; ಅಡ್ಡಣ Čt. II, 38; Kk. 40; Šm. 43; Grj. 7, 52; Bp. 61, 25).

ಹರಿಗೆಕಾಱ harigĕ-kâṟa. A man who carries a shield (Grj. 6, after 56).

ಹರಿಚನ್ದನ hari-čandana. *A sort of yellow sandal-wood* (ಬರ್ಬರ Mr. 335). 2, *one of the five trees of svarga* (see ದೇವತರು).

ಹರಿಣ hariṇa. *Greenish or yellowish white;* white. 2, *a deer, an antelope* (ಹುಲ್ಲೆ Mr. 162).

ಹರಿಣಧರ hariṇa-dhara. The moon (Bp. 5, 24).

ಹರಿಣಧರಧರ hariṇadhara-dhara. Šiva (Bp. 53, 46).

ಹರಿಣಪಕ್ಷ hariṇa-paksha. The light half of a month (Bh. 1, 3, 11).

ಹರಿಣಾಂಕ hariṇa-aṅka. The moon. (J. 25, 46). — ಹರಿಣಾಂಕ ಕುಲಜ. Arjuna (25, 46).

ಹರಿಣಿ hariṇi. *Greenish, green* (ಗಿಳಿ ಪಸುರ್ವುಗಳ ಗಱಿಯನ್ತಪ್ಪ ವರ್ಣಂ Mr. 444). 2, *a female deer or antelope,* a doe (ಮೃಗ, ಎರಳೆ Nn. 95). 3, *a kind of woman.* 4, *a golden image* (ಪಾಂಚಾಲಿಕೆ, ಪುತ್ತಳಿ 95). 5, a heap, collection, multitude (ಚಯ, ಸಮೂಹ 95; *cf.* K. ಹರಿಬ 1). 6, roundness (ವೃತ್ತ, ಬಟುಹು, ವೃತ್ತಭೇದ 95).

ಹರಿಣೀಪ್ಲುತ hariṇî-pluta. N. of a vṛitta (Čh.).

ಹರಿತ್ harit. *Green;* the colour green (ವರ್ಣ Nn. 93). 2, grass (ತೃಣ, ಹುಲ್ಲು 93). 3, beautiful (ರಮಣೀಯ, ಮನೋಹರ 93). 4, *a point of the compass, a quarter, region* (ದಿಕ್ಕು 93). 5, authority, etc. (ಅಧಿಕಾರ 93).

ಹರಿತ harita. *Green;* the colour green (ಪಚ್ಚೆ Nn. 60); grassy, verdant.

ಹರಿತಕ haritaka. A green vegetable, *a pot-herb.*

ಹರಿತಭಾವ harita-bhâva. Greenness. See ಪಸುರ್.

ಹರಿತಾಯಮಾನ haritâyamâna. Becoming green or verdant (Čpr. 4, after 49).

ಹರಿತಾಲ haritâla. = ಅರದಳ, ಅರದಾಳ, ಅರಿದಳ, ಅರಿದಾಳ, ಹರತಾಳ, ಹರಿದಳ. *Yellow orpiment or sulphuret of arsenic, Arsenicum flavum* (ಹರಿತಾಲಕ, ಅಲ, etc., ಅರಿದಾಳ Nr.). 2, a kind of pigeon of a yellowish green colour.

ಹರಿತಾಲಕ haritâlaka. = ಹರಿತಾಲ. *Yellow orpiment.* 2, a kind of pigeon.

ಹರಿತಾಲಿ haritâli. *The grass Panicum dactylon* Lin. (or Agrostis linearis Retz., ದೂರ್ವೆ, ಕಱಿಕೆ Mr. 109).

ಹರಿದಶ್ವ harit-ašva. *The sun.*

ಹರಿದಳ haridaḷa. Tbh. of ಹರಿತಾಲ. (ಹರಿತಾಲಕ, etc. Si. 333).

ಹರಿದಾಸ hari-dâsa. A slave or worshipper of Vishṇu; a celebrator of Vishṇu in his incarnations who relates his exploits with music and chanting (My.).

ಹರಿದ್ರ haridra. Yellow colour (ರಜನಿವರ್ಣ, ಪೀತ Mr. 444).

ಹರಿದ್ರಾಂಗ haridrâ-aṅga. A body to which turmeric is applied (J. 9, 42).

ಹರಿದ್ರಾಭ haridrâ-âbha. Resembling turmeric, *of a yellow colour, yellow.*

ಹರಿದ್ರಾರಾಗ haridrâ-râga. Turmeric-coloured. 2, *unsteady in affection or attachment* (like the colour of turmeric which does not last, ಸ್ಥಿರಮಲ್ಲದ ಸ್ನೇಹ ಮಾಡುವವನು Hlâ.; *cf.* ಪೀತರಾಗ).

ಹರಿದ್ರು hari-dru. *A kind of turmeric, Curcuma aromatica.*

ಹರಿದ್ರೆ haridrĕ. ಹರಿದ್ರಾ. = ಅರಸಿನ, etc. *Turmeric, Curcuma longa* Lin. (ಅರಿಸಿನ Mr. 130; *cf.* ಪಳದಿ). 2, the ink-nut tree (ಜೀವಕಿ, ಶಿವೆ, etc., ಅಣಿಲೆ Mr. 122).

ಹರಿದ್ವಾರ hari-dvâra. N. of a town and tîrtha where the Ganges finally leaves the mountainous districts for the level plains. (B. 5, 152; My.).

ಹರಿನನ್ದನ hari-nandana. Indra's son, Arjuna (J. 25, 46).

ಹರಿನಮುಚಿಭಿದ್ hari-namučibhid. The moon and Indra (Bp. 38, 1).

ಹರಿನಾದ hari-nâda. A lion's roar: a war-cry (J. 25, 46).

ಹರಿನಾಮ hari-nâma. The name or names of Vishṇu. See Prv. s. ಟೊರೋ.

ಹರಿನೀಲ hari-nîla. The sapphire (Čpr. 1, 119).

ಹರಿನೀಲಮಣಿ harinîla-maṇi. = ಹರಿನೀಲ. (J. 26, 9).

ಹರಿನ್ಮಣಿ harit-maṇi. *An emerald* (ಪಚ್ಚೆ Hlâ.).

ಹರಿಪೀಠ hari-pîṭha. A throne (My.).

ಹರಿಪ್ರಾಸ hari-prâsa. A kind of alliteration (Čh.).

ಹರಿಪ್ರಿಯೆ hari-priyĕ. *Lakshmî.*

ಹರಿಬ hariba. 1. (= ಹರಿ 5). A mass, a multitude, a number, a host, an assemblage (ತೇಂಕಿ, ಹನ್ತಿ, ಸಾಲ್, ತೋಮ, etc., ಸಮೂಹ Šs.; Bh. 3, 19, 43. 45; 7, 1, 8).

ಹರಿಬ hariba. 2. (fr. ಹರಿ 1?). Business, affair, work, concern (Čpr. 6, 26; Bh. 1, 5, 23; 4, 4, 45; 8, 3, 4; Râm. 4, 2, 25; J. 11, 12; 14, 4; 16, 26; 25, 46).

ಹರಿಬನ್ಧು hari-bandhu. Arjuna (ಫಲ್ಗುನ, etc. Mr. 264).

ಹರಿಬಿ haribi. = ಹರವಿ, etc. (My.).

ಹರಿಭಕ್ತ hari-bhakta. A worshipper of Vishṇu. (My.).

ಹರಿಮನ್ಥ hari-mantha. The tree Premna spinosa, the wood of which by attrition produces flame. See s. ಅತಿಮುಕ್ತಕ. 2, N. of a country.

ಹರಿಮನ್ಥಕ hari-manthaka. *The chick-pea, Cicer arietinum.*

ಹರಿಮಯ hari-maya. Made of, or full of, gold (J. 25, 46).

ಹರಿಯಕ್ಷ hari-aksha. = ಹರ್ಯಕ್ಷ. (ಸಿಂಹ Mr. 159; Râm. 6, 19, 17).

ಹರಿಯಣ hariyaṇa. = ಪರಿಯಣ, etc. A plate-like vessel of metal or wood (Bh. 4, 4, 37; Râm. 6, 55, 38). ಮರದ ಹರಿಯಣದೊಳ್ ಉಣ್ಣಂ (Šmd. 287).

ಹರಿಯಾಣ hariyâṇa. = ಹರಿಯಣ, etc. (Bp. 8, 14).

ಹರಿಯಿಸು hariyisu. = ಪರಿಯಿಸು. To cause to flow (My.).

ಹರಿಯುವಿಕೆ hariyuvikĕ. Running; flowing. ನೀರಿನ ಹರಿಯುವಿಕೆ (G. 319).

ಹರಿವಂಶ hari-vaṁśa. The family of Kṛishṇa. 2, N. of a poem in Saṁskṛita. 3, N. of a poem in Kannaḍa by Guṇavarma (Šmd. 144).

ಹರಿವತ್ hari-vat. *Indra.*

ಹರಿವರ hari-vara. N. of a vṛitta (Čh.).

ಹರಿವರುಷ hari-varusha. Tbh. of ಹರಿವರ್ಷ. (Čpr. 3, after 32).

ಹರಿವರ್ಷ hari-varsha. One of the divisions of the known continent.

ಹರಿವಾಣ harivâṇa. = ಅರಿವಾಣ, ಹರಿಯಣ, etc. (C.; B. 4, 74; Tĕ.). ಚಿನ್ನದ ಹರಿವಾಣವಾದರೂ ಮಣ್ಣಿನ ಗೋಡೆಗೆ ಒರಗಬೇಕು.— ಹಂಚಿನಲ್ಲಿ ಉಣುವವನಿಗೆ ಹರಿವಾಣವು ಯಾಕೆ?— ಹಬ್ಬದ ಊಟ, ಹರಿವಾಣದ ವೀಳ್ಯ (Prvs.).

ಹರಿವಾಲುಕ hari-vâluka. *A perfume, the fragrant barl of Feronia elephantum.*

ಹರಿವಾಸರ hari-vâsara. Vishṇu's day, the eleventh or twelfth lunar day when upavâsa, etc. is performed (J. 29, 26; My.).

ಹರಿವಿ harivi. = ಹರವಿ, etc. (My.).

ಹರಿವಿಷ್ಟರ hari-vishṭara. A throne (My.).

ಹರಿವು harivu. 1. = ಪರಿವು. Running; flowing, streaming; current. ನದಿಯ ಹರಿವು (ಸ್ರೋತಸ್ Nr.).

ಹರಿವು harivu. 2. (fr. ಹರಿ 4). = ಹರೆವು. Spreading, extending; increase; dispersing; going away; end; ruin (Bp. 27, 2; J. 26, 58; Bh. 1, 8, 30. 55; 7, 1, 2). — ಹರಿವೊಲೆ. -ಒಲೆ. An extensive, long fire-place built in the ground (My.).

ಹರಿವೇಗ hari-vêga. The velocity of the wind (J. 46, 25).

ಹರಿಶರ hari-śara. Having Vishṇu for an arrow: Šiva. (Ššv. 4, 122).

ಹರಿಶ್ಚನ್ದ್ರ hari-ś-čandra. Having golden-coloured splendor. 2, N. of a king of the solar dynasty. See J. 2, 52; 11, 30; 18, 54; Mr. s. ಅಬಿುವರ್.

ಹರಿಸ harisa. = ಹರುಸ. Tbh. of ಹರ್ಷ. (ಸನ್ತಸ, ಸನ್ತೋಷ Šs.; see ಬೀಗು 2).

ಹರಿಸು harisu. 1. = ಹರಸು. To bless (B. 5, 190).

ಹರಿಸು harisu. 2. = ಅರಿಸು 3, ಪರಿಸು 1. To cause to run or flow (Bp. 21, 38; J. 4, 18. 27; 22, 25; Bh. 1, 10, 29; My.).

ಹರಿಸು harisu. 3. To cause to disperse, go away or end; to destroy. See *e. g.* ಸಾಲ-; Bp. 23, 22; 34, 31. 34; 54, 48; 57, 25. 28; Bh. 10, 6, 3.

ಹರಿಸು harisu. To remove, to take away, to carry off, etc.; to divide (ಭಾಗಿಸು Mr. 349). See *e. g.* ಅಪ-, ಪರಿ-, ಸಂ-.

ಹರಿಸೇವೆ hari-sêvĕ. Service or worship of Vishṇu. ಹಾರುವರ ಮನೇಲಿ ಹರಿಸೇವೆ ಆದರೆ ಮೂಟಿನಾಯಿಗೆ ಒಡ್ಯಾಟ (Prv.).

ಹರಿಹ hariha. Running; flowing, streaming; current. ತೊಱೆಯ ಹರಿಹ (ಓಘ, ಪ್ರವಾಹ, ವೇಣಿ, ಧಾರೆ, ಸ್ರೋತಸ್, ರಯ Hlâ.).

ಹರಿಹಯ hari-haya. *Indra.*

ಹರಿಹರ hari-hara. The remover of Vishṇu: Šiva (Bp. 54, 45; 57, 27. 28).

ಹರಿಹು harihu. Running, run, velocity; flying. ಭಣ್ಡಿಯ (*i. e.* ಬಣ್ಡಿಯ) ಹರಿಹು (ಜಯನ, ಪ್ರವಹಣ Mr. 284).

ಹರೀತಕಿ harîtaki. *The yellow myrobalan tree, Terminalia chebula* (ಅಣಿಲೆ Nn. 63, o. r. ಅಳಿಲೆ).

ಹರು haru. = ಹರ 2, etc. Running; flowing. — ಹರುಕಣಿ. = ಹರಿಕಣಿ. A channel to carry off water (ಯಾನ, ಸಾರಣಿ Mr. 422). — ಹರುದಾರಿ. = ಹರಿದಾರಿ. ಎರಡು ಹರುದಾರಿ (ಗೋರುತ G.).

ಹರುಬಿ harubi. = ಹರವಿ, etc. (My.).

ಹರುಬು harubu. Tbh. of ಪರ್ವ. A feast. ತಱುಬು ಇದ್ದರೆ ಹರುಬು ನಿನ್ನೀತೇ? (Prv.).

ಹರುವಿ haruvi. = ಹರುಬಿ, etc. (My.).

ಹರುವು haruvu. = ಹರ್ವು 2. A way, a means, an expedient (Bh. 1, 8, 21; 8, 26, 22; My.; Tĕ.).

ಹರುಷ harusha. Tbh. of ಹರ್ಷ. (ಹರ್ಷ Nn. 155; ಸನ್ತಸ Čt. II, 64; Bp. 44, 70; 47, 30). ಪುರುಷನಾದರೆ ಹರುಷ ಬೇಕು (Prv.). — ಹರುಷ ತಾಳ್. To get joy, to begin to rejoice (Bp. 37, 24). — ಹರುಷಪ್ಪಡು. -ಂ-ಪಡು. To experience or feel joy (Bp. 11, 15; 37, 51; 52, 40). — ಹರುಷಮ್ಬೊಱು. -ಂ-. = ಹರುಷ ತಾಳ್. (Bp. 4, 58; 60, 33). — ಹರುಷವೊನ್ದು. -ಒನ್ದು. = ಹರುಷ ತಾಳ್. (Bp. 36, 30). — ಹರುಷ ಹೊದ್ದು. = ಹರುಷ ತಾಳ್. (Bp. 32, 45).

ಹರುಷಿತ harushita. Tbh. of ಹರ್ಷಿತ. (Bp. 5, 58. 70; 21, 6; 22, 63; see ರೋಮ-). Feminine ಹರುಷಿತೆ (44, 42).

ಹರುಸ harusa. Tbh. of ಹರ್ಷ (Šmd. 335. 336).

ಹರೆ harĕ. 1. = ಪರೆ 1, ಹರಿ 4. To spread (v. i.), to extend;—to disperse, to go away; etc. (Bp. 21, 41; Râm. 3, 2, 24; Bh. 1, 5, 5; 8, 26, 56; B. 3, 125). P. ps. ಹರದು, ಹರೆದು. ಹರೆವ ಕತ್ತಲೆ (ಕ್ಷೀಣತಮಸ, ಅವತಮಸ Nr.). ಹರೆದ ಕತ್ತಲೆ (ಅವತಮಸ, ಕಡಿಮೆಯಾದ ಕತ್ತಲೆ G.). — ಹರೆಧಚ್ಚಕ. (*i. e.* ಹರೆದ ಹಚ್ಚಕ). = ಹರಿಧಚ್ಚಕ. A creeping perennial herb, Blepharis molluginifolia Pers. (Z.).

ಹರೆ harĕ. 2. = ಪರೆ 2. To begin to shine, to dawn (C., as ಬೆಳಗು-, ರಶ್ಮಿ-).

ಹರೆ harĕ. 3. Dawn, break of day (C.).

ಹರೆತನ harĕtana. = ಹರೇತನ. Youth (ತಾರುಣ್ಯ Čb.).

ಹರೆಯ harĕya. = ಹರಯ. Tbh. of ಪ್ರಾಯ. The time of youth, the prime of life, maturity (Grj. 4, 57; Bp. 3, 41;

9, 33; 40, 15. 75; C.; B. 3, 51; 5, 238. 293). ಹರೆಯದ ಎತ್ತು (ಆರ್ಷಭ್ಯ, ಹೋರಿ, ಜಾತೋಕ್ಷ G.). See ಎಳೆವರೆಯ, ನಡುಹರೆಯ. ಹರೆಯ ಹೋದವಂ (ವೃದ್ಧ, ಸ್ಥವಿರ Mr. 310). ಹರೆಯಕ್ಕೆ ಹನ್ನಿ ಹಣವಡ್ಡ.— ಹಾಗೆ ಕುಣಿಯುವ ಬಡ್ಡಿ ಹರೆಯಕ್ಕೆ ಬನ್ದರೆ ಬಿಟ್ಟಾಳೇ? (Prvs.). — ಹರೆಯದವ. -ಅವ. A young man (My.; B. 5, 147). — ಹರೆಯದವಳು. -ಅವಳು. A young woman (My.; ಯುವತಿ G.). — ಹರೆಯಬೋಗುಹ. -ಪೋಗುಹ. The passing away of the prime of life, growing old, etc. (ಜ್ಯಾನಿ, ಜೀರ್ಣಿ Nr.). — ಹರೆಯಮ್ಬಡೆ. -ಂ-ಪಡೆ. To become ripe (Grj. 5, after 76). — ಹರೆಯಮ್ಬೋಗು. -ಂ-ಪೋಗು. The prime of life to pass away, etc. ಹರೆಯವ್ಬೋದಾತ (ಪ್ರವಯಸ್, ಸ್ಥವಿರ, ವೃದ್ಧ, ಯಾತಯಾಮ Hlâ.). — ಹರೇದವ. (*i. e.* ಹರೆಯದವ). A young man (ಯುವ Čb.). — ಹರೇದವಳು. -ಅವಳು. A young woman (ಯುವತಿ Čb.).

ಹರೆವು harĕvu. = ಹರಿವು 2. Spreading; increase (see ಮುನಿಸು-); dispersion, going away; end.

ಹರೇಣು harêṇu. *A sort of drug or medicinal substance* (= ರೇಣುಕಾ). 2, *pease, pulse* (= ಕಲಾಯ; ಬಟಗಡ್ಲೇ ಕಾಯಿ G.).

ಹರೇತನ harêtana. = ಹರಿತನ. (ಪ್ರಾಯ Čb.).

ಹಱ haṟa. 1. = ಹಱದು, etc. P. p. of ಹಱಿ 1, in ಹಱ ಕೊಳ್ಳು (C.; B. 3, 37; 4, 78. 170; 5, 250).

ಹಱ haṟa. 2. = ಪಱು 4, etc. Flying; etc., etc. — ಹಱಗಲ್. -ಕಲ್. ಹಱಗಲು. = ಪಱುಗೋಲ್, etc. A round basket boat lined with leather, a boat made of wicker work covered with hides (My.). — ಹಱಗಲುಕಡ. A ferry for such a boat (My.). — ಹಱಗೋಲ್. -ಕೋಲ್. ಹಱಗೋಲು. = ಹಱಗಲ್. (My.; ಪೋತ G.; B. 5, 298). ಕೆಸಱಿಗೆ ಹಱಗೋಲು ಬೇಕೇ? (Prv.).

ಹಱಕ haṟaka. 1. = ಹಱಕು, etc. Rent or tattered or toused state; a tatter, a rag. — ಹಱಕಬಟ್ಟೆ. A torn cloth (My.). — ಹಱಕ ಬಱಕ. reit. (My.).

ಹಱಕ haṟaku-a3. 2. = ಅಱಕ 2. A man of whom anything is rent. See ಕಚ್ಚೆ-, ಸೋಟೆ-.

ಹಱಕಿ haṟaki. = ಅಱಕಿ, ಹಱಿಕಿ. A woman of whom anything is rent. See ಕಚ್ಚೆ-, ಸೋಟೆ-.

ಹಱಕು haṟaku. = ಅಱಕು, ಪಱಕು, ಪಱುಕು, ಹಱಿಕೆ 1 q. v., ಹಱಿಕು, ಹಱುಕು, ಹರ್ಕು. (C.). ಹಱಕಿನಲ್ಲಿ ಇಲಿ ಕಡಿಯಿತು (Prv.). ತಮ್ಮಾ, ಹೊದ್ದು ಕೊಳ್ಳುವ ನನ್ನ ಹಱಕ ದೋತರಾ ತನ್ದು ಕೊಡು (B. 3, 25). See Prv. s. ಮುಱಕ. — ಹಱಕುಅಱಿವೆ. A torn or tattered cloth. ಹಱಕುಅಱಿವೆಯ ತುಣುಕು (ಕರ್ಪಟ G.). — ಹಱಕುಜಾಜೀಮು. A tattered floor-cloth (B. 5, 126). — ಹಱಕುತೊಗಲು. Rent leather (Dp. 54). — ಹಱಕು ಪಱಕು. rep. — ಹಱಕು ಪಱಕುಬಟ್ಟೆ. A cloth quite torn or tattered (C.). — ಹಱಕುಪುಸ್ತಕ. A torn book (B. 4, 44). — ಹಱಕು ಮಾತು. A speech that lacks coherency (ಅಶ್ಲೀಲ, ಶಿಥಿಲಭಾಷಣ G.). — ಹಱಕುಮೊಱ. A worn out dust-fan (My.). — ಹಱಕುವಸ್ತ್ರ. = ಹಱಕುಅಱಿವೆ. (C.; B. 5, 76).

ಹಱತ haṟata. = ಹಱಿತ, ಹರ್ತ. Cutting: sharpness (My.). ಹಱತವಾದ ಹದವುಳ್ಳ ಕೊನೆ (ತೀಕ್ಷ್ಣಾಗ್ರ Si. 306).

ಹಱದು haṟadu. = ಹಱಿದು. P. p. of ಹಱಿ 1. (B. 1, 23). ಶಿವಾ ಎನ್ದರೆ ಸೆಱಗು ಸುತ್ತಿ ಕೊಣ್ಡ, ಭವಾ ಎನ್ದರೆ ಭೈರವಾಸ ಹಱದು ಬಿಟ್ಟ (Prv.).

ಹಱಿ haṟi. 1. = ಅಱಿ 2, ಪಱಿ 1 q. v. To tear (v. t.), to rend, to break, to slit, etc.; to pluck (Grj. 2, after 106; Bh. 3, 13, 21; B. 3, 8; My.). ಪತಿಶ್ವನ ಕೊರಳ ನೇಣ ಹಱಿದ ನದಿ (ವಿಪಾಶೆ Nr.). ಇಱಿದರೆಯು ಏಱಿಲ್ಲ, ಹಱಿದರೆಯು ಸೀಳಿಲ್ಲ (fire, Sp.). 2, to cut, as a knife, etc. (C.). ಹಱಿವ ಗರಗಸಿನಲ್ಲಿ ತಿರವನೊಡ್ಡಲು ಬಹುದು (Dp. 172). 3, to be torn or rent; to be severed, to break (C.). ತಲೆ ಹಱಿದು ಆಡುವ ಅಟ್ಟೆ (ಕಬನ್ಧ Nr.). ಹಱಿಯೋ ಪರಿಯನ್ತರ ಎಱಿಯ ಬಾರದು, ಮುಱಿಯೋ ಪರಿಯನ್ತರ ಬೊಗ್ಗಿಸ ಬಾರದು.— ತೆಪ್ಪ ಹಱಿದರೆ ದೋಣಿ.— ತೆಪ್ಪ ಹಱಿದರೆ ಮುಪ್ಪಿನವನೇ ಸಾಯುವನೋ? (Prvs.). ಹಱಿದ ವಸ್ತ್ರಗಳನ್ನು ನೆಟ್ಟಗೆ ಮಾಡುತ್ತಾಳೆ (B. 5, 294). P. ps. ಹಱದು, ಹಱಿದು.

ಹಱಿ haṟi. 2. = ಪಱಿ 2, ಹಱ 1, etc., in ಹಱಿ ಹಱಿದು (My.).

ಹಱಿ haṟi. 3. = ಪಱಿ 3. Tearing, etc.; the state of being torn, etc. — ಹಱಿಗಲ್ಲು. -ಕಲ್ಲು. A slit or split stone (Râm. 6, 37, 15). — ಹಱಿಗವಿ. -ಕವಿ. A break-poet: a paltry poet (Čh. v. 19; Grj. 1, 30). — ಹಱಿದಲೆಯ. -ತಲೆಯ. (Šmd. 95). A man whose head has been severed from the body.

ಹಱಿ haṟi. 4. = ಹಱ 2, etc. — ಹಱಿಗಲ್. -ಕಲ್. ಹಱಿಗಲು. = ಹಱಗಲ್. (My.). — ಹಱಿಗೋಲ್. -ಕೋಲ್. ಹಱಿಗೋಲು. = ಹಱಿಗಲ್. (J. 12, 14; My.; ಉಡುಪ, ಪ್ಲವ, ಕೋಲ, ತೆಪ್ಪ Si. 84; ಪೋತ 422).

ಹಱಿಕಿ haṟiki. = ಹಱಕಿ. See *e. g.* ಕಿವಿ-.

ಹಱಿಕು haṟiku. = ಅಱಿಕು, ಹಱಕ 1, etc. — ಹಱಿಕ ಗಡ್ಡ. A toused, disheveled beard (Bp. 58, 49).

ಹಱಿತ haṟita. = ಹಱತ. (My.; ಕೋಣ, ಪಾಲಿ, ಅಶ್ರಿ, ಕೋಟಿ, ಅಂಚು, ಆಯುಧಗಳ ಬಾಯಿಧಾರೆ Si. 291). ಹಱಿತವಾಗಿರುವ ಆಯುಧಾದಿಗಳು (ತೀಕ್ಷ್ಣ 420).

ಹಱಿವು haṟivu. = ಪಱಿವು. Tearing, etc.; being rent or broken (Bh. 3, 13, 21).

ಹಱಿವೆ haṟivĕ. = ಅಱಿವೆ 4 (see corrections), ಹಱುವೆ, ಹಱುಹೆ, ಅರ್ವೆ. A common potherb, Amarantus oleraceus Willd. (C.). ಪಾಲಿನಲ್ಲಿ ಹಱಿವೆಯಾದರೂ ಹಾಕ ಬಾರದು (Prv.). — ಹಱಿವೆಪಲ್ಯ. = ಹಱಿವೆ. (C.). — ಹಱಿವೆಸೊಪ್ಪು. = ಹಱಿವೆಪಲ್ಯ. (C.).

ಹಱಿಸು haṟisu. To cause to tear or rend (My.).

ಹಱು haṟu. = ಪಱು, etc. — ಹಱುಗಲ್, -ಕಲ್. ಹಱುಗಲು. = ಹಱಿಗಲ್ (My.). ಹಱುಗಲಿಕ್ಕುವ ನೀರು (ನಾವ್ಯ); ಹಱುಗಲೇಱುವಾತ (ನಾಪಾರೋಹ, ನಾವಿಕ Hlâ.). — ಹಱುಗೊಲ್. -ಕೊಲ್. = ಹಱುಗಲ್. (ನೌ, ತರಣಿ, ತರಿ Nr.). ಹಱುಗೊಲನೆ ಜೋಗಯಿಸಿ ಕೊಳುತಲಿ ತೊಱೆಯ ದಾಣ್ಟುವರೂ (Prll. 12, 14). — ಹಱುಗೋಲ್. -ಕೋಲ್. ಹಱುಗೋಲು. = ಹಱುಗೊಲ್. (Bp. 32, 33; My.).

ಹಱುಕು haṟuku. = ಅಱುಕು, ಹಱಕು, etc. — ಹಱುಕ ಗಡ್ಡ. = ಹಱಿಕ ಗಡ್ಡ. (Bp. 20, 11). — ಹಱುಕು ಕಿವಿ. A slit ear (My.). — ಹಱುಕು ತುಟಿ. A slit lip (My.). — ಹಱುಕು ಬಟ್ಟೆ. A torn or tattered cloth (My.; ನಕ್ತಕ, ಕರ್ಪಟ (Si. 223). — ಹಱುಕು ಮೂಗು. A rent nose (My.).

ಹಱುವೆ haṟuvĕ. = ಹಱಿವೆ, etc. (My.). See ಮುರ-.

ಹಱುಹೆ haṟuhĕ. = ಹಱುವೆ, etc. See ಮುರ-.

ಹಱೆ haṟĕ. = ಪಱೆ 1. A drum (Râm. 3, 6, 8; 11, 1, 16). ಹಱೆಯ ಧ್ವನಿ (ತೂರ್ಯರವ, ಆಡಮ್ಬರ Nr.). ಹಱೆಯ ಕುಡುಹು (ದಣ್ಡ Mr. 525). (ಕೃಷ್ಣನ) ರವಮಿಕ್ಕುವ ಹಱೆ ದುನ್ದುಭಿಯೆನಿಕ್ಕು (Mr. 20).

ಹರ್ har. = ಹರ 2, etc. — ಹರ್ನಾಳಿಗೆ. = ಹರನಾಳಿಗೆ. (S. Mhr.).

ಹರ್ಕು harku. = ಹಱಕು, etc. ಪುರ್ಕು ಅನ್ದರೆ ಹರ್ಕು ಮುಚ್ಚೀತೇ? (Prv.).

ಹರ್ಡೆ harḍĕ. = ಹರಡೆ, etc. — ಹರ್ಡೆಕಾಯಿಮರ. The ink-nut tree (St. & Pl.).

ಹರ್ತ harta. = ಹಱತ, etc. (My.).

ಹರ್ತ harta. Tbh. of ಹರ್ತೃ. See Bp. 54, 4; ವಿಶ್ವ-.

ಹರ್ತವ್ಯ hartavya. To be taken away or removed, etc. See ಪರಿ-.

ಹರ್ತೃ hartṛi. One who brings or conveys; one who takes or receives; one who seizes; a remover; a robber; a destroyer (My.).

ಹರ್ಮ್ಯ harmya. *A mansion, a palace,* any large building or residence of a man of wealth (ಸೌಧ, ಉಪ್ಪರಿಗೆ Nn. 94; ಮಾಡ Čt. I, 67).

ಹರ್ಯಕ್ಷ hari-aksha. = ಹರಿಯಕ್ಷ. *A lion.*

ಹರ್ಱ್ harṟ. A sound made by monkeys from disgust or anger (Grj. 1, after 131; Rŝv. 5, after 55; 9, 29). *Cf.* ಪಱ್.

ಹರ್ವು harvu. 1. = ಪರ್ವು 1, ಹರವು. (My., especially as v. t.).

ಹರ್ವು harvu. 2. = ಹರುವು. (My.).

ಹರ್ವೆ harvĕ. = ಹಱುವೆ, etc. ಪರ್ವಕಾಲದಲ್ಲಿ ಹರ್ವೆಸೊಪ್ಪು ತಿನ್ದರೂ ಗರ್ವ ಹೋದೀತೇ? (Prv.).

ಹರ್ಷ harsha. = ಪರುಸ 2, ಹರಿಸ, ಹರುಷ, ಹರುಸ. Bristling, erection (of the hair, etc.). 2, thrilling, thrill, rapture, *delight, glee, joy, pleasure, gladness.* See ಅಗಿ, ಅದುಕುಳಿ.

ಹರ್ಷಗರ್ಭ harsha-garbha. Filled with joy (Čpr. 3, 84).

ಹರ್ಷಣ harshaṇa. Causing to bristle or stand erect; bristling, becoming erect. 2, causing delight, gladdening, delightful. 3, the fourteenth of the astronomical yôgas. 4, a morbid affection of the eyes. See ರೋಮ-.

ಹರ್ಷಭಾವ harsha-bhâva. The state of being happy. See ಬೀಗು 2.

ಹರ್ಷಮಾಣ harshamâṇa. *Rejoicing, joyful, happy.*

ಹರ್ಷಾಬ್ಧಿ harsha-abdhi. An ocean of delight (My.).

ಹರ್ಷಾಶ್ರು harsha-aśru. Tears of joy (My.).

ಹರ್ಷಿತ harshita. = ಹರುಷಿತ. Bristled, become erect. 2, made glad or happy, gladdened, delighted, happy.

ಹರ್ಷಿಸು harshisu. To rejoice, to exult, to be glad or pleased (My.).

ಹರ್ಷೋತ್ಸವ harsha-utsava. Excess of happiness, abundance of joy (My.).

ಹಲ್ hal. = ಪಲ್, ಹಲು 1, ಹಲ್ಲು. A tooth (ದಶನ, ದ್ವಿಜ, ದನ್ತ, ರದ, ರದನ Hlâ., Mr. 318; ದನ್ತ, ದ್ವಿಜ Nr.; ದ್ವಿಜ, ದನ್ತ Nn. 36; ದನ್ತ, ದಶನ Nn. 81; Bp. 54, 52). ಅಱು ಹಲ್ಲ ಹೋರಿ (ಷೋಡತ್, ಷಡ್ದಶನ Hlâ.). ಕಪ್ಪರದಲುಪ್ಪುರು, ಒಪ್ಪರದಿ ನಡೆವರು, ತಪ್ಪಿದರೆ ಹಲ್ಲ ಕಳೆವರು; ಮಹಾತ್ಮರ ಒಪ್ಪವಂ ನೋಡು! (Sp.). — ಹಲ್ಕಡಿ. To grind or gnash the teeth (from anger or fear, My.). — ಹಲ್ಕುರು. A gum-boil (My.).

ಹಲ್ hal. A consonant. (My.). 2, the small oblique stroke at the root of a consonant, denoting that it has not the inherent short ಅ, or that it is but a half-letter (Mhr.). — ಹಲನ್ತ. -ಅನ್ತ. Ending in a consonant (My.). — ಹಲ್ಸನ್ಧಿ. The junction of consonants (in grammar, My.).

ಹಲ hala. 1. = ಪಲ 1, etc., ಹಲು 2. Much; many, etc. — ಹಲಬರ್. ಹಲಬರು. = ಪಲಬರ್, etc. Many or several persons (Bp. 38, 15; 44, 49; 56, 26; My.). — ಹಲರು. = ಪಲರ್, ಹಲಬರ್. (Bhâgavata 3, 2, 48). — ಹಲವಂಗ. -ಅಂಗ. = ಪಲವಂಗ. Various kinds or ways (Bp. 8, 44). — ಹಲವನಾಡು. -ಆಡು. To utter many words (Bp. 56, 19). — ಹಲವರ್. ಹಲವರು. = ಹಲಬರ್, etc. (C.; B. 2, 24). ಹಲವರ ಸಂಗ ಕಲಹಕ್ಕೆ ಕಾರಣ (Prv.). — ಹಲವರ್ಥ. -ಅರ್ಥ. Many meanings (Mr. 465 s. ಬೆಡಗು). — ಹಲವಿರುಳು. -ಇರುಳು. Many nights (ಗಣರಾತ್ರ Mr. 66). — ಹಲವು. = ಪಲವು, ಹಲ. (ಭೂಮನ್, ಪ್ರಾಯ Nr.; ನಾನಾ Nn. 162; Bp. 19, 42; ಅನೇಕ G.; C.). ಹಲವಾನೆ (ಘಟೆ Hlâ.). ಹಲವನೀಡ ಆಕಳ್ (ಪರೇಷ್ಟುಕೆ Nr.). — ಹಲವು ಕಾಲ. A long time (Bp. 57, 15). ಹಲವು ಕಾಲದ ಹಗೆತನ ಮಾಡಿ ಮಱುಗುಹ (ಅನುಶಯ Nr.). ಹಲವು ಕಾಲಕೆ ಹರಸಿ ಹೆತ್ತರು (Prll. 3, 12). — ಹಲವು ಕೆಲವು. Some, several (ಕೆಲ ಕೆಲವು Śmd. 47. 53 Cm.; ಕತಿಪಯ Čt. I, 91). — ಹಲವು ಚಿತ್ತಾರ. Many pictures. ಹಲವು ಚಿತ್ತಾರ ಮಸಿ ನುಂಗಿತು (Prv.). — ಹಲವು ದೇವರು. Many gods. ಹಲವು ದೇವರನು ನಮ್ಬಿ, ಹಾರುವ ಕೆಟ್ಟ; ಹಾರುವನನ್ನು ನಮ್ಬಿ, ಹಲವರು ಕೆಟ್ಟರು (Prv.). — ಹಲವು ಧಾನ್ಯ. Many kinds of corn or rice; much corn or rice (ಬಹುಧಾನ್ಯ Nn. 132). ಹಲವು ಧಾನ್ಯಂಗಳ್ ಅಱುವತ್ತು ದಿವಸಕ್ಕೆ ಬೆಳವವು (ಕೆಯ್ಗಳ್) ಷಷ್ಟಿಕ್ಯಮ್ ಎನಿಕ್ಕು (Mr. 94). — ಹಲವು ಪದ. Many feet or syllables, etc. ಸಮಾಸ ಹಿರಿದಾದ ಹಲವು ಪದಂಗಳು (ದಣ್ಡಕ Hlâ.). — ಹಲವು ಪದಾರ್ಥ. Many or several things, etc. ಹಲವು ಪದಾರ್ಥಂಗಳ್ ಒಬ್ಬುಳಿಗೂಡಿ ಕ್ರಿಯೆಯ ನುಡಿಹ ಎಮ್ಬುದಱಿಲ್ಲಿ ಚಶಬ್ದಮೆನಿಸುಗು (Nr.). — ಹಲವು ಪ್ರಕಾರ. Various manners or kinds. ಹಲವು ಪ್ರಕಾರಮಾದುದು (ಉಚ್ಚಾವಚ, ನೈಕಭೇದ Nr.). — ಹಲವು ಬಗೆ. = ಹಲವು ಪ್ರಕಾರ. ಹಲವು ಬಗೆ ಆದುದು (ಉಚ್ಚಾವಚ, etc. Si. 376). — ಹಲವು ಭಂಗ. Much discomfiture or trouble. ಹಾರುವಯ್ಯನ ಸಂಗ ಹಲವು ಭಂಗ (Prv.). — ಹಲವು ಮಕ್ಕಳು. Many children. ಹಲವು ಮಕ್ಕಳ ತನ್ದೆ (Sp.). ಹಲವು ಮಕ್ಕಳ ಬಳ್ಳಿ, the shrub Asparagus sarmentosus Lin. (St. & Pl.). — ಹಲವು ಮಾತು. Many words (Bp. 38, 24; 42, 37; J. 5, 62; 32, 17; Bh. 2, 13, 45). — ಹಲವು ಯೋಜನ. Many yôjanas (Bh. 1, 8, 93). — ಹಲವು ಲೋಕ. Many worlds (J. 2, 59). — ಹಲವು ವರ್ಣ. Various colours; a variegated colour (ಶಬಲ Mr. 444). — ಹಲವು ಸಮಗಾಱರು. Many shoemakers. ಹಲವು ಸಮಗಾಱರು ತೊಗಲು ಹದಗೆಡಿಸಿದರು (Prv.). — ಹಲವುಸುರ್. -ಉಸುರ್. To utter many words (Bp. 27, 6; 40, 50; 45, 48). — ಹಲವು ಸೂಲ್. Many pregnancies. ಹಲವು ಸೂಲಾವು (ಪರೇಷ್ಟುಕೆ, etc. Hlâ.). ಹಲವು ಸೂಲಾಕಳು (ಪರೇಷ್ಟುಕೆ Mr. 181). — ಹಲವು ಸೂೞ್. Many times (Bp. 35, 11). — ಹಲವು ಹರವಿ. Many vessels (Bh. 1, 10, 25). — ಹಲವು ಹಳ್ಳ. Many brooks. ಹಲವು ಹಳ್ಳ ಕೂಡಿ ಒನ್ದು ಹೊೞೆ ಆಯಿತು (Prv.).

ಹಲ hala. 2. (= ಪಲ 2). — ಹಲ ಹಲ. rep. A sound to imitate idle clamour (My.).

ಹಲ hala. 1. = ಪಲ. (My.). ಹತ್ತು ಹಲ ತಾಮ್ರದೊಳು ನೀಲಂ (Mr. 60). ಹಲತೂಕ ಬೆಳ್ಳಿ (ಶತಮಾನ Si. 495). ತೊಲೆಯಿನ್ದ ಹಲವಾಗುತ್ತದೆ, ಹೊಲೆಯಿನ್ದ ಭ್ರಷ್ಟವಾಗುತ್ತದೆ (Prv.).

ಹಲ hala. 2. *A plough.* ನಿಲವಿಲ್ಲದೆ ಹಲದಿನ್ದ ಹೊಲದ ಉಕ್ಕೆ; ನಿಲ ನೋಡಿ, ಸಂಸಾರ.— ನೆಲಕ್ಕೆ ಹಲ, ರಾಜ್ಯಕ್ಕೆ ಬಲ (Prvs.). 2, ugliness, deformity (ವೈರೂಪ್ಯ).

ಹಲಕು halaku. 1. To climb a tree (ವೃಕ್ಷಾರೋಹಣ Śmd. Dh., o. r. ವೃಕ್ಷಾರೋಹ).

ಹಲಕು halaku. 2. A certain member of the body (ಶರೀರಾಂಗಭೇದ Šmd. Dh.); the lower part of the cheek (ಕಪಾಲದ ಕೆಳಗಿರುವ ಸ್ಥಾನ S. Mhr.; T. ಅಲಗು, the jaw-bones). See Râm. 6, 30, 30.

ಹಲಕು halaku. 3. = ಹಲಿಕೆ, q. v. (S. Mhr.).

ಹಲಗತ್ತಿ halagatti. A shrubby creeper (the seeds of which are clothed with a silky wool) of the family Asclepiadeae, perhaps Toxocarpus Kleinii Wight. and Arn. (Z.).

ಹಲಗೆ halagĕ. = ಪಲಗೆ, etc. Tbh. of ಫಲಕ (Šmd. 25. 191. 338; ಫಲಂಕ Nn. 134). A plank, etc. (My.). ನಸೆ ಇದ್ದ ಹಲಗೆ ಸಿಕ್ಕಿದರೆ ಹಸೆ ಯಾಕೆ? (Prv.). See Bp. 33, 13; 39, 62; 43, 3; Bh. 2, 13, 46; B. 5, 135. 2, a kind of tabor (S. Mhr.; Mhr. ಹಲಕೀ). — ಹಲಗೆಮಣಿದೊಟ್ಟಿಲ್. -ತೊಟ್ಟಿಲ್. A cradle with jewel-boards (Prll. 3, 27). — ಹಲಗೆಸೇರುವೆ. A ceiling of boards (My.).

ಹಲಗೆಕಾಱ halagĕ-kâṟa. A man who carries a shield (Bp. 16, 13).

ಹಲಚಿ halači. The state of being like a board: flatness (B. 3, 24. 108; 5, 21. 174. 258). — ಹಲಚಿಮೂಗಿನವ. A flat-nosed man (ಅವಟೀಟ G.).

ಹಲದಣ್ಡ hala-daṇḍa. The pole or shaft of a plough (ನೇಗಿಲ ಈಸು Nn. 7).

ಹಲದಿ haladi. = ಪಳದಿ, etc. Turmeric (Sk. ಹಲದ್ದೀ). — ಹಲದಿ ಅಡವಿಬೆಣ್ಡೆ. A small tree, Erinocarpus nimmoanus Grah. (Z.).

ಹಲಧರ hala-dhara. Balarâma (J. 7, 2. 20).

ಹಲಪಿ halapi. A round potsherd used in the ಕುಣ್ಟಹಲಪಿಯಾಟ (S. Mhr.).

ಹಲಮುಖಿ hala-mukhi. N. of a vṛitta (Čh.).

ಹಲಸನ್ದಿ halasandi. = ಅಲಸನ್ದಿ, etc. (My.).

ಹಲಸನ್ದೆ halasandĕ. = ಹಲಸನ್ದಿ, etc. (My.).

ಹಲಸಿಗ halasiga. (fr. ಪಲಾಶ). A man who deals in medicinal leaves, a doctor (Šâstrasâra in W. v. 1647).

ಹಲಸು halasu. = ಹಳಸು. Tbh. of ಪನಸ. The jack tree (C.; Bp. 19, 66; ಪನಸ Mr. 119) and its fruit. ಹಲಸು ತಿನ್ದರೆ ಹೊಲಸು ಹೋದೀತೇ? (Prv.). ಆವ ಕಾಲದಲಾದಡೆಯು ಫಲಮಿೂವುತಿಪ ಹಲಸುಗಳು (Prll. 3, 3). — ಹಲಸಿನ ಮರ. The jack tree (C.). — ಹಲಸಿನ ಹಣ್ಣು. A ripe jack fruit (C.; B. 5, 142). ನಿನ್ನ ಸಾಲಕ್ಕೆ ನನ್ನ ಹಲಸಿನ ಹಣ್ಣು (Prv.).

ಹಲಹು halahu. To blame (?) or to destroy (? Râm. 6, 51, 10).

ಹಲಾ halâ. *A vocative particle used in addressing a female friend* (in theatrical language).

ಹಲಾಕು halâku. Oppressed, overcome, spent through sickness, labour, etc., ruined, destroyed, lost (My.; Tĕ.; T. ಅಲಾಕ್ಕು; Mhr., H. ಹಲಾಕ).

ಹಲಾನ್ವಿತವೃಷಭಯುಗ್ಮ hala-anvita-vṛishabha-yugma. A pair of oxen yoked to the plough. See ಆರ್ 4.

ಹಲಾಯಿಸು halâyisu. To shake (v. t., My.; H.).

ಹಲಾಯುಧ hala-âyudha. Plough-weaponed: *Baladêva, Balarâma* (ರಾಮ, ಬಲದೇವ Nn. 24). 2, Râmačandra (Abh. P. 12, 11). 3, N. of the author of the abhidhânaratnamâlâ. ಹಲಾಯುಧನ ವಿಸ್ತರದ ವಚನೋಕ್ತಿ (Mr. 4). 4, N. of a šivabhakta (Bp. 25 sum.; 25, 1; 37, 44). 5, = ಹಲಮುಖಿ (Čh.).

ಹಲಾಲ್ಖೋರ halâl-khôra. A sweeper (C.; Mhr., H.).

ಹಲಾಹಲ halâhala. = ಹಾಲಹಲ. *A sort of deadly poison.*

ಹಲಿ hali. 1. = ಹಲೆ 1. (fr. ಫಲಿ). The fruit or embryo. — ಹಲಿವುಱ್. -ಉಱ್. The embryo to leave, miscarriage to happen (S. Mhr.). ಹಲಿವುಱ್ಯೋಣ (ಗರ್ಭಪಾತ, ಗರ್ಭಸ್ರಾವ); ಹಲಿವುಱ್ದವಳು (ಸ್ರವದ್ಗರ್ಭೆ G.).

ಹಲಿ hali. 2. A ploughman, an agriculturist. 2, *Baladêva.* 3, a large plough; a ploughshare. 4, a furrow. 5, agriculture. 6, the poisonous plant Methonica superba.

ಹಲಿಕೆ halikĕ. = ಹರಿಕೆ 2, ಹಲಕು 3, ಹಲಿವೆ, q. v. A kind of harrow (ಕೋಟಿಶ Mr. 370).

ಹಲಿಗೆ haligĕ. = ಹಲಗೆ, etc. A plank, etc. (C.; Bh. 1, 10, 27; B. 4, 71. 121; Si. 276. 281. 290. 349. 461). 2, a kind of tabor (S. Mhr.; see s. ಪಂಚಮಹಾವಾದ್ಯ). — ಹಲಿಗೆಬೆಲ್ಲ. A small flat cake of jaggory cut off from a large one (My.).

ಹಲಿಪ್ರಿಯ hali-priya. *The tree Nauclea cadamba* Roxb.

ಹಲಿಪ್ರಿಯೆ hali-priyĕ. *Spirituous liquor.*

ಹಲಿರಾಮ hali-râma. Baladêva (Mr. 19).

ಹಲಿವೆ halivĕ. = ಹಲಕು 3, ಹಲಿಕೆ, ಹಲುಬೆ, ಹಲುವೆ. A thick lengthy piece of wood with teeth or a kind of harrow that is drawn over ploughed land to level it and to cover seed when sown (My.; Tĕ. ಪಲುಗೊಱ್ಱು. The meaning attached to the S. Mhr. ಹಲಕು is as follows: ಕೆಸಱು ಮುನ್ತಾದ್ದು ತೆಗೆಯುವದಕ್ಕೆ ಹೊಟ್ಟು ಎಱೆಯುವ ಗೋರೇ ಪ್ರಕಾರ ಇರುವ ಒನ್ದು ಕಟ್ಟಿಗೆಯ ಸಾಮಾನು).

ಹಲು halu. 1. = ಹಲ್, etc. A tooth (Bh. 1, 8, 94). — ಹಲುಗಿರಿ. -ಕಿರಿ. = ಪಲ್ಗಿರಿ. To grin (Bp. 49, 21). — ಹಲುಗಿರಿಸು. -ಕಿರಿಸು. To cause to grin (J. 25, 39). — ಹಲುದಿನ್. -ತಿನ್. To gnash the teeth (Râm. 6, 39, 7). — ಹಲುದೆಗೆ. -ತೆಗೆ To grin (Râm. 3, 4, 30). — ಹಲುಮಾಣಿಕ. = ಹಣುಮಣಿಕ್ಯ. A thorny shrub or tree, Flacourtia sepiaria Roxb. (or Flacourtia sapida, ಸ್ವಾದುಕಣ್ಟಕ, ವಿಕಂಕತ, ಸ್ರುವಾವೃಕ್ಷ, ಗ್ರನ್ಥಿಲ, ವ್ಯಾಘ್ರಪಾದ್ Nr.; ಘೆಳಘೋಣ್ಟೆ Mr. 115, sic!). — ಹಲುಮಾಣಿಕಮರ. (ಸ್ವಾದುಕಣ್ಟಕ, etc., ನಾಯಿಬೇಲ, ಹುಳೀ ಬೇಲ Si. 130). — ಹಲು ಮೊರೆ. = ಪಲ್ಮೊರೆ. To gnash or grind the teeth (Bh. 1, 10, 31). — ಹಲು ಹಲು ಹಳಚು. To strike the teeth together (Bh. 3, 10, 25).

ಹಲು halu. 2. = ಹಲ 1, etc. Much; many, etc. — ಹಲು ಮಕ್ಕಳ ತಾಯಿ ಬಳ್ಳಿ. A scandent thorny shrub, Asparagus racemosus Willd. (St. & Pl.). — ಹಲುವು. = ಹಲವು. (ಬಹು Nr.).

ಹಲುಬು halubu. = ಪಲುಮ್ಬು. To lament (Bp. 15, 21; Bh. 8, 27 sum.; J. 13, 56. 58; 19, 36; 20, 19. 20; 24, 1; 26, 34; 31, 61. 62).

ಹಲುಬೆ halubĕ. = ಹಲಿವೆ, etc. (My.).

ಹಲುವೆ haluvĕ. = ಹಲಿವೆ, etc. (My.).

ಹಲೆ halĕ. 1. = ಹಲಿ 1. ಅಕಸ್ಮಾತ್ ಹಲೆವುಱ್ದವಳು (ಅವತೋಕೆ G.).

ಹಲೆ halĕ. 2. ಹಲಾ. Water; spirituous liquor; the earth.

ಹಲ್ಕಾ halkâ. Light; unimportant, insignificant; of little or low estimation or influence (My.; Br.; Mhr., H. ಹಲಕಾ).

ಹಲ್ದೆ haldĕ. = ಅರಳೆ, ಅಲ್ಡೆ, ಹರಡೆ, ಹರ್ಡೆ. (My.; H.).

ಹಲ್ಯ halya. To be ploughed or tilled, arable; *a ploughed field*, arable land. 2, ugliness; deformity.

ಹಲ್ಯೆ halyĕ. *A multitude of ploughs.*

ಹಲ್ಲ halla. = ಅಲ್ಲ 3. — ಹಲ್ಲ ಕಲ್ಲೋಲ. = ಅಲ್ಲ ಕಲ್ಲೋಲ. (My.; Tĕ.).

ಹಲ್ಲಕ hallaka. *A red water-lily, Nymphaea rubra.* See Nr. s. ಹುಟ್ಟು 1.

ಹಲ್ಲಣ hallaṇa. = ಪಲ್ಲಣ. (Śmd. 25). Tbh. of ಪಲ್ಯಯನ (Śmd. 351. 375; Nr.; Hlâ.; ಪಲ್ಲಣ, ನೀಎ Nn. 105; Bp. 58, 33; J. 8, 33).

ಹಲ್ಲಣಿಸು hallaṇisu. 1. = ಪಲ್ಲಣಿಸು. ಆನೆಯ ಹಲ್ಲಣಿಸುವುದು (ಕಲ್ಪನೆ, ಸಜ್ಜನೆ Nr.).

ಹಲ್ಲಣಿಸು hallaṇisu. 2. To go on or advance without stopping (Bh. 3, 18, 32. 35; Mhr. ಹಾಲಣೇಂ, to move, to stir; to be agitated). ಹಲ್ಲಣಿಸಿತೆನಲ್ಕೆ ನಿಲ್ಲದಯಿದ್ದುದುದಕ್ಕುಂ (Bhn. 14).

ಹಲ್ಲರು hallaru. = ಹಲವರು s. ಹಲ 1. ಗೆದ್ದರೆ ಹಲ್ಲರು ಗೆದ್ದರು, ಸೋತರೆ ಕೊಂಕಣಿಗರ ಗಣ್ಡು ಸೋತ (Prv.).

ಹಲ್ಲಾ hallâ. An attack, onset (My.; Mhr., H.); escalade, scaling a fort (My.). — ಹಲ್ಲಾ ಏರು. = ಹಲ್ಲಾ ಹತ್ತು (My.). — ಹಲ್ಲಾ ಹತ್ತು. To scale, as a fort (My.).

ಹಲ್ಲಿ halli. 1. = ಪಲ್ಲಿ. The small house-lizard, Lacerta gecko, Gecko swinhonis, Gecko subpalmatus (Bd.; ಮುಸಲಿ, ಗೃಹಗೋಧಿಕೆ, Nr.; ಮುಶಲಿ, ಗೃಹಗೋಧಿಕೆ, etc. Mr. 166; ಮುಸಲಿ, etc., ಗವುಳಿ Si. 171; C.). ಹಲ್ಲಿ ಓಡೋದೇನು? ಬೆವರು ಸೋರೋದೇನು? — ಹಲ್ಲಿಸಕುನ. The omen occasioned by a lizard (My.).

ಹಲ್ಲಿ halli. 2. = ಹಲ್ಲೆ 1 No. 1, etc. (S. Mhr.).

ಹಲ್ಲಿ halli. 3. That has teeth (? or is it connected with ಹಲ್ಲೆ 1? or with ಹಲಿಕೆ?). See ಗೋರಿ-.

ಹಲ್ಲು hallu. = ಅಲ್ಲು 3, ಹಲ್, etc. A tooth (ದ್ವಿಜ Si. 413; C.), also of a saw (B. 4, 131; C.); a step of a ladder (B. 4, 150; C.); a spoke of a wheel (S. Mhr.). ಹಲ್ಲಿನ (B. 4, 131). (ಕುದುರೆಯ) ಹಲ್ಲು ಕಪ್ಪಾಗಿರಲು ಹೊಲ್ಲ, ಬಿಳಿದಾಗಿರ್ಪ ಹಲ್ಲಾಗೆ ಪೂಜ್ಯಮುದು, ಕೆಳಗಾಬು ಮೇಲಾಬು ಹಲ್ಲಿರಲು ಜಯಮುಕ್ಕು, ಹೆಚ್ಚು ಕುನ್ದಾಗೆ ದನ್ತಾಧಿಕಂ ದನ್ತಹೀನಂ (Mr. 277). ಹಲ್ಲು ಇರುವಾಗಲೇ ಕಡ್ಲೆ ತಿನ್ನ ಬೇಕು. — ಹಲ್ಲು ಕಚ್ಚಿಕೊಣ್ಡು, ಅವಲಕ್ಷಣ ಅನ್ನಿಸಿ ಕೊಣ್ಡ. — ಹಲ್ಲುಗಳ ನಡುವೆ ನಾಲಿಗೆ ಸಿಕ್ಕಿರುವ ಹಾಗೆ. — ಹಲ್ಲು ಹೋದ ಮೇಲೆ ಕಲ್ಲು ಜಗದೇನು ಅನ್ದ ಹಾಗೆ. — ಹಲ್ಲಿಗೆ ಹಬುಯದ ಮೂಳೆ ಹತ್ತು ರುಪ್ಪಿಯ ಮಸಾಲೆ ಕೆಡಿಸಿತು. — ಬೆಣ್ಣೆ ತಿನ್ದು, ಹಲ್ಲು ಬಿದ್ದು ಹೋಯಿತನ್ತೆ. — ನಿಲಕಡೆ ಇಲ್ಲದವನಲ್ಲಿ ಊಟಕ್ಕೆ ಹೋಗಿ, ಇದ್ದ ಹಲ್ಲು ಉದುರಿಸಿ ಕೊಣ್ಡ. — ನುಂಗ ಬಾರದ ತುತ್ತೂ ತುಟಿ ಮಿಾಬಿದ ಹಲ್ಲೂ ಸಮ. — ಧರ್ಮಕ್ಕೆ ಕೊಟ್ಟ ಎಮ್ಮೆಯ ಹಲ್ಲು ಹಿಡಿದು ನೋಡಿದ (Prvs.). See ಪೊಳ್ಳು-. — ಹಲ್ಲ ಕಡ್ಡಿ. = ಹಲ್ಲುಕಡ್ಡಿ. ಹತ್ತಬಿ ಹಲ್ಲ ಕಡ್ಡಿ ಒಬ್ಬನ ತಲೇ ಹೊಬಿ³ (Prv.). — ಹಲ್ಲ ಪುಡಿ. = ಹಲ್ಲುಪುಡಿ. (G. 100). — ಹಲ್ಲು ಕಡಿ. To gnash the teeth (G. 322). — ಹಲ್ಲುಕಡ್ಡಿ. A tooth-pick (My.). — ಹಲ್ಲು ಕಿಸಿ. To grin (B. 2, 12). — ಹಲ್ಲುಗಿರಿ. -ಕಿರಿ. To grin (Abhâ. 2, 71). — ಹಲ್ಲುಗಿರಿಕು. -ಕಿರಿಕು. Grinning (Râm. 6, 37, 15). — ಹಲ್ಲು ತಿನ್ನು. To gnash the teeth (C.; B. 5, 139). — ಹಲ್ಲುನೋವು. The toothache (My.). — ಹಲ್ಲುನೋವುಮರ. A small tree, Wrightia tinctoria Br. (St. & Pl.). — ಹಲ್ಲುಪುಡಿ. Toothpowder (My.). — ಹಲ್ಲುಬೇನೆ. The toothache (ಅರ್ಬುದ G.). — ಹಲ್ಲುಬ್ಬ. -ಉಬ್ಬ. A man with prominent teeth (My.). — ಹಲ್ಲುಬ್ಬಿ. -ಉಬ್ಬಿ. A woman with prominent teeth (My.). ಹಲ್ಲುಬ್ಬಿ ನಕ್ಕರೂ ಕಾಣ ಬಾರದು, ಅತ್ತರೂ ಕಾಣ ಬಾರದು (Prv.). — ಹಲ್ಲುಮುದ್ದುಗಿಡ. The tree Mimusops elengi Lin. (ಕೇಸರ, ವಕುಲ, ಪವಳದ ಹುವ್ವಿನ ಗಿಡ, ವಜ್ರದನ್ತಗಿಡ Si. 137). — ಹಲ್ಲುಮುಬುಕ. A man with broken teeth (My.). — ಹಲ್ಲುಸೂಲೆ. The toothache (My.). — ಹಲ್ಲುಹುಬು. An insect that infests the teeth and causes the toothache (My.).

ಹಲ್ಲೆ hallĕ. 1. = ಆಲೆ 4, ಪಾಲೆ 3, ಹಲ್ಲಿ 2, ಹಾಲೆ 3. The lobe of the ear (My.). **2,** the round flat part or blade attached to a handle and used in turning dôsĕs (My.). **3,** a horse- or bullock-shoe (My.).

ಹಲ್ಲೆ hallĕ. 2. (Tu. ಪಲ್ಲೆ). — ಹಲ್ಲೆಕಾಯಿಬಳ್ಳಿ. An immense climbing shrub bearing pods of extraordinary size, Entada monastachya Dec. (or Entada scandens Benth., St. & Pl.; the shrub is called ಕಡಕತ್ತಿಕಾಯಿಯ ಬಳ್ಳಿ in My.).

ಹಲ್ಲೋಲ hallôla. = ಅಲ್ಲೋಲ. — ಹಲ್ಲೋಲ ಕಲ್ಲೋಲ. = ಅಲ್ಲೋಲ ಕಲ್ಲೋಲ. (Grj. 2, after 106).

ಹವ hava. 1. = ಹವಾ, q. v. (My.).

ಹವ hava. 2. *An oblation, an offering, a sacrifice,* a burnt-offering. See ಆಹವ 1.

ಹವ hava. 3. *Calling, call; challenging; order, command.* See ಆಹವ 2.

ಹವಣ್ havaṇ. = ಪವಣ್, ಹವಣು. Tbh. of ಪ್ರಮಾಣ. (Bp. 4, 51; 26, 15; 39, 58; 51, 75).

ಹವಣಿ havaṇi. Agreeable, good (?). ಪವಣಿಯಾ ಬೋನಕ್ಕೆ ಹವಣಿಯಾ ತೊಗೆಯಾಗಿ ಕವಣೆಗಲ್ಲಷ್ಟು ಬೆಣ್ಣ್ಯಾಗೆ ಬೆಳವಲದ ಹವಣ ನೋಡು (Sp. in one MS.).

ಹವಣಿಕೆ havaṇikĕ. Due consideration, deliberation; contemplation; thought; desire (B. 3, 27; 4, 181). ಗೆದೆಯುವ ಹವಣಿಕೆ (ದೇವನ G.).

ಹವಣಿಗೆ havaṇigĕ. = ಪವಣಿಗೆ. (Bh. 7, 1, 4).

ಹವಣಿತು havaṇitu. That is well-measured, proper, agreeable, etc. ಹವಣಿತಾಗಿ ಬಾಬಿಸುಹ (ಮಧ್ಯ Nr.).

ಹವಣಿತ್ತು havaṇittu. = ಹವಣಿತು. ನಗೆ ಹವಣಿತ್ತಾದೊಡೆ ವಿಹಸಿತಂ (Nr.).

ಹವಣಿಸು havaṇisu. = ಅವಣಿಸು. To make ready, to prepare (Grj. 4, 74; My.; Sk. ಪ್ರಮಾ); to arrange; to make concise. ಹವಣಿಸಲ್ (ಸಂಗ್ರಹ, ಸಂಕ್ಷೇಪ, ಸಮಾಹಾರ, ಅನುತ್ಕಟ Mr. 446). 2, to deliberate; to think; to desire (B. 1, 12; 2, 13. 15; 3, 38. 101; Sk. ಪ್ರಮಾ also: to form a correct notion of, to understand; to conjecture). ಯುದ್ಧ ಮಾಡುವದಕ್ಕಾಗಿ ಹವಣಿಸೋಣ (ಪ್ರತ್ಯುತ್ಕ್ರಮ); ಕೊಲ್ಲುವದಕ್ಕೆ ಹವಣಿಸುವವನನ್ನು ಜಯಿಸೋಣ (ಹಸ್ತವಾರಣ G.).

ಹವಣು havaṇu. = ಹವಣ್, etc. Measure; proper measure, manner or state, fitness, etc. (Bp. 16, 9; 44, 7. 40; C. Bp. 47, 43; Râm. 3, 2, 22; 6, 30, 13; My.); making ready, preparing (My.). ನಡಿಕೆಗೆ ಹವಣಾಗಿ ತಿದ್ದಲ್ ಪಟ್ಟ ಎತ್ತುಗಳು ಕಟ್ಟ ತಕ್ಕ ಬಣ್ಡಿ (ಗನ್ತ್ರಿ, etc. Si. 275). ಹವಣಬಿದು ಮಾಂಸಮಂ ತುಣ್ಡುಗೆಯ್ದು ಉಪ್ಪೂಡಿದದಬಿಲ್ಲಿ ವಲ್ಲೂರಮೆನಿಸಿಕ್ಕು (Mr. 218). ದಾವಣಿ ಕಟ್ಟುವವನಿಗಾದರೂ ಹವಣು ಬೇಕು (Prv.).

ಹವನ havana. 1. The act of offering an oblation with fire; an oblation (to the gods), a burnt-offering, a sacrifice (ಅಗ್ನಿಗೆ ಕೊಡುವ ಆಹುತಿ G.; My.). ದವನದ ಹೂ ಅನ್ದಾಕ್ಷಣ ಹವನವಾದೀತೇ? (Prv.).

ಹವನ havana. 2. The act of calling; challenging.

ಹವಸು havasu. = ಹೌಸ, q. v. ಹವಸುಳ್ಳವ (ವಿಲಾಸಿ Čb.).

ಹವಳ havaḷa. = ಪವಳ. Coral (ಪ್ರವಾಲ Nr.; ವಿದ್ರುಮ Nn. 130; ಪ್ರವಾಲ Si. 331; C.). ನೇವಳವಾದರೆ ಹವಳದ್ದು ಆದೀತೇ? (Prv.). — ಹವಳಕ್ರಿಮಿ. The coral polyp (C.; B. 4, 172). — ಹವಳದ ಹುಳು. = ಹವಳಕ್ರಿಮಿ (C.; B. 4, 171). — ಹವಳಪಾಟ್ಲಿ. A coral bracelet (C.). — ಹವಳಬಂಡೆ. A coral rock (C.; B. 4, 171). — ಹವಳಮಲ್ಲಿಗೆ. A small tree with fragrant flowers, Nyctanthes arbor tristis Lin. (Z.; ಮನ್ದಾರ G.). — ಹವಳಸುಗನ್ಧಕ. A kind of brimstone (My.). — ಹವಳಾರತಿ. -ಆರತಿ. A waving-platter ornamented with coral (My.).

ಹವಳು havaḷu. = ಹವಳ. (ಪ್ರವಾಲ G.).

ಹವಾ havâ. = ಹವ 1, ಹವೆ 2. Air, wind; weather; climate (My.; B. 5, 206; Mhr., H.).

ಹವಾಲತೆ havâlatĕ. = ಹವಾಲ್ತೆ. Transfer; the transfer of a debt from the original debtor to one who becomes responsible for it to the creditor (My.; H. ಹವಾಲತ್).

ಹವಾಲದಾರ havâla-dâra. = ಹವಾಲುದಾರ. (B. 5, 106).

ಹವಾಲು havâlu. = ಹವಾಲೆ. Charge, trust, care; responsible custody: charge (to pay on account of) as committed (My.; Mhr., H. ಹವಾಲಾ).

ಹವಾಲುದಾರ havâlu-dâra. A non-commissioned officer in the native army under the subêdâra, corresponding with serjeant (My.; Mhr. ಹವಾಲದಾರ). 2, the chief of a company of armed men, peons, etc. (B. 5, 106; Mhr.). 3, the officer of a district under a subêdâra (Mhr.).

ಹವಾಲೆ havâlĕ. = ಹವಾಲು. (My.).

ಹವಾಲ್ತೆ havâltĕ. = ಹವಾಲತೆ. (My.).

ಹವಾಲ್ದಾರ havâl-dâra. = ಹವಾಲುದಾರ No. 1. (My.). See Prv. s. ಸೂಳೆ.

ಹವಿ havi. Tbh. of ಹವಿಸ್. (Bp. 39, 33). ಬೇಳ್ದ ಹವಿ (ಹುತ, ವಷಟ್ಕೃತ Hlâ.). — ಹವಿ ಕೊಡು. To offer a havi (Bp. 57, 18).

ಹವಿಪ್ರದಾನ havi-pradâna. The act of offering into fire or with fire. See ಬೇಳ್ 1.

ಹವಿರ್ಗೇಹ havis-gêha. *Any house or chamber in which an oblation is offered*, a sacrificial hall.

ಹವಿರ್ಭಾಗ havis-bhâga. A portion or share of the oblation (J. 5, 44. 45; 8, 42).

ಹವಿಷ್ಯ havishya. Anything fit for an oblation; clarified butter; wild rice; rice mixed with ghee; a hymn in praise of oblations. (G.).

ಹವಿಸ್ havis. = ಹವಿ. *Anything offered as an oblation with fire*, clarified butter, grain, milk, sôma, etc. (ಚರು, ಬೇಳ್ವ ತುತ್ತುಗಳು Mr. 260); an oblation or burnt-offering in general.

ಹವಿಸ್ಸು havissu. Tbh. of ಹವಿಸ್. (My.).

ಹವೀಕ havîka. = ಹೈಗ, q. v.

ಹವೀಜ havîja. (B. 4, 177).

ಹವುದಾ havudâ. = ಹೌದಾ, q. v. (My.).

ಹವುದು havudu. = ಅಹುದು, ಹೌದು. It becomes, it is; it is so; yes (My.). ಹವುದೆನ್ದರೆ ಬಯ್ಯುತ್ತಾನೆ, ಅಲ್ಲೆನ್ದರೆ ಹೊಡಿಯುತ್ತಾನೆ (Prv.).

ಹವುರ havura. ಹೌರ. = ಹಗುರ, etc. (My.).

ಹವುರಗೆ havuragĕ. ಹೌರಗೆ. Lightly (My.; Čb. 99).

ಹವುರು havuru. ಹೌರು. = ಹವುರ, etc. (B. 4, 148).

ಹವೆ havĕ. 1. = ಹಬೆ 2. (My.). ಸೆಕೆಯ ಹವೆ (ಬಾಷ್ಪ, ಊಷ್ಮ Si. 439).

ಹವೆ havĕ. 2. = ಹವಾ. (B. 2, 49; 3, 36; 4, 26. 102).

ಹವೇಲಿ havêli. A large house, a villa, especially one of a râja (My.; Br.; Mhr., H. ಹವೇಲೀ).

ಹವ್ಯ havya. Fit to be offered in oblations. 2, *an oblation or offering to the gods*. ದ್ರವ್ಯವಿದ್ದವನಲ್ಲಿ ಹವ್ಯವಾದರೂ ಗವ್ಯಕ್ಕೆ ಮಾತ್ರ ಬಡತನ (Prv.).

ಹವ್ಯಕವ್ಯ havya-kavya. Oblations both to the gods and to the spirits of deceased ancestors. (My.).

ಹವ್ಯಪಾಕ havya-pâka. *An oblation* (of rice, barley, etc.) *cooked with butter and milk for presentation to the gods; the vessel in which such an oblation is prepared.*

ಹವ್ಯವಾಹ್ havya-vâh. *Agni, fire.*

ಹವ್ಯವಾಹನ havya-vâhana. Bearing oblations, conveying oblations; *Agni, fire.*

ಹವ್ಯವಾಹನಸಖ havyavâhanasakha. Wind (J. 13, 9).

ಹವ್ಯಾಸ havyâsa. Desire, lust; any longing or itching (My.; Mhr., H.).

ಹವ್ವ havva. = ಹವ್ವನೆ. ಈ ಅಕ್ರಾಳ ವಿಕ್ರಾಳ ರೂಪವನ್ನು ಕಣ್ಡು, ಹವ್ವ ಹಾಯ್ ಮೂರ್ಛಿತಳಾದಳು (B. 5, 132). See B. 5, 155.

ಹವ್ವನೆ havvanĕ. = ಪವ್ವನೆ. Suddenly (ಆಕಸ್ಮಿಕ Šmd. 398). ಆ ನಿಮಿಷದಲಿ ಹೆಣ್ಣು ಹವ್ವನೆ ಹಾಯ್ (Bp. 15, 18). ಸರ್ಪನಂ ಕಣ್ಡಾಗ ಹವ್ವನೆ ಹಾಯ್, ಮೂರ್ಛಿತನಾಗಿ, ಸತ್ತನು (46, 23). 2, oh! woe to me! (ಭಯಭಾವಿತ Šmd. 398).

ಹಸ hasa. (= ಹದ 1). Niceness, comeliness, charm, beauty; good manner, state or order; tillage; purity; ease (ಮನೋಹರ Ks.; ಅನು, ಲೇಸು, ಚೊಕ್ಕಳಿಕೆ, ಗಟ್ಟಿ, ಎಡ್ಡ, etc., ಮನೋಹರ Kk. 18; ಚೊಕ್ಕಳಿಕೆ, ಚೊಕ್ಕ, ರಯ್ಯ, ಲೇಸು, ಎಡ್ಡ, ಅನು, ಮನೋಹರ Šm. 55). — ಹಸಗೆಡು. -ಕೆಡು. Beauty to be lost (Bp. 39, 64). — ಹಸಂಗೆಡು. -ಂ-ಕೆಡು. Ease to be lost (V. 9, 100). — ಹಸ ಮಾಡು. To put in a proper state; to till; to clean, to purify (My.). ಕಾಳು ಹಸ ಮಾಡು (ಕೇಱು G.).

ಹಸ hasa. 1. Tbh. of ಪಶು. A cow (My.). ಕಱೆಯುವ ಹಸಾ ಕೊಟ್ಟು, ಒದೆಯುವ ಕತ್ತೆ ತನ್ದ ಹಾಗೆ (Prv.). — ಹಸ ಕಱು. A cow and a calf (My.).

ಹಸ hasa. 2. *Laughter*, laughing, a laugh; derision.

ಹಸತ್ hasat. Laughing, smiling. See ಹಸನ್ಮುಖ.

ಹಸನ hasana. = (ಹದನ), ಹಸ q. v., ಹಸನು. (Bp. 22, 47; ಸ್ವಚ್ಛ Čb.; ನಿರ್ಮಲ G.). — ಹಸನ ಮಾಡು. = ಹಸ ಮಾಡು. To clean (B. 3, 83), etc. ಹಿಟ್ಟು ಹಸನ ಮಾಡು (ತೆಣ್ಣು); ಕಾಳುಗಳನ್ನು ಹಸನು ಮಾಡೋಣ (ಪವ G.).

ಹಸನ hasana. Laughing, laughter, a laugh. See ನಗು; Šmd. 393; Bp. 37, 24.

ಹಸನಿ hasani. *A portable fire-place, a chafing dish.*

ಹಸನು hasanu. = (ಹದನು), ಹಸ q. v., ಹಸನ. Beauty, etc. (ಅನವಸ್ಕರ, ನಿರ್ಮಲ, ಅಮಲ, ಸ್ವಚ್ಛ, ನೈರ್ಮಲ್ಯ G.; My.; Bp. 28, 12; 40, 24; 46, 57; 61, 80; Bh. 1, 8, 48; Si. 222). ಹಸನಾಗಿದೆ ಬದುಕು (Dp. 4). ಮೊಸರು ಕಡೆಯಲು ಬೆಣ್ಣೆಯೊಸೆದು ತೋಱುವ ತೆಱದಿ ಹಸನುಳ್ಳ ಗುರೂಪದೇಶದಿಂ ಮುಕ್ತಿ ಪಥವಾಗದಿಹುದೆ? (Sp.). ಹಸನಾದ ಹಲ್ಲು (G. 546). ಬಾದಾಮಿ ಜಿಪ್ಪ

ಸುಟ್ಟು, ಕರಿಬೂದಿ ಮಾಡಿ, ಅದರಿಂದ ಹಲ್ಲು ತಿಕ್ಕಿ ಕೊಳ್ಳುತ್ತಾರೆ; ಅದರಿಂದ ಹಲ್ಲು ಹಸನಾಗಿ, ಗಟ್ಟಿಯಾಗುವವು (B. 3, 20). ವ್ಯಸನವಿದ್ದವ ಹಸನು ಆಗನು.— ಹುಸಿ ಹೇಳಿದರೂ ಹಸನಾಗಿರ ಬೇಕು.— ಹಬ್ಬಿ ಹಸನಾಗಿರ ಬೇಕು, ಹಾಲು ಉಣಿಯ ಬೇಕು (Prvs.). — ಹಸನು ಮಾಡು. = ಹಸ ಮಾಡು. (My.). ಹಸನು ಮಾಡಿದ್ದು (ನಿಃಶೋಧ್ಯ); ಹಸನು ಮಾಡಿದ ಕಾಯಿ (ಪೂತ G.). ಬೆಕ್ಕು ಅಂಗಾಲಿನ್ದ ಮೈಯ್ಯನ್ನು ಹಸನು ಮಾಡಿ ಕೊಳ್ಳುತ್ತದೆ (B. 3, 31). ಒಬ್ಬನು ಒನ್ದು ಸಾರೆ ಹೊಲವನ್ನು ನೇಗಲ ಹೊಡಿದು ಹಸನು ಮಾಡಿ, ಬೀಜವನ್ನು ಬಿತ್ತಿದ ಬಳಿಕ (5, 115). ಮನೆಯ ಸಾರಿಸಿ ಹಸನು ಮಾಡಿ (5, 135). ಭಾಣ್ಡಗಳನ್ನು ತೊಳೆದು ಒರಸಿ ಹಸನು ಮಾಡಿ ಇಡುತ್ತಿದ್ದಳು (5, 283). ಮನೆಯೊಳಗಿನ ಸಾಮಾನುಗಳನ್ನು ಒರಸಿ ಹಸನು ಮಾಡುವ ಕೆಲಸ (5, 286).

ಹಸನ್ತಿ hasanti. *A portable fire-place, a chafing dish* (ಹಸನ್ತಿಕೆ, ಬೆಸಳಿಗೆ Mr. 210).

ಹಸನ್ತಿಕೆ hasantikĕ. = ಹಸನ್ತಿ. *A portable fire-place, etc.*

ಹಸನ್ಮುಖ hasat-mukha. A smiling countenance (My.).

ಹಸರ್ hasar. = ಹಸರು. — ಹಸರಾಣಿ. = ಹಸರ್ವಾಣಿ, etc. (My.). — ಹಸರಾಣಿಬಳ್ಳಿ. A creeping or twining weed, Convolvulus arvensis Lin. (Z.). — ಹಸರ್ವಾಣಿ. = ಅಸರಾಣಿ, ಹಸರಾಣಿ, ಹಸರುವಾಣಿ. Articles of trade that come from trees, creepers or vegetables, as leaves, fruit, etc. (My.). — ಹಸರ್ವಾಣಿಕನ್ಯಾಯ. A tax levied on such articles (My.).

ಹಸರ hasara. = ಪಸರ. Tbh. of ಪ್ರಸರ (Śmd. 345 Mdb.).

ಹಸರಿಸು hasarisu. = ಪಸರಿಸು, etc. To spread (v. i.), to extend in all directions (ಹಂಜರಿಸು Kk. 57; Abhâ. 2, 74). ಹಸರಿಸಿದುದು (ಸಮ್ಮೂರ್ಛನ, ಅಭಿವ್ಯಾಪ್ತಿ Nr.).

ಹಸರು hasaru. = ಪಸುರ್ 2 q. v., etc. Green colour, etc. (C.). ಕೆಮ್ಪುಗೂಡಿದ ಹಸರು (ಧೂಮಲ, ಧೂಮ್ರ Mr. 443). — ಹಸರುಕಾಯಿ. A green head of plants; an unripe fruit; a bud (ಕ್ಷಾರಕ, ಜಾಲಕ Si. 123). — ಹಸರುಗೆಮ್ಪು. -ಕೆಮ್ಪು. Reddish-brown (ಕಪಿಶ, ಶ್ಯಾವ Mr. 443). — ಹಸುರುನಾಗರಹಾವು. — The venomous snake Trimeresurus carinatus (Bd.). — ಹಸರುನೂಲಿಗ. A kind of green venomous coluber, Coluber gramineus Shaw, or Trimeresurus gramineus Günther (Bd.). — ಹಸರುನೆಲ. Ground covered with young green grass (ಶಾದ್ವಲ, ಹರಿತ Hlâ.). — ಹಸರುಬಣ್ಣ. The colour green (C.; Si. 51). — ಹಸರುಬಣ್ಣದ ಹಕ್ಕಿ. The green pigeon, Columba hurriala B. MSS. (ಹಾರೀತ Nr.). — ಹಸರುಬೆಳವ. The green pigeon (Bd.; Pr.). — ಹಸರುಮುಗ್ಗು. A tender flower-bud, an unblown flower (My.; ಕ್ಷಾರಕ, ಜಾಲಕ Si. 123; ಜಾಲ, ಕ್ಷಾರಕ 456). — ಹಸರುಮಲ್ಲಿಗೆ. A kind of jasmine. ಕಾಡಿನಲ್ಲಿ ಹುಟ್ಟುವ ಹಸರುಮಲ್ಲಿಗೆ (ಪೀತಮಾಗಧಿ, ಹೇಮಪುಷ್ಪಿಕೆ Si. 139). — ಹಸರುರತ್ನ. An emerald (ಮರಕತ Čb. 73). — ಹಸರುವಾಣಿ. = ಹಸರ್ವಾಣಿ, etc. (My.). — ಹಸರುಸಾಮನ್ತಿಗೆ. = ಹಸರುಮಲ್ಲಿಗೆ. (ಹೇಮಪುಷ್ಪಿಕೆ Si. 139). — ಹಸರುಹಾವು. Any snake of a green colour (C.).

ಹಸಲು hasalu. = ಅಸಲ್, ಅಸಲು. (My.). See Prv. s. ಮಲ್ಲಾಟ.

ಹಸಲೆ hasalĕ. = ಪಸಲೆ, q. v. (ಶಾದ, ಶಷ್ಪ Nr.).

ಹಸವು hasavu. = ಹಸಿವು, etc. Hunger (B. 5, 133).

ಹಸವು hasavu. = ಹಸುವು, etc. A cow (My.).

ಹಸಾದ hasâda. = ಪಸಾದ, etc. Tbh. of ಪ್ರಸಾದ. (Bp. 11, 29; 35, 56; 37, 3; 39, 41. 50; Bh. 1, 8, 78; 1, 9, 11; Râm. 4, 2, 12).

ಹಸಿ hasi. 1. = ಪಸಿ 3, etc. Greenness; freshness; moisture (of the ground, etc.); rawness; the state of being not boiled or heated (as milk or ghee); (green, etc.); a substance that is green, fresh, moist, etc. (ದ್ರವದ್ರವ್ಯ Śmd. Dh., Śm. 109; ಉನ್ನ, ಕ್ಲಿನ್ನ Hlâ., Mr. 448, but originally, and probably wrongly, ಹುಸಿ; C.). ಕೆರೆಯ ನೀರು ಕಾಲುವೆಗಳೊಳಗಿನ್ದ ಒಯಿದು ಹಾಸಿದರೆ ಭೂಮಿಯು ಹಸಿಯಾಗಿ, ಬಿತ್ತಿದ ಪಯಿರ್ರಿಗೆ ಬಹಳ ಉಪಯೋಗವಾಗುವದು (B. 4, 184). ಸೊಸೆಗೆ ಬಿಸಿ ಇಲ್ಲ, ಹನ್ದರಿಗೆ ಹಸಿ ಇಲ್ಲ.— ಬಿಸಿಯಾದ್ದು ಆರಿಸ ಬೇಕು, ಹಸಿಯಾದ್ದು ಕಾಯಿಸ ಬೇಕು (Prvs.). — ಹಸಿಕಟ್ಟಿಗೆ. Green wood (My.). — ಹಸಿಗೋಡೆ. A mud wall that is not yet dry. ಹಸಿಗೋಡೆಗೆ ಕಲ್ಲು ಹೊಡದ ಹಾಗೆ (Prv.). — ಹಸಿಟ್ಟು. -ಇಟ್ಟು. Raw flour of râgi (My.). — ಹಸಿ ಬಿಸಿ. That is raw and that is boiled. ಹಸಿ ಬಿಸಿ ತಿನ್ನಲಿಕ್ಕೆ ಮನಸೇ ಪ್ರಧಾನ (Prv.). — ಹಸಿಬೆರಣಿ. Fresh cow-dung (My.). — ಹಸಿಮುಜ್ಜಗೆ. (ತೇಮನ, ನಿಷ್ಠಾನ, ತೇವನ, ಪಳಿದ್ಯ Si. 313). — ಹಸಿಮುಚಿ. A rain that moistens the soil in a small degree, but does not wet it thoroughly (S. Mhr.). — ಹಸಿಮಾಂಸ. Raw flesh (My.). — ಹಸಿಯಕ್ಕಿ. -ಅಕ್ಕಿ. Raw rice. ರುಚಿಯಿಲ್ಲದಿದ್ದರೆ ಹಸಿಯಕ್ಕಿ ತಿನ್ದಾನು (Prv.). — ಹಸಿಯಡಿಕೆ. -ಅಡಿಕೆ. Green, unboiled areca-nuts (My.). — ಹಸಿಯ ತುರುಕ. A Turk full of freshness or vicious vigor (My.; Abhâ. 2, 53). — ಹಸಿಯ ದಡಿ. A green stick (Bp. 57, 37). — ಹಸಿಯ ಫಲ. A green unripe fruit (ಶಲಾಟು, ಆಮಫಲ Nr.). — ಹಸಿಯ ಮಾಂಸ. = ಹಸಿಮಾಂಸ. (G. 116). — ಹಸಿಯ ಮೆಣಸಿನ ಕಾಯಿ. A young green chilli pod (My.). — ಹಸಿಯ ರಸ. Immature juice (G. 113). — ಹಸಿಯಲ್ಲ. -ಅಲ್ಲ. Green ginger (ಅರ್ದ್ರಕ, ಶೃಂಗವೇರ Mr. 137). — ಹಸಿಯ ಸುಣ್ಟಿ. Green ginger (ಪಾಲಿ, ಅರ್ದ್ರಕ Nn. 31). — ಹಸಿಯ ಹೊಲೆಯ. An outcaste full of vicious vigor (Bp. 55, 18; 56, 49). — ಹಸಿಯೆಲೆ. -ಎಲೆ. A green young leaf. ಒಣಗಿದ ಎಲೆ ಉದುರುವಾಗ್ಯೆ ಹಸಿಯೆಲೆ ನಗಾಡುತ್ತದೆ (Prv.). — ಹಸಿಸುಣ್ಣ. Moistened lime (My.). — ಹಸಿಸೊಣ್ಟಿ. = ಹಸಿಯ ಸುಣ್ಟಿ. (My.; ಅರ್ದ್ರಕ, ಶೃಂಗವೇರ Si. 311). — ಹಸಿಹುರುಕು. Moist herpes (ಪಾಮ G.). ಹಸಿಹುರುಕು ಹತ್ತಿದವ (ಪಾಮನ G.). — ಹಸೀ ಕಾಯಿ. A green unripe fruit (ಶಲಾಟು G.; B. 4, 32). — ಹಸೀ ಬೇರು. A green, fresh root (B. 4, 71).

ಹಸಿ hasi. 2. = ಅಸಿ 5, etc., (ಹಸೆ). — ಹಸಿಕಲ್ಲು. = ಅಸಿಕಲ್ಲು. (My.). ಹಸಿಕಲ್ಲು ಗಾಳಿಗೆ ಹಾರಿದ ಹಾಗೆ (Prv.).

ಹಸಿ hasi. 3. = ಪಸಿ 1. To hunger, to crave food (ಕ್ಷುಧೆ Śmd. Dh.; ಕ್ಷುತ್ತು Śm. 109; C.; Bp. 8, 43; 14, 10. 17). P. ps. ಹಸಿದು, ಹಸ್ತು. ಹಸಿದಾತ (ಕ್ಷುದ್ವತ್, ಬುಭುಕ್ಷಿತ, ಪ್ಸಾತ, ಜಘುತ್ಸು, ಕ್ಷುಧಿತ Hlâ.). ಹಸಿದವನು (ಕ್ಷುಧಿತ, etc.); ಹಸಿದಿರಲಾರಿದವನು (ಅದ್ಯೂನ, etc. Nr.). ಹಸಿದ ಕೋಣಿಯ ಮುನ್ದೆ ಕಾಯಿ ಒದಗಿತು.— ಹಸಿದ ಬೆಕ್ಕು ಹತ್ತಿಗೆ ಜಪ್ಪಿಸಿತು.— ಹಸಿದ ಹಾರುವನನ್ನು ತೊಡಗ ಬಾರದು, ಉಣ್ಡ ತುರುಕನನ್ನು ತೊಡಗ ಬಾರದು.— ಹಸಿದು ಹಣ್ಣು ತಿನ್ನು, ಉಣ್ಡು ಕಬ್ಬು ತಿನ್ನು.— ಹಸಿದು, ಹಲಸು; ಉಣ್ಡು, ಮಾವು.— ಹಸಿದು ಹೊಟ್ಟೆ ತೋರಿಸಿದರೆ ಮಸೆದು ಕತ್ತಿ ತೋರಿಸಿದ.— ನಾಯಿ ಹಸಿದಿತ್ತು, ಹಿಟ್ಟು ಹಳಸಿತ್ತು (Prvs.).

ಹಸಿಕೆ hasikĕ. (= ಹಾಸಿಕೆ No. 2). A certain cloth of an ascetic. ತಪಸ್ವಿಯ ಹಸಿಕೆ (ಪರ್ಯಸ್ತಿಕೆ, ಪರಿಕರ, ಪರ್ಯಂಕ Hlâ.).

ಹಸಿಗೆ hasigĕ. = ಪಸುಗೆ, etc. Dividing, etc. (Bh. 1, 8, 79); division or sharing of the produce between the cultivator and landlord (My.). — ಹಸಿಗೆಪಟ್ಟಿ. A list or account of the division of the produce (My.). — ಹಸಿಗೆಮುತ್ಸದ್ದಿ. A clerk who keeps the account of such divisions (My.).

ಹಸಿಗೆ hasigĕ. A toll (as of vegetable, grain) exacted by official personages from the venders (My.; Br. ಪಸಿಕೆ; Mhr. ಫಸಕೀ).

ಹಸಿತ hasita. Laughed, laughing, smiling; expanded, blossomed, blown (ವಿಕಸನ, ಜೃಮ್ಭಿತ, etc. ಅರಳ್ವುದು Mr. 107); laughter, a laugh; smiling, a smile (ಮುಗುಳ್ನಗೆ Mr. 330). See ವಿ-; Bp. 6, 27; 28, 49.

ಹಸಿತಯಶಸ್ hasita-yaśas. Expanded, far-spread glory or fame (Kâvy. V, 18).

ಹಸಿಬೆ hasibĕ. = ಪಸುಬೆ, etc. (My.; Mhr. ಹಜಬೀ, a long and double money-bag). — ಹಸಿಬೆಚೀಲ. = ಹಸಿಬೆ. (My.).

ಹಸಿರು hasiru. = ಹಸರು, etc. (ಪಾಲಾಶ, ಹರಿತ್, ಶ್ಯಾಮ Mr. 443).

ಹಸಿವಿ hasivi. = ಪಸಿ 2, etc. Hunger (B. 3, 121; 5, 262).

ಹಸಿವು hasivu. = ಹಸವು, ಹಸಿವಿ, etc. Hunger (ಅಶನಾಯೆ, ಬುಭುಕ್ಷೆ, ಪ್ಲೆ, ಜಿಘುತ್ಸೆ, ಕ್ಷುತ್, ಕ್ಷುಧೆ Hlâ.; Nr.; Si. 317; Čpr. 3, 35; Bp. 9, 9; 24, 55; 27, 48; Bh. 1, 10, 32; My.; B. 4, 123). ಮಾಱಿರ್ದ ಹಸಿವು (ಕ್ಷುತ್, ಕ್ಷುಧೆ, ಬುಭುಕ್ಷೆ Mr. 235). ಪಶುವಿದ್ದರೆ ಪವಿತ್ರ, ಹಸಿವಿದ್ದರೆ ಊಟ (Prv.). — ಹಸಿವುಗೊಳ್ಳು. -ಕೊಳ್ಳು. To get hungry. ಹಸಿವುಗೊಣ್ಡವನು (ಬುಭುಕ್ಷಿತ, ಕ್ಷುಧಿತ, etc. Si. 358).

ಹಸಿವು hasivu. = ಹಸುವು, etc. A cow. ಹಸಿವಿನ ಹಾಲು etc. (ಗವ್ಯ Si. 315; *only* in Si.).

ಹಸಿವೆ hasivĕ. = ಹಸಿವಿ, etc. (My.; ಅಶನಾಯೆ G.). ಹಸಿವೆಗೆ ಬಾಯ್ಸವಿ ಬೇಡ, ನಿದ್ದೆಗೆ ಹಾಸಿಗೆ ಬೇಡ (Prv.).

ಹಸು hasu. = ಪಸು 2, etc. — ಹಸುಗೂಸು. -ಕೂಸು. = ಪಸುಗೂಸು. (My.). — ಹಸುಮಕ್ಕಳ್. -ಳು. Young children (ತರಳ, ಬಾಲಕರ್ Nn. 63; My.).

ಹಸು hasu. = ಪಸು. A cow (My.). ಒಳ್ಳಿಹ ಹಸು (ಗೋಮತಲ್ಲಿಕೆ Hlâ.). ಆಱು ಹಸುವಂ ಷಡ್ಗವ ಎಮ್ಬುದು (Hlâ.). ಬಂಜೆಹಸು (ವಶೆ Si. 460). See ಎಳಗನ್ನಿ-; Bh. 3, 13, 21.

ಹಸುಕು hasuku. A sharp smell (ನಾತ, ಸೊವಡು, ಕೂರಿತ್ತಾದ ಗನ್ಧ Šm. 23), a disagreeable smell of certain leaves or unripe fruits (My.), the smell of raw meat, etc. (*cf.* ಹಡುಕು). ಆವುದೊನ್ದು ಹಸುಕು ನಾಱುವದುಣ್ಟು, ಅದು ವಿಸ್ರ ಆಮಗನ್ಧಿ ಎನಿಸುಗು (Nr.). — ಹಸುಕುನಾತ. = ಹಸುಕು. (My.).

ಹಸುಗೆ hasugĕ. = ಪಸುಗೆ, etc. (Bh. 1, 8, 64; 1, 10, 5).

ಹಸುಬ hasuba. = ಪಸುಬ, etc. (Šmd. 148; My.). — ಹಸುಬನ ಹಕ್ಕಿ. (ಹಾರೀತ, ಹಸರುಬಣ್ಣದ ಹಕ್ಕಿ Si. 177).

ಹಸುಬೆ hasubĕ. = ಪಸುಬೆ, etc. (My.).

ಹಸುಮ್ಬ hasumba. (Šmd. 48; not in Mdb. MS.). = ಹಸುಬ, etc. ಗಿಳಿ ಹಸುಮ್ಬಗಳ ಗಱಿಯನ್ತಪ್ಪ ವರ್ಣ (ಹರಿಣಿ Mr. 444).

ಹಸುಮ್ಬೆ hasumbĕ. (Šmd. 48). = ಹಸುಬೆ, etc.

ಹಸುರು hasuru. ಹಸುರ್. = ಪಸುರ್ 2 q. v., etc. Green colour, etc. (ಪಾಲಾಶ, ಹರಿತ, ಹರಿತ್ Hlâ.; ಹರಿತ Nr.; C.; B. 3, 30). ಹಸುರ ಶಾಕದ ಕಾವು (ಕದಮ್ಬ Šmd. 352 Cm.). ಹಸುರಾದ ಶಾಕವು (ಶಿಗ್ರು); ಹಸುರಾಗಿದ್ದ ಎವೆ (ತೋಕ್ಮ); ಬಾಲತೃಣವಿನ್ದ ಹಸುರಾಗಿರ್ದ ಭೂಮಿ (ಶಾದ್ವಲ Nr.). ಕೆಮ್ಪು ಹಸುರಪ್ಪುದು (ಧೂಮ್ರ, ಧೂಮಲ Hlâ.). (ಕುದುರೆ) ನೆಱಿ ಹಸುರ್ (*i. e.* ಶ್ಯಾಮ, see Mr. s. ಹಸಿರು) ಇರಲ್ ಘುಂಜನಕ್ಕು (Mr. 276). ಹಸುರ ಕಡ್ಲೆ (ಮುದ್ಗ G.). — ಹಸುರಂಗಿ. -ಅಂಗಿ. A green coat or jacket (Bh. 3, 13, 19). — ಹಸುರಱಿ. -ಅಱಿ. Greenness or freshness to disappear (Bp. 18, 30). — ಹಸುರುಗುಪ್ಪಸ. -ಕುಪ್ಪಸ. A green bodice (Râghe. 17, 65). — ಹಸುರುಗೆಮ್ಪು. -ಕೆಮ್ಪು. Reddish-brown (ಕಪಿಶ, ಶ್ಯಾವ Mr. 443). — ಹಸುಗುಬಣ್ಣ. A green colour (My.). — ಹಸುರುಬಳೆ. A wrist-ring of green glass (My.). — ಹಸುರುಭಾಲೆಕಚೇರಿ. The green spearmen's office (My.). — ಹಸುರುಬೆಳಕು = ಪಸುರ್ವೆಳಗು. (G.). — ಹಸುರುಬೆಳೆ. A green crop (G. 323). — ಹಸುರುಶಾಲೆ. A green garment of women. ಬಸಱು ಬನ್ದಾ ಕ್ಷಣ ಹಸುರುಶಾಲೆ ಸಿಕ್ಕೀತೇ? (Prv.). — ಹಸುರುಹಾವು. = ಹಸರುಹಾವು. (My.). — ಹಸುರುಹಿಣ್ಡು. (Women) to express the juice of certain herbs with the hands upon the head of men to decoy or allure them (My.). — ಹಸುರುಹುಲ್ಲು. Green grass. ಹಸುರುಹುಲ್ಲು ತಿನ್ನುವವಗೆ ಮೊಸರನ್ನ ಆಗದೇ? — ಮೊಸರು ಹುಳಿಯೆನ್ತ, ಹಸುರುಹುಲ್ಲು ಹಿಣ್ಡಿದನನ್ತೆ (Prvs.). — ಹಸುರೆಲೆ. -ಎಲೆ. A young green leaf or such leaves (ಪಲ್ಲವಿರ್ G.). — ಹಸುರ್ಗನ್ನೆ. -ಕನ್ನೆ. A moderate-sized tree, Dalbergia lanceolaria (Van Someren).

ಹಸುವು hasuvu. = ಹಸ 1, ಹಸವು, ಹಸಿವು. Tbh. of ಪಶು. A cow (ಅನಡ್ವಿ Mr. 180; My.). ಹಸುವಿನ ಸಗಣಿ (ಗೋಮಯ, etc. Si. 315). ಹಸುವುಗಳು (Si. 460).

ಹಸುಳ hasuḷa. = ಪಸುಳ. A (male) child (Bp. 25, 16; B. 5, 4).

ಹಸುಳೆ hasuḷĕ. = ಪಸುಳೆ. (ಅರ್ಭಕ, ಅರ್ಭ Nr.; Bp. 11, 17; 24, 65; ಹೂಹೆ Bhn. 23). See Šmd. 109.

ಹಸುಳೆತನ hasuḷĕtana. = ಪಸುಳೆತನ. (Bh. 5, 1, 39).

ಹಸೆ hasĕ. = ಪಸೆ 1, (ಹಾಸೆ). A layer: a bed; a beautiful seat (Grj. 7, after 11; 10, after 97; J. 31, 18; 34, 33; My.; *cf.* ಅಸೆ); a spot on the ground decorated with flowers or colours (My.). ಹಾದರಗಿತ್ತಿಯ ಕಾಲು ಹಸೆಯ ಮೇಲೆ ನಿಲ್ಲದು. — ದಸೆ ಬರುವಾಗ್ಯೆ ಹಸೇ ಮೇಲೆ ರತ್ನ ಬಿತ್ತು. — ನಸೆ ಇದ್ದ ಹಲಗೆ ಸಿಕ್ಕಿದರೆ ಹಸೆ ಯಾಕೆ? — ನೆಸೆ ಕೊಟ್ಟವ ಹಸೆ ಕದ್ದು ಕೊಣ್ಡು ಹೋದ. — ಬಿಸಲಲ್ಲಿ ಹೋಗುವಾಗ ಹಸೇ ಸುದ್ದಿ ಯಾಕೆ? (Prvs.). — ಹಸೆಜಗಲಿ. An artificially raised spot to put the ornamented seat upon (My.). — ಹಸೆಮಣೆ. A plank used to form a hasĕ (My.); the ornamented seat itself (My.; ಆಸನ್ದಿ Si. 485).

ಹಸ್ತ hasta. = ಹತ್ತ. *The hand* (ಕರ, ಕೆಯ್ Nn. 19; ಕರ, ಕಯಿ, ಕೆಯ್ಯಿ 131). 2, *an elephant's trunk.* 3, an elephant (ಗಜ, ಆನೆ 131). 4, *a measure of length from the elbow to the tip of the middle finger.* 5, *the fore-arm, cubit.* 6, *the thirteenth lunar asterism* (ಋಕ್ಷಭೇದ, ನಕ್ಷತ್ರಭೇದ 131). 7, *quantity, abundance, mass* (at the end of compounds with words signifying "hair"; see ಕೇಶಹಸ್ತ and ಹಿಮ್ಮುಡಿ). 8, a bamboo (ತ್ವಕ್ಸಾರ, ಬಿದಿರ್ 131). 9, N. of a râkshasa (Abh. P. 13, 12). See Mr. s. ಕೋಪು and ನಾಟಕ. ಹಸ್ತದ ಗುಣ ಸ್ವಸ್ಥವಾದ ಮೇಲೆ ನೋಡ ಬೇಕು. — ಸ್ವಸ್ತವಿದ್ದವನ ಹಸ್ತ ನೋಡ ಬೇಕು (Prvs.). — ಹಸ್ತಕಡಗ. A bracelet for the wrist (Bp. 61, 27; My.).

ಹಸ್ತಕ hastaka. A mass of hair (ತುಱುಬು Mr. 320). 2, a position of the hands. 3, a mate, an associate, the hand of (B. 4, 81; Mhr.).

ಹಸ್ತಕಂಕಣ hasta-kaṅkaṇa. (Šmd. 386; Kk. 98). A bracelet for the wrist.

ಹಸ್ತಕೌಶಲ hasta-kauśala. Skilfulness of hand, manual dexterity.

ಹಸ್ತಕೌಶಲ್ಯ hasta-kauśalya. = ಹಸ್ತಕೌಶಲ. (My.).

ಹಸ್ತಕ್ರಿಯೆ hasta-kriyĕ. Any manual performance. (R.).

ಹಸ್ತಗತ hasta-gata. Gone into the hands of; come to hand, fallen into one's possession, procured, gained, obtained; fallen into the power, charge or care of. (My.; B. 5, 44; Mhr.).

ಹಸ್ತಗುಣ hasta-guṇa. Luck, quality of affecting, in a good or evil manner, the things touched, the works done, or the persons, business, etc. with whom or which connection is held, as supposed to inhere in every human agent: — the power or principle to which is referred, as the source and spring, the prosperousness or wretchedness, the successfulness or unsuccessfulness which attends and characterizes him through his course of life (Mhr.; My.).

ಹಸ್ತಚಾಪಲ್ಯ hasta-čâpalya. = ಹಸ್ತಕೌಶಲ. (Sk.; R.).

ಹಸ್ತತಲ hasta-tala. The palm of the hand.

ಹಸ್ತತಲಾಮಲಕ hastatala-âmalaka. An Emblic myrobalan fruit on the palm of the hand (Čpr. 3, 68).

ಹಸ್ತತಲಾಮಲಕನ್ಯಾಯ hastatalâmalaka-nyâya. The manner of an âmalaka on the palm of the hand, *i. e.* indisputable (My.).

ಹಸ್ತದೋಷ hasta-dôsha. A slip of the hand, a mistake committed by the hand. (My.).

ಹಸ್ತಪರೀಕ್ಷೆ hasta-parîkshĕ. Examination (of the lines) of the hand (by a chiromancer, My.).

ಹಸ್ತಬಿಮ್ಬ hasta-bimba. *Perfuming or smearing the body with unguents.*

ಹಸ್ತಭೂಷಣ hasta-bhûshaṇa. An ornament of the wrist, a bracelet (ಕಂಕಣ Nn. 45).

ಹಸ್ತಮರ್ದನ hasta-mardana. Crushing or bruising with the hand. See ಕಿಮುಟ್ಟು 1.

ಹಸ್ತಲಾಗ hasta-lâga. A respectful catch or hold of the hand of a râja to lead him (My.).

ಹಸ್ತಲಾಘವ hasta-lâghava. Lightness of hand, manual readiness, dexterity; sleight of hand, legerdemain. (My.).

ಹಸ್ತವರ್ತಿ hasta-varti. Being or remaining in the hand, seized, held, caught hold of. See ಹತೋಟಿ.

ಹಸ್ತವಾರಣ hasta-vâraṇa. Restraining the hand (of another); *warding off a blow.*

ಹಸ್ತವಿಭೂಷಣ hasta-vibhûshaṇa. = ಹಸ್ತಭೂಷಣ. (ಕಂಕಣ, ಮುಂಗೆಯ್ಯಲ್ಲಿ ಇಕ್ಕುವನ್ಥಾ ಆಭರಣ Nn. 127).

ಹಸ್ತವಿಮರ್ದನ hasta-vimardana. = ಹಸ್ತಮರ್ದನ. See ಕಿಮುಟ್ಟು 2.

ಹಸ್ತಶುದ್ಧಿ hasta-śuddhi. Successful practice, as that of a skilful physician (My.).

ಹಸ್ತಸೂಚನ hasta-sûčana. Indication by signs of the hand. See ಕೆಯ್ಸಿವಾಸು.

ಹಸ್ತಸೂತ್ರ hasta-sûtra. A bracelet worn on the wrist, *a cord used as an amulet worn round the wrist at nuptials,* etc. (ಮುಂಗೆಯ್ಯಲಿಹ ಸರ್ವಭೂಷಣಂ Mr. 340).

ಹಸ್ತಾಕ್ಷರ hasta-akshara. One's own sign manual, autograph signature, handwriting (ಕೆಯ್ಬರಹ G.; My.).

ಹಸ್ತಾನ್ತರ hasta-antara. That is in hand or charge: a treasury (My.).

ಹಸ್ತಾನ್ತ್ರ hasta-antra. = ಹಸ್ತಾನ್ತರ. ಹಸ್ತಾನ್ತ್ರ ಬಾಕಿಯಾದರೆ ಪುಸ್ತಕ ಏನು ಮಾಡೀತು? (Prv.).

ಹಸ್ತಾನ್ವೇಷಣ hasta-anvêshaṇa. Seeking for or searching with the hand or hands. See ತಡವು 3, ಸಿದುಗು.

ಹಸ್ತಾಭರಣ hasta-âbharaṇa. Adorned with the nakshatra called hasta (J. 31, 10). 2, an ornament for the wrist, a bracelet (31, 10).

ಹಸ್ತಾಹಸ್ತಿ hastâ-hasti. Hand to hand (Sk.). See ಹತ್ತಾಹತ್ತಿ.

ಹಸ್ತಿ hasti. Having hands, having a trunk; *an elephant* (ಆನೆ Nn. 144). 2, N. of a king, the founder of Hastinâpura.

ಹಸ್ತಿತ hastita. Thrown. See ಅಪ-.

ಹಸ್ತಿದನ್ತ hasti-danta. The tusk of an elephant; ivory (My.; B. 4, 24).

ಹಸ್ತಿನಖ hasti-nakha. *A raised mound of earth or masonry protecting the access to the gate of a city or fort* (furnished with an inner staircase, etc., ಹೆಬ್ಬಾಗಿಲ ಕಟ್ಟು Hlâ.). See Nr. s. ಮಣ್ಣು.

ಹಸ್ತಿನಾಪುರ hastinâ-pura. N. of a city founded by king Hasti (Hastin), the capital of the kings of the lunar race (about fifty-seven miles north-east of Delhi on the banks of a channel of the Ganges). (J. 2, 2. 4; 13, 7).

ಹಸ್ತಿನಾವತಿ hastinâ-vati. = ಹಸ್ತಿನಾಪುರ. (J. 2, 11. 13; 4 sum.; 24, 81).

ಹಸ್ತಿನಿ hastini. *A female elephant.* 2, a woman of a particular class (having thick lips, thick hips, etc., Grj. 7, after 11).

ಹಸ್ತಿಪಕ hasti-paka. An elephant-driver or rider; *an elephant-keeper.*

ಹಸ್ತು hastu. P. p. of ಹಸಿ 3. (My.). ಹಸ್ತಿರುವವನು (ಕ್ಷುಧಿತ, etc. Si. 358). ಮೂತು ಕೊಣ್ಡು ಹೋದವ ಉಣ್ಡು ಬನ್ದ, ಮಾಣಿಕ್ಯ ಕೊಣ್ಡು ಹೋದವ ಹಸ್ತು ಬನ್ದ (Prv.).

ಹಸ್ತೋದಕ hasta-udaka. Hand-water, *i. e.* the water which at meals is poured upon the left hand that had been on the leaf-plate whilst the right was conveying some morsels of food to the mouth (My.).

ಹಸ್ತೋನ್ಮುಕ್ತಿ hasta-unmukti. Loosening from or with the hand. See ಪಿಳಿಲ್.

ಹಸ್ತ್ಯ hastya. Belonging to the hand, done with the hand, manual; given with the hand. (R.).

ಹಸ್ತ್ಯಾರೋಹ hasti-ârôha. *An elephant-rider, an elephant-driver.*

ಹಸ್ರು hasru. = ಹಸರು, etc. (My.). — ಹಸ್ರುಗಣೆ. N. of a plant (ಲಲಿತ Mr. 121).

ಹಹಹ ha-ha-ha. (= ಅಹಹ). Ha, ha, ha! (My.; Mhr.).

ಹಳ haḷa. (*Cf.* ಪಳಕನೆ). — ಹಳ ಹಳ. rep. Unsteady shine or motion (Bp. 5, 33). — ಹಳ ಹಳಿಕೆ. = ಹಳ ಹಳ. (Bh. 8, 23, 5; 8, 24, 53).

ಹಳಚಿಕೆ haḷačikĕ. Flash, glitter, shine (ತೊಳಗು, ಬೆಳಗು, Čt. I, 23).

ಹಳಚು haḷaču. = ಪಳಚು, etc. To strike against, etc (Bp. 51, 70; 61, 27; Bh. 4, 2, 56; 6. 3, 1; 8, 21 sum.; 8, 23, 10; 10, 7, 2; Râm. 3, 6, 14; 5, 9, 5; 6, 10, 9; see ಹಲು ಹಲು-).

ಹಳದಿ haḷadi. = ಅಳದಿ, ಪಳದಿ. The colour of turmeric, yellow, greenish yellow (ಅವದಾತ, ಪೀತ Si. 427; ಶ್ಯಾಮ, ಹರಿತ್ 443; C.; B. 1, 5). See ಅಮ್ಬೆ-. — ಹಳದಿಪಾವಟೆಮರ. A small cultivated tree, yielding a red dye, the Indian

mulberry tree, Morinda citrifolia Lin. (St. & Pl.). — ಹಳದಿಬಣ್ಣದ ಹಾವು. The venomous snake Trimeresurus erythrurus (Bd.). — ಹಳದಿಯೆವೆ. -ಎವೆ. (ತೋಕ್ಮ, ಹರಿತಯವ Si. 304). — ಹಳದಿವಣ್ಣ. -ಬಣ್ಣ. The colour yellow (Bp. 12, 17). — ಹಳದೀ ಗಿಡ. The long-rooted turmeric, Curcuma longa Lin. (St. & Pl.). — ಹಳದೀ ಗೋರಟೆ. (ಕುರಣ್ಟಕ, ವಜ್ರದನ್ತಿ, ಸಹಚರಿ G.). — ಹಳದೀ ಚನ್ದಣ. (ಹರಿಚನ್ದನ Si. 228). — ಹಳದೀ ಚನ್ದನ. (ಕಾಲಾನುಸಾರ್ಯ G.). — ಹಳದೀ ನೀರುಳ್ಳಿ. (ಲತಾರ್ಕ, ದುದ್ರುಮ, ಹರಿತಪಲಾಣ್ಡು Si. 159). — ಹಳದೀ ಬಣ್ಣ. The colour of turmeric (B. 3, 52; 4, 209; 5, 252; ಹರಿದ್ರಾಭ G.). ಹಳದೀ ಬಣ್ಣವುಳ್ಳದು (ಹರಿಣಿ, ಹರಿತ Si. 419). — ಹಳದೀ ಸಾಮನ್ತಿ. (ಪೀತಮಾಗಧಿ, ಹೇಮಪುಷ್ಪಿಕೆ Si. 139). — ಹಳದೀ ಸಾಮನ್ತಿಗೆ. = ಹಳದೀ ಸಾಮನ್ತಿ. (My.).

ಹಳದು haḷadu. = ಹಳದಿ. (ಅವದಾತ G.; B. 3, 99; Mhr. ಹಳದ).

ಹಳವಣ್ಡ halavanda. Inquietude; painful restlessness; great perturbation (S. Mhr.; Mhr. ಹಳಹಳ, ಹಳಹಾಳ).

ಹಳವಳಿಸು halavaḷisu. To become unquiet and anxious, to become painfully restless, to be greatly perturbed (Râm. 6, 47, 38; J. 13, 59; 21, 4; 23, 27; Mhr. ಹಳಹಳಣೇಂ).

ಹಳಸು haḷasu. = ಹಲಸು. (ಪನಸ, ಕಣ್ಟಕಿಫಲ Nr.).

ಹಳಹಳಿ haḷahaḷi. = ಹಳವಣ್ಡ. (ಉಮ್ಮಳ, ಚಿನ್ತೆ G.).

ಹಳಹಳಿಸು haḷahaḷisu. = ಹಳವಳಿಸು. (Bh. 3, 9, 25).

ಹಳಿ haḷi. (= ಹಳುಕು). A bit, a piece, a lump, as of sugar-candy or camphor (My.; *cf.* ಹಣಿ 3).

ಹಳಿಗ haḷiga. (ಹೞಿಗ?). (The cripple, *cf.* ಹೞಿವ? or the derided one, *cf.* ಹೞಿ 1?). The three-legged attendant of Šiva (ಭೃಂಗಿ Čt. I, 68).

ಹಳಿದಿಸು haḷidisu. = ಪಳಯಿಸು, etc. To lament.

ಹಳಿದಿಸುವ haḷidisuva. Lamentation (ವಿಲಾಪ, ಪರಿದೇವನ Nr.).

ಹಳುಕು haḷuku. (= ಹಳಿ). A bit, a piece, a lump (My.; Tě. ಪಲುಕು). See ತನಿ-; Râm. 6, 53, 88; Bh. 8, 24, 24. — ಹಳುಕುವೆರಸು. -ಬೆರಸು. A bit, etc. to be mixed with (Bh. 21, 5).

ಹಳುಂಗು haḷuṅgu. = ಹಣಿಕು, etc. To look slily or cautiously, etc. (Grj. 1, after 131).

ಹಳುವರ haḷuvara. Tenderness, delicateness, leanness (Râm. 6, 51, 64; Mhr. ಹಳವಟ, ಹಳವಾರ).

ಹಳುವಾಯಿ haḷuvâyi. A mode in saṅgîta (M. 19, 15; V. 11, 9).

ಹಳ್ಳ haḷḷa. = ಪಳ್ಳ. Depth; etc. (C.; Bp. 44, 5; Râghč. 17, 56; Si. 83. 91. 112. 115). ಒನ್ದು ನಾಯಿ ಮಾಂಸದ ಕರಣೆಯನ್ನು ಕಚ್ಚಿ ಕೊಣ್ಡು, ಹಳ್ಳಾ ದಾಟುವಾಗ (B. 2, 4). ಕುಱಿಗಳಿಗೆ ಹಳ್ಳದ ನೀರು ಕುಡಿಸುತ್ತಿದ್ದನು (5, 45). ಗಿರಿಯ ತುದಿಯಿನ್ದ ಒಸರಿ ಹರಿ ತಪ್ಪ ಹಳ್ಳ (ನಿರ್ಝರ Mr. 97). ಒಱತು ಹರಿವ ಹಳ್ಳ (ಸ್ರೋತಸ್ Nr.). ಸೋರುವ ಮನೇಲಿ ಉಚ್ಚೆ ಹೊಯ್ದರೆ ಹಳ್ಳದ ಕೂಡೆ ಹಳ್ಳ.— ಹನಿ ಕೂಡಿದರೆ ಹಳ್ಳ, ತೆನೆ ಕೂಡಿದರೆ ಬತ್ತ (Prvs.). — ಹಳ್ಳ ಕೊಳ್ಳ. dupl. (My.). — ಹಳ್ಳ ಪಳ್ಳ. dupl. (My.).

ಹಳ್ಳಿ haḷḷi. = ಪಳ್ಳಿ 1. A settlement, etc. (Râm. 3, 2, 16; Bh. 1, 8, 93; C.). ಗೊಲ್ಲರ ಹಳ್ಳಿ (ಅಭೀರಪಲ್ಲಿ, ಘೋಷ); ಬೇಡರ ಹಳ್ಳಿ (ಪಕ್ಕಣ, ಶಬರಾಲಯ Nr.). ಹಟ್ಟಿಕಾಱರಿಹ ಹಳ್ಳಿ (ಘೋಷ Mr. 187). ಹಳ್ಳೀ ಗವುಡನಿಗೆ ಹುಳ್ಳೀ ಕಜ್ಜಾಯ.— ಹಳ್ಳಿ ಹಾಱಾದರೇನು? ಡಿಳ್ಳಿ ಪುಸ್ಸಾದರೇನು?— ಹಳ್ಳೀ ಕುಱುಬರಿಗೆ ಗಾಜೇ ಮಾಣಿಕ್ಯ.— ಹಳ್ಳೀ ದೇವರಿಗೆ ಕೊಳ್ಳಿಯೇ ದೀಪ.— ಬೆಳ್ಳುಳ್ಳಿ ಆದರೆ ಹಳ್ಳಿಯವಗೆ ಆಗದೇ?— ಲಾಭವಿಲ್ಲದೆ ಸೆಟ್ಟಿ ಹಳ್ಳಿಗೆ ಹೋಗ (Prvs.). — ಹಳ್ಳಿಗಾಡಿನವ. -ಅವ. A rustic (My.). — ಹಳ್ಳಿಗಾಡು. -ಕಾಡು. A hamlet surrounded by a forest, a hamlet without civilization (My.; Si. 113). — ಹಳ್ಳಿ ಪಳ್ಳಿ. dupl. (My.). — ಹಳ್ಳಿಸರಡು. N. of a plant (ಜೋರಖಣ್ಡಿಕ Mr. 142).

ಹಳ್ಳಿಕಾತಿ haḷḷi-kâti. A female villager (Bh. 2, 2, 78).

ಹಳ್ಳಿಕಾಱ haḷḷi-kâṟa. A male villager (Râm. 3, 6, 8).

ಹಳ್ಳು haḷḷu. 1. = ಹರಳು, etc. (My.). — ಹಳ್ಳುಗುಣಿಮಣಿ. = ಹರಳುಗುಣಿಮಣಿ. (My.).

ಹಳ್ಳು haḷḷu. 2. = ಅಳ್ಳು 3, etc. — ಹಳ್ಳಯ್ಯ. -ಅಯ್ಯ. = ಅಳ್ಳಯ್ಯ. (Bp. 61, 1. 6). See ಎಱಿಹೂಟ-.

ಹೞ hala. 1. = ಪೞ 2, etc. Oldness: old, etc. — ಹೞಗನ್ನಡ. -ಕನ್ನಡ. = ಪೞಗನ್ನಡ. (My.).

ಹೞ hala. 2. (ಹಳ). = ಪೞು 2. Weeds, useless shrubs (My.).

ಹೞಕು halaku. Decay; that is decayed or rotten, etc. (ಜೊಬ್ಬೆ Šmd. II).

ಹೞಚು halaču. = ಹೞಸು. (S. Mhr.).

ಹೞತು halatu. = ಹೞದು. (My.). ಹೊಸತು ಮೆಯ್ಯಲ್ಲಿ, ಹೞತು ಹಗ್ಗದಲ್ಲಿ (Prv.).

ಹೞದು haladu. = ಪೞದು, etc., ಹೞತು. That is old, etc. (ಜೀರ್ಣ, ಜರತ್, ಪುರಾಣ, ಪ್ರತ್ನ, ಪ್ರತನ, ಪುರಾತನ Hlâ.; ಅನವ್ಯ, etc. Mr. 435; ಪುರಾಣ, ಜರಠ Nn. 138; Bp. 32, 22; My.). ಹೞದಾದುದು (ಘನ, ಜರಠ Nn. 15; ಜರಠ, ಪುರಾಣ 146). ಹೞದಾದನ್ತಾದ್ದು (ಜೀರ್ಣ, etc. Dhw.). ಹೞದಿನಲ್ಲಿ (Nn. 15). ಹೞದು ಮಾಱಿ ಹೊಸದಿಲ್ಲ, ಬಿಳಿದು ಮಾಱಿ ಬಣ್ಣವಿಲ್ಲ (Prv.).

ಹೞಬ halaba. An old man; an old inhabitant; an old servant; one of the ancients, an ancestor (My.; B. 4, 157. 217).

ಹೞಮೆ halamě. = ಪೞಮೆ (see additions). Antiquity, old times: an old traditional saying, a tradition (Râm. 6, 45, 39).

ಹೞಯಿಗೆ halayigĕ. = ಪೞಯಿಗೆ, etc. (ವೈಜಯನ್ತಿ, ಪತಾಕೆ, ಕೇತು, ಕೇತನ, ಧ್ವಜ Hlâ.). ಹೞವಿಗೆಯ ತಲೆಮೊಗದ ಕೆಳಗೆ ಕಟ್ಟಿದ ಕುಂಚ (ಉಚ್ಚೂಡ, ಅವಚೂಲ Hlâ.).

ಹೞವಿಗೆ halavigĕ. = ಹೞಯಿಗೆ, etc. (ಪತಾಕ, ಕೇತು, ಕೇತನ, etc. Mr. 287; ಟೆಕ್ಕೆ Čt. I, 53; Grj. 4, after 120; Bp. 56, 13. 17; 58, 49). — ಹೞವಿಗೆಗೋಲ್. -ಕೋಲ್. A flag-staff (Bh. 6, 5, 13).

ಹೞವು halavu. = ಹೞುವು, etc. (ಮಹಾರಣ್ಯ G.).

ಹೞಸು halasu. = ಪೞಸು, ಹೞಚು. To spoil (v. i.), to become foul or old (My.). ಹೞಸಿ ಹೋದದು (ಯಾತಯಾಮ, ಜೀರ್ಣ Si. 443). ನಾಯಿ ಹಸಿದಿತ್ತು, ಹಿಟ್ಟು ಹೞಸಿತ್ತು (Prv.). — ಹೞಸಲು. Spoiling: that which is spoiled (My., in ಹೞಸಲನ್ನ, ಹೞಸಲುಹಿಟ್ಟು).

ಹೞಿ hali. 1. = ಪೞಿ 1. To revile, etc. (C.; Bp. 59, 54; B. 1, 4; 2, 14; 3, 19; 4, 181). ಹೞಿವ ನುಡಿ (ದುರ್ವಿಗಾನ, ದ್ವಿತಯವಾಕ್ Mr. 86).

ಹೞಿ hali. 2. = ಪೞಿ 2, etc. Blame, rebuke, calumny, etc. (My.). — ಹೞಿ ಪೞಿ. dupl. (Abh. P. 16, 56).

ಹೞಿವು halivu. = ಹೞಿ 2, etc. (ಗರ್ಹೆ Nr.; Râm. 6, 53, 6.

108). ನೀಚವಮು ದುಷ್ಟಮು ಗರ್ಹ್ಯ ಎಮ್ಬಿವು ಹಳಿವಿನೊಳ್ ಅಪ್ಪವು (Nr.).

ಹಳಿಸು halisu. To cause to reprehend or chide, etc.; to cause one's self to be blamed or chidden, etc. (C., with ಕೊಳ್ಳು). ಹಳಿಸಿ ಕೊಮ್ಬುವನು (ಗರ್ಹ್ಯಾಧೀನ, ವಕ್ತವ್ಯ); ಹಳಿಸಿ ಕೊಮ್ಬ ನುಡಿಯ ನುಡಿವಂ (ಗರ್ಹ್ಯವಾದಿ, ಕದ್ವದ Nr.).

ಹಳುವ haluva. = ಪಳುವ, etc., ಹಳುವು. (J. 19, 7; 21, 4; Râm. 3, 2, 16; Bh. 1, 8, 93). ನೆಟಿಲು ಸೇರ ಬೇಕೆನ್ದು, ಹಳುವಕ್ಕೆ ಹೋದ ಹಾಗೆ (Prv.).

ಹಳುವು haluvu. = ಪಳು 1, etc., ಹಳವು, ಹಳುವ. A forest, a jungle (Bh. 1, 3, 21; 3, 5, 16; B. 2, 23; 3, 63; 4, 205).

ಹಳೆ halĕ. = ಪಳೆ, etc., ಹಳ 1. Oldness: old, etc. — ಹಳೆಗಂಚುಗನ್ನಡಿ. -ಕಂಚು-ಕನ್ನಡಿ. An old bell-metal mirror (Čpr. 9, 5). — ಹಳೆಗನ್ನಡ. -ಕನ್ನಡ. = ಹಳಗನ್ನಡ. — ಹಳೆಗನ್ನಡ ಲಿಪಿ. The old Kannada character (Bp. 5, 53). — ಹಳೆಗರ್ಣಾಟಕ. -ಕರ್ಣಾಟಕ. A low class of Karnâṭaka Brâhmaṇas (My.). — ಹಳೆಚಿನ್ದಿ. An old rag (My.). — ಹಳೆತರ. Old manner, etc. (ಜೀರ್ಣ G.). — ಹಳೆದಾರಿ. An old road (My.). — ಹಳೆನೀರು. Water not fresh, stale water (My.). — ಹಳೆಪೇಟೆ. N. (My.). — ಹಳೆಬಟ್ಟೆ. An old garment (My.). See Prv. s. ಹಾವು. — ಹಳೆಮಗ. A house-slave (My.). — ಹಳೆಮಾತು. An old, former word (My.). — ಹಳೆಯ. -ಅ 3. ಹಳಬ, q. v. (Bp. 59, 29). — ಹಳೆಯ ತುಱುಹಟ್ಟಿ. (ಗೋಷ್ಠೀನ Nr.). — ಹಳೆಯದು. -ಅದು. That is old, etc. (ಚಿರ, ಪೌರಾಣ Nn. 165). — ಹಳೆಯ ನೆಲ್ಲು. = ಪಳನೆಲ್, q. v. — ಹಳೆಯ ಸಾಲ. A debt contracted by one's deceased father (My.; Bp. 26, 61). — ಹಳೆಯ ಸೀರೆ. (ಪಟಚ್ಚರ Hlâ.; ಪಟಚ್ಚರ, ಜೀರ್ಣವಸ್ತ್ರ Nr.). ಮಾಸಿದ ಹಳೆಯ ಸೀರೆ (ನಕ್ತಕ, ಕರ್ಪಟ Nr.). — ಹಳೆಯೆತ್ತು. -ಎತ್ತು. An old bullock. ಹಳೆಯೆತ್ತು ಹೊಲಿಯಲ್ಲಿ ಹೂಡಿ ನೋಡು (Prv.). — ಹಳೆವಾತು. -ಮಾತು. = ಪಳೆವಾತು. A tradition, a legend (ಅನಾದಿವಾರ್ತೆ, ಐತಿಹ್ಯ Hlâ.). — ಹಳೆವಾರ್ತೆ. = ಹಳೆವಾತು. (Bp. 32, 22). — ಹಳೆ (*i. e.* ಹಳೆಯ) ಗಣ್ಡ. The old husband. ಹಬ್ಬದಲ್ಲಿ ಹಳೇ ಗಣ್ಡನೇ? (Prv.). — ಹಳೇದು. = ಹಳೆಯದು. (C.; ಪುರಾಣ, etc. Si. 374; B. 4, 187). — ಹಳೇ ನಾಣ್ಯ. An ancient coin (B. 5, 212). — ಹಳೇ ಬಟ್ಟೆ. = ಹಳೆಬಟ್ಟೆ. (ಪಟಚ್ಚರ Si. 223). — ಹಳೇ ರೊಟ್ಟಿ. Bread not fresh, stale bread (B. 3, 111).

ಹಳೆದು halĕdu, (ಹಳದು, etc.). That is old, etc. (C.; B. 3, 79. 111). ಹಳೆದಹುದು (ಪುರಾಣ, ಪ್ರತನ, ಪ್ರತ್ನ, ಪುರಾತನ, ಚಿರನ್ತನ Nr.).

ಹಳ್ಗಿ halgi. = ಪಳ್ಗಿ. The putting of full-grown fruits (cocoa-nuts and pods) into smoke for preservation (ದೂವೆಯೊಳ್ ತಱಲಂ ಪೂಡ್ದಿ ಕ್ರಿಯೆ Šmd. I, o. r. ಪೂಟ್ಟಿ-).

ಹಾ hâ. *An interjection expressing grief* (ದುಃಖ Nn. 140), *pain, weariness*, disgust (ಹೇಯ, ಜುಗುಪ್ಸೆ 140), command (ಸಮ್ಬೋಧೆ, ಹೇಱುವುದು 140), remembrance (ಸ್ಮರಣೆ, ನೆನವುದು 104), laughter (ನಗೆ, ನಗುವುದು 104), stopping (ಹೋ ಎಮ್ಬುದು, ನಿಲ್ಲಿಸುವುದು 104), joy or surprise, and anger or reproach. See Grj. 8, 67; Bp. 11, 3; 14, 31; 28, 12; 36, 6; 45, 7; 46, 22; J. 13, 50. 53. 60. — ಹಾ ಹಾ. rep. (Grj. 8, 67; Bp. 45, 7). See ಹಾಹಾ separately. — ಹಾಹಾರವ. The sound of ಹಾ ಹಾ (Čpr. 5, 17; Bp. 46, 34).

ಹಾಂ hâm. = ಹಾಂವು, etc. (Bh. 8, 23, 40; C.).

ಹಾಂ hâm. Ah! yes! (B. 5, 144. 149. 150; Mhr.).

ಹಾಂವು hâmvu. = ಹಾಂ, ಹಾವು. A snake (ಕುಮ್ಭೀನಸ, ವಿಷಧರ, ಸರೀಸೃಪ Čb.; C.).

ಹಾಂಸೆ hâmsĕ. = ಪಾವಸೆ, etc., ಹಂಸೆ. (My.).

ಹಾಕಸು hâkasu. = ಹಾಕಿಸು. (C.). ಬೇಡಿ ಹಾಕಸಿ ಕೊಣ್ಡನ್ಥವನು (ಶೃಂಖಲಿತ Dhw.).

ಹಾಕಿಸು hâkisu. = ಹಾಯ್ಕಿಸು. To cause to put, to have put (as big stones, etc. Bp. 16, 10; as a cloth, B. 5, 39), to have put or poured (as milk, B. 2, 13), to cause to put or establish (as a school, B. 5, 188. 302), to lay out, to plan, to plant (as a garden, Si. 118), etc. ಹೊಱಗೆ ಹಾಕಿಸಿ ಕೊಣ್ಡ (ಅವಕೃಷ್ಟ); ಹೊಱಗೆ ಹಾಕಿಸಿ ಕೊಣ್ಡವನು (ನಿಷ್ಕಾಸಿತ, ನಿಷ್ಕ್ರಾಮಿತ G.). See ಅಚ್ಚು-.

ಹಾಕು hâku. = ಆಕು 1, ಹಾಯಿಕು, ಹಾಯ್ಕು. To put (as fishes into a basket, Si. 86; as the hand into the pocket, B. 3, 62; as money into a box, 4, 52; as medicine into a bottle, 4, 226); to put on (as clothes, B. 3, 32; as a turban, 3, 80; as ornaments, 5, 76); to put or establish (as a school, B. 5, 270; as a shop, 5, 273); to lay out, to plan, to plant (as a garden, Si. 118); to sow (ಪಾಲಿನಲ್ಲಿ ಹಱವೆಯಾದರೂ ಹಾಕ ಬಾರದು Prv.); to give (as bread to a cow, B. 2, 19; as rice, ನೂಕುವವನು ಹಾಕನು, ಬೋಕಿಯವನು ಕೊಡನು Prv.); to put or pour (as milk, Si. 241; as water, B. 5, 201); to cast or throw (as a mirror, B. 3, 82; as stones, etc., C.); to bring forth (as beasts bring forth young, C.); ಕನ್ದ ಹಾಕಿದ ಆಕಳು ವೇಹತ್ ಎನಿಸುಗು Nr.; ಅವತೋಕೆ ಎಮ್ಬುವದು ಕನ್ದು ಹಾಕಿದ ಹಸುವು Si. 321); to place or write (as numbers on the dial-plate of a clock, B. 3, 87); to apply (as the hand to a work, B. 5, 206; as the mind, ದ್ರವ್ಯ ಗಳಿಸುವದಕ್ಕೆ ಎನ್ದಿಗೂ ಮನಸು ಹಾಕುತ್ತಿದ್ದಿಲ್ಲ, 5, 206); to appropriate, to devote (as wealth, B. 5, 204); to put (as to school, B. 5, 269; as to learn any science, 5, 82. 214); to employ, to perform (as magical art, môha, G. 572; as spying, hŏnču, B. 3, 21). ಕೂಸಿಗೆ ಹಾಲು ಹಾಕುವ ಸಿಮ್ಪೆ (ಒಳಲೆ); ಮೆಯ್ಯೊಳಗೆ ಕವಚವನ್ನು ಹಾಕಿ ಕೊಣ್ಡವನು (ವ್ಯೂಢಕಂಕಟ); ಕವಚವನ್ನು ಹಾಕಿ ಕೊಣ್ಡವನು (ಸನ್ನದ್ಧ G.). ಹಾಕುವದಕ್ಕೆ ತೆಗಿಯುವದಕ್ಕೆ ಗವುಡನ ಕೋಳವೇ? — ಎಣ್ಣೆ ಹಾಕಿದರೆ ಕಣ್ಣಿಗೆ ಗುಣ, ಮಣ್ಣು ಹಾಕಿದರೆ ಬುಡಕ್ಕೆ ಗುಣ. — ಬರ ಹದಲ್ಲಿದ್ದ ಕರಿ ಮರಿ ಹಾಕೀತೇ? — ಮಾಡಿ ಮಾಡಿ ಮಡಕೆ ತುಮ್ಬುತ್ತಾನೆ, ನೋಡಿ ನೋಡಿ ಬಾಯಲ್ಲಿ ಹಾಕುತ್ತಾನೆ (Prvs.). Remark: ಹಾಕು is frequently used in a pleonastic manner, *e. g.* ನಾಯಿಗಳನ್ನು ಒನ್ದು ಗಿಡಕ್ಕೆ ಕಟ್ಟಿ ಹಾಕಿ, ಓಡಿ ಹೋದನು (B. 2, 53). ಅವನನ್ನು ಹಿಡಿದು, ಚಾವಡಿಗೆ ಒಯ್ದು, ಕಟ್ಟಿ ಹಾಕಿದರು (3, 23). ಆನೆಯನ್ನು ಕಟ್ಟಿ ಹಾಕುವ ಲೋಹದ ಸರಪಣಿ (ಶೃಂಖಲ, etc. Si. 271); ದನಗಳನ್ನು ಕಟ್ಟಿ ಹಾಕುವ ಗೂಟ (ಶಿವಕ); ದನಗಳನ್ನು ಕಟ್ಟಿ ಹಾಕುವ ಕೊರಳ ಕುಣಿಕೆಹಗ್ಗ (323); ಅಟ್ಟಿಸಿ ಹಾಕುವದು (ಪವಮಾಪಣ, ಮಾರಣ, etc. 297).

ಹಾಕುವಿಕೆ hâkuvikĕ. Putting, throwing, etc. (ಕ್ಷಿಪೆ, ಕ್ಷೇಪಣ Si. 390). ಈಚೆಗೆ ತೆಗದು ಹಾಕುವಿಕೆ, ಮೇಲಕ್ಕೆ ಎಱೆದು ಹಾಕುವಿಕೆ (ನಿರ್ಹಾರ, ಅಭ್ಯವಕರ್ಷಣ 393); ಮೇಲಕ್ಕೆ ಹಾಕುವಿಕೆ (ಉತ್ಕ್ಷೇಪಣ 400); ಹುಟ್ಟಿ ಹಾಕುವಿಕೆ (ಪ್ರಸವ 458).

ಹಾಗ hâga. = ಪಾಗ, ಹಾಗು. One anĕ two kâsus (C.); one-fourth. ಕಡದು ಹಾಗ ಪಾಲು ನೀರು ಬೆರಸಿದ ಮಜ್ಜಿಗೆ (ತಕ್ರ, ಪಾದಾಮ್ಬು Si. 316). ಹಾಗದ ಕೋತಿ ಮುಪ್ಪಾಗದ ಬೆಲ್ಲ ತಿನ್ತು.— ಹಾಗೆದ ಕೋಟಿ ಮುಪ್ಪಾಗದ ಮೇವು ತಿನ್ತು.— ಹಾಗದ ಗೋಡಿ ಮುಪ್ಪಾಗದ ಬೆಲ್ಲ ತಿನ್ತು.— ಅಡು ಹಾಗ, ಕೂಲಿ ಮುಪ್ಪಾಗ.— ಊಟ ಹಾಗ, ಪಲಹಾರ ಮುಪ್ಪಾಗ.— ಭಾಗಾಕಾರಾ ತಿಳಿಯದಿದ್ದರೆ ಹಾಗದ ಲಕ್ಷಣ ತಿಳಿಯದೇ?— ಸಾವಿರ ತೂಕ ಚಿನ್ನಕ್ಕೆ ಹಾಗ ತೂಕ ಮುಚ್ಚು.— ಸೂಜಿ ಚಿನ್ನವಾದರೆ ಹಾಗದ ಕಾಸು (Prvs.). See ನೆಲ-; Bp. 28, 5; 29, 15. 28; Prv. s. ಹಾಗಲವಾಡಿ.

ಹಾಗಲ್ hâgal. ಹಾಗಲು. = ಪಾಗಲ. A winding plant with bitter fruit, Momordica charantia Lin. (ಕರ್ಕೋಟಕಿ, ಪೀತಪುಷ್ಪ Mr. 146; ಕಾರವೇಲ್ಲ, ಕಟಲ್ಲಕ, ಸುಷವಿ Nr.; T. ಪಾಗಲ್, M. ಪಾವಲ್). See ಮಡುವಾಗಲ್.

ಹಾಗಲ hâgala. = ಹಾಗಲ್. (My.; Si. 160). — ಹಾಗಲಕಾಯಿ. The Momordica fruit (C.; ಕಟಲ್ಲಕ, ಸುಷವಿ G.). — ಹಾಗಲಗಿಡ. = ಹಾಗಲ. (ಕಾರವೇಲ್ಲ, etc. Si. 160; My.). — ಹಾಗಲಬಳ್ಳಿ. = ಹಾಗಲ. (C.). — ಹಾಗಲವಾಡಿ. -ಪಾಡಿ. N. of a place. ಹಾಗಲವಾಡಿಗೆ ಹೋದರೆ ಗೀದರೆ ಹಾಗಕ್ಕೊನ್ದೆಮ್ಮೆ ತನ್ದರೆ ಗಿನ್ದರೆ ನಿಮ್ಮವರಿಗೆ ಮಜ್ಜಿಗೆ ಕೊಟ್ಟೇಯಾ?— ಹಾಗಲವಾಡಿಸಂಸ್ಥಾನದ ಹಾಗೆ (Prvs.). — ಹಾಗಲಹಣ್ಣು. A ripe Momordica fruit (C.; B. 2, 38).

ಹಾಗು hâgu. = ಹಾಗ, etc. — ಹಾಗೂ ವೀಸ. A hâga and a vîsa, *i. e.* 1 anĕ 5¼ kâsus (My.). ಬೇಗ ಮಾಡಿದವನಿಗೆ ಹಾಗೂ ವೀಸ.— ಮುಗ್ಗಿ ಬಾರದಿದ್ದರೆ ಹಾಗೂ ವೀಸ ಗುಣಿಸು! ಅನ್ದ.— ಬೀಗನ ಹತ್ತರ ಹೋಗಿ, ಹಾಗೂ ವೀಸ ಕೇಳಿದ ಹಾಗೆ (Prvs.).

ಹಾಗೆ hâgĕ. = ಅಹಗೆ, etc., ಹಾಂಗೆ. In that manner or way, thus, so; like; as; as if; likewise; so that; without cause, for nothing (ವೋಲ್ Śmd. 19 Cm.; ವತ್, ವಾ, ಯಥಾ, ತಥಾ, ಇವ, ಏವಂ Si. 473). ಆಕಳ ಕೊಳಗು ಕುದುರೆಯ ಕೊಳಗಿನ ಹಾಗಲ್ಲ, ಸೀಳಿರುತ್ತವೆ (B. 1, 21). ಕಣಿಕೆ ನನ್ನ ಕೈಗ್ಗೆ ನಿಲುಕುವ ಹಾಗಿಲ್ಲ (2, 19). ಮನಸ್ಸಿಗೆ ಬನ್ದ ಹಾಗೆ ತುಟ್ಟಿ ಮಾಡುತ್ತಿದ್ದರು (3, 13). ಅವರ ದನಗಳಿಗೆ ಒನ್ದು ಕಡೆಯಲ್ಲಿ ಮೇವು ಸಿಕ್ಕದ ಹಾಗಾಯಿತು (4, 218). ತಕ್ಕ ಹಾಗೆ ಹುಟ್ಟಾವಳಿ ಇಲ್ಲದ್ದರಿನ್ದ (5, 127). ನೀವು ಹೇಳಿದ ಹಾಗೆ (Bp. 14, 25). ಆ ಎಮುಲಸುಜ್ಞಾನಿ ಕೇಳದ ಹಾಗೆ ಕೇಳುತ್ತಾ (22, 53). ಕೊಟಿತೆಯಾದ ಅರ್ಥವನ್ನು ಪೂರಯಿಸಿ ವಾಕ್ಯಸಮನ್ವಯ ಮಾಡಿ ಕೊಳ್ಳುವದಕ್ಕೆ ತಕ್ಕ ಹಾಗೆ ತನ್ದು ಇಟ್ಟು ಕೊಣ್ಡ ಪದ (ಅಧ್ಯಾಹಾರ, etc. Si. 48). ಬಳ್ಳಿಗಳಿನ್ದ ಹೊಚ್ಚಲ್ ಪಟ್ಟು ಮನೆಯ ಹಾಗೆ ಇರುವ ಬೇಲಿ (ನಿಕುಂಜ, ಕುಂಜ 117). ತುಟುಬು ಮುನ್ತಾದ ಕೇಶಪಾಶದ ನಡಿವೆ ಈಚೆಗೆ ಕಾಣದ ಹಾಗೆ ಮುಡು ಕೊಣ್ಡಿರುವ ಹುವ್ವಿನ ಸರ (ಗರ್ಭಕ 229). ಕತ್ತೆಯ ಹಾಗೆ ಹೊರಳಾಡಿ ಮೇಲಕ್ಕೆದ್ದು ಬನ್ದ ಕುದುರೆ (ಉಪಾವೃತ್ತ, etc. 274). ಹೇಳಿದ ಹಾಗೆ ಮಾಡುವವನು (ವಚನೇಸ್ಥಿತ, ಆಶ್ರವ 359). ಮನಸ್ಸು ಬನ್ದ ಹಾಗೆ ಎಲ್ಲಾ ಬಿಡಿ ಬಿಚ್ಚಲಾಗಿ ಇರುವದು (ಯದೃಚ್ಛೆ, etc. 386). ಹಾಲಾಗಿದ್ದದು ಉಪಾಧಿಯಿನ್ದ ಮಸರಾದ ಹಾಗೂ ಮಣ್ಣಾಗಿದ್ದದು ಮಡಿಕೆಯಾದ ಹಾಗೂ ಬೀಜವು ವೃಕ್ಷವಾದ ಹಾಗೂ ಒನ್ದು ಬಗೆಯಾಗಿದ್ದದು ಮತ್ತೊನ್ದು ಬಗೆಯಾಗುವ ವಿಕಾರವಿಶೇಷ (ಪರಿಣಾಮ 392). ಅದರ ಹಾಗೆ ಇರುವಿಕೆ (ಅನುಕಾರ, etc. 893). ಹೀಗಾಯಿತೊ? ಹಾಗಾಯಿತೊ? ಎಮ್ಬುವದು (ಕಿಂವದನ್ತಿ Dhw.). ಹಾಗೆ ಕುಣಿಯುವ ಬಡ್ಡಿ ಹರೆಯಕ್ಕೆ ಬನ್ದರೆ ಬಿಟ್ಟಾಳೇ?— ಬೀಗನ ಹತ್ತರ ಹೋಗಿ, ಹಾಗೂ ವೀಸ ಕೇಳಿದ ಹಾಗೆ (Prvs.). See Prv. s. ಹಾದಿಯವ. — ಹಾಗೂ. -ಊ 7. So also, likewise also; (and). ಅವನು ನಿನ್ನನ್ನು ಬಡಿಯುವದಿಲ್ಲ, ಹಾಗೂ ಅವನ ಸಿಟ್ಟು ಸಹ ಬೇಗ ಇಳಿಯುವದು (B. 3, 60). ತಿರಿಗಿ ಈ ಸ್ಥಲಕ್ಕೆ ತಾವು ಬರ ಬಾರದು, ಹಾಗೂ ನನಗೆ ಮೋಟಿ ತೋರಿಸ ಬಾರದು (3, 67). ಇದು ಬಹಳ ಬೆಳೆಯುವದಿಲ್ಲ, ಹಾಗೂ ಬಹಳ ಸ್ಥಲಗಳಲ್ಲಿ ಬೆಳೆಯುವದಿಲ್ಲ (3, 107). ಎಲ್ಲ ಪ್ರಜೆಗಳು ಇವರ ಅಪ್ಪಣೆಯ ಮೇರೆಗೆ ನಡ ಕೊಳ್ಳ ತಕ್ಕದು; ಹಾಗೂ, ಇವರಿಗೆ ಕಲ್ಯಾಣವಾಗಲೆನ್ದು, ದಿನಾಲು ದೇವರನ್ನು ಬೇಡಿ ಕೊಳ್ಳ ತಕ್ಕದು (4, 3). ಆ ಖಣ್ಡದೊಳಗೆ ಈಗಿನಷ್ಟು ವಿದ್ಯೆಯೂ ಕಲಾಕೌಶಲ್ಯಗಳೂ ಎನ್ದಿಗೂ ಅಭಿವೃದ್ಧಿ ಹೊನ್ದುತ್ತಿದ್ದಿಲ್ಲ; ಹಾಗೂ ಅಲ್ಲಿಯವರು ಇಷ್ಟು ಉತ್ತಮಸ್ಥಿತಿಗೆ ಎನ್ದೂ ಬರುತ್ತಿದ್ದಿಲ್ಲ (4, 210). ಎತ್ತು, ಹಾಗೂ ಆಕಳ, ಶರೀರದಿನ್ದ ದೊಡ್ಡವಿದ್ದಾಗ್ಯೂ (5, 18). ಅವನು ತನ್ನ ಗ್ರನ್ಥದೊಳಗೆ ಹೊಟ್ಟೆ ಹಾಗೂ ಅವಯವಗಳ ಕಲ್ಪಿತಕಥೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ (5, 93). ಆ ವ್ಯಾಪಾರಕ್ಕೆ, ಬಾಡಿಗೇ ಕೊಡೋಣ ಹಾಗೂ ಬಾಡಿಗೇ ಇಸ ಕೊಳ್ಳೋಣ ಎನ್ದು, ಎನ್ನುತ್ತಾರೆ (5, 113). ಅವನು ಸುಮ್ಮನೇ ಹೊರಟು, ಸಂಕಟಗಳನ್ನು ಅನುಭೋಗಿಸುತ್ತ ಹಾಗೂ ಹೀಗೂ ಕಷ್ಟಬಡುತ್ತ ಪಟ್ಣಕ್ಕೆ ಹೋಗಿ ಮುಟ್ಟಿದನು (5, 69). — ಹಾಗೇ. -ಏ2. Even in that manner or so, etc.; without another cause or object. ಹಾಗೇ (without my ring) ನಿನ್ನ ಬೆರಳು ನೋಡಿ ಕೊಳ್ಳುತ್ತಿರು! (B. 3, 34). ಎಷ್ಟೋ ದೇಶಗಳ ಸ್ಥಿತಿಯೂ ಈ ಹೊತ್ತಿಗೂ ಹೀಗೇ ಉಣ್ಟು; ಅವುಗಳಲ್ಲಿ ಸುಲ ಕೊಳ್ಳುವವರು ಸುಲ ಕೊಳ್ಳುವದರ ಸಲುವಾಗಿ ನಾಲ್ಕೂ ಕಡೆಗೆ ಯಾವಾಗಲೂ ತಿರುಗುತ್ತಿರುತ್ತಾರೆ, ಅವರ ಅಂಜಿಕೆಯಿನ್ದ ಜನರು ಶಸ್ತ್ರಗಳನ್ನು ಹಿಡ ಕೊಣ್ಡು ಎಚ್ಚರದಿನ್ದ ಇರುವರು ಅಲ್ಲದೇ ಹಾಗೇ ತಿರುಗಾಡಿದರೆ ಬದುಕಿ ಬರುವ ಭರವಸವು ಅವರಿಗೆ ಇರುವದಿಲ್ಲ (5, 104). ಅನ್ದಿನಿನ್ದ ಅವರ ಕಡೆಗೆ ಬನ್ದ ಅಧಿಕಾರವು ಇನ್ದಿನತನಕ ಹಾಗೇ ಉಣ್ಟು (5, 188). ಎಣ್ಣೆ ಸೀಗೆಗೆ ಹ್ಯಾಗೋ, ಹಾಗೇ ಪ್ರೀತಿ (Prv.). — ಹಾಗೆಯೇ. -ಏ 2. = ಹಾಗೇ. (My.). ಬೇಗನೇ ಮಾಡಿದ್ದು ಹಾಗೆಯೇ ಹೋಗುವದು (Prv.). — ಹಾಗ್ಹಾಗೆ. = ಹಾಗೆ ಹಾಗೆ. ಹ್ಯಾಗೆ ಹ್ಯಾಗೆ ಭಯಗೊಮ್ಬುವ ಪ್ರಸಂಗಗಳು ಅವನಿಗೆ ಬರುವವೋ, ಹಾಗ್ಹಾಗೆ ಅವನು ಹೆಚ್ಚು ಧೈರ್ಯಗೊಳ್ಳುವನು (B. 5, 85).

ಹಾಂಗೆ hâṅgĕ. = ಹಾಗೆ, etc. (ವೋಲ್ Śmd. 148 Cm.; ಅನ್ತಿರೆ 353; ಅನ್ತೆ 362 Cm.; Bp. 8, 44; 27, 36; 47, 70). ಇಚ್ಛೆ ಬನ್ದ ಹಾಂಗೆ (ಯಥೇಷ್ಟಂ Śmd. 140 Cm.). ರಸಮಿಲ್ಲದ ಹಾಂಗೆ ಅಟ್ಟ ಮದುರ (ಪಿಚ್ಛಿಲ); ಹೆಂಗೆ ಅಹುದು, ಹಾಂಗೆ ಎಮ್ಬರ್ಥದಲ್ಲಿ ಯಥಾಸ್ವಂ ಯಥಾಯಥಂ ಎನಿಸುಗು (Nr.). — ಹಾಂಗೂ. = ಹಾಗೂ. ಎಲವ್ಚಿತ ಎಮ್ಬುವದು ಅಲಸ್ಯಕ್ಕೆ ನಾಮ, ಹಾಂಗೂ ಜೋಲು ಬಿದ್ದಸ್ಥಾಧ್ದಕ್ಕೆ ಸಹ ವಾಗಿ ಆಗುತ್ತದೆ (Dhw.).

ಹಾಚಿ hâci. = ಪಾಚಿ 1, etc. (ಜಲನೀಲಿ, ಶೈವಾಲ, ಶೈವಲ Si. 95).

ಹಾಜರಿ hâjari. = ಹಾಜರು, etc. Present (My.; Mhr., H. ಹಾಜೀರ). — ಹಾಜರಿಗೈರುಹಾಜರಿ. -ಗೈರು-. Present and absent (My.). — ಹಾಜರಿಗೈರುಹಾಜರಿಪಟ್ಟಿ. A list or roll of the names of the persons of an establishment used to ascertain who are present and who are absent (My.). — ಹಾಜರಿಜವಾಬು. A ready answer; a repartee; that answers readily (My.; Mhr., H. ಹಜೀರಜವಾಬು).

ಹಾಜರು hâjaru. = ಹಜೀರ, ಹಾಜರಿ. Present; ready (My.). — ಹಾಜರುಜಾಮೀನು. A security for the appearance of, bail (My.; Mhr., H. ಹಾಜೀರಜಾಮಿನ).

ಹಾಂಚೆ hâṁcĕ. = ಹಾಚೆ, etc. (G.).

ಹಾಟಕ hâṭaka. *Gold.* 2, the thorn-apple.

ಹಾಟಕಗಿರಿ hâṭaka-giri. Mêru (My.).

ಹಾಟಕೇಶ್ವರ hâṭaka-îśvara. N. of a liṅga at Śrîgiri (Bp. 53, 52); N. of a liṅga in pâtâlalôka (J. 24, 14). — ಹಾಟಕೇಶ್ವರಬೊಮ್ಮಿದೇವಯ್ಯ. N. (Bp. 58, 5).

ಹಾಟು hâṭu. (fr. ಹಡು). The emitted seminal fluid (My.).

ಹಾಡ hâḍa. = ಹಾಡು 2.

ಹಾಡಕಾಣಿ hâḍa-kâṛa. = ಹಾಡುಕಾಱ. ಸ್ವರ್ಗಲೋಕದ ಹಾಡುಕಾಱ (ತುಮ್ಬುರ G.).

ಹಾಡಗ hâḍaga. = ಪಾಡಗ, (ಹಾಡಂಗ). N. of a plant (ಸಾರವತಿ Mr. 134).

ಹಾಡಂಗ hâḍaṅga. — ಹಾಡಂಗಮರ. The tree Cordia wulluchii G. Don. (Z.).

ಹಾಡಿಕೆ hâḍikĕ. Singing (ಗಾನ, ಸಂಗೀತ G.). ಬೀಡಿಕೆ ಯೆತ್ತು ಆದರೆ ಹಾಡಿಕೆಯಿನ್ದ ಬನ್ದೀತೇ?— ವಾಡಿಕೆಯಿಲ್ಲದವನಾದರೆ ಹಾಡಿಕೆ ತಿಳಿಯುವದೇ? (Prvs.).

ಹಾಡಿಯ hâḍiya. = ಪಾಡಿಯ, etc. (Bp. 40, 35).

ಹಾಡಿಸು hâḍisu. = ಪಾಡಿಸು. To cause to sing (C.).

ಹಾಡು hâḍu. 1. = ಆಡು 4 ಪಾಡು 1. To sing (C.; Bp. 43, 32; 47, 39; 59, 24). ಹಾಡುವದು (ಗೀತ Si. 64). ಹಾಡೋ ತಮ್ಮ! ಹೂಡೋ, ಬೊಮ್ಮ!— ಹಾಡಲಿಕ್ಕೆ ತಿಳಿಯದಿದ್ದರೆ ಓಡಲಿಕ್ಕೂ ತಿಳಿಯದೇ?— ಹಾಡಿದ್ದೇ ಹಾಡೋ, ಕಿಸಬಾಯಿದಾಸ!— ಹಾಡುವ ವರೆಗೂ ಹಾಡು! ಕಡೇಲಿ ಕದಾ ಮುಚ್ಚಿ ಕೊಣ್ಡು ಹೋಗು!— ರೂಢಿಯಿಲ್ಲದ ಪದ ಹಾಡಿದರೆ ತಿಳಿದಾನೇ? (Prvs.). — ಹಾಡು ಹಾಡು. rep. (Bp. 35, 3). ಹಾಡುತ್ತಾ ಹಾಡುತ್ತಾ ರಾಗ, ಉಗುಳುತ್ತಾ ಉಗುಳುತ್ತಾ ರೋಗ (Prv.).

ಹಾಡು hâḍu. 2. = ಆಡು 5, ಪಾಡು 2, ಹಾಡ. Singing; a song (ಗೀತ, ಗಾನ Hlâ.; Mr. 75; Si. 61; Bp. 55, 45; C.; B. 4, 136). ಗವುಡೀ ಹಾಡಿಗೆ ತವುಡೇ ತ್ಯಾಗ (Prv.). ರಾಗವಿಲ್ಲದ ಹಾಡು, ಭೋಗವಿಲ್ಲದ ಜನ್ಮ, ತ್ಯಾಗವಿಲ್ಲದನ ದೊರೆತನ ಹಾಯಿರ ಗೂಗೆಯನ್ತಕ್ಕು (Sp.). — ಹಾಡು ಹಾಡು. To sing a song (Bp. 22, 48).

ಹಾಡು hâḍu. 3. = ಪಾಡು 3, etc. Manner, mode (My.; B. 2, 30; 3, 7). 2, suffering, trouble (My.; B. 2, 12. 47).

ಹಾಡುಕಾಱ hâḍu-kâṟa. = ಹಾಡಕಾಱ, ಹಾಡುಗಾಱ, q. v. (ಗಾಯಕ G.). ಸ್ವರ್ಗಲೋಕದ ಹಾಡುಕಾಱ (ಗನ್ಧರ್ವ G.).

ಹಾಡುಗಾಱ hâḍu-gâṟa. = ಪಾಡುಂಗಾಱ, ಹಾಡುಕಾಱ, etc. A singer, a minstrel (My.; Si. 292).

ಹಾಡುಗಾಱಿಕೆ hâḍu-gâṟikĕ. Singing (My.; ಗೀತ, ಗಾನ Si. 61).

ಹಾಣಾ hâṇâ. = ಹಣಾ. (Mhr. ಹಾಣಣೇಂ, to strike, beat; *cf.* ಹಣಿ 3). — ಹಾಣಾಹಾಣಿ. (Śmd. 220, o. r. ಹಣಾಹಣಿ). Mutual or vehement beating (Bp. 21, 19). 2, a mêlée (ಬೆರಸಿರುವದು Bhn. 18; Bh. 6, 7, 15).

ಹಾತು hâtu. A hand (My.; Mhr. ಹಾತ). — ಹಾತುಬೇಡಿ. A handcuff, a manacle (My.; Mhr.).

ಹಾತೆ hâtĕ. = ಆತೆ. (My.). — ಹಾತೆಹುಱ. = ಆತೆಹುಱ. (My.).

ಹಾದರ hâdara. = ಪಾದರ. Adultery; fornication (C.). ಹಾದರದ ನಾರಿ (ಸ್ವೈರಿಣಿ, ಪುಂಶ್ಚಲಿ, etc. Mr. 304); ಹಾದರದ ಮನೆ (ಅಸತಿವಸನ 198). ಗಣ್ಡನು ಸಾಯದೇ ಇರುವಾಗಲೇ ಮಿಣ್ಡನ ದೆಸೆಯಿನ್ದ ಹುಟ್ಟಿಸಿ ಕೊಣ್ಡ ಹಾದರದ ಮಗನು (ಕುಣ್ಡ Si. 193). ಹಾದರಕ್ಕೆ ಹುಟ್ಟಿದ ಮಗ ಹೊಯ್ಲಿಗೆ ಬಿದ್ದು ಸತ್ತ.— ಪಟ್ಟೆಗೆ ಮಯ್ಲಿಗೆ ಸಲ್ಲ, ಮುತ್ತಯ್ದೆಗೆ ಹಾದರ ಸಲ್ಲ.— ವಾದಾ ಮಾಡಿ, ಮಾಡಿ, ಹಾದರ ಕಲಿತು ಕೊಣ್ಡ.— ಹನ್ದಿಯವರು ಹಾದರ ಮಾಡಿದರೆ ತಮಟೆಯವರು ದಣ್ಡಾ ತೆತ್ತರು.— ಹಣವಿದ್ದವರು ಹಾದರ ಮಾಡಿದ್ದಕ್ಕೆ ಹಾದೀಲಿ ಹೋಗುವವರು ದಣ್ಡ ತೆತ್ತರು.— ಹೊನ್ನಿದ್ದಮ್ಮನ ತೊನ್ನು ಮುಚ್ಚಿತು, ಮಕ್ಕಳಿದ್ದಮ್ಮನ ಹಾದರ ಮುಚ್ಚಿತು (Prvs.). ಹಾದರದ ಕಥೆಯನ್ನು (the Râmâyaṇa) ಸೋದರರ ವಧೆಯನ್ನು (the Bhârata) ಆದರಿಸಿ, ಪುಣ್ಯಕಥೆಯೆನ್ದು ಕೇಳುವ ಮಾದಿಗರ ನೋಡು! (Sp.). See Prvs. s. ದಣ್ಡ and ಹಗರಣ 1. — ಹಾದರಗಟ್ಟು. -ಕಟ್ಟು. To accuse of adultery (My.). — ಹಾದರಗಳ್ಳ. -ಕಳ್ಳ. An adulterer (My.). — ಹಾದರದ ಮೊಟ್ಟೆ. A bundle of adultery, *i. e.* a place where adultery abounds (My.). — ಹಾದರವಾಡು. -ಆಡು. To commit adultery (Bp. 54, 40; My.). ಹಗಲೆಲ್ಲಾ ಹಾದರವಾಡಿ, ಇರುಳು ಗಣ್ಡನ ತಲೆಯ ಹೇನು ತೆಗದಳನ್ತೆ (Prv.).

ಹಾದರಗಿತ್ತಿ hâdara-gitti. An adulteress; a fornicatress (ಜೋಡೆ, ಬೆದೆಗಾರ್ತಿ, ಪಾಣ್ಬೆ, ಸಿತಗೆ, ಜಾರೆ Śm. 75; ಪುಂಶ್ಚಲಿ, ಧರ್ಷಿಣಿ, ಬನ್ಧಕಿ, ಅಸತಿ, ಕುಲಟೆ, ಇತ್ವರಿ, ಸ್ವೈರಿಣಿ, ಪಾಂಸುಲೆ Si. 185; ಕುಲಟೆ Čb.; Bp. 40, 55; C.). ಹಾದರಗಿತ್ತಿಯ ಮಗನು (ಬಾನ್ಧಕಿನೇಯ, ಬನ್ಧುಲ, ಅಸತೀಸುತ, etc. Si. 190). ಹಾದರಗಿತ್ತಿಯ ಕರೆ ಹನ್ದರದೊಳಗೆ, ಗರ್ತಿಯ ಕರೆ ಪತ್ರಾವಳಿ ತೆಗೆಯುವದಕ್ಕೆ.— ಹಾದರಗಿತ್ತಿಗೆ ಹದಿನೆಣ್ಟು ಹೆಸರು.— ಹಾದರಗಿತ್ತಿಯ ಕಾಲು ಹಸೇಮೇಲೆ ನಿಲ್ಲದು.— ಕಳ್ಳಗೆ ಕಡುನಾಲಿಗೆ, ಹಾದರಗಿತ್ತಿಗೆ ಹಲವು ನಾಲಿಗೆ.— ನಾಗರಪಂಚಮಿಯಾದರೆ ಹಾದರಗಿತ್ತಿಗೆ ಏನು?— ಸೂಳೆಯ ಮಗ ಸುಬೇದಾರ, ಹಾದರಗಿತ್ತಿಯ ಮಗ ಹವಲ್ದಾರ (Prvs.).

ಹಾದರತನ hâdaratana. Adultery (My.).

ಹಾದರಿ hâdari. = ಪಾದರಿ 1. Tbh. of ಪಾಟಳ (Śmd. 364 Mdb.). — ಹಾದರಿಯ ಮರ. (ಪಾಟಲಿ, ಅಮೋಘೆ, etc. Nr.). 2, a large tree Mimusops kauki Lin. (St. & Pl., = ಪಾತಲಿಮರ). — ಹಾದರಿಯ ಹೂ. (ಧಾತಕಿ Nr.).

ಹಾದರಿಗ hâdariga. = ಪಾದರಿಗ. An adulterer; a fornicator; a paramour (ಜಾರ, ಉಪಪತಿ Hlâ.; Mr. 243; Bp. 11, 51; ಅನುಕ. ಕಾಮಾನ್ಧ, ವ್ಯಭಿಚಾರಿ G.).

ಹಾದರಿಗಿತಿ hâdariga-iti. (Śmd. 246). = ಹಾದರಗಿತ್ತಿ.

ಹಾದಿ hâdi. = ಪಾದಿ 1. A road, a way (ನ್ಯಗ್ರೋಧ, ಮಾರ್ಗ Nn. 42; ಅಯನ, ವರ್ತ್ಮ, ಮಾರ್ಗ, ಅಧ್ವ, ಪನ್ಥ, ಪದವಿ, etc. Si. 104; Rśv. 9, 26; C.). ನೀರು ಹರಿಯುವ ಹಾದಿ (ಜಲಮಾರ್ಗ Si. 82); ೪೦೦೦ ಹಸ್ತಪರಿಮಾಣವಾದ ಹಾದಿ (ನಲ್ವ 105); ಹಾದಿಗಳಿನ್ದ ಈಚೆಗೆ ಬರುವಿಕೆ (ಪ್ರವಹ 393). ಹಾದಿಯಾ ಕಲ್ಲಿಗೆಡೆ ಮಾಡಿ ನಮಿಸುವ ಮಾದಿಗರ ನೋಡು! (Sp.). ಅದೇ ಹಾದಿ ಹಿಡಿದು, ಗವಳಿಗರು ನೆರೆವೂರಿಗೆ ಹಾಲು ಮಾಱಲಿಕ್ಕೆ ಹೋಗುತ್ತಿದ್ದರು (B. 2, 13). ಸುಮ್ಮನೇ ನಾನು ಹಾದೀ ಹಿಡಿದು ಹೋಗುತ್ತಿದ್ದೆನು (2, 47). ಒಮ್ಮೆ ಬೆನ್ನ ಮೇಲೆ ಒಜ್ಜೆ ಹೇಱದ ಬಱಕ ಕತ್ತೆಗಳು ಸುಮ್ಮನೇ ಹಾದೀ ಹಿಡಿದು ಹೋಗುತ್ತವೆ (3, 48). ಒನ್ದು ಹಾಱುದೇಗುಲದ ಹಾದೀ ಹಿಡಿದರು (3, 100). ಅತನನ್ನು ಹಾದಿಗೆ ತರ ಬೇಕೆನ್ದು, ನಿಶ್ಚಯ ಮಾಡಿ ಕೊಣ್ಡರು (4, 56). ನೀನು ಅವನ ಹಾದಿಗೆ ಹೋಗ ಬೇಡ (4, 139). ಅವರು ಅಗಸೆಬಾಗಲಕ್ಕೆ ಬರಲಾಗಿ ಅಲ್ಲಿ ಒನ್ದು ಆನೆ ಹಾದೀ ಕಟ್ಟಿ ಕೊಣ್ಡು ನಿನ್ತಿತ್ತು (5, 48). ನಾನು ನನ್ನ ಚಲೋ ಹಾದಿಗೆ ತನ್ದೆನು, ನಾನು ಚಲೋ ಹಾದೀ ಹಿಡಿಯುವದು ನನ್ನಿನ್ದಾಗಲೊಲ್ಲದು; ಅಹಹಾ, ಏನು ಮಾಡಬೇಕು? (5, 197). ಹಾದೀ ನೆಟ್ಟಗೆ ಮಾಡಿಸುವದಕ್ಕೆ ಗೊತ್ತು ಮಾಡಿದ ಹಣಾ ಕೊಡ ಬೇಕಾಗುತ್ತದೆ (5, 300). ಹಾದಿಯಲ್ಲಿ ಹೋಗುವವನನ್ನು ಅಪ್ಪ! ಅನ್ದರೆ, ನೀನು ಯಾರಿಗೆ ಹುಟ್ಟಿದಿ, ಮಗನೇ? ಅನ ಹಾಗೆ.— ಬೋಧಕನಾದರೆ, ಸಾಧಕ ಮಾಡಲಿ! ಹಾದಿಗೆ ಏನು ಅಡ್ಡಿ?— ವೇದಾ ತಿಳಿಯದಿದ್ದರೆ ಹಾದಿ ತಿಳಿಯದೇ?— ಮಾದಿಗನ ಮನೇಲಿ ಪರಮಾನ್ನವಿದ್ದರೆ ಹಾದೀಲಿ ಹೋಗೋರಿಗೆ ಏನು?— ಸೇದಿದ ನೀರು ಹಾದೀಲಿ ಹಾಕ್ಯಾರೇ? (Prvs.). — ಹಾದಿಖರ್ಚು. The expenses of a journey, travelling expenses (B. 5, 159). — ಹಾದಿಗೊಳ್ಳು. -ಕೊಳ್ಳು. To commence to go, to go (My.). — ಹಾದಿಜಗಳ. A road-quarrel (in which one has no personal concern, My.). ಹಾದಿಜಗಳ ಹಣವಡ್ಡಕ್ಕೆ ಕೊಣ್ಡು ಕೊಣ್ಡರು (Prv.). — ಹಾದಿ ನಡೆ. To go along the road, to walk on a road (My.). ಹಾದಿ ನಡೆಯೋಣ (ವೀತಿ Čb.). ವಾದಿಯ ಸಂಗಡ ವಾದಿಸಲು ಸಲ್ಲ, ಕುಣ್ಟನ ಕೂಡ ಹಾದಿ ನಡಿಯಲು ಸಲ್ಲ (Prv.). ನೀರಾಗೆ ನಡೆಯುವದು, ಮೃಗವು ತಾನಲ್ಲ; ಹಾಱಲಱಯದು, ಹಾದಿ ನಡೆಯುವದಲ್ಲ (a boat, Bĕdagucaupadi). — ಹಾದಿ ನೋಡು. To look out for, to wait for, to wait, to look forward to (My.). ನಿಮ್ಮ ಅವ್ವ ಬರುವ ತನಕ ನಾನು ಹಾದೀ ನೋಡುತ್ತೇನೆ (B. 2, 7). ಕುದುರೆಗಳು ತಮ್ಮಷ್ಟಕ್ಕೆ ತಾವೇ ನಿಲ್ಲುವ ಹಾದೀ ನೋಡ ಬೇಕು (4, 61). ಅಕ್ಕನು ತನ್ನ ಗೆಳತಿಯರನ್ನು ಕರೆ ಕಳಿಸಿ, ಅವರ ಹಾದೀ ನೋಡುತ್ತ ಕೂತಿದ್ದಾಳೆ (4, 137). ಶಾನ್ತಮನಸುಳ್ಳವರಾಗಿ ಸಾವಿನ ಹಾದೀ ನೋಡ ಹತ್ತಿದರು (5, 155). — ಹಾದಿಬಾಕ. A man who sits by the road-

side (on festive occasions) and asks alms from them who pass by him (My.). — ಹಾದಿಯವ. -ಅವ. A man of the road, a wayfarer. ಬೀದೀಲಿ ಬೆಲ್ಲ ಸುರಿದು, ಹಾದಿಯವರ ಸಂಗಡ ಜಗಳಾಡಿದ ಹಾಗೆ (Prv.). — ಹಾದಿಹೋಕ. A man who goes on a road, a wayfarer. ಹಾದಿಹೋಕನ ತಲೆ ಕಟ್ಟೇ ದೇವರಿಗೆ ಪೂಜೆ (*i. e.* he is killed and offered to that deity as a narabali, a custom that prevailed in former times, Prv.).

ಹಾದಿಕಾಱ hâdi-kâṟa. A traveller (ಅಧ್ವಗ G.; C.; B. 2, 22; 3, 44; 4, 180).

ಹಾದು hâdu. P. p. of ಹಾಯು. (C.).

ಹಾನ hâna. The act of leaving or quitting. (Abh. Pr. 6, 66).

ಹಾನಿ hâni. Abandonment, relinquishment; neglect; loss, want, privation, absence; decrease, deficiency, diminution; detriment, damage, harm, destruction, extinction, hurt (ಅಪಹಾರ, ಅಪಚಯ Si. 392; Ch. v. 37; J. 7, 26; 10, 24; Bp. 40, 73; B. 4, 24). ಬುದ್ಧಿಯಿಲ್ಲದವನ ಸ್ನೇಹ ಇದ್ದ ಮಾನಕ್ಕೆ ಹಾನಿ.— ತನಗೆ ಬಂದ್ದ ಹಾನಿ ಅರ್ಥದಿಂದ್ದ ಹೋಯಿತು.— ಧ್ಯಾನಿಸಿ ಕೂತಾಗ್ಯೂ ಹಾನಿ ಬರುವದು ತಪ್ಪೀತೇ? (Prvs.).

ಹಾನು hânu. = ಅಹನು, ಆನು 4. See ಹಾನೆ; ಇದ್ದಾನು.

ಹಾನೆ hânu-ĕ3. = ಆನೆ 1. See ಇದ್ದಾನೆ.

ಹಾನೆ hânĕ. = ಪಾನೆ. A pot. ಸತ್ತ ಎಮ್ಮೆಗೆ ಹಾನೆಹಾಲು, ಹೆತ್ತ ಎಮ್ಮೆಗೆ ಮೂನಹಾಲು (Prv.).

ಹಾನ್ತಿ hânti. — ಹಾನ್ತಿಹುಲ್ಲು. A common fodder-grass, Anthistiria ciliata Lin. (Z.). See ಮುರ-.

ಹಾಪಿತ hâpita. Caused to be relinquished, made to give up; abandoned, left; omitted; lost. See ಪ-.

ಹಾಪೆ hâpĕ. = ಅಗಪೆ, etc. (My. among Brâhmaṇas who speak a corrupt Tamil).

ಹಾಮುಚಿ hâmači. — ಹಾಮುಚಿಬಳ್ಳಿ. (ವಿಷ್ವಕ್ಸೇನಪ್ರಿಯೆ, ಘೃಷ್ಟಿ, ವಾರಾಹಿ, ವದರೆ, ವಾಚಿತೀಗೆ Si. 159).

ಹಾಯ್ hây. 1. = ಪಾಯ್ 1 q. v., etc. To jump over; etc., etc. (Bh. 1, 5, 9; 1, 8, 88. 93; 2, 13, 28; 3, 13, 25. 27. 30. 31. 33; J. 7, 45. 52; 28, 6). P. p. ಹಾಯ್ದು (exceptionally also in the common language). ಹಾಯ್ದಿತ್ತು (B. 3, 94). ಡೋಣಿ ಮುನ್ತಾದವುಗಳಿನ್ದ ಹಾಯ್ದು ಆಚೇ ದಡಕ್ಕೆ ಸೇರ ತಕ್ಕ ದುಸ್ತರಜಲವುಳ್ಳ ಹೊಟಿ ಮುನ್ತಾದವುಗಳು (ನಾವ್ಯ Si. 83); ಹೊಟಿ ಹಾಯ್ದು ದಾಟಸುವ ಹಡಗಿನವನಿಗೆ ಕೊಡುವ ಮಜೂರೀ ರೊಕ್ಕ (ಆತರ 84); ಕಡೆ ಹಾಯದ ದಾರಿ (ಅಪಥಿ, ಅಪಥ 105); ಹಾಯ್ದು ಓಡುವಿಕೆ (ವಲ್ಗಿತ 274); ಗೂಳಿ ಹಾಯ್ದು ಹಿಮ್ಮಾಲಿಸಿದ ಆಕಳು (ಸನ್ಧಿನಿ 321). ನೀರ ನಡೆ ಹಾಯ್ವ ತೆಪ್ಪ (ಉಡುಪ Mr. 416).

ಹಾಯ್ hây. 2. = ಪಾಯ್ 2, etc. Crossing; going; propriety: pleasurable, nice, pleasant (as a meal, a place, sleep, etc. My.). — ಹಾಯ್ಗಡ. -ಕಡ. A place where a river is forded (My.). — ಹಾಯ್ಬಿಡು. -ಬಿಡು. To let loose (Râm. 6, 19, 17).

ಹಾಯ್ hây. 3. A sail (My.; M. ಪಾ, ಪಾಯ್, a mat; a sail; a sheet of paper; T. ಪಾಯ್, a sail; a mat).

ಹಾಯನ hâyana. *A year.* 2, *a ray.* 3, *a sort of red rice.*

ಹಾಯಿ hâyi. 1. = ಹಾಯ್ 1, etc. P. p. ಹಾಯಿದು (My.; B. 5, 35).

ಹಾಯಿ hâyi. 2. = ಹಾಯ್ 2, etc. (Tĕ. ಹಾಯಿ = ಸುಖ, ಸೌಖ್ಯ). — ಹಾಯಿದೋಱು. -ತೋಱು. To appear, *i. e.* to be, agreeable. ಕಿವಿಗೆ ವ್ಯಕ್ತವಾಗಿ ಕೇಳ ಬಾರದೇ ಇದ್ದರೂ ಹಿತವಾಗಿ ಹಾಯಿದೋಱುವ ನಾದ (ಕಲ Si. 61)

ಹಾಯಿಕು hâyiku. = ಹಾಕು, etc. (Bp. 43, 13; Râm. 5, 8, 72; 6, 10, 11; Bh. 1, 8, 15; 2, 12, 50; 8, 24, 24).

ಹಾಯಿಸು hâyisu. = ಪಾಯಿಸು, ಹಾಯ್ಸು, ಹಾಸು 3. To cause to go (B. 5, 300); to cause to go forward, to stretch forward, to extend (B. 3, 114; My.); to cause to pass over or cross (My.); etc.

ಹಾಯಿಸುವಿಕೆ hâyisuvikĕ. Causing to go, etc. See ಕಡೆ-.

ಹಾಯು hâyu. = ಹಾಯ್ 1, etc. P. p. ಹಾದು (C.). ಅಲ್ಲದ ಹುದೆಮ್ಮ ಅಜಾಣನೊಡನಾಟ ಕಲ್ಲು ಹಾದನ್ತೆ (Np.). ಎಲೋ! ಹುಡುಗಾ! ನಿನ್ನ ಕೆಯ್ಯೊಳಗಿನ್ದ ನೆತ್ತರ ಹಾಯುತ್ತದೆ (B. 2, 47). ಆಡುಗಳು ಸಿಟ್ಟಿಗೆದ್ದು, ಅವರನ್ನು ಹಾಯುತ್ತವೆ (5, 24). ಹೋತಿನ ಕೋಡುಗಳು ಮೇಲ್ಗಡೆಗೆ ಹಾದಿರುತ್ತವೆ (3, 9). ಅವರಿಬ್ಬರು..ಒನ್ದು ತೋಟಕ್ಕೆ ಹೋಗಿ, ಅಲ್ಲಿಯ ಮಾವಿನ ತೋಪಿನೊಳಗಿನ್ದ ಹಾದು ಬರುತ್ತಿದ್ದರು (3, 37). ನಮ್ಮ ಬಾಗಿಲ ಮುನ್ದೆ ಹಾದು ಹೋಗುತ್ತಿದ್ದರು (3, 38). ಮೋಟಿ ಸೀರ, ಉದ್ದಕ್ಕೆ ಹಾದಿರುತ್ತದೆ (3, 74). ಮೇಲಕ್ಕೆ ಹಾದ ಹೊಕ್ಕುಳ (ಗಣ್ಡೂಷ); ವಾತದಿನ್ದ ಯಾವನ ಹೊಕ್ಕುಳ ಹಾದಿರುತ್ತದೋ, ಅವನು ತುಣ್ಡಿಲ (G.). ತಲೆ ಗಟ್ಟಿಯೆನ್ದು, ಕಲ್ಲು ಹಾಯ ಬಾರದು (Prv.). See Prv. s. ನಮ್ಮು. — ಹಾಪಾಟ. -ಆಟ. Mutual butting (My.); fording (My.). — ಹಾದಾಡು. -ಆಡು. To butt with horns (My.); to pass over, to cross (My.; B. 1, 16).

ಹಾಯುವಿಕೆ hâyuvikĕ. Passing over, etc. (ಉಡ್ಡೀನ Si. 178). See ಕಡೆ-.

ಹಾಯ್ಕಿಸು hâykisu. = ಹಾಕಿಸು. (Bp. 28, 27; J. 11, 33; see ಕೆಡೆ-).

ಹಾಯ್ಕು hayku. = ಹಾಕು. (Bp. 18, 14; 21, 35. 43; 22, 10, 24, 59; 30, 15; 32, 26; 42, 35; J. 10, 30; 13, 63; 14, 18; Bh. 2, 13, 46. 50). See ಇಟಿಹಾಯ್ಕು.

ಹಾಯ್ಸು hâysu. = ಹಾಯಿಸು, etc. To cause to go or proceed, to drive (Bp. 21, 39); etc.

ಹಾರ್ hâr. = ಪಾರ್, ಹಾರು 1. To look for; to investigate, etc. **2,** to desire (Grj. 9, after 58; Bp. 23, 34). ಆಸನ ಎನ್ದೊಡೆ ಶತ್ರುವನಾಕ್ರಮಿಸಲು ಸಮರ್ಥನಲ್ಲ ಎನ್ದು, ದೇಶಕಾಲಾದಿಗಳಂ ಹಾರುತೆ ದುರ್ಗಾದಿಗಳಂ ಹೆಚ್ಚಿಸುವ ವಿಜಗೀಷುವಿನ ಸ್ಥಿತಿಯು (ಆಸನ Nr.). — ಹಾರ್ವ. = ಪಾರ್ವ, etc. A Brâhmaṇa (My.). ಪರ್ವಕಾಲದಲ್ಲಿ ಹಾರ್ವನಾದರೆ ಗರ್ವವು ಯಾಕೆ?— ಪೂರ್ವ ಹೇಳಿದರೆ ಹಾರ್ವ ಓಡ್ಯಾನು (Prvs.). See Sp. s. ಹೊಲೆ. — ಹಾರ್ವಿತಿ. = ಪಾರ್ವಿತಿ. A Brâhmaṇa woman (My.; see Sp. s. ತಿಳಿ 4).

ಹಾರ hâra. = ಹಗರ, etc. (Bh. 1, 7, 1; see ಕೆಯ್ಹಾರ No. 1).

ಹಾರ hâra. = ಆರ 3. Taking; conveying; seizing; carrying away or off; robbing; removing, depriving of; obtaining, holding, retaining; captivating, charming; throwing, casting; offering; loss, waste. 2, *a string of pearls; a necklace of sixty-four or hundred and eight strings;* any necklace. See Mr. s. ಏಕಾವಲಿ; Si. 217. 218. 230.

ಹಾರಕ hâraka. = ಹಾರಕು. The grain Paspalum scrobiculatum Lin. (ಉನ್ನಾಳ, ಕೋದ್ರವ Mr. 373; ಕೋರದೂಷ, etc. Si. 304). ಹಾರಕ ಬೆಳೆಯುವ ನೆಲ (ಕೌದ್ರವೀಣ Si. 301). — ಹಾರಕದಕ್ಕಿ. -ಅಕ್ಕಿ. = ಹಾರಕ. (My.).

ಹಾರಕ hâraka. Taking; bringing; conveying; seizing; etc. See ಮಣ್ಡ-.

ಹಾರಕು hâraku. = ಹಾರಕ. (ಕೋರದೂಷ, ಕೋದ್ರವ Nr.).

ಹಾರಕು ಬೆಳೆವ ಕೆಯಿ (ಕೌದ್ರವೀಣ Nr.). ಹಾರಕಿನ ಕೆಯಿ (ಕೌದ್ರವೀಣ Hlâ.). ಹಾರಕಂ ಬೆಳವ ಕೆಯ್ (ಕೌದ್ರವೀಣ Mr. 94).

ಹಾರಯಿಸು hârayisu. =(ಆರಯಿಸು), ಹಾರಯ್ಸು, ಹಾರವಿಸು. (My.).

ಹಾರಯ್ಕೆ hâraykĕ. (=ಆರಯ್ಕೆ, etc.). Wish, desire (ದೋಹದ, ಇಚ್ಛೆ, ಕಾಂಕ್ಷೆ, ಸ್ಪೃಹೆ, ಮನೋರಥ, ಕಾಮ, ಅಭಿಲಾಷ, etc. Si. 70; ತೃಷ್ಣೆ, ಸ್ಪೃಹೆ 420; ಶ್ರದ್ಧೆ, ಸ್ಪೃಹೆ 433). ಹಿತವಾಗಲೆಪ್ಪ ಹಾರಯ್ಕೆ (ಅತಿಸ್ 463).

ಹಾರಯ್ಸು hâraysu. =(ಆರಯ್ಸು), ಪಾರಯ್ಸು, ಹಾರಯಿಸು. To look for; to get a longing after; to desire. ಧನವನ್ನು ಹಾರಯ್ಸುವವಳು (ಇಚ್ಛಾವತಿ, ಕಾಮುಕಿ, ಭೋಗವನ್ನು ಬಯಸುವವಳು Si. 185); ಚನ್ನಾಗಿ ಹಾರಯ್ಸಲ್ ಪಟ್ಟದು (ಪ್ರಾರ್ಥಿತ, ಅರ್ಥಿತ, ಅಪೇಕ್ಷಿಸಲ್ ಪಟ್ಟದು 381). ಪರರ ದುಃಖವ ಕೇಳಿ, ಮನದಲಿ ಹಿರಿದು ಚಿನ್ತಿಸಿ, ಪರರ ಪದವಿಗೆ ಹರುಷ ಮಿಗೆ ಹಾರಯ್ಸಿ (Akrûraniti 32). See Grj. 4, after 104; 5, 81; Râm. 6, 14, 21; 6, 44, 52; J. 7, 40; 13, 5; 18, 9; 27, 18.

ಹಾರವ hârava. See s. ಹಾರು 2.

ಹಾರವ hâ-rava. The sound or cry of ಹಾ (Čpr. 5, 11. 12; Abh. P. 14, 101).

ಹಾರವಗಿತ್ತಿ hârava-gitti. See s. ಹಾರು 2.

ಹಾರವಲಯ hâra-valaya. An encircling necklace (J. 2, 8). 2, ಹಾ-ರವ-ಲಯ. destruction connected with the cry of ಹಾ (2, 8).

ಹಾರವಾಣ hâravâṇa. 1. Tbh. of ಪಾರಾವತ. (My.).

ಹಾರವಾಣ hâravâṇa. 2. = ಹಾರಿಯಾಳ q. v., etc. (My.).

ಹಾರವಿಸು hâravisu. = ಹಾರಯಿಸು, ಹಾರಯ್ಸು, etc. (Bp. 4, 13; 5, 42. 48; 12, 20. 23; 44, 15; 54, 65; 61, 64; Râm. 4, 2, 10; 5, 1, 5).

ಹಾರಹೂರೆ hârahûrĕ. *A grape* (ದ್ರಾಕ್ಷೆ Mr. 112).

ಹೊಂಗರ hŏṅgara. = ಪೊಂಗರ. The Indian coral tree, planted as a support for betel pepper, Erythrina indica Lam. (St. & Pl.).

ಹೊಂಗರಕ hŏṅgaraka. = ಹಂಗರಕ, ಹೊಂಗರ. (St. & Pl.). ಡಂಗುರಾ ಹೊಡದರೆ ಹೊಂಗರಕನ ಮರ ಕೇಳೀತೋ?—ರಂಗೋಲೆ

ಹಾಕಲಿಕ್ಕೆ ತಿಳಿಯದಿದ್ದರೂ ಹೊಂಗರಕನ ಕೆತ್ತಿ ತೆಗೆಯಲಿಕ್ಕೆ ತಿಳಿಯದೇ? (Prvs.).

ಹೊಂಗಿಯ hŏṅgiya. = ಹೊನಗ್ಯಾ. The leopard cat, Felis bengalensis (Gz.).

ಹೊಂಗು hŏṅgu. = ಪೊಂಗು 1. To swell; to boil over (Bp. 44, 27; 59, 1); to boil, to suffer boiling (Grj. 9, 21); to be elated, to exult, to be overjoyed (Grj. 3, 7; Bp. 24, 16; 26, 12; Bh. 1, 4, 25; 7, 1, 22).

ಹೊಂಗೆ hŏṅgĕ. = ಒಂಗೆ. The tree Dalbergia oujeinensis Roxb. (ತಿನಿಶ, ಸ್ಯನ್ದನ, ನೇಮಿ, ರಥದ್ರು, etc., ಹುಲಿಗಲಿ Si. 127). 2, the Indian beech, Pongamia glabra Vent. (ಚಿರವಿಲ್ವ, ನಕ್ತಮಾಲ, ಕರಜ, ಕರಂಜಕ, ಹುಲಿಗಿಲಿ Si. 133; St. & Pl.). 3, the tree Xantochymus pictorius Roxb. (ಕಾಲಸ್ಕನ್ಧ, ತಮಾಲ, ತಾಪಿಚ್ಛ Si. 138). ಮಂಗನ ಪಾರುಪತ್ಯ ಹೊಂಗೇ ಮರದ ಮೇಲೆ (Prv.). — ಹೊಂಗೆಯೆಣ್ಣೆ. -ಎಣ್ಣೆ. Oil made from hŏṅgĕ seeds (My.).

ಹೊಚ್ಚಿಸು hŏččisu. = ಹೊದ್ದಿಸು 2. To cause to put on (My.). 2, to put on, as tiles or grass on a roof (with dative, My.); to put on (another), as a kambaḷi or duppaṭi (with dative, My.).

ಹೊಚ್ಚು hŏčču. = ಪೊದಿಸು, etc. To put on, as tiles (C.; B. 4, 122); to cover (My.). ಬಳ್ಳಿಗಳಿನ್ದ ಹೊಚ್ಚಲ್ಪಟ್ಟು ಮನೆಯ ಹಾಗೆ ಇರುವ ಬೇಲಿ (ನಿಕುಂಜ, ಕುಂಜ, ಲತಾಗೃಹ Si. 117). 2, to hide one's self, to enter deeply (J. 13, 18).

ಹೊಂಚಿಕೆ hŏṅčikĕ. Lurking, etc. (Si. 288).

ಹೊಂಚು hŏṅču. 1. = ಅಂಚು 3, ಪೊಂಚು. To look after, to wait for expectantly (Bh. 1, 19, 20); to exert one's self secretly, not publicly (ಸಂಕೇತೋದ್ಯೋಗ Śmd. Dh.); to inspect narrowly, to espy (J. 16, 7; Râm. 6, 50, 28); to keep out of sight, to lurk (J. 15, 18; 26, 10); to lie hid, to lie in wait, to be on the look-out, as robbers, thieves or animals (My.; Si. 260); to spy (v. i., My.).

ಹೊಂಚು hŏṅču. 2. Lying hid, etc. — ಹೊಂಚುಜಾಗ. A concealed place in which robbers or thieves lie hid (My.). — ಹೊಂಚು ನೋಡು. To spy clandestinely (My.). — ಹೊಂಚು ಹಾಕು. To lie in wait, to be on the look-out (C.; B. 3, 31. 67; 5, 31).

ಹೊಂಚುಗಾಱ hŏṅču-gâṟa. A man who lies in wait or is on the look-out; a spy (My.).

ಹೊಂಚುವಿಕೆ hŏṅčuvikĕ. = ಹೊಂಚಿಕೆ. Being on the look-out for, etc. ದಣ್ಡಿನೊಡನೆ ಟಾಣ್ಯಾ ಹಾಕಿ ಸಮಯ ಹೊಂಚುವಿಕೆ (ಆಸನ Si. 262).

ಹೊಟಲ hŏṭala. — ಹೊಟಲಕೆಱೆ. N. of a town (Bp. 51, 1. 3. 52. 62).

ಹೊಟ್ಟ hŏṭṭa. A deaf man (My.; T. ಪೊಟ್ಟೆ, blindness).

ಹೊಟ್ಟಿಗೆ hŏṭṭigĕ. = ಹಟ್ಟಿಗೆ, etc. See ಅಟಿ-.

ಹೊಟ್ಟು hŏṭṭu. = ಪೊಟ್ಟು. Chaff (ಬುಸ or ಬುಶ, ಕಡಂಗರ Hlâ.; Mr. 372; C.; G. 366); husk of rice or corn (ತುಷ, ಧಾನ್ಯತ್ವಚ್, ಸಿಪ್ಪೆ Si. 306; C.); a pod emptied of its contents (My.; ಶಮಿ, ಶಿಮ್ಬಿ, ಸಿಪ್ಪೆ Si. 306). ಹೊಟ್ಟು ಕುಟ್ಟಿ, ಕೆಯ್ಯೆಲ್ಲ ಗುಳ್ಳೆ (Prv.). — ಹೊಟ್ಟುಗುಟ್ಟು. -ಕುಟ್ಟು. To utter chaff, to speak nonsense (Bh. 4, 2, 54).

ಹೊಟ್ಟೆ hŏṭṭĕ. 1. A cover, a lid (cf. ಪೊದೆ 1, etc.?). ಕಣ್ಣ ಹೊಟ್ಟೆ (ನೇತ್ರಚ್ಛದ, ವರ್ತ್ಮ Nr.).

ಹೊಟ್ಟೆ hŏṭṭĕ. 2. = ಪೊಟ್ಟೆ 1, etc. A hole in a tree Nn. 43, as o. r. of ಹೋಟೆ in one MS.). — ಹೊಟ್ಟೆಜಾಲಿ. A babool tree full of holes. (See Sp. s. ಗಿಜವಾಯಿ, o. r. ಪೊಳ್ಳುಜಾಲಿ).

ಹೊಟ್ಟೆ hŏṭṭĕ. 3. = ಪೊಟ್ಟೆ 2, etc. The belly (ಜಠರ, ಉದರ, ತುನ್ದ, ಕುಕ್ಷಿ, ಗರ್ಭ Hlâ.; Mr. 327; ಪಿಚಣ್ಡ, ಕುಕ್ಷಿ, Nr.; Si. 209; ಗರ್ಭ Si. 441; ಕುಕ್ಷಿ Nn. 5; ಉದರ 64; C.); the body of a vessel (C.; B. 3, 94). ಹೊಟ್ಟೆಯೊಳಗಣ ಶಿಶು (ಭ್ರೂಣ, ಗರ್ಭ Nr.). ಹೊಟ್ಟೆಯಿನ್ದ ಹುಟ್ಟಿದ್ದೂ ಬೆನ್ನಿನಲ್ಲಿ ಬಿದ್ದದ್ದೂ ನೋಡ ಬೇಕು. — ಹೊಟ್ಟೇ, ನಿನ್ನಿನ್ದ ಕೆಟ್ಟೆ. — ಸೂಜಯಷ್ಟು ಬಾಯಿ, ಗುಡಾಣದಷ್ಟು ಹೊಟ್ಟೆ. — ಕಣ್ಣು ಕಾಣದ ಹೊಟ್ಟೆಗೆ ಮಣ್ಣೇನು? ಮಸಿಯೇನು? — ತುಟಿ ಸುಮ್ಮನಿದ್ದರೂ ಹೊಟ್ಟೆ ಸುಮ್ಮನಿರದು. — ಎಲ್ಲಿಗೆ ಹೋದರೂ ಹೊಟ್ಟೆ ಬಿಡದು. — ಪೆಟ್ಟು ಬೆನ್ನು ತಿನ್ನುತ್ತದೆ, ಹೊಟ್ಟೆ ಅನ್ನ ತಿನ್ನುತ್ತದೆ. — ರಾವಣನ ಹೊಟ್ಟೆಗೆ ಅರಕಾಸಿನ ಮಜ್ಜಿಗೆಯೋ? (Prvs.). See Bp. 9, 8; 50, 11; 55, 17; 59, 4. 17. — ಹೊಟ್ಟುರಕ. -ಉರಕ. An envious man (My.). — ಹೊಟ್ಟುರಕಿ. -ಉರಕಿ. An envious woman (My.). — ಹೊಟ್ಟುರಿ. -ಉರಿ. Envy (My.). — ಹೊಟ್ಟೆ ಕಟ್ಟು. 1. To restrain the appetite, to live very frugally (My.). ಮೊಟ್ಟೆ ಕಟ್ಟಲಿಕ್ಕೆ ತಿಳಿಯದವ ಹೊಟ್ಟೆ ಕಟ್ಟ್ಯಾನೇ? (Prv.). 2, constipation to take place (with dative of person, My.). — ಹೊಟ್ಟೆಕಟ್ಟು. 2. Constipation (My.). — ಹೊಟ್ಟೆಕಡತ. Gripe in the intestines (B. 2, 25). — ಹೊಟ್ಟೆಕಡುಬು. A kind of filled cake (My.). — ಹೊಟ್ಟೆಕಱಿತ. Purging (My.). — ಹೊಟ್ಟೆ ಕಱಿ. The bowels to purge (My.). — ಹೊಟ್ಟೆಕಿಚ್ಚು. Envy (ಅಕ್ಷಾನ್ತಿ, ಈರ್ಷ್ಯೆ Si. 68; ಅಸೂಯೆ G.; C.; B. 4, 51). ಹೊಟ್ಟೆಕಿಚ್ಚಿನವ (G. 40. 117). ಹೊಟ್ಟೆಕಿಚ್ಚು ಮಾಡು (G. 40). — ಹೊಟ್ಟೆಖರ್ಚು. Expense for food (B. 5, 270). — ಹೊಟ್ಟೆಗಯ್. -ಅಯ್. To agree with the stomach (Bp. 14, 9). — ಹೊಟ್ಟೆಗಿಚ್ಚು. -ಕಿಚ್ಚು. = ಹೊಟ್ಟೆಕಿಚ್ಚು. (My.). — ಹೊಟ್ಟೆಗಿಲ್ಲದೆ. -ಇಲ್ಲದೆ. There being nothing (or no food) for the stomach. ಎರಡು ದಿವಸದಿನ್ದ ಹೊಟ್ಟೆಗಿಲ್ಲದೆ ಉಪವಾಸ ಸಾಯುತ್ತೇನೆ (B. 4, 2). ಇದ್ದ ಹಣ ತೀರಿದ ಕೂಡಲೇ ಹೊಟ್ಟೆಗಿಲ್ಲದೇ ಸಾಯುವ ಪ್ರಸಂಗ ಬರುವದು (5, 90). ಕಡೆಗೆ ಹೊಟ್ಟೆಗಿಲ್ಲದೆ ಸತ್ತು ಹೋಗುತ್ತಾರೆ (5, 103). ಹೊಟ್ಟೆಗಿಲ್ಲದ ಶಾನಭಾಗ (or ಸೆಟ್ಟಿ) ಹಳೇ ಕಡತ ಹುಡುಕಿದ ಹಾಗೆ. — ಹೊಟ್ಟೆಗಿಲ್ಲದ್ದೇ ಏಕಾದಶಿ (Prvs.). — ಹೊಟ್ಟೆಗೆ ಬರು. Pregnancy to take place (My.). — ಹೊಟ್ಟೆಗೆ ಹಾಕು. To give to eat (C.; B. 2, 24. 38; 5, 141); to administer medicine for alluring or killing (My.). — ಹೊಟ್ಟೆಗೋದಿ. A kind of good wheat the grain of which is thick (My.). — ಹೊಟ್ಟೆ ಜಾಡಿಸು. = ಹೊಟ್ಟೆ ಕಱಿ. (C.; B. 4, 41). — ಹೊಟ್ಟೆ ತುಮ್ಬ. So that the belly becomes full, till the stomach is filled (C.; B. 5, 206). — ಹೊಟ್ಟೆ ತುಮ್ಬು. The belly to be filled (Bp. 33, 18; My.). ಹೊಟ್ಟೆ ತುಮ್ಬಿದ ಮೇಲೆ ಹುಗ್ಗಿ ಮುಳ್ಳು ಮುಳ್ಳು. — ಪುಟ್ಟಿ ತುಮ್ಬಿದರೂ ಹೊಟ್ಟೆ ತುಮ್ಬಲಿಲ್ಲ. — ಬೊಟ್ಟು ಸೀಪಿದರೂ ಹೊಟ್ಟೆ ತುಮ್ಬ್ಯಾತೇ? (Prvs.). 2, to fill the belly (C.; B. 1, 10; 2, 48). — ಹೊಟ್ಟೆ ನುಲಿ. The belly to gripe (My.). — ಹೊಟ್ಟೆನೋವು. A pain in the belly or stomach (My.). — ಹೊಟ್ಟೆಪಾಡು.

Obtaining for the body: means of subsistence (My.). — ಹೊಟ್ಟೆ ಬರು. The belly to grow big (from gluttony, My.). — ಹೊಟ್ಟೆಬಾಕ. A male glutton (My.). Feminine ಹೊಟ್ಟೆಬಾಕಳು (My.). — ಹೊಟ್ಟೆಬಾಕತನ. Gluttony (My.). — ಹೊಟ್ಟೆಬೇನೆ. Belly-ache (ಗುದಕಾಸ Mr. 386). — ಹೊಟ್ಟೆಯಚ್ಯುತದೇವ. -ಅಚ್ಯುತ-. N. (Bp. 56, 34). — ಹೊಟ್ಟೆಯ ಮೇಲೆ ಬಡಿ. To beat upon (another's) belly: to take away the means of subsistence (My.). — ಹೊಟ್ಟೆಯಿಟಿ°. -ಇಟಿ°. Premature birth or miscarriage to happen (used only of cattle, My.). ಹೊಟ್ಟೆಯಿಟಿ°ದ ಆಕಳು (ಅವತೋಕೆ, ಪ್ರವದ್ಗರ್ಭ Si. 321). — ಹೊಟ್ಟೆಯುರಿ. -ಉರಿ. 1. The belly to burn from sickness or distress (My.). — ಹೊಟ್ಟೆಯುರಿ. -ಉರಿ. 2. Burning of the belly from sickness or distress (My.). ಕಣ್ಣಿದ್ದರೆ ಕಣ್ಣುರಿ, ಕಾಣದಿದ್ದರೆ ಹೊಟ್ಟೆಯುರಿ (Prv.). — ಹೊಟ್ಟೆಯೊಳಗೆ ಬೆಂಕಿ ಬೀಳು. Envy to be produced (My.); sorrow to be produced (My.). — ಹೊಟ್ಟೆಯೊಳಗೆ ಹಾಕು. To put into one's belly: to keep to one's self, to conceal and forgive (B. 4, 16. 201). — ಹೊಟ್ಟೆಶೂಲೆ. = ಹೊಟ್ಟೆನೋವು. (My.). — ಹೊಟ್ಟೆ ಸಾಗಿಸು. = ಹೊಟ್ಟೆ ಹೊರೆ. (B. 1, 10; 5, 99). — ಹೊಟ್ಟೆಹಾಳಿ. A man whose belly is always in an empty state, one who can always eat, a glutton (My.). — ಹೊಟ್ಟೆಹಾಳಿತನ. Gluttony (My.). — ಹೊಟ್ಟೆಹೊರಕ. A man who cares only for sustaining or nourishing his belly (My.). — ಹೊಟ್ಟೆ ಹೊರೆ. To sustain or nourish the belly, to support life (My.). ಪೋಷ್ಯವರ್ಗವನ್ನು ಬಿಟ್ಟು ತನ್ನ ಹೊಟ್ಟೆ ಹೊರ ಕೊಮ್ಬುವವನು (ಆತ್ಮಮ್ಭರಿ, ಕುಕ್ಷಿಮ್ಭರಿ Si. 358). ತನ್ನ ಹೊಟ್ಟೇ ತಾನು ಹೊರೆಯದವ ಮುನ್ನಾರ ಸಲಹುವನು? (Prv.).

ಹೊಟ್ಟೆಗ hŏṭṭĕga. A gorbellied, corpulent man (ಪಿಚಣ್ಡಿಲ, ಬೃಹತ್ಕುಕ್ಷಿ, ತುನ್ದಿಲ, ಉದರಿಲ Hlâ.; ತುಣ್ಡಿಲ Mr. 388).

ಹೊಟ್ರೆ hŏṭrĕ. = ಪೊಟ್ಟರೆ, q. v., etc. (My.).

ಹೊಡ hŏḍa. 1. = ಪೆಡ, etc., ಹೆಡ, ಹೊಡೆ 7. The state of being behind, etc. — ಹೊಡ ಮಗುಚು. To turn backwards (v. i., Bp. 46, 22).

ಹೊಡ hŏḍa. 2. = ಪೊಡೆ 4, ಹೊಡೆ 4. Extension, etc. — ಹೊಡಗುಳು. -ಕುಳು. Extension-seizure: expansion, prolixity, diffuseness (Bh. 5, 11, 39; 6, 4, 28).

ಹೊಡ hŏḍa. 3. Beating. — ಹೊಡಚೆಣ್ಡು. N. of a play at which balls are struck with a stick (My.; Bh. 1, 8, 8).

ಹೊಡ hŏḍa. 4. = ಹೊಡದು, ಹೊಡೆ 2, ಹೊಡೆದು. P. p. of ಹೊಡೆ 1, in ಹೊಡ ಕೊಳ್ಳು (C.; B. 2, 45; 5, 114) and in ಹೊಡ ಹೊಡದು (Bp. 21, 43; J. 22, 44). ಹೊಡ ಕೊಳ್ಳು also: to take away, to carry off; to rob (My.).

ಹೊಡ hŏḍa. 1. = ಪೊಡ 1 q. v., ಹೊಡೆ. — ಹೊಡ ಮಡು. = ಪೊಡ ಮಡು, q. v. (Bp. 12, 23; 13, 24). — ಹೊಡವಡಿಕೆ. -ಮಡಿಕೆ. = ಪೊಡವಡಿಕೆ, q. v. (ನಮಸ್ಯೆ, ವನ್ದನೆ Hlâ.). — ಹೊಡವಡು. -ಮಡು. = ಪೊಡವಡು. To take leave in going away (ಉದ್ಯಾನ, ನಿಃಸರಣ Nr.; is ಹೊಱವಡು meant?).

ಹೊಡ hŏḍa 2. = ಪೊಡ 2, q. v. — ಹೊಡಕರಿಸು. = ಪೊಡಕರಿಸು. To make one's appearance, etc. (Râm. 3, 6, 50; 6, 11; 10; 5, 20, 5; 6, 30, 14; J. 23; 17; 29, 28); to make one's appearance (amongst a host and come to a mêlée with it, ತಾನು ಬೆರಸು Bhn. 16; Bh. 6, 8, 18).

ಹೊಡಕು hŏḍaku. See Bhn. 16 s. ತೋಟಿ 1.

ಹೊಡಕೆ hŏḍakĕ. The elephant grass (My.).

ಹೊಡಗು hŏḍagu. = ಗೊಡಗು, ಗೊಡುಗು. A hole (My.).

ಹೊಡತ hŏḍata. Beating; a stroke, a blow (Bp. 52, 9; C.; B. 2, 31. 43; 4, 37. 212; Si. 380).

ಹೊಡದು hŏḍadu. = ಹೊಡೆದು. P. p. of ಹೊಡೆ 1. (Bp. 9, 13; 45, 10; 49, 42; 50, 60; C.).

ಹೊಡಸು hŏḍasu. = ಪೊಡಸು, etc., ಹೊಡಿಸು. To cause to beat or strike, etc. (Bp. 38, 57; 54, 46; My.). ಚಮ್ಮಟಿಗೆಯಿನ್ದ ಹೊಡಸಿ ಕೊಳಲ್ ತಕ್ಕವನು (ಕಶ್ಯ, ಕಶಾರ್ಹ Nr.).

ಹೊಡಹ hŏḍaha. One who beats. ಕಾಳಗದ ಬಣ್ಡಿಯಂ ಹತ್ತಿ ಹೊಡಹಂ (ಸ್ಯನ್ದನಾರೋಹ, ರಥಿಕ Mr. 247).

ಹೊಡಿ hŏḍi. = ಹೊಡೆ 1, etc. To beat, etc. (C.). ಅರಸಿನ ಮುದ್ರೆ ಹೊಡಿಯಲ್ ಪಟ್ಟ ಬೆಳ್ಳಿ ಭಂಗಾರದ ನಾಣ್ಯಗಳು (ರೂಪ್ಯ Si. 330); ಕೆಯ್ತಾಳ ಹೊಡಿಯುವನು (ಪಾಣಿವಾದ, etc. 340); ಕುದುರೆ ಮೊದಲಾದವುಗಳ ಹೊಡಿಯುವ ಚಾಟಿಕೋಲು (ಕಶೆ 344); ಹೊಡಿಯಲ್ ಪಟ್ಟದು (ಆಹತ 377). ಹೊಡಿಯ ಬೇಕೆಮ್ಬುವಗೆ ಕೂತ ಮಣೆಯೇ ಕೊರಡು.— ಮಾಡುವವರ ಮುನ್ದೆ, ಹೊಡಿಯುವವರ ಹಿನ್ದೆ ನಿಲ್ಲ ಬೇಕು.— ಹವುದೆನ್ದರೆ ಬಯ್ಯುತ್ತಾನೆ, ಅಲ್ಲೆನ್ದರೆ ಹೊಡಿಯುತ್ತಾನೆ (Prvs.).

ಹೊಡಿಸು hŏḍisu. = ಹೊಡಸು, etc. (C.; B. 3, 40. 49; 4, 20; 5, 28. 222). ಹೊಡಿಸಿ ಕೊಣ್ಡನ್ಥ (ಹತ G.).

ಹೊಡೆ hŏḍĕ. 1. = ಪೊಡೆ1, q. v., etc. To strike, etc. (Bp. 21, 42; 50, 6; 52, 8; 57, 37; J. 11, 38; Bh. 1, 8, 8; 1, 10, 37; C.; B. 4, 157); to devour, to eat (Bh. 1, 10, 30; My.). P. ps. ಹೊಡದು q. v., ಹೊಡೆದು. ಅಶ್ವಾದಿಗಳ ಹೊಡೆವ ಸಜ್ಜಳ (ಕಶೆ Nr.). ಕೆಲವು ಅಡುಗಳನ್ ಒರ್ಬೋಬ್ಬುಲಿಯ ಮುರನಿಪ್ಪ ನೆಪ್ಪಿಗೆ ಆತನು ಹೊಡೆದು (Bp. 20, 14). ಹೊಡೆವ ಗಾಳಿ (22, 8). ತಲೆಯಂ ಹೊಡೆದು (28, 24). ಹೊಡೆವ ಸಿಡಿಲ್ (Bh. 1, 8, 31). ಅಡವಿಯೊಳು ಮುಟಿ° ಹೊಡದು (see Sp. s. ಸೇಡುಗೊಳ್). ಚೆತ್ತದ ಪೆಟ್ಟು ಹೆತ್ತವರು ಹೊಡದರೆ ನೋಯದೇ? (Prv.). — ಹೊಡದಾಟ. -ಆಟ. Beating, striking; mutual beating, fighting (ಪ್ರಹಾರ G.; C.; B. 5, 1). — ಹೊಡದಾಡು. -ಆಡು. To beat; to beat mutually, to fight (C.; B. 1, 16).

ಹೊಡೆ hŏḍĕ. 2. = ಹೊಡ 4, etc., in ಹೊಡೆ ಹೊಡೆದು (B. 4, 97).

ಹೊಡೆ hŏḍĕ. 3. The principal top-beam in a roof (My.).

ಹೊಡೆ hŏḍĕ. 4. = ಪೊಡೆ 4, ಹೊಡ 2. Extension, etc. — ಹೊಡೆಗೆಡಹು. -ಕೆಡಹು. To throw down to the full length or headlong (Bp. 37, 70). — ಹೊಡೆಗೆಡೆ. -ಕೆಡೆ. = ಪೊಡೆಗೆಡೆ, q. v. (Bp. 2, 14).

ಹೊಡೆ hŏḍĕ. 5. — ಹೊಡೆ ಮರಳು. To grow (ಬೆಳೆ Bhn. 16; see another ಹೊಡೆ ಮರಳು s. ಹೊಡೆ 7).

ಹೊಡೆ hŏḍĕ. 6. = ಪೊಡೆ 3, No. 3. An ear of corn just before fully shooting forth; the calyx of the kêdagĕ just before fully opening (C.; ಕೇದಗೇ ಹೊಡೆ G. 347). 2, = ಹೊಡೆಹುಲ್ಲು (ನೀವಾರ Mr. 372). — ಹೊಡೆಜಾಲಿ. A shrub or low tree with very large white spines, Acacia latronum Willd. (Z.; *cf.* ಹೊಟ್ಟೆಜಾಲಿ s. ಹೊಟ್ಟೆ 2?). — ಹೊಡೆಯಕ್ಕಿ. -ಅಕ್ಕಿ. Rice of not fully grown grain. — ಹೊಡೆಯಕ್ಕಿದುಯ್ಯಲು. -ತುಯ್ಯಲು. A dish made of not fully grown rice-grain, etc. (Bp. 18, 17). — ಹೊಡೆ ಹಾಯು.

An ear of corn to begin to shoot forth (C.). — ಹೊಡೆ ಹುಲ್ಲು. Grass which bears ears (ತೃಣಧಾನ್ಯ, ನೀವಾರ Hlâ.).

ಹೊಡೆ hŏḍĕ. 7. = ಹೊಡ 1, etc. — ಹೊಡೆ ಮರಳು. To turn backwards (v. i., Bh. 6, 7, 18).

ಹೊಡೆ hŏḍĕ. = ಹೊಡ 1, etc. Tbh. of ಪುಟ. A cover, a wrapper. See ಕೆಯ್ಗೊಡೆ.

ಹೊಣಕೆ hŏṇakĕ. = ಪೊಣರ್ಕೆ. Fighting; a fight (Bh. 1, 6, 1; J. 10, 42).

ಹೊಣಿ hŏṇi. An imitative sound used where fighting takes place (ಕಾದುವೆಡೆ Ct. I, 37).

ಹೊಣೆ hŏṇĕ. = ಪೊಣೆ. Bond, bail; a bondsman, a surety, a bail (ಪ್ರತಿಭು, ಲಗ್ನಕ Hlâ.; ಲಗ್ನಕ, ಜಾಮೀನ G.; Bp. 27, 54; C.). ಮಂಚಕ್ಕೆ ಮಣೆ ಯಾಕೆ? ಲಂಚಕ್ಕೆ ಹೊಣೆ ಯಾಕೆ?— ದೋಣಿಗೆ ಹೋದರೂ ಹೊಣೆ ತಪ್ಪದು (Prvs.). See Sś. s. ಬೇಡ 2. — ಹೊಣೆಯಾಗು. -ಆಗು. To become bail, to give security for (ಜಾಮೀನ ಆಗು G. 64). ತೆಱಲಾಪರೆ ಹೊಣೆಯಾಗು!

ಹೊಣೆಕಾಱ hŏṇĕ-kâṟa. A surety, a security, a bail (ಪ್ರಲಗ್ನಕ, ಪ್ರತಿಭು Mr. 238).

ಹೊಣೆಗಾಱ hŏṇĕ-gâṟa. = ಹೊಣೆಕಾಱ. (ಪ್ರತಿಭು, ಲಗ್ನಕ Nr.; ಲಗ್ನಕ, etc., ಜಾಮೀನ್ದಾರ Si. 349; Bh. 1, 9, 11; C.).

ಹೊಣ್ಟು hŏṇṭu. = ಹೊಱಟು. P. p. of ಹೊಱಡು. (Bp. 26, 31; My.).

ಹೊಣ್ಡ hŏṇḍa. A pit, a hole; an aritificial pond; deepness, as of a well (My.; ಊರವರು ಬಱಸುವ ನೀರಿನ ಸಣ್ಣ ಕೆಱೆ G.). ನೀರಿನ ಹೊಣ್ಡ (ಕಟ್ಟೆ, ಕುಣ್ಡ G.).

ಹೊಣ್ಡೆ hŏṇḍĕ. — ಹೊಣ್ಡೆಮರ. The small tree Cerbera Odollam Gaert. (St. & Pl.).

ಹೊತ್ತಗೆ hŏttagĕ. Tbh. of ಪುಸ್ತಕ (Śmd. 95. 349).

ಹೊತ್ತಱು hŏttaṟu. = ಪೊತ್ತಱ್, etc. At day-break (Bp. 29, 29).

ಹೊತ್ತಾಱೆ hŏttâṟĕ. = ಪೊತ್ತಱ್, etc. Day-break; at day-break (C.; ಮುಂಜಾನೆ, ಪ್ರಾತಃಕಾಲ G.). ಹೊತ್ತಾಱೆಗೆ (My.). See Sp. s. ಬಯ್ಗು.

ಹೊತ್ತಿಗೆ hŏttigĕ. = ಹೊತ್ತಗೆ. (Bp. 57, 29; B. 4, 188).

ಹೊತ್ತಿಸು hŏttisu. 1. = ಪೊತ್ತಿಸು, etc. To kindle, to light (as fire or a lamp, Bp. 16, 25; C.; B. 4, 157; 5, 186).

ಹೊತ್ತಿಸು hŏttisu. 2. = ಹೊದ್ದಿಸು 2. To put on one's self, to assume (Bh. 10, 8, 10).

ಹೊತ್ತಿಸು hŏttisu. 3. To cause to burn at the bottom of the cooking vessel, to bake too much (as bread, B. 5, 186).

ಹೊತ್ತು hŏttu. 1. = ಪೊತ್ತು 1, etc. To be kindled, etc. (Bp. 56, 35; Bh. 8, 26, 7; My.). ಮಂಕುಮೂಱ ಆದರೆ ಬೆಂಕಿ ಹೊತ್ತದೇ?— ಮಡ್ಡನಾದರೆ ಗಡ್ಡ ಹೊತ್ತದೇ?— ಅಭ್ಯಾಸವಿಲ್ಲದ ಹಾರವ ಅಗ್ನಿಕಾರ್ಯಮಾಡಿದರೆ ಗಡ್ಡ ಮೀಸೆ ಹೊತ್ತಿತು (Prvs.).

ಹೊತ್ತು hŏttu. 2. = ಒತ್ತು 6, ಪೊತ್ತು 2, etc. The sun (C); time (C.; ಕಾಲ Si. 455); a day (in ಈ ಹೊತ್ತು, C.; B. 4, 20). ಈ ಹೊತ್ತಿಂಗೆ (Bp. 42, 33). ಬಯ್ಗಿನ ಹೊತ್ತು (ಸಾಯಂ); ಹೊತ್ತು ತೀವುವುದು (ಸೂತಿಮಾಸ, ವೈಜನನ Hlâ.). ಹದಿನೆಣ್ಟು ಬಾರಿ ಏವೆಯಿಕ್ಕುವಷ್ಟು ಹೊತ್ತು (ಕಾಷ್ಠೆ); ತಕ್ಕ ಹೊತ್ತು (ಪ್ರಸ್ತಾವ, ಅವಸರ Nr.). ಕೊಟ್ಟ ಸಾಲವ ಕೇಳ ಹೊತ್ತನಱಿಯೆ (Dp. 4). ಮೃತ್ಯು ಬಲ್ಲಳೆ ವೇಳ್ಯ ಹೊತ್ತಮ್ಬುದ? (76). ಸೋಲ್ತ ಹೊತ್ತು (ಅಭಿಷಂಗ Mr. 492). ಹೊತ್ತಿಗೆ ಒದಗಿದವನೇ ನೆಣ್ಟ, ಕೆಲಸಕ್ಕೆ ಒದಗಿದವನೇ ಬಣ್ಟ (Prv.). See Bp. 14, 9; 22, 7; J. 20, 23; Bh. 2, 13, 43; B. 2, 34. 40. 45; 3, 17; 5, 100. 242. 294. — ಹೊತ್ತಿಱ್. -ಇಱ್. The sun to go down lower and lower (afternoon, My.). — ಹೊತ್ತು ಕಳೆ. = ಹೊತ್ತುಗಳೆ. (C.; B. 4, 2). — ಹೊತ್ತುಗಳೆ. -ಕಳೆ. = ಪೊತ್ತುಗಳೆ. To spend time; to lose time (J. 14, 4; 30, 26; C.; B. 1, 12; 3, 68. 77. 95; 5, 293). ಹೊತ್ತುಗಳೆಯೋಣ (ಯಾಪನ G.). — ಹೊತ್ತು ಮಾಡು. To delay, to procrastine, to be dilatory (My.). — ಹೊತ್ತು ಮಾಱು. Time to be passed (for doing any business, My.). ಹೊತ್ತು ಮಾಱಿದರೆ ತೊತ್ತು ಹೆತ್ತವಳಾದಾಳೇ? (Prv.). — ಹೊತ್ತು ಮುಱುಗು. The sun to set (C.). — ಹೊತ್ತು ಮೂಡು. The sun to rise (C.). — ಹೊತ್ತು ಸಾಧಿಸು. To obtain or seize the proper moment; to look out or watch for an opportunity (B. 4, 20. 42. 80; My.). — ಹೊತ್ತು ಹುಟ್ಟು. The sun to rise (My.). — ಹೊತ್ತು ಹೊತ್ತಿಗೆ. From time to time (J. 26, 6; C.; B. 1, 12; 3, 21; 4, 24). — ಹೊತ್ತೇಱು. -ಏಱು. The sun to rise higher and higher (before noon, My.). ನಚ್ಚಿದನ್ತರಸಿನಾಙ್ಞೆಯನ್ತಿರುವವದು ಒಚ್ಚೊತ್ತು ತಪ್ಪಿ ನಡೆದರೆ ಹೊತ್ತೇಱ ಕಿಚ್ಚು ಕಾದನ್ತೆ (Sp.). — ಹೊತ್ತೊತ್ತಿಗೆ. -ಒತ್ತಿಗೆ. = ಹೊತ್ತು ಹೊತ್ತಿಗೆ. (B. 2, 45).

ಹೊತ್ತು hŏttu. 3. = ಪೊತ್ತು 3, etc. To be burnt at the bottom of the cooking vessel, etc. (C.). ಅವಳು ಆ ಹೊತ್ತಿದ ರೊಟ್ಟಿಗಳನ್ನು ನೋಡಿ (B. 5, 186). ಹೊತ್ತಿದ ಅನ್ನ (ಭಿಸ್ಸಟಿ G.).

ಹೊತ್ತು hŏttu. 4. That is burnt at the bottom of a cooking vessel, etc. (ದಗ್ಧಿಕೆ, ಸುಟ್ಟ ಅನ್ನ G.).

ಹೊತ್ತು hŏttu. 5. = ಒತ್ತು 7, ಪೊತ್ತು 4. P. p. of ಹೊಱು. (C.). — ಹೊತ್ತು ಬರ್. To take upon the head and come (Bp. 32, 56). — ಹೊತ್ತು ಹಾಯ್ಕು. To carry on the head and put or throw down (Bp. 49, 44).

ಹೊತ್ತು hŏttu. 6. = ಹೊದ್ದು 1, etc. P. p. of ಹೊದೆ 1. — ಹೊತ್ತು ಕೊಳ್ಳು. To put on, as clothes (B. 3, 91; 5, 88. 260. 297).

ಹೊತ್ತುಣ್ಟಲೆ hŏttuṇṭalĕ. At day-break (My.), early (B. 1, 21).

ಹೊತ್ತುಣ್ಟ್ಲೆ hŏttuṇṭlĕ. = ಹೊತ್ತುಣ್ಟಲೆ. (My.).

ಹೊತ್ಥಱು hŏtthaṟu. = ಪೊತ್ತಱ್, etc. The break of day. ಹೊತ್ಥಱಿನಲ್ಲಿ ಪ್ರಗೇ ಪ್ರಾತರ್ ಎನಿಸುಗು (Nr.).

ಹೊದಕುಳಿ hŏdakuḷi. = ಪೊದಕುಳಿ. Affliction, etc. (ಸನ್ತಾಪ Bhn. 64). — ಹೊದಕುಳಿಗೊಳ್. -ಕೊಳ್. = ಪೊದಕುಳಿಗೊಳ್. (Bp. 53, 67; J. 8, 40; Bh. 1, 8, 3).

ಹೊದಕೆ hŏdakĕ. = ಪೊದಕೆ, etc. A cover, a covering, a wrapper (ಪ್ರಾವಾರ, ಕಪ್ಪುಲ Nr.; Bp. 55, 11; C.; B. 5, 254). ಹೊದಕೆಯ ಸೀರೆ (ನಿವೀತ, ಪ್ರಾವೃತ Nr.). **2**, a thatch, a roof. ಮನೆಯ ಹೊದಕೆ (ಆಚ್ಛಾದನ, ವಲಭಿ Hlâ.).

ಹೊದಗಿಸು hŏdagisu. = ಪುದುಗಿಸು q. v., etc. (My.).

ಹೊದರು hŏdaru. (= ಪೋರ್ 3, etc.). The hollow of a tree (B. 2, 2; 3, 74); a hole in the ground (4, 192).

ಹೊದಱು hŏdaṟu. ಹೊದಱ್ = ಪೊದಱ್, etc. A bush, etc. (ಉಲಪ, ಸ್ತಮ್ಬ, ಗುಲ್ಮ, ವೀರುಧ್, ವಿಟಪ Hlâ.; Bh. 1, 20, 27. 55. 60; 3, 13, 26. 33; Šm. 85; My.). ನೆಯ್ಗೆಗೊಣ್ಡಿರ್ದ ಹೊದಱ್ (ಗುಲ್ಮ, ವೀರುಧ, etc. Mr. 108). ಲತೆಯ ಹೊದಱು (ಗುಂಜ, ಲತಿಕಾಸಮೂಹ Nn. 133); ಹಲವು ಬಳ್ಳಿಗಳು ಹಬ್ಬಿದ ಹೊದಱು (ಪಲವು ಆವೇಷ್ಟಗುಲ್ಮ, ಹಬ್ಬಿದನ್ತಾ ಮೆಳೆಗಳು 162). **2**, a mass, a large number, a host, a herd (Bh. 6, 2, 4; 7, 17, 25). — ಹೊದಱಿಕ್ಕು. -ಇಕ್ಕು. To form a herd (Bh. 3, 13, 16). — ಹೊದಱುಗಟ್ಟು. -ಕಟ್ಟು. To form a mass, to assemble (v. i., Bh. 6, 7, 7). — ಹೊದಱುದಿವಿ. -ತಿವಿ. A great striking or cuffing (Râm. 4, 3, 9). — ಹೊದಱೇಱು. -ಏಱು. To grow massive, numerous or abundant, to crowd (Râm. 1, 7, 14; 5, 9, 15; 6, 45, 3; Bh. 2, 2, 108).

ಹೊದಱೆ hŏdaṟĕ. = ಹೊದಱು. (Si. 305; *only* in Si.).

ಹೊದಸು hŏdasu. = ಪೊದಿಸು, etc. To put over; to put on; to cover; etc. (My.). ಹುಲಿಯ ಚರ್ಮದಲ್ಲಿ ಹೊದಸಲು ಪಟ್ಟ ರಥ (ದ್ವೈಪ, ವೈಯಾಘ್ರ Nr.).

ಹೊದಿ hŏdi. = ಪೊದೆ 1, etc. To put on, as a cloth (Bp. 47, 47); etc. ಹೊದಿಯುವ ಬಟ್ಟೆ (ನಿವೀತ, ಪ್ರಾವೃತ Si. 222).

ಹೊದಿಕೆ hŏdikĕ. = ಹೊದಕೆ, etc. A cover, etc. (My.; ಅನ್ತರ್ಧೆ, ವ್ಯವಧೆ, ಅಪವಾರಣ, ಅಪಿಧಾನ, etc. Si. 31). ಹುಲಿಯ ತೊಗಲು ಹೊದಿಕೆಯುಳ್ಳ ರಥ (ದ್ವೈಪ, etc. Si. 275); ಮರದ ಹಲಿಗೆ ಹೊದಿಕೆಯುಳ್ಳ ಬಣ್ಡಿ (ದಾರವ 276); ಗುಡಾರ ಮುನ್ತಾದ ಹೊದಿಕೆ (ಪರೀವಾಪ 439). **2**, a roof. ಮನೇ ಹೊದಿಕೆ (ಛದಿಸ್, ಪಟಲ Si. 457).

ಹೊದಿಸು hŏdisu. = ಹೊದಸು, etc. (Bp. 15, 21; C.). ಬಿಳಿಯ ಕಮ್ಬಳಿಯಿನ್ದ ಹೊದಿಸಿದ ರಥವು (ಪಾಣ್ಡುಕಮ್ಬಲಿ Nr.). ಕಮ್ಬಳಿಯಿನ್ದ ಹೊದಿಸಲ್ ಪಟ್ಟ ತೇರು (ಕಾಮ್ಬಲ); ಬಟ್ಟೆಯಿನ್ದ ಹೊದಿಸಲ್ ಪಟ್ಟ ತೇರು (ವಾಸ್ತ್ರ Si. 276); ಹೊದಿಸಲ್ ಪಟ್ಟದು (ಛನ್ನ, ಛಾದಿತ 381). ಹಚ್ಚಡವನ್ನು ಹೊದಿಸುವವನು (G. 308). ತನಗೇ ಇಲ್ಲದವಳು ಮಕ್ಕಳಿಗೇನು ಹೊದಿಸ್ಯಾಳು?— ಹಚ್ಚಡ ಹೊದಿಸಿದರೆ ಹುಚ್ಚು ಹೋದೀತೇ? (Prvs.).

ಹೊದೆ hŏdĕ. 1. = ಪೊದೆ 1, etc. To put on; to put over; to wrap round; to cover (ಆಚ್ಛಾದನ Šmd. Dh.; ಆವರಣ Šm. 98; Bp. 42, 4; My.). P. ps. ಹೊದದು, ಹೊದೆದು, ಹೊದ್ದು, ಹೊತ್ತು. ಕಾವಿಯ ಹೊದೆದು ಹೋದಾತ ಯೋಗಿಯೆನ ಬೇಡ (Sp.). ಮೆಯ್ ಮೇಲೆ ಹೊದ್ದಿರುವ ವಸ್ತ್ರ (ಪ್ರಾವಾರ, etc. Si. 224). ಶಾಲು ಹೊದ್ದವನಾದರೂ ಹಾಲು ಬಿಟ್ಟಾನೇ?—ಅಂಗಡೀ ಮಾಱ, ಗೊಂಗಡೀ ಹೊದ್ದ (Prvs.). — ಹೊದ್ದುಕೊಳ್ಳು. To put on, etc. (C.; B. 2, 33; 3, 25; 4, 135). ಹೊದ್ದುಕೊಮ್ಬ ಸೀರೆ (ಪ್ರಾವಾರ, etc. Nr.).

ಹೊದೆ hŏdĕ. 2. = ಪುದೆ, etc. A quiver (ಶರಕೋಶ Šmd. Dh.; ದೊಣೆ Šm. 98; Bh. 3, 13, 22). ಕಣೆಯ ಹೊದೆ (ದೊಣೆ, ಬತ್ತಳಿಕೆ, ಮೂಡಿಗೆ Kk. 40). **2**, a bush, a thicket (My.; ಕುಂಜ Si. 413; ಗುಲ್ಮ, ಸ್ತಮ್ಬ 442). — ಹೊದೆಯೊತ್ತು. -ಒತ್ತು. A quiver's hold (ತೂಣ, ಶರಾಶ್ರಯ, ಶರಧಿ, etc., ದೊಣೆ Mr. 295).

ಹೊದ್ದಿಕೆ hŏddikĕ. 1. = ಒದ್ದಿಕೆ, ಪೊರ್ದುಗೆ, etc. Joined state, union; concord, friendship (My.).

ಹೊದ್ದಿಕೆ hŏddikĕ. 2. = ಹೊದಿಕೆ. A cover, a wrapper (My.).

ಹೊದ್ದಿಗೆ hŏddigĕ. = ಪೊರ್ದುಗೆ, etc. Union (see Nn. 105 s. ಹೊದ್ದುಗೆ). **2**, that is joined to or appended: an appendage, something subordinate or inferior (ಉಪಸರ್ಜನ, ಉಪಾಗ್ರ Mr. 451).

ಹೊದ್ದಿಸು hŏddisu. 1. = ಪೊದ್ದಿಸು. To join (v. t., Bh. 6, 7, 21); to put to, to affix, to attach (J. 30, 50). ಲೋವೆಯ ಹೊದ್ದಿಸಿದ ಡೊಂಕ ಮರಂ (ಗೋಪಾನಸಿ Nr.).

ಹೊದ್ದಿಸು hŏddisu. 2. = ಹೊಚ್ಚಿಸು, ಹೊತ್ತಿಸು 2. To put on, as cloth, tiles, etc. (My.).

ಹೊದ್ದು hŏddu. 1. = ಪೊದ್ದು 1, ಹೊತ್ತು 6, ಹೊದೆದು. P. p. of ಹೊದೆ 1.

ಹೊದ್ದು hŏddu. 2. = ಪೊದ್ದು 2, etc. To join (v. i.); to come in contact with; to go or come near; etc. (Bp. 29, 7; 32, 45; 43, 82; 52, 23; 55, 7; 61, 37; Bh. 1, 8, 93; 6, 7, 21; Râm. 6, 45, 3; J. 6, 47; 22, 29; 25, 55). ಇದಱೊಳ್ ಪೆಱರನ್ ಅಭಿವಂಚಿಸುವ ಮಱೆಯ ಶಬ್ದ ಹೊದ್ದಿರಲ್ (Mr. 5). ತನ್ನ ತಾನಱಿವವನ ಮುನ್ನ ಹೊದ್ದದು ಮಾಯೆ; ಉನ್ನತವಪ್ಪ ಗಜವೇಱ ಬಪ್ಪವನು ಕುನ್ನಿಗಂಜುವನೆ? (Sp.). ಮುತ್ತು ನೀರಲಿ ಹುಟ್ಟಿ, ಮತ್ತೆ ನೀರಪ್ಪದೇ? ಸತ್ಯವನಱಿದ ಜ್ಞಾನಿ ಸಂಸಾರವನು ಮತ್ತೆ ಹೊದ್ದುವನೆ? (Sp.).

ಹೊದ್ದುಗೆ hŏddugĕ. = ಪೊರ್ದುಗೆ, etc. Union, etc. (ಸಂಹರ, ಪೊರ್ದುಗೆ Nn. 105, o. r. ಹೊದ್ದಿಗೆ).

ಹೊನ್ hŏn. = ಪೊನ್, etc. Gold (ಹೇಮ, ಸ್ವರ್ಣ, ಜಾತರೂಪ, ಸುವರ್ಣ, ಭರ್ಮ, etc. Hlâ.; ಕಲಧೌತ Hlâ.; ಸ್ವರ್ಣ, etc. Mr. 199; Čpr. 6, 82; Bp. 45, 37; 55, 14; 58, 31; Bh. 2, 13, 46); a gold coin, the half of a varaha (1 Rupee 7 As. 4 cash, My. as ಹೊನ್ನು; Bp. 28, 5. 12; 29, 15; 40, 35). ಹೊನ್ನುಳ್ಳವಂ (ಧನವತ್, ಅಸ್ತಿಮತ್ Hlâ.; ಧನಾಢ್ಯ Mr. 237). ಹೊನ್ನ ಪ್ರತಿಮೆ (ಹರಿಣಿ, ಹಿರಣ್ಮಯಿ); ಹೊನ್ನು ಬೆಳ್ಳಿಯುಂ (ಅಕುಪ್ಯ Hlâ.). ಹೊನ್ನನೂ ಬೆಳ್ಳಿಯನೂ ಅಚ್ಚಾಗಿ ಬೆಟ್ಟದೊಡೆ ರೂಪ್ಯ ಎನಿಸುಗು (Nr.). ಹೊನ್ನಂ ಕುಡುವೆಡೆಗೆ ಕಲ್ಪತರು (Šmd. 75). ಹೊನ್ನ ಬಯಕೆ (ನಿಕ್ಷೇಪ, ಉಪನಿಧಿ Mr. 56). — ಹೊನಗನೆ. = ಹನಗಾಣೆ, ಹೊನಗನ್ನೆ, ಹೊನಗೊನೆ, ಹೊನ್ನಗನ್ನೆ q. v., ಹೊನ್ನಗೋನೆ. (My.; ಬ್ರಾಹ್ಮಿ, etc. Si. 156). — ಹೊನಗನ್ನೆ. = ಹೊನಗನೆ, etc. (G.). — ಹೊನಗೊನೆ. = ಹೊನಗನೆ, etc. (My.). — ಹೊನ್ದಳಿಗೆ. -ತಳಿಗೆ. = ಪೊನ್ದಳಿಗೆ. A gold plate (Râm. 1, 17, 22; 3, 6, 58). — ಹೊನ್ದಾವರೆ. -ತಾವರೆ. = ಪೊನ್ದಾವರೆ. A gold-coloured lotus (Grj. 2, 68). — ಹೊನ್ದೇರ್. -ತೇರ್. -ರು. = ಪೊನ್ದೇರ್. A gilt chariot (Bh. 3, 18, 41; J. 12, 15; Râm. 3, 2, 20). — ಹೊನ್ದೊಡವು. -ತೊಡವು. = ಪೊನ್ದೊಡವು. A gold ornament (Čpr. 6, 96). — ಹೊನ್ದೋಣಿ. A golden trough (Râm. 1, 13, 10). — ಹೊನ್ನ. -ಅ 3. = ಪೊನ್ನ. N. of a Kannaḍa author (Šmd. 4); N. (C.; B. 4, 75). — ಹೊನ್ನಗನ್ನೆ. -ಕನ್ನೆ. = ಹೊನಗನೆ, etc. A common weed, used as a potherb, Alternanthera sessilis R. Br. (C.; ಬ್ರಾಹ್ಮಿ, ಮತ್ಸ್ಯಾಕ್ಷಿ, ಸೋಮವಲ್ಲರಿ, ವಯಃಸ್ಥೆ Nr.; ಸ್ತನವಯೋಗನ್ಧಿ Mr. 135; T. ಪೊನ್ನಾಂಗಣಿ; Tu. ಪೊಣಂಗಣೆ, ಪೊನ್ನಾಂಕಣ್ಣಿ). — ಹೊನ್ನಗುಬ್ಬಿ. A golden knob or head (Grj. 6, after 56). — ಹೊನ್ನಗೋನೆ. = ಹೊನ್ನಗನ್ನೆ. (My.). — ಹೊನ್ನಣ್ಡೆ. -ಅಣ್ಡೆ. A golden boiler (Râm. 1, 16, 53). — ಹೊನ್ನತನ್ದೆಗಳ್. N. (Bp. 58, 8). — ಹೊನ್ನದೇವ. N. (Bp. 9, 41). — ಹೊನ್ನಧೇನು. A cow of gold (Bp. 55, 15). — ಹೊನ್ನನ್ದಣ. -ಅನ್ದಣ. = ಪೊನ್ನನ್ದಣ. A golden palankeen (Râm. 1, 16, 13). — ಹೊನ್ನಪುತ್ತಳಿ. A golden puppet (Bp. 12, 6). — ಹೊನ್ನಪ್ಪ. -ಅಪ್ಪ. N. (C.). — ಹೊನ್ನಬಟ್ಟಲ್. A gold cup (Bp. 50, 4). — ಹೊನ್ನಮ್ಮ. -ಅಮ್ಮ. N. (My.). — ಹೊನ್ನಯ್ಯ. -ಅಯ್ಯ. N. (Bp. 45, 37; My.). — ಹೊನ್ನವರೆ. -ಅವರೆ. A common shrub with clusters of yellow flowers, Cassia auriculata Lin. (Z.). — ಹೊನ್ನಾ

ಯುಗ. -ಅಯುಗ. A gold sword-handle (Râm. 3, 6, 5; Bh. 3, 10, 7). — ಹೊನ್ನಾರತಿ. -ಆರತಿ. A waving-platter filled with gold, or a gold waving-platter (Bp. 12, 35). — ಹೊನ್ನಾವರಿಕೆ. -ಆವರಿಕೆ. = ಹೊನ್ನವರೆ. (My.). 2, a tall tree, Acacia xylocarpa Willd. al. Xylia dolabriformis Bent. (St. & Pl.). — ಹೊನ್ನೂವು. -ಊವು. A round gold plate on which there is the form of a flower and from which pearls pendulate; by a gold stalk it is fastened to the upper part of the ear (My.).

ಹೊನಗ್ಯಾ hŏnagyâ. = ಹೊಂಗಿಯು. (S. Mhr.).

ಹೊನಲ್ hŏnal. ಹೊನಲು. = ಪೊನಲ್. A stream (ಪುರ Šm. 85; ಹೂರ Kk. 13; ಹೂರಣ Šs.; as of blood, Bp. 32, 20; J. 7, 43; Râm. 6, 30, 40; as of poison, Bh. 2, 14, 61; as of molten lac, Bh. 1, 8, 88; as of a shower of flowers, Râm. 5, 9, 6); current (as of a stream, Bp. 20, 22). ಹೊನಲನ್ ಇಬ್ಬಗೆ ಮಾಡುವ ಕಡಲು (ಕೂಪಕ, ವಿದಾರಕ Nr.). ಕಾಡ ಹೊನಲ್ (ಕಾಟ್ಪುರ Šs.).

ಹೊನಹು hŏnahu. (= ಒನಪು; cf. ಪದಪು). Charm, etc.

ಹೊನಹುಗಾರ್ತಿ hŏnahu-gârti. A charming woman (ಪದಪುಗಾರ್ತಿ, ಸೌರಪ್ಯವತಿ Šs.; ಪದಪುಗಾರ್ತಿ Kk. 29; Šm. 74).

ಹೊನೆ hŏnĕ. = ಹನೆ. A large forest tree, Pterocarpus marsupium; (it stains yellow if wetted; the bark when wounded yields a red gum resin, the Kino, Van Someren).

ಹೊನ್ತ hŏnta. Tbh. ಪನ್ಥ. A path, a way (Tĕ. ಪೊನ್ತೆ).

ಹೊನ್ತಕಾಱ hŏnta-kâra. A man fertile in ways or expedients, a clever, able man (Bp. 37, 19).

ಹೊನ್ತಕಾಱಿ hŏnta-kâri. = ಹೊನ್ತಕಾಱ. (Bh. 7, 4, 12).

ಹೊನ್ತಗಾಱ hŏnta-gâra. = ಹೊನ್ತಕಾಱ. (My.).

ಹೊನ್ದರಿ hŏndari. = ಒನ್ದರಿ, etc. (My.).

ಹೊನ್ದಸು hŏndasu. = ಹೊನ್ದಿಸು. ಹೊನ್ದಸೋಣ (ಸಾಧನ Čb.).

ಹೊನ್ದಿಕೆ hŏndikĕ. = ಒನ್ದಿಕೆ, etc., ಪೊರ್ದುಗೆ, etc. Joining, fitting, combination; fitness; intimacy, friendship, good terms (My.). ನ್ಯಾಯನೀತಿಯನ್ನು ಹೇಳಿ ಹೊನ್ದಿಕೆ ಮಾಡುವಿಕೆ (ನಯ, ನಾಯ Si. 389); ಹೊನ್ದಿಕೆ ಮಾಡುವ ಸರಿಯಾದ ತಿಳುವಿಕೆ (ಯುಕ್ತಿ 410).

ಹೊನ್ದಿಗೆ hŏndigĕ. = ಒನ್ದಿಗೆ, etc., ಹೊನ್ದಿಕೆ. (My.).

ಹೊನ್ದಿಸು hŏndisu. = (ಒನ್ದಿಸು), ಪೊರ್ದಿಸು, ಹೊನ್ದಸು. To join (v. t., as limbs for greeting, Bp. 58, 58; as planks, C.; B. 4, 121); to attach (as copper plates to a ship, C.; B. 4, 140); to collect, to procure (as money, My.); to make fit or proper (as a price, My.); to settle (as a bargain, My.); to cause to obtain (Si.). ಹೊನ್ದ ತಕ್ಕದನ್ನು ಹೊನ್ದಿಸಿ ಕೊಡುವ ಸಯುಕ್ತಿಕವಾದ ಕೃತ್ಯ (ಉಪಾಯ Si. 263).

ಹೊನ್ದಿಸುವಿಕೆ hŏndisuvikĕ. Causing to obtain, etc. (Si. 387. 389).

ಹೊನ್ದು hŏndu. 1. = ಪೊರ್ದು 1, q. v., etc. To join, (v. i.); to touch (as sin, Bp. 55, 7; My.); to go nigh, to approach (Bp. 22, 28; My.); to join, to associate one's self to, to attach one's self to (Bp. 48, 15; My.); to agree, fit or suit (ಈ ಮಾತು ಅದಕ್ಕೆ or ಅಲ್ಲಿಗೆ ಹೊನ್ದುವದಿಲ್ಲ, My.); to be on agreeable, good terms (ತಮ್ಮ ತಮ್ಮೊಳಗೆ ಹೊನ್ದಿದರೆ ಸನ್ತೋಷದಿನ್ದ ವ್ಯವಹಾರ ಮಾಡ ಬೇಕು B. 5, 85; ಅವರಿಬ್ಬರಿಗೆ ಹೊನ್ದುವದಿಲ್ಲ, those two do not agree together, My.); to devolve on (as work; ಈ ಕೆಲಸ ನಿನ್ನ ಹೊನ್ದಿ ಅದೆ, My.). **2,** to obtain, to get (C.; B. 4, 175; 5, 40); to experience (as joy, grief, My.); to suffer (as misfortune, loss, death, My.). ಹೊನ್ದದೆ ಇರುವ ಮಾತು (ಅಬದ್ಧ, ಅನರ್ಥ Si. 59); ವೇದಾಧ್ಯಯನವನ್ನು ಮಾಡಿದ ಮೇಲೆ ಮದುವೆಯಾಗುವದಕ್ಕೆ ಗುರುವಿನಿನ್ದ ಅಪ್ಪಣೆಯನ್ನು ಹೊನ್ದಿದವನು (ಸಮಾವೃತ್ತ, ಲಬ್ಧಾನುಜ್ಞ 235); ಪಿತೃತ್ವವನ್ನು ಹೊನ್ದಿದವರು ತೃಪ್ತಿ ಪಡುವದಕ್ಕೋಸ್ಕರ ಮಾಡಲ್ ಪಡುವ ದಾನ (ನಿವಾಪ, ಪಿತೃದಾನ 243); ಹೊನ್ದ ತಕ್ಕದನ್ನು ಹೊನ್ದಿಸಿ ಕೊಡುವ ಸಯುಕ್ತಿಕವಾದ ಕೃತ್ಯ (ಉಪಾಯ Si. 263); ಕೇಳುವದಱಿನ್ದ ಹೊನ್ದಲ್ ಪಟ್ಟದು (ಯಾಚಿತಕ 300); ವೃದ್ಧಿ ಹೊನ್ದುವ ಸ್ವಭಾವವುಳ್ಳವನು (ವರ್ಧಿಷ್ಣು, ವರ್ಧನ 360); ಆಪತ್ತು ಹೊನ್ದಿದವನು (ಆಪನ್ನ, ಆಪತ್ಪ್ರಾಪ್ತ 364); ಹೊನ್ದಲ್ ಪಟ್ಟದು (ಪ್ರಾಪ್ತ, ಪ್ರಣಿಹಿತ 377); ಹೊನ್ದ ತಕ್ಕದು (ಪ್ರಾಪ್ಯ, ಗಮ್ಯ, ಸಮಾಸಾದ್ಯ 379); ಹೊನ್ದಲ್ ಪಟ್ಟರುವದು (ಲಬ್ಧ, ಪ್ರಾಪ್ತ, ವಿನ್ನ, ಆಸಾದಿತ, etc. 383).

ಹೊನ್ದು hŏndu. 2. = ಪೊನ್ದು 3. To die (ಮರಣ Šmd. Dh.).

ಹೊನ್ದುಗೆ hŏndugĕ. = ಪೊರ್ದುಗೆ, etc. Joining, etc. ಹೊನ್ದುಗೆಯಾಗದಿರ್ (ಅಗಲ್ Šmd. 176 Cm.).

ಹೊನ್ದುವಿಕೆ hŏnduvikĕ. Joining, etc.; obtaining. ಮನಸ್ಸಿನಲ್ಲಿರುವ ದ್ವೇಷವನ್ನು ಸಮಯ ಸಿಕ್ಕಿದಾಗ ಕೆಲಸದಿನ್ದ ತೋಱಿಸಿ ತೃಪ್ತಿ ಹೊನ್ದುವಿಕೆ (ವೈರಶುದ್ಧಿ, etc. Si. 296).

ಹೊನ್ನಿ hŏnni. (fr. ಹೊನ್). N. of men. **2,** N. of women (My.). — ಹೊನ್ನಿತನ್ದೆ. N. of a man (Bp. 47, 37). — ಹೊನ್ನಿದೇವ. N. of a man (Bp. 44, 4). — ಹೊನ್ನಿಪಲ್ಯ. A common weed used as a vegetable, Celosia argentea (Z.).

ಹೊನ್ನು hŏnnu. = ಹೊನ್, q. v. Gold, etc. (Bp. 29, 32; C.). ಹೊನ್ನು ಬೆಳ್ಳಿಗಳನು ಕರಗಿಸಿ ಮಾಡಿದದು (ಕೃತ Nr.). ಮುನ್ನ ಮಾಡಿದ ಪಾಪ ಹೊನ್ನಿಲೇ ಪೋಪುದೇ? ಹೊನ್ನಿನ ಪುಣ್ಯಮದು ಬೇಱೆ (Sp.). ಹೊನ್ನು ಹಣ್ಣಿನ ರಿಣವು ತೀರಿದಾಕ್ಷಣದಿ ಮಣ್ಣುಪಾಲ್ (Sp.). ಹೊನ್ನು ಹಣವುಣ್ಣೆನಗೆ (Dp. 4). ಹೊನ್ನಿದ್ದಮ್ಮನ ತೊನ್ನು ಮುಚ್ಚಿತು, ಮಕ್ಕಳಿದ್ದಮ್ಮನ ಹಾದರ ಮುಚ್ಚಿತು.—ಹೊನ್ನುಳ್ಳವನಿಗೆ ಮಾನ ಉಣ್ಟು.—ಬಿನ್ನವತ್ತಳೆ ಬರದರೆ ಹೊನ್ನು ಬನ್ದ ಹಾಗಾಯಿತೇ?—ಬೆನ್ನು ಬಿಡದ ಪಿಶಾಚಿ ಹೊನ್ನು ಕೊಟ್ಟರೆ ನಿತ್ತೀತೇ?—ಭಿನ್ನವಾದ ಗಡಿಗೆ ಹೊನ್ನು ಕೊಟ್ಟರೆ ಸಮನಾದೀತೇ?—ಸಲ್ಲದ ಹೊನ್ನಿಗೆ ವಟ್ಟವಿಲ್ಲ (Prvs.). See ಕಳ್ಳ-. — ಹೊನ್ನುಬಾಕಿ. A woman who longs only for money (Bp. 40, 55).

ಹೊನ್ನೆ hŏnnĕ. (fr. ಹೊನ್). = ಪುನ್ನಿಕೆ, ಪೊನ್ನೆ. The tree Terminalia tomentosa W. & A. (ಪೀತಸಾಲ, ಅಸನ Hlâ.; Mr. 114). **2,** = ಶಾಲಪರ್ಣಿ (Mr. 131; mistake for ಸುರಪರ್ಣಿ?). **3,** = ಹರಳು. (Mr. 134). See Bp. 45, 37; Râghĕ. 17, 54, where ಹೊನ್ನೆ is different from ಸುರಹೊನ್ನೆ). —ಹೊನ್ನೆಯ ಮರ. The tree Terminalia tomentosa W. & A. (ಜೀವಗ Šmd. 338; ಪೀತಸಾಲಕ, ಸರ್ಜಕ, ಅಸನ, ಪ್ರಿಯಕ, ಜೀವಕ Nr.; Si. 132). 2, a large timber tree yielding a red dye, Rottleria tinctoria Roxb. (St. & Pl.; M. ಪುನ್ನೆ, Tĕ. ಪೊನ್ನೆ; Sk. ಪುನ್ನಾಗ; S. Mhr. ರಕ್ತದ ಹೊನ್ನೆ(ಮರ; see ಸುರ

ಹೊನ್ನೆ No. 1). — ಹೊನ್ನೆಹುಳಿ. The fire-fly (ಇಂದ್ರಗೋಪ, ಖದ್ಯೋತ, ಜ್ಯೋತಿರಿಂಗಣ, ತಮೋಮಣಿ G.).

ಹೊಪ್ಪಳ hŏppaḷa. (fr. ಪೊಪ್ 2). A blister occasioned by a burn (My.).

ಹೊಪ್ಪಳಿಸು hŏppaḷisu. To blister (v. i., Grj. 9, after 27; My.).

ಹೊಪ್ಪೆ hŏppĕ. Either of the two divisions (whether equal or not) into which a nut or fruit is broken, slit or cut (My.; *cf.* the terms s. ಪೋಳ್).

ಹೊನ್ hŏm. 1. = ಪೊಮ್ 1, etc., (ಹೆಮ್ 4). Gold. — ಹೊಮ್ಬಟ್ಟಲ್. = ಪೊಮ್ಬಟ್ಟಲ್. A golden cup (Bp. 50, 12). — ಹೊಮ್ಬಣ್ಣ. = ಪೊಮ್ಬಣ್ಣ. (Śmd. 193). A yellowish, brown or tawny colour (ಕದ್ರು, ಪಿಂಗಲ Nr.; ಬಭ್ರು, ಕಾಂಚನವರ್ಣ Nn. 125; J. 25, 5). ಕಪ್ಪು ಬೆರಸಿದ ಹೊಮ್ಬಣ್ಣ (ಕಡಾರ, ಕಪಿಲ, ಪಿಂಗ, ಪಿಶಂಗ, ಕದ್ರು, ಪಿಂಗಲ); ಬಿಳಿದು ಬೆರಸಿದ ಹೊಮ್ಬಣ್ಣ (ಪಿಂಗ, ಪಿಶಂಗ, etc. Nr.). ಹೊಮ್ಬಣ್ಣದ ಗೋರಣ್ಟೆ (ಸಹಚರಿ, ಪೀತಝಿಣ್ಟಿ Hlâ.). ಸೇವನ್ತಿಗೆ ಹೊಮ್ಬಣ್ಣಮಾದೊಡೆ ಹೇಮಪುಷ್ಪಿಕೆ ಎನಿಸುಗು (Nr.). — ಹೊಮ್ಬರಣಿ. A gold jar or vase (Bh. 8, 21, 4). — ಹೊಮ್ಬರಹ. A golden writ (Bh. 1, 12, 13; 8, 21, 12; 8, 23, 10). — ಹೊಮ್ಬಟಿ. -ಪಟಿ. 1. A kind of gold cloth (Bh. 10, 4, 14). — ಹೊಮ್ಬಟಿ. 2. To gild (Bh. 6, 4, 35). — ಹೊಮ್ಬಾಟಿ. = ಪೊಮ್ಬಾಟಿ. A kind of plantain (B. 2, 38). 2, the half-opened flower-sheath of the cocoa and betel-nut tree (My.). ಕಾಡಲ್ಲಿ ಹೊಮ್ಬಾಟಿ ಬಯಸಿದ ಹಾಗೆ (Prv.). — ಹೊಮ್ಬಾಟಿಕುಸುರಿ. The very young nuts of the hŏmbāḷĕ (My.). — ಹೊಮ್ಬೆಸವು. Gold soldering (Râm. 1, 13, 9). — ಹೊಮ್ಮಣ್. Gold dust (Bp. 23, 39). — ಹೊಮ್ಮರಾಲ. A gold-coloured goose. ಕರ್ಮದಿನ್ದವೆ ಹರನು ಚರ್ಮವ ತಾನುಟ್ಟನು, ಹೊಮ್ಮರಾಲನ್ ಅಜನಾದನು, ಗೋವಿನ್ದನ್ ಎಮ್ಮೆಯ ಕಾದಂ (Sp.). — ಹೊಮ್ಮಳಿ. = ಪೊಮ್ಮಳಿ. (Râm. 3, 8, 14. 37, etc.; J. 18, 4; see ಹೇಮವುಗ). *Cf.* ಹೊಮ್ಮುಗ. — ಹೊಮ್ಮಳಿ. = ಪೊಮ್ಮಳಿ. A shower of gold (Bp. 9, 33; 57, 83). — ಹೊಮ್ಮಾಡ. A golden self-moving car (Bp. 27, 6; 34, 29). 2, = ಪೊಮ್ಮಾಡ. — ಹೊಮ್ಮಿಳಿ. A gilt leather-rope (Č. Bp. 41, 46). — ಹೊಮ್ಮುಗುಳು. = ಹೆಮ್ಮುಗುಳು. A medicinal garden plant with yellow heads of flowers, Spilanthes acmella Lin. var. oleracea Clarke.; the name is also used for the wild-growing variety (ವಸುಜಾಲಕ Mr. 141; My.). — ಹೊಮ್ಮೊಡಿಗೆ. A golden quiver (Bh. 8, 25, 4). — ಹೊಮ್ಮುಗ. = ಹೊಮ್ಮಳಿ. (Râm. 6, 51, 84).

ಹೊನ್ hŏm. 2. = ಪೊಮ್ 2. — ಹೊಮ್ಪುಟಿ. = ಪೊಮ್ಪುಟಿ, q. v. (Râm. 6, 45, 3; 6, 52, 6; Bh. 1, 13, 61; 6, 6, 34).

ಹೊಮ್ಮಿಸು hŏmmisu. To cause to rise, etc. See ಹೊಟಿ-.

ಹೊಮ್ಮು hŏmmu. = ಪೊಣ್ಮು, etc. To rise, to break out, to come forth (as chicken-pox, small-pox or vaccine-pox, My.); to egress (Râm. 6, 14, 21). See ಹೊಟಿ.

ಹೊಯ್ hŏy. 1. = ಪೊಯ್ 1, etc., ಹೊಯ್ಯು. To beat, etc.; to cast, to pour (Bp. 37, 44; 45, 6; 50, 7; 52, 9. 10; 61, 28; J. 20, 51, 26, 6; Bh. 1, 5, 8; 1, 10, 29; 2, 4, 6. 8; 2, 13, 47. 48; 3, 13, 34; C.; B. 1, 28). ಕಾಯ್ದು ಬಿಸಿಯಾಗಿರ್ದ ಹಾಲಿನಲ್ಲಿ ಆಘೊಡಾನೊನ್ದು ಮೊಸರ ಹೊಯ್ದುದರಿತ್ತ ಚಿನ್ದ ಒಡೆದುದು (ಅಮಿಕ್ಷೆ Nr.). ಭುಜವ ಹೊಯ್ (ಬಾಹಪ್ಪಳಿಸು Bhn. 32). ಅಟುಗಾಲ ಮಟಿ ಹೊಯ್ದರೂ ಮುತ್ತುಗಕ್ಕೆ ಮೂಟೀ ಎಲೆ. — ತುಮ್ಬಾ ಹೊಯ್ದರೂ ಹಮ್ಪಲು ಹೋಗದು. — ದಿನ್ನೇ ಮೇಲೆ ಮಟಿ ಹೊಯ್ದರೆ ಹಳ್ಳಕ್ಕೆ ಬರುವದು. — ಸೋರುವ ಮನೇಲಿ ಉಚ್ಚೆ ಹೊಯ್ದರೆ ಹಳ್ಳದ ಕೂಡೇ ಹಳ್ಳ (Prvs.). — ಹೊಯ್ದಾಡು. -ಆಡು. = ಪೊಯ್ದಾಡು. (Bh. 1, 10, 37; My.). 2, to pour about (My.).

ಹೊಯ್ hŏy. 2. = ಹೊಯ್ದು. P. p. of ಹೊಯ್ 1, in ಹೊಯ್ ಕೊಳ್ಳು (My.). See Dp. s. ಬುಗ್ಗಿ.

ಹೊಯ್ hŏy. 3. = ಪೊಯ್ 2, etc. A stroke, a blow (Bh. 1, 10, 36); casting, etc. ಹೊಯ್ಕುಮ್ಬಿ. A club for beating (Bh. 1, 7, 16). — ಹೊಯ್ಕೆಯ್. = ಹೊಯಿಕೆಯ್, q. v. (Bh. 2, 13, 27). — ಹೊಯ್ಗಡುಬು. -ಕಡುಬು. = ಹೊಯಿಗಡುಬು, q. v. (My.). — ಹೊಯ್ನೀರ್. = ಪೊಯ್ನೀರ್. Water that is poured (My.). — ಹೊಯ್ಹಾಲು. Milk that is poured or put (into the mouth of children, My.).

ಹೊಯಿ hŏyi. 1. = ಬಯಿ 2, ಹೊಯ್ 1, etc. To beat, etc.; to cast (as types, C.; B. 4, 209), to pour. P. p. ಹೊಯಿದು. See Sp. s. ಹರಿ 4; Bp. 21, 10; 37, 42. 44. ಬಯ್ದು ಬಾಯಿಗೆ ಹೊಯಿದ ಪೆಟ್ಟು. — ಮಣ್ಣು ಹೊಯಿದು ಅಮ್ಬಲಿ ಕಾಸಿದರೆ ಉಮ್ಬೋಕಾದೀತೇ? (Prvs.). — ಹೊಯಿದಾಟ. -ಆಟ. Beating, etc. (ಹೊಡದಾಟ G. 580). — ಹೊಯಿದಾಡು. -ಆಡು. = ಹೊಯ್ದಾಡು. (Bhâgavata 3, 2, 48; G. 219). — ಹೊಯಿ ಹೊಯಿ. rep. (Bp. 37, 42).

ಹೊಯಿ hŏyi. 2. = ಹೊಯ್ 3, etc. Beating; casting; pouring. — ಹೊಯಿಕೆಯ್. = ಹೊಯ್ಕೆಯ್. Casting or moulding-work: a cast (of something else), a counterfeit, a likeness; likeness (ಸರಿ, ದೊರೆ, ಪಡಿ, ಪಾಸಟೆ, ಎಣೆ, ಹೋಟಿ, etc., ಸಮಾನ Ŝs.). — ಹೊಯಿಗಡುಬು. -ಕಡುಬು. = ಹೊಯ್ಗಡುಬು. A cake of which the dough is poured into a vessel and boiled in steam (Č. Bp. 47, 42). — ಹೊಯಿಗಲವು. (-ಕಲವು?). See Mr. 216 s. ಕ್ಷೀರಸ.

ಹೊಯಿಗೆ hŏyigĕ. Sand (My.; *cf.* ಪುಟಿಲ್?). ಹೊಯಿಗೇಲಿ ಬರೆದು, ಉಡೀಲಿ ಹಾಕಿ ಕೊಣ್ಡ ಹಾಗೆ (Prv.).

ಹೊಯಿತ hŏyita. Beating; a stroke, a blow (My.).

ಹೊಯಿಲು hŏyilu. 1. = ಹುಯಿಲು, etc. Calling out, vociferation; noise (My.).

ಹೊಯಿಲು hŏyilu. 2. Beating, etc.; a stroke, a blow (Bp. 52, 9. 20; My.; see ಬಿಡು-); the beating, *i. e.* the current or flow of a river or stream (My.).

ಹೊಯಿಸಣ hŏyisaṇa. N. of a country. (ಕುದುರೆ) ಹೊಯಿಸಣದೊಳ್ ಉದಿಸಿರಲ್ (ಭೂಮಿಜ Mr. 282).

ಹೊಯಿಸು hŏyisu. = ಪೊಯಿಸು, etc. To cause to beat (as a drum, etc., My.); to cause to cut off (as a head, C.; B. 4, 80); to cause to beat, *i. e.* to cause to create (as a sound, Bp. 26, 22); to cause to cast or pour (My.).

ಹೊಯ್ಯು hŏyyu. = ಹೊಯ್ 1, etc. ಹೊಯ್ಯುವದು (C.). ಸೆಟ್ಟಿ ಏನು ಮಾಡುತ್ತಾನೆ? ಅಳೆಯುತ್ತಾನೆ, ಹೊಯ್ಯುತ್ತಾನೆ (Prv.).

ಹೊಯ್ಲು hŏylu. = ಪೊಯಿಲ್, etc., ಹೊಯಿಲು 2. Beating (as of a drum, Râm. 3, 68); a stroke, a blow (Bp. 50, 6. 7; 52, 10. 13. 16. 18; Bh. 1, 19, 19; 3, 19, 50; 5, 3, 99). ಹಾದರಕ್ಕೆ ಹುಟ್ಟಿದ ಮಗ ಹೊಯ್ಲಿಗೆ ಬಿದ್ದು ಸತ್ತ (Prv.).

ಹೊಯ್ಸು hŏysu. = ಹೊಯಿಸು, etc. To cause to beat (as a drum, Râm. 1, 13, 12; 5, 1, 5); to cause to beat or cut in, to cause to engrave (Bp. 59, 56); to cause to cast or pour (55, 14).

ಹೊರ hŏra. 1. P. p. of ಹೊರೆ 1, in ಹೊರ ಕೊಳ್ಳು. (C.; B. 4, 199).

ಹೊರ hŏra. 2. = ಪೊರೆ 4, etc. Joining, etc. See ಹೊರಕುಳಿ.

ಹೊರಕ hŏraka. One who nourishes. See ಹೊಟ್ಟೆ.

ಹೊರಕುಳಿ hŏra-kuḷi. A person who joins others, *i. e.* depends on others (for his sustenance, ಪರಜಾತ, ಪರ್ಯೈಧಿತ Hlâ.).

ಹೊರಜಿ hŏraji. = ಹೊರಜೆ, ಹೊರ್ಜೆ. A stout and long rope used in drawing an idol-car on festive occasions (My.).

ಹೊರಜೆ hŏrajĕ. A cord put round the neck of an elephant, etc. (Č. Bp. 47, 44; T. ಪುರಜ್ಜೈ, ಪುರೋಜ್ಜೈ).

ಹೊರಟು hŏraṭu. = ಹೊರಡು 2. A hump (Bp. 50, 31; *cf.* the terms s. ಪೊಮ್ 2; T. ಪೊಟುಲ್, greatness = ಪೆರುಮ್ಮೈ). — ಹೊರಟ. -ಅ 3. A hump-backed man. — ಹೊರಟಪಾಣ್ಡ್ಯ. N. (Bp. 50, 31). — ಹೊರಟ ಬೆನ್ನು. A back with a hump (Bp. 20, 11; 50, 31).

ಹೊರಡು hŏraḍu. 1. = ಪೊರಳ್, etc. To roll; to welter; to cause to roll, etc. (ಪರಿಲುಠನ, ಪರಿಲುಠನಮೆನ್ದು, ಪೊರಳ್ವುವುದು Šmd. Dh.).

ಹೊರಡು hŏraḍu. 2. = ಹೊರಟು. A hump. ಗಡು ಎನ್ದೊಡೆ ಕುಬ್ಜು, ಬೆನ್ನ ಹೊರಡುಂ (Nr.).

ಹೊರದು hŏradu. = ಹೊರೆದು. P. p. of ಹೊರೆ 1. (My.).

ಹೊರಸು hŏrasu. A cot, a couch (ಖಟ್ವ Mr. 202; B. 2, 30; 4, 75). ಎಟ್ಟೆನ್ದು, ಹೊರಸಿನ ನೆಯ್ಗೆಯ ಊಕೆಯ ನುಲಿಯುಮ್ ಅಕ್ಕುಂ (Šmd. I).

ಹೊರಳಿ hŏraḷi. = ಪೊರಳಿ. A heap, a mass, an assemblage (ಸಮೂಹ Šs.; ಮೊಕ್ಕಳ, ಒಬ್ಬುಳಿ, ಒಟ್ಟಿಲ್, ಒಗ್ಗು, etc. Kk. 17; ಗೊನ್ದಣಿ, ತೆರಳ್ಕೆ, ಸಾಲ್, ಒಬ್ಬುಳಿ, ಬಳಗ, ಮೊತ್ತ, etc., ಶ್ರೇಣಿಕೆ Šm. 54; Bp. 58, 50; Bh. 1, 20, 55. 60; J. 13, 12). — ಹೊರಳಿಗಟ್ಟು. -ಕಟ್ಟು. A mass to be formed: to assemble (Bh. 6, 7, 19). — ಹೊರಳಿಗಿಡಿ. -ಕಿಡಿ. Amassed sparks (Bh. 8, 25, 12). — ಹೊರಳಿಗೆಡು. -ಕೆಡು. To disperse (v. i., Bh. 3, 18, 42). — ಹೊರಳಿವೆಣ. -ಹೆಣ. Amassed corpses (Râm. 6, 30, 8).

ಹೊರಳಿಸು hŏraḷisu. = ಪೊರಳ್ಚು, ಹೊಳ್ಳಿಸು. To cause to roll, etc., to roll about (C.); to have rolled (My.). ತುಪ್ಪದಲ್ಲಿ ಕರದು ಸಕ್ಕರೆಯಲ್ಲಿ ಹೊರಳಿಸಿದ ಗೋದಿಯ ತುಕಡಿಗಳ ಚೂರು (Čb. 136).

ಹೊರಳು hŏraḷu. = ಪೊರಳು, etc., ಹೊಳ್ಳು 2. To roll; to welter, to wallow (Bp. 45, 27; 49, 26; 52, 15; Bh. 4, 4, 15; 6, 8, 12; Râm. 6, 30, 14; J. 8, 40; C.; B. 4, 82). ಉಪ್ಪಿನವ ಕೆಟ್ಟೆನೆನ್ದರೆ ತೆಂಗಿನ ಕಾಯಿಯವ ಹೊರಳಿ ಹೊರಳಿ ಅತ್ತ.— ಕತ್ತೆ ತಿನ್ದೂ ಹಾಯಿ, ಹೊರಳಿಯೂ ಹಾಯಿ (Prvs.). ನೆಲದಲ್ಲಿ ಅಡಿಗಡಿಗೆ ಪೆಲ್ಲಹಿಸುವಲ್ಲಿ ಉಪಾವೃತ್ತ ಲುಠಿತ ಎನಿಸುಗು, ಇದು ಹೊರಳುವುದು (Nr.). — ಹೊರಳಾಡು. -ಆಡು. To roll about; to welter, to tumble about (as a horse, a donkey, etc., C.; Si. 274; B. 3, 24; 4, 47). — ಹೊರಳ್ಯಾಡಿಸು. -ಆಡಿಸು. To cause to roll about, etc. (G. 98). — ಹೊರಳ್ಯಾಡು. -ಆಡು. = ಹೊರಳಾಡು. (G. 78; Čb. 89; B. 5, 21. 250).

ಹೊರಳುವಿಕೆ hŏraḷuvikĕ. Rolling, etc. (G. 580).

ಹೊರಳೆ hŏraḷĕ. 1. = ಹೊಳ್ಳೆ 1. A nostril (B. 3, 65; 4, 22; see ಪುರೆ).

ಹೊರಳೆ hŏraḷĕ. 2. Money of one head of accounts transferred to another in order to be returned (My.).

ಹೊರಿಕೆ hŏrikĕ. = ಪೊರೆ 5, etc., ಹೊರಿಗೆ. The scale or coat of an onion; a thin layer or scale of a stone, a lamina, a stratum, a layer (My.).

ಹೊರಿಗೆ hŏrigĕ. = ಹೊರಿಕೆ, etc. (My.; Râm. 3, 6, 8).

ಹೊರಿಸು hŏrisu. = ಪೊರೆಯಿಸು. To have one's self nourished, to depend on somebody for one's sustenance. ದೈವವ್ಪೊರಿಸಿ (*i. e.* ದೈವಂ ಪೊರಿಸಿ) ಇರ್ಪವನು (ಯದ್ಭವಿಷ್ಯ, ದೈವಪರ Hlâ.). **2,** to cause to nourish.

ಹೊರುಕುಳಿ hŏrukuḷi. = ಪೊರ್ಕುಳಿ, q. v.

ಹೊರುಮಂಜ hŏrumañja. = ಹುರುಮಂಜ, etc. (S. Mhr.).

ಹೊರೆ hŏrĕ. 1. = ಪೊರೆ 1, q. v. To nourish, etc. (ಪೋಷಣ Šm. 103; Bh. 1, 10, 5. 15; C.); to invigorate, to refresh (Bh. 1, 5, 10). ತನ್ನ ಒಡಲ ಹೊರೆವಾತನು (ಆತ್ಮಮ್ಭರಿ, ಕುಕ್ಷಿಮ್ಭರಿ); ಹೊರೆವಾತನು (ಪೋಷ್ಟೃ, ಭರ್ತೃ); ಹೊರೆಯಲ್ ಪಟ್ಟುದು (ಪುಷ್ಟ, ಪುಷಿತ Nr.). ತನ್ನ ಬಸಿಱ ಹೊರೆವವ (ಆದ್ಯೂನ, ಔದರಿಕ Hlâ.). ತನ್ನ ಹೊಟ್ಟೆ ಹೊರ ಕೊಮ್ಬುವವನು (ಆತ್ಮಮ್ಭರಿ, etc. Si. 358; see ಹೊರ ಕೊಳ್ಳು s. ಹೊರ 1). ತನ್ನ ಹೊಟ್ಟೇ ತಾನು ಹೊರೆಯದವ ಮುನ್ನಾರ ಸಲಹುವನು? (Prv.).

ಹೊರೆ hŏrĕ. 2. = ಪೊರೆ 3, q. v. To join (v. i.); to come near; to come upon (Bh. 1, 8, 73; Râm. 6, 50, 10);—to join (v. t.), to apply to, to put to (Râm. 1, 13, 5). ಸೀರೆಯ ಹೊರೆವ ಚೂರ್ಣ (ಪಿಷ್ಟಾತ, ಪಟವಾಸಕ Nr.). See ಹೊಲೆ-.

ಹೊರೆ hŏrĕ. 3. = ಪೊರೆ 4, etc. Joining; a joining, a web or piece of cloth (B. 3, 103); nearness, neighbourhood, vicinity (ಸನಿಹ Šm. 103; Bp. 28, 18; 50, 20; Bh. 10, 8, 7; J. 7, 62); side (ಪಕ್ಕ Šm. 103). ಊರ ಹೊರೆ (ಗ್ರಾಮಾನ್ತಿಕ, ಉಪಶಲ್ಯ, ಪರ್ಯನ್ತ, ಪರಿಸರ, ಕಟ Hlâ.).

ಹೊರೆ hŏrĕ. 4. = ಪೊರೆ 5, etc. The skin or slough of a serpent (My.; Si. 77. 78); a layer or coat of a plantain tree (Bp. 35, 38; My.); a fold (ಪದರ Šm. 103).

ಹೊರೆ hŏrĕ. 5. = ಪೊರೆ 7. Wrongness, fault, deceit (Bp. 40, 60; Bh. 1, 8, 76). — ಹೊರೆ ಹೊಗು. To feel a choking sensation (Bh. 7, 1, 39).

ಹೊರೆ hŏrĕ. 6. = ಪುರಿ, 4, etc. Invigoration, spirit, courage, etc. (Bh. 8, 5, 10; 8, 21, 3. 5; 8, 23, 4). — ಹೊರೆಗುನ್ದು. -ಕುನ್ದು. To become spiritless or discouraged (Bh. 1, 14, 25). — ಹೊರೆಯೇಱು. -ಏಱು. To grow full of spirit, etc. (Bh. 6, 6, 34; 8, 21, 4).

ಹೊರೆಹ hŏrĕha. Nourishing: invigorating, reviving. ಕೆಟ್ಟ ಗನ್ಧವ ಹೊರೆಹ (ಪ್ರಬೋಧನ, ಅನುಬೋಧ Nr.).

ಹೊಱ hŏṟa. = ಪೊಱ 2. The outside; outside; to the ouside; forth. Datives ಹೊಱಕ್ಕೆ (My.; Si. 85. 393), ಹೊಱಯಿಕೆ (Bp. 33, 18). — ಹೊಱಉಸುಲು. Breath exhaled (S. Mhr.). — ಹೊಱಕಡೆ. The outside. ಪುಷ್ಪಮಾಲಿಕೆ ತಳಿರು ದೋರಣ ಮಾವಿನ ಸೊಪ್ಪು ಮುನ್ತಾದವುಗಳನ್ನು ಕಟ್ಟುವದಕ್ಕೋಸ್ಕರ ಬಾಕಲ ಹೊಱಕಡೆಗೆ ಕಾಣುವನ್ತೆ ಎರಡು ಕಮ್ಬಗಳಿನ್ದ ಕಟ್ಟಲ್ ಪಟ್ಟ ದ್ವಾರಬನ್ಧನದ ಚೌಕಟ್ಟು (ತೋರಣ, ಬಹಿರ್ದ್ವಾರ Si. 112). 2, a public privy (My.). 3, evacuation of the bowels (My., in ಹೊಱಕಡೆಯಾಗು). — ಹೊಱಕೂಟ. An outer or other connection, etc. (ಅನ್ತರ Mr. 531; Nn. 77). — ಹೊಱಕೆಯ್. The outside (Bh. 8, 25, 4; My.). 2, another hand (Bp. 15, 10). 3, the upper part of the hand (Bp. 21, 43). — ಹೊಱಗಡೆ. -ಕಡೆ. The outside (C.; B. 5, 261). — ಹೊಱಗರಿ. -ಕರಿ 4. To go far outside: to jut, to project (Bp. 20, 12). — ಹೊಱಗುಡಿ. A tent that is outside (a wood, Bh. 3, 18, 34). — ಹೊಱಗೆಡವು. -ಕೆಡವು. To throw to the outside: to allow to burst forth or come out (as a laugh or fear (B. 5, 143. 164). — ಹೊಱ ಚೆಲ್ಲು. To pour out (My.). 2, to flow over, to be spilt (C.; G. 67). — ಹೊಱತನಕ. So far as the outside (B. 3, 34). — ಹೊಱದವಡೆ. The outer side of the lower cheek (My.), or of the jaws (Si. 214). — ಹೊಱ ನೂಂಕು. To push outside, to remove (Bp. 21, 30). — ಹೊಱ ಪಡಿಸು. To make public (My.). — ಹೊಱ ಪಡು. To become public (My.). — ಹೊಱಪಾಳೆಯ. A camp that is outside (Č. Bp. 42, 13; Bh. 3, 18, 34). — ಹೊಱಬಾಗಿಲು. The outer door or gate (My.; Si. 112; ಅಲಿನ್ದ, ತೋರಣ G.). — ಹೊಱಬಾಹೆ. The outside (Bh. 3, 17, 42). — ಹೊಱ ಬೀೞು. To come forth (B. 3, 31. 36. 68. 75; 4, 22. 40. 49. 113. 119); to sally; to escape (Bh. 1, 8, 21). 2, to come out, to become public (My.), to be detected (My.; G. 226). — ಹೊಱಮುಗ್ಗಿಲು. The outside (C.; B. 4, 70). — ಹೊಱಮುಟ್ಟ. The outer space about (a house, etc., My.). — ಹೊಱಮಡಿಸು. -ಪಡಿಸು. = ಪೊಱಮಡಿಸು, q. v. (Bp. 50, 21. 22). — ಹೊಱಮಱಿ. -ಪಱಿ. To flow forth (Bh. 3, 19, 12). — ಹೊಱಮಿಂಚು. = ಪೊಱಮಿಂಚು, q. v. (My.). — ಹೊಱಮುಚ್ಚಕ. A small annual plant, Biophytum sensitivum D. C. (Z.). — ಹೊಱಮೆಯ್. = ಪೊಱಮೆಯ್. The outside (C.; B. 4, 140). — ಹೊಱವಡಿಸು. -ಪಡಿಸು. = ಹೊಱಮಡಿಸು, etc. (Bp. 42, 19; 43, 52). ಹೊಱವಡಿಸಲು ಪಟ್ಟವನು (ನಿಃಕಾಸಿತ, ಅವಕೃಷ್ಟ Nr.). — ಹೊಱವಡು. -ಪಡು. = ಪೊಱಮಡು, q. v. (Bp. 18, 53). P. ps. ಹೊಱವಟ್ಟು, ಹೊಱವಣ್ಟು (Bp. 12, 48; Râm. 4, 3, 4. 5). ಕೂಪಾದಿಗಳಿನ್ದ ಉದಕ ಹೊಱವಟ್ಟು ಚಕ್ರಾಕಾರದಿನ್ದ ಎಲ್ಲಾ ದೆಸೆಯಲ್ಲಿ ಪಸರಿಸುತ್ತಿದ್ದದು (ಚಕ್ರ, ಪುಟಭೇದ, ಮೊರಹು Nr.). — ಹೊಱವಣ್ಡಿಸು. = ಹೊಱವಡಿಸು, etc. ಬಣ್ಡಿಯನ್ ಊರ ಹೊಱವಣ್ಡಿಸಿದಂ (Bh. 1, 10, 29). — ಹೊಱ ವಳಯ. = ಹೊಱ ವಳೆಯ, etc. (Râm. 6, 13, 3; Bh. 1, 6, 1). — ಹೊಱ ವಳೆಯ. = ಪೊಱ ವಳೆಯ. Environs, surroundings; the state of being about in a circle. ಹೊಱ ವಳೆಯದ ಕಾವಲವನು (ಪರಿಧಿಸ್ಥ, ಪರಿಚರ Nr.). — ಹೊಱವಾಱ್. = ಪೊಱವಾಱ್, etc. A buttock; the posteriors, the buttocks (ನಿತಮ್ಬ Nr.). ಹೊಱವಾಱಲಿ ಇದ್ದ ಕುಣಿಕೆಗಳೆರಡು (ಕುಕುನ್ದರ Nr.). — ಹೊಱವುಕ್ಕಡ. -ಉಕ್ಕಡ. A guard-house outside a town or near the borders of a country (My.). — ಹೊಱ ಶೂಲ. A stake outside (the town, Bh. 6, 1, 7). — ಹೊಱ ಸುತ್ತು. = ಹೊಱ ವಳೆಯ. (My.; G.). — ಹೊಱ ಸೂಸು. = ಪೊಱ ಸೂಸು, q. v. (Bh. 1, 20, 60). — ಹೊಱಸೊಪ್ಪು. The outer foliage; the rind. ಮರದ ಹೊಱಸೊಪ್ಪು (ತ್ವಚ್, ವಲ್ಕ, ವಲ್ಕಲ Hlâ.). — ಹೊಱ ಹೊಮ್ಮಿಸು. To cause to arise, come forth or spring up; to produce or create. (ಬಾಲೆ) ತನ್ನುವನ್ ಅಡಿಸುವ ಕೆಳದಿಯರ ತಣ್ಣವನು ಹೆಮ್ಮೆಗೊಳಿಸುತ, ಸುಖಮುಖವ ಹೊಱ ಹೊಮ್ಮಿಸುತ (Prll. 3, 30). — ಹೊಱ ಹೊಮ್ಮು. To rise; to come forth; to break out (as chicken-pox, etc., My. = ಹೊಮ್ಮು); to sprout, to shoot. ಹೊಸತಾಗಿ ಹೊಱ ಹೊಮ್ಮಿದ ಪತ್ರ ಪುಷ್ಪ ಫಲಾದಿಗಳ ಗೊಂಚಲು (ವಲ್ಲರಿ, ಮಂಜರಿ Nr.). — ಹೊಱ ಹೊಱಗೆ. rep. (Bp. 25, 27. 31; 26, 22; 28, 26). — ಹೊಱ ಹೊಱಡು. To go forth, to egress (C.; Bp. 26, 31; B. 5, 59. 144. 262). — ಹೊಱಾಯ. -ಆಯ. = ಹೊಱಮುಟ್ಟ. (My.).

ಹೊಱಗು hŏṟagu. = ಪೊಱಗು, etc., ಹೆಱಗು, ಹೊಱಗೆ, ಹೊಱಚ್ಚು. The outside (Bp. 37, 46; 60, 6). Declension: ಹೊಱಗಣ, ಹೊಱಗಿನ, ಹೊಱಗಿನ್ದ (C.; B. 2, 6), ಹೊಱಗಿನಿನ್ದ (C.; B. 4, 83). ಬಾಗಿಲ ಹೊಱಗಣ ತೋರಣ (ತೋರಣ, ಬಹಿರ್ದ್ವಾರ); ಹೊಱಗಣ ಬಾಗಿಲೆನ್ದೂ, ಎಮ್ಬರು (Nr.). ಮಣಿಕಟ್ಟು ತೊಡಗಿ ಕಿಱು ಕುಣಿಕೆಪರ್ಯನ್ತಮಾಗಿ ಉಳ್ಳ ಕೆಯ್ಯ ಹೊಱಗು (ಕರಭ, ಮೇಗೆಯ್ Nr.). ಕುಱಿಕಬ್ಬಿನೊಳು ಹೊಕ್ಕು ಅಱಿವದೇ ತನಿರಸವ, ಹೊಱಗಣ ಸೋಗೆ ಆಗಿವನ್ತೆ? (Sp.). ಹೊಱಗಿನ ಕಳ್ಳನನ್ನು ಹಿಡಿಯ ಬಹುದು, ಒಳಗಿನ ಕಳ್ಳನನ್ನು ಹಿಡಿಯಲಾಗದು (Prv.). — ಹೊಱಗತ್ತ ನೂಂಕು. -ಅತ್ತ-. To push far away (Bp. 18, 34). — ಹೊಱಗಿನ ಆಚರಣೆ. External practice or observance of established rules (B. 5, 279). — ಹೊಱಗಿನ ಸಾಲ. A loan taken from strangers (My.); a loan taken by strangers (My.).

ಹೊಱಗೆ hŏṟage. = ಪೊಱಗೆ. etc. The outside (Bp. 57, 32); outside, without (Bh. 1, 8, 70; 2, 13, 32; ಬಹಿಸ್, ಬಾಹ್ಯ Si. 475; C.). ಚನ್ನಿಗನ್ ಅಸುವಱಿಯೆ ಹೊಱಗೆ ಹಾಕುವರು (Dp. 1). ಬೆಕ್ಕು ಪಂಜರವನ್ನು ಬೇಕಾದಾಗ ಹೊಱಗೆ ತೆಱೆಯುವವು (B. 3, 30). ಒಳಗಿನ ಹತ್ತಿ ಹೊಱಗೆ ಬರುತ್ತದೆ (4, 27). ಹೊಱಗೆ ಹೋಗುವ ಮಾರಿ ನನ್ನ ಮನೇ ಹೊಕ್ಕು ಹೋಗು! ಅನ್ದ ಹಾಗೆ.— ಹೊಱಗೆ ಭಕ್ತಿ, ಒಳಗೆ ಕತ್ತಿ.— ಹೊಱಗೆ ನೋಡಿದರೆ ಕೋಟೆ, ಒಳಗೆ ನೋಡಿದರೆ ಹೋಟೆ (Prvs.). ಊರ ಹೊಱಗೆ, ಮನೆಯ ಹೊಱಗೆ, etc. (C.). — ಹೊಱಗಾಗು. -ಆಗು. = ಪೊಱಗಾಗು. To become or be outside: to be excluded. ಆಕಾಶ ಹೊಱಗಾದ ಪಂಚಭೂತ (ಅಮ್ಬರವರ್ಜಿತಪಂಚಭೂತ Nn. 82). 2, to become free or exempt from, to be liberated from (as from trouble, offence, etc., My.). 3, to be absent or fail. ಶ್ರೀ ಗುರುಸ್ಥಿರಭಕ್ತಿಯಿದು ಹೊಱಗಾಗಿ ಕೋಟಿವಿಧಂಗಳಿಂ ಶ್ರುತಿಯೋಗದಲಿ ಹರಭಕ್ತಿಯಂ ಮಾಡಿದೊಡೆ ನಿಷ್ಫಲವು (Bp. 39, 24). 4, to have to go to some outer part of the house: (a woman) to get her courses (My.). — ಹೊಱಗಿಕ್ಕು. -ಇಕ್ಕು. To put out of anything; to put outside, to put out of caste (Bp. 18, 10; My.); to treat contemptuously. ಹೊಱಗಿಕ್ಕಲು ಪಟ್ಟವನು (ಅಪಧ್ವಸ್ತ, ಧಿಕ್ಕೃತ, etc. Nr.). — ಹೊಱಗೆೞೆ. -ಎೞೆ. To drag outside (Bp. 28, 27).

ಹೊಱಚ್ಚು hŏṟačču. = ಹೊಱಗು, etc. — ಹೊಱಚ್ಚಾಗಿ ಬರು. To come outside or round (a village, etc., without touching it, My.).

ಹೊಱಟು hŏṟaṭu. = ಹೊಣ್ಟು. P. p. of ಹೊಱಡು. (C.).

ಹೊಱಡಿಸು hŏṟaḍisu. To cause to go outside or out of; to turn out; to cause to start (My.). ಹಡಗಿನೊಳ ಹೊಕ್ಕು ಬರುವ ನೀರನ್ನು ಹೊಱಕ್ಕೆ ಹೊಱಡಿಸುವ ಪಾತ್ರ (ಸೇಕಪಾತ್ರ, etc. Si. 85).

ಹೊಱಡು hŏṟaḍu. To go outside or out of; to come forth; to egress; to set out; to

start; to come forth or appear, as a boil (My.). P. ps. ಹೊಱಟು, ಹೊಣ್ಬು. ವೇದಪಾಠಸಮಯದಲ್ಲಿ ಬಾಯಿನ್ದ ಹೊಱಡುವ ತುನ್ತುಱಗಳು (ಬ್ರಹ್ಮಬಿನ್ದು Si. 248); ಯಾವವನು ಹಗೆಯವರನ್ನು ಗೆಲ್ಲುವದಕ್ಕಾಗಿಯೇ ಬಹಳವಾಗಿ ಹೊಱಡುತ್ತಾನೋ, ಅನ್ನಾತವನು (ಅಭ್ಯಮಿತ್ರ, etc. 282); ಜಯಾರ್ಥವಾಗಿ ಹೊಱಟ ಅರಸಿನ ಪ್ರಯಾಣ (ಯಾತ್ರೆ, etc. 291); ದಣ್ಡು ಠಾಣ್ಯದ ಸ್ಥಲ ಬಿಟ್ಟು ಹೊಱಟದು (ಪ್ರಚಕ್ರ 291); ಹೊಱಡ ಹಾಕಲ್ ಪಟ್ಟವನು (ನಿಷ್ಕಾಸಿತ, ಅವಕೃಷ್ಟ 364); ಒನ್ದಱನ್ದ ಈಚೆಗೆ ಹೊಱಟದು (ಉದ್ವಾನ್ತ, ಉದ್ಗತ 380); ಬಿಸಿಲು ಸೆಕೆ ಮುನ್ತಾದವುಗಳಲ್ಲಿ ಹೊಗೆ ಹೊಱಡುವನ್ತೆ ಒಣಗಿಸಿ ಕಾಯಿಸಲ್ ಪಟ್ಟನ್ಥಾದು (ಸನ್ತಾಪಿತ, ಸನ್ತಪ್ತ, etc. 382). ರಾಯನು ತನ್ನ ಓಲಗದಲ್ಲಿ ಕುಳಿತಾಗ ಮಾತಿಗೆ ಮಾತು ಹೊಱಟು (B. 3, 49). ಊರು ಮೂಱು ಸುತ್ತು ಸುತ್ತಿದರೂ ಊರ ಬಾಗಲಲ್ಲಿಯೇ ಹೊಱಡಬೇಕು (Prv.).

ಹೊಱಡುವಿಕೆ hŏṟaduvikĕ. Going outside, etc. ದಣ್ಡೆತ್ತಿ ಯುದ್ಧಕ್ಕೆ ಹೊಱಡುವಿಕೆ (ಯಾನ Si. 262); ಶತ್ರುಗಳೆದುರಾಗಿ ದಣ್ಡೆತ್ತಿ ಕಾಳಗಕ್ಕೆ ಹೊಱಡುವಿಕೆ (ಅಭಿಷೇಣನ 391); ಹೊಱಕ್ಕೆ ಹೊಱಡುವಿಕೆ (ಪ್ರವಹ, ಬಹಿರ್ಗಮನ 393).

ಹೊಱತು hŏṟatu. = ಹೊರ್ತು. That is outside, that is excepted: being left alone; being not that; being not present; except; without. ಈ ಮಾತು ಹೊಱತು ಬೇಱೆ ಯಾವದಾದರೂ ಹೇಱು! (My.). ಚವರ್ಗ ಟವರ್ಗಂಗಳ್ ಹೊಱತಾಗೆ (ಚಟವರ್ಗಮ್ ಉೞಿಯೆ Śmd. 78 Cm.). ಕಡೆಗೋಲು ಹೊಱತಾಗಿ ಬೆಣ್ಣೆ ತೋಱುವದೇನೊ? (Dp. 148). ಅವನ ಬಾಯ್ಯಲ್ಲಿ ಕೆಟ್ಟ ಮಾತೇ ಹೊಱತು ಒಳ್ಳೇ ಮಾತು ಬರುವದಿಲ್ಲ (My.).

ಹೊಱಬಿಗ hŏṟabiga. = ಪೊಱಬಿಗ. (Bh. 10, 6, 9; J. 23, 10).

ಹೊಱಮೆ hŏṟamĕ. That is outside or in the rear. ಸೇನೆಯ ಹೊಱಮೆ (ಪ್ರತಿಸರ Nr.).

ಹೊಱಸು hŏṟasu. A kind of pigeon (ಜೀವಂಜೀವ, ಕಪಿಂಜಲ, ಚಕೋರ, ಹಾರೀತ, ವಂಜುಲ, ಕಪೋತ Hlâ.; ಕಪೋತ, ಚಕೋರ, ಜೀವಿ, ಹಾರೀತ, ಕಪಿಂಜಲ Mr. 172). *Cf.* T. ಪುಱವ, ಪುಱವು, ಪುಱಾ, a dove.

ಹೊಱಿಗೆ hŏṟigĕ. = ಪೊಱಿಗೆ, (ಹೋಱೆ). Business, work (Bh. 5, 4, 118; 6, 6, 19; 7, 1, 5; 8, 26, 3; C.).

ಹೊಱಿಗೆವಾಳ hŏṟigĕ-vâḷa. A servant (Râm. 5, 1, 34; 6, 50, 31).

ಹೊಱಿಸು hŏṟisu. = ಒಱಿಸು, ಪೊಱಿಸು. To put on the head (of another, My.), to put on (another, Râm. 5, 8, 53); to cause to carry, to have carried (C.); to lay on, to impose (as a business, My.); to impute (as blame, crime, etc., My.). ಒಬ್ಬ ಸೇವಕನ ತಲೆಯ ಮೇಲೆ ಪರಿ ಪರಿಯ ಅನ್ನವನ್ನು ಹೊಱಿಸಿ ಕೊಣ್ಡು ಸಂಗಡಲೇ ಬನ್ದು (B. 4, 77). ಇಲ್ಲದ ತಪ್ಪುಗಳನ್ನು ಮೇಲೆ ಹೊಱಿಸಿ ಹೇೞುವದು (ಮಿಥ್ಯಾಭಿಶಂಸನ, ಅಭಿಶಾಪ Si. 56); ಅಪನಿನ್ದೆಯನ್ನು ಹೊಱಿಸಿ ಅಪಕಾರ ಮಾಡುವಿಕೆ (ನಿಕಾರ, ವಿಪ್ರಕಾರ 392). ತಪ್ಪು ಹೊಱಿಸೋಣ (ಆರೋಪಣ G.). ಅವನ ಮೇಲೆ ತಪ್ಪು ಹೊಱಿಸಿದನು (My.). ಅವಳಿಗೆ ಮಾತು ಹೊಱಿಸುತ್ತಾರೆ (B. 2, 292).

ಹೊಱು hŏṟu. ಹೊಱ್. = ಪೊಱ್, ಪೊಱು. To take upon or bear on the head, to carry on the head, etc.; to carry about (in the heart, as another's dear feet, Bp. 36, 31); to take upon one's self (as a vow, 27, 62), to impute or attribute to one's self (as a fault, 39, 32); to assume or adopt (as a name, 54, 45); to obtain or fetch (as price, see Mr. below);—to come upon (somebody, as a fault, *e.g.* ಅವನ ಮೇಲೆ ತಪ್ಪು ಹೊತ್ತಿತು, My.); —to impute (to another, see ಅಪರಾಧ-). P. p. ಹೊತ್ತು (q. v.; C.). ಹೊತ್ತ ಬೆಲೆ (ವೇತನ, ಮೌಲ್ಯ, ಕ್ಲಪ್ತ Mr. 346). ಮನುಷ್ಯರ ಹೊಱುವವಂ (ವಹಿಕ Mr. 381). ಚನ್ನಾಗಿ ಹೊಱಲುಳ್ಳ ಕುದುರೆ (ವಿನೀತ, etc. Si. 272). ಆ ಹೆಂಗಸು ತಲೆಯ ಮೇಲೆ ಏನು ಹೊತ್ತುಕೊಣ್ಡು ಬರುತ್ತಾಳೆ? (B. 1, 1). ಅಡವಿಯೊಳಗಿಹ ವೇಣು ತಿದ್ದಿದರೆ ಮೆಯ್ಗೊಟ್ಟು ಕಡುಹುಳ್ಳ ದೊರೆಗಳನ್ನು ಹೊಱುವುತ (an unwarrantable form for ಹೊಱುತ) ಇಹುದು (Dp. 148). ಹೊಱ ಬಲ್ಲವನಿಗೆ ಆಳು ಬೇಡ, ಅಡ ಬಲ್ಲವನಿಗೆ ಹೆಣ್ಡತಿ ಬೇಡ.— ಮಣ್ಣು ಹೊಱುವವನು ತಲೆಗೆ ಬೆಣ್ಣೆ ಹಚ್ಚಿ ಕೊಣ್ಡನ್ತೆ.— ಲೆಕ್ಕದಿನ್ದ ಹೊತ್ತದಕ್ಕೂ ಮುಪ್ಪಿನಿನ್ದ ಸತ್ತದಕ್ಕೂ ದುಃಕ್ಕವೇನು?— ಬತ್ತ ಕತ್ತೆ ಹೊತ್ತರೆ ಅತ್ತೆ ಅಡಿಗೆ ಮಾಡಳೇ?— ಭರದಿನ್ದೆ ಹೋಗುವವನ ಸಂಗಡ ಹೊಱೇ ಹೊತ್ತಿಯಾ? ಅನ್ದ.— ಬಾವನಾದರೆ ಬಾರವಾದ ಹೊಱೆ ಹೊತ್ತಾನೇ? (Prvs.). See Bp. 10 sum.; 10, 6; 18, 51; 21, 8; 29, 18. 20; 30, 4; 44, 5; 50, 35; 55, 28; 57, 32.

ಹೊಱೆ hŏṟĕ. = ಪೊಱೆ. A load (for the head, as of wood, Bp. 30 sum.; 30, 4; 38, 57; C.; B. 2, 30; as of leaves, B. 4, 42; etc.), a burden (in general). **2,** the burden: bulk, etc. (ಮಾತ್ರೆ, ಪೊಱೆ Nn. 157). ತಲೆಹೊಱೆ (ವಿವಧ, ವೀವಧ, ಭಾರ, ಪರ್ಯಾಹಾರ Hlâ.). ಬಣ್ಡಿಯ ಹೊಱೆ (ಆಚಿತ, ಶಾಕಟಭಾರ Nr.). ಹೊಱೆಯ ಹೊತ್ತು ಬದುಕುವವನು (ಭಾರೋಪಜೀವಿ Nn. 86). ಹೊಱೆ ಹೊತ್ತವನ ತುಱೆ ಮುಱೆಯಾದರೆ ಹೋದೀತೇ?— ಬಱೇ ಮಾತಿನವ ಹೊಱೆ ಹೊತ್ತಾನೇ?— ಹತ್ತಱ ಹಲ್ಲ ಕಡ್ಡಿ ಒಬ್ಬನ ತಲೇ ಹೊಱೆ (Prvs.; see Prvs. s. ಸವದೆ, ಸವುದೆ & ಹೊಱು). ಹೊಱೆಯನ್ನು ಹೊಱುವ ಕರ್ಣಾಶ್ವ (ಪೃಷ್ಠ್ಯ, etc. Si. 273); ಹೊಱೆಯನ್ನು ಹೊಱುವದಕ್ಕೆ ತಕ್ಕ ವಯಸ್ಸುಳ್ಳ ಬಲುವಾದ ಹೋರಿ (ಜಾತೋಕ್ಷ 319). See Sarpabhûshaṇa s. ಮನ್ದರ. — ಹೊಱೆಗಟ್ಟು. -ಕಟ್ಟು. To tie into a load, to make a bundle of (Bp. 21, 8). — ಹೊಱೆಗಡಿ. -ಕಡಿ. To cut down to the full extent (Bh. 7, 17, 25). — ಹೊಱೆಯಾಳು. -ಆಳು. A porter, a carrier (Râm. 1, 16, 10).

ಹೊಱೆಕಾಱ hŏṟĕ-kâṟa. A porter (ಭಾರವಾಹ, ಭಾರಿಕ Nr.).

ಹೊರ್ಜಿ hŏrji. = ಹೊರಜಿ, etc. (My.).

ಹೊರ್ತು hŏrtu. = ಹೊಱತು. (C.; ಋತೇ, ವಿನಹ G.). ಇದಱ ಹೊರ್ತು ಓದುವ ಪುಸ್ತಕದೊಳಗಿನದೊನ್ದು ಪುಟ ಹಱಿದಿತ್ತು (B. 1, 23). ಇದಱ ಹೊರ್ತು ಮತ್ತೇನಾದರೂ ನಿನಗೆ ನೆನಪುಣ್ಟೋ? (3, 2). ಹಕ್ಕಿಗಳ ಹೊರ್ತು ಎರಡನೇ ಪ್ರಾಣಿಗಳಿಗೆ ಹೋಗಲಿಕ್ಕೆ ಬಾರದ ಗುಡ್ಡದ ತುದಿಯ ಮೇಲೆ ಸಹಾ ಅಡುಗಳು ಏಱುತ್ತವೆ (3, 10). ಕಬ್ಬಿನ ರಸದ ಹೊರ್ತು ತಾಳೇ ಮರದ ರಸದಿನ್ದಲೂ ಸಕ್ಕರೆಯನ್ನು ಮಾಡುತ್ತಾರೆ (3, 47). ಯಾರಾದರೂ ಬನ್ದು, ಈ ಮನೆ ತನ್ನಿನ್ದ ತಾನೇ ಆಗಿದೆ ಹೊರ್ತು ಮನುಷ್ಯನಿರ್ಮಿತವಲ್ಲೆನ್ದು, ಹೇಱಿದರೆ ಸ್ವಲ್ಪವಾದರೂ ಅದನ್ನು ನಮ್ಬುವರೋ? (4, 58). ಚಿನ್ನವು ಸ್ವತಃಸಿದ್ಧ ಪದಾರ್ಥವೇ ಹೊರ್ತು ಮನುಷ್ಯನ ಕೃತಿಯಿನ್ದ ಉಣ್ಟಾಗದು (4, 107). ಮೂಱು ನಾಲ್ಕು ಗಱಿಗೆ ತೋಟದೊಳಗೆ ಓಡಾಡದ ಹೊರ್ತು ನನಗೆ ಹಸಿವೆಯಾಗುವದಿಲ್ಲ (4, 136). ಅನೇಕ ಜನರು ಚೆಲೋ ವಸ್ತ್ರಗಳನ್ನೂ ಮನೋಹರವಾದ ಪದಾರ್ಥಗಳನ್ನೂ ದೊರಕಿಸುವ ಸಲುವಾಗಿಯೇ ಬಹಳ ಕಷ್ಟ ಪಟ್ಟು ದ್ರವ್ಯಸಂಗ್ರಹ ಮಾಡುತ್ತಾರೆ ಹೊರ್ತು ಕದನ್ನ ಉರಟ ಅಱವಿಗೋಸ್ಕರವಾಗಿ ಅಲ್ಲ (5, 76). ಆ ಪದಾರ್ಥಗಳು ಕಷ್ಟದ ಹೊರ್ತು ದೊರೆಯುವದಿಲ್ಲ (5, 77). ಕಾಱುಗಳನ್ನು ಸನ್ತೆಯೊಳಗೆ ಮಾಱುತ್ತಿರಲಾಗಿ ಬರುವಷ್ಟೇ ಬೆಲೆ ಬರುವದೇ ಹೊರ್ತು ಅದಱೊಳಗೇನೂ ಹೆಚ್ಚು ಕಡಿಮೆ ಆಗಲಿಕ್ಕಿಲ್ಲ (5, 121). ಆ ನಡುಗಡ್ಡೆಯಲ್ಲಿ ತೆಱಗೇ ಹೊರ್ತು ಬೇಕಾದಷ್ಟು ಭೂಮಿ ಹಾಗೆ ದೊರೆಯುತ್ತದೆ (5, 127). ಕಾಡಿನ್ನು ಅಱೆಯುವ ಕೆಲಸವು ಅವನ ಹೊರ್ತು

ಒರ್ಜನೆಯವರಿನ್ದ ಆಗುತ್ತಿದ್ದಿಲ್ಲ (5, 129). ಕೆಲಸದ ಹೊರ್ತುರ್ ಮತ್ತೇನೂ ನನಗೆ ಬೇಕಾಗಿಲ್ಲ (5, 132). ಇನ್ಥಾ ಮಾತುಗಳು ವಿದ್ವಾಂಸರ ಹೊರ್ತುರ್ ಉಟಿಕಿಯವರಿಗೆ ತಿಳಿಯುವದಿಲ್ಲ (5, 169). ದೀಕ್ಷೆ ಮಾಡಿದ ಹೊರ್ತುರ್ ಮೋಕ್ಷ ಬರಲಿಕ್ಕಿಲ್ಲ.—ನೀರು ಹಳ್ಳಕ್ಕೆ ಹೋದೀತೇ ಹೊರ್ತುರ್ ದಿನ್ನೆಗೆ ಹೋದೀತೇ?—ನೊಣ ಕೂತರೆ ವ್ರಣ ಹೊರ್ತುರ್ ಹೆಣ ಜೀವಿಸೀತೇ?—ಪಾಯಸವಾದರೂ ಆಯಾಸದ ಹೊರ್ತುರ್ ಸಿಕ್ಕದು.—ಪಿರಿಯಾದಿ ಮಾಡದ ಹೊರ್ತುರ್ ದಾಯಾದಿ ಕೇಳ.—ಪೆಟ್ಟಿಗೆ ತುಮ್ಬ ಹಣವಿದ್ದರೂ ಕಟ್ಟಿಗೆ ಹೊರ್ತುರ್ ಗತಿ ಇಲ್ಲ.—ಭೂತವಾದರೂ ಭುಕ್ತಿಗೆ ಹಾಕದ ಹೊರ್ತುರ್ ಭೀತಿ ತಪ್ಪದು.—ತೊಟ್ಟಿಲೊಳಗಣ ಕೂಸಾದರೂ ಅತ್ತ ಹೊರ್ತುರ್ ಹಾಲು ಕೊಡರು (Prvs.). — ಹೊರ್ತುರ್ ಮಾಡು. To except, to exempt (ವಿನಾಯಿಸು, ಬಿಡು G.).

ಹೊರ್ದುಗೆ hŏrdugĕ. = ಪೊರ್ದುಗೆ, etc. Joining; that is appended: something subordinate or inferior (ಉಪಾಗ್ರ, ಉಪಸರ್ಜನ Hlâ.).

ಹೊಲ್ hŏl. = ಪೊಲ್ 2, q. v. Meanness, badness, etc. ಹೊಲ್ಲಾಗಿ ನುಡಿವವಂ (ಕದ್ವದ, ಗರ್ಹ್ಯವಾದಿ Hlâ.; ಗರ್ಹ್ಯವಾದಿ Mr. 240). ಬ್ರಾಹ್ಮಣಿಕೆ ಹೊಲ್ಲ ಕೆಯ್ವುದು (ಅಬ್ರಹ್ಮಣ್ಯ, ಅವಧ್ಯ Hlâ.). — ಹೊಲ್ಲಂ. -ಅಂ. = ಪೊಲ್ಲಂ. A mean, bad man. ಇಲ್ಲದ ಕಾಲಕ್ಕೆ ತಾ ಹೊಲ್ಲನವ ಜನರಿಂಗೆ; ಅಲ್ಲದ ಗುಣವುಳ್ಳ ಅರಸಿಂಗೆ, ಸಾಲಕ್ಕೆ ಕಲ್ಲೆದೆಯು ಬೇಕು (Sp.). — ಹೊಲ್ಲಹ. -ಅಹ. Mean, bad, improper, disagreeable, etc. (Bp. 18, 40; 21, 14). ಹೊಲ್ಲಹ ನಾತ (ದುರ್ಗನ್ಧ); ಹೊಲ್ಲಹ ಬಟ್ಟೆ (ಕಾಪಥ, ವಿಪಥ, etc. Nr.). ಹೊಲ್ಲಹ ವಸ್ತು (ಅರ್ವ, ಅಣಕ, ವಪಸದ, ಅಧಮ Hlâ.). — ಹೊಲ್ಲಹವನು. -ಅವನು. A mean, contemptible man (ಕಟ್ವರ, ಕುತ್ಸಿತ Hlâ.).

ಹೊಲ hŏla. 1. = ಹೊಲೆ, etc. — ಹೊಲಗೇರಿ. -ಕೇರಿ. = ಹೊಲೆಗೇರಿ. (My.). ಊರಿದ್ದ ಕಡೆ ಹೊಲಗೇರಿ.—ಊರು ಬಿಟ್ಟು, ಹೊಲಗೇರಿಯಲ್ಲಿ ತಂಗಿದರು (Prvs.).

ಹೊಲ hŏla. 2. = ಹೊಲಿದು. P. p. of ಹೊಲಿ, in ಹೊಲ ಕೊಳ್ಳು (C.; B. 5, 124).

ಹೊಲ hŏla. 3. = ಪೊಲ. A plough-field; a corn land (ವಲಜ, ಕ್ಷೇತ್ರ Si. 413; C.; Bp. 18, 12. 70; 60, 22. 23; Bh. 1, 8, 48; 3, 13, 16); etc. ಹೊಲ ಬಲ್ಲದುದು (ಕಿಲ, ಸಮ್ಭಾವ್ಯ Nr.). ಹೊಲಕ್ಕೆ ಹೋದರೆ ಹುಲಿಯ ಕಾಟ, ಮನೆಗೆ ಬನ್ದರೆ ನುಸಿಯ ಕಾಟ.—ಹೊಲ ಹಚ್ಚಗಾಯಿತು, ಒಡೆಯನ ಕಣ್ಣು ಕೆಮ್ಪಗಾಯಿತು.—ಹೊಲವೆಲ್ಲ ಹಾಟಾಯಿತು, ಹಿಡಿಸೂಡಿಗೆ ಬಡಿದಾಟ.—ಹೊಲೆಯನ ನಮ್ಬಿ ಹೊಲವ ಹೊಗ ಬಾರದು, ಕುಳ್ಳನ ನಮ್ಬಿ ನೀರಿಗಿಳಿಯ ಬಾರದು.—ಹೊಲದ ಹತ್ತಿ ಹೊಲದಲ್ಲೇ! ನಿನಗೆ ಮೊಳ ಉದ್ದ, ನನಗೆ ಮೂರು ಉದ್ದ ಅನ್ದ ಹಾಗೆ.—ಹೊಲಾ ಬಿತ್ತಿ ನೋಡು, ನೆಲಾ ಸಾರಿಸಿ ನೋಡು!—ನೇಗಲು ಹುತ್ತರೆ ಹೊಲ, ಹಾಲು ಇದ್ದರೆ ಗೋವು.—ಪೋಲಿಯವನ ಹೊಲಕ್ಕೆ ಬೇಲಿ ಉಣ್ಟೇ?—ಫಲಾ ನೋಡದೆ ಕೆಟ್ಟಿತು, ಹೊಲಾ ಹೂಡದೆ ಕೆಟ್ಟಿತು.—ಬೇಲಿ ಎದ್ದು ಹೊಲ ಮೇಯುವಾಗ್ಯೆ ಕಾಯೋದು ಯಾರು? (Prvs.). — ಹೊಲ ಮಾಡು. To till the ground (C.; B. 5, 81). ಹೊಲ ಮಾಡುವವ (ಕರ್ಷಕ G.). — ಹೊಲದವರೆ. -ಅವರೆ. = ಅವರೆಬಳ್ಳಿ. (St. & Pl.). — ಹೊಲಮೇರೆ. A boundary, a limit (ಅವಧಿ, ಮರ್ಯಾದೆ, ಸೀಮ, etc. Hlâ.; ಸೀಮೆ, ಆಘಾಟ Mr. 188). — ಹೊಲಹೊಲಸದಟಿಕ. (Râm. 5, 8, 50; ತಟಿಕ, a cutter?).

ಹೊಲಗೆ hŏlagĕ. = ಹೊಲಿಗೆ. (C.; B. 5, 294).

ಹೊಲತಿ hŏlati. = ಪೊಲತಿ. A low-caste woman (Bp. 57, 57; My.).

ಹೊಲಬಿಗ hŏlabiga. = ಪೊಲಮ್ಬಿಗ. A circumspective, clever man (Bp. 35, 35).

